UNIVERSAL
LIBRARY
OU_202172
UNIVERSAL
LIBRARY



ಸುಮ್ನೀ ಸುವ್ವಮ್ಮಲಾಲೀ ಸುವ್ವಲಾಲೀ
ಚಾಣೆ ಜಾಗರದಿಣ್ಣೆ ಸುವ್ವಲಾಲೀ....

ಜನಪದ ಸಾಹಿತ್ಯ ಕುಸುಮ—೭

ಜಾನಪದ ಕಥನ ಗೀತೆಗಳು

ಸಂಪಾದಕ

ಕ.ರಾ.ಕೃ

ಜನಪದ ಸಾಹಿತ್ಯ ಅಕಾಡೆಮಿ

"ಕಾವ್ಯಕುಟೀರ"

ಸರಸ್ವತಿಪುರಂ, ಮೈಸೂರು.

[redacted]:೧೫೯
ಎಲ್ಲಾ ಒಡತನ ಸಂಪಾದಕರದು
ಕಲಾವಿದರು:—ಶ್ರೀ ಪಿ. ಆರ್. ತಿಪ್ಪೇಸ್ವಾಮಿ, ಬಿ.ಎ.


Checked 1969
Checked 1965

ಬೆಲೆ : ರೂ. ೧೮—೫೦

ಮುದ್ರಕರು:
ಪಿ. ನಾಗಣ್ಣ,
ಶ್ರೀ ವೆಂಕಟೇಶ ಪ್ರೆಸ್, ಮೈಸೂರು.



ಪ್ರೊ॥ ಡಿ. ಎಲ್. ನರಸಿಂಹಾಚಾರ್, ಎಂ.ಎ.



ಆಳವಾದ ಅಭ್ಯಾಸದಿಂದಲೂ
ಸತತವಾದ ಸಂಶೋಧನೆಯಿಂದಲೂ
ನಾಡು ನುಡಿಗಳ ಮೇಲ್ಮೆಗೆ ಯತ್ನಶೀಲರಾಗಿರುವ

ಪ್ರೊ|| ಡಿ.ಎಲ್. ನರಸಿಂಹಾಚಾರ್, ಎಂ.ಎ.ಅವರಿಗೆ

ಗೌರವಪೂರ್ವಕವಾಗಿ ಅರ್ಪಿಸಿದ ಕಾಣಿಕೆ.

ಕನ್ನಡದ ವೇದಗಳು ಜಾನಪದ ಗೀತಗಳು:
ಇದನು ಬರೆದವರೆಲ್ಲ ಎಲೆ ಮರೆಯ ಹೂವುಗಳು.
ಕೀರ್ತಿಕಾಮಿಗಳಲ್ಲ ಆ ಕಬ್ಬಿಗರು; ಹೆಸರ
ಬಯಸದೆಯೆ ಹಾಡಿದರು ಅನುಭಾವಗಳ ಉಸಿರ—
ನೊಂದನೆ ಹಿಡಿದು. ರಾಜಾಧಿರಾಜರಾಸ್ಥಾನ—
ದಲಿ ಇವರು ಪಂಪ ರನ್ನರ ತೆರದಿ ಸನ್ಮಾನ
ದಾನಗಳ ಪಡೆದಿಲ್ಲ; ತಾಳೆಯೋಲೆಗಳಲ್ಲಿ
ಬರೆದಿಡಲು ಬಯಸಿಲ್ಲ. ಜನಮನದ ಎದೆಯಲ್ಲಿ
ವರುಷವೆನಿತಾದರೂ ಶ್ರುತಿರೂಪದಲಿ ಹರಿದು
ಬಂದುವು ಗಂಗೆಯಂತೆ. ಆವರ ಮನದಲಿ ಕೊರೆದು
ನಿಂದುವು ಚಿತ್ರದಂತೆ.....

—ಶ್ರೀ ಜಿ. ಎಸ್. ಶಿವರುದ್ರಪ್ಪ, ಎಂ.ಎ.

ಮುನ್ನುಡಿ

ಉತ್ಸಾಹಿ ತರುಣಮಿತ್ರರಾದ ಶ್ರೀಯುತ ಕ. ರಾ. ಕೃ. ಅವರು ತಾವು ಬಹು ಶ್ರಮಪಟ್ಟು ಸಂಪಾದಿಸಿ ಪ್ರಕಟಿಸುತ್ತಿರುವ ಈ ದೊಡ್ಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಶುಭಾಶಂಸೆಯ ಮೊದಲ ಮಾತನ್ನು ಬರೆದು ಕೊಡಬೇಕೆಂದು ನನ್ನನ್ನು ಕೋರಿದ್ದಾರೆ. ಇಲ್ಲಿ ಕೂಡಿಸಿರುವ ಹಲವು ಹಾಡುಗಳಲ್ಲಿ ಕವಿತೆಯ ಸ್ವಯಂಪ್ರಕಾಶ ಬೆಳಗುತ್ತಿದೆ. ಅಲ್ಲದೆ ಈ ಬಗೆಯ ಸಾಹಿತ್ಯದ ವಿಷಯದಲ್ಲಿ ಪರಿಶ್ರಮವುಳ್ಳ ಹಲವು ಮಂದಿ ಮಹಾನೀಯರ ಬರಹಗಳಿಂದ ವಾಕ್ಯಮಾಲೆಗಳನ್ನು ಸಂಪಾದಕರು ಆಯ್ದುಕೊಂಡು ಭಾಗ ಭಾಗಕ್ಕೂ ಬೇರೆ ಬೇರೆ ಮುನ್ನುಡಿಗಳಾಗಿ ಅಳವಡಿಸಿದ್ದಾರೆ. ಹೀಗಿರುವಾಗ ನಾನು ಹೊಸದಾಗಿ ಹೇಳಬಹುದಾದದ್ದು ಏನಿದ್ದೀತು? ಆದರೂ ಒಪ್ಪಿಕೊಂಡಮೇಲೆ, ಗ್ರಂಥಪ್ರಕಟನೆ ವಿಳಂಬವಾಗದಂತೆ ಎರಡು ಮಾತನ್ನು ಬರೆದುಕೊಡಲೇಬೇಕಾಗಿಬಂದಾಗ ಒಂದು ಆಲೋಚನೆ ಹೊಳೆಯಿತು. ಅನೇಕವರ್ಷಗಳ ಹಿಂದೆ ನಾನು ಜನಪದಸಾಹಿತ್ಯದ ಅನರ್ಘ್ಯರತ್ನವೊಂದನ್ನು ಕುರಿತು ಬರೆದ ಲೇಖನವೊಂದರಿಂದ ಕೆಲವು ವಾಕ್ಯಗಳನ್ನು ಎತ್ತಿಕೊಟ್ಟರೆ ಇಲ್ಲಿಗೆ ತಕ್ಕಮಟ್ಟಿಗೆ ಹೊಂದಿಕೆಯಾಗಬಹುದೆಂದು ತೋರಿತು. ಈ ಸುಲಭೋಪಾಯವನ್ನೇ ಈ ಕೆಳಗೆ ಅವಲಂಬಿಸಿದ್ದೇನೆ:

"ಯಾವ ಗಣಿಯಲ್ಲಿ ಎಂಥ ಮಣಿ ಅಡಗಿರುವುದೋ! ಹಳ್ಳಿಯವರ ಹಾಡುಗಳನ್ನು ಕುರಿತು ಸುಶಿಕ್ಷಿತರಲ್ಲಿ ಮೊದಲಿಗೆ ಅನಾದರವೂ ತಿರಸ್ಕಾರವೂ ಇದ್ದುವು. ಅಕ್ಷರ ಕಲಿಯದವರು, ನಾಗರಿಕ ಜೀವನವನ್ನು ತಿಳಿಯದವರು, ವ್ಯಾಕರಣಬದ್ಧವಾಗಿ ಮಾತಾಡಲು ಅರಿಯದವರು—ಇಂಥವರು ತಮ್ಮಹೃದಯವನ್ನು ಹಗುರ ಮಾಡಿಕೊಳ್ಳುವುದಕ್ಕಾಗಿ ಆಗಾಗ ಹಾಡಿಕೊಂಡ ಹಾಡುಗಳಲ್ಲಿ ಏನು ತಿರುಳಿದ್ದೀತೆಂದು ವಿದ್ವಾಂಸರು ಅಸಡ್ಡೆ ಮಾಡುತ್ತಿದ್ದ ಕಾಲವೊಂದಿತ್ತು. ಆದರೆ ಆ ಭಾವ ಈಗ ಬಲುಮಟ್ಟಿಗೆ ತೊಲಗಿದೆ. ಪ್ರೌಢಿಮೆಯುಳ್ಳವರು ಕೂಡ ಈ ಹಾಡುಗಳ ರುಚಿಯನ್ನು

ಮನಗಾಣುತ್ತಿದ್ದಾರೆ. ಸಹೃದಯರಾದ ವಿಮರ್ಶಕರ ನಿರೀಕ್ಷೆಗೂ ಮಿಾರಿ ಬಗೆಯನ್ನು ಸೂರೆಗೊಳ್ಳುವ ಕೃತಿಗಳು ಈ ಕ್ಷೇತ್ರದಲ್ಲಿ ಹಲವು ಬಾರಿ ದೊರೆಯುತ್ತವೆ. ಅಂಥವನ್ನು ಸಂಧಿಸಿದಾಗ, 'ಇದು ಹಳ್ಳಿಯ ಹಾಡು; ಗುಣವನ್ನು ಗ್ರಹಿಸಬೇಕು' ಎಂಬ ಕೃಪಾದೃಷ್ಟಿ ತೊಲಗಿ, 'ಇದು ಒಳ್ಳೆಯ ಕಾವ್ಯ, ಉತ್ತಮೋತ್ತಮ ಕಾವ್ಯ; ಇದರ ರಸವನ್ನು ಸವಿದು, ಹೃದಯವನ್ನು ಸಂಸ್ಕರಿಸಿಕೊಳ್ಳಬೇಕು' ಎಂಬ ನಮ್ರಬುದ್ಧಿ ಮೊಳೆಯುತ್ತದೆ."

ಕನ್ನಡದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರೂ ನನ್ನ ಪ್ರಿಯಮಿತ್ರರೂ ಆದ ಪ್ರೊ|| ಡಿ. ಎಲ್. ನರಸಿಂಹಾಚಾರ್ಯರಿಗೆ 'ಜಾನಪದ ಕಥನ ಗೀತೆಗಳು' ಎಂಬ ಈ ಕೃತಿ ಅರ್ಪಿತವಾಗಿದೆ. ನರಸಿಂಹಾಚಾರ್ಯರು ಗ್ರಂಥಸಂಪಾದನೆಯಲ್ಲಿ ನಿಷ್ಣಾತರು; ಅವರಿಗೆ ಈ ಉಪಹಾರ ಇಷ್ಟವಾಗಲೆಂದೂ, ನಾಡಿನ ಸಹೃದಯವೃಂದಕ್ಕೆ ಇದರಿಂದ ರಸಾಸ್ವಾದ ಅತಿಶಯವಾಗಿ ಲಭಿಸಲೆಂದೂ ನನ್ನ ಹಾರೈಕೆ.

ಮೈಸೂರು,
೧೩-೧೨-೧೯೫೯.

ತೀ. ನಂ. ಶ್ರೀಕಂಠಯ್ಯ.

ಮೆಚ್ಚುನುಡಿ

ಈ ಅಪೂರ್ವವಾದ ಜಾನಪದ ಕಥನ ಗೀತಗಳ ಸಂಗ್ರಹವನ್ನು ನಮ್ಮ ಮುಂದಿಟ್ಟಿರುವ ಶ್ರೀ. ಕ.ರಾ.ಕೃ. ಅವರು ಈಗಾಗಲೇ ಇಂಥ ಹಲವು ಸಂಕಲನಗಳನ್ನು ಪ್ರಕಟಿಸಿ ಕನ್ನಡಿಗರಿಗೆ ಪರಿಚಿತರಾಗಿರುತ್ತಾರೆ. ಶ್ರೀಯುತರು ಜನಪದ ಸಾಹಿತ್ಯವನ್ನು ಸಂಗ್ರಹಿಸುವುದನ್ನು ಒಂದು ವ್ರತವೆಂದು ಭಾವಿಸಿ, ಅತ್ಯಂತ ಉತ್ಸಾಹದಿಂದಲೂ, ಶ್ರದ್ಧೆಯಿಂದಲೂ, ಸಾಹಸದಿಂದಲೂ ಶ್ರಮಿಸುತ್ತಿದ್ದಾರೆ. ಪ್ರಕೃತ ಸಂಕಲನವಂತೂ ತುಂಬ ವಿಶಿಷ್ಟವಾದುದು ಎಂದು ನನ್ನ ಭಾವನೆ. ಮುವ್ವತ್ತೈದು ದೀರ್ಘರಚನೆಗಳನ್ನು ಒಳಗೊಂಡಿರುವ ಈ ಸಂಕಲನದಲ್ಲಿ ಕನ್ನಡ ಜನಪದ ಸಾಹಿತ್ಯದ ವೈವಿಧ್ಯ, ವೈಶಿಷ್ಟ್ಯ ಮತ್ತು ಬಾಹುಳ್ಯಗಳನ್ನು ಕಂಡು ಯಾರಾದರೂ ಹೆಮ್ಮೆ ಪಡಬಹುದಾಗಿದೆ. ಇಂಥ ರಸವತ್ತಾದ ರಚನೆಗಳನ್ನು ಓದಿದಾಗ ನನಗೆ ಆದ ಆನಂದವನ್ನು ವ್ಯಕ್ತಪಡಿಸುವ ಸಲುವಾಗಿ ಈ ಮೊದಲ ಮಾತನ್ನು ಉದ್ದೇಶ ಪೂರ್ವಕವಾಗಿ "ಮೆಚ್ಚುನುಡಿ" ಎಂದು ಕರೆದಿರುತ್ತೇನೆ.

ಆಧುನಿಕ ಕನ್ನಡ ಸಾಹಿತ್ಯದ ಜಾಗೃತಿಯೊಂದಿಗೇ, ಜಾನಪದ ಸಾಹಿತ್ಯದ ಪುನರುಜ್ಜೀವನ ಕಾರ್ಯವೂ ಮೊದಲಾಯಿತು ಎನ್ನಬಹುದು. ಮೊದಮೊದಲು ಕನ್ನಡ ಪತ್ರಿಕೆಗಳಲ್ಲಿ ಬಿಡಿಬಿಡಿಯಾಗಿ ಹಳ್ಳಿಯ ಹಾಡುಗಳು ಪ್ರಕಟವಾಗತೊಡಗಿದುವು. ಅನಂತರ, ಉತ್ತರ ಕರ್ನಾಟಕದ ಹಲಸಂಗಿಯ ಗೆಳೆಯರೇ ಮೊದಲಾದವರು ಈ ಸಂಗ್ರಹ ಕಾರ್ಯವನ್ನು ಸಂತತವಾಗಿ ಮಾಡತೊಡಗಿದರು. ಜಯಕರ್ನಾಟಕದ ಗ್ರಂಥಮಾಲೆಯಲ್ಲಿ "ಗರತಿಯ ಹಾಡು", "ಮಲ್ಲಿಗೆ ದಂಡೆ" ಮತ್ತು "ಜೀವನ ಸಂಗೀತ" ಗಳೆಂಬ ಪುಸ್ತಕಗಳು ಪ್ರಕಟವಾದುವು. ಅಲ್ಲಿಂದ ಈಚೆಗೆ ಬೇರೆ ಬೇರೆ ಪ್ರದೇಶಗಳಲ್ಲಿ ಕೇಳಿಬರುತ್ತಿದ್ದ ಹಳ್ಳಿಯ ಹಾಡುಗಳನ್ನು ಹಲವಾರು ಹಿರಿಯರೂ ಕಿರಿಯರೂ ಮೇಲಿಂದ ಮೇಲೆ ಪ್ರಕಟಿಸುತ್ತಲೇ ಇದ್ದಾರೆ.

ನನ್ನ ಮಿತ್ರರಾದ ಶ್ರೀ. ಮತಿಘಟ್ಟ ಕೃಷ್ಣಮೂರ್ತಿಯವರು ತಮ್ಮ ಸಹೋದರರ ನೆರವನ್ನು ಪಡೆದು ೧೯೪೭ರಲ್ಲಿ "ನಾಡ ಪದಗಳು" ಎಂಬ ದೊಡ್ಡ ಸಂಕಲನವೊಂದನ್ನು ಕನ್ನಡಿಗರ ಮುಂದೆ ಇಟ್ಟಿದ್ದನ್ನು ಯಾರೂ ಮರೆಯುವಂತಿಲ್ಲ. ಜನಪದ ಸಾಹಿತ್ಯದ ರೂಪರೇಷೆಗಳನ್ನೂ, ಶಬ್ದ ಸಂಪತ್ತನ್ನೂ, ವಸ್ತು, ವಿಧಾನಗಳನ್ನೂ ಕುರಿತು ಆ ಗ್ರಂಥಕ್ಕೆ ಶ್ರೀ. ಎಲ್. ಗುಂಡಪ್ಪ, ಎಂ.ಎ., ಅವರು ಬರೆದಿರುವ ಹಲವಾರು ಅಂಶಗಳು ತುಂಬ ಗಮನಾರ್ಹವಾದುವು. ಇತ್ತೀಚೆಗೆ, ನನ್ನ ಮತ್ತೊಬ್ಬ ಮಿತ್ರರಾದ ಡಾ|| ಬಿ. ಎಸ್. ಗದ್ದಗೀಮಠ, ಎಂ.ಎ., ಪಿಎಚ್.ಡಿ., ಅವರು "ಕನ್ನಡ ಜಾನಪದ ಗೀತೆಗಳು" ಎಂಬ ಬೃಹತ್ ಪ್ರಬಂಧವನ್ನೇ ಬರೆದಿದ್ದಾರೆ. (ಇದೇ ರೀತಿಯಾದ ಡಾ|| ಬಿ. ರಾಮರಾಜು ಅವರ ತೆಲುಗಿನ "ಜಾನಪದ ಗೇಯಸಾಹಿತ್ಯಮು" ಎಂಬ ಬೃಹತ್ ಪ್ರಬಂಧ ಈಗತಾನೆ ಪ್ರಕಟವಾಗಿದೆ. ಕನ್ನಡದ ಕೃತಿಯೂ ಬೇಗನೆ ಪ್ರಕಟವಾಗಲೆಂದು ಹಾರೈಸೋಣ.) ಅಂತೂ ಈ ಕ್ಷೇತ್ರದಲ್ಲಿ ಇಂದು ಸಾಕಷ್ಟು ಕೆಲಸ ನಡೆದಿವೆ ಎನ್ನಬಹುದು. ಹಿಂದೆ ಶ್ರೀ. 'ಶ್ರೀ' ಅವರು "ಗರತಿಯ ಹಾಡಿ"ಗೆ ಮುನ್ನುಡಿಯನ್ನು ಬರೆಯುತ್ತ "ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನಮ ನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ (ಪ್ರಸ್ತಾವನೆ, ಪು. iv-v)" ಎಂದು ಎಚ್ಚರಿಸಿದ್ದರು. ಇಂದು ಅವರ ಆ ಆಸೆ ಬಹುಮಟ್ಟಿಗೆ ನೆರವೇರಿದೆಯೆಂದು ಹೇಳಬಹುದು. ಶ್ರೀ. ಮಾಸ್ತಿ ಅವರು "ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು" (ವಿಮರ್ಶೆ ಭಾಗ ೧) 'ಕರ್ನಾಟಕದ ಜನಪದ ಸಾಹಿತ್ಯ" (ಪ್ರಕ, ಸಂ xviii, ಸಂ. ೧-೨) ಎಂಬ ತಮ್ಮ ಅಮೂಲ್ಯವಾದ ಪ್ರಬಂಧಗಳಲ್ಲಿ ಈ ಸಾಹಿತ್ಯದ ಮಹತ್ವವನ್ನು ಕುರಿತು ವಿಚಾರಮಾಡಿರುತ್ತಾರೆ. ಪ್ರಕೃತ ಸಂಗ್ರಹಕಾರರು ಈ ಸಂಕಲನದಲ್ಲಿ ಉದ್ಧರಿಸಿರುವ ಹೇಳಿಕೆಗಳನ್ನು ನೋಡಿದರೆ, ಕನ್ನಡಿಗರು ಈ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದಾರೆ ಎನ್ನುವುದು ಸ್ಪವಿದಿತವಾಗುತ್ತದೆ.

ಇನ್ನು ಇಲ್ಲಿ ಸಂಗ್ರಹಿಸಿರುವ ಕೃತಿಗಳಲ್ಲಿ ಕೆಲವನ್ನು ಮಾತ್ರ ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ವಸ್ತುವಿನ ದೃಷ್ಟಿಯಿಂದ, ಈ ಸಂಕಲನದ ರಚನೆಗಳನ್ನು ಲೌಕಿಕ, ಅಲೌಕಿಕ, ಪೌರಾಣಿಕ, ಐತಿಹಾಸಿಕ ಎಂಬುದಾಗಿ ವಿಭಾಗಿಸಬಹುದು. ನಿತ್ಯಜೀವನಕ್ಕೆ ಸಂಬಂಧಿಸಿದ ಒಲವು ನಲವುಗಳಾಗಲಿ, ಸಾವುನೋವುಗಳಾಗಲಿ, ನೀತಿ ನಡತೆಗಳಿಗಾಗಲಿ ಈ ಅಜ್ಞಾತಕವಿಗಳನ್ನು ಬಹುಬೇಗ ಮಿಡಿಯಬಲ್ಲವು. ಮದುವಣಿಗನ ಚಿತ್ರವನ್ನು ಹೆಜ್ಜೆ ಹೆಜ್ಜೆಗೂ ವರ್ಣಿಸುವ "ಮದುವಣ್ಣ" ಎಂಬ ನೀಳ್ಗವನವನ್ನೇ ತೆಗೆದುಕೊಳ್ಳಬಹುದು. ಅವನಿಗೆ ಮಣೆ ಅಣಿಮಾಡುವುದರಿಂದಲೇ ವಿವರ ವೊದಲಾಗುತ್ತದೆ. ಅವನು ಮಿಂದ ನೀರು ಹೊಳೆದಾಟ ಹರಿಯುತ್ತದೆ. ಶುಭಶಕುನ ಸೂಚಿತವಾಗಲು, ಅವನು 'ಹಾಲ ಬಾವೀಲಿ ಮುಖತೊಳೆದು' "ಆನೆ ಶೃಂಗರಿಸಿ ಮಾಳಿಗೆ ಸಾಲಲ್ಲಿ ನಿಲ್ಲೀಸಿ" ಮೆರೆವಣಿಗೆಗೆ ತೆರಳುತ್ತಾನೆ. "ಮೂಡಿಬರುವ ಚಂದ್ರಮಗಿಂತ ಜೆಲುವ" ಇವನು! ಹೆಣ್ಣಿನ ಕಡೆಯವರ ಆಕ್ಷೇಪಣೆ ಹೇಳತೀರದು; ಗಂಡಿನವರ ಉತ್ತರವೂ ಇಲ್ಲದೆ ಇಲ್ಲ. ಕಡೆಗೆ "ಸಾಲೀಯ ಸೀರೆ ಜೋಲೂತ ತೋರೂತ ತಾವರೆಗಣ್ಣಿನ ಪುರುಷಾನ ನೋಡೂತ" ವಧುವಾದವಳು ಹಸೆಮಣೆಗೆ ಬರುವಳು. ಶಾಸ್ತ್ರ, ಸಡಗರ ಗಳು ಸಾಂಗವಾಗಿ ಸಾಗುತ್ತವೆ; ಧಾರೆಯೂ ನೆರವೇರುತ್ತದೆ. ಅವನು "ಅಂಗಯ್ಯ ಚಂದಾಕೆ ಮುಂಗಯ್ಯ ಹಿಡಿದಾನೆ". ಹುಡುಗಿ "ರಂಗುಮಾಣಿಕದ ಅರಳೊತ್ತಿ, ಬೆರಳೊತ್ತಿ ಬೆರಳು ನೋಯ್ತುದೆ ಬಿಡಿಕಯ್ಯ" ಎಂದರೆ 'ಬೆರಳು ನೊಂದಾರೆ ಹಂಗೇಯ ಬಂದೇನೆ ಆನೆ ಮಾರೀದ ಹೊಸ ಹೊನ್ನ ಕೊಟ್ಟವಿನಿ ಸುಮ್ನೆ ತಾರೆಣ್ಣೆ ಬಲಗೈಯ' ಎಂದು ಹೇಳುವ ಗೆಣೆಯ ಅವನು! ಅಲ್ಲಿ ನೆರೆದಿದ್ದವರು ಹುಡುಗನನ್ನು ಹಾಸ್ಯಮಾಡುವುದೂ ಉಂಟು. "ಹನ್ನೆರಡೊರುಷಾದ ಸಣ್ಣುಡುಗೆನ್ನುತ್ತಿದ್ದೆ ಕೆನ್ನೇಗೆ ಬಂದಾವೆ ಮುದಿನೆರೆ, ಮೂಲಂಗಿ ಹಣ್ಣಿನಂಗವನೆ ಮದುವಣ್ಣ"ಎನ್ನುವರು. ಕೆಲವರು "ಅಕ್ಕಮ್ಮ ನೆಂಬ ಗರತೀಯ ಕೊಟ್ಟೀವಿ ಉಪ್ಪಾರದಂತ ಅಳಿಯಾಗೆ" ಎನ್ನುವರು. ಹಸೆಮಣೆಯ ಸರದಿಯಾದ ಮೇಲೆ ಎಂಜಲು ಶಾಸ್ತ್ರವೂ ಮುಗಿಯುವುದು. ಹುಡುಗಿಯನ್ನು ಮನೆ ತುಂಬಿಸಿಕಳುಹಿಸುವಾಗ ತಾಯಿ ತಂದೆ, ಅಣ್ಣಂದಿರಿಗೆ ಸಂಕಟವಾಗದೆ ಇದ್ದೀತೆ? ವೀಳ್ಯಕೊಡುವ ಸೊಗಸೂ ಆಯಿತು.

ಎಲ್ಲರ ಹರಕೆಯೊಂದಿಗೆ ಮದುವೆ ಕೊನೆಯಾಗುತ್ತದೆ. ವಿವಾಹದ ಈ ವಿವರವನ್ನು ಓದಿದ ಯಾರಿಗಾದರೂ ಕವಿಯ ಕಣ್ಣು ಎಷ್ಟು ಸೂಕ್ಷ್ಮಗ್ರಾಹಿಯಾದುದು ಎನ್ನಿಸುತ್ತದೆ. ಹಳ್ಳಿಯಲ್ಲಿ ನಡೆಯುವ ವಾಸ್ತವಿಕ ಜೀವನದ ವಿಲಾಸವನ್ನು ನೇರವಾಗಿ ನಿರೂಪಿಸಿರುವ ಈ ಕೃತಿಯಲ್ಲಿ ಸಹಜವಾದ ಸೌಂದರ್ಯವು ತೋರಿಬರುತ್ತದೆ.

ದಾಂಪತ್ಯ ಜೀವನದಲ್ಲಿ ಹೆಣ್ಣಿನ ಪಾತ್ರ ಬಹು ದೊಡ್ಡದು. ಆಕೆ ಎಷ್ಟೆಷ್ಟು ಗುಣಶಾಲಿಯಾಗಿರುತ್ತಾಳೋ ಅಷ್ಟಷ್ಟು ಸಂಸಾರವು ಸವಿಯಾಗುತ್ತದೆ. ಹೆಣ್ಣಿಗೆ ಗುಣಕ್ಕಿಂತ ಮಿಗಿಲಾದುದಿಲ್ಲ. "ಹೆಣಿಗಂಟು ನಲುಗಿ ಉರಿದ್ಹೋದೋ" ಎಂಬ ರಚನೆಯಲ್ಲಿ ತೋರಿಬರುವ ನಾಗವ್ವನ ಪತಿವ್ರತಾ ಧರ್ಮ ತಲೆದೂಗುವಂಥಾದ್ದು. ಆಡು ಹೋದುದಕ್ಕಾಗಿ ಬೇಡರೊಂದಿಗೆ ಹೋರಾಟವನ್ನೇ ಹೂಡಿ ಚಿಂದಯ್ಯನು ಹತನಾಗುತ್ತಾನೆ. ಬಯಸಿ ಬಯಸಿ ಮದುವೆಮಾಡಿಕೊಂಡಿದ್ದ ನಾಗವ್ವ ವಿಧವೆಯಾಗುತ್ತಾಳೆ. ಆಕೆ ಚಿತೆಯೇರಲು ಅಣಿಯಾಗುತ್ತಾಳೆ. ಅವಳ ಪಾಲಿಗೆ "ಹೂ ಮಾಲೆ ಆದಾವು ಎದೆ ಗುಂಡು!" ಯಾರು ಬೇಡಿಕೊಂಡರೂ ಅವಳು ಒಪ್ಪುವಳಲ್ಲ. ನಿರ್ವಾಹವಿಲ್ಲದೆ ಬಂಧುಬಳಗದವರು "ನಾಗವ್ವನ ಕಿಚ್ಚಿಗೆ ಧಾರೆ ಎರೆದಾರು". ನಿಮಿಷಮಾತ್ರದಲ್ಲಿ "ನಾಗವ್ವನ ಹೆಣಿಗಂಟು ನಲುಗಿ ಉರಿದ್ಹೋದೋ." ಮದುವೆಯ ಪ್ರಸ್ತಾಪದೊಂದಿಗೆ ಮೊದಲಾಗಿ, ಚಿತಾಪ್ರವೇಶದೊಂದಿಗೆ ಮುಕ್ತಾಯವಾಗುವ ಈ ಗೀತೆ ಚಿಕ್ಕದಾದರೂ ಎದೆ ಚಚ್ಚುವಂತಿದೆ. "ಚೆನ್ನಿಗರಾಯ" ಎಂಬ ಮತ್ತೊಂದು ಗೀತೆಯಲ್ಲಿ ಹೆಂಡತಿಯನ್ನು ಪರೀಕ್ಷಿಸಲೆಳಸುವ, ಗಂಡನೊಬ್ಬನ ಚಾತುರ್ಯ ನಕ್ಕು ನಗಿಸುವಂತಿದೆ. ಮದುವೆಯಾದ ತರುಣದಲ್ಲಿಯೇ ದಂಡಿಗೆ ಹೋದ ಗಂಡನಿಗೆ ತನ್ನ ಹೆಂಡತಿಯ ಬಗ್ಗೆ ಏನು ಸಂದೇಹ ಬಂತೋ ಏನೋ! ಬಳೆಗಾರನಂತೆ ವೇಷವನ್ನು ಹಾಕಿಕೊಂಡು ತನ್ನ ಮನೆಗೇ ಬರುತ್ತಾನೆ. ಹೆಂಡತಿಗೆ ಬಳೆ ತೊಡಿಸುತ್ತಾನೆ. ಬದಲಾಗಿ ಊಟ ತಿಂಡಿಗಳನ್ನು ಕೊಡುವಂತೆ ಕೇಳಿದುದಲ್ಲದೆ, "ನಿನ ಗಂಡ ಚೆನ್ನಿಗರಾಯ ಮಲಗೂವ ಮಂಚಾವ ಕೊಡೆಲೆ ಎಲೆ ಹೆಣ್ಣೆ" ಎಂದು ಕೇಳುತ್ತಾನೆ. ಆ ಹೆಂಗಸಿಗೆ ತಾನು ಬಳೆಯನ್ನಾದರೂ ಏಕೆ ತೊಟ್ಟು ಕೊಂಡೆನೋ ಎನ್ನಿಸುತ್ತದೆ. ಬಳೆಗಾರನ ಆ ಮಾತುಗಳನ್ನು ಕೇಳಿ ಸಹಿಸ

ಲಾರದೆ "ಆಗಲೆ ಆ ಬಾಲೆ ಕೈಯನ್ನೆ ಒದಿರ್ಯಾಳೆ ಅವಳು ಚಿಂತೆಯ ಮಾಡ್ಯಾಳೆ ಹಾಳಾದೊ ಬಳೆಗೋಳು." ಹೆಂಗಸಿನ ಮುನಿಸನ್ನು ನೋಡಿ ವೇಷ ತೊಟ್ಟ ಬಳೆಗಾರ ಮಾತೆತ್ತಲಿಲ್ಲವೆಂದು ಕಾಣುತ್ತದೆ. ನಮ್ಮ ಕವಿ ಮತ್ತೆ ಅವನ ಹೆಸರನ್ನೇ ಎತ್ತದೆ, ಮರುಕ್ಷಣದಲ್ಲಿಯೇ ಗಂಡನನ್ನೇ ಕರೆ ತರುತ್ತಾನೆ ನೊಂದು ಬಾಡಿದ್ದ ನೀರೆ, ನಲ್ಲನೊಂದಿಗೆ ಎಲ್ಲವನ್ನೂ ಹೇಳುತ್ತಾಳೆ. ಆಗ ಅವನು ನಗು ನಗುತ್ತ "ಬಳೆಗಾರ ಶೆಟ್ಟಿಯ ನಾ ವೇಷ ಹಾಕಿದೆ, ಬಳೆಗಾರನಾಗಿ ನಾ ಬಂದೆ" ಎಂದು ಗುಟ್ಟನ್ನು ಬಿಟ್ಟುಕೊಟ್ಟು ಹೆಂಡತಿಯನ್ನು ಬಾಯಿ ತುಂಬ ಹೊಗಳುತ್ತಾನೆ. ಅಷ್ಟೇ ಅಲ್ಲ; ತನ್ನ ಮಡದಿಯ ಸದ್ಗುಣವನ್ನು ತಾಯಿಯ ಮುಂದೆಯೂ ಮನವಾರೆ ಮೆಚ್ಚಿಕೊಂಡಾಡುತ್ತಾನೆ. ವಿನೋದ ಮತ್ತು ವಿಚಾರಗಳೆರಡೂ ಅವಳಿಜವಳಿಯಂತೆ ಹೆಣೆದುಕೊಂಡಿರುವ ಈ ರಚನೆ ಎಂಥ ರಸಿಕರನ್ನಾದರೂ ಒಲಿಸೀತು.

ಬಂಜೆಯ ಬಾಳಿಗಿಂತ ಕೀಳಾದುದು ಇನ್ನಿಲ್ಲ ಎಂದು ನಮ್ಮವರು ನಂಬಿಕೆಯಷ್ಟೆ. ಎಷ್ಟು ಆಸ್ತಿ ಪಾಸ್ತಿಗಳಿದ್ದರೇನು ? ಮುದ್ದು ಮಾತನಾಡುವ ಮಗುವಿಲ್ಲದ ಮೇಲೆ ಹೆಣ್ಣಿನ ಜೀವನ ಕಾಡುಪಾಲೇ ಸರಿ. ಈ ವಿಚಾರವನ್ನು "ಬಂಜೆ ಹೊನ್ನಮ್ಮ" ಎಂಬ ಕವಿತೆಯಲ್ಲಿ ಬಹು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಆಕೆಯ ಹೆಸರೇ ಹೊನ್ನಮ್ಮನೆಂದು ಇರುವುದು ಧ್ವನಿ ಪೂರ್ಣವಾಗಿದೆ. ಉಂಡು ಉಡುವುದಕ್ಕೆ ಆಕೆಗೆ ಕೊರತೆಯೇನಿಲ್ಲ. ಅವಳ ಮನೆಯ ಮುಂದೆ "ಬಂಗಾರದ ಕಲುಬಾವಿ" "ಬಂಗಾರದ ಬಾಳೆ" ಗಳೇ ಇದ್ದುವು. ಆದರೆ, ಅವುಗಳ ಬಳಿಗೆ ಬಂದ ಗಿಣಿಗಳ ಹಿಂಡನ್ನು ಕುರಿತು ಯಜಮಾನ ಗಿಣಿ "ಬಂಜೇಯ ಬಾವಿಯ ನೀರನು ಕುಡಿದಾರೆ... ನಾವೂವೂ ಬಂಜೇರು ಆದ್ವೇವು...." "ಬಂಜೇಯ ಹಣ್ಣು ತಿಂದಾರೆ ನಾವೂವೂ ಬಂಜೇರು...." ಎಂದು ಎಚ್ಚರಿಸಲು ಎಲ್ಲವೂ ಬಂದ ದಾರಿಯನ್ನೇ ಹಿಡಿಯುವುವು. ಪಶುಪಕ್ಷಿಗಳಿಗೂ ಬೇಡವಾದ ಆಕೆಯ ಬದುಕು ಭೂಮಿಯಲ್ಲಿ ಇದ್ದರೆಷ್ಟು ಇಲ್ಲದಿದ್ದರೆಷ್ಟು ? ಸಾಲದ್ದಕ್ಕೆ ಆಕೆಯ ಒಡಹುಟ್ಟಿದ ಆರು ಮಂದಿ ಅಕ್ಕಂದಿರಿಗೂ ಮಕ್ಕಳಾಗಿವೆ. "ನನಗೊಂದು ಸಂತಾನ ಕೊಡಲಿಲ್ಲಾ ಶಿವರಾಯ'' ಎಂದು ಒಂದೇ ಸಮನೆ ಯಾತನೆ

ಪಡುವಳು. ಏಕಾಗ್ರ ಚಿತ್ತದಿಂದ ಶಿವನನ್ನು ಕುರಿತು ಧ್ಯಾನಮಾಡುವಳು. ಆಕೆಯ ಮೊರೆಯನ್ನು ಕೇಳಿ, ಈಶ್ವರನು ಪಾರ್ವತಿಯೊಂದಿಗೆ ಬಂದು ಸಂತಾನ ಭಾಗ್ಯವನ್ನು ದಯಪಾಲಿಸುವನು. ದೈವಾನುಗ್ರಹದಿಂದ ಹೊನ್ನಮ್ಮನಿಗೆ "ಆರು ಮೂರು ತಿಂಗಳೀಗೆ ಒಳ್ಳೆ ನೂರು ಮಂದಿ ಕಂದಗಳು" ಹುಟ್ಟುವರು. ಅತಿವೃಷ್ಟಿ, ಅನಾವೃಷ್ಟಿ ! ಏಕೋ ಏನೋ, ಹೊನ್ನಮ್ಮನ ಅಕ್ಕಂದಿರಿಗೆ ಈ ಮಕ್ಕಳನ್ನು ಕಂಡು ಸಹಿಸಲಾಗಲಿಲ್ಲ. ಅವರು ವಿಷವಿಕ್ಕಿದರು. ಹಲುಬಿ ಹೊರಳಾಡಿದ ಹೊನ್ನಮ್ಮ ಮತ್ತೊಮ್ಮೆ ಈಶ್ವರನನ್ನೇ ಆಶ್ರಯಿಸುವಳು. ಭಗವಂತನ ದಯೆಯಿಂದ ಮಕ್ಕಳು ಬದುಕಿ ಬರುವರು. ಬಂಜೆಯ ಬಾಳನ್ನು ಕುರಿತ ಈ ರಚನೆಯಲ್ಲಿ ಮೊದಮೊದಲಿನ ತೀಕ್ಷ್ಣತೆ ಕಡೆಕಡೆಗೆ ಪವಾಡದ ಸೆಳೆತಕ್ಕೆ ಸಿಕ್ಕಿ ಸ್ವಲ್ಪಮಟ್ಟಿಗೆ ಇಳಿಮುಖವಾಗಿರುವಂತಿದೆ. ಇದೇ ಹೆಸರಿನ ಮತ್ತೊಂದು ಕವನವನ್ನು ಶ್ರೀಯುತ "ಮಾಸ್ತಿ" ಅವರು ತಮ್ಮ "ಕರ್ನಾಟಕದ ಜನಪದ ಸಾಹಿತ್ಯ" ಎಂಬ ಪ್ರಬಂಧದಲ್ಲಿ ಉದಾಹರಿಸಿರುತ್ತಾರೆ. (ಪ್ರಕ, xviii, ಸಂ. ೧, ಪು. ೧೯–೨೧). ಅಲ್ಲಿ ಹೊನ್ನಮ್ಮನು ಮಾಡಿಸಿದ ಅಡಿಗೆಯನ್ನು ಆಕೆಯ ತಂದೆ, ತಾಯಿ, ಬಂಧು ಬಳಗದವರೂ ನಿರಾಕರಿಸಿದುದಲ್ಲದೆ, ಸಮುದ್ರವೂ ಕೊಳ್ಳದೆ ಬತ್ತಿ ಹೋಯಿತೆಂದು ವರ್ಣಿತವಾಗಿದೆ. ಮಕ್ಕಳಿಲ್ಲದ ಆಕೆ ಶಿವನ ಮೇಲೆ ಸಿಟ್ಟು ಮಾಡಿಕೊಂಡು "ಶಿವರಾಯ ಕಂಡ್ರೆ ಕಲ್ಲನೆ ಒಗಿಯೆಂದ" ಎಂದು ಉಗ್ರವಾಗಿ ಕೊನೆಗೊಳ್ಳುತ್ತದೆ. ಕೊಡಗಿನ ಕಡೆ ಆ ಹಾಡು ಇರುವುದಾಗಿ ತಿಳಿದುಬರುತ್ತದೆ. ಒಂದೇ ವಸ್ತುವನ್ನು ಕುರಿತ ಈ ಎರಡು ರೀತಿಯಾದ ರಚನೆಗಳು ಜಾನಪದ ಕವಿಗಳಲ್ಲಿಯೂ ಕಂಡುಬರುವ ಭಿನ್ನರುಚಿಯನ್ನು ಪ್ರಕಟಿಸುತ್ತದೆ.

ಹುಟ್ಟಿದವರೆಲ್ಲ ಸಜ್ಜನರೆಂದು ಯಾರೂ ಹೇಳುವಂತಿಲ್ಲ. ಮನುಷ್ಯರೆಂದ ಮೇಲೆ ಒಳ್ಳೆಯವರೂ ಕೆಟ್ಟವರೂ ಇರುತ್ತಾರೆ ಹಳ್ಳಿಯ ಕವಿಗಳ ಗಮನ ಇಂಥ ದುರ್ಗುಣಿಗಳ ಕಡೆಗೂ ಸಾಕಷ್ಟು ಹರಿದಿದೆ. "ಕಲಿಯುಗದ ಬಾಲೆ" ಎಂಬ ಕೃತಿಯಲ್ಲಿ ಹಾದರಗಿತ್ತಿಯೊಬ್ಬಳ ಭಯಾನಕ ಕ್ರಿಯೆಯನ್ನು ಚಿತ್ರಿಸಲಾಗಿದೆ. ಕೆಟ್ಟನಡತೆಯ ಹೆಂಗಸೊಬ್ಬಳು ತನ್ನ ಮಕ್ಕಳನ್ನೇ ಮಾರಿಯಂತೆ ಕೊಲ್ಲುತ್ತಾಳೆ. ಪರಪುರುಷನೊಂದಿಗೆ ಚಕ್ಕಂದ

ವಾಡುತ್ತಾಳೆ. ದುಃಸ್ವಪ್ನವನ್ನು ಕಂಡು ಊರಿಗೆ ಹಿಂದಿರುಗಿದ ಗಂಡನಿಗೆ ಸುಳ್ಳುಹೇಳಿ, ಅವನ ಕಣ್ಣು ಇಂಗುವಂತೆ ಮಾಟನಾಡುತ್ತಾಳೆ. ಸತ್ತ ಮಕ್ಕಳನ್ನೂ ಕುರುಡ ಗಂಡನನ್ನೂ ಕೊಟ್ಟಿಗೆಯಲ್ಲಿ ದೂಡಿ ಕೆಚ್ಚಿಡುತ್ತಾಳೆ. ಈ ಮಹಾಪಾತಕಿಯ ಕ್ರೂರ ವರ್ತನೆಯನ್ನು ಕಂಡು ಸಹಿಸಲಾರದೆ ಸದಾಶಿವನೇ ಬಂದು "ಹೂವಿನ ಮಳೆ ಕರೆದು" ತಂಪುಂಟುಮಾಡಿ, ತಂದೆ ಮಕಳನ್ನು ಬದುಕಿಸುತ್ತಾನೆ. ನೀತಿಗೆಟ್ಟ ನಾರಿಯನ್ನು "ಶಿವನು ಸುಣ್ಣದ ಗುಂಡಿಗೆ ಹಾಕಿದಾನು". ಇಂಥ ವಿಷಯವನ್ನೇ ಕುರಿತಿದ್ದುದಾದರೂ "ನುಚ್ಚಾಯ್ತು ನೀರ ಹೊಳೆಯಾಗೆ" ಎಂಬ ಕವಿತೆಯಲ್ಲಿ ಹೆಣ್ಣು ಮಗಳೊಬ್ಬಳ ರಹಸ್ಯ ಪ್ರಣಯ ಬಹು ಪ್ರಿಯವಾಗಿ ನಿರೂಪಿತವಾಗಿದೆ. ಗೋಪ್ಯವಾಗಿ ಪ್ರಣಯ ವ್ಯವಹಾರವು ಸಾಗುತ್ತಲೇ ಇತ್ತು. ಒಂದು ದಿನ ಇದ್ದಕ್ಕಿದ್ದಂತೆಯೇ ಹೆಣ್ಣಿಗೆಹಳ್ಳಿ ಹೊಸೂರು ಕಟ್ಟಿ ಏರಿಮೇಲೆ ಮಾಯೂರಮಲ್ಲ ಮಡ್ಡಿದ್ದೊಹ್ದ ಸುದ್ದಿ" ತಿಳಿದುಬರುತ್ತದೆ. ನೀರಿಗೆ ತೆರಳಿದಾಗ ಈ ಸುದ್ದಿ ಗೊತ್ತಾಗುತ್ತದೆ. ಆಕೆ ಹತಾಶಳಾಗಿ ಹೊತ್ತಿದ್ದ ಕೊಡವನ್ನೇ ಎತ್ತಿ ಹಾಕಿ ಹಲಬುತ್ತಾಳೆ. ಪಕ್ಕದಲ್ಲಿದ್ದ ಗೆಳತಿ "ಚಿನ್ನದ ಕೊಡನಲ್ಲಾ ರನ್ನದ ಕೊಡನಲ್ಲಾ ಮಣ್ಣಿನ ಕೊಡಕ್ಯಾಕೆ ಕಡುದುಃಖ" ಎಂದು ಸಮಾಧಾನ ಹೇಳಲು, ಆಕೆ "ಕೊಡಕೊಡ ಎಂದಾರೆ ಈ ಸೀಮೆ ಕೊಡನಲ್ಲಾ ನಾಗ ಮಂಗಲದ ಜಗಜೋಡಿ ಕೊಡವ ನಾನು ಹತ್ವರ್ಷದಿಂದ ಬಳಸಿದ್ದೆ" ಎಂದು ಅರ್ಥಪೂರ್ಣವಾಗಿ ಉತ್ತರವೀಯುವಳು. ಹಿಂದಿನ ರಚನೆಯಲ್ಲಿ ಇದೇ ವಸ್ತುವು ಬೀಭತ್ಸವಾಗಿ ಪರಿಣಮಿಸಿದ್ದರೆ. ಇಲ್ಲಿ ಕುತೂಹಲಕಾರಿಯಾಗಿ ಮನಃಪ್ರಿಯವಾಗುವಂತೆ ಪರಿವರ್ತನೆಗೊಂಡಿದೆ. ಈ ಕವಿತೆಯ ಕೆಲವು ಪದ್ಯಗಳು ಇತರ ಸಂಕಲನಗಳಲ್ಲಿ ಬಿಡಿಬಿಡಿಯಾಗಿ ಈಗಾಗಲೇ ಪರಿಚಯವಾಗಿದ್ದುವು. ಪ್ರಕೃತದಲ್ಲಿ ಅವು ಒಂದು ಇಡೀ ಕೃತಿಯ ಭಾಗಗಳೆಂದು ತಿಳಿದು ಬರುವುದು ಗಮನಾರ್ಹವಾದ ಸಂಗತಿ.

ಜೀವನದ ಮತ್ತೊಂದು ದೊಡ್ಡ ಸಮಸ್ಯೆಯೇ ಸಾವು. ಜನನ ಅನಿರೀಕ್ಷಿತವಾದರೂ ಮರಣ ನಿಶ್ಚಯವಾದದ್ದು. ಆದರೂ ಮರ್ತ್ಯನಿಗೆಕಟ್ಕಡೆಯ ತನಕ ಬದುಕಬೇಕೆಂಬ ಚಪಲ ತಪ್ಪುವುದಿಲ್ಲ. ಯಮಧರ್ಮರಾಯನು ಮನೆಯ ಹೊಸಲಿಗೆ ಬಂದಾಗಲೂ ಆತನ ಮುಂದೆ ಬಯಕೆ

ಬೇಡಿಕೆಗಳನ್ನು ತೋಡಿಕೊಂಡು ಕೆಲವುಕಾಲ ಅವಕಾಶ ಬೇಕೆನ್ನುವ ಚಪಲ ಚಿತ್ತವನ್ನು ಈ ನಾಡಕವಿಗಳು ಬಹು ಸ್ವಾರಸ್ಯವಾಗಿಯೂ ಬಗೆ ಬಗೆಯಾಗಿಯೂ ಚಿತ್ರಿಸಿರುತ್ತಾರೆ. ಪ್ರಕೃತ ಸಂಗ್ರಹವೊಂದರಲ್ಲಿಯೇ ಇರುವ "ಹೆಬ್ಬೋಗೊ ಕುಡಿಯ ಹರಿಕೊಂಡ" "ನಾನಿದ್ದು ಬಂದೇನು ನಡೀರಣ್ಣ" "ಫಲ ಬಿಡುವ ಮರಗಳ ಕಡಿಸನೆ" ಎಂಬ ಮೂರು ರಚನೆಗಳೂ ಈ ನಿಷಯವನ್ನು ಕುರಿತಿದ್ದು. ಸುಪ್ರಸಿದ್ಧವಾದ "ಜವರಾಯ" ಎಂಬ ಕೃತಿಯ ಸರಣಿಯನ್ನೇ ಇವು ಹೋಲುತ್ತವೆ. ಮಾನವನಿಗೂ, ಜವರಾಯನಿಗೂ ನಡೆವ ಸಂಭಾಷಣೆಯ ಸಂವಿಧಾನವೇ ಈ ರಚನೆಗಳ ಮುಖ್ಯ ತಿರುಳು. ಇವುಗಳಲ್ಲಿ ಗೋಚರವಾಗುವ ವಿವರ ವೈವಿಧ್ಯವೂ ಜೀವನಾನುಭವವೂ ಮೆಚ್ಚುವಂಥಾದ್ದು.

ಪಾಮರರ ಮನಸ್ಸಿಗೆ ಪವಾಡವೆಂದರೆ ಅತಿಪ್ರಿಯವಾದದ್ದು. ಊಹಾತೀತ ಹಾಗೂ ವಿಸ್ಮಯಕರವಾದ ಸಂಗತಿಗಳೆನ್ನು ಮನವಾರೆ ಮೆಚ್ಚುವರು. ಇಂಥ ಕುತೂಹಲಜನಕವಾದ ಕಥೆಗಳಿಗೆ ನಮ್ಮಲ್ಲಿ ಕೊನೆ ಮೊದಲಿಲ್ಲ. ಇಲ್ಲಿರುವ "ತಬ್ಬಲಿರಾಯ" ಮತ್ತು "ನಾಗರಗನ್ನೆ" ಎಂಬುವುಗಳಲ್ಲಿ ಈ ತೆರನಾದ ಒಂದು ಸೋಜಿಗದ ಸನ್ನಿವೇಶವೇ ಬಹು ಮನೋಹರವಾಗಿ ಚಿತ್ರಿತವಾಗಿದೆ. "ತಬ್ಬಲಿರಾಯ" ನಿಗೆ ಹೆಣ್ಣು ಸಿಕ್ಕುವುದೇ ಒಂದು ಪ್ರಯಾಸವಾಯಿತು. ಕಡೆಗೆ ಬೇಡರ ಕುಲಕ್ಕೆ ಸೇರಿದ್ದ ಗುರುತಾಯಮ್ಮನನ್ನು ಮದುವೆಯಾಗುವನು. ಕುಂಚಿಟಿಗರ ಕುಲದವನಾದ ಅವನ ವಂಶ ಬೆಳೆಯದಂತೆ ಸ್ವಂತ ಭಾವಮೈದಂದಿರೇ ಅವನನ್ನು ಉಪಾಯ ಮಾಡಿ, ಬೇಟೆಗೆ ಕರೆದೊಯ್ದು ಸಂಹರಿಸುತ್ತಾರೆ. ಇತ್ತ ಗುರುತಾಯಮ್ಮನ ಹೊಟ್ಟೆಯಲ್ಲಿ ಹುಟ್ಟಿದ "ಸೂರ್ಯನಾರಾಯಣ" ಎಂಬ ಮಗು ಅನೇಕ ಗಂಡಾಂತರಗಳನ್ನು ದಾಟಿ, ಗೋಲಿ ಗಜ್ಜುಗಗಳನ್ನು ಆಡುವ ಹುಡುಗನಾಗಿ ಬೆಳೆಯುತ್ತಾನೆ. ತನ್ನ ಸೋದರಮಾವಂದಿರು ಮಾಡಿದ ಅಕಾರ್ಯ ಅವನಿಗೆ ತಿಳಿದು ಬರುತ್ತದೆ. ಕೂಡಲೆ ತಾಯಿಯನ್ನು ಕಂಡು. "ಹಂಚಿಕಡ್ಡಿ ರಥವ ಮಾಡಿ" ದೇವರ ಹೆಸರನ್ನು ಹೇಳಿ, ತಂದೆಯನ್ನು ಬದುಕಿಸಿಕೊಂಡು ಬರುತ್ತಾನೆ. ಅನಂತರ ತಂದೆ ಮಕ್ಕಳಿಬ್ಬರೂ ಕೂಡಿ ದ್ರೋಹಿಗಳಾದ ಬಂಧುಗಳನ್ನೂ ಅವರ ಹೆಂಡತಿಯರನ್ನೂ ಕೊಂದು, ತೋರಣ ಕಟ್ಟಿ, ತಾವು ಸುಖವಾಗಿರು

ತ್ತಾರೆ. ಕಥೆ ಚಿಕ್ಕದಾದರೂ ಅದನ್ನು ಬೆಳೆಸಿರುವ ರೀತಿ ಯಾರ ಮನ ಸ್ಸನ್ನಾದರೂ ಹಿಡಿದು ನಿಲ್ಲಿಸುತ್ತದೆ. "ನಾಗರಗನ್ನೆ" ಎಂಬ ರಚನೆಯ ಲ್ಲಂತೂ ಒಟ್ಟು ವಾತಾವರಣ ಕಲ್ಪನೆಯೇ ಅತ್ಯಂತ ಸೋಜಿಗವಾಗಿದೆ. ಏಳುಜನ ರಾಮುದೀರು ಬೇಟೆಗೆ ಹೋದದ್ದನ್ನೇ ಕಾಯ್ದುಕೊಂಡಿದ್ದು, ''ಭೂತಾಳೆ ಪಟ್ಟಣದ ಮಾಯದ ಮರಿಜೋಗಿ" ಕಲ್ಯಾಣಿಪಟ್ಟಣಕ್ಕೆ ಬಂದು ನಾಗರಗನ್ನೆಯನ್ನು, ಮಂಕುಬೂದಿ ಎರಚಿ ಕರೆದೊಯ್ಯುತ್ತಾನೆ. ಮೂರು ತಿಂಗಳ ಬಾಣಂತಿಯಾದ ಆಕೆ ಮಗುವನ್ನು ಬಿಟ್ಟು ಮಾಯಕಾರ ನನ್ನು ಹಿಂಬಾಲಿಸುತ್ತಾಳೆ. ಜೋಗಿಯು ನಾಗರಗನ್ನೆಯನ್ನು ಜೂಲು ನಾಯಿಯನ್ನಾಗಿ ಮಾರ್ಪಡಿಸಿ ಭೂತಾಳೆ ಪಟ್ಟಣಕ್ಕೆ ಕರೆದೊಯ್ದು, ಅಲ್ಲಿ ಅವಳನ್ನು ''ಮುಟ್ಟಾಕೆ ಹೋದಾನೆ". ನಾಗರಗನ್ನೆಯಾದರೋ ಒಂದು ಅವಧಿಯನ್ನು ಬೇಡಿ ಜೋಗಿಯನ್ನು ಉಪಾಯದಿಂದ ದೂರವಿರಿಸುತ್ತಾಳೆ. ಇತ್ತ ಬೇಟೆಯಿಂದ ಹಿಂತಿರುಗಿ ಬಂದ ಏಳುಜನ ರಾಮದೀರು ನಡೆದ ಸಂಗ ತಿಯನ್ನು ತಿಳಿದು, ನಾಗರಗನ್ನೆಯನ್ನು ಬಿಡಿಸಿಕೊಂಡು ಬರಲು ಭೂತಾಳೆ ಪಟ್ಟಣಕ್ಕೆ ಕುದುರೆ ಹತ್ತಿ ಬರುತ್ತಾರೆ. ಮುದುಕಿಯೊಬ್ಬಳ ಮನೆಯಲ್ಲಿ ತಂಗಿದ್ದು, ನೀರಿಗೆ ಬಂದಿದ್ದ ನಾಗರಗನ್ನೆಯನ್ನು ಕರೆದುಕೊಂದು ಬರಲು ಹವಣಿಸುತ್ತಾರೆ. ಎಲ್ಲಿಂದಲೋ ಬರುತ್ತಿದ್ದ, ಮರಿಜೋಗಿ ಮತ್ತೆ ರೂಪ ಮರೆಸಿಕೊಂಡು ಅವರೊಂದಿಗೆ ಕೂಡಿದ್ದು, ಏಳು ಜನ ರಾಮದಿರನ್ನು ಕಲ್ಲಾಗಿ ಮಾಡುತ್ತಾನೆ. ನಾಗರಗನ್ನೆಗೆ ಮತ್ತೆ ಸೆರೆಯಾಯಿತು. ಹನೆ ರಡು ವರ್ಷಗಳ ಕಾಲ ಅನ್ನ ನೀರುಗಳಿಲ್ಲದೆ ನವೆದ ಆಕೆಗೆ ಮತ್ತೆ ಇನ್ನೆರಡು ವರ್ಷಗಳ ಕಾಲ ಅದೇ ಪಾಡಾಯಿತು. ಇತ್ತ, ಹಸುಗೂಸಾಗಿದ್ದ ರಾಮಣ್ಣನು ದೊಡ್ಡವನಾಗಲು, ಅವರಿವರ ಬಾಯಿಂದ ತನ್ನ ತಂದೆ ತಾಯಿ ಚಿಕ್ಕಪ್ಪಂದಿರಿಗಾದ ವಿಪತ್ತು ತಿಳಿದು ಬರುವುದು. ಹದಿನಾಲ್ಕು ವರ್ಷದ ಹುಡುಗ " ಧೀರ ಗಂಡಾದ್ರೆ ಗೆದ್ದು ಬರುವೆ ಹೆಣ್ಣಾದ್ರೆ ಸೋತು ಬರುವೆ " ಎಂದು ಅಜ್ಜಿಯೊಂದಿಗೆ ಹೇಳಿ ಭೂತಾಳೆ ಪಟ್ಟಣಕ್ಕೆ ಬರುವನು. ನೀರಿಗೆ ಬಂದಿದ್ದ ನಾಗರಗನ್ನೆ ದೊರೆಮಗನನ್ನು ಕಂಡು ವಿಚಾರಿಸಿ, "ಈ ಬೀಳಾದ ಪಟ್ಟಣಕೆ ನೀನು ಯಾಕು ಬಂದೆ ದೊರೆ ಮಗನೆ" ಎಂದು ಸಂಕಟಪಟ್ಟು ಅವರ ತಂದೆ ಮೊದಲಾದವರಿಗೆ ಒದಗಿರುವ ದುಃಸ್ಥಿತಿಯನ್ನು

ತಿಳಿಸುವಳು. ತರುಣ ವೀರನು ಹೂವಾಡಗಿತ್ತಿಯ ಆಶ್ರಯವನ್ನು ಪಡೆದು ತನ್ನ ಸಂಚನ್ನು ಮುಂದುವರಿಸುವನು. ನಾಗರಗನ್ನೆಯ ಮೂಲಕ ಜೋಗಿಯ ಜೀವರಹಸ್ಯ ತಿಳಿದುಬರುವುದು. ವೀರ ಕಿಶೋರನು ಜೋಗಿಯ ಪ್ರಾಣವನ್ನು ಹುದುಗಿಟ್ಟಿದ್ದ ಹಕ್ಕಿಯನ್ನು ಹಿಡಿದುಕೊಂಡು ಬಂದು, ತಂದೆ ಮೊದಲಾದವರನ್ನು ಬದುಕಿಸಿದ್ದಲ್ಲದೆ, ಜೋಗಿಯ ಎದುರಿನಲ್ಲಿಯೇ ಅವನ ಪ್ರಾಣಪಕ್ಷಿಯ ಕತ್ತನ್ನು ಮುರಿದು ಅವನ ಕೊನೆಗಾಣಿಸುವನು. ಅನಂತರ ಎಲ್ಲರೂ ತಮ್ಮ ಊರಿಗೆ ಬಂದು ಸೇರುತ್ತಾರೆ. ಈ ರಚನೆಯಲ್ಲಿ ವಿದಿತವಾಗುವ ಬೆರಗಾಗುವ ಕಥಾವಸ್ತು, ಕುತೂಹಲಕಾರಿಯಾದ ಕಥನ ಕ್ರಮ, ಕಟ್ಟುಕಡೆಯತನಕ ಹಿಡಿದು ನಿಲ್ಲಿಸುವ ಘಟನಾಪರಂಪರೆಗಳು ಅತ್ಯಂತ ರಮಣೀಯವಾಗಿವೆ. ಕೃತಿಯ ಉದ್ದಕ್ಕೂ ಅಲೌಕಿಕ ವಾತಾವರಣವೊಂದೆ ಆವರಿಸಿರುತ್ತದೆ. ಹೆಜ್ಜೆಹೆಜ್ಜೆಗೂ ಅದು ಬೆಳೆಯುತ್ತದೆ. ಓದುವವರನ್ನು ಆ ಮಾಯಾಲೋಕದತ್ತ ಬಹು ಬೇಗನೆ ಸೆಳೆದುಕೊಳ್ಳುತ್ತದೆ. ಆ ಸೋಜಿಗದ ಸುಳಿಯಲ್ಲಿ ಸಿಕ್ಕಿ ಬಿದ್ದ ಮನಸ್ಸಿಗೆ ಸಾಧ್ಯ ಸಾಧ್ಯಗಳ ಸಂದೇಹವೇ ಉಡುಗಿ ಹೋಗಿ, ಆ ಮಾಯಾಲೋಕವೇ ನೈಜವೆನಿಸುತ್ತದೆ. ಇಂಥ ಉಜ್ವಲವಾದ ಪರಿಣಾಮವನ್ನು ಸಾಧಿಸಿರುವ ಈ ರಚನೆಯ ರಸಾಸ್ವಾದನೆಯನ್ನು ವರ್ಣಿಸಿ ಬೆಳೆಸುವುದಕ್ಕಿಂಥ ಓದಿ ಅನುಭವಿಸುವುದೇ ಲೇಸು; ಕೇಳಿ ಸುಖಿಸುವ ಮುಗ್ಧ ಜನತೆಯ ಪುಣ್ಯವೇ ಪುಣ್ಯ!

ಪ್ರಕೃತ ಸಂಕಲನದಲ್ಲಿ ಅಡಕವಾಗಿರುವ ಪೌರಾಣಿಕ ಕಥನ ಗೀತಗಳು ಈಶ್ವರ, ಪಾರ್ವತಿ, ಗಂಗೆ, ಕೃಷ್ಣ, ರುಕ್ಮಿಣಿಯರನ್ನು ಕುರಿತಿದ್ದು. ಇದೇ ವಿಷಯಗಳು ಮಹಾಕವಿಗಳ ಪ್ರಸಂಚದಲ್ಲಿ ಬೇರೊಂದು ಮೆರುಗಿನಿಂದ ಮೆರೆದರೆ, ಇಲ್ಲಿ ಮತ್ತೊಂದು ತೆರನಾಗಿ ವಿಶಿಷ್ಟವಾಗಿ ಕಂಡುಬರುತ್ತವೆ. ಮುಖ್ಯವಾಗಿ ಜಾನಪದ ಕವಿಯು ಈ ದೇವತೆಗಳನ್ನು ತನ್ನ ಊರಿನ ಆಪ್ತ ಬಂಧುವಿನಂತೆ ಕಾಣುತ್ತಾನೆ. ಗಿರಿಜೆ, ಗಂಗೆಯರನ್ನಾಗಲಿ, ಕೃಷ್ಣ, ಪರಮೇಶ್ವರರನ್ನಾಗಲಿ ನ್ನಾನಮಾಡಲು ತನ್ನ ಊರಿನಕೆರೆಗೋ ಹೊಳೆಗೋ ಕರೆತರುತ್ತಾನೆ. ತನ್ನ ತೋಟದ ಹೂವು, ಹಣ್ಣುಗಳನ್ನೇ ಸಮರ್ಪಿಸುತ್ತಾನೆ. ತಾನು ಕಂಡ ಸಂಸಾರವಂದಿಗರ ಸುಖದುಃಖಗಳನ್ನೇ ಅವರಿಗೂ ಅನ್ವಯಿಸಿಯೋ ಆರೋಪಿಸಿಯೋ ನೋಡಿ, ಅವರ ಮನೋ

ಧರ್ಮಗಳನ್ನು ಪರಿಚಯಮಾಡಿಕೊಡುತ್ತಾನೆ. ಅಂಬಿಗರ ಸಾಕು ಮಗಳಾದ ಗಂಗೆಯನ್ನು ಈಶ್ವರನು ಒಲಿಸಿ ವರಿಸುವ ಕಥೆ ಒಂದು ಕೃತಿಯ ವಸ್ತುವಾದರೆ, ಗಂಗೆಯನ್ನು ತೆಗಳಿ ಪಡಬಾರದ ಪಾಡನ್ನು ಪಟ್ಟ ಪಾರ್ವತಿಯ ಚಿತ್ರ ಮತ್ತೊಂದು ಕೃತಿಯ ತಿರುಳು. ಶ್ರೀಕೃಷ್ಣನ ಮಾಯೆಯನ್ನು ಮನಸ್ಸೊಪ್ಪುವಂತೆ ಒಂದು ಕಡೆ ಹೇಳಿದ್ದರೆ, ಮತ್ತೊಂದು ಕಡೆ ಆತ ಕೊರವಂಜಿಯಾಗಿ, ರುಕ್ಮಿಣಿಯ ಕಣ್ಣಿಗೆ ಮಣ್ಣೆರಚಿ ಮರುಳು ಮಾಡುವ ರಮ್ಯಸಿರೂಪಣೆ ಬರುತ್ತದೆ. ಹರ-ಗಿರಿಜೆಯರ ಕಲ್ಯಾಣದ ವೈಭವವಾಗಲಿ, ಕೃಷ್ಣ ರುಕ್ಮಿಣಿಯರ ಮದುವೆಯ ಮಹಿಮೆಯಾಗಲಿ ಕಡಮೆಯೇನಿಲ್ಲ. ಆಕಾಶದ ಅಗಲಕ್ಕೂ ಹಂದರ, ಭೂಮಿಯ ಅಗಲಕ್ಕೂ ಹಸೆಮಣೆ. ದೇವಾನುದೇವತೆಗಳ ಒಕ್ಕಲೇ ಬಂದುಬಳಗ ರಂಭೆ ಊರ್ವಸಿಯರು ಬಂದು ನಾಟ್ಯಕಟ್ಟಿದರೆ, ದೊಡ್ಡ ದೊಡ್ಡ ಮೂರ್ತಿಗಳು ಬಂದು ತೋರಣ ಕಟ್ಟುತ್ತಾರೆ. ಈ ಕವಿಗಳಿಗೆ ದೇವತೆಗಳ ಹೆಸರೊಂದಿದ್ದರೆ ಸಾಕು. ಅವರವರ ಮಹಿಮೆಗೆ ಭಂಗಬಾರದಂತೆ, ತಾವು ಉದ್ದೇಶಿಸಿರುವ ಜನತೆಯ ಅಭಿರುಚಿಗೆ ಒಪ್ಪುವಂತೆ, ತಮ್ಮದೇ ಆದ ಒಂದು ಕಥೆಯನ್ನು ಕಟ್ಟಿ ಹಾಡಿ ತಣಿಯಬಲ್ಲರು. ಕೋಳೂರ ಕೊಡಗೂಸಿನ ಕಥೆಯನ್ನು ಹರಿಹರ, ಷಡಕ್ಷರಿಯರು ಒಂದೊಂದು ರೀತಿಯಾಗಿ ನಿರೂಪಿಸಿದ್ದರೆ, ಈ ಸಂಕಲನದಲ್ಲಿರುವ ಜಾನಪದ ಕವಿಯ ನಿರೂಪಣೆಗೂ, ಡಾ|| ಬಿ. ಎಸ್. ಗದ್ದಗೀಮಠ ಅವರ "ನಾಲ್ಕು ನಾಡಪದಗಳು" ಎಂಬ ಸಂಕಲನದಲ್ಲಿರುವ ರೀತಿಗೂ ಸಂಬಂಧವೇ ಇಲ್ಲ. ಮುಖ್ಯವಾಗಿ ಕೊಡಗೂಸಿನ ಮುಗ್ಧಭಕ್ತಿಯ ಚಿತ್ರಣ ಯಶಸ್ವಿಯಾದರೆ ಸಾಕು. ಒಬ್ಬೊಬ್ಬರೂ ತಮ್ಮ ತಮ್ಮ ಹಿನ್ನೆಲೆಯನ್ನು ಒಂದೊಂದು ವಿಧವಾಗಿ ಕಲ್ಪಿಸಿಕೊಂಡಿರುತ್ತಾರೆ. ಜನಪದ ಸಾಹಿತ್ಯದ ಪೌರಾಣಿಕ ಪ್ರಪಂಚವು ಯಾರೂ ಕಾಣದ, ಯಾರೂ ಹೋಗಿ ಬರದ ದೂರದ ನೀರವ ಲೋಕವಲ್ಲ. ಭೂಲೋಕದ ಗಾಳಿ ಬೆಳಕುಗಳಲ್ಲಿಯೇ ಬೆಳೆದು, ಇಲ್ಲಿನ ಸುಖದುಃಖಗಳನ್ನೇ ಸವಿದು, ಮಾನವರೊಂದಿಗೆ ಬಾಂಧವ್ಯವನ್ನು ಕಳೆದುಕೊಳ್ಳದೆ ಸಂತತವೂ ಜೀವಂತವಾಗಿರುವ ವಿಶ್ವವೇ ಸರಿ ! ಈ ಅಜ್ಞಾತ ಕವಿಗಳು ತಮಗೆ ಬೇಕಿದ್ದರೆ ಸತ್ಯವನ್ನೇ ಸೋಜಿಗವೆನ್ನಿಸಬಲ್ಲರು ; ಅಲೌಕಿಕವನ್ನು ನೈಜವೆನ್ನಿಸಬಲ್ಲರು.

"ಉತ್ತರದೇವಿ" ಮತ್ತು "ಮಳೆರಾಯ ಮಾರ್ಹೆಣ್ಣು"ಗಳು ಹಳ್ಳಿಯ ವರ ನಂಬಿಕೆವಿಶ್ವಾಸಗಳನ್ನು ಕುರಿತಿದ್ದು. ಅತ್ತೆಯ ನಿಷ್ಠುರಕ್ಕೆ ಗುರಿಯಾದ ಸೊಸೆ ಉತ್ತರದೇವಿ, ನೆಲೆತಪ್ಪಿ ಗಂಗೆಯ ಪಾಲಾದರೂ "ತಾವರೆ ಎಲೆ ಮೇಲೆ ತಾನಾಗಿ ಕೂತುಕೊಂಡು ತಪಸು ಮಾಡ್ಯಾಳೆ ಶಿವನೀಗೆ, ಉತ್ತರ ದೇವಿ ನಾಡಮೇಲೆ ಉತ್ತರೆ ಮಳೆಯಾಗಿ ಹರಿದಾಳು" ಎಂಬಲ್ಲಿ ಆಕೆಯ ದುಃಖಾತಿರೇಕವೇ ವಿದಿತವಾಗುವಂತಿದೆ. ಕುದಿ ಕುದಿಯುತ್ತಿದ್ದ ಆಕೆಯ ಹೊಟ್ಟೆಯ ಸಂಕಟ ನೀರಿನ ಪಾಲಾದ ಮೇಲೂ ತಣ್ಣಗಾಗಲಿಲ್ಲವೋ ಏನೋ ! ಇದೇ ಕವಿತೆ "ನಾಡ ಪದಗಳು" ಎಂಬ ಸಂಕಲನದಲ್ಲಿಯೂ "ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು" ಎಂಬ ಮತ್ತೊಂದು ಸಂಗ್ರಹದಲ್ಲಿಯೂ ಕಂಡುಬರುತ್ತದೆ. ಪರಸ್ಪರ ಹೋಲಿಸಿ ನೋಡಿದಲ್ಲಿ ಒಂದೊಂದರ ನಿರೂಪಣೆಯೂ ಒಂದೊಂದು ತೆರನಾಗಿದೆ. ಮುಖ್ಯವಸ್ತುವಿನ ಉದ್ದೇಶಕ್ಕೆ ಎಲ್ಲಿಯೂ ಚ್ಯುತಿ ಬಂದಿಲ್ಲ. ಮಳೆರಾಯನ ಚಾಳಿಯನ್ನು ಕುರಿತ ಮತ್ತೊಂದು ಕವನವೂ ಮನೋಜ್ಞವಾಗಿದೆ. ಹಳೆಯ ಸೂಳೆಯ ಬುದ್ಧಿ ಪಂತಿಕೆ, ಹೊಸ ಸೂಳೆಯ ಮುನಿಸು, ಮಳೆರಾಯನ ಶೋಚನೀಯ ಪರಿಸ್ಥಿತಿ, ಕಡೆಯಲ್ಲಿ ಬರುವ ಅಸಮಾಧಾನ ಪರಿಹಾರಗಳ ಚಿತ್ರಣದಲ್ಲಿ ಒಂದು ರೀತಿಯಾದ ರಸಿಕತೆಯ ಹೊಳಪನ್ನು ಕಾಣಬಹುದು.

ಸ್ಥಳಪುರಾಣಗಳನ್ನಾಗಲಿ, ಐತಿಹಾಸಿಕ ಸಂಗತಿಗಳನ್ನಾಗಲಿ ಈ ಕವಿಗಳು ಬಳಸಿಕೊಳ್ಳುವ ವಿಧಾನವು ತುಂಬ ವಿಶಿಷ್ಟವಾದದ್ದು. ಒಂದೊಂದು ಹಳ್ಳಿಯ ಹೆಸರಿನಲ್ಲಿಯೂ ಒಂದೊಂದು ಕಥೆಯೇ ಹುದುಗಿರುತ್ತದೆ. ಆ ಹಳ್ಳಿಯ ಕೆರೆ, ತೊರೆ, ಗುಡ್ಡ, ಕಾಡು, ಕೋಟೆ, ಕೊತ್ತಲಗಳನ್ನು ಕುರಿತು ಎಷ್ಟೆಷ್ಟೋ ಹೇಳಿಕೆಗಳು ಕೇಳಿಬರುತ್ತವೆ. ಈ ಸಂಗ್ರಹದಲ್ಲಿರುವ "ಒಡ್ಡರಬೋಯಿ" ಯಲ್ಲಿ ನಿರೂಪಿತವಾಗಿರುವ ಕೆರೆಯ ಕಥೆಯೂ ಈಗಾಗಲೇ ನಮಗೆ ಪರಿಚಿತವಾಗಿರುವ " ಕೆರೆಗೆ ಹಾರ " ಎಂಬುದರ ಕಥೆಯೂ ಒಂದೇಆಗಿದೆ. ಆದರೆ, ಈ ಎರಡರ ನಿರೂಪಣಾ ಸಂವಿಧಾನ ಬೇರೆ. ಗುರಿ ಒಂದೇ ಆದರೂ ಹೇಳಿರುವ ರೀತಿ, ಹೊಂದಿಸಿರುವ ಪಾತ್ರಗಳ ಸೃಷ್ಟಿ ಒಂದೇ ತೆರನಾಗಿಲ್ಲ. "ಕೆರೆಗೆ ಹಾರ"ದಲ್ಲಿ ವ್ಯಂಜಕತೆ ಹೆಚ್ಚು ; 'ಒಡ್ಡರಬೋಯಿ'ಯಲ್ಲಿ ವಾಚ್ಯ ಹೆಚ್ಚು. ಸೊಸೆಯ ಸ್ವಭಾವ

ದಲ್ಲಿ ಒಂದರಲ್ಲಿ ಸಿಗ್ಗು ಸಂಯಮಗಳಿದ್ದರೆ, ಇನ್ನೊಂದರಲ್ಲಿ ಸಿಟ್ಟು ಸೇಡು ಗಳು ಕಂಡುಬರುತ್ತವೆ. ಒಂದು ಮರಣದಲ್ಲಿಯೇ ಮುಕ್ತಾಯಗೊಂಡಿದ್ದರೆ, ಇನ್ನೊಂದರಲ್ಲಿ ಸತ್ತವರು ಒದುಕಿ ಬಂದು ತಮ್ಮ ಮಾಹಾತ್ಮೆಯನ್ನು ಪ್ರಕಟಿಸುತ್ತಾರೆ. "ಲೋಕೋಭಿನ್ನರುಚಿ" ಎಂಬ ಮಾತು ಯಾರಿಗಾದರೂ ಅನ್ವಯಿಸತಕ್ಕದ್ದೆ "ಪಿರಿಯಾಪಟ್ಟಣದ ಕಾಳಗ" ದಲ್ಲಿ ಕಂಡು ಬರುವ ವೀರರಾಜನ (ವೀರರಾಜ?) ಚಿತ್ರ ಹೃದಯ ವಿದ್ರಾವಕವಾಗಿದೆ. ಚೆಂಗಾಳ್ವ ಮನೆತನದ ವೀರ ರಾಜನನ್ನು ಮೈಸೂರಿನ ದೊರೆಗಳ ಪರವಾಗಿ ದಳವಾಯಿಯು ಮುತ್ತಿದ್ದಾಗ, ಅವನು ತನ್ನ ಹೆಂಡತಿಯರನ್ನು ಕೈಯಾರೆ ಕೊಂದು ಯುದ್ಧದಲ್ಲಿ ತಾನೂ ಮಡಿದನೆಂಬುದಾಗಿ ಚರಿತ್ರೆಯ ಮೂಲಕ ತಿಳಿದುಬರುತ್ತದೆ. * ಈ ಘಟನೆಯನ್ನು ಈ ಚಾನಪದ ಕವಿ ಬಹು ಪರಿಣಾಮಕಾರಿಯಾಗಿ ಚಿತ್ರಿಸಿರುವುದಲ್ಲದೆ, ವೀರರಾಜದೊರೆ ಆತ್ಮಹತ್ಯ ಮಾಡಿಕೊಂಡನೆಂದು ಕಥೆಯನ್ನು ಮಾರ್ಪಡಿಸಿರುತ್ತಾನೆ. ಪಟ್ಟ ಮಹಿಷಿಯಾದ ಮಲ್ಲಮ್ಮನ ಪಾತ್ರ ಪ್ರಬಲೆಯಾದ ಅಬಲೆಯ ಚಿತ್ರವನ್ನು ಕಣ್ಣಿದುರು ತಂದು ನಿಲ್ಲಿಸುತ್ತದೆ. ಈ ಕಥನದಲ್ಲಿ ಕಂಡು ಬರುವ ಕಾವ್ಯ, ದೊರೆಗೆ ಉಂಟಾಗುವ ಧರ್ಮ ಸಂಕಟ, ಮುನಿದರೆ ಮಾರಿಯನ್ನೂ ಮಿಾರಿಸುವ ಮಹಾರಾಣಿಯ ಆಕ್ರೋಶಗಳು ಕವನದ ರೌದ್ರತೆಯನ್ನು ಇಮ್ಮಡಿಯಾಗಿ ಮಾಡಿವೆ. ಇತಿಹಾಸವು ನಡೆದುಹೋದ ಸಂಗತಿಯೆನಿಸಿದರೂ ಐತಿಹ್ಯದ ಮುಸುಕಿನಲ್ಲಿ ಅದರ ಕಿಡಿ ಇಂಥ ರಚನೆಗಳ ಮೂಲಕ ಸರ್ವದಾ ಪ್ರಕಾಶಮಾನವಾಗಿರುತ್ತದೆಯೆಂಬುದನ್ನು ಯಾರೂ ಮರೆಯಲಾರರು.

ಈ ಪ್ರಶಂಸೆಯು ನನ್ನ ನಿರೀಕ್ಷೆಯನ್ನು ಮಿಾರಿ ಈಗಾಗಲೇ ಬೆಳೆದಿದ್ದರೂ ಹೇಳಬೇಕಾದದ್ದು ಇನ್ನೂ ಇದೆಯೆಂದು ಹೇಳಿ ವಿರಮಿಸುವುದೇ ಇವುಗಳ ಹಿರಿಮೆಗೆ ಸೂಕ್ತವಾದೀತು. ಈ ರಚನೆಗಳಲ್ಲಿ ಕಂಡು ಬರುವ ಗ್ರಾಮ್ಯ ಹಾಗೂ ಅಪೂರ್ವ ಕನ್ನಡ ಶಬ್ದಗಳು, ಸಾಧಾರಣವಾಗಿ ಹಳ್ಳಿಯ ಹಾಡುಗಳ ನಿರೂಪಣೆಯಲ್ಲಿ ತೋರಿಬರುವ ಪುನರುಕ್ತಿಯ ಸೊಬಗು

---

*Mysore and Coorg from the Inscriptions, P 144, By B. L. Rice. ಈ ಅಭಿಪ್ರಾಯವನ್ನು ಶ್ರೀ. ಸಿ. ಹಯವದನರಾಯರು ಒಪ್ಪುವಂತಿಲ್ಲ. History of Mysore. Vol. I, P. 134, FN.

ಸ್ವಾರಸ್ಯಗಳು, ಪಾಮರ ಪ್ರಿಯವಾದ ನಂಬಿಕೆ, ನಡೆನುಡಿಗಳನ್ನು ಬಳಸಿ ಕೊಳ್ಳುವ ಬಗೆ ಬಗೆಯ ಸಂವಿಧಾನಗಳು, ಆಯಾ ಕಥೆಗೂ, ಸನ್ನಿವೇಶ ಕಲ್ಪನೆಗೂ ತಕ್ಕಂತೆ ಅನುಸರಿಸಿರುವ ವಿವಿಧ ಛಂದೋಪ್ರಕಾರಗಳು ಮೊದ ಲಾದುವುಗಳನ್ನು ವ್ಯಾಸಂಗಮಾಡಲು ಇಲ್ಲಿ ಸಾಕಷ್ಟು ಸಾಮಗ್ರಿಯಿದೆ. ಜನಪದ ಸಾಹಿತ್ಯವನ್ನು ಸಂಗ್ರಹಿಸುವುದು ಒಂದು ಕಲೆಯಾದರೆ, ಅವುಗಳ ಬೆಲೆಯರಿತು ಅವುಗಳಿಂದ ಮತ್ತೆ ಉತ್ತೇಜನಗೊಂಡು, ಹೊಸ ಹೊಸದಾಗಿ ಕೃತಿ ನಿರ್ಮಾಣ ಮಾಡುವುದು ಇನ್ನೊಂದು ಸಾಧನೆ. ಶ್ರೀ. ದ. ರಾ. ಬೇಂದ್ರೆಯವರು ಈಗಾಗಲೇ ಈ ವಿಶಿಷ್ಟ ಕಾರ್ಯವನ್ನು ಮಾಡಿತೋರಿಸಿರು ತ್ತಾರೆ. ಇತರ ಕೆಲವು ಕವಿಗಳಲ್ಲಿ ಇದರ ಪ್ರಭಾವ ಅಷ್ಟೋ ಇಷ್ಟೋ ಕಂಡುಬರುವುದುಂಟು. ಪ್ರಾಚೀನ ಮತ್ತು ನವೀನತೆಗಳ ಸಮನ್ವಯವೇ ಪರಂಪರೆಯ ಮುಖ್ಯ ಜೀವಾಳ. ಎಂದಮೇಲೆ ಇಂಥ ಮಹೋದ್ದೇಶಕ್ಕೆ ನೆರವಾಗುವಂತೆ ಇಂದು ನಮ್ಮ ಮುಂದೆ ಜಾನಪದ ಕಥನ ಗೀತೆಗಳ ಉತ್ತ ಮೋತ್ತಮ ಸಂಕಲನವನ್ನು ಇಟ್ಟಿರುವ ನನ್ನ ತರುಣ ಮಿತ್ರರಾದ ಶ್ರೀ. ಕ. ರಾ. ಕೃ., ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಒಟ್ಟಿನಲ್ಲಿ, ಈ ಸಂಗ್ರಹದಲ್ಲಿ ಕಂಡುಬರುವ ಒಂದೊಂದು ಕೃತಿಯೂ ಮನ ಮೆಚ್ಚುವಂತಿದೆ. ಈ ರಚನೆಗಳಲ್ಲಿ ವಿದಿತವಾಗುವ ವಸ್ತು ವೈವಿಧ್ಯ, ಕಥನ ಕಲೆಯ ನೈಪುಣ್ಯ, ವರ್ಣನಾಚಾತುರ್ಯ, ಜನಪ್ರಿಯವಾದ ಧಾಟಿಗಳು, ಬಗೆಬಗೆಯ ಚಿತ್ತವೃತ್ತಿಗಳನ್ನುಳ್ಳ ಹಲವಾರು ವ್ಯಕ್ತಿಗಳು, ಜೀವಂತ ವಾಗಿರುವ ಬಳಕೆಯ ಕನ್ನಡದ ನುಡಿಗಳು ಇವೇ ಮೊದಲಾದುವು ಅಜ್ಞಾತರಾದ ಜಾನಪದ ಕವಿಗಳ ಪ್ರತಿಭಾಸಂಪನ್ನತೆಯನ್ನು ನಮಗೆ ಪರಿ ಚಯ ಮಾಡಿಕೊಡುತ್ತವೆ. ಇವುಗಳಲ್ಲಿ ಅಚ್ಚಳಿಯದ ಆಶ್ಚರ್ಯವಿದೆ, ಬಾಡಿಬಡವಾಗದ ಹೊಸತನವಿದೆ, ತುಂಬಿ ತುಳುಕುವ ಭಾವಾವೇಶವಿದೆ, ನಿತ್ಯಜೀವನದ ಮಿಡಿತವಿದೆ.

ಮೈಸೂರು
೧೩-೧೨-೧೯೫೯

ಜಿ. ವರದರಾಜರಾವ್

ನಮ್ಮ ನುಡಿ

ಈವರೆಗೆ 'ಕಾವ್ಯೋದಯ' ಪ್ರಕಾಶನವೆಂದಿದ್ದ ನಮ್ಮ ಮಾಲೆಯ ಹೆಸರನ್ನು ಕೆಲವು ಅನಿವಾರ್ಯಗಳಿಂದ 'ಜನಪದ ಸಾಹಿತ್ಯ ಅಕಾಡೆಮಿ' ಎಂದು ಬದಲಾಯಿಸಬೇಕಾದುದಕ್ಕಾಗಿ ಓದುಗರ ಕ್ಷಮೆಯನ್ನು ಕೇಳುತ್ತೇವೆ. ನಮ್ಮ ಜನಪದ ಸಾಹಿತ್ಯಮಾಲೆಯಲ್ಲಿ ಏಳನೆಯ ಕೃತಿಯಾಗಿ "ಹಾಡಿನಲ್ಲಿ ನಾಡ ಕತೆಗಳು" ಎಂಬ ಕೃತಿಯ ಹೆಸರನ್ನು ಕೆಲವು ಹಿರಿಯರ ಸಲಹೆಯಮೇರೆ "ಜಾನಪದ ಕಥನ ಗೀತೆಗಳು" ಎಂದೇ ಪ್ರಕಟಿಸುತ್ತಿದ್ದೇವೆ. ನಮ್ಮ ಮಾಲೆಯಲ್ಲಿ ಇದುವರವಿಗೂ ಪ್ರಕಟವಾದ ಎಲ್ಲ ಕೃತಿಗಳಿಗಿಂತಲೂ ಪುಟಸಂಖ್ಯೆಯಲ್ಲಿ ಹಿರಿದಾಗಿ ಬೆಳೆದ–ಈ ಸಂಕಲನ ವೈವಿಧ್ಯದ ದೃಷ್ಟಿಯಿಂದಲೂ ವಿಶಿಷ್ಟವಾದುದೆಂದೂ ತಿಳಿಸಲು ಹರ್ಷವಾಗುತ್ತಿದೆ. ಕನ್ನಡದಲ್ಲಿ ಜನಪದ ಕಥನಕವನಗಳಿಗೇ ಮೀಸಲಾದ ಕೃತಿ ಒಂದೆರಡು ಸಿಗುವುದು ದುಸಾಧ್ಯವಾದ ಈ ದಿನಗಳಲ್ಲಿ ಈ ಕೃತಿಯನ್ನು ಹೊರತರುವ ಸಾಹಸ ಮಾಡಿದ್ದೇವೆ. ಸುಮಾರು ಐವತ್ತು ಕಥನಕವನಗಳನ್ನಾದರೂ ಈ ಹೊತ್ತಿಗೆಯಲ್ಲಿ ಸೇರಿಸಬೇಕೆಂದಿದ್ದ, ನಮ್ಮ ಬಯಕೆ ಹಲವು ಕಾರಣಗಳಿಂದ ಈಡೇರದಾಗಿದೆ. ನಮ್ಮಲ್ಲಿ ಇನ್ನು ಉಳಿದ ಕಥೆಗಳು ಆದಷ್ಟು ಬೇಗ ಓದುಗರ ಕೈಸೇರುವಂತೆ ಶ್ರಮಿಸುವ ಭರವಸೆಯನ್ನು ನೀಡುತ್ತೇವೆ.

ಕನ್ನಡನಾಡಿನ ಹಲವು ಜಿಲ್ಲೆಗಳಲ್ಲಿ ಪ್ರವಾಸಮಾಡಿ ಈ ಕಥನಕವನಗಳನ್ನು ಆಯ್ದು ತರಲಾಗಿದೆ. ಯಾವ ಯಾವ ಕಡೆ ಯಾವ ಯಾವ ಕಥೆ ಹೆಚ್ಚು ಪ್ರಚಾರವಾಗಿ ಜನರ ಬಾಯಲ್ಲಿ ಉಳಿದು ಇಂದಿಗೂ ಅವರನ್ನು ತಣಿಸುತ್ತಾ ಬಂದಿವೆಯೊ, ಅಂಥ ಕಥೆಗಳನ್ನೆ ಆದಷ್ಟು ಇಲ್ಲಿ ಸಂಗ್ರಹಿಸಲು ಯತ್ನಿಸಿದೆ. ಕೆಲವು ಕಡೆಗಳಲ್ಲಿ ಸಂಗ್ರಹಿಸಿ ತಂದ ಒಂದೇ ಕಥೆಯ ಎರಡು ಮೂರು ಕೃತಿಗಳನ್ನು ಇಟ್ಟುಕೊಂಡು ಆದಷ್ಟು ಪಾಠಾಂತರಗಳನ್ನು ಗಮನಿಸಿ ಪ್ರಕಟಿಸುವ ಪ್ರಯತ್ನ ಇಲ್ಲಿಯ ಎಲ್ಲಾ ಕಥೆಗಳಿಗೂ ಸಾಧ್ಯವಾಗಿಲ್ಲ. ಆದ್ದರಿಂದಲೇ ಕೆಲವು ಕಥೆಗಳಲ್ಲಿ ಅಲ್ಪ ಸ್ವಲ್ಪ ಕ್ಲೀಷ್ಟತೆ ಕಂಡುಬರುವಂತಿದೆ.

ಇದರ ಪರಿಹಾರಾರ್ಥವಾಗಿ ಪ್ರಿಯ ಮಿತ್ರರಾದ ಶ್ರೀ ಜೀಶಂಪರ ನೆರವನ್ನು ಪಡೆದು, ಒಂದೊಂದು ಕಥೆಯ ಪುಟ್ಟ ಪರಿಚಯವನ್ನು ಈ ಪುಸ್ತಿಕೆಯ ಕೊನೆಯಲ್ಲಿ ಕೊಟ್ಟಿದ್ದೇನೆ. ಇದು ಏನಿದ್ದರೂ ಕಥಾರಂಗಕ್ಕೆ ಕೈಮರವಾದೀತೆ ಹೊರತು ಕಥನಕವನದ ಸಹಜ ಸೌಂದರ್ಯವನ್ನು ಹಳ್ಳಿಗರು ಹಾಡಿರುವ ಮನಮೋಹಕ ರೀತಿಯಲ್ಲಿಯೆ ಓದಿ ತಣಿಯಬೇಕು. ಆ ಹಾಡುಗಳ ಮೂಲದ ಸೊಗಸು ಸೌಂದರ್ಯಗಳನ್ನು ಯಾವ ಗದ್ಯ ಬರಹವೂ ಹಿಡಿದಿಡಲು ಸಾಧ್ಯವಿಲ್ಲ. ಅವರವರ ಕಲ್ಪನೆಗೆ ತಕ್ಕಂತೆ ಕೆಲವು ಕಥನ ಕವನಗಳು ಅರ್ಥವಾಗುವ ರೀತಿಯೆಲ್ಲೂ ಇವೆ. ಈ ಕಥೆ ಈ ನಿಟ್ಟಿನಲ್ಲೇ ಹರಿದಿದೆ ಎಂದು ನಾವು ಕೆಲವು ಕಥೆಗಳ ವಿಷಯದಲ್ಲಿ ಧೈರ್ಯವಾಗಿ ಹೇಳುವಂತಿಲ್ಲ. ನಮ್ಮ ಊಹೆ ತಪ್ಪಾಗಿರಲೂ ಸಾಧ್ಯ–ಅಂತ ಕಡೆಗಳಲ್ಲಿ ಎಲ್ಲಾ ಸಲಹೆಗಳನ್ನು ಸ್ವಾಗತಿಸುತ್ತೇವೆ. ಒಟ್ಟಿನಲ್ಲಿ ಇಂತಹ ಒಂದು ಸಂಕಲನವನ್ನು ತರಬೇಕೆಂಬ ನಮ್ಮ ಹಿರಿಯಾಸೆ ಇಂದು ಕೈಗೂಡಿದೆ. ಅದಕ್ಕೆ ಬೆಂಬಲವಾದ ಮಿತ್ರರನ್ನು, ಅನೇಕ ಅಭಿಮಾನದ ಮಾತುಗಳನ್ನಾಡುತ್ತ ಬಂದಿರುವ ಹಿರಿಯರನ್ನು ನಾವು ಇಲ್ಲಿ ವಿಶ್ವಾಸದಿಂದ ನೆನೆಯುತ್ತೇವೆ.

ಈ ಕೃತಿಯನ್ನು ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ॥ ಡಿ. ಎಲ್. ನರಸಿಂಹಾಚಾರ್, ಎಂ.ಎ. ಅವರಿಗೆ ಅರ್ಪಿಸಲು ನಮಗೆ ತುಂಬ ಆನಂದವಾಗುತ್ತಿದೆ. ಕೃತಿಯ ಅರ್ಪಣೆಗೆ ನಮ್ಮ ಮೇಲೆ ಕೃಪೆಯಿಟ್ಟು ಅನುಮತಿ ನೀಡಿದ ಶ್ರೀಯುತರನ್ನು ವಂದಿಸುವುದು ನಮ್ಮ ಆದ್ಯ ಕರ್ತವ್ಯ. ತಮ್ಮ ನೂರಾರು ಕಾರ್ಯಗೌರವಗಳ ನಡುವೆ ಬಿಡುವು ಮಾಡಿಕೊಂಡು ನಮ್ಮ ಬೇಡಿಕೆಯನ್ನು ನಿರಾಕರಿಸಲಾರದೆ ಮುನ್ನುಡಿಯ ಮೂರು ಮಾತುಗಳನ್ನು ದಯಮಾಡಿ ಬರೆದುಕೊಟ್ಟ ಹಿರಿಯರಾದ ಪ್ರೊ॥ ತೀ. ನಂ. ಶ್ರೀಕಂಠಯ್ಯ, ಎಂ.ಎ. ಅವರಿಗೂ, ಮೆಚ್ಚುನುಡಿಯ ರೂಪಿನಲ್ಲಿ ಸಂಕಲನದ ಸುದೀರ್ಘ ವಿಮರ್ಶೆಯನ್ನು ನಡೆಸಿ ನಮ್ಮ ಬಗ್ಗೆ ಅನೇಕ ಒಳ್ಳೆಯ ಮಾತುಗಳನ್ನಾಡಿ ಹರಸಿದ ಮಾನ್ಯ ಶ್ರೀ ಜಿ. ವರದರಾಜ ರಾವ್, ಎಂ.ಎ. ಅವರಿಗೂ ನಮ್ಮ ಅನಂತ ವಂದನೆಗಳನ್ನು ಅರ್ಪಿಸಿದ್ದೇವೆ.

ಎಂದಿನಂತೆ ಈ ಕೃತಿ ಸರ್ವಾಂಗ ಸುಂದರವಾಗಿ ಹೊರಬರಲು ತಮ್ಮ ಕಲಾಕೃತಿಗಳನ್ನು ರಚಿಸಿಕೊಟ್ಟ ಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿ

ಯವರನ್ನು, ಕಥನಕವನಗಳ ಪರಿಷ್ಕಾರ, ಕಥಾವಿಹಾರ, ಅರ್ಥಸೂಚಿ ಇವುಗಳ ಸಿದ್ಧತೆಯಲ್ಲಿ—ಕರಡುತಿದ್ದುವುದರಲ್ಲಿ ನೆರವಾದ ಮಿತ್ರರಾದ ಶ್ರೀ ಜೀ. ಶಂ. ಪರಮಶಿವಯ್ಯನವರಿಗೂ ನಾವು ಚಿರಋಣಿ. ಮುದ್ರಣಕಾರ್ಯದಲ್ಲಿ ಸಹಕರಿಸಿದ ಪ್ರಿಯಮಿತ್ರರಾದ ಶ್ರೀ ವೆಂಕಟೇಶ ಪ್ರೆಸ್ಸಿನ ಒಡೆಯರಾದ ಶ್ರೀ ಪಿ. ನಾಗಣ್ಣನವರು ತುಂಬು ಹೃದಯದಿಂದ ಹಗಲಿರುಳೆನ್ನದೆ ಈ ಕೃತಿಗಾಗಿ ಶ್ರಮಿಸಿದ್ದಾರೆ—ಅವರಿಗೂ ಅವರ ಅಚ್ಚುಕೂಟದ ಕೆಲಸಗಾರ ಮಿತ್ರರಿಗೂ, ರಕ್ಷಾಪತ್ರ ಮುಂತಾದ ಮುದ್ರಣಕಾರ್ಯದಲ್ಲಿ ಸಹಕರಿಸಿದ ಶ್ರೀ ಶಾರದ ಪ್ರೆಸ್ಸಿನ ಶ್ರೀ ಆರ್. ಕೃಷ್ಣಯ್ಯಶೆಟ್ಟಿ ಮತ್ತು ಶ್ರೀ ಆರ್. ಸತ್ಯನಾರಾಯಣ ಶೆಟ್ಟಿ ಅವರುಗಳಿಗೂ ಮತ್ತು ಚೇತನ ಪ್ರೆಸ್ಸಿನ ಶ್ರೀ ನ. ಕೃಷ್ಣ ಅವರಿಗೂ ನಾವು ಕೃತಜ್ಞರು.

ಜನಪದ ಸಾಹಿತ್ಯ ರಂಗದಲ್ಲಿ ದುಡಿದ ಅನೇಕ ಮಹನೀಯರ ವಾಕ್ಯ ಮಾಲೆಗಳನ್ನು ಅಲ್ಲಲ್ಲಿ ಬಳಸಿಕೊಂಡಿದ್ದೇವೆ. ಆ ಎಲ್ಲಾ ಮಹನೀಯರಿಗೂ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು ಸಲ್ಲುತ್ತವೆ.

ಈ ಸಂಕಲನದ ಜೊತೆಯಲ್ಲೆ ಪ್ರಕಟವಾಗಬೇಕಾಗಿದ್ದ "ಶ್ರೀ ಆದಿ ಚುಂಚನಗಿರಿ" ಮತ್ತು "ಮೇಲುಕೋಟೆ ಚೆಲುವರಾಯ" ಎಂಬ ಎರಡು ಜನಪದ ಭಕ್ತಿಗೀತೆಗಳು ಕಾಗದದ ಅಭಾವದಿಂದಾಗಿ ಅರ್ಧದಲ್ಲೆ ಫಿಂತಿವೆ. ಇವನ್ನು ಆದಷ್ಟುಬೇಗ ಮುಗಿಸಿ ಮುಂದೆ ಬೃಹತ್ ಪ್ರಮಾಣದಲ್ಲಿ ತರಬೇಕೆಂದಿರುವ 'ಆಯ್ದ ನಾಡ ಹಾಡುಗಳು' ಎಂಬ ಕೃತಿಗೆ ಎಲ್ಲಾ ಅಭಿಮಾನಿಗಳ ಪ್ರೋತ್ಸಾಹವನ್ನು ಈ ಮೂಲಕ ಕೋರಿ, ಪ್ರಕೃತ ಜಾನಪದ ಕಥನಗೀತ ಸಂಕಲವನ್ನು ನಿಮ್ಮ ಮಡಿಲಲ್ಲಿರಿಸಿರುತ್ತೇವೆ. ಎಂದಿನಂತೆ ನಮ್ಮ ಎಲ್ಲಾ ಜನಪದ ಸಾಹಿತ್ಯದ ಪ್ರಕಟಣೆಗಳನ್ನು ಅಭಿಮಾನದಿಂದ ಪ್ರೋತ್ಸಾಹಿಸಿದಂತೆ ಇದಕ್ಕೂ ಸಾದರದ ಸ್ವಾಗತವಿದೆಯೆಂದು ನಂಬಿ ಹಿಂದೆ ಉಳಿಯುತ್ತೇವೆ.

ಸಂಪಾದಕ.



ಪ ರಿ ವಿ ಡಿ

ಮುನ್ನುಡಿ ೫
ಮೆಚ್ಚುನುಡಿ ೭
ನಮ್ಮ ನುಡಿ ೨೧

ಗರಿ ೧ ಅಂಬಿಗರ ಗಂಗ ಮತ್ತು ಇತರ ಹಾಡುಗಳು—

ಹೆಸರಿಗೆ ದೊಡ್ಡೋನು ಶಿವತಂದ ೧
ಚಿಕ್ಕಜಾಜಿ ಮರಕೆ ತಲೆಕೊಟ್ಟ ೭
ಸಂಗಾತಿ ೧೫
ಒಡ್ಡರ ಬೋಯಿ ೨೪
ಮದುವಣ್ಣ ೩೯
ಮರೆಯಾದ ಮಲಕವ್ವ ೫೭
ಇರೋಬಿ ೬೩
ಗಿರಿಜಾ ಮಲ್ಲಯ್ಯ ೭೧
ಹಬ್ಬೋಗೊ ಕುಡಿಯ ಹರಿಕೊಂಡ ೮೩
ಅಂಬಿಗರ ಗಂಗ ೯೯

ಗರಿ ೨ ಉತ್ತರದೇವಿ ಮತ್ತು ಇತರ ಹಾಡುಗಳು—

ಬಂಜೆ ಹೊನ್ನಮ್ಮ ೧೦೭
ತಬ್ಬಲಿರಾಯ ೧೧೯
ಕಲಿಯುಗದ ಬಾಲೆ ೧೩೩
ನುಚ್ಚಾಯ್ತು ನೀರ ಹೊಳೆಯಾಗೆ ೧೪೬
ಹೆಣಗೆಂಟು ನಲುಗಿ ಉರಿದ್ಹೋದೋ ೧೫೫
ನಾನಿದ್ದು ಬಂದೇನು ನಡೀರಣ್ಣ ೧೯೩
ನಾಗರಗನ್ನೆ ೧೭೫
ಉತ್ತರದೇವಿ ೨೧೫

ಗರಿ ೩ ಪಿರಿಯಾಪಟ್ಟಣದ ಕಾಳಗ ಮತ್ತು ಇತರ ಹಾಡುಗಳು—


೧	ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ	....	೨೨೯
	ಮಳೆರಾಯ ಮಾಹ್ಲೆಣ್ಣು	....	೨೩೭
	ಶ್ರೀಕೃಷ್ಣಪಾರಿಜಾತ	....	೨೪೧
	ಚೆನ್ನಿಗರಾಯ	....	೨೫೭
	ದೇವಗನ್ನೇರು ತಾನಾಕೆ ನಡೆದಾರು	....	೨೬೭
	ಗಂಗೆ ಗೌರಿ ಜಗಳ	....	೨೭೩
	ಕೃಷ್ಣಕೊರವಂಜಿ	....	೨೮೭
	ಹೊಂಗೇಲಿ ಈರಣ್ಣ ಮಡಿದಾನೆ	....	೨೯೫
	ಫಲಬಿಡುವ ಮರಗಳ ಕಡಿಸ್ಯನೆ	....	೩೦೭
	ಭಾಷೆಯೇಕೊ ನಿನ್ನ ಬಲಗೈಯಿ	....	೩೧೯
	ಹೂವು ಮಾರುವ ದೊರೆ ಚೆಲುವ	....	೩೩೭
	ಪಿರಿಯಾಪಟ್ಟಣದ ಕಾಳಗ	....	೩೪೫

ಗರಿ ೪ ಚೆನ್ನಿಗ ಜೋಗಯ್ಯ ಮತ್ತು ಇತರ ಹಾಡುಗಳು—

	ಕೋಳೂರು ಕೊಡಗೂಸು	....	೩೬೧
	ಮುನಿಯಾಗಿ ಬಂದ	....	೩೭೩
	ನಾ ನಂಜುಂಡಲಿಂಗ ಬಿಡೆಸೆರಗ	....	೩೭೯
	ಬಿಟ್ಟಿಕಾಣೆ ಇವಳ ಜಲುಮಾಕೆ	....	೩೯೫
	ಚೆನ್ನಿಗ ಜೋಗಯ್ಯ	....	೪೦೯
	ಕಥಾವಿಹಾರ	....	೪೨೫
	ಅರ್ಥಸೂಚಿ	....	೪೫೯
	ಸಾಹಸದ ಕಥೆ	....	೪೬೯
	ಅನುಬಂಧ	....	೪೮೩
	ಪುಸ್ತಕ ವಿಮರ್ಶೆ	....	೪೮೯

ಜಾನಪದ ಕಥನ ಗೀತೆಗಳು





—ಒಂದು

ಅಂಬಿಗ್ಗರ ಗಂಗ ಮತ್ತು ಇತರ ಹಾಡುಗಳು




P.R.T.

ಹೆಸರಿಗೆ ದೊಡ್ಡೋನು ಶಿವತಂದ

ತುಪ್ಪದರಬಿಗೆ ಸೋತ ತೆಕ್ಕೆ ತುರುಬಿಗೆ ಸೋತ
ತುಪ್ಪ ಮಾರುವ ಕುರುಬುತಿ । ಕೊರಳಲ್ಲಿ
ಮುತ್ತು ಕಂಡ ಗಂಗಾಧರ ಮನಸೋತ ॥

.....ಜನಪದ ಸಾಹಿತ್ಯವನ್ನು ಒಟ್ಟುಗೂಡಿಸುವುದು ನಮ್ಮೆಲ್ಲರ ಕರ್ತವ್ಯ. ಹಳ್ಳಿಯ ಹಾಡುಗಳು, ಕೋಲಾಟದ ಪದಗಳು, ಲಾವಣಿಗಳು, ಮೊದಲಾದುವುಗಳಲ್ಲಿ ಸಾಮಾನ್ಯ ಜನರ ಮನೋಭಾವಗಳು ಬಿಚ್ಚಿತೋರುತ್ತವೆ. ಕೆಲವು ಸಾರಿ ಉತ್ತಮ ಸಾಹಿತ್ಯವೂ ದೊರಕುತ್ತದೆ.....

—ಪದ್ಮಭೂಷಣ ಡಾ|| ಕೆ.ವಿ. ಪುಟ್ಟಪ್ಪ, ಎಂ.ಎ.,ಡಿಲಿಟ್.

ಹೆಸರಿಗೆ ದೊಡ್ಡೋನು ಶಿವತಂದ*

ಆ ಬೆಟ್ಟ ಈ ಬೆಟ್ಟ ನಡುವೆ ತಾವರೆ ಕೊಳ
ತಾವರೆ ಹೂವ ಕುಯಬಂದ । ಭೈರುವ
ತಾವೊಳ್ಕೆದೆಂದು ನೆಲೆಗೊಂಡ ॥

ಅದಿಚುಂಚನಗಿರಿ ಹೋಗಿ ನೋಡುವ ಬನ್ನಿ
ದಿಕ್ಕು ದಿಕ್ಕೆಗು ಹುಲಿಮುಖ । ಬೆಟ್ಟಕ್ಕೆ
ಅಪ್ಪ ಭೈರುವನ ದೊರೆತನ ॥

ನವಿಲು ಕುಣಿದಾವೊ ಹಿಂಡಕ್ಕಿ ಹಾಡ್ಯಾವೊ
ಹುಲ್ಲೆಯ ಮರಿ ನಲಿದಾವೊ । ಚುಂಚನಗಿರಿಯ
ಸುತ್ತೆಲ್ಲ ಸ್ವಾಮಿ ನಲಿದಾನೊ ॥

ದೊಡ್ಡ ಕಲ್ಲೂಡಿ ದೊಡ್ಡೋನ ನೆನೆದೇವು
ದೊಡ್ಡ ಬೆಟ್ಟದ ಒಡೆಯನ । ಭೈರುವನ
ದೊಡ್ಡ ಕಲ್ಲೂಡಿ ನೆನೆದೇವು ॥

ಅರೆಯ ಹೊತ್ತಿನಲೆದ್ದು ಹರ ನಿನ್ನ ನೆನೆದೇವು
ಹರಿವ ಗಂಗೇಲಿ ಜಳಕಾವ । ಮಾಡ್ವಂತ
ಹರ ಗಿರಿಜೆಯರ ನೆನೆದೇವು ॥

ತಂಗಾಳಿ ಬೀಸುವಾಗ ಸಿಂಗರದ ವನದಲ್ಲಿ
ಗಂಗಾಧರ ನಿದ್ದೆಗೈದವ । ಕನಸಿನಲಿ
ಗಂಗೆ ಮಾಳಮ್ಮನ ಕಂಡಾರು ॥

ಕನಸ ಕಂಡೆದ್ದು ಶಿವ ಮನಸಿನಲಿ ಯೋಚಿಸಿ
ಹುಚ್ಚೇನೊ ನನಗೆ ಮರುಳೇನೊ । ಎನ್ನುತ್ತ
ಪುಠದಲ್ಲಿ ಮುಸುಕಿಟ್ಟು ಹೊರಟಾರು ॥

---

*ಈ ಜಾನಪದ ಕಥನಗೀತವನ್ನು ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಶ್ರೀಆದಿಚುಂಚನಗಿರಿಯ ದೇವರಾದ ಗಂಗಾಧರಸ್ವಾಮಿಯ ಕುರಿತು ಹೆಂಗಸರು ಶಿವರಾತ್ರಿ ನವರಾತ್ರಿ ಮುಂತಾದ ಹಬ್ಬಹರಿದಿನಗಳಲ್ಲೂ, ಜಾತ್ರೆಗಳಲ್ಲೂ ಹಾಡುವರು.

ಉಯ್ಯಾಲೆ ನಾಡನಳು ಉಯ್ಯಾಲೆ ಪಾಡವಳು
ಒಯ್ಯಾರಿ ಸಣ್ಣ ದನಿಯೋಳು । ಮಾಳಮ್ಮ
ಉಯ್ಯಾಲೆನಿಳಿದು ಬರುತಾಳೆ ॥

ಸೊಂಟಕೆ ನಾಯ ಕಟ್ಟಿ ಇಲ್ಲಿಗೇತಕೆ ಬಂದೆ
ಜಡೆಯ ಗಂಟಿನೊಳಗೆ ಗಜಗಂಗೆ । ಮಾಳಮ್ಮ
ಇಲ್ಲಿಂದ ಹಿಂದಕ್ಕೆ ತಿರುಗಯ್ಯ ॥

ಮುದಿಯ ಎತ್ತನು ಏರಿ ಮೈಗೆ ಬೂದಿಯ ಬಳಿದು
ಯೋಗಿಯಾಗೇಕೆ ಕರೆತಂದೆ। ಮಾಳಮ್ಮನ
ನೀ ಬಂದಿರುವ ಬಗೆಯ ನಾ ಬಲ್ಲೆ ॥

ಹಸಿಯನು ಲಿಂಗಯ್ಯ ಬಸವನೇರಿಕೊಂಡು
ಎಸಳು ಹೊಂಬಾಳೆ ಹಿಡಕೊಂಡು । ಬೆಟ್ಟದ
ಹಸಳೇಲಾಡ್ಯನನೆ ಪಗಡೇಯ ॥

ವಜ್ರದ ಗಿರಿಮೇಲೆ ನಿದ್ರೆಮಾಡುವ ಹೆಣ್ಣೆ
ಮುದ್ದು ಗಂಗಾಧರ ಸೆರೆತಂದ । ಬೆಲೆವೆಣ್ಣೆ
ನೀನಿದ್ದ ಪಟ್ಟಣದ ಹೆಸರ್ಹೇಳಿ ॥

ಕಾವಿಯ ಜೋತುರ ಕಾವಿಯ ನೇತುರ
ಕಾವೇರ್ಹೊಳೆಯಿಂದ ಬರುವೋನೆ । (ಬರುವೊ) ಗಂಗಾಧರ
ನಿನ್ ಕಾವಿ ಹೊಳೆದಾವು ಬಿಸಲೀಗೆ ॥

ಹೆಸರ ಹೇಳಿದಾರೆ ನನ್ನ ಜೆಸೆಯೋರು ನಡಿಗ್ಯಾರು
ಅಲವಂಗದ ಕೋಟಿ ಹಗಲೇಯ । ಕನ್ನವ ಕೊರೆದು
ಹೆಸರಿಗೆ ದೊಡ್ಡೋನು ಶಿವತಂದ ॥

ತುಪ್ಪುದರಬಿಗೆ ಸೋತ ತೆಕ್ಕೆ ತುರುಬಿಗೆ ಸೋತ
ತುಪ್ಪ ಮಾರುವ ಕುರುಬುತಿ । ಕೊರಳಲ್ಲಿ
ಮುತ್ತು ಕಂಡ ಗಂಗಾಧರ ಮನಸೋತ ॥

ಹಾಲು ಆರವಿಗು ಸೋತ ಜೋಲು ತುರುಬಿಗು ಸೋತ
ಹಾಲು ಮೂರುನ ಕುರುಮತಿ । ಕೊರಳಲ್ಲಿ
ಮಣಿಯ ದಂಡೆಗೆ ಮನಸೋತ ॥

ಕೆಂಪೆಯ ತರಲ್ಹೋಗಿ ಸಂಪಿಗೆ ತಿರುಗಿದ
ಕೆಂಪೆ ಮಾಳವ್ನ ತರಲ್ಹೋಗಿ । ಗಂಗಾಧರ
ಸಂಪಿಗೆ ಮರವ ಒರಗನನೆ ॥

ಆಕೆಯ ತರಲ್ಹೋಗಿ ಲೋಕವ ತಿರುಗಿದ
ಆಕೆ ಮಾಳವ್ನ ತರಲ್ಹೋಗಿ । ಗಂಗಾಧರ
ಸಿರಿಧೂಪದ ಮರವ ಒರಗಿದ ॥

ರಂಬೆಯ ತರಲ್ಹೋಗಿ ಭೂಮಂಡಲ ತಿರುಗಿದ
ರಂಬೆ ಮಾಳವ್ನ ತರಲ್ಹೋಗಿ । ಗಂಗಾಧರ
ಶ್ರೀಗಂಧದ ಮರವ ಒರಗಿದ ॥

ಹೆಂಚಿಯ ಹುಲ್ಲಲ್ಲಿ ಹೊಂಚಾಡೊನಿವನಾರೆ
ಕಂಚಿನ ಗುರಾಣಿ ಕೈಯಲ್ಲಿ । ಹಿಡಿದಿಲ್ಲ
ಹೊಂಚಾಡಿ ಹುಲಿಯ ಹೊಡೆದಿಲ್ಲ ॥

ಹುಲಿಯ ಹೊಡೆದಿಲ್ಲ ಹುಲಿಚರ್ಮ ಸುಲಿದಿಲ್ಲ
ಕರಡಿಯ ಕಣ್ಣ ಕಳಚಿಲ್ಲ । ಗಂಗಾಧರ
ಅವಳೊಂದಿಗೆ ಹುಲ್ಲೆ ಮರಿಯಾದೆ ॥

ಎಲ್ಲಿಗೆ ಲಿಂಗಯ್ಯ ಮೆಲ್ಲಗೆ ನಿನ ಶಯನ.
ಕಲ್ಲೆಲಿ ಬಂಡಿ ಹೊಡಕೊಂಡು । ಲಿಂಗಯ್ಯ
ನೆಲ್ಲಿಯ ಮರದ ನೆರಳಿಗೆ ॥

ನೆಲ್ಲಿಯ ಮರವೆಲ್ಲೊ ನೀರಳಿ ತೋಪೆಲ್ಲೊ
ಜಾರುಗಲ್ಲೆಲ್ಲೊ ಜಪವೆಲ್ಲೊ । ಲಿಂಗಯ್ಯ
ನೀನು ಮಾಯುವ ಕೊಳವೆಲ್ಲೊ॥

ಸೀಗೆಯ ಮರದಡಿಯ ಸಿರಿಗಂಧದ ಕಲ್ಲೊಳ್ಳು
ಬಾಗಿ ರಾಜುಣಿಸ ತೊಳಿಸೋಳೆ । (ತೊಳಿಸೊ)ಮಾಳವ್ವ
ನೀ ಯಾವ ರಾಯರಿಗೆ ಆಡಿಗಮ್ಮ ॥

ಯಾವ ರಾಯಗೆಂದರೆ ನಾನೇನ ಹೇಳಾಲಿ
ಸಾವಿರ್ಹೊನ್ನಿನ ಬಸವನ । ಮೇಲಿಗುವ
ಸ್ವಾಮಿ ಲಿಂಗೈಗೆ ಆಡಿಗಮ್ಮ ॥

ಸಾರಿಸಿದೀ ಮನೇಲಿ ಸಾಂಬ್ರಾಣಿ ಗಮ್ಮೆಂದೊ
ಯಾರುಣುವರಮ್ಮ ಮನೆಯಲ್ಲಿ । ಬೆಟ್ಟದ
ಸ್ವಾಮುಣುವ ನಮ್ಮ ಮುನಿಯಲ್ಲಿ ॥

ಕುರುಬುತಿ ಕುಟ್ಟಾಡಿ ಕುರಿಯ ತಿಂಗಳು ಕಾದೆ
ಹಂಪೇಲಿ ಹಾಲ ಕರೆದುಂಡೆ । ಲಿಂಗಯ್ಯ
ಕೆಂಪೆ ಮಾಳವ್ಗೆ ಮನಸೋತೆ ॥

ಕುರಿಯ ಕಾಯಬೇಡ ಮರಿಗ್ಹುಲ್ಲ ತರಬೇಡ
ಕರಿಯ ಕಂಬಳಿಯ ನೇಯಬೇಡ । ಲಿಂಗಯ್ಯ
ನೀ ಕುರುಬರ ಮಾಳ ತರಬೇಡ ॥

ಕುರಿಯ ಕಾಯುತೀನಿ ಮರಿಗ್ಹುಲ್ಲ ತರುತೀನಿ
ಕರಿಯ ಕಂಬಳಿ ನೇಯತೀನಿ । ಪಾರ್ವತಿ
ಕುರುಬರ ಮಾಳ ಬಿಡೆಕಾಣೆ ॥

ಗುಡ್ಡದ ಕೆಳಗೆ ಗೊಬ್ಬರವ ಚೆಲ್ಲೋಳೆ
ಜಿಡ್ಡು ವೈಯ್ಯೋಳೆ ಕುರುಬುತಿ । ಕೊರಳಿಗೆ
ಹಾವ ಸುತ್ತೀನು ಹದಿನಾರ ॥

ಎಡಗಡೆ ಮಾಳವ್ವ ಬಲಗಡೆ ಪಾರ್ವತಿದೇವಿ
ಇಬ್ಬರ ನಡುವೆ ಘನಲಿಂಗು । ಕೂತುಕೊಂಡು
ಇಬ್ಬರಿಗ್ಹೂವ ಮುಡಿಸ್ಯಾನೆ ॥

ಚಿಕ್ಕಜಾಜಿ ಮುರಕೆ ತಲೆಕೊಟ್ಟ....

ಕಂಬಿಕಟ್ಟಿಮೇಲೆ ಕಾಗೆ ಬೋರಿಟ್ಟಾವೆ
ಹೋಗಿ ನೋಡೆ ಚಿನ್ನಮ್ಮ ತವರೂರ । ನಿಮ್ಮಪ್ಪಾನಮನೆ
ಕಾಗೆ ಬೋರಿಟ್ಟು ತಿನ್ನುತಾವೆ ॥

...ಈ ಹಾಡುಗಳಲ್ಲಿ ಪಾತಾಂತರಗಳಿಗೆ ಎಡೆಯಿಲ್ಲ. ಬಾಯಿಗೆ ಸಿಕ್ಕ ಬೆಣ್ಣೆಯ ಮುದ್ದೆಯನ್ನು ಬೇಕುಬೇಕಾದಂತೆ ಪಿದ್ದುವ ಹಾಗೆ ಹೆಂಗಳೆಯರು ಇವುಗಳನ್ನು ಹಾಡು ಹಾಡುವಾಗಲೆ ತಿದ್ದುವರು. ಆದಕಾರಣ ಇವುಗಳ ಕನ್ನಡ ತಿರುಳಿನಲ್ಲಿ ಕೆಲವು ಸಕ್ಕದದ ಹರಳುಗಳು ಕಂಡುಬರುವವು. ಆದರೆ ಆ ಸಂಸ್ಕೃತ ಪದಗಳನ್ನು ಆಯ್ದುಕೊಳ್ಳುವದರಲ್ಲಿಯೂ ಎಂಥ ನೈಸರ್ಗಿಕವಾದ ರಸಿಕತೆ, ಜಾಣ್ಮೆ, ನೈಪುಣ್ಯ! ನುಡಿಯಲ್ಲಿ ಹೀಗೆ ಬೆರಕೆ ಕಂಡುಬಂದರೂ, ವಾಕ್ಯ ರಚನೆಯಲ್ಲಿ ಕನ್ನಡವು ಅಚ್ಚಳಿಯದೆ ಇದೆ. ಕನ್ನಡವು ಎದೆಯ ಬಗೆಗಳನ್ನೆಲ್ಲ ಕನ್ನಡಿಸುವದೆಂಬುದನ್ನು ಈ ಈ ಹಾಡುಗಳಲ್ಲಿ ಕಂಡುಕೊಳ್ಳಬೇಕು. ಪ್ರಸಾದವು ಈ ಹಾಡುಗಳ ಹುಟ್ಟು ಗುಣವಾಗಿದೆ. ಆದರೂ ಒಂದು ಬಗೆಯ ಗಾಂಭೀರ್ಯವು ತಾನೆ ತಾನಾಗಿ ಆದರ ಜೊತೆಯಲ್ಲಿಯೆ ಸೇರಿಕೊಂಡು ಬರುವುದನ್ನು ಪ್ರತಿ ಪದ್ಯಗಳಲ್ಲಿಯೂ ಕಾಣಬಹುದು...

ಈ ಜನಪದ ವೇದವೇ ಎಲ್ಲ ಕನ್ನಡಿಗರಿಗೂ ಸಾಮಾನ್ಯವಾದ ತಾಯಿ ಎದೆಹಾಲು ಎಂಬುದು ಇದನ್ನೋದಿದವರ ಅನುಭವಕ್ಕೆ ಬಾರದೆ ಇರದು. ಈ ಅನುಭವದಿಂದುಂಟಾಗುವ ಐಕ್ಯ ಭಾವವು ಅಂತಿಂತಹದಲ್ಲ. ಪ್ರಜಾಪ್ರಭುತ್ವದ ಈ ಕಾಲದಲ್ಲಿ ಜನಸಾಮಾನ್ಯದ ಹೃದಯದೊಳಗಿನ ಸುಖದ ಕನಸೆಂತಹದೆಂಬುದನ್ನು ಕಂಡುಕೊಳ್ಳಲು ಇದರಂತಹ ಬೇರೆ ಕೈಗನ್ನಡಿಯಿಲ್ಲ. ಆದರಲ್ಲಿಯೂ ಸ್ತ್ರೀ ದಾಕ್ಷಿಣ್ಯವುಳ್ಳ ಈ ಕಾಲದ ಜನರೆಲ್ಲರೂ ಸ್ತ್ರೀಯರ ಈ ಪರಂಪರಾಗತ ಸಾಹಿತ್ಯವನ್ನು ಓದಲೇ ಬೇಕು. ಸ್ತ್ರೀ ಹೃದಯವು ಇಲ್ಲಿ ಲಾಸ್ಯವಾಡುತ್ತಿದೆ. ಸಾಹಿತ್ಯ ಸಂಸ್ಕಾರದ ದೃಷ್ಟಿಯಿಂದಲೂ ಇದರ ಮಹತ್ವವಿದೆ...

—ಶ್ರೀ ದ. ರಾ ಬೇಂದ್ರೆ, ಎಂ.ಎ.

ಚಿಕ್ಕಜಾಜಿ ಮರಕೆ ತಲೆಕೊಟ್ಟೆ*

ಗುತ್ತಿ ಸೀಮೆಗೆ ಎತ್ತೆದ್ದು ಹೋಗ್ಯಾನೆ
ಗುತ್ತಿಯನಾಡ ತೆಲುಗಾರ । ಹೆಣ್ಣು ಮಕ್ಕಳು
ಅವರು ಎತ್ತಿಗೆ ಆರತಿಯ ಬೆಳಿಗ್ಯಾರು ॥

ಎತ್ತಿಗೆ ಬೆಳಗಿದರೆ ಎತ್ತೀನ ಕೊಟ್ಟಾವು
ಎತ್ತಿನ ಮುಂದಲ ಗೌಡಗೆ । ಬೆಳಗಿದರೆ
ವಾಲಿಗೆ ಪಜ್ಜುರವ ಬಿಗಿಸ್ಯಾರು ॥

ಗೋವೆ ಸೀಮೆಗೆ ಅವನೆದ್ದು ಹೋಗ್ಯಾನೆ
ಗೋವೆಯ ನಾಡ ತುಳುವಾರ । ಹೆಣ್ಣುಮಕ್ಕಳು
ಅವರು ಹಾವಿಗೆ ಆರತಿಯ ಬೆಳಿಗ್ಯಾರು ॥

ಹಾವಿಗೆ ಬೆಳಿಗಿದರೆ ಹಾವೇನ ಕೊಟ್ಟಾವು ॥
ಹಾವಿನ ಮುಂದಲ ಗೌಡಗೆ । ಬೆಳಗಿದರೆ
ಕೊಪ್ಪಿಗೊಜ್ಜುರವ ಬಿಗಿಸ್ಯಾನೆ ॥

ಎತ್ತಿನ ಗೂಡಾಗೆ ಮುತ್ತಿನ ದೇವರ ಮಾಡಿ
ಚಿಕ್ಕೇನಹಳ್ಳಿಯೇನ ಕರೆಸ್ಯಾನೆ । (ಕ್ರರೆಸಿ) ದೇವರಮಾಡಿ
ತುಪ್ಪದಾಗೆ ಮದ್ವು ಬೆರೆದಾರೆ ॥

ತುಪ್ಪದಾಗೆ ಮದ್ವು ಬೆರೆದು ಕಂಬಿಯೋರು
ಬೆರದೇಟ ದಿವಸಾಕೆ ಬರುತ್ತೀನಿ । ಕಂಬಿಯೋರ
ಹುಟ್ಟಿ ಮಕ್ಕಳ ಉರಿಕೊಂಡು ॥

---

*ಈ ತರಹದ ಪದಗಳನ್ನು ಗೊಲ್ಲರು ಬೇಸಕವನ್ನು ಕಳೆಯಲು ಹಾಡುವರು.

ಹಾಲು ಆರವಿಗು ಸೋತ ಜೋಲು ತುರುಬಿಗು ಸೋತ
ಹಾಲು ಮಾರುವ ಕುರುಮತಿ । ಕೊರಳಲ್ಲಿ
ಮಣಿಯ ದಂಡೆಗೆ ಮನಸೋತ ॥

ಕೆಂಪೆಯ ತರಲ್ಹೋಗಿ ಸಂಪಿಗೆ ತಿರುಗಿದ
ಕೆಂಪೆ ಮಾಳವ್ನ ತರಲ್ಹೋಗಿ । ಗಂಗಾಧರ
ಸಂಪಿಗೆ ಮರವ ಒರಗವನೆ ॥

ಆಕೆಯ ತರಲ್ಹೋಗಿ ಲೋಕವ ತಿರುಗಿದ
ಆಕೆ ಮಾಳವ್ನ ತರಲ್ಹೋಗಿ । ಗಂಗಾಧರ
ಸಿರಿಧೂಪದ ಮರವ ಒರಗಿದ ॥

ರಂಬೆಯ ತರಲ್ಹೋಗಿ ಭೂಮಂಡಲ ತಿರುಗಿದ
ರಂಬೆ ಮಾಳವ್ನ ತರಲ್ಹೋಗಿ । ಗಂಗಾಧರ
ಶ್ರೀಗಂಧದ ಮರವ ಒರಗಿದ ॥

ಹೆಂಚಿಯ ಹುಲ್ಲಲ್ಲಿ ಹೊಂಚಾಡೊನಿವನಾರೆ
ಕಂಚಿನ ಗುರಾಣಿ ಕೈಯಲ್ಲಿ । ಹಿಡಿದಿಲ್ಲ
ಹೊಂಚಾಡಿ ಹುಲಿಯ ಹೊಡೆದಿಲ್ಲ ॥

ಹುಲಿಯ ಹೊಡೆದಿಲ್ಲ ಹುಲಿಚರ್ಮ ಸುಲಿದಿಲ್ಲ
ಕರಡಿಯ ಕಣ್ಣ ಕಳಚಿಲ್ಲ । ಗಂಗಾಧರ
ಅವಳೊಂದಿಗೆ ಹುಲ್ಲೆ ಮರಿಯಾದೆ ॥

ಎಲ್ಲಿಗೆ ಲಿಂಗಯ್ಯ ಮೆಲ್ಲಗೆ ನಿನ ಪಯಣ
ಕಲ್ಲೆಲಿ ಬಂಡಿ ಹೊಡಕೊಂಡು । ಲಿಂಗಯ್ಯ
ನೆಲ್ಲಿಯ ಮರದ ನೆರಳಿಗೆ ॥

ನೆಲ್ಲಿಯ ಮರವೆಲ್ಲೊ ನೇರಳೆ ತೋಪೆಲ್ಲೊ
ಜಾರುಗಲ್ಲೆಲ್ಲೊ ಜಪವೆಲ್ಲೊ । ಲಿಂಗಯ್ಯ
ನೀನು ಮಾಳ್ಪುವ ಕೊಳವೆಲ್ಲೊ॥

ಚಿಕ್ಕಜಾಜಿ ಮರಕೆ ತಲೆಕೊಟ್ಟ....

ಕಂಬಿಕಟ್ಟೆಮೇಲೆ ಕಾಗೆ ಬೋರಿಟ್ಟಾವೆ
ಹೋಗಿ ನೋಡೆ ಚಿನ್ನಮ್ಮ ತವರೂರ । ನಿಮ್ಮಪ್ಪಾ ನಮನೆ
ಕಾಗೆ ಬೋರಿಟ್ಟು ತಿನ್ನುತಾವೆ ॥

ಹಾವಿನ ಗೂಡಾಗೆ ಹೂವಿನ ದೇವರ ಮಾಡಿ
ದೊಡ್ಡ ಅಳಿಯಾನ ಕರೆಸ್ಯಾರೆ । (ಕರೆಸಿ) ದೇವರ ಮಾಡಿ
ಹಾಲಿನಾಗೆ ಮದ್ದು ಬೆರೆದಾರು ॥

ಹಾಲಿನಾಗೆ ಮದ್ದು ಬೆರೆದು ಕಂಬಿಯೋರು
ಬೆರೆದೇಳು ದಿವಸಾಕೆ ಬರುತ್ತ್ಹೀನಿ । ಕಂಬಿಯೋರ
ಬೆಳೆಯೊ ಮಕ್ಕಳ ಉರಿಕೊಂಡು ॥

ಎತ್ತಿನ ಗೂಡಾಗೆ ಮುತ್ತಿನ ಸೇದೊ ಬಾವಿ
ರುವ್ವಾರನ್ಯಾರೆ ಬರೆದೋರು । ಹಾಗಲವಾಡಿಯ
ಹಾವು ಕಾಯೊ ಜಾಣ ಬರೆದಾನು ॥

ಹಾಲಿನ ಗೂಡಾಗೆ ಮುತ್ತಿನ ಸೇದೊ ಬಾವಿ
ಚಿತ್ತಾರನ್ಯಾರೆ ಬರೆದೋರು । ಹಾಗಲವಾಡಿಯ
ಎತ್ತು ಕಾಯೊ ಜಾಣ ಬರೆದಾನು ।

ಎತ್ತು ಕಾಯೂತ ಮುತ್ತಿನ ಚೆಂಡಾಡೂತ
ದಟ್ಟೀಳ ದವನ ಹೊದರೂತ । ಹೆತ್ತ ಯ್ಯನ
ಅವನು ಎತ್ತು ಕಾಯೋದೊಂದಯಿಭೋಗ ॥

ಎತ್ತೆಲ್ಲಿ ಕಾಯ್ದೊ ಮುತ್ತನೆಲ್ಲಿ ಮುಡಿದೊ
ಎತ್ತಿಗೆ ನೀರೆಲ್ಲಿ ಕುಡಿಸೀದೊ । ಅಕ್ಕನ ಕೆರೆಯ
ಮುತ್ತಿನ ಸಾಗರದ ಹೊಳೆಯಾಗೆ ॥

ಹಾವ ಕಾಯೂತ ಹೂವಿನ ಚೆಂಡಾಡೂತ
ಹಾವಿಗೆ ನೀರೆಲ್ಲಿ ಕುಡಿಸೀದೊ । ಅಕ್ಕನಕೆರೆಯ
ಹೂವಿನ ಸಾಗರದ ಹೊಳೆಯಾಗೆ ॥

ಎತ್ತು ಬಂದೊ ಎತ್ತು ಚಿನ್ನಮ್ಮಯಾಕೆ ಬರಲಿಲ್ಲಾ
ಗಟ್ಟಿ ಹರಿವಾಣ ಹಿಡಕೊಂಡು । ಜುಂಜಪ್ಪನ
ಅವನೆತ್ತಿಗೆ ಸಾಸುವೆ ಇಡುತಾಳೆ ॥

ಹಾವು ಬಂದೊ ಹಾವು ಚಿನ್ನಮ್ಮ ಯಾಕೆ ಬರಲಿಲ್ಲಾ
ವಜ್ಜುರದ ಹರಿವಾಣ ಹಿಡಕೊಂಡು । ಜುಂಜಪ್ಪನ
ಹಾವಿಗೆ ಆರತಿಯ ಬೆಳಿಗ್ಯಾಳು ॥

ಚಿಕ್ಕ ಸೀರೇವ್ವೋರು ಎತ್ತಿಗೆ ಬಂದವರೆ
ಎತ್ತು ಕಾಯೊ ಜಾಣ ಒಳಗಿಲ್ಲಾ । ಜುಂಜಪ್ಪ
ಚಿಕ್ಕಜಾಜಿ ಮರಕೆ ತಲೆಕೊಟ್ಟ ॥

ದೊಡ್ಡ ಸೀರೇವ್ವೋರು ಹಾವಿಗೆ ಬಂದವರೆ
ಹಾವು ಕಾಯೊ ಜಾಣ ಒಳಗಿಲ್ಲಾ । ಜುಂಜಪ್ಪ
ದೊಡ್ಡಜಾಜಿ ಮರಕೆ ತಲೆಕೊಟ್ಟ ॥

ಹಾವಿನ ಹಾಸಿಗೆ ಚೇಳಿನಗದ್ದಿಗೆ
ನಾಗಾರ ಹಾವಿನ ತಲೆದಿಂಬು । ಜುಂಜಪ್ಪನ
ಮಹಾರಾಯ್ನ ನಿದ್ರೆ ಸುಖನಿದ್ರೆ ॥

ಕಂಬಿಕಟ್ಟಿಯ ಮೇಲೆ ಕಾಗೆ ಬೋರಿಟ್ಟಾವೆ
ಹೋಗಿ ನೋಡೆ ಚಿನ್ನಮ್ಮ ತವರೂರ । ನಿಮ್ಮಪ್ಪನ ಮನೆ
ಕಾಗೆ ಬೋರಿಟ್ಟು ತಿನ್ನು ತಾವೆ ॥

ಕಲುಕಟ್ಟೆ ಮೇಲೆ ಹದ್ದು ಬೋರಿಟ್ಟಾವೆ
ಎದ್ದು ನೋಡೆ ಚಿನ್ನಮ್ಮ ತವರೂರ । ಅಣ್ಣ ದಿರಮನೆಯ
ಎಳೆದಾಡಿ ತಿಂದೊ ರಣಹದ್ದು ॥

ಕರಿಯ ಕಲ್ಲಾಗೆ ಹುಟ್ಟುವಳೆ ಕರಿಯವ್ವ
ಹುಟ್ಟಿದ್ದ ಕಲ್ಲು ಎಡವೂತ । ಜುಂಜಪ್ಪನ
ಎತ್ತೆಲ್ಲಿ ಮೆರೆದು ಮನಿಗ್ಯಾವೆ ॥

ಎತ್ತೆಲ್ಲಿ ಮೆರೆದು ಮನಿಗ್ಯಾವೆ–ಕರಿಯವ್ವ
ನಮ್ಮ ಎತ್ತಿನ ಪ್ರಾಣ ಉಳಿಸಮ್ಮ ॥

ಸೊಪ್ಪಿನ ಗೂಡಾಗೆ ಹುಟ್ಟುವಳೆ ಕರಿಯಮ್ಮ
ಹುಟ್ಟಿದ್ದ ಕಲ್ಲ ಎಡವೂತ । ಕರಿಯವ್ವ
ಹಾನೆಲ್ಲಿ ಮೆರದು ಮನಿಗ್ಯಾವೆ ॥

ಹಾವೆಲ್ಲಿ ಮೆರೆದು ಮನಿಗ್ಯಾವೆ–ಕರಿಯವ್ವ
ನಮ್ಮ ಹಾವಿನ ಪ್ರಾಣ ಉಳಿಸಮ್ಮ ॥

ನಮ್ಮ ಹಾವಿನ ಪ್ರಾಣ ಉಳಿಸೋದುಂಟಾದರೆ
ಆರು ಅಂಕಣದ ಗುಡಿಶಿಖರ । ಬೇವಿನ ಹಳ್ಳಿ
ಸುತ್ತ ಕುರಿದವಣೆ ಹೊಡೆಸ್ಹೇವು ॥

ಸುತ್ತ ಕುರಿದವಣೆ ಹೊಡಿಸಿ–ಬೇವಿನಹಳ್ಳಿ
ದಿಬ್ಬದ ಮೇಲೆ ಪರುಷೆ ಮರೆಸ್ಹೇವು ॥

ನಮ್ಮ ಎತ್ತಿನ ಪ್ರಾಣ ಉಳಿಸೋದುಂಟಾದರೆ
ಹತ್ತು ಅಂಕಣದ ಗುಡಿ ಶಿಖರ । ಬೇವಿನಹಳ್ಳಿ
ಗುಡ್ಡದ ಮೇಲೆ ಪರುಷೆ ನಡೆಸ್ಹೇವು ॥

ಸೂರ್ಯ ಹುಟ್ಟುವಾಗ ಹೊಕ್ಕವ ಸೊಪ್ಪಿನ ಗುಡಿಸೇ
ರಾಯ ಓಬೇನಹಳ್ಳಿ ಹುದಿಯಾಗೆ । ಕರಿಯವ್ವ
ಹಿಂಡಿನ ಟಗರ ಹಿಡಿಸ್ಯಾಳು ॥

ಹಿಂಡಿನ ಟಗರ ಹಿಡಿಸಿ–ದೇವರ ಮಾಡಿ
ತಲೆ ಮಕ್ಕಳೆಲ್ಲಾ ಹಗಲಾರೆ ॥

ಸೂರ್ಯ ಹುಟ್ಟುವಾಗ ಹೊಕ್ಕವಳೆ ಸೊಪ್ಪನ ಗುಡಿಸಲ
ಚಿಕ್ಕ ಬೇವಿನಹಳ್ಳಿ ಹುಡಿಯಾಗೆ । ಕರಿಯವ್ವ
ಕೊಂಬಿನ ಟಗರ ಹಿಡಿಸ್ಯಾಳು ।

ಕೊಂಬಿನ ಟಗರ ಹಿಡಿಸಿ–ದೇವರಮಾಡಿ
ಅಕ್ಕತಂಗೆರೆಲ್ಲಾ ಹಗಲಾರೆ ।

ನಾಗಳ್ಳೂವ ಹಾಸ್ಯಾಳೆ ನಾಗಳ್ಳೂವ ಬಿಚ್ಚ್ಯಾಳೆ
ಬಾಲಯ್ನ ತೂಗಿ ಮಲಗಿಸಿ । ಹೊರಟಳಲ್ಲೆ
ಎಲ್ಲಿಗೆ ಕರಿಯವ್ವ ನಿಮು ಪಯಣ ॥

ಎಲ್ಲಿಗೆ ಕರಿಯವ್ವ ನಿಮು ಪಯಣ–ಹುಲ್ಲಿಕುಂಟಿ
ಹಬ್ಬವಂತೆ ತೌರ ಮನೆಯಾಗೆ ॥

ಇಕ್ಕಳ್ಳೂವ ಹೊಚ್ಚಾಳೆ ಇಕ್ಕಳ್ಳೂವ ಮುಡಿದಾಳೆ
ಪುತ್ರಯ್ನ ತೂಗಿ ಮಲಗಿಸಿ । ಹೊರಟಳಲ್ಲೆ
ಎಲ್ಲಿಗೆ ತಂಗ್ಯವ್ಮ ನಿಮು ಪಯಣ ॥

ಎಲ್ಲಿಗೆ ತಂಗ್ಯವ್ಮ ನಿಮು ಪಯಣ–ಹುಲ್ಲಿಕುಂಟಿ
ದೇವರಂತೆ ತೌರ ಮನೆಯಾಗೆ ॥

ಸಾಲಿ ಸೀರೆ ಮೇಲೆ ಎದ್ದಾವು ಕೆಂದೂಳು
ರಾಯ ಮಹಾರಾಯ್ನ ಮಗಳೆದ್ದು । ಹೋಗುವಾಗ
ದೂಳು ಹಾರ್ಯಾವೆ ಗಗನಾಕೆ ॥

ಪಟ್ಟಿಸೀರೆ ಮೇಲೆ ಇಟ್ಟು ಹಾರ್ಯಾನೆಂದು
ಶೆಟ್ಟಿ ಮಹಾರಾಯ್ನ ಮಗಳೆದ್ದು । ಹೋಗುವಾಗ
ಇಟ್ಟು ಹಾರ್ಯಾವೆ ಗಗನಾಕೆ ॥

ಮಾಯಕಾಠ ಕರಿಯವ್ವ ಮಾಯನೆಲ್ಲ ಕಲಿತೆ
ಮಾಯಾದ ಬೂದಿ ಕಟ್ಟಕೊಂಡು । ಕರಿಯವ್ವ
ಬೇವಿನಸೊಪ್ಪ ತರಿಸ್ಯಾಳು ॥

ಬೇವಿನ ಸೊಪ್ಪ ತರಿಸಿ–ಹೆತ್ತ ಯ್ಯಾನ
ಎತ್ತಿಗೆ ಅಸುರವ ತೆಗೆದಾಳೆ । ಜುಂಜಯ್ಯನ
ಎತ್ತ ಅಬ್ಬರಿಸಿ ಕಳಿಸ್ಯಾಳು ॥

ಮಂತ್ರಗಾರ ಕರಿಯವ್ವ ಮುಂತ್ರನೆಲ್ಲ ಕಲಿತೆ
ಮಂತ್ರಾದ ಬೂದಿ ಮಡಿಲಾಗೆ । ಕಟ್ಟಕೊಂಡು
ಹಾವಿಗೆ ಅಸುರವ ತೆಗೆದಾಳು ॥

ಹಾವಿಗೆ ಅಸುರನ ತೆಗೆದು–ಜುಂಜಪ್ಪನ
ಹಾಹಾ ಎಬ್ಬರಿಸಿ ಕಳಿಸ್ಯಾಳು ॥



ಸಂಗಾತಿ

ಸಂಗಾತಿ ಸತ್ತಾರೆ ನಾನು ಅಂಗೈಲಿ ಮೆಚಸೂವೆ
ಸಿರಿಗಂಧಾದ ಕೊರಡಲ್ಲಿ ಸಂಗಮ್ನ । ಸುಡಿಸೂವೆ
ಸಿರಿಗಂಗೆ ಸ್ನಾನಕೆ ಬಿಡಿಸೂವೆ ॥

...ಜನದ ಕಾವ್ಯ ಲಾಲಸೆಯನ್ನು ತುಂಬುವ ಈ ಕವಿತೆ ಜನದ ಭಾಷೆಯಲ್ಲೇ ಇದೆ. ಒಟ್ಟಿನಲ್ಲಿ ಈ ಸಾಹಿತ್ಯ ಜನತೆಯ ಸ್ಥಿತಿ ಗತಿ ಆಸ್ಥೆ ಆವಸ್ಥೆ ಎಲ್ಲವನ್ನೂ ಅನುಸರಿಸಿ ಎಲ್ಲಕ್ಕೂ ರೂಪು ಕೊಡುತ್ತದೆ. ಕಲಿತವರ ಕವಿತೆಯದರಂತೆ ಈ ಕವಿತೆಯದೂ ಪ್ರತ್ಯೇಕವಾದ ಒಂದು ರಾಜ್ಯ. ಇದರದೇ ಒಂದು ವಿಸ್ತಾರ ಉಂಟು, ಇದರಲ್ಲಿಯೂ ಒಂದು ನೀತಿ ರೀತಿ ಉಂಟು.

...ಎಡೆಬಿಡದೆ ಪದಗಳನ್ನು ಹೆಣೆದು ಅರ್ಥಕ್ಕಾಗಿ ಅವನ್ನು ಬಿಡಿಸುವುದು ಅವಶ್ಯಕವಾಗುವಂತೆ ರಚಿಸುವುದು ಬಿಗಿಯಾದ ರಚನೆಯಲ್ಲ. ಅದು ಬರಿಯ ಬಿಗುಮಾನ. ಮಾತೆಲ್ಲ ಗಟ್ಟಿಯಾಗಿರುವುದೇ ಒಳ್ಳೆಯ ಕಟ್ಟಡ, ಬಿಗಿಯಾದ ಕಟ್ಟಡ· ಜನತೆಯ ಕವಿತೆ ಚಿನ್ನಾದಾಗ ಈ ಬಿಗುವಿಗೆ ನಿದರ್ಶನವೆಂದು ಹೇಳಬೇಕು. ಮಿತವಾದ ಮಾತಿನಿಂದ ಅರ್ಥವನ್ನು ಸೂಚಿಸುವುದರಲ್ಲಿ ಇಂಥ ಕೃತಿ ಕಾವ್ಯಕ್ಕೆ ಆದರ್ಶವಾಗುತ್ತದೆ. ಇದರ ತ್ರಿಪದಿ ಒಂದೊಂದು ರಸ ಒಸರುವ ಕಾವ್ಯದ ಜೀವತ್ಪಂಡ· ವಿಸ್ತಾರವಾದ ಕವಿತೆ ಒಂದು ವಿಷಯಕ್ಕೆ ಕಾಲು ಕಣ್ಣು ಮೂಗನ್ನು ಬಿಡಿಸಿ ತೋರಿಸಬಲ್ಲದು ; ಈ ಕೃತಿಯಲ್ಲಿ ಅಷ್ಟಕ್ಕೆ ಅವಕಾಶವಿಲ್ಲ. ಈ ಕಾರಣದಿಂದ ಜನತೆಯ ಸಾಹಿತ್ಯದ ಒಂದು ತುಂಡು ಒಂದು ಜೀವಕಣದಂತೆ ಸ್ಪುರಿಸುತ್ತದೆ. ಅದರ ಚಟುವಟಿಕೆ ಒಂದು ಇರುವೆಯ ಚಟುವಟಿಕೆ. ಇರುವೆಯಲ್ಲಾದರೂ ಅವಯವಕ್ಕೆ ಅವಕಾಶವಿದೆ, ಇದಕ್ಕೆ ಒಟ್ಟು ದೇಹವೇ ಎಲ್ಲ ಕರಣವೂ : ಇದರ ಮೈಯೆಲ್ಲಾ ಕಣ್ಣು.

—ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ. ಪಿಹೆಚ್.ಡಿ.

ಸಂಗಾತಿ*

ಕರಿಯ ಸೀರೆಯನುಟ್ಟು ಕೆರೆಯ ನೀರಿಗೆ ಹೋದೆ
ಸರಿಯೋಳು ಸಂಗಾತಿ ಸೆರಗಿಡಿದು । ಏನಂದಾಳೆ
ಕರಿದೆಷ್ಟು ನಾರಿ ಬಿಳಿದೆಷ್ಟು.....।

ಕರಿದು ಕನ್ನಂಬಾಡಿ ಬಿಳಿದು ಬೆಂಗಳೂರು
ಸೆರಗು ಶೀರೇವ್ದ ಗಜಸೇಟಿ । ಒಳಗಿರುವ
ಕೊಂಡು ಕೊಟ್ಟ ಸಂಗಾತಿ ಸುಖಿಬಾಳು....।

ಸಂಗಾತಿಗೂ ನನಗೂ ಹೊಂದೀತು ಗೆಣೆತಾನ
ಮಾತನಾಡನೆಂದ್ರೆ ಮನೆದೂರ । ಸಂಗವ್ವ
ರಾತ್ರೀಕೆ ಬಾರೆ ಸೊಪ್ಪುನಾಕೆ....॥

ಸಂಗಾತಿ ಸಂಪನ್ನೆ ಹೆಸರು ನಾಗರಗನ್ನೆ
ಕುಶಲ ನೋಡವಳ ಕುಡಿಹುಬ್ಬ । ಕಣ್ಣೀನ ಬಾವ
ಹೊಸ ಮನೆಗೆ ರೇಖೆ ತೆಗದ್ಹಂಗೆ....॥

ಸಂಗಾತಿ ನನಗಿಂತ ಚೆಲುಗಾತಿ
ಪುಣ್ಯವಂತಗಾತಿ ಪುರುಷಾರ । ಮುಂಚಡ್ಯೀಲೆ
ನನ ಚಿಂಚೆಯಲ್ಲೆ ಒರಗವಳೆ....॥

ಸಂಗಾತಿ ಹೆಣ್ಣು ಜಂಬುನೇರಳೆ ಹಣ್ಣು
ಮುಂಗಯ್ಯ ಹಿಡಿದು ನಗಿಸೋಳು । (ನಗಿಸೊ) ಮುಖಭಾವ
ಮುಂಗಾರ ಮಿಂಚು ಹೊಳೆದ್ಹಂಗೆ....॥

---

*ಈ ಬಗೆಯ ಪದಗಳನ್ನೆ ಹಳ್ಳಿಯ ಹೆಂಗಸರು ಸುಗ್ಗಿಯ ಕಾಲದಲ್ಲೂ ಸಂತೋಷ ಸಂದರ್ಭಗಳಲ್ಲೂ ಹಾಡುವರು.

ಅಂಗಂಗಡಿಗಿಂತ ಗಂಧದಂಗಡಿ ಚೆಂದ
ಬಂಗಾರದಂತ ಬಳೆಚೆಂದ । ಆದಾರೆ
ಸಂಗಾತಿ ಕರೆವ ದನಿ ಚೆಂದ....॥

ನನ ಸಂಗಾತಿ ನನಗಿಂತ ಗುಣಗಾತಿ
ರಾಮ ಪಟ್ನಾದ ಸೆಟ್ಯಾತಿ । ಸಂಗಾತಿ
ನನ ಕಂಡು ಕುದುರೆ ಇಳಿದಾಳು....॥

ಸಂಗಾತಿ ಸಂಗಾತಿ ನನಗಿಂತ ಗುಣಗಾತಿ
ಹೂವು ಬಾಚಣಿಗೆ ಮಡಿಲಲ್ಲಿ । ಇಟ್ಟುಕೊಂಡು
ಅವಳು ಬೀದಿಯೊಳಗೆಲ್ಲಾ ಹರಸ್ಯಾಳು ॥

ಸಂಗಾತಿ ಗಂಡಾನ ಕೆರೆಯ ಏರಿಮೇಲೆ ಕಂಡೆ
ಹಸಿದಿದ್ರು ಹಲ್ಲ ಸುಲಿದಿದ್ರು । ಸಂಗವ್ವ
ಕೆರೆಯನ್ನ ನೋನ ಮನದಲ್ಲಿ....॥

ಕರೆಯನ್ನ ನೋನ ಮನದಲ್ಲಿ ಸಂಗವ್ವ
ಶೃಂಗಾರ್ದ ತೋಟ ಮರೆಯಾದೊ....ಸಂಗವ್ವ
ಶೃಂಗಾರ್ದ ತೋಟ ಮರೆಯಾದೊ....॥

ಸಂಗಾತಿ ಕಳವಾಳೆ ಒಂಬೈನೂರ ಅಡಕೆಯ
ಸಂಗಾತಿ ಮಗನ ಮದ್ವೇಗೆ ! ಸಂಗವ್ವ
ನೀ ಉಂಗುರ ಸಯಿವಾಗಿ ಬರಬೇಕು....॥

ಸಂಗಾತಿ ಕಳಿವಿದ ಅಡಕೆ ಒಂಬೈನೂರು ಹೋಳಾದೊ
ಗುಂಬಾವು ತುಂಬಿ ಗುರುತಾದೊ ।(ಗುರುತಾಗಿ)ಮಿಕ್ಕ ಅಡಕೆ
ಸಂಗಾತಿ ಮಗನ ಮದ್ವೆಯಾದೊ....॥

ಸಂಗಾತಿ ಮಗನ ಮದ್ವೆಯಾದ ... ಮಿಕ್ಕ ಆಡಕೆ
ಕರೆಯೋಕೆ ಬಂದಾ ಅಣ್ಣನಿಗೆ....ಕೈತುಂಬ ಕೊಟ್ಟೀನು
ನಾ ಕೈತುಂಬ ಕೊಟ್ಟೀನು....।

ಉಗುರಲ್ಲಿ ಭತ್ತವ ನೆಡಿಸಿ ಎಲೆಯಲ್ಲಿ ಬುತ್ತಿಯ ಕಟ್ಟ
ಹೋದೇನು ಸಂಗಮ್ಮ ಅರಮನೆಗೆ । ನಾ
ಹೋದೇನು ಸಂಗಮ್ಮ ಅರಮನೆಗೆ ।

ತುಪ್ಪ ಅನ್ನವುಂಡು ಜಾಜಿ ವೀಳ್ಯವನಿಡಿದು
ಅಕ್ಕ ಸಂಗಮ್ಮ ಮನೆಯೆಲ್ಲಿ । (ಮನೆಯಾನು) ತೋರಿದರೆ
ಕತ್ತೀಗೆ ವಜ್ರಾವ ಬಿಗಿಸ್ಹೇನು ॥

ಅಕ್ಕ ಸಂಗಮ್ಮ ಮನೆ ಹತ್ತೆ ಸುತ್ತಿನ ಕೋಟೆ
ಹತ್ತೆ ಕಾಲೀನ ಸಣ ಮುಂಚ । (ದ) ಮೇಲೆ
ತಾಯಿ ಸಂಗಮ್ಮ ಒರಗ್ಯವಳೆ ॥

ಹಾಲು ಅನ್ನವುಂಡು ಸಂಪಿಗೆ ವೀಳ್ಯವನಿಡಿದು
ಅಕ್ಕ ಸಂಗಮ್ಮ ಮನೆಯೆಲ್ಲಿ । (ಮನೆಯಾನು) ತೋರಿದರೆ
ಸ್ಯಾಲೆ ಸೀರ್ಹೇಳ ಮುಯ್ಕಿ ಕೊಟ್ಟೀನು ।

ಅಕ್ಕ ಸಂಗಮ್ಮ ಅರಮಾನೆ ಇಪ್ಪತ್ತು ಸುತ್ತಿನ ಕೋಟಿ
ಇಪ್ಪತ್ತು ಕಾಲೀನ ಸಣಮಂಚ । ದ ಮೇಲೆ
ತಾಯಿ ಸಂಗಮ್ಮ ಮನಿಗ್ಯವಳೆ ॥

ತಾಯಿ ಸಂಗವ್ವ ಇರು ಒಂದೇಳ್ಯವ ತೋರೆ
ಅವಳ್ದೀರೊ ಮುಂಚ ನಿನಗದಸ....ಕೊಡಿಸ್ಹೇಳು

ಅವಳಿಕ್ಕೊ ಒಡಬೆ ನಿನಗದ....ಕೊಡಿಸ್ಹೇನು
ಅಕ್ಕ ಸಂಗಮ್ಮ ಮನೆಯೆಲ್ಲಿ....
ಅಕ್ಕ ಸಂಗಮ್ಮ ಮನೆಯೆಲ್ಲಿ ?

ಹಾದಿಮನೆ ಯಾಕುಬ್ಯಾರೇ ಬೀದಿ ಮನೆ ಯಾಕುಬಾರೇ
ಸ್ಯಾಲೆ ಸೀರ್ಹೋಳು ಮನೆಯಕ್ಕ । ನೀ ಬಾರೇ
ಸ್ಯಾಲೆ ಸೀರ್ಹೇಳು ಮುಯ್ಯೆ ಬಂದೋ....!

ಉದ್ದೀನ ಹೊಲದಲ್ಲಿ ಮೇಯೋ ಬುದ್ದಿವಂತ ಬಸವನ ಕರೆಸಿ
ಮುದ್ದೀಸಿ ಅವನ ಮೈಸವರಿ । ಬುದ್ದಿ ಹೇಳಿ
ನಮ್ಮಕ್ಕ ಸಂಗಮ್ಮ ಬರಹೇಳಿ ॥

ನಿಮ್ಮಕ್ಕ ಸಂಗಮ್ಮ ಮನೆ ಹತ್ತೆ ಸುತ್ತಿನ ಕೋಟಿ
ಹತ್ತೆ ಕಾಲೀನ ಸಣಮುಂಚ । ದ ಮೇಲೆ
ನಿಮ್ಮಕ್ಕ ಸಂಗಮ್ಮ ಒರಿಗ್ಯವಳೆ ॥

ರಾಗೀಯ ಹೊಲದಲ್ಲಿ ಮೇಯೊ ಬುದ್ದಿವಂತ ಬಸವನ ಕರೆಸಿ
ನಾದನಸಿ ಅವನ ಮೈ ಸವರಿ । ಬುದ್ದಿ ಹೇಳಿ
ನಮ್ಮ ತಾಯಿ ಸಂಗನ್ನ ಮನೆ ಹೇಳು ॥

ನಿಮ್ಮ ತಾಯಿ ಸಂಗಮ್ಮ ಮನೆ ಆಡುಸುತ್ತಿನ ಕೋಟೆ
ಅಲ್ಲಿದೆ ಸಂಗಮ್ಮ ಅರಮನೆ । ಬಾಗಿಲ ಮುಂದೆ
ಆರೆಕಾಲ್ಹೀನ ಸಣಮುಂಚ । ದ ಮೇಲೆ
ನಿಮ್ಮ ತಾಯಿ ಸಂಗಮ್ಮ ಮನಿಗ್ಯವಳೆ ॥

ಸಂಗಾತಿ ಬಾರೇ ಸಾದು ನಿಂಬೆ ಹಣ್ಣೆ ಬಾರೇ
ಉಂಗುರವೆ ಬಾರ ಬೆರಳೀಗೆ । ನಡುತೋಟ್ಟ
ಹೊಂಬಾಳೆ ಬಾರೆ ಕಳಸಾಕೆ ॥

ಬಿಟ್ಟು ಇರಲಾರೆ ಬಟ್ಟಾನೆ ಮುಖದೋಳ
ಇಟ್ಟಕ್ಕಿ ನಮ್ಮ ನೆನೆಯೋಳ । (ನೆನೆಯೊ) ಸಂಗಾತಿಯ
ನಾನು ಬಿಟ್ಟೊಂದರಘಳಿಗೆ ಇರಲಾರೆ ॥

ಸಂಗಾತಿ ಸತ್ತಾರೆ ನಾನು ಅಂಗೈಲಿ ಮೆರಸೂವೆ
ಸಿರಿಗಂಧಾದ ಕೊರಡಲ್ಲಿ ಸಂಗನ್ನ ಸುಡಿಸೂವೆ।
ಸಿರಿಗಂಗೆ ಸ್ಥಾನಕೆ ಬಿಡಿಸೂವೆ ॥

ಶ್ರೀಗಂಧದ ಕೊರಡ ಸುಟ್ಟು ಬೂದಿಯ ಮಾಡಿ
ಬುಟ್ಟನಲ್ಲೆ ಹರಿಯೊ ಜಲಧೀಗೆ....ನಾನು
ಬುಟ್ಟನಲ್ಲೆ ಹರಿಯೊ ಜಲಧೀಗೆ ।

ಸಂಗಾತೀರು ಸೇರಿ ಸೇದೊ ಬಾವಿಯ ತೆಗೆದು
ನಾಗಾಳಕ್ಕೀಯ ಹೆಸರೆತ್ತಿ । ಮಿಕ್ಕ ನೀರು
ನೂರೊಂದರಿವಾಣ ತೊಳದಿರಿಸಿ । ದ ಮಿಕ್ಕ ನೀರು
ಕಂದಯ್ನ ಕಯ್ಯಿ ತೊಳೆದು ಕರುಕುಡಿದು । ಗರುಡಾಳ
ಕುಡಿದು ಗರಿಯೊದರಿ ।

ಗರುಡಾಳ ಕುಡಿದ....ಮಿಕ್ಕ ನೀರು
ಮಡಿವಾಳಶೆಟ್ಟ ಮಡಿಮಾಡಿ । ಮಿಕ್ಕ ನೀರು
ಅವನಟ್ಟ ಕಣ್ಣಲ್ಲಿ ಹರಿದಾವೆ ।



ಒಡ್ಡರಬೋಯಿ

ಬಿಮ್ಮನಸೆ ಕೇಳುತಾದೆ ಸುವ್ವೀಯೋ
ಬಿಮ್ಮನಸೆ ಕೊಟ್ಟಾರೆ ಸುವ್ವೀಯೋ
ಕೆರೆಯಾಗ ನಿಲ್ಲುತಾದೆ ಸುವ್ವೀಯೋ !

...ಸಸಿ ನೆಡುವಾಗ, ಕಳೆ ಕೀಳುವಾಗ, ಜೋಳ ಕೊಯ್ಯುವಾಗ ಕಾಳೊಕ್ಕುವಾಗ ಮತ್ತು ಇತರ ಕೆಲವು ಕೆಲಸ ಮಾಡುವಾಗ ಹಲವು ಹೆಂಗಸರು ಒಟ್ಟಿಗೆ ಸೇರುತ್ತಾರೆ. ಎಲ್ಲರೂ ಜೊತೆ ಜೊತೆಯಾಗಿ ವಿನೋದದಿಂದ ಮಾತಾಡುತ್ತ ಆಯಾಸ ತೋರದಂತೆ ಕೆಲಸ ಮಾಡುತ್ತಾರೆ. ಕ್ರಮ ಕ್ರಮವಾಗಿ ಮಾತು ಮುಗಿದು ಹಾಡಿಗೆ ಎದೆಗೊಡುತ್ತದೆ. ಮಳ್ಳಳು ಪ್ರಣಂಗಳ ಪಂತ್ತೆ ಮೆನೆಗೆಲಸಗಳ ಆತಂಕವಿಲ್ಲದೆ ಗೆಳತಿಯರ ಜೊತೆ ಸಿಕ್ಕ ಸಂಕೊಡಿಡಿಸಡೆನಿ ಹಾಡಿನ ಪೂನಲರ ಉಕ್ಕಿ ಹರಿಯುತ್ತದೆ...

...ಕೆಲವು ವೇಳೆ ಎರಡು ಮೂರು ಸಲ ಮಳೆ ಮರಳಿ ಹಾಡುತ್ತ—ತಮ್ಮ ಇನಿದನಿಯ ಅಲೆಗಳನ್ನು ಗಾಳಿಯಲ್ಲಿ ತೇಲಿ ಬಿಡುತ್ತಾರೆ. ಮನೆಯಲ್ಲಿ ತನಿಯಾಗಿ ಹಾಡುವಾಗ ಕಾಣದ ಒಂದು ಹೊಸಸೊಗಸು ಈ ಮೇಳಗಾನದಲ್ಲಿ ಕಂಡುಬರುತ್ತದೆ. ಹಾಡು ಮಳೆಗಾಲದ ತುಂಬುಹೊಳೆಯಂತೆ ನಿಧಾನವಾಗಿ ಮುಂದುವರಿಯುತ್ತದೆ.

—ಶ್ರೀ ಎಲ್. ಗುಂಡಪ್ಪ

ಒಡ್ಡರಬೋಯಿ*

ಒಂದೇವ್ವಾರ ಕೊಟ್ಟೀನು—ಸುವ್ವೀಯೋ
ಕೆರೆಕಟ್ಟೊನೊಡ್ಡರಬೋಯಿ—ಸುವ್ವೀಯೋ
ಎರಡೆವ್ವಾರ ಕೊಟ್ಟೀನು—ಸುವ್ವೀಯೋ
ಎರಡೇಯವ್ವಾರಾಕೆ—ಸುವ್ವೀಯೋ
ಮೂರೇಯವ್ವಾರಾಕೆ—ಸುವ್ವೀಯೋ
ನಿಲ್ಲಾದ ಹಣತಿಯಕೆರೆ—ಸುವ್ವೀಯೋ

ಗೌಡಯ್ಯ ಗೌಡಯ್ಯ—ಸುವ್ವೀಯೋ
ಏನ ಕೇಳೀತು ಕೆರೆ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ಏನ ಕೇಳೀತು ಕೆರೆ—ಸುವ್ವೀಯೋ
ಕೆರೆಯಾಗ ಕೇಳುತಾದೆ—ಸುವ್ವೀಯೋ
ಬುಡು ಬುಡುಕರುಡುಗೀನ—ಸುವ್ವೀಯೋ

ಬಲಿಯಾನೆ ಕೊಡಬೇಕು—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ಇನ್ನು ಏನ ಕೇಳೀತು ಕೆರೆ—ಸುವ್ವೀಯೋ
ಗೌಡಯ್ಯ ಗೌಡಯ್ಯ—ಸುವ್ವಿಯೋ
ಬಿಮ್ಮನಸೆ ಕೇಳುತಾದೆ—ಸುವ್ವೀಯೋ
ಬಿಮ್ಮನಸೆ ಕೊಟ್ಟಾರೆ—ಸುವ್ವೀಯೋ

---

*ಈ ಕಥನ ಕವನವನ್ನು ಸಾಮಾನ್ಯವಾಗಿ ಹೆಳ್ಳಿಯ ಹೆಂಗಸರು ಸಣ್ಣ ನಾಟ ಹಾಳುವಾಗಲೂ, ಗದ್ದೆ ಕಳೆ ಕೀಳುವಾಗಲೂ ಮತ್ತು ಇನ್ನಿತರ ಕೆಲಸಕಾರ್ಯಗಳಲ್ಲಿ ತೊಡಗಿದಾಗಲೂ–ಹಾಡುತ್ತಾರೆ.

ಕೆರೆಯಾಗ ನಿಲ್ಲುತಾದೆ—ಸುವ್ವೀಯೋ
ಗೌಡಯ್ಯ ಗೌಡಯ್ಯ—ಸುವ್ವೀಯೋ
ಬಲಿಯಾನೆ ಕೊಡಬೇಕು—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೊ
ನ್ನೇನ ಕೇಳೀತು ಕೆರೆ—ಸುವ್ವೀಯೋ
ಗೌಡಯ್ಯ ಗೌಡಯ್ಯ—ಸುವ್ವೀಯೋ

ನಿನ್ನ ಹಿರಿ ಮಗನ ಕೇಳೀತೂ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ನಿನ್ನ ಹಿರಿಮಗನ ಕೊಟ್ಟಾರೆ—ಸುವ್ವೀಯೋ
ಸ್ವರ್ಗಾಕೆ ಗತಿಯಿಲ್ಲಾ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ಇನ್ನೇನ ಕೇಳೀತು ಕೆರೆ—ಸುವ್ವೀಯೋ

ಗೌಡಯ್ಯ ಗೌಡಯ್ಯ—ಸುವ್ವೀಯೋ
ನಿನ್ನ ಕಿರಿಮಗನ ಕೇಳೀತು—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ನಿನ್ನ ಕಿರಿಮಗನ ಕೊಟ್ಟಾರೆ—ಸುವ್ವೀಯೋ
ತಲೆ ಕೊಳ್ಳೀಗೆ ಗತಿಯಿಲ್ಲಾ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ

ಐದೇಯ ವ್ವಾರಾಕೆ—ಸುವ್ವೀಯೋ
ಏನ ಕೇಳೀತು ಕೆರೆ—ಸುವ್ವೀಯೋ
ಗೌಡಯ್ಯ ಗೌಡಯ್ಯ—ಸುವ್ವೀಯೋ
ನಿನ್ನ ಕಿರಿ ಸೊಸೆ ಕೇಳುತಾದೆ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ನನ್ನ ಗ್ಹೋಕುರ್ತಿ ಹೋಗುತಾದೆ—ಸುವ್ವೀಯೋ

ಏಳೀಯ ವ್ವಾರಾಕೆ—ಸುವ್ವೀಯೋ
ನಿಲ್ಲಾದಣತಿಯುಕೆರೆ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ಏನ ಕೇಳೀತುಕೆರೆ—ಸುವ್ವೀಯೋ
ಗೌಡಯ್ಯ ಗೌಡಯ್ಯ—ಸುವ್ವೀಯೋ
ನಿನ್ನ ಹಿರಿ ಸೊಸೆ—ಕೇಳುತಾದೆ ಸುವ್ವೀಯೋ

ಹಿರಿ ಸೊಸೆ ಕೊಟ್ಟಾರೆ—ಸುವ್ವೀಯೋ
ನನ್ನ ಯಜಮಾನಿಕೆ ಹೋಯಿತಾದೆ—ಸುವ್ವೀಯೋ
ಎಂಟೇಯವ್ವಾರಾಕೆ—ಸುವ್ವೀಯೋ
ನಿಲ್ಲದಣತಿಯ ಕೆರೆ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ಇನ್ನೇನ ಕೇಳೀತುಕೆರೆ—ಸುವ್ವೀಯೋ

ಗೌಡಯ್ಯ ಗೌಡಯ್ಯ—ಸುವ್ವೀಯೋ
ನಿನ್ನ ಹೆಂಡತಿನೆ ಕೇಳೀತು ಕೆರೆ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ನನ್ನ ಹೆಡುತೀನೆ ಕೊಟ್ಟಾರೆ—ಸುವ್ವೀಯೋ
ಹೆಡುತೀನ ಕೊಟ್ಟಾರೆ ಸ್ವರ್ಗಾಕೆ ಗತಿಯಿಲ್ಲಾ—ಸುವ್ವೀಯೋ
ಒಂಬತ್ತು ವ್ವಾರಾಕೆ—ಸುವ್ವೀಯೋ

ನಿಲ್ಲಾದಣತಿಯ ಕೆರೆ—ಸುವ್ವೀಯೋ
ಗೌಡಯ್ಯ ಗೌಡಯ್ಯ ನಿಲ್ಲಾದಣತಿಯ ಕೆರೆ—ಸುವ್ವೀಯೋ
ಒಡ್ಡರಬೋಯಿ ಒಡ್ಡರಬೋಯಿ—ಸುವ್ವೀಯೋ
ಇನ್ಯಾರ್ನ ಕೇಳೀತು ಕೆರೆ—ಸುವ್ವೀಯೋ
ಗೌಡಯ್ಯ ಗೌಡಯ್ಯ—ಸುವ್ವೀಯೋ
ನಿನ್ನ ಹಿರಿ ಸೊಸೆ ಕೇಳುತಾದೆ—ಸುವ್ವೀಯೋ

ಅಲ್ಲಿಂದ ಬಂದಾರೆ—ಸುವ್ವೀಯೋ
ಅವರೇನೆಂದು ಹೇಳ್ಯಾರೆ—ಸುವ್ವೀಯೋ
ಸೊಸೆಬಾಲೆ ಸೊಸೆಬಾಲೆ—ಸುವ್ವೀಯೋ
ನೀ ಕುಪಿಗೇನೆ ಕೊಟ್ಟು ಬಾರೇ—ಸುವ್ವೀಯೋ
ಎಂದೂವಿಲ್ಲದ ಕುಪ್ಪಿಗೀಗ—ಸುವ್ವೀಯೋ
ಇಂದೇಕೆ ಮಾವಯ್ಯ—ಸುವ್ವೀಯೋ

ಇಂದೆ ನಿಮ್ಮೂರಲ್ಲಿ—ಸುವ್ವೀಯೋ
ಕೆರೆ ಕೋಡಿ ಹಬ್ಬವಂತೆ—ಸುವ್ವೀಯೋ
ಕೆರೆ ಕೋಡಿ ಹಬ್ಬವಂತೆ—ಸುವ್ವೀಯೋ
ನಿಮ್ಮೋರು ಕರೆಯೋಕೆ ಬಂದಿದ್ರು—ಸುವ್ವೀಯೋ
ಕರೆಯಾಕೆ ಬಂದೋರು—ಸುವ್ವೀಯೋ
ಮನೆಗ್ಯಾಕೆ ಬರಲಿಲ್ಲಾ—ಸುವ್ವೀಯೋ

ಮನೇಗೆ ಬರುವಾಕೆ—ಸುವ್ವೀಯೋ
ಮನೆಕಡೆ ಜಂಬಾರವಂತೆ—ಸುವ್ವೀಯೋ
ಮನೆಕಡೆ ಜಂಬಾರವಂತೆ—ಸುವ್ವೀಯೋ
ಅವರಿಗೆ ಖಂದು ಆಗಾಲೆಹೋದ್ರು—ಸುವ್ವೀಯೋ
ಸೊಸೆಬಾಲೆ ಸೊಸೆಬಾಲೆ—ಸುವ್ವೀಯೋ
ನೀ ವಾಲೇಯನಿಕ್ಕು ಬಾರೇ—ಸುವ್ವೀಯೋ

ಎಂದೂ ವಾಲೇಯನಿಕ್ಕಲಿಲ್ಲ—ಸುವ್ವೀಯೋ
ಇಂದೇಕೆ ಮಾವಯ್ಯ—ಸುವ್ವೀಯೋ
ಇಂದೆ ನಿಮ್ಮೂರಲ್ಲಿ—ಸುವ್ವೀಯೋ
ಕೆರೆ ಕೋಡಿ ಹಬ್ಬವಂತೆ—ಸುವ್ವೀಯೋ
ಕೆರೆ ಕೋಡಿ ಹಬ್ಬವಂತೆ—ಸುವ್ವೀಯೋ
ನಿಮ್ಮೋರು ಕರೆಯಾಕೆ ಬಂದಿದ್ರು—ಸುವ್ವೀಯೋ

ಕರೆಯಾಕೆ ಬಂದ್ರೋರು—ಸುವ್ವೀಯೋ
ಮನೆಗ್ಯಾಕೆ ಬರಲಿಲ್ಲ—ಸುವ್ವೀಯೋ
ಮನೇಗೆ ಬರುವಕ್ಕೆ—ಸುವ್ವೀಯೋ
ಅವರೀಗೆ ಮನೆಕಡೆ ಜಂಬಾರವಂತೆ—ಸುವ್ವೀಯೋ
ಅವರಾಗೆ ಬಂದು ಹಾಗೆ ಹೋದ್ರು—ಸುವ್ವೀಯೋ
ಸೂಸೆಬಾಲೆ ಸೊಸೆಬಾಲೆ—ಸುವ್ವೀಯೋ

ನೀ ದೊಡ್ಡ ಗುಂಡು ಇಕ್ಕೊಬಾರೇ—ಸುವ್ವೀಯೋ
ನಾನು ಎಂದೂ ದೊಡ್ಡ ಗುಂಡುನಿಕ್ಕಲಿಲ್ಲ—ಸುವ್ವೀಯೋ
ಇಂದೇಕೆ ಮಾವಯ್ಯ—ಸುವ್ವೀಯೋ
ಇಂದೆ ನಿಮ್ಮೂರಲ್ಲಿ ಕೆರೆಕೋಡಿ ಹಬ್ಬವಂತೆ—ಸುವ್ವೀಯೋ
ಕೆರೆ ಕೋಡಿ ಹಬ್ಬವಂತೆ—ಸುವ್ವೀಯೋ
ನಿಮ್ಮೋರು ಕರೆಯಾಕೆ ಬಂದಿದ್ರು—ಸುವ್ವೀಯೋ

ಅವರು ಮನೆಗ್ಯಾಕೆ ಬರಲಿಲ್ಲ—ಸುವ್ವೀಯೋ
ಅವರು ಮನೇಗೆ ಬರುವಕ್ಕೆ—ಸುವ್ವೀಯೋ
ಮನೆಕಡೆ ಜಂಬಾರವಂತೆ—ಸುವ್ವೀಯೋ
ಅವರಾಗೆ ಬಂದು ಅವರಾಗೆ ಹೋದ್ರು—ಸುವ್ವೀಯೋ

ಕೆರೆಯ ಕಟ್ಟಿಸುತ್ತಿದ್ದ ಮನೆಯಗೌಡ ತನ್ನ ಹಿರಿಮಗನ ಸೊಸೀರೆ, ರವಿಕೆ,ಕ್ಕೆಡಾಬು, ಕಾಲಂದಿಗೆ, ಮುಂತಾದ ಆಭರಣಗಳನ್ನೆಲ್ಲ ತೊಟ್ಟುಕೊಂಡು ತೌರಿಗೆ ಹೋಗುವಂತೆ ಹೇಳುತ್ತಾನೆ—

ಎಲ್ಲಾನೆ ಹಿಕ್ಕೊಂಡು—ಸುವ್ವೀಯೋ
ಹೋದಾಳು ಅಪ್ಪನಮನೆಗೆ—ಸುವ್ವೀಯೋ

ಕಂದಯ್ನ ಎತ್ತಿಕೊಂಡು—ಸುವ್ವೀಯೋ
ಹೋದಾಳು ಅಪ್ಪನಮನೆಗೆ—ಸುವ್ವೀಯೋ
ಅಪ್ಪಾನ ಮನೆಗ್ಹೋಗಿ—ಸುವ್ವೀಯೋ

ಅವಳೇನೆಂದು ಹೇಳುತಾಳೆ—ಸುವ್ವೀಯೋ
ಎಂದೂ ಬಾರದ ಮಗಳು—ಸುವ್ವೀಯೋ
ಈಗ್ಯಾಕೆ ಬಂದವಳೆ—ಸುವ್ವೀಯೋ

ಮುಂದಲಿಗಾಕೀರಿ ಮುಣಿಯನಾಕೀರಿ—ಸುವ್ವೀಯೋ
ಕುಂಡ್ರಾಕೆ ಬಂದಿಲ್ಲ—ಸುವ್ವೀಯೋ
ನಾ ನಿಲ್ಲಾಕೆ ಬಂದಿಲ್ಲ—ಸುವ್ವೀಯೋ
ನಮ್ಮಮಾವ ಬಡ್ಡಿ ಮಗ—ಸುವ್ವೀಯೋ
ಅವರು ಹೊಸಕೆರೆ ಕಟ್ಟಿಸ್ಯವ್ರೆ—ಸುವ್ವೀಯೋ
ಹೊಸ ಕೆರೆ ಕಟ್ಟಿಸ್ಯವ್ರೆ—ಸುವ್ವೀಯೋ

ಅದ್ಕೆ ರಾವಾನೆ ಕೊಡುತಾರೆ—ಸುವ್ವೀಯೋ
ನನ್ನ ರಾವಾನೆ ಕೊಡುತಾರೆ—ಸುವ್ವೀಯೋ
ಹೊತ್ತಾಯ್ತು ಹೋಗುಹ್ಹೀನಿ—ಸುವ್ವೀಯೋ
ನನ್ನಪ್ಪ ನನ್ನಪ್ಪ—ಸುವ್ವೀಯೋ
ನೀನು ನನ ಕೂಟಿ ಉಣು ಬಾರೋ—ಸುವ್ವೀಯೋ
ಎಂದೂ ಇಲ್ಲವಲ್ಲಾ ಕಂದ—ಸುವ್ವೀಯೋ

ಈಗ್ಯಾಕೆ ಕರೆದೀಯಾ—ಸುವ್ವೀಯೋ
ನಮ್ಮ ಮಾವ ಬಡ್ಡಿ ಮಗ—ಸುವ್ವೀಯೋ
ಅವ್ರು ಹೊಸಕೆರೆ ಕಟ್ಟಿಸ್ಯವ್ರೆ—ಸುವ್ವೀಯೋ
ಹೊಸಕೆರೆ ಕಟ್ಟಿಸ್ಯವ್ರೆ—ಸುವ್ವೀಯೋ
ನನ್ನ ಬಲಿಯಾನೆ ಕೊಡುತಾರೇ—ಸುವ್ವೀಯೋ
ನನ್ನವ್ವೆ ನನ್ನವ್ವೆ—ಸುವ್ವೀಯೋ

ನನ ಕೂಡ ಉಣುಬಾರೇ—ಸುವ್ವೀಯೋ
ಎಂದೂ ಇಲ್ಲವಲ್ಲಾ ನನ ಕಂದಾ—ಸುವ್ವೀಯೋ
ನೀನು ಇಂದೇಕೆ ಕರೆದೇಯೆ—ಸುವ್ವೀಯೋ

ನನ್ನ ಮಾವ ಬಡ್ಡಿ ಮಗ—ಸುವ್ವೀಯೋ
ಅವ್ರು ಹೊಸ ಕೆರೆ ಕಟ್ಟಿಸ್ಯವ್ರೆ—ಸುವ್ವೀಯೋ
ನನ್ನ ಬಲಿಯಾನ ಕೊಡುತಾರೇ—ಸುವ್ವೀಯೋ

ಹೀಗೆ ತನ್ನ ತವರಲ್ಲಿ ತನ್ನ ತಂದೆ, ತಾಯಿ, ಅಣ್ಣ, ತಮ್ಮ, ತಂಗಿ, ಮತ್ತು ತನ್ನ ಬಂಧು ಬಳಗದವರೊಡನೆಲ್ಲಾ ಊಟಮಾಡಿ, ಕೊನೆಗೆ ತನ್ನನ್ನೂ ತನ್ನ ಮಾವ ಕೆರೆಗೆಬಲಿಕೊಡುವ ವಿಚಾರವನ್ನು ಎಲ್ಲರೊಡನೆಯೂ ದುಃಖದಿಂದಲೆ ಹೇಳುತ್ತಾಳೆ—

ಊಟಾವ ಮಾಡಾಯ್ತು—ಸುವ್ವೀಯೋ
ಎಲ್ಲಾರ ಕೂಟಿ ಹೇಳಾಯ್ತು—ಸುವ್ವೀಯೋ
ಮಗುವಾನೆ ಹೆತ್ತುಕೊಂಡು—ಸುವ್ವೀಯೋ
ಬಂದಾಳೆ ಕೆರೆದಡಿಗೆ—ಸುವ್ವೀಯೋ
ಹಣ್ಣು ಕಾಯಿ ತಕ್ಕೊಂಡು—ಸುವ್ವಿಯೋ
ಆಗ ಮಾವಯ್ಯ ಬಂದಾನೆ—ಸುವ್ವೀಯೋ

ಹಣ್ಣು ಕಾಯಿ ತಕ್ಕೊಂಡು—ಸುವ್ವೀಯೋ
ಕೆರೆದಡಿಗೆ ಬಂದಾನೆ—ಸುವ್ವೀಯೋ
ಮಗುವಾನೆ ಎತ್ತಿಕೊಂಡು—ಸುವ್ವೀಯೋ
ಕೆರೆಯೊಳಗೆ ಇಳದಾಳೆ—ಸುವ್ವೀಯೋ
ಹಣ್ಣು ಕಾಯಿ ಮಡೆಗ್ಯಾಳೆ—ಸುವ್ವೀಯೋ
ಮೂರು ಬಗಸೆ ನೀರ ಕುಡಿದಾಳೆ—ಸುವ್ವೀಯೋ

ಮೂರು ಬೊಗಸೆ ನೀರ ಕುಡಿದು—ಸುವ್ವೀಯೋ
ಅವಳೆಲ್ಲಾನೆ ನೆನೆದಾಳೆ—ಸುವ್ವೀಯೋ
ಕೆರೆಯೊಳಗೆ ಇಳದಾಳೆ—ಸುವ್ವೀಯೋ
ಧೈರ್ಯದಿಂದ ದೇವಾರ ನೆನೆದಾಳೆ—ಸುವ್ವೀಯೋ
ಅಣ್ಣ ತಮ್ಮದೀರ ನೆನೆದಾಳೆ—ಸುವ್ವೀಯೋ
ಮುಂದಕ್ಕೆ ಹೋದ್ಹಾಗ—ಸುವ್ವೀಯೋ

ಅವಳೇನೆಂದು ಹೇಳುತಾಳೆ—ಸುವ್ವೀಯೋ
ಪೂಜೇಯು ಮಾಡಾಯ್ತು—ಸುವ್ವೀಯೋ
ಇನ್ನೇನು ಮಾವಯ್ಯ—ಸುವ್ವೀಯೋ
ಮೂರ ಬಗಸೆ ನೀರ ಕುಡಿದು—ಸುವ್ವೀಯೋ
ಅವಳ್ನೆಂದಕ್ಕೆ ತಿರುಗೆಂದಾ—ಸುವ್ವೀಯೋ
ಮಾವಯ್ಯ ಹಿಂದಕ್ಕೆ ತಿರುಗೆಂದಾ—ಸುವ್ವೀಯೋ

ಮುಂದಕ್ಕೆ ನೂಕ್ಯಾನೆ—ಸುವ್ವೀಯೋ
ಮುಂದಕ್ಕೆ ನೂಕೆದಾಗ—ಸುವ್ವೀಯೋ
ಅವಳೇನೆಂದು ಹೇಳುತಾಳೆ—ಸುವ್ವೀಯೋ
ನನ್ನಕ್ಕ ನನ್ನಕ್ಕ—ಸುವ್ವೀಯೋ
ಕಾಲು ತುಂಬ ನೀರುಬಂತು—ಸುವ್ವೀಯೋ
ಕೊಳ್ಳವ್ವ ಕಂದಾವ—ಸುವ್ವೀಯೋ

ಆಗಲೆ ಹೋದಾಳೆ—ಸುವ್ವೀಯೋ
ಅವಳು ನಡುಗೆರೆಲಿ ತೇಲ್ಯಾಳೆ—ಸುವ್ವೀಯೋ
ಸೊಂಟಾಕೆ ಪಟ್ಟನಾಕಿ—ಸುವ್ವೀಯೋ
ಸೊಂಟ ತುಂಬ ನೀರು ಬಂತೂ—ಸುವ್ವೀಯೋ
ಆಗಾಲೆ ಹೋದಾಳೆ—ಸುವ್ವೀಯೋ
ನಡುಗೆರೆಗೆ ಹೋದಾಳೆ—ಸುವ್ವೀಯೋ

ನಡುಗೆರೆಗೆ ಹೋದಾಗ—ಸುವ್ವೀಯೋ
ಮಾವ ಮನೆಗೆ ಬಂದಾ—ಸುವ್ವೀಯೋ
ಮಾವ ಮನೆಗೆ ಬಂದಾಗ—ಸುವ್ವೀಯೋ
ಅವಳ ಗೆಂಡನೆ ಬಂದಾನೆ—ಸುವ್ವೀಯೋ
ಗಂಡಗ ಬರುವಾಕೆ—ಸುವ್ವೀಯೋ
ಹಾಳಾದ ಸೊಪ್ಪುನಾವೆ—ಸುವ್ವೀಯೋ

ಹಾಳು ಸೊಪ್ಪುನಾವೆ ಬಿದ್ದೀತು—ಸುವ್ವೀಯೋ
ನಾನು ಬಂದೇಯೆ ಬಿಟ್ಟೇನು—ಸುವ್ವೀಯೋ
ಇತ್ತಲಿಗ್ಹೋದಾಳೆ—ಸುವ್ವೀಯೋ
ಸೊಸೆಯ್ಹೋದಾಳೆ—ಸುವ್ವೀಯೋ
ಅತ್ಯಮ್ಮ ಅತ್ಯಮ್ಮ—ಸುವ್ವೀಯೋ
ನಮ್ಮ ಹಿತ್ತಲಲ್ಲಿ ಹಾವಿದೆ—ಸುವ್ವೀಯೋ

ಹಿತ್ತಲಲ್ಲಿ ಹಾವಿದ್ರೆ—ಸುವ್ವೀಯೋ
ನೀನು ಅಡಿಗೇಯಾ ಮಾಡ್ಡೆಣ್ಣೆ—ಸುವ್ವೀಯೋ
ಅಡಿಗೇಯ ಮಾಡೆಣ್ಣೆ—ಸುವ್ವೀಯೋ
ನೀನು ಹಾವಾನೆ ವಡಿಯಪ್ಪ—ಸುವ್ವೀಯೋ
ಹಾವಾನೆ ಹೊಡೆದಾನೆ—ಸುವ್ವೀಯೋ
ಅತ್ಯಮ್ನ ಕುಟ್ಟೇಳ್ಯಾಳೆ—ಸುವ್ವೀಯೋ

ಹಾವಾನೆ ತಂದಾಳೆ—ಸುವ್ವೀಯೋ
ಮೀನುಜ್ಜಿದಂಗುಜ್ಜಿದಾಳೆ—ಸುವ್ವೀಯೋ
ಮೀನುಜ್ಜಿದಂಗುಜ್ಜಿದಾಳೆ—ಸುವ್ವೀಯೋ
ನೀನು ಅಡಿಗೇಯ ಮಾಡೆಣ್ಣೆ—ಸುವ್ವೀಯೋ
ಅಡಿಗೇನೆ ಮಾಡ್ಯಾಳೆ—ಸುವ್ವೀಯೋ
ಅವಳೇನೆಂದು ಹೇಳಿಸಾಳೆ—ಸುವ್ವೀಯೋ

ಮಾವಯ್ಯ ಮಾವಯ್ಯ—ಸುವ್ವೀಯೋ
ಆಡಿಗಾಯ್ತು ಊಟಕೆ ಬನ್ನಿ—ಸುವ್ವೀಯೋ
ಶುಕ್ರವಾರ ಒಂದೊತ್ತು—ಸುವ್ವೀಯೋ
ನಾನು ಊಟಮಾಡಕ್ಕಿಲ್ಲಾ—ಸುವ್ವೀಯೋ
ಅಲ್ಲಿಂದ ಹೋದಾಳೆ—ಸುವ್ವೀಯೋ
ಅತ್ಯಮ್ನ ಕರೆದಾಳೆ—ಸುವ್ವೀಯೋ

ಅತ್ಯಮ್ಮ ಅತ್ಯಮ್ಮ—ಸುವ್ವೀಯೋ
ಅಡಿಗಾಯ್ತು ಊಟಕೆಬನ್ನಿ—ಸುವ್ವೀಯೋ
ಆಯುತ್ವಾರ ಒಂದೊತ್ತು—ಸುವ್ವೀಯೋ
ನಾನು ಊಟವ ಮಾಡೋದಿಲ್ಲಾ—ಸುವ್ವೀಯೋ
ಅವಳಲ್ಲಿಂದ ಹೋದಾಳು—ಸುವ್ವೀಯೋ
ನಾದಾನಿ ಕರೆದಾಳೆ—ಸುವ್ವೀಯೋ

ನಾದೀನಿ ನಾಗಮ್ಮದೇವಿ—ಸುವ್ವೀಯೋ
ಅಡಿಗಾಯ್ತು ಊಟಕೆಬನ್ನಿ—ಸುವ್ವೀಯೋ
ಸೋಮವಾರ ಒಂದೊತ್ತು—ಸುವ್ವೀಯೋ
ನಾನು ಊಟ ಮಾಡೋಕಿಲ್ಲಾ—ಸುವ್ವೀಯೋ
ಊಟಾವ ಮಾಡೋದಿಲ್ಲಾ—ಸುವ್ವೀಯೋ
ನೀನೊಬ್ಬಾಳೆ ಮಾಡಿಣ್ಣಿ—ಸುವ್ವೀಯೋ

ಎಲ್ಲರಾನು ಕರೆದಾಳೆ—ಸುವ್ವೀಯೋ
ಅವಳೊಬ್ಬಾಳೆ ಉಂಡಾಳೆ—ಸುವ್ವೀಯೋ
ಊಟಾವ ಮಾಡ್ಯಾಳೆ—ಸುವ್ವೀಯೋ
ಮಂಚದ ಮೇಲೆ ಮನಿಗ್ಯಾಳೆ—ಸುವ್ವೀಯೋ
ಮಂಚಾದಿ ಮನಿಗ್ವಾಗ—ಸುವ್ವೀಯೋ
ಅವಳೇನೆಂದು ಹೇಳುತಾಳೆ—ಸುವ್ವೀಯೋ

ಮಾವಯ್ಯ ಮಾವಯ್ಯ—ಸುವ್ವೀಯೋ
ನನಗೆಂಗೆಂಗೊ ಆಯಿತಾದೊ—ಸುವ್ವೀಯೋ
ಹೆಂಗೆಂಗೆ ಆದಾರೆ—ಸುವ್ವೀಯೋ
ನಾನೇನ ಮಾಡಲವ್ವ—ಸುವ್ವೀಯೋ
ಅತ್ಯಮ್ಮ ಅತ್ಯಮ್ಮ—ಸುವ್ವೀಯೋ
ನನಗೆ ಹೆಂಗೆಂಗೊ ಆಯಿತು—ಸುವ್ವೀಯೋ

ಆಲ್ಲಿಂದ ಬಂದಾಳೆ—ಸುವ್ವೀಯೋ
ಏನಂದು ಹೇಳುತಾಳೆ—ಸುವ್ವೀಯೋ
ಆಯ್ಯೋಯ್ಯೋ ! ದೇವಾರೇ—ಸುವ್ವೀಯೋ
ನನಗಂಡ ಬರಲೀಗ—ಸುವ್ವೀಯೋ
ಗಂಡಾ ಗಂಡಿಗ್ಹೋಗಿ—ಸುವ್ವೀಯೋ
ಸೊಪ್ಪುನಾವೆ ಬೀಳಬಾರದೆ—ಸುವ್ವೀಯೋ

ಗಂಡಾ ಕೆಂಡದರಾಗಿ—ಸುವ್ವೀಯೋ
ಸೊಪ್ಪುನಾವೆ ಬಡಿದಾವೆ—ಸುವ್ವೀಯೋ
ಊರುಕಡೆ ಏನು ಜಂಬಾರ—ಸುವ್ವೀಯೋ
ಸೊಪ್ಪುನಾವೆ ಬಿದ್ದಾವೆ—ಸುವ್ವೀಯೋ
ಆರೆದಿನದ ಹಾದೀಯ—ಸುವ್ವೀಯೋ
ಮೂರೆದಿನಕೆ ಬಂದಾನೆ—ಸುವ್ವೀಯೋ

ಮೂರೆ ದಿನದ ಹಾದೀಯ—ಸುವ್ವೀಯೋ
ಒಂದೆ ದಿನಕೆ ಬಂದಾನೆ—ಸುವ್ವೀಯೋ
ಆಲ್ಲಿಂದ ಬಂದಾಗ—ಸುವ್ವೀಯೋ
ಅವನ್ಹೇನೆಂದು ಕೇಳುತಾನೆ—ಸುವ್ವೀಯೋ
ನನ್ನವ್ವ ನನ್ನಪ್ಪ—ಸುವ್ವೀಯೋ
ನೀತಂದ ಸೊಸೆಯೆಲ್ಲಾ—ಸುವ್ವೀಯೋ

ನಾತಂದ ಸೊಸೆಯು—ಸುವ್ವೀಯೋ
ಹೋದಳ್ಳಪ್ಪನಮನೆಗೆ—ಸುವ್ವೀಯೋ
ನನ್ನವ್ವ ನನ್ನವ್ವ—ಸುವ್ವೀಯೋ
ನೀತಂದ ಗೌಡಿಯೆಲ್ಲಾ—ಸುವ್ವೀಯೋ
ನಾತಂದ ಗೌಡಿಯು—ಸುವ್ವೀಯೋ
ತೌರೀಗೆ ಹ್ಹೋಗ್ಯವ್ಳೆ—ಸುವ್ವೀಯೋ

ನನ್ನವ್ವ ನನ್ನಪ್ಪ—ಸುವ್ವೀಯೋ
ನೀ ಸಾಕೀದ ಬಾಲನೆಲ್ಲಪ್ಪ—ಸುವ್ವೀಯೋ
ಅವ್ನು ಆಡಾಕೆ ಹೋಗ್ಯವ್ನೆ ಸುವ್ವೀಯೋ
ಅವ್ನು ಓದಾಕೆ ಹೋಗ್ಯವ್ನೆ—ಸುವ್ವೀಯೋ
ನನ್ನವ್ವೆ ನನ್ನವ್ವೆ—ಸುವ್ವೀಯೋ
ನೀ ಸಾಕೀದ ಮಗುವೆಲ್ಲೆ—ಸುವ್ವೀಯೋ
ನಾನು ಸಾಕೀದ ಮಗುವಪ್ಪ—ಸುವ್ವೀಯೋ

ಅವ್ನು ಆಡಾಕೆ ಹೋಗ್ಯವ್ನೆ—ಸುವ್ವೀಯೋ
ನೀನು ಏನೇನ ತಂದಿದ್ದಿ—ಸುವ್ವೀಯೋ
ನೀನು ಬಲು ಬಲು ಕೇಳುತ್ತಿದ್ದಿ—ಸುವ್ವೀಯೋ
ನನ್ನಣ್ಣ ನನ್ನಣ್ಣ—ಸುವ್ವೀಯೋ
ನೀತಂದಾ ನಾದೀನೆಲ್ಲೊ—ಸುವ್ವೀಯೋ
ನಾತಂದಾ ನಾದ್ನಿ—ಸುವ್ವೀಯೋ

ನೀ ಹೋದಾಗ್ಲೆ ಹೋದಳಪ್ಪನ ಮನೆಗೆ—ಸುವ್ವೀಯೋ
ಅವನು ಅಲ್ಲಿಂದ ಹೋದಾನು—ಸುವ್ವೀಯೋ
ಹೋದಾನು ಅತ್ತೆಯ ಮನೆಗೆ—ಸುವ್ವೀಯೋ
ಅತ್ಯಮ್ಮ ಅತ್ಯಮ್ಮ—ಸುವ್ವೀಯೋ
ನೀ ಕೊಟ್ಟ ಮಗಳೆಲ್ಲೆ ಸುವ್ವೀಯೋ
ಅವಳಲ್ಲೇಯೆ ಇದ್ದಾಳು—ಸುವ್ವೀಯೋ

ಮಾವಯ್ಯ ಹೂವಯ್ಯ--ಸುವ್ವೀಯೋ
ನೀಕೊಟ್ಟ ಮಗಳೆಲ್ಲಪ್ಪ—ಸುವ್ವೀಯೋ
ನಾಕೊಟ್ಟ ಮಗಳಪ್ಪ—ಸುವ್ವಿಯೋ
ಗಂಡಾನ ಮನೆಯಲ್ಲಿದ್ದಾಳೆ—ಸುವ್ವೀಯೋ
ಮಾವಯ್ಯ ಮಾವಯ್ಯ—ಸುವ್ವೀಯೋ
ನನಕಂದಾ ಎಲ್ಲಪ್ಪ—ಸುವ್ವೀಯೋ

ನಿನ ಕಂದಯ್ನು ಅವ್ಳುತಾವ ಇದ್ದನಪ್ಪ—ಸುವ್ವೀಯೋ
ನಡುದಾರೀಗೆ ಬಂದಾಗ—ಸುವ್ವೀಯೋ
ಅಲ್ಲಿ ಏನಂದು ಹೇಳ್ಯಾರ—ಸುವ್ವೀಯೋ
ನಿಮ್ಮಪ್ಪ ಬಡ್ಡೀಮಗ—ಸುವ್ವೀಯೋ
ಹೊಸಕೆರೆ ಕಟ್ಟಿಸಿದ್ದ ಸುವ್ವೀಯೋ
ಬಲಿಯಾನೆ ಕೊಟ್ಟಾನು—ಸುವ್ವೀಯೋ

ಅವನಲ್ಲಿಂದ ಬಂದಾನೆ—ಸುವ್ವೀಯೋ
ಕೆರೆದಡಿಗೆ ಹೋದಾನೆ—ಸುವ್ವೀಯೋ
ಕೆರೆದಡಿಗೆ ಹೋದೋನು—ಸುವ್ವೀಯೋ
ಅವನ್ಹೇನೆಂದು ಹೇಳುತಾನೆ—ಸುವ್ವೀಯೋ
ನನ್ನ ಹೆಡತಿ ಪತಿವ್ರತೆಯಾದಾರೆ—ಸುವ್ವೀಯೋ
ನನ್ನ ಕಣ್ಣೀಗೆ ಕಾಣಬಾರದೆ—ಸುವ್ವೀಯೋ

ಮಗುವಾನೆ ನೋಡ್ಯಾನೆ—ಸುವ್ವೀಯೋ
ಸತ್ತೀಯೆ ಹೋಗೀದೆ—ಸುವ್ವೀಯೋ
ಅವಳಾನೆ ಕರೆಕೊಂಡು—ಸುವ್ವೀಯೋ
ಕೆರೆಯಿಂದ ಬಂದಾಗ—ಸುವ್ವೀಯೋ
ಎಲ್ಲಾನು ಕೇಳ್ಯಾನು—ಸುವ್ವೀಯೋ
ಎಲ್ಲಾನು ಹೇಳಾಯ್ತು—ಸುವ್ವೀಯೋ

ಮನಿಗೇಯ ಬಂದಾರೆ—ಸುವ್ವೀಯೋ
ಮನಿಗೆ ಬಂದಾಗ—ಸುವ್ವೀಯೋ
ತಾಯಮ್ನು ಅತಿಗಮ್ನು—ಸುವ್ವೀಯೋ
ಪಚ್ಚೇಯ ಆರತಿ ಮಾಡಿ—ಸುವ್ವೀಯೋ
ಪಗಡೇಯ ಆರತಿ ಮಾಡಿ—ಸುವ್ವೀಯೋ
ಸೊಸೆಗೆ ಬೆಳಿಗ್ಯಾರೆ—ಸುವ್ವೀಯೋ
ಸೊಸೇಯ ಭಕ್ತೀಯ ಕೊಂಡ್ಯಾಡ್ತಾರೆ—ಸುವ್ವೀಯೋ

ಮದುವಣ್ಣ

ಚಿನ್ನ ಬೆಳೆದಾರೆ ಚಿನ್ನ ಸೋರಿಟ್ಟಾರೆ
ಚೆನ್ನಿಗರಾಯಾರ ಗುಡಿ ಮುಂದೆ । ಮದುವಣ್ಣ
ಚಿನ್ನಾದ ಮಣೆ ಮೇಲೆ ಹಸೆನಿಂದಾ ॥

...ಕರುಳು ಕರುಳನ್ನು ಮಿಡಿಯುತ್ತದೆ ; ಆಂತರಂಗ ಆಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತದೆ. ನಮ್ಮ ಹಳ್ಳಿಗರ–ಗಂಡು ಹೆಣ್ಣು ಗಳೆಲ್ಲರ ಜೀವನ ಸಾರವನ್ನೆ ಹೊರಹೊಮ್ಮಿಸುತ್ತಿರುವ ಈ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು...

—ದಿವಂಗತ ಶ್ರೀ ಬಿ. ಎಂ. ಶ್ರೀಕಂಠಯ್ಯ

ಮದುವಣ್ಣ*

ಹತ್ತೀಯ ಮಣೆಗ್ಹೋಳಿ ಹತ್ತೆಂಟು ದಿನವಾದೋ
ಹತ್ತೀಯ ಮಣೆ ಬರಲಿಲ್ಲಾ । ಬಡಗಿ ಮನೆ
ಎತ್ತು ಬಿಟ್ಟು ಎಮ್ಮೆ ಹೊಡಿಕೊಳ್ಳಿ ॥

ಆಲಾದ ಮಣೆಗ್ಹೋಳಿ ಆರ್ಹೋಳು ದಿನವಾದೋ
ಆಲಾದ ಮಣೆ ಬರಲಿಲ್ಲಾ । ಬಡಗಿ ಮನೆ
ಹಸು ಬಿಟ್ಟು ಕರುನ ಹೊಡಿಕೊಳ್ಳಿ ॥

ಆಲದ ಮಣೆ ಬಂದೊ ಹೂವಿನ ಚವರೀಗೆ ಬಂದೋ
ತಾಯಿ ಅಗ್ನೀಯ ಬೆರಸೆಂದ । (ಬೆರಸೆಂದು) ಕಂದಯ್ಯ
ಹೂವೀನ ಬಚ್ಚಲೀಗೆ ನಡೆದಾನು ॥

ಹತ್ತೀಯ ಮಣೆ ಬಂದೊ ಮುತ್ತೀನ ಚವರೀಗೆ ಬಂದೋ
ಹೆತ್ತಮ್ಮ ಅಗ್ನೀಯ ಬೆರಸೆಂದ । (ಬೆರಸೆಂದು) ತಮ್ಮಯ್ಯ
ಮುತ್ತೀನ ಬಚ್ಚಲೀಗೆ ನಡೆದಾನು ॥

ನೀರಿಲ್ಲತಾವ ನೀರ್ಯಾಕೆ ನಿಂತಾನೆ
ಊರೀಗೆ ದೊಡ್ಡೋರ ಮಗಮೀದೊ । ಕಂದಯ್ಯ
ನೀಲಾದ ಪತ್ತೀಗೆ ನೆರಳಲ್ಲಿ ॥

ಹೆಸರೀಗೆ ದೊಡ್ಡೋರ ಮಗಮೀದೊ....ಕಂದಯ್ಯ
ಹಸರು ಪತ್ತೀಗೆ ನೆರಳಲ್ಲಿ....॥

---

*ಹಳ್ಳಿಯಲ್ಲಿ ಹೆಂಗಸರು ಗುಂಪಾಗಿ ನೆರೆದು ಮದುವೆಯ ಮಂಗಳ ಸಮಯದಲ್ಲಿ ಈ ಹಾಡುಗಳನ್ನು ಮದುವೆಯ ಗಂಡನ್ನು ಕುರಿತು ಹಾಡುತ್ತಾರೆ.

ಬಾಲಣ್ಣ ಮೀದ ನೀರು ಬಾಗಲೀಗೆ ಹರಿದಾವೆ
ಬಾಗಾಲದಾಟ ಹೊಳೆದಾಟ । ಹೊಳೆಯಾಚೆ
ದಾಳಿಂಬೆ ವ್ವಾಲಾಡಿ ಬೆಳೆದಾವೆ ॥

ಕಂದಣ್ಣಾ ಮೀದ ನೀರು ಬಾಗಲೀಗೆ ಹರಿದಾವೆ
ಬಾಗಾಲ ದಾಟ ಹೊಳೆದಾಟ । ಹೊಳೆಯಾಚೆ
ಬಾಳೆ ವ್ವಾಲಾಡಿ ಬೆಳೆದಾವೆ ॥

ಬಾಗೀಲು ಬಿಟ್ಟು ಬರುವಾಗ ಫಲ್ಗೆ ಸೀದೊ
ಬಾಗೀಲ ಗೌಳಿ ನುಡಿದಾವೆ । ಈ ಮನೆಯ
ಬಾಲಣ್ಗೆ ಹನ್ನೆರಡು ಫಲವುಂಟು ॥

ಹಟ್ಟಿಬಿಟ್ಟು ಕಿತ್ತಾಲೆ ಬರುವಾಗ ಫಲ್ಗೆ ಸೀದೊ
ಹಟ್ಟೀಯ ಗೌಳಿ ನುಡಿದಾವೆ । ಈ ಮನೆಯ
ಪುತ್ರಾಗೆ ಹನ್ನೆರಡು ಫಲವುಂಟು ॥

ಒಂಟೆ ಶೃಂಗರಿಸಿ ಬಂಟಾರ ಸಾಲಲ್ಲಿ ನಿಲ್ಲೀಸಿ
ಹಾಲ ಬಾವೀಲಿ ಮುಖತೊಳೆದು । ಮದುವಣ್ಣ
ಕಂದಣ್ಣೊರಟಾನೆ ಮೆರಣೀಗೆ ॥

ಆನೆ ಶೃಂಗರಿಸಿ ಮಾಳಿಗೆ ಸಾಲಲ್ಲಿ ನಿಲ್ಲೀಸಿ
ಕೆರೆಯ ನೀರಲಿ ಮುಖತೊಳೆದು । ಮದುವಣ್ಣ
ಬಾಲ ತಾನೊಂಟ ಮೆರಣೀಗೆ ॥

ಪಟ್ಟೀಯ ಸೀರೆ ಠಟ್ಟಿ ಮೇಗಾಲ ರವಿಕೆ
ಕಪ್ಪೀನ ಬಟ್ಟು ಹಣೆಯಾಗೆ । ಗಂಡೀನಅಕ್ಕ
ನೀನು ಪೆಟ್ಟಗೇಯ ಹೊರುಬಾರೇ ॥

ಸಾಲೀಲೀಯ ಸೀರೆ ತೋಳ ಮೇಗಾಲ ರವಿಕೆ
ಸಾದೀನ ಬಟ್ಟು ಹಣೆಯಾಗೆ । ಗಂಡೀನ ತಂಗೆ
ನೀನು ಪೆಟ್ಟಗೇಯ ಹೊರುಬಾರೇ ॥

ಬಾಳೆ ಹಣ್ಣಿನಂಗೆ ಬಾಲಣ್ಣ ಹಾಕಿದ ಕಾಸೆ
ಬಾಗೂರ ಅರಸು ಇವರೇಯ । ಒದ್ದಾರಲ್ಲೆ
ಬಾಳೆ ಹೂವೀನ ಚೌಕಾವ....॥

ಇಂಬೆ ಹಣ್ಣಿನಂಗೆ ಕಂದಣ್ಣ ಗಾಕೀದ ಕಾಸೆ
ಜಂಬೂರ ಅರಸು ಇವರೇಯ । ಒದ್ದಾರಲ್ಲೆ
ಇಂಬೆ ಹೂವೀನ ಚೌಕಾವ ॥

ಬೀದಿ ಬೀದಿಗೆಲ್ಲಾ ನಾರಾಯಣಸ್ವಾಮಿ ಬೆಳಕು
ನಾರೀರ ಕೊರಳ ಮನೆ ಬೆಳಕು । ಮದುವಣ್ಣಾನ
ಪಾಗೀನ ಬೆಳಕು ಸಭೆಗೆಲ್ಲಾ ॥

ಅಂಗಂಗಡಿಗೆಲ್ಲಾ ಚಂದ್ರಸ್ವಾಮಿಯ ಬೆಳಕು
ನಿಶ್ರೀರ ಕೊರಳ ಮಣೆ ಬೆಳಕು । ಮದುವಣ್ಣಾನ
ಅಂಗೀಯ ಬೆಳಕು ಸಭೆಗೆಲ್ಲಾ....॥

ಮಲ್ಲಿಗೆ ಮುಡಿಯೊ ನಲ್ಲೇರು ಇದ್ದಾರೆ
ಆಲ್ಲಿ ಗಲ್ಲಲ್ಲಿ ಮನಿಗ್ಯವರೆ । ಮದುವಣ್ಣ
ನಲ್ಲೆರೆಬ್ಬರಿಸೊ ಬೆಳಗಾದೊ ॥

ಸಂಪೀಗೆ ಮುಡಿಯೊ ಕೆಂಪೀರು ಇದ್ದಾರೆ
ಹಂತ ಹಂತದಲ್ಲಿ ಮನಿಗ್ಯವರೆ । ಮದುವಣ್ಣ
ಕೆಂಪೀರೆಬ್ಬರಿಸೊ ಬೆಳಗಾದೊ ॥

ಅತ್ತ ಗಾಜಿನ ಕಂಬ ಇತ್ತ ಗಾಜಿನ ಕಂಬ
ಎತ್ತ ಬಿಡಲೊರಾಯ ಕುದುರೇಯ । ಈವೂರ
ಮುತ್ತೈನ ಚಾವಡೀಗೆ ಇದಿರಾಗಿ ॥

ಆಗ ಗಾಜಿನ ಕಂಬ ಹೀಗೆ ಗಾಜಿನ ಕಂಬ
ಹೇಗೆ ಬಿಡಲೊ ರಾಯ ಕುದುರೇಯ । ಈವೂರ
ಹೂವೀನ ಚಾವಡೀಗೆ ಇದಿರಾಗಿ ॥

ಅಂದಲದಟ್ಟೀಗೆ ನಿಂದು ಎಷ್ಟೊತ್ತಾಯೀತೆ
ಗಂಧಾಧ ಭೋಗಿ ಬೆವೆತಾನು । ಈ ಮನೆ
ರಂಬೇರ ಆರತಿಯ ತರಹೇಳಿ ॥

ಚಪ್ಪರದಟ್ಟೀಗೆ ಒಕ್ಕು ಎಷ್ಟೊತ್ತಾಯೀತೆ
ಕಪ್ಪುರಾದ ಭೋಗಿ ಬೆವೆತಾನು । ಈ ಮನೆ
ನಿಶ್ರೀರ ಆರತಿಯ ತರಹೇಳಿ ॥

ನೋಡೀರಿ ನಿಮ್ಮ ಸಿರಿಯ ನೋಡೀರಿ
ಸಂಪತ್ತ ನೋಡೀರಿ ನಿಮ್ಮ ಅಳಿಯಾನ । ಮೂಡಿ ಬರುವೂ
ಚಂದ್ರಾಮುಗಿಂತ ಚೆಲುವಾನ ॥

ರಾಯ ಬೀಗರ ಮನೆಯಾಗೀದೆ ನಾವು ಕಾಣೋ
ಹಿತ್ತಾಲ ಬಾಳೆ ಇದಿರಾಗಿ । ಬೀಗಾರ
ಈತೈತೆ ನಮ್ಮ ಅರಮಾನೆ ॥

ರಾಯಬೀಗರು ಹೇಗವರೆ ನಾವು ಕಾಣೋ
ಕೇಸಕ್ಕೆ ಕಣಜ ನಡುಮಲ್ಲಿ । ಬೀಗಾರೆ
ಹೊರಗಿದ್ದರೆ ಳಮ್ಮ ಗಲಿರೆಂದೋ ॥

ಕಪ್ಪಿಲ್ಲಿ ಇಲ್ಲಾಂದು ಅವರೊಪ್ಪಾನೆ ಮುನಿದೆದ್ದು
ಕಪ್ಪು ನನ್ನೂರ ಮಧುಗಾದ । ಏರೀಮೇಲೆ
ಮುತ್ತೀನ ಪೆಟ್ಟಗೆಲ್ಲಿ ಬರುತಾದೆ ॥

ವ್ವಾಲೇಯು ಇಲ್ಲಾಂತ ಅವರ ತಾಯಮ್ಮ ಮುನಿದೆದ್ದು
ವ್ವಾಲೇಯು ನನ್ನೂರ ಮಧುಗಾದ । ಏರೀಮೇಲೆ
ಹೂವೀನ ಪೆಟಗೆಲ್ಲಿ ತರುತಾರೆ ॥

ಬಣ್ಣೆಲ್ಲವೆಂದು ಅವರಣ್ಣಯ್ಯ ಮುನಿದೆದ್ದು
ಬಣ್ಣ ನನ್ನೂರ ಮಧುಗಾದ । ಏರೀಮೇಲೆ
ಬಂಗಾರ ಪೆಟಗೆಲ್ಲಿ ತರುತಾರೆ ॥

ವಾಲೇಯ ತಂದಿವ್ನಿ ತಾಲೀಯ ತಂದಿವ್ನಿ
ಹಳೇಯ ಕಾಲಾದ ಹಳೆಚಿನ್ನ । ತಂದಿವಿನಿ
ತೋರೀಸಿ ನಿಮ್ಮ ಮಗಳೀಗೆ ॥

ಬಂಧಿ ತಂದೇವು ಬಂಗಾರ ತಂದೇವು
ಹಿಂದಾಲಕಾಲಾದ ಹಳೆ ಚಿನ್ನ । ತಂದಿವಿನಿ
ನಂಬೀಸಿ ನಿಮ್ಮ ಮಗಳೀಗೆ ॥

ಪಟ್ಟೀಯ ಸೀರೆ ಮುಟ್ಟೂತ ತುಣಿಯೂತ
ಬಟ್ಟಾಲಗಣ್ಣೀನ ಪುರುಷಾನ । ನೋಡೂತ
ಹತ್ಯಾಳೆ ಹಸೆಯ ಜಗಲೀಯ ॥

ಸಾಲೀಯ ಸೀರೆ ಜೋಲೂತ ತೋರೂತ
ತಾವರೆಗಣ್ಣೀನ ಪುರುಷಾನ । ನೋಡೂತ
ಏರ್ಯಾಳೆ ಹಸೆಯ ಜಗಲೀಯ ॥

ಅಕ್ಕಜೀರೀಗೆ ಚಿಕ್ಕವ್ನು ಕೈತುಂಬ
ತೆಗೆದಿಟ್ಟೆ ಪುರುಷಾರ ಮಂಡೆಮೇಲೆ । ತನಗೆ
ಇಷ್ಟೊಂದು ಭಾಗ್ಯವು ಬರಲೆಂದು ॥

ಎಳ್ಳುಜೀರೀಗೆ ಹೆಣ್ಣವ್ನು ಕೈ ತುಂಬ
ತೆಗೆದಿಟ್ಟಾಳು ಪುರುಷಾರ ಮಂಡೆಮೇಲೆ ।ತನಗೆ
ಇಲ್ಲಾದ ಭಾಗ್ಯವು ಬರಲೆಂದು ॥

ಚಪ್ಪರದಟ್ಟೀಲಿ ಒಕ್ಕಿರೋನು ಇವನ್ಯಾರೆ
ಹೊಕ್ಕಾಳ ಜಡೆ ತಲೆತುಂಬ । ಪರಮೇಶ್ವರನ
ಅಕ್ಕ ಬಂದು ಧಾರೆ ಎರೆದಾಳೆ ॥

ಅಂದಲದಟ್ಟೀಲಿ ನಿಂದಿರೋನು ಇವನ್ಯಾರೆ
ನಾಗಾಳ ಜಡೆ ತಲೆ ತುಂಬ । ಪರಮೇಶ್ವರನ
ತಾಯಿ ಬಂದು ಧಾರೆ ಎರೆದಾಳೆ ॥

ಇಂದಿಂಗಳ ಬೆಳಕಲ್ಲಿ ಚಂದುರಾನ ರವಿಯಲ್ಲಿ
ಗಂಧ ಕಸ್ತೂರಿ ಪುಣಗೀನ । ಪಾರ್ವತಿದೇವಿ
ಬಂದಾಳೆ ತೆರೆಯ ಮರೆಯಲ್ಲಿ ॥

ಇಂದಿಂಗಳ ಬೆಳಕಲ್ಲಿ ಸುಲಿದಿಗನ ರವಿಯಲ್ಲಿ
ಗಂಧ ಕಸ್ತೂರಿ ಪುಣಗೀನ । ಪಾರ್ವತಿದೇವಿ
ಬಂದಾಳೆ ತೆರೆಯ ಮರೆಯಲ್ಲಿ ॥

ಇಂದಿಂಗಳ ಬೆಳಕಲ್ಲಿ ಹಿಂದಿಬ್ಬ ಹಾರುವರು
ಗಂಧಾದ ಭರಣಿ ಇಡಕೊಂಡು । ಹಾರುವಯ್ಯ
ಕಂದಾಗೆ ಧಾರೆ ಎರೆದಾರು ॥

ಮುಂದಿಂಗಳ ಬೆಳಕಲ್ಲಿ ಮುಂದಿಬ್ಬ ಹಾರುವರು
ತಾಮರದ ಚಂಬು ಇಡಕೊಂಡು । ಹಾರುವಯ್ಯ
ಬಾಲಾಗೆ ಧಾರೆ ಎರೆದಾರು ॥

ಕಟ್ಟೆ ಹಿಂದಾಲ ಬಟ್ಟು ಕಣಿಗಲ ಹೂವೆ
ಶೆಟ್ಟಿ ಜಂಗುಮನ ನೆಗಿಸೋದೆ । (ನೆಗಿಸೊ) ಕಣಿಗಲ ಹೂವೆ
ನಮ್ಮ ಪುತ್ರಾನ ಶಾಸ್ತ್ರಕೆ ಬರಬೇಕು ॥

ಎರಿಹಿಂದಾಲ ದಾರಿ ಕಣಿಗಲ ಹೂವೆ
ಹೋಗಿ ಜಂಗಮನ ನೆಗಿಸೊದೆ । (ನಗಿಸೊ) ಕಣಿಗಲಹೂವೆ
ನಮ್ಮ ಕಂದಯ್ನ ಶಾಸ್ತ್ರಕೆ ಬರಬೇಕು ॥

ಪಟ್ಟೆ ಜೋತೂರ ಇಪ್ಪತ್ತು ಮಡಿಮಾಡಿ
ಕಟ್ಟಿನೀರಲ್ಲಿ ತಾನಜಪವ । ಮಾಡಿಕೊಂಡು
ತನ್ನ ಪುತ್ರಾಗೆ ಕೈಧಾರೆ ಎರೆದಾರು ॥

ಸಣ್ಣ ಜೋತೂರ ಹನ್ನೆರಡು ಮಡಿಕೇಯ ಮಾಡಿ
ಕೆರೆಯ ನೀರಲ್ಲಿ ತಾನ ಜಪವ । ಮಾಡಿಕೊಂಡು
ತನ್ ಬಾಲಯ್ಗೆ ಕೈಧಾರೆ ಎರೆದಾರೆ ॥

ಹಳ್ಳಾದ ಹರಿನೀರು ಹಳ್ಳಾದ ಕೊರೆ ನೀರು
ಮೇಲೆ ಮೈಸೂರ ಮಧುಗಾದ । ಕೆರೆಯ ನೀರೆ
ನಮ ಬಾಲಾನ ಕೈಧಾರ್ಗೆ ಬರಬೇಕು ॥

ಬಾವೀಯ ಹರಿನೀರು ಬಾವೀಯ ಹನಿನೀರು
ಮೇಲೆ ಮೈಸೂರ ಮಧುಗಾದ । ಕೆರೆಯ ನೀರು
ನಮ್ಮ ಬಾಲಯ್ನ ಕೈಧಾರ್ಗೆ ಬರಬೇಕು ॥

ಉದ್ದೀನ ಕಾಯಿತೊರ ಚಿನ್ನಾ ಬಿದ್ದೋಯಿತೆಂದು
ಮದ್ದೂರ ಅಗಸಾಲೆ ಕರೆಸ್ಯಾರೆ । ಅವರ ಮಾವ
ನಮ್ಮ ನಿಶ್ಶೆ ಮಾಡಿದೊಂದು ಹರಿತಾಲಿ ॥

ಕಡಲೆಕಾಯಿ ತೊರ ಚಿನ್ನ ಕಡೆದುಹೋಯಿತೆಂದು
ಕಡಬಾದ ಅಗಸಾಲೆ ಕರೆಸ್ಯಾರೆ । ಅವರ ಮಾವ
ಕೆನ್ನೇಗೆ ಮಾಡಿದೊಂದು ಹರಿತಾಲಿ ॥

ಆಯವಾದೊ ಹಸೆ ಛಾಯಾಕೆ ಬಿದ್ದೊ ತೆನೆ
ಹೋಗಿ ನೋಡೋರಿಗೆ ಸಿರಿಯಾದೊ । ಸಿರಿಗೌರಿ
ಸಾಗಿ ಬಾರೇ ಮಗನ ಮದುವೇಗೆ ॥

ಅಂದವಾದ ಹಸೆ ಚಂದಕೆ ಬಿದ್ದ ತೆನೆ
ಬಂದು ನೋಡೋರಿಗೆ ಸಿರಿಯಾದೊ । ಸಿರಿಗೌರಿ
ಬಂದೋಗೆ ಮಗನ ಮದುವೇಗೆ ॥

ನಾಳೆ ನಮ್ಮಾನೆ ಬಾಲಯ್ಗೆ ಸೋಭಾನ
ಹೋದೀಯೊ ಒಲ್ಲೊ ಬಸವಯ್ಯ । ನಮ್ಮಾನೆ
ಬಾಲಮ್ಗೆ ವಿಭೂತಿ ಇಡಬೇಕು ॥

ಇಂದೆ ನಮ್ಮಾನೆ ಕಂದಯ್ಗೆ ಸೋಭಾನ
ಬಂಧೀಯ ಬರೆಯೊ ಬಸವಯ್ಯ । ನಮ್ಮಾನೆ
ಕಂದಾಗೆ ವಿಭೂತಿ ಇಡಬೇಕು ॥

ಬಾಳೆ ಹಣ್ಣುಗಳಿರಾ ಬಾಳೇಯ ಕಾಯಿಗಳಿರಾ
ಬಾಗೂರಿಗ್ಹೋಗೊ ಗಿಣಿಗಳಿರಾ । ನಮ್ಮಾನೆ
ಬಾಲಯ್ಗೆ ಸಾಸೂವೆ ಇಡು ಬನ್ನಿ ॥

ಇಂಬೀಯ ಹಣ್ಣುಗಳಿರಾ ಇಂಬೀಯ ಕಾಯಿಗಳಿರಾ
ಜಂಬೂರಿಗೋಗೊ ಗಿಣಿಗಳಿರಾ । ನಮ್ಮಾನೆ
ಕಂದಯ್ಗೆ ಸಾಸೂವೆ ಇಡುಬನ್ನಿ ॥

ಇಪ್ಪೆ ಹೂಗಳಿರಾ ಇಪ್ಪೇಯ ಕಾಯಿಗಳಿರಾ
ತಿಪ್ಪೂರಿಗೋಗೊ ಗಿಣಿಗಳಿರಾ । ನಮ್ಮಾನೆ
ಪುತ್ರಾಗೆ ಸಾಸೂವೆ ಇಡುಬನ್ನಿ ॥

ಇಟ್ಟಟ್ಟ ಸಾಸೂವೆ ಬೆಟ್ಟದುದ್ದಕ್ಕೆ ಬಿದ್ದೊ
ಕುಟ್ಟಕ್ಕಿ ನಂದನ ಫನವಾದೊ । ಅಮ್ಮ ನಿಮ್ಮ
ಕಂದಾಗೆ ಸಾಸೂವೆ ಇಡುಬನ್ನಿ ॥

ಹಾಕಿಹಾಕಿದ ಅಕ್ಕಿರಾಸಿ ಉದ್ದಕೆಬಿದ್ದೊ
ಕ್ಯಾಸಕ್ಕಿ ನಂದನ ಫನವಾದೊ । ಅಮ್ಮ ನಿಮ್ಮ
ಪುತ್ರಾಗೆ ಇಟ್ಟೀನೆ ತಿರುಸಾಸ್ವೆ....॥

ಅಂಗಯ್ಯ ಚಂದಾಕೆ ಮುಂಗಯ್ಯ ಹಿಡಿದಾನೆ
ರಂಗು ಮಾಣಿಕದ ಅರುಳೊತ್ತಿ । ಬೆರಳೊತ್ತಿ
ಬೆರಳು ನೊಯ್ತಾದೆ ಬಿಡಿಕಯ್ಯ ॥

ಬೆರಳು ನೊಂದಾರೆ ಹಂಗೇಯ ಬಂದೇನೆ
ಆನೆ ಮಾರೀದ ಹೊಸಹೊನ್ನ । ಕೊಟ್ಟವಿನಿ
ಸುಮ್ನೆ ತಾರೆಣ್ಣೆ ಬಲಗೈಯ ॥

ಆಕಯ್ಯ ಅಂದಾಕೆ ಈಕಯ್ಯ ಹಿಡಿದಾನೆ
ರೇಕು ಮಾಣಿಕದ ಅರುಳೊತ್ತಿ । ಬೆರಳೊತ್ತಿ
ಬೆರಳು ನೊಯ್ತಾದೆ ಬಿಡಿಕಯ್ಯ ॥

ಬೆರಳು ನೊಂದಾರೆ ಹಂಗೇಯ ಬಂದೇನೆ
ಹೋರಿ ಮಾರೀದ ಹೊಸಹೊನ್ನು । (ಹೊಸಹೊನ್ನ) ಕೊಟ್ಟವಿನಿ
ಸುಮ್ನೆ ತಾರೆಣ್ಣೆ ಬಲಗೈಯ ॥

ಬಾಳೇಯ ಕಾಯಿಗೆದ್ದೆ ಬಾಳೇಯ ಹಣ್ಣುಗೆದ್ದ
ಬಾಳೆ ಹುಯ್ಯೋಳು ಗೊನೆಗೆದ್ದ । ಮದುವಣ್ಣ
ಬಾಲೇಯ ಗೆದ್ದ ಫಳಗೇಲಿ ॥

ಇಂಬೀಯ ಕಾಯಿಗೆದ್ದ ಇಂಬೀಯ ಹೂವುಗೆದ್ದ
ಇಂಬೀಯ ಗಿಡದ ಹಣ್ಣುಗೆದ್ದ । ಮದುವಣ್ಣ
ರಂಬೇಯ ಗೆದ್ದ ಫಳಗೇಲಿ ॥

ತಟ್ಟೆ ಒಳಗಿರೊ ಪುಟ್ಟ ಬಾಳೆಹಣ್ಣ
ಮುಟ್ಟಾದೆ ಬಾರೋ ಮದುವಣ್ಣ । ನಿಮ್ಮತ್ತೆ
ಮುಟ್ಟೀದರೆಣ್ಣ ಕೊಡಳಂತೆ ॥

ಹಾಗೆ ಗಾಜಿನಕಂಬ ಹೀಗೆ ಗಾಜಿನಕಂಬ
ಸೋಕಾದೆ ಬಾರೋ ಮದುವಣ್ಣ । ನಿಮ್ಮತ್ತೆ
ಸೋಕೀದರೆಣ್ಣ ಕೊಡಳಂತೆ ॥

ಹಾದೀಯ ಮನೆಗೆ ಸಾದನಿಕ್ಕಿದಂಗೆ
ಸಾದಿಕ್ಕಿದರಲ್ಲೆ ನಿನ ಮಗ। ಬೀಗಾತಿ
ಕ್ವಾರಳ್ಳುತಿಂದು ಹಡೆದೇನೆ ?

ಹಟ್ಟೀಯ ಮನೆಗೆ ಕಪ್ಪನಿಕ್ಕಿದಂಗೆ
ಹಚ್ಚಕ್ಕಿದರಲ್ಲೆ ನಿನಮಗ । ಬೀಗಾತಿ
ಹುಚ್ಚೆಳ್ಳು ತಿಂದು ಹಡೆದೇನೆ ?

ಹನ್ನೆರಡೊರುಷಾದ ಸಣ್ಣುಡುಗೆನ್ನುತ್ತಿದ್ದೆ
ಕೆನ್ನೆಗೆ ಬಂದಾವೆ ಮುದಿನೆರೆ । ಮೂಲಂಗಿ
ಹಣ್ಣಿನಂಗವನೆ ಮದುವಣ್ಣ ॥

ಇಪ್ಪತ್ತರುಷಾದ ಚಿಕ್ಕುಡುಗೆನ್ನುತ್ತಿದ್ದೆ
ಕೆಪ್ಪಿಗೆ ಬಂದಾವೆ ಮುದಿನೆರೆ । ಮೂಲಂಗಿ
ಸೊಪ್ಪಿನಂಗವನೆ ಮದುವಣ್ಣ ॥

ಸಣ್ಣ ಸೀರೆಯುಡಿಸಿ ಹೊನ್ನು ಸೋಗಲುದುಂಬಿ
ಅಕ್ಕಮ್ಮನೆಂಬ ಗರತೀಯ । ಕೊಟ್ಟೀವಿ
ಉಪ್ಪಾರದಂತ ಅಳಿಯಾಗೆ ॥

ಪಟ್ಟೆಸೀರೆಯುಡಿಸಿ ಮುತ್ತು ಸೋಗಲುದುಂಬಿ
ನೀಲಮ್ಮನೆಂಬ ಗರತೀಯ । ಕೊಟ್ಟೀವಿ
ಈಡಿಗರಂತ ಅಳಿಯಾಗೆ ॥

ಆನೆಮೇಲೆ ಬರುವೋರು ಜಾಣರೆನ್ನುತ್ತಿದ್ದೆ
ಜಾಣಲ್ಲಾ ಕಾಣೆ ಜೋಲುದುಟ । ನಮ್ಮಾನೆ
ಜಾಣೇಗೆ ನೀನೆಲ್ಲಿ ಒದಗೀದೆ ॥

ಒಂಟೀಯಮೇಲೆ ಬರುವೋರು ಬಂಟನೆಂಬುತ್ತಿದ್ದೆ
ಬಂಟಲ್ಲಾ ಕಾಣೆ ಗಂಡಕಾಲ । ನಮ್ಮಾನೆ
ಬಂಟೇಗೆ ನೀನೆಲ್ಲಿ ಒದಗೀದೆ ॥

ಚಿನ್ನ ಬೆಳೆದಾರೆ ಚಿನ್ನ ಸೋರಿಟ್ಟಾರೆ
ಚೆನ್ನಿಗರಾಯಾರ ಗುಡಿಮುಂದೆ । ಮದುವಣ್ಣ
ಚಿನ್ನಾದ ಮಣೆಮೇಲೆ ಹಸೆನಿಂದಾ ॥

ಹವಳ ಬೆಳೆದಾರೆ ಹವಳ ಸೋರಿಟ್ಟಾರೆ
ಹನುಮಂತರಾಯಾರ ಗುಡಿಮುಂದೆ । ಮದುವಣ್ಣ
ಹವಳಾವ ಮಣೆಮೇಲೆ ಹಸೆನಿಂದಾ ॥

ಮುತ್ತು ಬೆಳೆದಾರೆ ಮುತ್ತು ಸೋರಿಟ್ಟಾರೆ
ಉತ್ತಮರಾಯಾರ ಗುಡಿಮುಂದೆ । ಮದುವಣ್ಣ
ಮುತ್ತೀನ ಮಣೆಮೇಲೆ ಹಸೆನಿಂದಾ ॥

ಮಾವಾನ ಮಗಳಲ್ಲೆ ದೂರಾಲ ತಾವಲ್ಲೆ
ನಾಗಾಳ ಹೂವ ಮುಡಿಯೋಳೆ । (ಮುಡಿಯೊ) ಮಾವನ ಮಗಳೆ
ದೂರ ಇರೆ ಸೆಕೆಬಾಳು ॥

ಅತ್ತೆ ಮಗಳಲ್ಲೆ ಹತ್ತಿರದ ತಾವಲ್ಲೆ
ಇಕ್ಕಳಹೂವ ಮುಡಿಯೋಳೆ । (ಮುಡಿಯೊ) ಮಾವನ
ಅತ್ತತ್ತ ಇರೆ ಸೆಕೆಬಾಳ ॥ [ಮಗಳೆ

ಹತ್ತಿ ಮರತನಕ ಮುತ್ತೀನ ಕೊಳತನಕ
ಅಕ್ಕ ಲಕ್ಕಮ್ನ ಗುಡಿತನಕ । ನಮ್ಮಾಡು
ಮುತ್ತೀನ ಮಳೆಯಾಗಿ ಸುರಿದಾವು ॥

ಆಲದ ಮರತನಕ ಹೂವಿನ ಕೊಳತನಕ
ತಾಯಿ ಲಕ್ಕಮ್ನ ಗುಡಿತನಕ । ನಮ್ಮಾಡು
ಹೂವೀನ ಮಳೆಯಾಗಿ ಸುರಿದಾವು ॥

ಒಂದು ಬದನೆಕಾಯಿ ಒಂಬತ್ತೋಳಮಾಡಿ
ಖಂಡೂಗ ಮೆಣಸ ನರಿಕ್ಹಾಕಿ । ಈ ಮನೆ
ಕಂದಣ್ಣ ನೋಡಿ ಕಡುರುಚಿಯ ॥

ಎರಡು ಬದನೆಕಾಯ ಎಂಬತ್ತೋಳಮಾಡಿ
ನಾಗಾಳ ಮೆಣಸ ನರಿಕ್ಹಾಗಿ । ಈ ಮನೆ
ಕಂದಯ್ಯ ನೋಡಿ ಕಡುರುಚಿಯ ॥

ಆಕೈಲ ಎಂಜಾಲ ಈಕೈಗೆ ತಕ್ಕೊಂಡು
ಬಾಪೂರಿ ತೋಳತಿರುವೂತ । ಮದುವಣ್ಣ
ಆಕೆಗೆಂಜಾಲ ಬೆರಿಸ್ಯಾನೆ ॥

ಹಂಗೆ ಎಂಜಾಲ ಮುಂಗೈಗೆ ಇಡಿಕೊಂಡು
ಬಂಧೀಯ ತೋಳ ತಿರುವೂತ । ತಾಯಮ್ಮ
ಗಂಡನೆಂಜಾಲ ಬೆರಿಸ್ಯಾಳೆ ॥

ವಾಲೇಯನಿಕ್ಕುವಾಗ ತಾಯೀಗೆ ಎಚ್ಚಾಳ
ವಾಲೆಯಿಕ್ಕೆ ಮಗಳ ಕರೆಕೊಂಡು । ಹೋಗುವಾಗ
ತಾಯಮ್ಗೆ ದುಃಖ ಎರಗಾದೆ ॥

ಕಪ್ಪನೆ ಇಕ್ಕುವಾಗ ಅವರಪ್ಪಾಗೆ ಎಚ್ಚಾಳ
ಕಪ್ಪಿಕ್ಕೆ ಮಗಳ ಕರೆಕೊಂಡು । ಹೋಗುವಾಗ
ಅವರಪ್ಪಾಗೆ ದುಃಖ ಎರಗಾದೆ ॥

ಬಣ್ಣ ಹುಡುವಾಗ ಅವರಣ್ಣಾಗೆ ಎಚ್ಚಾಳ
ಬಣ್ಣುಡಿಸಿ ತಂಗೆ ಕರೆಕೊಂಡು । ಹೋಗುವಾಗ
ಅವರಣ್ಣಯ್ಗೆ ದುಃಖ ಎರಗೀತು ॥

ಎಣ್ಣೆ ಬಾನಾವ ನಿಮ್ಮಣ್ಣಾನ ಕುಟ್ಟುಣ್ಣಮ್ಮಿ
ಸಣ್ಣಮರಳಲ್ಲಿ ನಡೆಸೇನು । ತಾಯಮ್ಮ
ನಿಮ್ಮಣ್ಣಾನ ಕೇಳಮ್ಮ ಕುದುರೇಯ ॥

ಸಣ್ಣ ಸೀರೆಯುಟ್ಟೀನು ಹೊನ್ನ ಸೋಗಲದುಂಬೀನು
ಸಣ್ಣ ಮರಳಲ್ಲಿ ನಡೆದೀನು । ಅತ್ಯಮ್ಮ
ನಮ್ಮಣ್ಣಯ್ಯ ಮನೆಯ ಕುದುರಿಲ್ಲಾ ॥

ಪಟ್ಟಿಸೀರೆಯುಡಿಸಿ ಮುತ್ತು ಸೋಗಲು ದುಂಬಿ
ದಪ್ಪಮರಳಲ್ಲಿ ನಡೆಸ್ದೆವು । ತಾಯಮ್ಮ
ನಿಮ್ಮಾಪ್ಪಾನ ಕೇಳಮ್ಮ ಕುದುರೇಯ ॥

ಪಟ್ಟಿಸೀರೆಯುಟ್ಟೀನು ಸೋಗಲತುಂಬೀನು
ದಪ್ಪಮರಳಲ್ಲಿ ನಡೆದ್ದೀನು । ತಾಯಮ್ಮ
ನಮ್ಮಪ್ಪಾನ ಮನೇಲಿ ಕುದುರಿಲ್ಲಾ ॥

ಹಾಲಿನಗಡಿಗೆ ಅವರಪ್ಪಾನು ಇಡಿಕೊಂಡು
ಇನ್ನೇನೆ ಮಗಳೆ ಎರವಾದೆ । ಆವೂರ
ರಾಯಾರ ಮನೆಗೆ ಸೊಸೆಯಾದೆ ॥

ತುಪ್ಪಾದ ಗಡಿಗೆ ಅವರಪ್ಪಾನು ಇಡಿಕೊಂಡು
ಇನ್ನೇನೆ ಕಂದ ಎರವಾದೆ । ಆವೂರ
ಶೆಟ್ಟಿಯೋರ ಮನೆಗೆ ಸೊಸೆಯಾದೆ ॥

ಎಣ್ಣೇಯಗಡಿಗೆ ಅವರಣ್ಣಯ್ಯ ಹಿಡಿಕೊಂಡು
ಇನ್ನೇನೆ ತಂಗೆ ಎರವಾದೆ । ಆವೂರ
ಗೌಡಾನ ಮನೆಗೆ ಸೊಸೆಯಾದೆ ॥

ಹಸೆಮೇಲೆ ಕುಂತುಕೊಂಡು ಹಸಿಯೇನ ನೋಡೀಯೊ
ಹಸಿಯೋಳ ನೋಡೊ ಬಲಗಾಡೆ । ಮದುವಣ್ಣ
ಹಸಿಯಡಿಕೆ ಕೊಡೊ ನಿಜದಿಂದಾ ॥

ಮಣೆಮೇಲೆ ಕೂತುಕೊಂಡು ಮಣೆಯೇನ ನೋಡೀಯೊ
ಮಾನ್ಯವಳ ನೋಡೊ ಬಲಗಾಡೆ । ಮದುವಣ್ಣ
ಕಳಿಯಡಕೆ ಕೊಡೊ ನಿಜದಿಂದಾ ॥

ಹಿಟ್ಟಿಟ್ಟು ಹಾಕಿ ಬೆಟ್ಟದುದ್ದಕೆ ಬಿದ್ದು
ಕುಟ್ಟಕ್ಕಿ ನಂದನ ಘೆನವಾದೊ । ಅಮ್ಮ ನಿಮ್ಮ
ಪುತ್ರಗಿಟ್ಟೀವು ತಿರುಸಾಸ್ವೆ ॥

ಹಾಕಿಹಾಕಿದ ಅಕ್ಕಿ ರಾಶಿ ಉದ್ದಕೆ ಬಿದ್ದೊ
ಕ್ಯಾಸಕ್ಕಿ ನಂದನ ಘೆನವಾದೊ । ಅಮ್ಮ ನಿಮ್ಮ
ಬಾಲಾಗೆ ಇಟ್ಟೀವು ತಿರುಸಾಸ್ವೆ ॥


ಆರುಸಾವಿರ ಹೊನ್ನು ಆನೆ ಮೇಲೇರಿಕೊಂಡು
ರಾಯ ತಿರುಗ್ಯಾನೆ ಮಲೆನಾಡ । ಹೆರಗನಹಳ್ಳಿ
ರಾಜ್ಯೇವ್ದ ದಲ್ಲಿತ್ತೊಂದರಗಿಣಿ ॥

ಹತ್ತು ಸಾವಿರ ಹೊನ್ನು ಎತ್ತೀನನೇಲೇರಿಕೊಂಡು
ಶೆಟ್ಟ ತಿರುಗ್ಯಾನೆ ಮಲೆನಾಡ । ಹೆರಗನಹಳ್ಳಿ
ಉಪ್ಪರಿಗೆಯಲ್ಲಿತ್ತೊಂದರಗಿಣಿ ॥

ತಿರುಗಿದನೆಣ್ಣೆ ತಿರುಗೇಳು ಲೋಕಾವ
ತಿರುಗ ಬಾಗೂರ ಬರಗೀನ । ಬಾರೇಯಮೇಲೆ
ತಿರುಗಿದನೆಣ್ಣೆ ನಿನಗಾಗಿ....॥

ಸುತ್ತಿದನೆಣ್ಣೆ ಸುತ್ತೇಳು ಲೋಕಾವ
ಸುತ್ತ ಬಾಗೂರ ಬರಗೀನ । ಬಾರೇಯಮೇಲೆ
ಸುತ್ತಿದನೆಣ್ಣೆ ನಿನಗಾಗಿ....॥

ಒಂದಕ್ಕಿನಿಟ್ಟೀವೆ ನಂಧಿಗಡಕೀನ ಮಗನಾಗಲೆಂದು
ಎರಡಕ್ಕಿನಿಟ್ಟೀವೆ ಎರಡುಸೇರಿ ಬಡಸ್ತಾನ ಬರಬಾರದೆಂದು
ಮೂರಕ್ಕೆ ಇಟ್ಟೀವೆ ಮುತ್ತೈದೆಸ್ಥಾನ ತಿರುಗಲೆಂದು
ನಾಕಕ್ಕೆ ಇಟ್ಟೀವೆ ನಾಕಾರ ಸರಿಯ ಬದುಕಾಗಲೆಂದು
ಐದಕ್ಕೆ ಇಟ್ಟೀವೆ ಸೈಕಾಣಿ ಮಗನಾಗಲೆಂದು
ಆರಕ್ಕೆ ಇಟ್ಟೀವೆ ನಂಧಿ ಗಡುಕೀನ ಮಗನಾಗಲೆಂದು
ಏಳಕ್ಕೆ ಇಟ್ಟೀವೆ ಬೆಳೆದ ಬದುಕು ಕೈಸೇರಲೆಂದು
ಎಂಟಕ್ಕೆ ಇಟ್ಟೀವೆ ಕಂಟೆ ಸೈಕಾಣೆ ಮಗನಾಗಲೆಂದು
ಒಂಬತ್ತಕ್ಕೆ ಇಟ್ಟೀವೆ ತುಂಬಿದ ಮನೆಗೆ ಸೊಸೆಯಾಗಲೆಂದು
ಹತ್ತಕ್ಕೆ ಇಟ್ಟೀವೆ ಮುಪ್ಪೀನ ಮುತ್ತೈದೆ ತಿರುವಾಗಲೆಂದು
ಪಾಂಡವ ಮಕ್ಕಳಿಗೆ ಪಟ್ಟಕಟ್ಟಿದೆ ಸೋಭಾನ ಸೋಭಾನ ।



ಮರೆಯಾದ ಮಲಕವ್ವ

ಅವಳ ಇರುವಾಗ ಕಡಿದಾನು ದೇವಣ್ಣ ಸುವ್ವಲಾಲೀ
ಅವಳ ಮುಂಡ ಬಿದ್ದು ತಾವ ಸುವ್ವಲಾಲೀ
ಅದು ಮಲ್ಲಿಗೆ ವನವಾದೊ ಸುವ್ವಲಾಲೀ ।

.....ಅನೇಕ ಹೆಂಗಸರ ಹಾಡುಗಳೂ, ಎದೆಗರಗಿಸುವ ಕರುಣಕಥೆಗಳೂ ಧಾರ್ಮಿಕ ಭಾವಗೀತೆಗಳೂ ಇವೆ. ಇವೆಲ್ಲಾ ಸಮಾಜದ ಜೀವನ, ಭಾವನೆ ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತಿವೆ.....

—ದಿವಂಗತ ಶ್ರೀ ಬಿ. ಎಂ. ಶ್ರೀಕಂಠಯ್ಯ

ಮರೆಯಾದ ಮಲಕವ್ವ*

ಸುವ್ವೀ ಸುವ್ವಲಾಲೀ ಸುವ್ವಲಾಲೀ
ಈರವ್ವ ಮಲಕವ್ವ ,,
ಅವರು ನೀರಿಗೆ ಹೋದಾರೆ ,,
ಅವಳು ಈರವ್ವ ಬಂದಾಳೆ ,,
ಅವಳು ಮಲಕವ್ವ ಬರಲಿಲ್ಲಾ ,,
ಈರವ್ವ ಹೇಳ್ಯಾಳೆ ,,
ಹೊಲ ಉಳುತಿದ್ದ ದೇವಣ್ಣಾಗೆ,,
ಅವಳು ಆಳನೆ ಕಳಿವಾಳೆ ,,
ಹೊಲ ಉಳುತ್ತಿದ್ದ ದೇವಣ್ಣ ,,
ಅವನಿಡಿದಿದ್ದ ಮಳೆಕೋಲ ,,
ಅವನು ನಡುಮನೆಗೆ ಎಸೆದಾನೆ,,
ತಾಯಿ ನೀರು ಕೊಡವ್ವ ,,
ತಂಗೆ ನೀರು ಕೊಡವ್ವ ,,
ಅಂಗಂದ ಮಾತಿಗೆ ,,
ಅವಳು ಈರವ್ವ ನೀರನೆ ,,
ನೀನು ನೀರು ಕೊಡುವಕ್ಕೆ ,,
ನನ ತಂಗಿ ಎಲ್ಲಿಗೋದ್ಲು ,,
ನನ ತಂಗಿ ಎಲ್ಲಿಗೋದ್ಲು ಮಲಕವ್ವ ಸುವ್ವಲಾಲೀ
ನಿನ ತಂಗಿ ಮಲಕವ್ವ ,,
ತುರುಕರ ಸಂಗಮಾಡಿ ,,
ಒಂದು ಕೋವಿನಾಸ್ಯವರೆ • ,,

---

*ಈ ಹಾಡುಗಳನ್ನು ಹಳ್ಳಿಯ ಹೆಂಗಸರು ಬೇಸಿಗೆಯ ರಾತ್ರಿಯ ಕಾಲದಲ್ಲೂ, ಗದ್ದೆಗಳಲ್ಲಿ ನಾಟಿ ಹಾಕುವಾಗಲೂ ನಾಟಿ ಕೀಳುವಾಗಲೂ, ಹಾಡುವ ಹಾಡುಗಳಿವು.

ಒಂದು ಕೋವಿನೊದ್ದವರೆ ಸುವ್ವಲಾಲೀ
ನಾವು ಮನುಗೋ ಚಿಕ್ಕಮಲ್ಲಿ,,
ಮಲಕವ್ವ ಮನಿಗ್ಯವರೆ ,,
ನಾವು ಮನ್ಗೊ ಚಿಕ್ಕಮಲ್ಲಿ ,,
ಆವರು ಮನಿಗ್ಯವರೆ ಅಂತಾವ ,,
ಅಂಗಂಥ ಹೇಳ್ಯಾಳೆ ,,
ಅಂಗಂದ ಮಾತಿಗೆ ,,
ಅವನು ಕೋಪಾವ ತಾಳ್ಯವನೆ,,
ನನ ತಂಗಿ ಮಲಕವ್ವ ,,
ನಿಮ್ಮ ಮಾವಾನೆ ಬಂದಿದ್ದ ,,
ಇವತ್ತಿ ಗೆಂಟುದಿನಕೆ ,,
ಹೊಸಮನೆ ಹುಗ್ಗಿಯಂತೆ ,,
ನಡಿಯವ್ವ ಹೋಗಾನ ,,
ಹೋಗನೆಂದಾನೆ ದೇವಣ್ಣ ,,
ತೆಗೆದಿದ್ದ ಆಭರಣಾವ ,,
ಎಲ್ಲಾನು ಇಕ್ಕವ್ವ ,,
ಒಕ್ಕಲಿಗರ ಕೇರಿಗೆ ,,
ಅವಳು ಹೋದಾಳೆ ಮಲಕವ್ವ,,
ಒಕ್ಕಲಿಗರ ಅಕ್ಕಯ್ಯದೀರಾ ,,
ನಾನು ಹೋಗಿ ಬರುತ್ತೀನಮ್ಮಯ್ಯ ಸುವ್ವಲಾಲೀ
ಹೋಗಿ ಬಾ ಮಲಕವ್ವ ,,
ಇನ್ನೆರಡು ವರುಷಕ್ಕೆ ,,
ಒಂದುಗಂಡು ಒಂದುಹೆಣ್ಣು ,,
ಆ ಗಂಡು ನಗಿಯಾಲಿ ,,
ಆ ಹೆಣ್ಣು ನಡಿಯಾಲಿ ,,
ಬ್ರಾಹ್ಮಣರ ಕೇರಿಗೆ ಹೋದಾಳೆ ಸುವ್ವಲಾಲೀ

ಅವಳು ಮಲಕವ್ವ ಹೋದಾಳೆ ಸುವ್ವಲಾಲೀ
ಹಾರುವ್ರ ಅಕ್ಕದೀರೆ ,,
ನಾನ್ಹೋಗಿ ಬರುತ್ತೀನಿ ,,
ಹೋಗಿ ಬಾ ಮಲಕವ್ವ ,,
ನೀ ಬಾಗಿ ಬಾ ಮಲಕವ್ವ ,,
ಇನ್ನೆರಡು ವರುಷಕ್ಕೆ ,,
ಒಂದುಗಂಡು ಒಂದುಹೆಣ್ಣು ,,
ಆ ಗಂಡು ನಗಿಯಾಲಿ ,,
ಆ ಹೆಣ್ಣು ನಡಿಯಾಲಿ ,,
ಮುಂದೆ ಮುಂದೆ ದೇವಣ್ಣ ,,
ಹಿಂದೆ ಹಿಂದೆ ಮಲಕವ್ವ ,,
ಆರಂದ ಅಡವೀಗೆ ,,
ಗೋರಂದ ಗುಂಡೀಗೆ ,,
ಅವರು ಗೋರಂದ ಗುಂಡೀಗೆ ,,
ಒಂದು ಊರು ಸಿಕ್ಕಲಿಲ್ಲ ,,
ಒಂದು ಕೇರಿ ಸಿಕ್ಕಲಿಲ್ಲ ,,
ಇಲ್ಲೆ ಕೂರನಣ್ಣಯ್ಯ ,,
ಅವಳು ಮಲಕವ್ವ ಅಂದಾಳೆ ,,
ಅಲ್ಲೆ ಕೂತುಕೊಂಡ್ರು ,,
ಅವರು ಬುತ್ತಿ ಅನ್ನವುಂಡ್ರು ,,
ಬುತ್ತಿ ಅನ್ನ ಉಣ್ಣುವಾಗ ,,
ಒಂದು ತುತ್ತು ಕೈಲಿ ,,
ಒಂದು ತುತ್ತು ಬಾಯ್ಲಿ ,,
ಅವಳ ಒಂದು ತುತ್ತು ಬಾಯಲಿ ಸುವ್ವಲಾಲೀ
ಅವಳ ಇರುವಾಗ ಕಡಿದಾನು ದೇವಣ್ಣ ಸುವ್ವಲಾಲೀ
ಅವಳ ಮುಂಡ ಬಿದ್ದುತಾವ ,,

ಅದು ಮಲ್ಲಿಗೆ ವನವಾದೊ ಸುವ್ವಲಾಲೀ
ತಲೆಯು ಬಿದ್ದುತಾವ ,,
ಅದು ತಾಳೀಯ ವನವಾದೊ ,,
ಹೂವ ಮುಟ್ಟಬೇಡ ದುಸುಮಾನ,,
ಹೂವ ಮುಡಿಯಬೇಡ ದುಸುಮಾನ ಸುವ್ವಲಾಲೀ
ಒಂದೊಂದೆ ಹೊಂಬು ಕೂದು ನೊಂದನಲ್ಲೊ ಸುವ್ವಲಾಲೀ
ಬೇಸಿಗೆ ಬಿಸಿಲಲ್ಲಿ ನಾನು ಬೆಂದನಲ್ಲೊ ಸುವ್ವಲಾಲೀ
ಸುಮ್ಮಾನೆ ತಲೆಹೂದೆ ದುಸುಮಾನ ಸುವ್ವಲಾಲೀ
ನನ್ನ ಸುಮ್ಮಾನೆ ತಲೆಹೂದೆ ದುಸುಮಾನ ಸುವ್ವಲಾಲೀ
ಹೂವ ಮುಟ್ಟಬೇಡ ದಸುಮಾನ ಸುವ್ವಲಾಲೀ
ನೀನು ಹೂವ ಮುಡಿಯಬೇಡ ದುಸುಮಾನ ಸುವ್ವಲಾಲೀ



ಇರೋಬಿ

ಬಾಣಾತಿ ಇರೋಬಿ ಬಟ್ಟಲಲಿ ಉಣ್ಣು ತಾಳೆಂದೂ
ಘಟ್ಟಾದ ಕೆಳಗಾಲ ಅರಿವಾಣ । ತರ್ಹೋಕೋಗಿ
ಗಂಡಸತ್ತ ಸುದ್ದಿ ಅರಿಯಾಳೆ ॥

...ಬಾಳನ್ನು ತಿದ್ದುವ ಈ ಸಾಹಿತ್ಯ ಅನೂಚೀನವಾಗಿ ಬೆಳೆದು ಬಂದಿದೆ. ಜೀವನದ ಹೋರಾಟ ಇಷ್ಟು ಪ್ರಬಲವಾಗಿ ಇರದೆ ಇದ್ದಿದ್ದರೆ ಈಗಲೂ ಆ ಸಾಹಿತ್ಯದ ಕುಡಿಗಳು ಚಿಗುರುತ್ತಿದ್ದುವೆಂಬುದರಲ್ಲಿ ಸಂದೇಹವಿಲ್ಲ...

—ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್

ಇರೋಬಿ*

ಕೋಳಿ ಕೂಗೀದೊ ಮೂಡು ಕೆಂಪೇರೀದೊ
ಏಳೆ ಇರೋಬಿ ಬೆಳಗಾದೋ । ನಿನ್ನಟ್ಟ
ಕೀಲಾದರೆಮ್ಮೆ ಕರುವುಂಡೋ ॥

ಕೀಲಾದರಟ್ಟೀಗೆ ಕಾಲೆಲ್ಲಾ ಸರಪಾಣಿ
ದಾವಾಣಿ ಮೆಟ್ಟಾಲ ಕರೆಯೋಳೆ । (ಕರೆಯೊ) ಇರೋಬಿ
ದಾವಾಣಿಮೆಟ್ಟಾಲ ಕರೆಯೋಳೆ ।

ಅಕ್ಕ ಇರೋಬಿ ಕೊಪ್ಪೀನ ಬೆಳಕೀಗೆ
ತಿಪ್ಪೂರ ಹುಲ್ಲೆ ಬೆದರೀದೊ । (ಬೆದರಿ) ಬೆಟ್ಟವಸೇರಿ
ಅವಳಾರ ದಿಸಲ ಮೇವ ತಡೆದಾವೋ ।

ತಾಯಿ ಇರೋಬಿ ವಾಲೇಯ ಬೆಳಕೀಗೆ
ಎಂಟಿಮ್ಮೆ ಬೆದರೀದೊ । (ಬೆದರಿ) ಬೆಟ್ಟವಸೇರಿ
ಎಂಟು ದಿಸಲ ಮೇವ ಮರೆತಾವೋ ।

. . . . . .

ಬಾಣಾತಿ ಇರೋಬಿ ಬಟ್ಟಲಲಿ ಉಣ್ಣುತಾಳೆಂದೂ
ಘಟ್ಟಾದ ಕೆಳಗಾಲ ಅರಿವಾಣ । ತರೋಕ್ಹೋಗಿ
ಗಂಡ ಸತ್ತ ಸುದ್ದಿ ಅರಿಯಾಳೆ ॥

ಮಡದಿ ಇರೋಬಿ ತಣಿಗ್ಹೋಲಿ ಉಂಬೋಳೆಂದೂ
ಘಟ್ಟಾದ ಕೆಳಗಾಲ ಅರಿವಾಣ । ತರೋಕ್ಹೋಗಿ
ಮನಗಿದ್ದ ವ್ಯಾಗ್ರಾನ ಕೆಣಕೀನ । ಕಾರಣದಿಂದ
ಕಾಲವಾದ ಕಾಲ ಘಳಿಗೇಲಿ ॥

---

*ಇರೋಬಿ ಕುರಿತ ಈ ಹಾಡುಗಳನ್ನು ಹಳ್ಳಿಯಲ್ಲಿ ಹೆಂಗಸರು ರಾಗೀ ಬೀಸುವಾಗಲೂ, ಮನೆ ಕೆಲಸ ಮಾಡುವಾಗಲೂ ಹಾಡುತ್ತಾರೆ.

ತಾಯಿ ಇರೋಬಿ ತಣಿಗ್ಹೋಲಿ ಉಣ್ಣುತಾಳೆಂದೂ
ಬೆಟ್ಟಾದ ಕೆಳಗಾಲ ಅರಿವಾಣ । ತರ್ಹೋಕೋಗಿ
ಸುಮ್ನಿದ್ದ ವ್ಯಾಗ್ರಾನ ಕೆಣಕೀದ । ಕಾರಣದಿಂದ
ಕಾಲವಾದ ಕಾಲ ಫಳಿಗೇಲಿ ॥

ಬೆಟ್ಟದೊತ್ತೀಲಿ ಹಿಂಡೆಮ್ಮೆ ಕಾಯೋಳೆ
ಗಂಡಾನ ಸುದ್ದಿ ಫನವಾದೋ ಇರೋಬಿ....ನಿನ್ನ
ಗಂಡಾನ ಸುದ್ದಿ ಫನವಾದೋ ।

ಗಂಡ ಸತ್ತಸುದ್ದಿ ಬರಲಿ ರಕ್ತಾದ ಪಾವಾಡ ಬರಲೀ
ಕೆತ್ತೂಳಿ ಬರಲಿ ಗುರುತೀಗೆ । (ಗುರುತು) ಒಪ್ಪೊತ್ತೀಗೆ
ನಾ ಕೊಂಡ ತೆಗಿಸ್ಹೋನು ॥

ಗಂಡ ಸತ್ತಸುದ್ದಿ ಬಂದೋ ರಕ್ತಾದ ಪಾವಾಡ ಬಂದೋ
ಕೆತ್ತೂಳಿ ಬಂದೊ ಗುರುತೀಗೆ । (ಗುರುತು) ಈವ್ಹೂರಲಿ
ನೀ ಒಪ್ಪತ್ತಿಗೆ ಕೊಂಡ ತೆಗಿಸ್ಹೋಳೆ ॥

ಆಲಾದಮರಕೆ ಮೇಲ್ಹುತ್ತಿ ಕಡಿಯ್ಹೋನೆ
ಇನ್ನೊಂದು ಕೊನೆ ಮಿಗಿಲಾಗಿ । ಕಡಿದಾರೆ
ನಿನಗೆ ಪುತ್ರ ಸಂತಾನ ದೊರಕಾಲೀ ॥

ಹತ್ತೀಯ ಮರಕೆ ಮೇಲ್ಹುತ್ತಿ ಕಡಿಯ್ಹೋನೆ
ಇನ್ನೊಂದು ಕೊನೆ ಮಿಗಿಲಾಗಿ । ಕಡಿದಾರೆ
ನಿನಗೆ ಪುತ್ರ ಸಂತಾನ ದೊರಕಾಲೀ ॥

ಕೊಂಡಾಕೆ ಸೌದೆ ಎಳಿಯೊ ಇರೋಬಿ
ಚೆಂದಾವ ನೋಡೀರಿ ಮಕ್ಕಡನ್ಹಾಕಿ....ಮಕರಂಬೊ
ಮಕ್ಕಡನ್ಹಾಕಿ ಮಕರಂಬೊ ।

ಕಟ್ಟಗೆ ಸೌದೆ ಎಳಿಯೊ ಇರೋಬಿ
ಜೆಂಡಾವ ನೋಡೀರಿ....ಮುಕ್ಕಡನಾಕಿ....ಮುಕರಂಬೊ ।
ಮುಕ್ಕಡನಾಕಿ ಮುಕರಂಬೊ ।

. . . . . .

ಮೂಗೂತಿ ಮುರಿಯೋದ ಕಂಡಿ ಮುಂಗೊಳ್ಳಿಡಿಯೋದ
ಕಂಡೆಕಾಣಕ್ಕ ಕಡಿಸ್ಪಪ್ಪ । ದಡಿಸ್ಪಪ್ಪ [ಕಂಡಿ
ಬಾರ್ಹೋಯ ಮೇಲೆ ಯಮದಂಡ ॥

ತುಪ್ಪ ತಕ್ಕೊಂಡು ನಮ್ಮಾಪ್ಪಾನ ಬರಹೇಳಿ
ತುಪ್ಪಕೂ ಮೇಲಾದ ಜೇನುತುಪ್ಪ । ತಕ್ಕೊಂಡು
ನಮ್ಮಪ್ಪನೋಗಯ್ನ ಬರಹೇಳಿ ॥

ಹಾಲು ತಕ್ಕೊಂಡು ತಾಯವ್ನ ಬರಹೇಳಿ
ಹಾಲೀಗೂ ಮೇಲಾದ ಎದೆಹಾಲ । ತಕ್ಕೊಂಡು
ನಮ ತಾಯಿ ಓಬವ್ನ ಬರಹೇಳಿ ॥

ಅಕ್ಕಿ ತಕ್ಕೊಂಡು ನಮ್ಮಕ್ಕಾನ ಬರಹೇಳಿ
ಅಕ್ಕೀಗೆ ಬೇಕಾದ ಅವಲಕ್ಕಿ । ತಕ್ಕೊಂಡು
ನಮ್ಮಕ್ಕ ನಾಗವ್ನ ಬರಹೇಳಿ ॥

ಹಣ್ಣು ತಕ್ಕೊಂಡು ನಮ್ಮಣ್ಣಯ್ನ ಬರಹೇಳಿ
ಹಣ್ಣೀಗೆ ಮೇಲಾದ ಹಳಸೀನಹಣ್ಣ । ತಕ್ಕೊಂಡು
ನಮ್ಮಣ್ಣ ನೋಗಪ್ಪ ಬರಹೇಳಿ ॥

ಉಪ್ಪರಿಕೆ ಉಪ್ಪರಿಕೆ ಮೂರಂತಿನ ಉಪ್ಪರಿಕೆ
ಉಪ್ಪರಿಕೆ ಮೇಲೆ ಒರಗಿರ್ವೊ । ಇರೋಬಿ
ನಿಮ್ಮವ್ವ ಬಂದವಳೆ ದ್ವನಿ ತೋರೆ ॥

ಅವ್ವ ಬಂದವಳೆ ಹಾಲನು ತಂದವಳೆ
ಹಾಲಿಗಿಂತ ಮೇಲಾದ ಎದೆಹಾಲ । ತಕ್ಕೊಂಡು
ನಿಮ್ಮವ್ವ ಬಂದವಳೆ ದ್ವನಿ ತೋರೆ ॥

ಅವ್ವ ಬಂದರೆ ಬರಲಿ ಹಾಲು ತಂದರೆ ತರಲಿ
ನನ್ನ ಅಂದುಳ್ಳಿ ಬದುಕು ಅಡವ್ಹೀಲಿ । ಈಡಾಡುವಾಗ
ನಮ್ಮ ತಾಯವ್ನ ಒಡಬೆ ನನಗ್ಹೇನು ॥

ಉಪ್ಪರಿಕೆ ಉಪ್ಪರಿಕೆ ಐದಂತಿನುಪ್ಪರಿಕೆ
ಉಪ್ಪರಿಕೆ ಮೇಲೆ ಒರಗಿರ್ವೊ । ಇರೋಬಿ
ನಿಮ್ಮಪ್ಪ ಬಂದವನೆ ದ್ವನಿ ತೋರೇ ॥

ಅಪ್ಪಬಂದರೆ ಬರಲಿ ತುಪ್ಪತಂದರೆತರಲಿ
ಹಾಲಿನಂತ ಬಾಳು ಅಡವ್ಹೀಲಿ । ಈಡಾಡುವಾಗ
ನಮ್ಮಪ್ಪಾನ ಒಡವೆ ನನಗ್ಹೇನು ॥

ತೂಗು ಮಂಚದ ಮೇಲೆ ತೂಗುನಾಡುವ ಇರೋಬಿ
ದುಃಖಮಾಡುವ ಇರೋಬಿ । ನಿಮ್ಮಣ್ಣ
ನೋಗಪ್ಪ ಬಂದವನೆ ನೀ ದ್ವನಿ ತೋರೆ ॥

ಅಣ್ಣ ಬಂದವರೆ ಹಣ್ಣು ತಂದವರೆ
ಹಣ್ಣಿಗಿಂತ ಮೇಲಾದ ಮಾವಿನಣ್ಣು । ನಿಮ್ಮಣ್ಣ
ತಂದವನೆ ನೀ ದ್ವನಿ ತೋರೇ'॥

ಅಣ್ಣ ಬಂದರೆ ಬರಲಿ ಹಣ್ಣು ತಂದರೆ ತರಲಿ
ನನ್ನ ಜೆಂದುಳ್ಳಿ ಬದುಕು ಅಡವ್ಹೀಲಿ । ಈಡಾಡುವಾಗ
ನಮ್ಮಣ್ಣಾನ ಒಡವೆ ನಮಗ್ಹೇನು ॥

ತೂಗು ಮುಂಚದ ಮೇಲೆ ತೂಗುನಾಡುವ ಇರೋಬಿ
ದುಃಖ ಮಾಡೂವ ಇರೋಬಿ । ನಿಮ್ಮಕ್ಕ
ಬಂದವಳೆ ನೀ ದ್ವನಿ ತೋರೆ ॥

ಅಕ್ಕ ಬಂದವಳೆ ಅಕ್ಕಿ ತಂದವಳೆ
ಅಕ್ಕೀಗೆ ಮೇಲಾದ ಅವಲಕ್ಕಿ । ನಿಮ್ಮಕ್ಕ
ತಂದವಳೆ ನೀ ದ್ವನಿ ತೋರೆ ॥

ಅಕ್ಕ ಬಂದರೆ ಬರಲಿ ಅಕ್ಕಿ ತಂದರೆ ತರಲಿ
ನನ್ನ ಅಂದಾದ ಸತಿ ಅಡವ್ಹೀಲಿ । ಈಡಾಡುವಾಗ
ನಮ್ಮಕ್ಕನ ಒಡವೆ ನನಗ್ಹೀನು ॥

ತೂಗು ಮುಂಚದ ಮೇಲೆ ತೂಗುನಾಡುವ ಇರೋಬಿ
ದುಃಖಮಾಡುವ ಇರೋಬಿ । ನಿನ ತಮ್ಮ
ಬಂದವನೆ ನೀ ದ್ವನಿ ತೋರೆ ॥

ತಮ್ಮ ಬಂದವನೆ ಎಳನೀರು ತಂದವನೆ
ಎಳನೀರಿಗಿಂತ ಮಿಗಿಲಾದ ಕೆಂದಂಗಿನೆಳನೀರು । ನಿನ ತಮ್ಮ
ತಂದವನೆ ನೀ ದ್ವನಿ ತೋರೆ ॥

ತಮ್ಮ ಬಂದರೆ ಬರಲಿ ಎಳನೀರು ತಂದರೆ ತರಲಿ
ನನ್ನ ಪ್ರಾಣದ ಬದುಕು ಅಡವ್ಹೀಲಿ । ಈಡಾಡುವಾಗ
ತಮ್ಮಾನ ಒಡವೆ ನನಗ್ಹೀನು ॥

. . . . . .

(ಈ ಗೀತೆ ಅಪೂರ್ಣವಾಗಿದೆ)

ಗಿರಿಜಾ-ಮಲ್ಲಯ್ಯ

ಅರಸಿ ಹುಟ್ಟಿದ ಸುದ್ದಿ ಹರೆಯ ಮಲ್ಲಯ್ಯ ಕೇಳಿ
ಹರೆವುದ್ದ ಹೊನ್ನ ಆಕೆಕೊಂಡು । ಸುರಿಕೊಂಡು
ಅರಸಿ ಪಾರ್ವತಿಯ ಕೊಡಿ ನಮಗೆ ॥

.....ಹೃದಯದಿಂದ ಹೊರಹೊಮ್ಮಿದ ವಿಚಾರಗಳನ್ನು ಅಳವಡಿಸಿಕೊಂಡ ಸುಲಭವೂ ಸರಳವೂ ಲಲಿತವೂ ಆದ ಭಾಷೆಯಲ್ಲಿ ಇತಿಹಾಸ ಪುರಾಣಗಳನ್ನೂ ಜಾನಪದ ಗೀತಗಳನ್ನೂ ಕಾಣಬಹುದು. ಇವೆರಡುಗಳಿಗೂ ಮೂಲವೆಂದರೆ ವೇದದಲ್ಲಿ ಕಂಡುಬರುವ ಗಾನಪ್ರಧಾನವಾದ ಹಾಡುಗಳು. ಇವಾವರೂ ಕೃತ್ರಿಮತೆಯಿಲ್ಲದ ಭಾಷೆಯಲ್ಲಿ ಋಷಿಗಳ ಹೃದಯದಿಂದ ಹೊರಹೊಮ್ಮಿವೆ. "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್"—ವೇದಾರ್ಥವನ್ನು ಇತಿಹಾಸ ಪುರಾಣಗಳ ಕಥೆಗಳಿಂದ ಸದೃಷ್ಟಾಂತವಾಗಿ ತಿಳಿದುಕೊಳ್ಳಬೇಕೆಂದು ಪ್ರಾಜ್ಞರು ಹೇಳುವುದುಂಟು. ಆದೇ ರೀತಿಯಿಂದ ಜನರ ಹೃದಯದಲ್ಲಿ ಮೂಡಿ ಹೊರಹೊಂಟಿರುವ ಜಾನಪದ ಗೀತಗಳು ಶಾಶ್ವತವಾದ ವೈದಿಕ ತತ್ವಗಳ ಮೇಲೆ ಟೀಕೆ ಟಿಪ್ಪಣಿಗಳಿದ್ದಂತೆಯೆಂದು ಒಂದು ದೃಷ್ಟಿಯಿಂದ ಹೇಳಬಹುದು.....

—ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ.ಎ.

ಗಿರಿಜಾ-ಮಲ್ಲಯ್ಯ*

ಹಂಡೇಲಿ ಅರಿಷಾಣ ಗಿಂಡೀಲಿ ಸೀಗೆಕಾಯಿ
ದುಂಡಿ ನೀಲಮ್ಮ ಸುಳಿನೀರು । ಮೀಯುವಾಗ
ಕಂಡಾಳು ಮಲ್ಲಯ್ನ ಕಳಸಾವ....॥

ಕಂಡಾಳು ಮಲ್ಲಯ್ನ ಸೊಪುನಾಪ ನೀಲಮ್ಮ
ಹೆಣ್ಣುಹುಟ್ಟದರೆ ನಿಮಗೊಂದು । ಮಲ್ಲಯ್ಯ
ನಿಮ್ಮ ಲಿಂಗಾಕೆ ಧಾರೆ ಎರೆದೇನು ॥

ಗಿರಿಜೆ ಹುಟ್ಟಿದ ಸುದ್ದೀಯ ಗಿರಿಯ ಮಲ್ಲಯ್ಯ ಕೇಳಿ
ಆಳುದ್ದಹೊನ್ನ ಅಳೆಕೊಂಡು । ಸುರಿಕೊಂಡು
ಗಿರಿಜೆ ಪಾರ್ವತಿಯ ಕೊಡಿ ನಮಗೆ ॥

ಆರಸಿ ಹುಟ್ಟಿದ ಸುದ್ದಿ ಹರೆಯ ಮಲ್ಲಯ್ಯ ಕೇಳಿ
ಹರೆವುದ್ದ ಹೊನ್ನ ಅಳೆಕೊಂಡು । ಸುರಿಕೊಂಡು
ಅರಸಿ ಪಾರ್ವತಿಯ ಕೊಡಿ ನಮಗೆ ॥

ಹೆಣ್ಣು ಕೇಳಾಕೆ ಚೆನ್ನಮಲ್ಲಯ್ಯ ಬಂದ
ಬಣ್ಣದಚ್ಚಡದ ಬಸವಯ್ಯ । ಬಂದಾನೆ
ಈ ಹೆಣ್ಣ ನಮ್ಮಿತಕೆ ಕೊಡಿರೆಂದ ॥

ಕಾವೀಯ ತೊಟ್ಟಾನು ವಿಭೂತಿ ಇಟ್ಟಾನು
ಪುಟ್ಟರುದ್ರಾಕ್ಷಿ ಎದೆತೊಟ್ಟು । ಕೇಳವನೆ
ನೀವು ಗಿರಿಜೇಯ ಗಿರಿಗೆ ಕೊಡಿರಯ್ಯ....॥

---

*ಈ "ಗಿರಿಜಾ-ಮಲ್ಲಯ್ಯ"ನ ಕುರಿತು ಹಳ್ಳಿಯಲ್ಲಿ ಹೆಂಗಸರು ಬೆಳಗಿನ ಜಾವದಲ್ಲಿ ರಾಗಿ ಬೀಸುವಾಗಲೂ, ಪರುಸೆಗಳಲ್ಲೂ, ಜಾತ್ರೆಗಳಲ್ಲೂ ಹಾಡುತ್ತಾರೆ.

ಗಿರಿಜೇಯಗಿರಿಗೆ ಕೊಡುವಾಕೆ ಅತ್ತಿಲ್ಲಾ ಮಾವಿಲ್ಲಾ
ಚಿಕ್ಕ ಮೈದಾರು ಮೊದಲಿಲ್ಲಾ । ಮುಲ್ಲಯ್ಯ
ನಾವು ಗಿರಿಜೇಯ ಗಿರಿಗೆ ಕೊಡಲೊಲ್ಲೊ....॥

ಅತ್ತೆ ಮಾವಂದಿರುಂಟು ಚಿಕ್ಕವೈದಾರು ಮೊದಲುಂಟು
ಚಿಕ್ಕ ವೈದಾರು ಮೊದಲುಂಟು । ಮಾವಯ್ಯ
ನೀವು ಗಿರಿಜೇಯ ಗಿರಿಗೆ ಕೊಡಿರಯ್ಯ....।

ಗಿರಿಜಮ್ಮರಪ್ಪ ಗಿರಿರಾಜ ಏನಂದಾನೆ
ಗಿರಿದೂರ ಗಿರಿಜೆ ಕೊಡೊದಿಲ್ಲಾ । ನಾನು
ಗಿರಿದೂರ ಗಿರಿಜೆ ಕೊಡೊದಿಲ್ಲಾ....।

ಒಕ್ಕಾಳ ಕುಯಿಲಿಲ್ಲಾ ಸುತುಗವೆ ಕಳಿಲಿಲ್ಲಾ
ಗಿರಿಜೆ ನಿಮ್ಮಗಿರಿಗೆ ಕೊಡೊದಿಲ್ಲಾ...ನಾನು
ಗಿರಿಜೆ ನಿಮ್ಮ ಗಿರಿಗೆ ಕೊಡೊದಿಲ್ಲಾ....॥

ಒಕ್ಕಾಳ ಕುಯಿಬಲ್ಲೊ ಸೂತುಗವೆ ಕಳಿಬಲ್ಲೊ
ನಿಮ್ಮ ಗಿರಿಜೆ ನಮ್ಮ ಗಿರಿಗೆ ಕೊಡುಬನ್ನಿ....ಮಾವಯ್ಯ
ನಿಮ್ಮ ಗಿರಿಜೆ ನಮ್ಮ ಗಿರಿಗೆ ಕೊಡುಬನ್ನಿ ॥

ಕಟ್ಟಿ ಕೆಳಗಾಲ ಪುಟ್ಟಕಣಿಗಲಹೂವೆ
ಹೋಗಿ ಕುಯಿತಾರೆ ಬಸವಯ್ಯ । ನೀವ್ಹೀಗ
ಗಿರಿಜೇಗೆ ಪರಸಾದ ಕೊಡುವ್ಹೀಗ....॥

ಏರೀಯ ಕೆಳಗಾಲ ದಾರ ಕಣಿಗಲಹೂವೆ
ಹೋಗಿ ತತ್ತಾರೊ ಬಸವಯ್ಯ । ನೀವೀಗ
ಗಿರಿಜೇಯ ಸೂತುಗವ ಕಳೆಯೋಕೆ...।

ಹಾಲು ಅನ್ನ ಉಣ್ಣು ಸರಮುತ್ತ ನೀ ಕಟ್ಟು
ಸಾಲು ಮಾಳಿಗೆಯಲ್ಲಿ ಇರುವಂಥ । ಗಿರಿಜೆ
ನಿನ್ನ ಮೂಡಾಲ ರಾಯ್ಗೊಳ್ಗಿ ಕೊಡಬೇಕು....।

ಹಾಲು ಅನ್ನ ಒಲ್ಲೆ ಸರಮುತ್ತ ಕಟ್ಟೊಲ್ಲೆ
ಸಾಲು ಮಾಳಿಗೆಯಲ್ಲಿ ಇರುವೊಲ್ಲೆ । ಮೂಡಾಲ
ರಾಯಾರು ನಮ್ಮ ಅಣ್ಣಾರು....॥

ತುಪ್ಪ ಅನ್ನ ಉಣ್ಣು ಬಟ್ಟು ಮುತ್ತ ನೀ ಕಟ್ಟು
ಪಟ್ಟಿ ಮಾಳಿಗೆಯಲ್ಲಿ ಇರು ಗಿರಿಜೆ । ಮೂಡಾಲ
ಶೆಟ್ಟಿಗೊಳ್ಗಿ ನಿನ್ನ ಕೊಡಬೇಕು....।

ತುಪ್ಪ ಅನ್ನ ಒಲ್ಲೆ ಬಟ್ಟು ಮುತ್ತು ಕಟ್ಟೊಲ್ಲೆ
ಪಟ್ಟಿ ಮಾಳಿಗೆಯಲ್ಲಿ ಇರುವೊಲ್ಲೆ । ಮೂಡಾಲ
ಶೆಟ್ಟಿಗಳು ನಮ್ಮ ಅಣ್ಣಾರು....।

ಹಟ್ಟೀಲಿ ಗಿರಿಜಮ್ಮ ಕುಟ್ಟುತೇನಂದಾಳೆ
ಅಪ್ಪಾಜಿ ನನ್ನ ಕೊಡಬೇಕು । ಗಿರಿಯ
ನೂರೊಂದು ಜಡೆಯ ಶರಣರಿಗೆ....।

ಹಾದೀಲಿ ಅರಸಮ್ಮ ಆಡೂತೇನಂದಾಳೆ
ಅವ್ವಾಜಿ ನನ್ನ ಕೊಡಬೇಕು । ಗಿರಿಯ
ನೂರೊಂದು ಜಡೆಯ ಶರಣರಿಗೆ....॥

ಹಟ್ಟೀಲಿ ಉಟ್ಟೋರು ಕೊಟ್ಟಗೇಲಿ ತಳುಗೋರು
ಅಲದೆಲೆಯಲ್ಲಿ ತಿರುದುಣ್ಣೊ । ಜಂಗುಮರ
ನೀನು ಹೇಗೆ ನೆಚ್ಚೀದೆ ಗಿರಿಜಾಂಬ....॥

ಹಟ್ಟ ನಮಗೆ ಹಾಸೊಕಲ್ಲು ಬೀದಿಯೆ ನಮಗೆ
ಆಲದೆಲೆ ಚಿನ್ನದರಿವಾಣ । ಅಪ್ಪಾಜಿ ಅಂತ
ಶರಣರಿಗೆ ನನ್ನ ಕೊಡುಬನ್ನಿ....।

ಊರೆಲ್ಲಾ ತಿರಿಯೋರು ಹಾದೀಲಿ ತಳುಗೋರು
ಎಕ್ಕದೆಲೆಯಲ್ಲಿ ತಿರುದುಣ್ಣೊ । ಜಂಗುಮಯ್ನ
ನೀನು ಹೇಗೆ ಮೆಚ್ಚೀದೆ ಗಿರಿಜಾಂಬ....।

ಊರೆ ನಮಗೆ ಪಟ್ಟಣ ಹಾದೀಯ ಅರಿವಾಣ ನಮಗೆ
ಅಂತ ಶರಣರಿಗೆ ನನ್ನ ಕೊಡು ಬನ್ನಿ....ಅಪ್ಪಾಜಿ
ಅಂತ ಶರಣರಿಗೆ ನನ್ನ ಕೊಡು ಬನ್ನಿ....।

ಕೊರಳಲ್ಲಿ ರುದ್ರಾಕ್ಷಿ ಕೈಯಲ್ಲಿ ಬಟ್ಟಾಳು
ಹೇಗೆ ಮೆಚ್ಚೀದೆ ಗಿರಿಜಾಂಬ....ನೀನು
ಹೇಗೆ ಮೆಚ್ಚೀದೆ ಗಿರಿಜಾಂಬ....।

ಹವಳಾದ ಅರುಗೋಡೆ ಮುತ್ತೀನ ಮಂಟಪಶಾಲೆ
ರುದ್ರಾಕ್ಷಿ ಬಟ್ಟಾಲೆ ಕೈಲಿಂದ ಕಾಶಿತಾಲಿ । ಅಪ್ಪಾಜಿ
ಅಂತವಂಗೆ ನನ್ನ ಕೊಡುಬನ್ನಿ....।

ಆಕಾಶಂಬೋದು ಇಲ್ಲೀಗೆ ಕಾಣೋದಿಲ್ಲಾ
ನರರಿಲ್ಲಾ ನರರ ಸುಳಿವಿಲ್ಲಾ ।, ಆ ಕೋಟ್ಗೆ
ನೀನೇಗೆ ಮನಸಾದೆ ಗಿರಿಜಾಂಬ....।

ಆಕಾಶ ಎಂಬೋದು ಇಲ್ಲೀಗೂ ಕಾಣುತೈತೆ
ನರಕುಂಟು ನರರ ಸುಳವುಂಟು । ಅಪ್ಪಾಜಿ
ಹ್ಯಾಗಿದ್ರು ನನ್ನ ಕೊಡಬೇಕು....।

ಬಾಯ್ತೆಟ್ಟ ಗಿರಿಜೇಯ ಬಾಯ್ಮೇಲೆ ಹೊಯ್ಸೀರಿ
ಓಲೆ ಬಂಗಾರ ಅಳಿಕೊಳ್ಳಿ । ಗಿರಿಜೇಯ
ನೀವು ಬಾಗ್ಲಿಂದಾಜೇಗೆ ತಳ್ಳೀರಿ॥

ಬಂಗಾರ ಅಳಿದೀರ ಬಾಯ್ಮೇಲೆ ಹೊಯ್ದೀರ
ಬಾಗ್ಲಿಂದಾಜೇಗೆ ತೆಗಳೀರ । ಅಪ್ಪಾಜಿ
ಹುಟ್ಟೀದ ಮನೆ ತಿರುವೀರ....।

ನೀತ್ಗೆಟ್ಟ ಗಿರಿಜೇಯ ಕೆನ್ನೆ ಮೇಲೊಯ್ಸೀರಿ
ಕೊಪ್ಪು ಬಂಗಾರ ಅಳಿಕೊಳ್ಳಿ । ಗಿರಿಜೇಯ
ನೀವು ಹಟ್ಟಿಯಿಂದಾಜೆಗೆ ತಳ್ಳೀರಿ....।

ಕೊಪ್ಪು ಬಂಗಾರ ಅಳಿದೀರ ಕೆನ್ನೆಮೇಲೊಯ್ದೀರಾ
ಹಟ್ಟಿಯಿಂದಾಜೇಗೆ ತೆಗಳೀರ । ಅಪ್ಪಾಜಿ
ಹುಟ್ಟೀದ ಮನೆ ತಿರುವೀರ....।

. . . . . .

ಐಯ್ವಂಕ್ಣದರಮನೆ ಮೇಲೆ ಬೋದಿಗೆ ಸಾಲು
ಉಪ್ಪರಿಗೆಮೇಲೆ ಮಲಗಿರ್ವೆ । ಮಲ್ಲಯ್ಯ
ಓಲೆ ಬಂದಾವೆ ನೀನು ಓದೇಳೊ....।

ಓಲೆ ಬಂದಿದ್ರೆ ನಾಳೆ ಓದಿಕೊಂಡೇನು
ಅತ್ತೀಯ ಮಗಳು ಗಿರಿಜೇಯ । ಕೈಲಿರುವ
ಮುತ್ತಿನುಂಗುರವ ಗೆಲುಬೇಕು....।

(ಕೈಲಾಸದಿಂದ ಮಲ್ಲಯ್ಯನು ಗಿರಿಜೆಯ ಆರಮನೆಯನ್ನು ಹುಡುಕಲು ಬಂದಿದ್ದಾನೆ)

ಹಾದೀಲಿ ಮೇವೊ ಜಾಣಸಾರಗ ಹಿಂಡೆ
ಗ್ಯಾನೀಸ ಮೇವೊ ನವಿಲ್ಹಿಂಡೆ । ಸಾರಗದಿಂಡೆ
ನಮ ಜಾಣೆ ಗಿರಿಜೇಯ ಮಳವೆಲ್ಲಿ....।

ಹಟ್ಟೀಲಿ ಮೇವೊ ಪುಟ್ಟಸಾರಗ ಹಿಂಡೆ
ದಿಟ್ಟೀಸಿ ಮೇವೊ ನವಿಲ್ಹಿಂಡೆ । ಸಾರಗದಿಂಡೆ
ನಮ್ಮ ಪುಟ್ಟಗಿರಿಜೇಯ ಮನೆಯೆಲ್ಲಿ....।

ಹಾದೀಯ ಕಸವ ಹಾರಾಡಿಗುಡಿಸೊ ಹೆಣ್ಣೆ
ಗಿರಿಜೇಯ ಮನೆಯ ನೆಲೆಹೇಳೆ....ನೀನು
ಗಿರಿಜೇಯ ಮನೆಯ ನೆಲೆಹೇಳೆ....।

ಗಿರಿಜೇಯ ಮನೆಯ ನೆಲೆ ಹೇಳಿಕೊಟ್ಟಾರೆ
ನಿನ್ನ ವಾಲೀಗೆ ವಜ್ರ ಬಿಗಿಸೇನು....ನಾನು
ನಿನ್ನ ವಾಲೀಗೆ ವಜ್ರ ಬಿಗಿಸೇನು....।

ಹಟ್ಟೀಯ ಕಸವ ಆಡಿಗುಡಿಸೊ ಹೆಣ್ಣೆ
ಗಿರಿಜೇಯ ಮನೆಯ ನೆಲೆಹೇಳೆ....ನೀನು
ಗಿರಿಜೇಯ ಮನೆಯ ನೆಲೆಹೇಳೆ—।

ಗಿರಿಜೇಯ ಮನೆಯ ನೆಲೆ ಹೇಳಿಕೊಟ್ಟಾರೆ
ನಿನ್ನ ಕೊಪ್ಪೀಗೆ ವಜ್ರ ಕಟ್ಟೀಸ್ಟೇನು....ನಾನು
ನಿನ್ನ ಕೊಪ್ಪೀಗೆ ವಜ್ರ ಕಟ್ಟಿಸ್ಟೇನು....।

ಆಲೆ ಆಡುವಾದು ಗಾಣಾ ತಿರುಗುವಾದು
ಅಲ್ಲಿ ಪಾರಿವಾಳದಕ್ಕಿ ಗರಿ ಬಿಟ್ಟಾಡುವಾದು । ಅದೆ
ಕಾಣೊ ಗಿರಿಜಾಂಬನರಮಾನೆ....।

(ಗಿರಿಜಾದೇವಿ ಕೆರೆಯಲ್ಲಿ ನೀರ ಮೊಗೆಯುತ್ತಿರುವುದನ್ನು ಕಂಡು ಜಂಗುಮಯ್ಯ ತನ್ನ ಜಪವನ್ನೆ ಮರೆತು ಹೇಳುತ್ತಾನೆ)

ಗಿಂಡೀಯ ಅರಬಿಗೆ ಬಿರುದೀನ ವಸ್ತ್ರ ಕಟ್ಟಿ
ಜಲಧೀಲಿ ನೀರ ಮೊಗೆಯೋಳೆ । (ಮೊಗೆಯೊ) ಗಿರಿಜೇಯ
ಮುಖನೋಡಿ ಜಂಗುಮಯ್ಯ ಜಪವ ಮರೆತಾನು....॥

ಅರಬಿ ಬಾಯೀಗೆ ಅಲವಂಗದ ವಸ್ತಾರ
ಚಿಲುಮೇಲಿ ನೀರ ಮೊಗೆಯೋಳೆ । (ಮೊಗೆಯೊ) ಬಾಲೆಯಕಂಡು
ಮಹಾಶಿವನು ಜಪವ ಮರೆತಾನು ॥

ಪಿಲ್ಲಿಕಾಲಿನೋಳ ಜೆಲ್ಲೀದ ನರಿಗೋಳ
ಕಲ್‌ಮೇಲೆ ಕಾಲ ತೊಳೆಯೋಳ । (ತೊಳೆಯೊ)ಗಿರಿಜೇಯ
ಮುಖ ನೋಡಿ ಸಂನ್ಯಾಸಿ ಜಪವ ಮರೆತಾನು ॥

ಜಪವ್ಯಾಕೆ ಮರೆತ್ಹೀರಿ ನನ್ನ ಜಡೆನೂರು ಲಿಂಗಾವೆ
ಅರಳೆ ಬಿಕ್ಷಾಕೆ ತೆರಳೀರಿ । ನೀವು
ಅರಳೆ ಬಿಕ್ಷಾಕೆ ತೆರಳೀರಿ....।

ಅರಳೆ ಬಿಕ್ಷಕೆ ಹೋಗಿ ಮರುಳು ಗೋವಿಂದನಾಗಿ
ಅರುಳೆ ಗಿರಿಜಮ್ಮ ಕೊರಳೀನ । ಪದಕವ ನೋಡಿ
ಬಿಕ್ಷಂಬ ಸೊಲ್ಲ ಮರೆತಾನು....।

ಬಿಕ್ಷಂಬ ಸೊಲ್ಲ ತಟ್ಟನೆ ಗಿರಿಜಮ್ಮ ಕೇಳಿ
ತಟ್ಟಿ ಬಟ್ಟಾಲಲ್ಲಿ ಹಿಡಿಹೊನ್ನು । (ಹಿಡಿಹೊನ್ನ) ತುಂಬಿಕೊಂಡು
ಕೊಟ್ಟಾಳು ಶಿವನೀಗೆ ಬಿಕ್ಷಾವ....।

(ಅಂತು ಇಂತು ಗಿರಿಜೆ–ಮಲ್ಲಯ್ಯನ ಮದ್ವೆಗೆ ಒಪ್ಪಿಗೆ ದೊರೆತು ಮದ್ವೆಗೆ ಸಿದ್ಧತೆ ನಡೆಯಿತು)

ಕಪ್ಪುಮಲ್ಲಯ್ಯಾಗೂ ಒಪ್ಪು ಗಿರಿಜಾಂಬಾಗೂ
ಇಪ್ಪತ್ತು ದೀವಟಿಗೆ ಬೆಳಕಲ್ಲಿ । ಗಿರಿಜಮ್ಮನಿಗೆ
ವಾಲೀಗೆ ವಜ್ರ ಬಿಗಿದಾರು....।

ಸ್ವಾಮಿ ಮಲ್ಲಯ್ಯಗೂ ಬಾಲೆ ಗಿರಿಜಮ್ಮಗೂ
ಸಾಲಾ ದೀವಿಗೆ ಬೆಳಕಲ್ಲಿ । ಮಲ್ಲಯ್ಯಾಗೆ
ಒಂಟಿ ದೋತುರ ಧರಿಸ್ಯಾರೊ....।

ತಾನೆ ಮಲ್ಲಯ್ಯತಾನೆ ಸಿಂಗರ್ವಾದ
ಜಲತಾರಂಗಿ ಜೋಮಾಲೆ । ಕಂತೀಸರ
ರಾತ್ರೀಕ್ಕಲ್ಲಯ್ನ ಮದಲಿಂಗ....।

ಮೂಡಲ ಸೀಮಿಂದ ಮುತ್ತಿನ್ಪೈಠಣೆ ಬಂದೊ
ಕೆತ್ತಿದ ಬಾಸಿಂಗ ಸಯಿವಾಗಿ । ಮದಲಿಂಗ
ಸ್ವಾಮಿ ಮಲ್ಲಯ್ನ ಮದುವೇಗೆ....।

ಮೂಡಾಲ ಸೀಮಿಂದ ಮೂರ್ಕಣ ಹೂವು ಬಂದೊ
ಸ್ವಾಮಿ ಮಲ್ಲಯ್ನ ಮದುವೇಗೆ । ಮದಲಿಂಗಾವೆಂದೂ
ಹನ್ನೆರಣ ಮಣ ಹೂವು ಬಂದೊ....।

ಸ್ವಾಮಿ ಮಲ್ಲಯ್ಯಾಗೂ ಬಾಲೆ ಗಿರಿಜಮ್ಮನಿಗೂ
ಹಾಲು ಕೊಳದಲ್ಲಿ ಕೈದಾರೆ । ಮಲ್ಲಯ್ಯಾಗೆ
ತುಪ್ಪದ ಕೊಳದಲ್ಲಿ ಕೈದಾರೆ....।

ಮಲ್ಲಿಗೆ ಹೂಕುಯ್ದು ದುಂಡುಮಾಲೆಯ ಕಟ್ಟಿ
ಮೈಸೂರ ದೊರೆಗಳು ಕಳಿಸವ್ರೆ । ಏನೆಂದು
ಭೋಗಿ ಮಲ್ಲಯ್ನ ಮದುವೇಗೆ....।

ನಿಲ್ಲೆ ಗಿರಿಜಾಂಬ ನಿಲ್ವಾ ನೋಡಾರಂತೆ
ಅಂಗಾಲ ಪದುಮ ಸುಳಿಸುದ್ದ । ನೋಡಾರಂತೆ
ನೀನಿಲ್ಲೆ ಮಲ್ಲಯ್ನ ಇದಿರಲಿ....॥

ಬೆಟ್ಟದ್ಮಲ್ಲಯ್ಯಾಗೆ ಬಿಟ್ನೀಯ ಸೂಳೀರು
ಪಟ್ಟಿ ಸೀರೇಯ ಬಿಗಿದುಟ್ಟು । ಮಲ್ಲಯ್ಯಾಗೆ
ಅವರು ತಟ್ಟಿಲಾರತಿ ಬೆಳಿಗ್ಯಾರು....॥

ಮಳದ ಮಲ್ಲಯ್ಯಾಗೆ ಸಂಬಳದ ಸೂಳೀರು
ಕಾವಿ ಸೀರೇಯ ಬಿಗಿದುಟ್ಟು । ಗಿರಿಜಾಂಬಾಗೆ
ಅವರು ತಟ್ಟಿಲಾರತಿ ಬೆಳಿಗ್ಯಾರು....।

ಹಾದೀಲಿ ಒಬ್ಬ ನಾರಾಯಣಸ್ವಾಮಿ ಕೂತುಕೊಂಡು
ಆಗೋಯ್ತು ಹೆಣ್ಣು ಶಿವನೀಗೆ । ತಾಲಿಬಂಧಿ
ಹಾಕಾಯ್ತು ಗಿರಿಜೆ ಕೊರಳೀಗೆ....।

ಹಟ್ಟೀಲಿ ಒಬ್ಬ ಕೃಷ್ಣಸ್ವಾಮಿ ನಿಂತುಕೊಂಡು
ಕೊಟ್ಟಾಯ್ತು ಆ ಬಾಲೆ ಶಿವನೀಗೆ । ತಾಲಿ ಬಂಧಿ
ಕಟ್ಟಾಯ್ತು ಗಿರಿಜೆ ಕೊರಳೀಗೆ....।



ಹಬ್ಬೋಗೊ ಕುಡಿಯ ಹರಿಕೊಂಡ

ನರಜನ್ಮ ಹೋಗುವಾಗ ತಾಯಿಲ್ಲ ತಂದೆಯಿಲ್ಲ
ನ್ಯಾಯದೋರಿಲ್ಲಾ ದೊರೆಯಿಲ್ಲ । ರಂಗಪ್ಪ
ಹೋಗುವಾಗ ನಾಯಿ ಕೂಡ ಹಿಂದೆ ಬರಲಿಲ್ಲ....॥

.....ಜನಪದ ಸಾಹಿತ್ಯವನ್ನು ಸಂಪಾದಿಸುವ ಕಾರ್ಯ ಅಷ್ಟೇನೂ ಸುಲಭವಾದುದಲ್ಲ. ಸಂಪಾದಕ ನಮ್ಮ ಜನಪದದ ಸಾಂಸ್ಕೃತಿಕ ನಾಡಿಯ ಮಿಡಿತಗಳನ್ನು ಚೆನ್ನಾಗಿ ಅರಿತವನಾಗಿರಬೇಕು. ಪರಂಪರೆಯನ್ನು ಕಾಣುವ ಸೂಕ್ಷ್ಮದೃಷ್ಟಿ ಬೇಕು.....

—ಬೆಟಗೇರಿ ಕೃಷ್ಣಶರ್ಮ

ಹಬ್ಬೋಗೊ ಕುಡಿಯ ಹರಿಕೊಂಡ*

ಈಗಿದ್ದರಂಗಪ್ಪ ಈಗೆಲ್ಲಿಗೋದಾನು
ನಾಲ್ವಾರು ಬಿತ್ತಿದ ನವಣೇಯ । ಹೊಲದಲ್ಲಿ
ಕಾಳಿಂಗನಾಗ ಹರಿಕೊಂಡ....॥

ಕಾಳಿಂಗನಾಗ ಕರಿಯ ಬಣ್ಣದನಾಗ
ಗೋದುವೆ ನಾಗ ಎಳೆನಾಗ । ಮುಲಗಿದ್ದು
ಅವನು ಬದುಕೋದ ಬಾಳ ಹರಿಕೊಂಡ....॥

ಅನ್ನ ಹಾಕೇದೊ ಉಣ್ಣೇಳೊ ಜವರಾಯ
ಇನ್ನೇಳು ಮಂದಿ ಜವದೋರು । ಬಂದವರೆ
ಇನ್ಯಾಕೆ ನುಗನೆ ಹಗಲೂಟ....॥

ಹಗಲೂಟ ಹಾಲೂರು ಇರುಳೂಟ ಇಂಗ್ಲಾದಿ
ಮದ್ಯಾನದೂಟ ಮಧುಗಿರಿ । ಮಂಚದಮೇಲೆ
ನಿದ್ರೆಮಾಡೋದು ನಿಡುಘಟ್ಟ....॥

ಹಾಲು ಕಾಸ್ಯವರೆ ಹರಿವಾಣ ಬೆಳಿಗ್ಯವರೆ
ಹಾಲಿಟ್ಟು ಮುಂದೆ ಮಡಿಗ್ಯವರೆ । ರಂಗಪ್ಪಾಗೆ
ನೀನು ಓಲೋಗೊ ತಂದೆ ಉಣುಬಾರೋ....॥

ತುಪ್ಪವ ಕಾಸ್ಯವರೆ ಚಟ್ಟಿಯ ಬೆಳಿಗ್ಯವರೆ
ಕಿತ್ತಲೆ ಹಣ್ಣ ಸುಲಿದವರೆ । ರಂಗಪ್ಪಾಗೆ
ನೀನು ಸೆರೆ ಹೋಗೋ ಬಂಧು ಉಣುಬಾರೋ....॥

---

*ಈ ಜವರಾಯನ್ತನ್ನು ಕುರಿತ ಹಾಡುಗಳನ್ನು ಹಳ್ಳಿಗಳಲ್ಲಿ ಹರಿಜನರು ಜಾತ್ರೆಗಳಲ್ಲೂ ಹಾಗೂ ಪರುಸೆಗಳಲ್ಲೂ ಹಾಡುತ್ತಾರೆ.

ಆದ ಅನ್ನ ಬಿಟ್ಟು ಕಾಸಿದ ನೀರಬಿಟ್ಟು
ಮಕ್ಕಳ ಬಿಟ್ಟು ಮನೆಬಿಟ್ಟು । ರಂಗಪ್ಪ
ನೀನು ಒಕ್ಕಲ್ಹೋಗೋದು ನಿಜವೇನು ?

ಮಾರುದ್ದ ಮುಂಡೆಯ ನೀರಲಿ ಬಿಟ್ಟುಕೊಂಡು
ಯಾರಿಗಂಬಲಿಸಿ ನಂಜಮ್ಮ । ನಿಮು ಗೌಡ
ದಂಡಿಗೋದವರು ಬರಲಿಲ್ಲ....॥

ಜವರಾಯ್ನ ಮನೆಯು ಹಾಳಾಗಿ ಹೋಗಾಲಿ
ಇಬ್ಬಂದಿಗಾರ ಯಮರಾಯ । ಅವನು
ಹಬ್ಬೋಗೊ ಕುಡಿಯ ಹರಿಕೊಂಡ....।'

ಬಾಳಿ ಬದುಕಿದಂತ ಬಾಳೆಯ ಬೆಳೆಸಿದೆ
ನಾನು ಬಾಲಯ್ನ ಪಡೆದು ಸುಖಿಸಿದೆ । ಅನ್ನೋಹೊತ್ಗೆ
ಬಾಗಿಲಲ್ಲಿ ಇದ್ದ ಯಮದೋನು....॥

ಕಿತ್ತ ಲೆಯ ನೆಡಿಸಿ ಸುತ್ತ ಬೇಲಿಯಹಾಕಿ
ನಾನು ಕಂದಯ್ನ ಪಡೆದು ಸುಖಿಸಿದೆ । ಅನ್ನೋಹೊತ್ಗೆ
ಬಾಗಿಲಲ್ಲಿ ಇದ್ದ ಜವದೋನು....॥

ಮೈಸೂರಿಗೋಗತಿನಂತ ಮಾಡಿಸಿದನು ಬುತ್ತಿಯ
ಬೀದಿಯ ಕಲ್ಲ ಎಡವಿದನು । (ಎಡವಿದ) ರಂಗಪ್ಪ
ನೀನು ಹಿಂತಿರುಗಿ ಮನೆಗೆ ಬರಲಿಲ್ಲ....॥

ನರಜನ್ಮ ಹೋಗುವಾಗ ತಾಯಿಲ್ಲ ತಂದೆಯಿಲ್ಲ
ನ್ಯಾಯದೋರಿಲ್ಲಾ ದೊರೆಯಿಲ್ಲ । ರಂಗಪ್ಪ
ಹೋಗುವಾಗ ನಾಯಿಕೂಡ ಹಿಂದೆ ಬರಲಿಲ್ಲ....॥

ನರಮನುಷ್ಯ ಹೋಗುವಾಗ ಬಂಧು ಗೆಳೆಯರಿಲ್ಲಾ
ತನ್ನ ಬಿಂದಿಗೆ ಹಣ ಮೊದಲಿಲ್ಲ । ರಂಗಪ್ಪ
ಹೋಗುವಾಗ ಆಸೆಮಾಡಿದರೆ ಫಲವಿಲ್ಲ....॥

ಬರುವಾಗ ತರಲಿಲ್ಲಾ ಹೋಗುವಾಗ ಕುಂಡೋಗಲಿಲ್ಲಾ
ಸುಮ್ಮಾನೆ ನರಲೋಕದಲ್ಲಿ ಇರಲಿಲ್ಲಾ । ಸ್ವಾಮಿ
ಈಜುನುಮಕೆ ಏನೇನು ತಿರುವ ಮಡಿಗ್ಯವ್ನೆ....॥



ಅರಬಿಗರ ಗಂಗೆ

ಜಾನುಬುಲೆ ಜಾನ್ಯಾನು ಬೀನುಬುಲೆ ಬೀನ್ಯಾನು
ನಾಲ್ಕು ಬಲೆಯಾಂಜ್ಞಾ ಕ ನಿಶಿಜಾನು । ಅಲಬಾಗಲ್ಲು
ಹೆಸ್ಸಕ ತೊಳ್ಳಿಲು ಬಲಿಯುತ್ತೆ....॥

.....ಜನಪದ ಸಾಹಿತ್ಯವು ಸಾಮಾನ್ಯ ಜನತೆಯ ಜೀವನದಿಂದ ಬೆಳೆದು ಬಂದುದು. ಹಾಗೂ ಸಾಮಾನ್ಯ ಜನತೆಗಾಗಿಯೇ ರಚಿತವಾದುದು. ಆದುದರಿಂದ ನಮ್ಮ ಸಾಮಾನ್ಯ ಜನತೆಯ ಜೀವನಕ್ಕೂ ಈ ಸಾಹಿತ್ಯಕ್ಕೂ ಅತ್ಯಂತ ನಿಕಟವಾದ ಸಂಬಂಧವಿದೆ. ಜನತೆಯ ಜೀವನದ ವಿವಿಧ ಮುಖಗಳ ಪ್ರತಿಬಿಂಬವು ಈ ಸಾಹಿತ್ಯದಲ್ಲಿ ತುಂಬಾ ಮೂಡಿದೆ. ಸಾಮಾನ್ಯ ಜನರ ಸುಖ, ದುಃಖ, ಆಸೆ, ಆಶಯ, ಜೀವನದ ಅನೇಕ ತೆರನಾದ ಪ್ರಸಂಗಗಳು ಇವೇ ಮೊದಲಾದುವು ಈ ಸಾಹಿತ್ಯಕ್ಕೆ ವಿಷಯಗಳಷ್ಟಡೆ ಪುರಾಣದ ಕಥೆಗಳೂ ಪೂರ್ವದ ಭಗವದ್ಭಕ್ತರ ಕಥೆಗಳೂ ಸಾಮಾನ್ಯ ಜನಜೀವನದ ವಾತಾವರಣದಲ್ಲಿ ಚಿತ್ರಿತವಾಗಿವೆ. ಇಲ್ಲಿ ಕಾಣುವ ಭಾಷೆ ನಮ್ಮ ಹಳ್ಳಿಯ ಜನರು ಬಳಸುವ ಸಾಂಡಿತ್ಯದ ಭಾರವಿಲ್ಲದ ಸಾರವತ್ತಾದ ಕನ್ನಡವೆಂದು ಹೇಳಬಹುದು.....

—ಪ್ರೊಫೆಸರ್ ವಿ. ಜಿ. ಕುಲಕರ್ಣಿ

ಅಂಬಿಗರ ಗಂಗ*†

ಉಂಡುಟ್ಟು ಗಿರಿಮಾಜಿ ಮಂಚದಮೇಲೆ ಮಲಗಿರಲು
ಶಿವರಾಯ ಸ್ವಪ್ನಾಕೆ ಸುಳಿದನು । (ಸುಳಿದು) ಏನೆಂದಾನೆ
ಕನ್ಹೇರುಟ್ಟಿದರೆ ಕೊಡು ನನಗೆ....॥

ಮೂರು ತಿಂಗಳ ಬಸುರಿ ಏನೇನ ಬಗೆಸ್ಯಾಳು
ಊರ ಮುಂದಲ ಎಳೆಯ ಹುಣಿಸೇಯ । ಹಣ್ಣನ್ನೆ
ಮಡದಿ ಗಿರಿಮಾಜಿ ಬಗೆಸ್ಯಾಳು....॥

ಆರು ತಿಂಗಳ ಬಸುರಿ ಮತ್ತೇನ ಬಯಸ್ಯಾಳು
ಕಟ್ಟೆಯ ಹಿಂದಲ ಹೊಸನೂವು । (ಏನ) ಹಣ್ಣನ್ನೆ
ಮಡದಿ ಗಿರಿಮಾಜಿ ಬಗೆಸ್ಯಾಳು....॥

ಎಂಟು ತಿಂಗಳ ಬಸುರಿ ಏನೇನ ಬಯಸ್ಯಾಳು
ಏರಿ ಹಿಂದಾಲ ಎಳೆ ಜೋಳ । (ದ) ತೆನೆಯನ್ನೆ
ಮಡದಿ ಗಿರಿಮಾಜಿ ಬಗೆಸ್ಯಾಳು....॥

ಒಂಬತ್ತು ತಿಂಗಳು ತುಂಬಿತು ಮಡದಿಗೆ
ಒಡೆಯ ಗಿರಿರಾಜ ಹೊರಟಾನು—
ಒಡೆಯ ಗಿರಿರಾಜ ಹೊರಟಾನು....॥

---

*ಈ ಅಂಬಿಗರ ಗಂಗಾದೇವಿಯನ್ನು ನೆನೆದು ಬಯಲುನಾಡಿನ ಹಳ್ಳಿಗಳಲ್ಲಿ ಗದ್ದೆಗಳನ್ನು ನಾಟಹಾಕುವಾಗಲೂ ಮತ್ತು ರಾಗಿ ಬೀಸುವಾಗಲೂ ಹಾಡುವ ಹಾಡುಗಳಿವು.

†ಹಿಂದಿನ ಸಂಕಲನವೊಂದರಲ್ಲಿ ಈ ಕಥನ ಕವನವನ್ನು ಪ್ರಕಟಿಸಲಾಗಿದ್ದಿತು. ಆದರೆ ಇದಕ್ಕೆ ಸಂಬಂಧಿಸಿದಂತೆ ಹೆಚ್ಚು ಸಾಹಿತ್ಯ ಆನಂತರ ದೊರೆತುದರಿಂದಲೂ ಅಲ್ಲಿ ಕಥೆ ಅಪೂರ್ಣವಾಗಿದ್ದುದರಿಂದಲೂ ಈ ದೀರ್ಘ ಕಥನ ಕವನವನ್ನು ಮತ್ತೆ ಪ್ರಕಟಿಸಬೇಕಾಯಿತು. ಇದರಲ್ಲಿನ ಕೆಲವು ಹಾಡುಗಳನ್ನು ತಮ್ಮ ಸಂಗ್ರಹದಿಂದ ನೀಡಿದ ಶ್ರೀ ಜೀಶಂಪರಿಗೆ ನಾವು ಕೃತಜ್ಞರು.

(ಗಿರಿರಾಜ ತನ್ನ ಹೆಂಡತಿಗೆ ನವಮಾಸ ತುಂಬಿದುದನ್ನು ತಿಳಿಯಲು ಆಪ್ತರಾದ ಸಂಗಮ್ಮನ ಮನೆಯ ಬಳಿಗೆ ಬರುತ್ತಾನೆ.)

ಮೂಡು ಬಾಗಿಲುಮನೆಮುತ್ತಿನ ತೋರಣ
ನಡುವೆ ಬಾಗಿಲಿಗೆ ಮಣಿಗಾರೆ । ಮುತ್ತಿನಬೊಟ್ಟು
ಅದುವೆ ಸಂಗಮ್ಮನ ಅರಮನೆ....॥

ಎಂದುಬಾರದ ಗಿರಿರಾಜ ಬಂದರಲ್ಲೆ ನಮ್ಮನೆಗೆ
ಕುಂಡಿರಕೆ ಹಾಕಿ ಮಣೆಹಾಕಿ....ಗಿರಿರಾಜಗೆ
ಕುಂಡಿರಕೆ ಹಾಕಿ ಮಣಿಗಳ....॥

ಕಪ್ಪನೊದ್ದ್ಯಾಳು ಕಪ್ಪುಮುತ್ತ ಕಟ್ಯಾಳು
ಕಪ್ಪು ಕನ್ನಡಿಲಿ ಮುಖನೋಡಿ । ಸಂಗಮ್ಮ
ಚೆಂದಲ್ಲವೆಂದು ಮರುಗ್ಯಾಳು....॥

ಬಿಳಿಯನ್ನೊದ್ದಾಳು ಬಿಳಿಮುತ್ತ ಕಟ್ಯಾಳು
ಬಿಳಿಯ ಕನ್ನಡಿಲಿ ಮುಖನೋಡಿ । ಸಂಗಮ್ಮ
ಚೆಂದಾಯಿತೆಂದು ಹೊರಟಾಳು....॥

ಹೋದಳು ಸಂಗಮ್ಮ ನಿಂತಳು ಬಾಗಿಲಲ್ಲಿ
[illegible] । [illegible]
[illegible] ಮಗುವ....॥

[illegible] ಹಾಡುವ ದೋಸುರಯ್ಯ
ಮುತ್ತಿನ ಪಂಚಾಂಗ ಕೈಲಿಡಿದು । ಹೇಳ್ಯಾರೆ
ಅವಳು ಮೂಡಲ ಹೊರಯ ಪಡೆದಾಳು....॥

ಮೂಡಲ ತೊರೆಯ ಪಡೆದಾಳು—ಹಿರಿಯೋಳು
ನಾಡೀನೀಶ್ವರನ ಪಡೆದಾಳು....॥

ಹುಟ್ಟಿದ ಮಕ್ಕಳ ಹೊಳೆಗೆ ಬಿಡುವರುಂಟೆ
ಸಾಕು ಕೊಡುವೆನು ನನ್ನ ಬಳಗಾಕೆ....ಮಕ್ಕಳ
ಸಾಕು ಕೊಡುವೆನು ನನ್ನ ಬಳಗಾಕೆ....॥

ಸಾಕಕೆ ಕೊಂಡೋದರಿಗೆ ಏಳಿಗೆ ಸಂತಾನವಿಲ್ಲಾ
ಪುತ್ರ ಸಂತಾನ ಮೊದಲಿಲ್ಲ—ಗಿರಿರಾಜ
ಪುತ್ರ ಸಂತಾನ ಮೊದಲಿಲ್ಲ....॥

ಒಕ್ಕಾಳು ಕುಯ್ಯೋ ಕುಡಿಲು ಮೊರಸಹಿತ ಕಸ್ನೇಯ
ಬಿಟ್ಟು ಬನ್ನಿ ಹರಿಯೊ ತೊರೆಗ್ಹೋಗಿ—ಶೀನ
ಬಿಟ್ಟು ಬನ್ನಿ ಹರಿಯೊ ತೊರೆಗ್ಹೋಗಿ....॥

ಕಸ್ನೆಯ ಬಸುರಲ್ಲಿ ಬಾಗಿದೆ ಶಾಖಾಕಿದೆ
ಭಾಗಿದ ಶಿಶುವ ಮಡಿಲಲ್ಲಿ । ಇಟ್ಟುಕೊಂಡು
ಕಂಬ ಕಂಬವನ್ಹಾದು ಅಳುತಾಳೆ...॥

ಕನ್ನೆಯ ತೊಟ್ಟಿಲಿಗೆ ರನ್ನ ದನ್ನೇಕೆಸೂಡಿ
ಅರಿಷಿಣದ ಭಟ್ಟೆ ಒದರ್ಯಾಸಿ । ಕಂಬಮ್ಮನ
ಕೈಗೆತ್ತಿ ಕಂಬ್ಲನಿಯ ಸುರಿಸ್ಯಾಳೆ....॥

ಹುಟ್ಟಿ ಶುಕ್ರವಾರ ಹುಟ್ಟಿಮಳೆ ಹೆಣ್ಣಾ ಮಗಳು
ಹುಟ್ಟೀವ ಘಳಿಗೆ ರವ ಘಳಿಗೆ । ಒಳ್ಳೇದಲ್ಲಾ
ಅವರ ತಾಯಿ ತಂದೀಗೆ ಮರಣಾವು....॥

ಅಣ್ಣ ಗಿರಿರಾಜು ಎಣ್ಣೆ ಬಣ್ಣಗಳುಂಟು
ಕೆಟ್ಟ ಶುಕ್ರವಾರ ಹುಟ್ಟೀತು । (ಹುಟ್ಟೀದ) ಈಸಿಸುವ
ನಿಸ್ರೇ ಮನೆಗೆ ಜಯವಿಲ್ಲಾ....॥

ಚಿನ್ನದ ತೊಟ್ಟಲಿಗೆ ರನ್ನಾದ ಸಿವಡ್ಹೂಡಿ
ತಲೆಯ ಮೇಲದನು ಹೊತುಕೊಂಡು । ಗಿರಿರಾಜ
ಹೊಳೆಗ್ಹೋಗಿ ಶಿಶುವ ಬಿಟ್ಟಬಂದ....॥

(ಹರಿವ ಹೊಳೆಯಲ್ಲಿ ಬಿಟ್ಟ ಈ ಮಗುವು ತೇಲುತ್ತಾ ಹೋಗಿ ಮೀನು ಹಿಡಿಯಲು ಬಂದ ಅಂಬಿಗರಣ್ಣನಿಗೆ ಸಿಗುತ್ತದೆ.)

ಹಾಲು ಅನ್ನವುಂಡು ಪಟ್ಟಿನಾಣ್ಯವನೊದ್ದು
ಮುತ್ತೀನಬಲೆ ಹೆಗಲಲ್ಲಿ । ಹಾಕಿಕೊಂಡು
ಬಂದಾನೋ ಹೊಳೆಯ ದಡಗೊಂಡು....॥

ಹಾಸುಬಲೆ ಹಾಸ್ಯಾನು ಬೀಸುಬಲೆ ಬೀಸ್ಯಾನು
ಸಣ್ಣ ಬಲೆಯನ್ಹಾಕಿ ಎಳೆದಾನು । ಅಂಬಿಗರಣ್ಣ
ಚಿನ್ನದ ತೊಟ್ಟಲು ಬಲೆಯಲ್ಲಿ....॥

ಚಿನ್ನದ ತೊಟ್ಟಲಿಗೆ ರನ್ನದ ಸಿವಡಿಗೆ
ತೊಟ್ಟಲೊಳಗೊಂದು ಹಸುಳೆಯ । ಅಂಬಿಗರಣ್ಣ
ತೊಟ್ಲು ಸಯಿವಾಗಿ ತೆಗೆದಾನು....॥

ಹಾಳುಗಾತ್ರದ ಚಿನ್ನ ತ್ಹೋಳುಗಾತ್ರದ ಹದುಮ
ಬಿದ್ದಾದೆ ಬಲೆಯ ಸೆರಗೀಗೆ—ಈ ಕಂದಮ್ಮ
ಬಿದ್ದಾದೆ ಬಳ್ಳಿಯ ಸೆರಗೀಗೆ....॥

ಮಕ್ಕಳಿಲ್ಲದ ಅಂಬಿಗರಣ್ಣ ಶಿಶುವ ಎತ್ತಿಮುದ್ದಾಡಿ
ಕುಣಿಸಿ ತಂದಾನೆ—
ತನ್ನವ್ವನರಮನೆಗೆ....॥

ಹರಬೀಯ ಹಾಲೂದು ಬೆಟ್ಟನಷ್ಟೆ ತುಪ್ಪನ್ಹಾಕಿ
ಚಿಕ್ಕಂದಿನಿಂದ ನಲುವವ್ವ । ಈ ಕಂದಮ್ಮ
ಕೊಡಹೊತ್ತು ನೀರ ತರುತಾಳೆ....॥

ಚಟ್ಟಿಹಾಲೂದು ಕುಡಿಕೆ ತುಪ್ಪನ್ಹಾಕಿ
ಸಣ್ಣಂದಿನಿಂದ ಸಲುವವ್ವ । ಈ ಬಾಲಮ್ಮ
ಬಿಂದಿಗಿಡಿದು ನೀರತರುತಾಳೆ....॥

ನೀ ತಂದ ಹಸುಳೆಯ ಹೆಸರ್ಹೇಳು—ಕಂದಯ್ಯ
ಈ ಬಾಲೆ ತಾಯಮ್ಮ ಹೆಸರ್ಹೇಳು....॥

ಕೆಸರಲ್ಲಿ ಹುಟ್ಟಿದೋಳು ಕೆಸರಲ್ಲಿ ಬೆಳೆಯೋಳು
ಕೆಸರಲ್ಲಿ ಬಟುವ ತಿರುವೋಳು । (ತಿರುವೊ) ಕಂದಮ್ಮ
ಅವಳೆಸರು ಗಂಗೆಂದು ಕರೆದೇವು....॥

ಗಂಗೇಲಿ ಹುಟ್ಟಿದೋಳು ಗಂಗೇಲಿ ಬೆಳೆಯೋಳು
ಗಂಗೇಲಿ ಬಟುವ ತಿರುವೋಳು । (ತಿರುವೊ) ತಾಯಮ್ಮ
ಅವಳೆಸರು ಗಂಗೆಂದು ಕರೆದೇವು....॥

ಅಂಬಿಗರಣ್ಣ ಹೋದಾನೆ ಮೇದರ ಕೇರಿಗೆ
ನಮ್ಮ ಸುರನಾರಿಗೊಂದು ತೊಟ್ಟಿಲ್ಲ । ಕೊಡಿರವ್ವ
ನನ್ನ ಮುಡದ್ಯೊಂದು ಶಿಶುವ ಹಡೆದವಳೆ....॥

ಚಿನ್ನಾದ ತೊಟ್ಟಿಲಿಗೆ ರನ್ನಾದ ನೇಕಹೂಡಿ
ಚಂದ್ರಕಾಂತಿಯೆಂಬೊ ಹೆಣ್ಣುಮಗಳು । (ಳ) ಅಂಬಿಗರಣ್ಣ
ನ್ಹೇಕೇಲಿ ಹಾಕಿ ತೂಗ್ಯಾನೊ....॥

ಮನೆಯ ಒಳಗಿರುವ ರಾಣಿ ನೀಕೇಳ್ಹೆಣ್ಣೆ ಮಗುವಿಗೆ
ಹಸುವೀನ ಹಾಲುಕರಕೊಡೆ । ಕಂದಮ್ಮಗೆ
ಆರಳೆ ಮಂಚದಮೇಲೆ ತೂಗಿರಿಸು ...॥

ಚಿನ್ನಾದ ಬಿಂದಿಗೆ ಎತ್ತಿಕೊಂಡು ರನ್ನಾದ ಸಿವುಡು ಹೂಡಿ
ಹೋದಾಳೆ ಹರಿವ ಜಲಧೀಗೆ । ಆಬಾಲೆ (ಕೊಂಡು
ಹೋದಾಳೆ ಹರಿವ ಜಲಧೀಗೆ....॥

(ಅಂಬಿಗರಣ್ಣನ ಮನೆಯಲ್ಲಿ ಗಂಗೆ ಬೆಳೆದು ದೊಡ್ಡವಳಾಗಿದ್ದಾಳೆ. ಅವಳನ್ನು ವರಿಸಲು ಕೈಲಾಸದಿಂದ ಶಿವ ಬರುತ್ತಾನೆ.)

ಸತಿ ಪುರುಷಾರು ಸಕನಿ ಮಂಚದಮೇಲೆ
ನಾನಿರುಳು ಕಂಡೆ ಸೊಪುನಾವ । ಮಾಶಿವನೆ
ಮಂಚಾಕೆ ರನ್ನ ಬಿಗಿದಿದ್ದೊ....॥

ರನ್ನ ಅನ್ನೋದು ಹೆಣ್ಣೀನ ಹೋಲೀಕೆ
ಪನ್ನಂಗನಾಣೆ ಪರಶಿವನು । (ನಾಣೆ) ನಿನಗೆ
ಮಂಚಾಕೆ ರಾಣಿ ಬರುತಾಳೆ....॥

ಬಂದಾರು ಬರಲೇಳು ಭಾಗ್ಯೇವು ಉಣಲ್ಹೇಳು
ಗಂಡು ಮಗನುಳ್ಳ ಗೌರಾಯಿ । ನಿನಮೇಲೆ
ಸವತಿ ಬರುವೋದು ನಿಜವೇನೆ ?

ಬಲ್ಲೆಬಲ್ಲೇನು ನಿನ್ನ ಅಂಗ ಮಾಯಿಗೋಳ
ಅಂಗಲಿಂಗವ ತೆಗೆದಾರೆ । (ತೆಗೆದು) ಮಾಶಿವನು
ಕಾವಿ ಕಮಂಡಲ ಧರಿಸ್ಯಾರೆ....॥

ಕಾವಿ ಕಮಂಡಲವ ಧರಿಸ್ಕೊಂಡು ಮಾಶಿವನು
ಹೋದಾನು ಬಡ ಹಾರುವರ ಬೀದೀಲಿ । ಶಿವರಾಯ
ಏನಂತ ನುಡಿಯ ನುಡಿದಾನು....॥

ಅಂಬಾರದಿಂದ ತಂಬೂರಿ ಶಿವಬಂದ
ಈ ಅಂಗುಳದಲಾಡೊ ಶಿಶುವ್ಯಾರೊ....॥

ಯಾರ ಮಗಳಾದಾರೆ ಏನುಕ್ಕೊಟ್ಟ ಜಂಗಮಯ್ಯ
ಹೋಗಯ್ಯ ನಿಮ್ಮ ಹಾದಿಗೊಂಡು....॥

ಹಾರುವರ ಮಗಳಲ್ಲಾ ಅರ್ಜುನನ ಸೊಸೆಯಲ್ಲಾ
ಕುಲದಲ್ಲಿ ಅಂಬಿಗರ ಮಗಳಲ್ಲಾ । ಎಲೆಬಾಲೆ
ನೀ ಕುಲದಲ್ಲಿ ಅಂಬಿಗರ ಮಗಳಲ್ಲಾ....॥

ಹಾರುವರ ಮಗಳೇಯೆ ಅರ್ಜುನನ ಸೊಸೆಯೆ ?
ನಾನು ಕುಲದಲ್ಲಿ ಅಂಬಿಗರ ಮಗಳೇಯೆ । ಮಾಶಿವನೆ
ಹೋಗಯ್ಯ ನಿಮ್ಮ ಹಾದಿಗೊಂಡು....॥

ಅಂಬಿಗರ ಮಗಳಾದ್ರೆ ನಂಬೀಕೆ ನನಗಿಲ್ಲಾ
ಅಂಬಿಗರ ಕುಲವಾದ್ರೆ ನಿಂದೀಸಿ । ನುಡಿದೋರು
ಬಂದೀರು ನಮ್ಮ ಕೆರುಜಡೆಗೆ....॥

ಅಪ್ಪಾನು ನಿನಗಿಲ್ಲಾ ಅವ್ವಾನು ನಿನಗಿಲ್ಲಾ
ಮತ್ತೊಬ್ಬುಬಾಲೆ ನನಗಿಲ್ಲಾ । ಎಲೆ ಗಂಗೆ
ನೀನು ಬಂದಿರೆ ನನ್ನ ತುರುಬಿಗೆ....॥

ಅಪ್ಪಾಗೆ ಹೇಳಿಲ್ಲಾ ಅವ್ವಾಗೆ ಹೇಳಿಲ್ಲಾ
ಮತ್ತೆಂಗೆ ಬರಲಿ ಮಾಶಿವನೆ । ನಿಮಕೂಡ
ನಾನು ಮತ್ತೆಂಗೆ ಬರಲಿ ನಿಮಕೂಡ....॥

ಬಂಗಿ ಸೇದೋರು ನಾವು ಬಾಡು ತಿನ್ನೋರು ನಾವು
ಮತ್ತೆಂಗೆ ಬರಲಿ ಮಾಶಿವನೆ—ನಿಮಕೂಡ
ನಾನು ಮತ್ತೆಂಗೆ ಬರಲಿ ನಿಮಕೂಡ....॥

ಬಾಡೀನ ಚಟ್ಟಿತಾರೇ ಬಂಗಿಯ ಬತ್ತಿತಾರೇ
ಬಂದಿರೆ ನನ್ನ ಕರಿಜಡೆಗೆ । ಎಲೆ ನಾರಿ
ನೀನು ಬಂದಿರೆ ನನ್ನ ತುರುಬಿಗೆ....॥

ಮೀನು ತಿನ್ನೋರು ನಾವು ನಳ್ಳಿ ತಿನ್ನೋರು ನಾವು
ಜಾಲವನು ಬೀಸಿ ಮೊಸಳೀಯ । ಹೊಡೆವೋರು
ನಾನು ನಿಮ್ಮ ಬಳಿಗೆ ಬರಲರಿಯೊ....॥

ಗೆಂಡೆ ಕೀಳೋರು ನೀವು ತೆಪ್ಪ ತಳ್ಳೋರು ನೀವು
ತೆಪ್ಪದಲಿ ಮೀನು ಹಿಡಿಯೋರು ನೀವು । ಸುರನಾರಿ
ನೀನು ಬಂದಿರೆ ನನ್ನ ಸಿರಿಮುಡಿಗೆ....॥

ಮೀನು ಎಂಬೋದು ಕವಡೇಯ ಮಣಿಕಾಣೆ
ನೀ ಬಂದಿರು ನನ್ನ ತುರುಬಿಗೆ । ಎಲೆಬಾಲೆ
ನೀ ಬಂದಿರು ನನ್ನ ಕೆರುಜಡೆಗೆ....॥

ಅತ್ತಿಗೆ ಉಂಟು ಕಿರಿಯೆ ನಾದನಿಯುಂಟು
ಮತ್ತೊಬ್ಬ ಸವತಿ ಮೊದಲುಂಟು । ಮಾಶಿವನೆ -
ಹೇಗಿರಲಿ ನಿಮ್ಮ ಜಡೆಯಲ್ಲಿ....॥

ಅತ್ತಿಗೆ ಇಲ್ಲಾ ಕಿರಿಯ ನಾದನಿ ಇಲ್ಲಾ
ಮೇಲೊಬ್ಬ ಸವತಿ ಮೊದಲಿಲ್ಲಾ । ಎಲೆಬಾಲೆ
ಬಂದೀರು ನನ್ನ ತುರುಬಿಗೆ....॥

ಆಕಾಶದಡವೀಗೆ ಭೂವಿತಿಯ ಬಟುವೀಗೆ
ಹಾಸಿದರು ತಮ್ಮ ತುರುಬನು । ಮಾಶಿವನು
ಎತ್ತಿ ಮಡಗಿದರು ಗಂಗೇಯ....॥

ಸೀರೇಯ ಸೆರಗ ಎಳೆದಾನು ಮಾಶಿವನು
ಸೀರೇಯ ಸೆರಗ ಹಿಡಕೊಂಡು—ಸಿರಿಮುಡಿಗೆ
ಕೆಂಡಿರಿಸಿಕೊಂಡು ಬಂದಾನು ಗುರುಮಠಕೆ....॥

ಇತ್ತಲ ಕೊಂಬೆಯಿಂದ ಅತ್ತಲ ಕೊಂಬೆಗೆ ನೆಗೆದು
ಮಾಗಿದ್ದ ಹಣ್ಣ ಮೆಲುವೂತ । ಗಿಣಿಗಳು
ನುಡಿಯ ಕೇಳುತ ನಗುತಾವೆ....॥

ಗಂಗೆ ಮಾಶಿವನು ನಿಂದು ಮಾತಾಡಾಗ
ಕಂಡಾವು ಎರಡು ಗಿಣಿಗಳು । ಕಂಡ್ಯೊಂಡು
ಅಕ್ಕ ಗೌರೀಗೆ ಅರುವೀದೋ....॥

ಬಟ್ಟಾಲು ಬೆಳಗಿ ಹಾಲು ಅನ್ನವನಿಕ್ಕಿ
ಅರುವತ್ತು ಸೊಲ್ಲು ನಾನಿಮ್ಮ । ಕೂಗೀದೆ
ಎಲ್ಲಿಗ್ಹೋಗಿ ಬಂದಿರಿ ಗಿಣಿಗಳಿರಾ....॥

ಹಾಲು ಅನ್ನದ ಮಾತು ಹಾಳಾಗಿ ಹೋಗಾಲಿ
ಇತ್ತ ಕೇಳಕ್ಕ ಹೊಸಮಾತ । ಶಿವರಾಯ
ಸವತಿ ಗಂಗಮ್ಮ ಜಡೆಯೊಳಗೆ ತರುತಾನೆ....॥

ಗಿಣಿರಾಮಗಳಿರಾ ಎಲ್ಯಂಡ್ರಿ ಮಾಶಿವನ ?
ತುಪ್ಪ ಅನ್ನಾವು ನಿಮಗುಂಟು । ಗಿಣಿಗಳಿರಾ
ನೀವು ಒಪ್ಪದಲಿ ಉಂಡು ತಿಳಿಸೀರಿ....॥

ಇಂಬೆ ವನದಲ್ಲಿ ಚಂದ್ರಾನ ಕೊಳದಲ್ಲಿ
ಗಂಗೆಗೂ ಶಿವರಾಯಾಗೂ ಇನವಂದ । ಆಗುವಾಗ
ನಾವು ಕಂಡೇವು ಶಿವ–ಗಂಗೇನ....॥

ಕೆಟ್ಟಿ ಕೆಟ್ಟಿ ಎಂದು ನೆಟ್ಟೀಯ ನುರುಕೀದೆ
ಕೆಟ್ಟೀನು ಶಿವನ ದೆಸೆಯಿಂದ । ಗೌರಮ್ಮ
ಹೊಟ್ಟೀಯ ಉರಿಯು ಅರಳೀತು....॥

ಹಂಗಂದ ಮಾತ ಕೇಳಿ ಹೋದಳಪ್ಪನರಮನೆಗೆ
ಎಂದು ಇಲ್ಲದ ಗೌರೂ ಬಂದ ಕಾರಣವೇನು ?
ಹಾಸೀರಿ ಮುತ್ತ ಹರವೀರಿ....॥

ಹಾಸೀರಿ ಮುತ್ತ ಹರವೀರಿ—ಗೌರಮ್ಮಗೆ
ನೀವು ಬೀಸೀರಿ ಬೆಳ್ಳಿ ಚವಲಾವ....॥

ಹಾಸ್ಯಾವೆ ಮುತ್ತ ಹರಿವ್ಯಾವೆ ಅಪ್ಪಯ್ಯ
ನಾ ಸ್ವಪ್ನವ ಕಂಡಿವಿನಿ ಒಡೆದ್ಹೇಳಿ—ನೀವು
ನಾ ಸ್ವಪ್ನವ ಕಂಡಿವಿನಿ ಒಡೆದ್ಹೇಳಿ....॥

ಮೂಗೂತಿ ಮುರಿಯೋಳು ನೀನು ಮುಂಬಲ್ಲುಸಿಡಿಯೋಳು ನಿಮ್ಮತ್ತೆ
ತಿಟ್ಟತ್ತಿ ತೆಂಕ ಉರಿಯೋರು । (ನು) ನಿನಗಂಡ
ಶಿವರಾಯ ಗಂಗೆ ಜಡೆಯಲ್ಲಿ ತರುತಾನೆ....॥

ತಂದಾರು ತರಲೇಳಪ್ಪ ಭಾಗ್ಯಾವು ಉಂಡಾಳಪ್ಪ
ಮಿಕ್ಕ ಕೆಲಸಾಕೆ ಹೊರಟೀನು—ನಾನು
ಮಿಕ್ಕ ಕೆಲಸಾಕೆ ಹೊರಟೀನು....॥

ಸಿಡಿಮಿಡಿಗೊಳ್ಳುತ್ತ ಕುಡಿಬೆವರನಿಕ್ಕುತ್ತ
ಉಟ್ಟಿಂಥ ನೆರಿಗೆ ಜೆಲ್ಲುತ್ತ । ಗೌರಮ್ಮ
ಬಂದಾಳು ದಾರಿ ನೂಕೂತ ಗಿರಿಗೆ....॥

ಹಾಕ್ಯಾಳು ಕದವ ನೂಕ್ಯಾಳು ಅಗಣೇಯ
ಚಿಂತೆ ಮಾಡುತ ಮಂಚ ಕೊರಗ್ಯಾಳು । ಗೌರಮ್ಮ
ಚಿಂತೆಯಲಿ ಕಾಲಕಳೆದಾಳು....॥

ಮೂಡಲಾಗಿ ಹೋಗಿ ಮುತ್ತು ಭಿಕ್ಷವ ಬೇಡಿ
ಜೋಳಿಗೆ ಜಡಿದೊ ಭುಜಜಡಿದೊ । ಗೌರಾಜ
ಗಗ್ಗಾನೆ ಗೌರಿ ಕದ ತೆಗೆಯೆ....॥

ಕದವ ತೆಗಿಯೋಕೆ ಕತ್ತಲೆ ಬೆತ್ತಲೆ
ಸೀರಿಲ್ಲಾ ಶಿವನೆ ನಿರ್ವಾಣಿ—ನಾನು
ಸೀರಿಲ್ಲಾ ಶಿವನೆ ನಿರ್ವಾಣಿ....॥

ಹಸೆಯ ಮೇಲಿರುವೊ ದಸುರಿಪಟ್ಟಿಯಸೀರೆ
ನೀನೊಂದುಟ್ಟು ಒಂದ ಮುಸಕಿಡೆ....॥

ಕದವ ತೆಗಿಯೋದು ತಡವೇನು ಮಾಶಿವನೆ
ಪುತ್ರ ಕಂದಣ್ಣ ತೊಡೆಮ್ಯಾಲೆ ಮನಿಗ್ಯವನೆ....॥

ಚಿನ್ನದ ತೊಟ್ಟಿಲಿಗೆ ರನ್ನಾದ ನೇಕೆಹಾಕಿ
ಮುದ್ದು ಕಂದಣ್ಣನ ಮುದ್ದಾಡಿ । ನೇಕೆಗ್ಹಾಕಿ
ನೀನು ತೆಗಿಯೆ ವಜ್ರಾದ ಅಗಣೇಯ....॥

ಅಗಣೇಯ ತೆಗೆದಾಳು ಕೈಎತ್ತಿ ಮುಗಿದಾಳು
ತಂದಿಟ್ಟ ಕೆರಡು ಮಣಿಗಳ । ಗೌರಾಜೀ
ಯಾಕೆ ಸುರನಾರಿ ಮನಸೊಂದು ಮಣಿಯೆರಡು
ಇಬ್ಬರುಂಟೀನೆ ಪುರುಷಾರು....॥

ನನಗಿನ್ನೊಬ್ಬ ಪುರುಷನಾದಾರೆ ಧರೆಯೇನು ಬೆಳದೀತು
ನಿಮಗೊಂದು ನಿಮಜಡೆಯ ಒಳಗಿರುವ । ಸುರನಾರಿ
ಗಂಗಾದೇವಿಗೊಂದು ಮಣಿಯಾದೇ ...॥

ಗಂಗೆ ತಂದ ಮಾತ ನಿನಗ್ಯಾರೇಳಿದೋರು
ಹೊಡಿಗಾರ ಚೆನ್ನಬಸವಯ್ನ । ದೆಸೆಯಿಂದ
ಗಂಡ ಹೆಂಡಿರಿಗೆ ಜಗಳಾವು....॥

ಬಸವಾನ ಕರೆಸೀರಿ ಬಸಮಂಗ ಹುಯಿಸೀರಿ
ಕೊಂಬುಮೆಟ್ಟಿ ಕೊಂಬ ಸಿಗಸೀರಿ । ಬಸವಯ್ಗೆ
ಊರು ಬಿಟ್ಟು ಬೇಗ ತೆರಳೀಸಿ....॥

ತಿಟ್ಟ ಹುಲ್ಲು ಮೇದು ಕಟ್ಟೀಲಿ ನೀರುಕುಡಿದು
ಚಿಂತೆ ಬಂದು ಮನಿಗ್ಯವನೆ । (ಮನಿಗಿರುವ) ಬಸವಯ್ನ
ಕಡೆ ಅಂತ ಬಿಟ್ಟು ಹೊರಡೀಸಿ....॥

ಬಸವ ಬಸವನಂತ ಬಸವನ್ಯಾಕೆ ಬೈಯ್ದಿರಾ
ಬಸವನಲ್ಲಾ ಸ್ವಾಮಿ ಗಿಣಿರಾಮೂ—ಅವನು
ಬಸವನಲ್ಲಾ ಸ್ವಾಮಿ ಗಿಣಿರಾಮೂ....॥

ಗಂಗಮ್ಮ ಗೌರಮ್ಮ ಒಂದ್ಹೀಗೆ ನೀರಿಗ್ಹೋಗಿ
ಅಂಗಾಲು ತಗುಲಿ ಶರಣೆಂದೆ । (ಶರಣೆಂದ) ಕಾರಣದಿಂದ
ಅಂಬಿಗರ ಮಗಳೆ ಸುಖಿಬಾಳು....॥

ನೀನು ಅಂದಂಗೆ ಮತ್ತೊಬ್ಬಳಂದಿದ್ರೆ
ಇಕ್ಕೇನು ಮೀನು ಮಸಳೇಯ—ನಾನು
ಇಕ್ಕೇನು ಮೀನು ಮಸಳೇಯ....॥

ನಿಮ್ಮಪ್ಪನಿಗಿಕ್ಕು ನಿಮ್ಮಮ್ಮನಿಗಿಕ್ಕು
ಇಕ್ಕೆ ನೀನೇಳು ಬಳಗಾಕೆ । ಎಲೆ ಗಂಗೆ
ನೀನಿಕ್ಕೆ ನೀನೇಳು ಬಳಗಾಕೆ....॥

ನಮ್ಮಪ್ಪನಿಗೆ ಇಕ್ಕಿವಿನಿ ನಮ್ಮಮ್ಮನಿಗೆ ಇಕ್ಕಿವಿನಿ
ನನ್ನೇಳು ಬಳಗಕ್ಕೆ ಇಕ್ಕಿವಿನಿ । (ಇಕ್ಕಿ) ಮಿಕ್ಕಿದ
ಮೀನು ಇಕ್ಕಿವಿನಿ ಸರಿಯ ಸವತೀಗೆ....॥

ಗಂಗೆ ಗೌರಮ್ಮ ಒಂದೀಗೆ ಜಗಳ ಕಾಯುವಾಗ
ಸಿಂಹಾಸನದ ಮೇಲೆ ಶಿವರಾಯ । ಕೂತುಕೊಂಡು
ಆನಂದಗೊಂಡು ನಗುತಾನೆ....॥





—ಎರಡು

ಉತ್ತರದೇವಿ

ಮತ್ತು

ಇತರ ಕಾದುಗಳು





ಬಂಜೆ ಹೊನ್ನಮ್ಮ

ಅಯ್ಯಯ್ಯೊ ! ಶಿವರಾಯ ಮೈಮರೆಯದೆ ನೀನು
ಬಂಜೆಯೆಂಬ ಸೊಲ್ಲು ಬಿಡಿಸಯ್ಯ....ಶಿವರಾಯ
ನೀನು ಬಂಜೆಯೆಂಬ ಸೊಲ್ಲು ಬಿಡಿಸಯ್ಯ !

ರೈತನ ಸಾಹಿತ್ಯವು ಅವನ ಜೀವನದ ಚಿತ್ರ. ರೈತರು ಹೊಲಗದ್ದೆಗಳಲ್ಲಿ ಬೆಳಗಿನಿಂದ ಸಂಜೆಯವರೆಗೆ ಹೊಲವನ್ನು ಉಳುವಾಗ, ಪೈರನ್ನು ನಾಟ ಹಾಕುವಾಗ, ಕಳೆಯನ್ನು ಕೀಳುವಾಗ, ಬೆಳಸನ್ನು ಕಾಯುವಾಗ, ದಿನಗಟ್ಲೆ ಗಾಡಿಯನ್ನು ಹೊಡೆಯುವಾಗ, ರೈತರ ಹೆಂಗಸರು ತಮ್ಮ ಮನೆಯ ಛತ್ತ, ರಾಗಿ, ಮುಂತಾದುವುಗಳನ್ನು ಸ್ವತಃ ತಾವೇ ಕುಟ್ಟುವಾಗಲೋ, ಬೀಸುವಾಗಲೋ, ನೀರಸವಾದ ತಮ್ಮ ಕೆಲಸಗಳ ಬೇಸರದ ಪರಿಹಾರಕ್ಕಾಗಿ, ದಣುವಾರುವುದಕ್ಕಾಗಿ, ಹಾಡುಗಳನ್ನು ಹೇಳಿಕೊಳ್ಳುವರು. ಅವರ ಹಾಡುಗಳಲ್ಲಿ ಅವರ ಜೀವನದ ಅನುಭವದ ಚಿತ್ರಗಳು ಮೂರ್ತಿವತ್ತಾಗಿ ಎದ್ದು ಕಾಣುತ್ತವೆ. ಹಿಂದಿನ ಕಾಲದಲ್ಲಿ ಹಳ್ಳಿಗಾಡಿನವರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿ ಸುಸಂಸ್ಕೃತರನ್ನಾಗಿ ಸತ್ಪುರುಷರನ್ನಾಗಿ ಮಾಡಲು, ಈ ಹಾಡುಗಳು ವಿಶೇಷವಾಗಿ ಸಹಕಾರಿಯಾಗಿದ್ದುವು.....

ಹಾರ್ಮೋನಿಯಂ, ಬುಲ್‌ಬುಲ್ ತರಂಗ, ಸಿನಿಮಾ, ರೇಡಿಯೋಗಳು ಬಂದು ಕುಟ್ಟುವ, ಬೀಸುವ, ಉಳುವ, ನೇಯುವ ಯಂತ್ರಗಳು ಅವುಗಳೊಡನೆ ಮೇಳಗೂಡಿ, ನೈಸರ್ಗಿಕವಾಗಿ, ಅನುಭವ ಪೂರ್ಣವಾಗಿ, ಶಾಂತವಾಗಿ ಚಿಮ್ಮಿ ಬರುತ್ತಿದ್ದ ಹಳ್ಳಿಯ ಪದಗಳ ಗಂಟಲನ್ನು ಹಿಸುಕುತ್ತಿವೆ. ಹಿಂದಿನ ಕಾಲದಲ್ಲಿ ರೈತನು ಕಟ್ಟಿದ್ದ, ಹಾಡಿದ, ಹೃದ್ಗತವಾಗಿ ಬಾಯಿಂದ ಬಾಯಿಗೆ ಹರಿಸಿದ ಕನ್ನಡನಾಡಿನ ಮಾತು, ಮರ್ಯಾದೆ ಮತ್ತು ವಿಶಾಲ ಹೃದಯ, ಇವುಗಳೆಲ್ಲದರ ಸ್ವರೂಪವಾದಂತ ಜನಪದ ಸಾಹಿತ್ಯವು ಇಂದು ಮಾಯವಾಗುತ್ತಿದೆ. ಈಗಲೂ ಅಲ್ಲಲ್ಲಿ ಅಲ್ಪಸ್ವಲ್ಪ ಉಳಿದಿರುವ ಹಾಡುಗಳನ್ನು ಸಂಗ್ರಹ ಮಾಡುವುದೆಂದರೆ ಅತಿ ಪ್ರಯಾಸದ ಕೆಲಸ.

—ಶ್ರೀ ಬಿ. ಎಸ್. ರಂಗಸ್ವಾಮಿ

ಬಂಜೆ ಹೊನ್ನಮ್ಮ

ಹುಟ್ಟುಬಹುದು ಹೊನ್ನಮ್ಮ—ನೀ ಹುಟ್ಟುಬಹುದೆ ಧರೆಮೇಲೆ
ನೀ ಹುಟ್ಟುಬಹುದೆ ಈ ಧರೆಮೇಲೆ....॥

ಬಂಜೆಯು ಮನೆಮುಂದೆ ಬಂಗಾರದ ಕಲುಬಾವಿ
ಬಂಗಾರದ ಕಲುಬಾವಿಗೆ ಬಂದಾವು ।
ಬಂಗಾರದ ಕಲುಬಾವಿಗೆ ಬಂದಾವು ।
ಮೂರು ಸಾವಿರಗಿಣಿ ಹಿಂಡು
ಬಂದಾವು–ಮೂರು ಸಾವಿರ ಗಿಣಿಹಿಂಡು ।

ಮೂರು ಸಾವಿರ ಗಿಣಿಯೊಳಗೆ ।
ಒಂದು ಯಜಮಾನ ಗಿಣಿ ಏನ್ಹೇಳುತ್ತಿತ್ತು ।
ಆ ಯಜಮಾನ ಗಿಣಿ ಏನ್ಹೇಳುತ್ತಿತ್ತು ?

ಬಂಜೆಯು ಬಾವಿಯ ನೀರನು ಕುಡಿದಾರೆ
ನಾವು ನೀರನು ಕುಡಿದಾರೆ ।
ನಾವೂವೂ ಬಂಜೇರು ಆದ್ಹೇವು ಎಂದೀತು
ನಾವು ಬಂಜೇರು ಆದ್ಹೇವು ಎಂದೀತು ।

ಬಂಜೆಗೆ ಬಂಗಾರದ ಬಾಳೆಯುಂಟು
ಬಂಗಾರದ ಬಾಳೆಯುಂಟು ।
ಬಂಗಾರದ ಬಾಳೆಗೊಂದು—ಶೃಂಗಾರ್ದ ಗೊನೆಯುಂಟು
ಶೃಂಗಾರ್ದ ಗೊನೆಯುಂಟು ।

---

*ಈ ಬಗೆಯ ಕೆಲವು ಪದಗಳನ್ನು ಬಯಲು ಸೀಮೆಯಲ್ಲಿ ದೊಂಬಿದಾಸರು ಏಳನಾದವನ್ನು ಸುಡಿಸಿಕೊಂಡು ಭಿಕ್ಷೆಗೆ ಬಂದಾಗ ಹಾಡುವರು.

ಶೃಂಗಾರ್ದ ಗೊನೆಗೊಂದು ನೂರಾರು ಹಣ್ಣುಂಟು
ನೂರಾರು ಹಣ್ಣುಂಟು ।
ನೂರಾರು ಹಣ್ಣಿಗ್ಹೀಗ—ಬಂದಾವು ಗಿಣಿಗಳು
ಹಣ್ಣಿಗ್ಹೀಗ ಬಂದಾವು ಗಿಣಿಗಳು ।

ಮೂಡಲಿಂದ ಮೂರು ಸಾವಿರ ಗಿಣಿಗಳು ಬಂದಾವು
ಮೂರು ಸಾವಿರ ಗಿಣಿಗಳು ಬಂದಾವು ।
ಮೂರು ಸಾವಿರ ಗಿಣಿಯೊಳಗೆ ಒಂದು ಯಜಮಾನ
ಗಿಣಿ ಏನ್ಹೇಳುತ್ತಿತ್ತು ।
ಒಂದು ಯಜಮಾನ ಗಿಣಿ ಏನ್ಹೇಳುತ್ತಿತ್ತು ।

ಬಂಜೇಯ ಹಣ್ಣು ತಿಂದಾರೆ ನಾವೂವೂ ಬಂಜೇರು ।
ಹಣ್ಣು ತಿಂದಾರೆ ನಾವೂವೂ ಬಂಜೇರು ।
ಎಂದೆಂದೂ ನಾವೂವೂ ಬಂಜೇರು ।

ಅಯ್ಯಯ್ಯೋ! ಶಿವರಾಯ....ಇನ್ನೇನು ಏನು ಫಲವು
ನನಗೆ ಇನ್ನೇನು ಏನು ಫಲವು ।
ಹಾಳು ಜನುಮ ಹುಟ್ಟುಬಹುದೆ ಧರೆಯೊಳಗೆ
ಈ ಕೆಟ್ಟ ಜನುಮ ।
ಹುಟ್ಟುಬಹುದೆ ಧರೆಯೊಳಗೆ ಈ ಹೆಣ್ಣು ಜನುಮ ।

ಹುಟ್ಟ ಹುಟ್ಟ ಸಾಯೋದೆ ಧರೆಯೊಳಗೆ
ಈ ಕೆಟ್ಟ ಜನುಮ ಹೆಣ್ಣು ಜನುಮ ।
ಹುಟ್ಟುಬಹುದೆ ಧರೆಯೊಳಗೆ ಈ ಹೆಣ್ಣು ಜನುಮ ॥

ಇನ್ನೇನು ಶಿವರಾಯ....ನಾನು ಮಾಡಿದ ಫಲವ್ಹೇನೊ ।
ನಾನು ಮಾಡಿದ ಕರ್ಮಾವ ಬಿಡಿಸಯ್ಯ ಶಿವರಾಯ
ನೀನು ಬಿಡಿಸಯ್ಯ ಶಿವರಾಯ ।

ಅಯ್ಯಯ್ಯೋ! ಶಿವರಾಯ ಮೈಮರೆಯದೆ ನೀನು
ಬಂಜೆಯೆಂಬ ಸೊಲ್ಲು ಬಿಡಿಸಯ್ಯ....ಶಿವರಾಯ
ನೀನು ಬಂಜೆಯೆಂಬ ಸೊಲ್ಲು ಬಿಡಿಸಯ್ಯ ।

ಅಯ್ಯಯ್ಯೋ! ಶಿವರಾಯ ಇನ್ನೇನು ಏನು ಕರ್ಮ
ಶಿವರಾಯ ನನಗೆ ಇನ್ನೇನು ಏನು ಕರ್ಮ ।
ನಾವು ಅಕ್ಕಕ್ಕ ತಂಗೇರು ಲೆಕ್ಕಾಕೆ ಏಳು ಮಂದಿ
ನಾವು ಏಳು ಮಂದಿ ಅಕ್ಕಾತಂಗೇರು–ಹುಟ್ಟೇದೊ ಶಿವರಾಯ
ನಾವು ಹುಟ್ಟೇದೊ ಶಿವರಾಯ ।

ಆರುಮಂದಿ ಅಕ್ಕದಿರಿಗೆ ನೂರುಮಂದಿ ಸಂತಾನ
ಅಕ್ಕದಿರಿಗೆ ನೂರುಮಂದಿ ಸಂತಾನ ।
ನನಗೊಂದು ಸಂತಾನ ಕೊಡಲಿಲ್ಲಾ ಶಿವರಾಯ ॥
ಅಯ್ಯಯ್ಯೋ! ಶಿವರಾಯ ಹುಟ್ಟುಬಹುದೆ ಈ ಕೆಟ್ಟಜನುಮ
ಹುಟ್ಟುಬಹುದೆ ಈ ಧರೆಮೇಲೆ ಈ ಹೆಣ್ಣುಜನುಮ ।

ಶಿವ ಶಿವ ಎಂದಾಳು ಒಳ್ಳೆ ಶಿವನಾಮ ನೆನೆದಾಳೆ
ಶಿವನನ್ನು ನೆನೆಯುತ್ತಾ ಶಿವಧ್ಯಾನ ಮಾಡೂತ
ಶಿವಧ್ಯಾನ ಮಾಡೂತ–ಶಿನ ಶಿವ ಎಂದಾಳೆ
ಹೊನ್ನಮ್ಮ ಶಿವಪೂಜೆ ಮಾಡ್ಯಾಳೆ ।

ನಿಜವಂತೆ ಹೊನ್ನಮ್ಮ ನಿಜದಿಂದ ಶಿವನೊಪ್ಪಿ
ಶಿವ ಶಿವ ಎಂಬ ಧ್ವನಿಯು–ಶಿವನ ಪಾದಕೆ ಎರಗಿ ।
ಶಿವನ ಪಾದಕೆ ಎರಗಿ....।

ಪಾರ್ವತಿಯ ನೆನೆದಾನೆ ಶಿವರಾಯ ತನ್ನೆದುರಿಗೆ
ನರರೊಳಗೆ ಯಾರಮ್ಮ—ಇಂತಹ ಸ್ತ್ರೀಯಾರು ?
ಯಾರಮ್ಮ ಇಂತಹ ಸ್ತ್ರೀಯಾರು ಈ ಜಗದೊಳಗೆ ।

ಅವಳು ಆಡಿದಮಾತು ಅವಳಂಗ್ಹೀಗ ।
ಹೋಗಿ ಬರುವೆ ಎಲೆ ನಾರೀ—ಬಂಜೇಯ ಮನೆಗ್ಹೀಗ
ನಾನು ಬಂಜೇಯ ಮನೆಗ್ಹೀಗ ।

ಶಿವದೇವನ ನೆನೆದು ಶಿವಬಂಜೆ ದೇವಿಯು ।
ಶಿವಬಂಜೆ ದೇವೀಯು ।
ಶಿವನಲ್ಲಿ ಧ್ಯಾನಮಾಡಿ—ಒಳ್ಳೆ ಶಿವಲಿಂಗವ ಪೂಜೆಮಾಡಿ
ಹಾಸಿ ಹಾಸಿ ಅಡ್ಡ ಬಿದ್ದು—ಒಳ್ಳೆಲೇಸು ಮಾಡೋ ಶಿವರಾಯ ।
ನೀನು ಒಳ್ಳೆಲೇಸು ಮಾಡೋ ಶಿವರಾಯ ।

ಹಾಳು ಜನುಮ ಹುಟ್ಟುಬಹುದೆ ಈ ಧರೆಯೊಳಗೆ
ಈ ಕೆಟ್ಟ ಜನುಮ ...
ಹುಟ್ಟುಬಹುದೆ ಈ ಧರೆಯೊಳಗೆ ಈ ಹೆಣ್ಣು ಜನುಮ ।

ಇಂತಹ ಕೆಟ್ಟ ಜನುಮಕೆ ಅಟ್ಟಹಾಸ ಕೊಡಬಹುದೆ
ಇಂತಹ ಕೆಟ್ಟ ಜನುಮದ ನಾರಿಯರಿಗೆ ।
ಒಟ್ಟಗೊಂದು ಸಂತಾನ—ಕೊಡು ಬಾರೋ ನನ ಗುರುವೆ
ನನಗೊಂದು ಸಂತಾನ—ಕೊಡು ಬಾರೋ ನನ ಗುರುವೆ ।

ನಿನ್ನ ನೆನೆದು ನೆನ್ನೆಯಿಂದ ನಿನ್ನ ಪಾದವನು ಸೇರಿ
ಶಿವನ ಪಾದವ ನೆನೆದು—ಶಿವನ ಧ್ಯಾನದಿ ನೆನೆದು
ಶಿವ ಶಿವ ಎಂದಾಳೆ—ಶಿವಪೂಜೆ ಮಾಡ್ಯಾಳೆ
ಹೊನ್ನಮ್ಮ ಶಿವಪೂಜೆ ಮಾಡ್ಯಾಳೆ ।

ಶಿವನಾಡಿದ ಮಾತು—ನಿಜವಂತೆ ಹೊನ್ನಮ್ಮ
ಬಾಗಿ ಬಾಗೂತ ಶರಣೆಂದು ಮಾತನಾಡುತ ।

ಕರವನ್ನೆ ಹಿಡಿದಾಳೆ ಒಳ್ಳೆ ಕನ್ನೆಗೌರಿ ಬಂಜಮ್ಮ
ಹರನು ನೀನಪ್ಪ ಹರದೇವ ನನ ತಂದೆ ।
ಹರದೇವ ನನ ತಂದೆ—ಕರುಣಾವ ನೀಡಯ್ಯ
ನೀ ಕರುಣಾವ ನೀಡಯ್ಯ ।
ನನ ಗುರು ಮನೆಸ್ವಾಮಿ ಶಿವರಾಯ ।

ಬಂಜೆಯಾಡಿದ ಮಾತೀಗೆ ಬಾಗೀದ ಶಿವರಾಯ
ಹಗಲಿರುಳು ತಿಳಿಯಾದೆ—ಆಗಲೇಯ ಹೊರಟಾನು
ಶಿವರಾಯ ಆಗಲೇಯ ಹೊರಟಾನು ।

ಹೂಡಿದ ರಥವೆರಡು ಜೋಡಿಯಲಿ ಕುಳಿತಾರು
ಶಿವನು ಪಾರ್ವತಿ ಸೇರಿ-ರಥವ್ಹೇರಿ ಬರುವಾಗ
ಅವರು ರಥವ್ಹೇರಿ ಬರುವಾಗ ।

ರಥವು ಬರುವಾಗ ನಿಜವಂತೆ ಹೊನ್ನಮ್ಮ
ಅತಿಯಾಸೆಯಿಂದಾಗಿ ಶಿವಪಾದ ಸೇರೂತ
ಗತಿಗೆಟ್ಟ ನನ ಜನುಮ ಸತಿ ಸೇರಲಿಲ್ಲವಲ್ಲಾ ।
ನಾನು ಸತಿ ಸೇರಲಿಲ್ಲವಲ್ಲಾ ।

ಪತಿಪತಿಗೆ ಪತಿಯನ್ನು ನೆನೆಕೊಂಡು ಹೊನ್ನಮ್ಮ
ಅನುದಿನ ಅಡ್ಡಬಿದ್ದು ಬೀಳುತಾವ ಇರುವಾಗ
ರಥವಿಳಿದು ಬಂದಾನು ಶಿವರಾಯ ।

ರಥವಿಳಿದು ಬಂದಾಗ ನಿಜದಿಂದ ಹೊನ್ನಮ್ಮ
ಅತಿ ಮುದದಿ ನಗೆಯಾಡಿ ।
ನನ್ನ ಪಶುಪತಿಯ ಪಾದವಿದು ।
ಧನ್ಯನಾದೆ ನಾನಿ೦ದೀಗ ಧಾರುಣಿಯ ಒಳಗೆಲ್ಲಾ
ನಾನು ಧಾರುಣಿಯ ಒಳಗೆಲ್ಲಾ ।

ಪಾಪಿ ನನ ಜನುಮವ ಕಣ್ಣಾಬಿಟ್ಟು ನೋಡಯ್ಯ
ಕನ್ನೇಗೌರಿ ನಿನಗ್ಹೇನೆ—ಹೊನ್ನೆದೇವಿ ಎಂದಾನು ?
ಏನು ಹೇಳಲಯ್ಯ ನನ ತಂದೆ ಶಿವರಾಯ ।
ಹುಟ್ಟುಬಾರದು ನನ ಗುರುವೆ ನರರೊಳಗೆ ಈ ಹೆಣ್ಣು ಜನುಮು ।

ಕಟ್ಟಿ ಕಡೆಗೆ ಕಳುಹಿಸಿದೆ ಪಾಪಿಯು ಈ ನೆರಜನ್ಮ
ಆರುಮಂದಿ ಅಕ್ಕದಿರಿಗೆ ಒಳ್ಳೆ ನೂರುಮಂದಿ ಸಂತಾನ
ನನಗೊಂದು ಸಂತಾನ ಕೊಡನಲ್ಲೊ ಶಿವರಾಯ
ಕೊಡನಲ್ಲೊ ಶಿವರಾಯ ।

ಬಂಜೇರು ಆಡಿದ ಮಾತು ಬಂದಾವು ಕಣ್ಣೀರು ।
ಪಾರ್ವತಿ ನಗೆಯಾಡಿ ಶಿವರಾಯನ ಮುಖನೋಡಿ
ನರರೊಳಗೆ ಬಂದಿರುವ ಈ ಚೆಲುವೆ ನಾರಿಯ ನೋಡಿ ।
ಇವಳೀಗೆ ಕೊಡಬಾರದೆ ಸುಖ ಸಂತಾನವನು
ಅತಿಯಿಂದ ಪತಿಯಿವರು ಸುಖದಿಂದ ನಗೆಯಾಡಿ
ಹಿತದಿಂದ ಕೈಯಿದಿರು ನಿಜವಂತೆ ಹೊನ್ನಮ್ಮಗೆ ।
ನೂರುಮಂದಿ ಸಂತಾನ ನೀಡ್ಯಾರು ಶಿವರಾಯ ।

ಬಂಜೇಯು ಮಾಡೀದ ಬಂಜೇಯು ಫಲಕೀಗ ।
ಬಂಜೇಯ ನಿಜಕಾಗಿ ಬಂದಾನು ಶಿವರಾಯ
ನಿಜಕ್ಕಾಗಿ ಬಂದಾನು ಶಿವರಾಯ ।

ಆರು ತಿಂಗಳು ಬಿಮ್ಮನಸೆ ಆರು ತಿಂಗಳು ದಿನವಂತೆ
ಆರು ಮೂರು ತಿಂಗಳೀಗೆ ಒಳ್ಳೆ ನೂರು ಮಂದಿ ಕಂದಗಳು
ಜೆಂದದಿಂದ ಜರಣಾವ ವಂದಿಸಿದಳು ಪಾರ್ವತಿ ।
ಮೂರು ಆರು ದಿನದೊಳಿಗೆ ಒಳ್ಳೆ ನೂರು ಮಂದಿ ಮಕ್ಕಳಲ್ಲೊ
ಹಾದಿ ಬೀದಿಯೊಳಗೆಲ್ಲಾ ಒಳ್ಳೆ ಜೆಂಡು ಬುಗುರಿಯಾಡುತ ।
ಬಿಲ್ಲು ಬಾಣಾವ ಹಿಡಿಯೂತ ಒಳ್ಳೆ ಮಲ್ಲಯುದ್ಧ ಮಾಡೂತ ।

ಎಲ್ಲಿಯೆಲ್ಲಾ ನೋಡಿದರು ಬಂಜೇಯ ಕಂದಗಳ
ಆರು ಮಂದಿ ಅಕ್ಕದಿರಿಗೆ ಒಳ್ಳೆ ನೂರು ತರ ಮನಸುಂಟು
ಎಲ್ಲೂ ಇಲ್ಲದ ಕಂದಗಳು ಯಾವಗ್ಹೀಗ ಬಂದಾವೆಂದೂ
ಎಲ್ಲರೀಗೆ ಕೊಡುವಂತವಲ್ಲಾ ಶಿವನ ಹಣೆಯಿಂದ ಕಾಣದಂಗೆ
ಕೊಟ್ಟನಲ್ಲಾ ಒಳ್ಳೆ ಹಾಳುಮಾರ ಶಿವರಾಯ ।

ಹಾದಿಲಾಡೊ ಮಕ್ಕಳ ಹಾದಿ ಜೆಂದ ಮಕ್ಕಳ ಧ್ವನಿ ಜೆಂದ
ಏನು ಮಾಡಾನ ಅಕ್ಕ ತಂಗೇರ....
ಎಂತು ಮಾಡಾನ ನಾವ್ಹೀಗ ।
ಮಾಡಬೇಕು ಮೋಸವನ್ನೂ ಮನಸಿನಲ್ಲಿ ಹುಟ್ಟತೀಗ
ಆಡಿಕೊಳ್ಳುವ ಬಗೆಯನ್ನು ಮುರಿದಾನು ಶಿವರಾಯ ।

ಅಲ್ಲಿ ಇಲ್ಲಿ ಆಡುವಂಥ ಸಣ್ಣ ಪುಟ್ಟ ಕಂದಗಳ
ಎಳೆತಂದು ಹಾಕಿದರು ಅನ್ನಾವ ।
ಅನ್ನವನ್ನು ಹಾಕುವಾಗ ಜೆನ್ನ ಕಾರ ನೋಡಿದಾರು ।

ಒಬ್ಬೊಬ್ಬರೆಲ್ಲಾ ಸೇರು ವಿಷದ ಕಜ್ಜಾಯ ಮಾಡೀಸಿ
ನಾಳೆ ಬಂದ ಕಂದಗಳ ಮಾಯದಿಂದ ಎಳೆತಂದು
ವಿಷದ ಕಜ್ಜಾಯ ಮಾಡೀಸಿ ತಿನ್ನಿಸಿದರು ।

ಸಣ್ಣ ಪುಟ್ಟ ಮಕ್ಕಳೆಲ್ಲಾ ಮೋಸಪಟ್ಟು ಹೋದರಲ್ಲಾ
ತಾಯಿ ಬಂಜೆಗೀಗೆ ತಾಯಿ ತಾಯಿ ಎಂದು ಬರುವ—
ಕಂದಗಳು ಬರಲಿಲ್ಲವೆಂದು ಮನಸಿಟ್ಟಳಾಗ ॥

ಓಡಿ ಬಂದು ಬೀದಿಯಲಿ ಕಂದದೀರ ಕೂಗಿಕೊಂಡು
ಎಲ್ಲಿ ಕಾಣೆಲಿಲ್ಲವಲ್ಲಾ ನನ ಕಂದಗಳು ಶಿವರಾಯ—
ಹುಡುಕಿ ಹುಡುಕಿ ಓಡಿಬಂದು—ತಡಕಿದಳು ಹಾಳುಬಾವಿಯ
ತಡಕಿದಳು ಹಾಳುಬಾವಿಯ ।

ಸಿಕ್ಕಲಿ ನನಕಂದ ಶಿವರಾಯ ಎಂದಳಾಗ
ಅಕ್ಕರದಿ ಹಾಲು ಕುಡಿದು—ಆಡಾಕೆ ಬಂದಾ ಕಂದಗಳ ।
ನೋಡನೆಂದಾರೆ ಸಿಕ್ಕಲಿಲ್ಲ ಶಿವರಾಯ ।
ಏನು ಮಾಡಲಿ ನನ ತಂದೆ—ಶಿವರಾಯ ನನ ಗುರುವೆ ।
ನೀನು ಕೊಟ್ಟ ಫಲವೆಲ್ಲಾ—ನೀರವರತು ಹೋಯಿತಲ್ಲಾ
ಯಾರಲೀಗ ಹೇಳಲಯ್ಯ ಯಾರ ನಾನು ಕೇಳಲಯ್ಯ ।

ಏನು ಮಾಡಲಿ ನನ ಗುರುವೆ ನಾನು ಎಂತು
ಮಾ ವನೆ ।
ಓಡಿ ಓಡಿ ಮನೆಗೆ ಓಡಿ ಬಂದು
ಶಿವಲಿಂಗ ನೋಡಿ ನೋಡಿ ಮುದ್ದಾಡಿ ।
ಹಾಳು ಮನೆಯ ಶಿವರಾಯ ।
ಯಾರ ನನ್ನ ಕಂದಗಳ ಅವಿಸಿದರು....ನನ ಗುರುವೆ
ಹಗಲಿರುಳು ಗೋಳಾಡಿ ಆಗಲೆಯ ನೆನೆದಾಳು ॥


ಮಾಯವಾದ ಕಂದಗಳ ಒಳ್ಳೆ ನ್ಯಾಯದಿಂದ ತಂದುಕೊಡಪ್ಪ
ಸತ್ಯವನ್ನೆ ಹಿಡಿದಾಳೆ—ಒಳ್ಳೆ ನಿತ್ಯದಿಂದ ಹೇಳಿದಾಳೆ ।
ಬಂದಾನು ಶಿವರಾಯ—ಒಳ್ಳೆ ಬಂಜೇಯ ನಿಜಕೇಗ ।
ಬಂದಾ ಬಂದಾ ಶಿವರಾಯ ।
ಬಂಜೆಯೀಗ ಹರನು ಹರಿಯೆ ಎಂದಾಳು
ಒಳ್ಳೆ ಹರಿಯ ಪಾದವ ಹಿಡಿದಾಳು ॥

ನೀನು ಕೊಟ್ಟ ಫಲವೆಲ್ಲಾ ಮಾಯವಾಗಿ ಹೋಯಿತಲ್ಲಾ ।
ಏನು ಮಾಡಲಿ ಶಿವರಾಯ—ನಾನೆಂತು ಮಾಡಲಿ ಶಿವರಾಯ ।
ಬಂಜೆಯ ಸತ್ಯಕ್ಕೆ ಮೆಚ್ಚಿದನು ಶಿವರಾಯ ॥
ಸತ್ತುಹೋದ ಮಕ್ಕಳ—ಒಳ್ಳೆ ನಿಚ್ಚದಿಂದ ಪೂಜಿಸ್ಯಾಳು ।
ಹೊನ್ನಮ್ಮ ನಿಚ್ಚದಿಂದ ಪೂಜಿಸ್ಯಾಳು ।

ನೀತಿಮಾರ್ಗ ಹಿಡಿದು ಹೊನ್ನಮ್ಮ
ಸತ್ತುಹೋದ ಮಕ್ಕಳ—ಒಳ್ಳೆ ದೃಷ್ಟಿಯಿಂದ ಶಿವರಾಯ ।
ಮಾಯವನ್ನೆ ಮಾಡಿದಂತೆ—ಒಳ್ಳೆ ನ್ಯಾಯ ಮಾರ್ಗವನು ತೋರಿ।
ಒಳ್ಳೆ ಹಾಲು ಬೆಣ್ಣೆ ತಿಂದ ಕಂದಗಳ ।
ನೀತಿಯಿಂದ ಕರೆತಂದ....ಶಿವರಾಯ
ನೀತಿಯಿಂದ ಕರೆತಂದ ।

ಬಂಜೆ ಹೊನ್ನಮ್ಮಗೀಗ ಮಾಯವಾದ ಮಕ್ಕಳೆಲ್ಲಾ
ಪಡೆದು ಕೊಟ್ಟ ಶಿವರಾಯ ।
ಪಡೆದು ಕೊಟ್ಟ ಶಿವರಾಯ ।
ಹುಟ್ಟುಬಹುದು ಹೊನ್ನಮ್ಮ—ನೀ ಹುಟ್ಟುಬಹುದು ಧರೆಮೇಲೆ
ನೀ ಹುಟ್ಟುಬಹುದು ಧರೆಮೇಲೆ ।
ಹಾಳು ಜನುಮ ಹುಟ್ಟುಬಹುದೆ ಧರೆಯಲ್ಲಿ ॥

ಹುಟ್ಟುಬಹುದೆ ಧರೆಯಲ್ಲಿ—ಕೆಟ್ಟ ಜನುಮ ಹಾಳು ಜನುಮ।
ನೀ ಹುಟ್ಟುಬಹುದೆ ಈ ಧರೆಮೇಲೆ। ಹೊನ್ನಮ್ಮ
ನೀ ಹುಟ್ಟುಬಹುದೆ ಈ ಧರೆಮೇಲೆ....।



ತಬ್ಬಲಿರಾಯ

ಅವರು ಹನ್ನೆರಡು ಜನಕೆ ಮದ್ದೆಯಾಯ್ತು ಸುನ್ನಲಾಲೀ ।
ಅವನು ಕಡೆಯಲುಟ್ಟೀದ ತಬ್ಬಲಿರಾಯ ಸುನ್ನಲಾಲೀ ।
ಅವನು ಒಪ್ಪಿದಂಥ ಹೆಣ್ಣೆ ಇಲ್ಲಾ ಸುನ್ನಲಾಲೀ ।

ಒಂದು ನಾಡಿನ ಜನರ ಬದುಕು, ಸಂಸ್ಕೃತಿ, ಆಶೆ ನಿರಾಶೆ, ಸುಖ ದುಃಖ, ರೀತಿ ನೀತಿಗಳನ್ನು ವಿಶದವಾಗಿ ಚಿತ್ರಿಸಿ 'ಸಾಹಿತ್ಯ, ಜನಜೀವನದ ಕನ್ನಡಿ' ವೆನಿಸಿಕೊಂಡಿದೆ. ಈ ಧ್ಯೇಯದಿಂದಲೇ ರಚಿತವಾದ ಜನಪದ ಸಾಹಿತ್ಯದಲ್ಲಿ ಪಾಂಡಿತ್ಯವಾಗಲೀ ಪ್ರತಿಭೆಯಾಗಲೀ ವಿಶೇಷವಾಗಿಲ್ಲ. ಇದರಲ್ಲಿ ಜಾತಿ ಮತಗಳ ಪಕ್ಷಪಾತವಿಲ್ಲ, ಸ್ತ್ರೀ ಪುರುಷರೆಂಬ ಭೇದವಿಲ್ಲ. ಕೀಳು ಮೇಲೆಂಬ ಭಾವನೆಯೂ ಇಲ್ಲ. ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ಉದ್ರೇಕಗಳಿಗೆ, ಭಾವಾವೇಶಗಳಿಗೆ ಸರಿಯಾದ ಸನ್ನಿವೇಶವೊದಗಿದಾಗ ಜನಪದ ಸಾಹಿತ್ಯವು ತಾನೇ ತಾನಾಗಿ ಹುಟ್ಟುವುದು. ಈ ಸಾಹಿತ್ಯದಲ್ಲಿ ಶಬ್ದಗಳ ಆಡಂಬರವಿಲ್ಲ. ರಾಗಗಳ ಕೋಟಲೆಯಿಲ್ಲ. ಅನಾವಶ್ಯಕವಾದ ವ್ಯಾಕರಣದ ನಿರ್ಬಂಧವೂ ಇಲ್ಲ. ಸರಳವಾದ, ಭಾವಪೂರ್ಣವಾದ ಮುತ್ತಿನಂತಹ ಮಾತುಗಳ ಲಯಬದ್ಧವಾದ ಜೋಡಣೆಯಿಂದ ಜನಪದ ಸಾಹಿತ್ಯದ ಕವಿತೆಯಾರು ಬೇಕಾದರೂ ಬೇಕಾದ ಮಟ್ಟಿನಲ್ಲಿ ಹಾಡಿಕೊಳ್ಳಲು ಅನುಕೂಲವಾಗಿರುವುದು. ತ್ರಿಪದಿ, ಚೌಪದಿ, ಸಾಂಗತ್ಯ ಮೊದಲಾದ ದೇಶೀಯ ಛಂದಸ್ಸುಗಳ ಧಾಟಿ, ಭಾಷೆಯ ಬಳಕೆಗೆ ಹೊಂದಿಕೊಳ್ಳುವುದು. ಈ ಬಗೆಯ ಜಾನಪದ ಗೀತಗಳ ವಿಪುಲತೆಗೆ ಹೆಚ್ಚಾಗಿ ಸ್ತ್ರೀಯರೇ ಕಾರಣರು. ಕಾನನದ ಮಲ್ಲಿಗೆಯಂತೆ ಜನರ ದೃಷ್ಟಿಗೆ ಬೀಳದೆ ತಮಗೆ ಭಾವೋದ್ರೇಕವಾದಾಗ ಭಕ್ತಿಗೀತ, ಭಾವಗೀತಗಳನ್ನು ಹಾಡಿಕೊಂಡು ಜನಪದ ಸಾಹಿತ್ಯವನ್ನು ಸೃಷ್ಟಿಸಿ ಮಾಯವಾದ ಸ್ತ್ರೀ ಸಾಹಿತಿಗಳು ಸಾಹಿತ್ಯದೇವಿಯ ಮಂದಿರಕ್ಕೆ ತಳಹದಿ ಹಾಕಿದರು. ಅವರು ತಮ್ಮ ಅಂತರಂಗವನ್ನು ಪ್ರತಿಬಿಂಬಿಸಿದರು. ಸತ್ವಪೂರ್ಣವಾದ ಆ ಗೀತಗಳು ನಮ್ಮ ನಾಡಿನ ಜನರ ನಾಲಗೆಗಳಲ್ಲಿ ನಲಿದಾಡುವಂತೆ ಮಾಡಿ, ಸ್ತ್ರೀ ಸಾಹಿತ್ಯದ ಬೆಲೆಯನ್ನು ಜನರಿಗೆ ಅರಿವು ಮಾಡಿಕೊಟ್ಟರು.....

—ಶ್ರೀಮತಿ ಬಿ. ನರಸಮ್ಮ, ಎಂ.ಎ.

ತಬ್ಬಲಿರಾಯ*

ಸುವ್ವೀ ಸುವ್ವಮ್ಮಲಾಲೀ ಸುವ್ವಲಾಲೀ
ಸುರಗಿರಿ ವನದಲ್ಲಿ ,,
ಅವರು ತಂದೆ ಭೀಮಣ್ಣನ್ಹೋರು ,,
ತಂದೆ ಭೀಮಣ್ಣನೋರು ,,
ಅವರ ತಾಯಿ ಕುಸುಮಬಾಲೆ ,,
ಅವರು ತಾಯಿ ಕುಸುಮಬಾಲೆ ,,
ಹನ್ನೆರಡು ಜನ ಗಂಡುಮಕ್ಕಳು ,,
ಅವರು ಹನ್ನೆರಡು ಜನಕೆ ಮದ್ವೆಯಾಯ್ತು ಸುವ್ವಲಾಲೀ
ಅವನು ಕಡೆಯಲ್ಹುಟ್ಟೀದ ತಬ್ಬಲಿರಾಯ ,,
ಅವನು ಕಡೆಯಲ್ಹುಟ್ಟೀದ ತಬ್ಬಲಿರಾಯ್ಗೆ ,,
ಅವನು ಒಪ್ಪಿದಂಥ ಹೆಣ್ಣೆ ಇಲ್ಲಾ ಸುವ್ವಲಾಲೀ
ಅವನು ತಕ್ಕದಂಥ ಹೆಣ್ಣೆ ಇಲ್ಲಾ ,,
ಅವರು ತಂದೆ ಭೀಮಣ್ಣನೋರು ,,
ಅವರು ದೇಶ ದೇಶ ತಿರುಗಿ ಬಂದ್ರು ,,
ಅವನು ಒಪ್ಪಿದಂಥ ಹೆಣ್ಣೆ ಇಲ್ಲಾ ,,
ಅವರ ತಾಯಿ ಕುಸುಮಬಾಲೆ ,,
ಅವಳು ದೇಶ ದೇಶ ತಡಕಿ ಬಂದ್ಳು ,,
ಅವನಿಗೆ ಒಪ್ಪಿದಂಥ ಹೆಣ್ಣೆ ಇಲ್ಲಾ ,,
ಅವರು ಹನ್ನೊಂದು ಜನ ಅಣ್ಣತೀರು ಸುವ್ವಲಾಲೀ
ಅವರು ಕೇರಿ ಕೇರಿ ತಿರುಗಿ ಬಂದ್ರು ಸುವ್ವಲಾಲೀ
ಅವನ್ಗೆ ತಕ್ಕದಂಥ ಹೆಣ್ಣೆ ಇಲ್ಲಾ ,,

---

*ಈ ಕಥನಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲೂ, ಮಲೆನಾಡು ಪ್ರಾಂತದ ಹಳ್ಳಿಗಳಲ್ಲೂ-ಬೇಸಿಗೆ ಕಾಲದಲ್ಲಿ ಹೆಂಗಸರು ಬೇಗರವನ್ನು ಕಳೆಯಲು ಹಾಡು ವ ಹಾಡುಗಳಿವೆ.

ಅವ್ರು ಹನ್ನೊಂದು ಜನ ಅತ್ತಿಗೆದೀರು ಸುವ್ವಲಾಲೀ
ಅವ್ರು ಕೇರಿ ಕೇರಿ ತಡಕಿ ಬಂದ್ರು ಸುವ್ವಲಾಲೀ
ಅವ್ರು ಕೇರಿ ಕೇರಿ ಹುಡಕಿ ಬಂದ್ರು ,,
ಅವನ್ಗೆ ತಕ್ಕದಂಥ ಹೆಣ್ಣೆ ಇಲ್ಲಾ ,,
ತಾಯಿ ಕುಸುಮಬಾಲೆ ,,
ನಾನು ಹೆಣ್ಣೀಗೆ ಹೋಗಬೇಕು ,,
ನೀನು ಬೇಗ ಅಡಿಗೆ ಮಾಡವ್ವ ,,
ನೀನು ಬೇಗ ಬುತ್ತೀಯ ಕಟ್ಟವ್ವ ,,
ಅಂಗಂಥ ಹೇಳಿದ ಮಗರಾಯ ,,
ಅವಳು ಮೂಡಾಲ ಅಟ್ಟಾಕೆ ,,
ಮುತ್ತೀನ ಏಣಿಹಾಕಿ ,,
ಅವಳು ಸರ ಸರನೆ ಬೇಯೊ ,,
ಅವಳು ಸಣ್ಣಕ್ಕೀಯ ತೆಗೆದಾಳೆ ,,
ಅವಳು ಬಿರ ಬಿರನೆ ಬೇಯೊ ,,
ಅವಳು ಬೇಳೆಕಾಳು ತೆಗೆದಾಳೆ ,,
ಅವಳು ಸೋರೆಹೂವಿನಂಗೆ ,,
ಅವಳು ಅನ್ನಾವ ಮಾಡ್ಯಾಳೆ ,,
ಅವಳು ಈರೆಹೂವಿನಂಗೆ ,,
ಅವಳು ತುಪ್ಪಾವ ಕಾಸ್ಯವಳೆ ,,
ಅವಳು ಸೂರ್ಯಚಂದ್ರನಂಗೆ ,,
ಅವಳು ಗಿಂಡಿ ಚೆಂಬ ಬೆಳಗ್ಯವಳೆ ,,
ನನ್ನ ಮಗನೆ ತಬ್ಬಲಿತೀಯ ,,
ಅವನು ನಡಟ್ಟೀಲಿ ನಿಂತವನೆ ,,
ಅವರ ತಾಯಿ ಕುಸುಮಬಾಲೆ ,,
ಅವಳು ಬೆಳ್ಳಿಗಿಂಡೀಲಿ ,,

ಅವಳು ಪನ್ನೀರ ಕೊಟ್ಟಾಳೆ ಸುವ್ವಲಾಲೀ
ಅವನು ಮುಖ ಮಜ್ಜನವಮಾಡಿದೋನು ಸುವ್ವಲಾಲೀ
ಅವನು ಅರಮನೆಗೆ ಹೋದಾನೆ ಸುವ್ವಲಾಲೀ
ಅವನು ವಿಭೂತಿ ಧರಿಸ್ಯಾನೆ ,,
ಅವನು ಈಶ್ವರನ ನೆನೆದಾನೆ ,,
ಅವನು ನಾಮಾವ ಧರಿಸ್ಯನ್ನೆ ,,
ಅವನು ನಾರಾಯಣ್ಣ ನೆನೆದಾನೆ ,,
ಅವನು ಊಟಾಕೆ ಕುಂತಾನೆ ,,
ಅವರ ತಾಯಿ ಕುಸುಮಬಾಲೆ ,,
ಅವಳು ಊಟಾಕೆ ನೀಡ್ಯಾಳೆ ,,
ಅವನು ಊಟಾವ ಮಾಡಿದೋನೆ ,,
ಅವನು ಎದ್ದು ಈಚೆಗೆ ಬಂದಾನೆ ,,
ಅವರ ತಾಯಿ ಕುಸುಮಬಾಲೆ ,,
ಅವಳು ಚಿನ್ನಾದ ತಟ್ಟೀಲಿ ,,
ಅವಳು ಇಳ್ಯೇವ ಕೊಟ್ಟಾಳೆ ,,
ಅವನು ಇಳ್ಯೇವ ಮೆಲಿದೋನು ,,
ಅವನು ಎದ್ದು ಅರಮನೆಗೋದಾನೆ ,,
ಅವನು ಆನೆ ಸಾಲಿಗೆ ಹೋಗಿ ,,
ಅವನು ಕಣ್ಣಿಗೆ ಬೇಕಾದ ಆನೆ ,,
ಅವನು ಇಡಿಕೊಂಡು ಈಚೆಗೆ ಬಂದಾ,,
ಅವನು ಒಂಟಿ ಸಾಲಿಗೋಗ ,,
ಅವನು ಕಣ್ಣಿಗೆ ಬೇಕಾದ ಒಂಟಿ ,,
ಅವನು ಹಿಡಿಕೊಂಡು ಈಚೆಗೆ ಬಂದಾ,,
ಅವನು ಕುದುರೆ ಲಾಯಕೆ ಹೋಗಿ ,,
ಅವನು ಕಣ್ಣಿಗೆ ಬೇಕಾದ ಕುದುರೆ ,,

ಅವನು ಹಿಡಿಕೊಂಡು ಈಚೆಗೆ ಬಂದಾ ಸುವ್ವಲಾಲೀ
ಅವನು ಅರಮನೆಗ್ಹೋದಾನೆ ,,
ಅವನು ನಿಲುವೀಗೆ ತಕ್ಕಂತೆ ,,
ಅವನು ನಿಲವಂಗಿ ಧರಿಸ್ಯವ್ನೆ ,,
ಅವನು ತಲವೀಗೆ ತಕ್ಕಂತೆ ,,
ಒಳ್ಳೆ ಪೇಟ ರುಮಾಲು ಸುತ್ತಿಕೊಂಡ,,
ಅವನು ಕಾಲೀಗೆ ತಕ್ಕಂತೆ ,,
ಒಳ್ಳೆ ಪಾದರಕ್ಷ ಮೆಟ್ಟಕೊಂಡ ,,
ಅವನು ನಿಲುಗನ್ನಡಿ ಮಡಗಿ ,,
ಅವನು ನಿಲುವಾದ್ರೆ ನೋಡಿಕೊಂಡ ,,
ತಾಯಿ ಕುಸುಮಬಾಲೆ ,,
ನಾನು ಹೆಣ್ಣಿಗೆ ಹೋಯಿತೀನಿ ,,
ಆನೆಮೇಲೆ ಹಣವ ಏರಿ ,,
ಕುದುರೆ ಮೇಲೆ ಚೇಜಿ ಏರಿ ,.
ಅವನು ಹೋಯಿತಾನೆ ತಬ್ಬಲಿರಾಯೆ,,
ಅವನ ತಂದೆ ಭೀಮಣ್ಣನ್ಹೋರು ,,
ನಿಮ್ಮ ಸಿರಿಪಾದವೆ ಗತಿಯೆಂದ ,,
ತಾಯಿ ಕುಸುಮಬಾಲೆ ,,
ನಿಮ್ಮ ಸಿರಿಪಾದವೆ ಗತಿಯೆಂದ ,,
ಹನ್ನೊಂದು ಜನ ಅಣ್ಣಯ್ಯದೀರ ,,
ನಿಮ್ಮ ಸಿರಿ ಪಾದಾವೆ ಗತಿಯೆಂದ ,,
ಹನ್ನೊಂದು ಜನ ಅತ್ತಿಗೆದೀರ ,,
ನಿಮ್ಮ ಸಿರಿ ಪಾದವೆ ಗತಿಯೆಂದ ,,
ಎಲ್ಲಾರು ನೆನೆದಾನೆ ತಬ್ಬಲಿರಾಯ ,,
ಅವನು ಹೋಯಿತಾನೆ ತಬ್ಬಲಿರಾಯ,,

ಅವನು ಆರಂದ ಅಡವಿಯೊಳಗೆ ಸುವ್ವಲಾಲೀ
ಒಂದಾಲದ ಮರವಯ್ಯ ,,
ಆ ಆಲದ ಮರದಡೀಲಿ ,,
ಒಂದು ಹಾಲು ಕೊಳ ,,
ಒಂದು ನೀರು ಕೊಳ ,,
ಆ ನೀರು ಕೊಳದಲ್ಲಿ ,,
ಅವನು ಮುಖ ಮಜ್ಜಣ ಮಾಡ್ಯಾನೆ,,
ಅವನು ಹಾಲು ಕೊಳದಲ್ಲಿ ,,
ಅವನು ಹಾಲನ್ನೆ ಕುಡಿದಾನೆ ,,
ಅವನು ಆಲದ ಮರದಡಿಯೆ ,,
ಅವನು ಕುದುರೇಯ ಕಟ್ಟಾನೆ ,,
ಅವನು ಕುದುರೇಯ ಕಟ್ಟಿದೋನು ,,
ಅವನು ಹಸ್ಸೆಂತ ಮನಿಗ್ಯಾನೆ ,,
ಅಲ್ಲಿಗೆ ಬೇಡರು ಕನ್ನಯ್ನ ಮಕ್ಕಳು ,,
ಅವರು ಸೋಬೇಟಿಗೆ ಬರುತಾರೆ ,,
ಇವನು ಯಾವ ಸೀಮೆ ದೊರೆಮಗನು ಸುವ್ವಲಾಲೀ
ನೀನು ಯಾವ ಭೂಮಿ ದೊರೆ ಮಗನು ,,
ನಿನ್ನ ಹೆಸರು ಯಾವದ್ದೇಳೊ ಸುವ್ವಲಾಲೀ
ನಿನ್ನ ಕುಲವೆ ಯಾವದ್ದೇಳೊ ,,
ನಾನು ಕುಲದಲ್ಲಿ ಕುಂಚಿಗರ ಹುಡುಗ,,
ನಾನು ಜಾತಿಯಲ್ಲಿ ಬ್ರಾಹ್ಮಣರಹುಡುಗ,,
ನನಗೆ ಒಪ್ಪಿದಂಥ ಹೆಣ್ಣೆ ಇಲ್ಲಾ ,,
ನಾನು ಹೆಣ್ಣೀಗೆ ಹೋಯಿಷ್ಟಿನೀಗ ,,
ನೀನು ಬಾರೋ ತಬ್ಬಲಿರಾಯ ,,
ನಮ್ಮ ಪಟ್ಟಣಕೆ ಹೋಗುವ ,,

ನಮ್ಮ ತಂಗೆ ಗುರುತಾಯಮ್ಮ ಸುವ್ವಲಾಲೀ
ನಾವು ಕೊಟ್ಟು ಲಗ್ನಾವ ಮಾಡುತೀವಿ ಸುವ್ವಲಾಲೀ
ಅವರು ಕೊಟ್ಟಣ ಕುಟ್ಟಿ ,,
ಪಟ್ಟಣವೆ ಸಾರಿಸ್ಯಾರೆ ,,
ಅವರು ಲಗ್ನಾವೆ ಮಾಡ್ಯವರೆ ,,
ಅವರು ಲಗ್ನಾವೆ ಮಾಡಿದ್ದೋರು ,,
ಅವರು ಸೋಬೇಟಗೋಗುತಾರೆ ,,
ಅವರು ಬೇಟೀಯ ಆಡಿದ್ದೋರು ,,
ಅವರು ಊರಿಗೆ ಬರುತಾರೆ ,,
ಅವರು ಬೇಡಾರಕನ್ನಯ್ಯ ಸೊಸೆದೀರು ಸುವ್ವಲಾಲೀ
ಹವಳದಾರತಿ ಪಚ್ಚೆಯಾರತಿ ,,
ಅವರು ತಕ್ಕೊಂಡು ಹೋದಾರೆ ,,
ರಾಯಾರೇ ರಾಯಾರೇ ,,
ನಿಮು ತಂಗೆ ಗುರುತಾಯಮ್ಮ ,,
ಅವರು ದೊಡ್ಡ ಮನುಷೆ ಆಗ್ಯವಳೆ ,,
ಅವಳಿಗೆ ಸೋಭಾನವೆ ಮಾಡಬೇಕು ,,
ಅವರ ಕೊಟ್ಟಣಕುಟ್ಟಿ ಪಟ್ಟಣಸಾರಿಸಿ,,
ಅವರು ಸೋಭನವ ಮಾಡ್ಯವರೆ ,,
ಅವರು ಸೋಭನವ ಮಾಡಿದ್ದೋರು ,,
ಅವರು ಬೇಟಗ್ಹೋಗುತಾರೆ ,,
ಅವರು ಸೋಬೇಟೆಯಾಡಿಕೊಂಡು ,,
ಅವರು ಅರಮನೆಗೆ ಬರ್ತಾರೆ ,,
ಅವರು ಆರುಜನ ಅತ್ತಿಗೆದೀರು ,,
ಅವರು ಕೂತು ಮಾತಾಡ್ಯಾರೆ ,,
ಅವರು ನಿಂತು ಮಾತಾಡ್ಯಾರೆ ,,

ನಮ್ಮ ರಾಯಾರೇ ಬರ್ತಾರೆ ಸುವ್ವಲಾಲೀ
ನಮ್ಮ ರಾಯಾರಿಗೆ ನಾವು ,,
ಹೇಳಬೇಕು ನಾವೀಗ ,,
ಅಂಥ ಮಾತಾಡ್ಯಾರೆ ಸೊಸೆದೀರು ,,
ರಾಯಾರೇ ರಾಯಾರೇ ,,
ನಿಮ್ಮ ತಂಗೆ ಗುರುತಾಯಮ್ಮ ,,
ಆವಳು ಬಿಮ್ಮನಷೆ ಆಗ್ಯವಳೆ ,,
ಕುಂಚಿಗರ ಕುಲ ಹೆಚ್ಚಿದಾರೆ ,,
ಬೇಡಾರ ಕುಲಕೆ ಮಿತವಯ್ಯ ,,
ಮಂದಲಗಿರಿ ಬೆಟ್ಟದಲ್ಲಿ ,,
ಅವನ ತಲೆನಾದ್ರು ಕಡ್ದೆ ಬನ್ನಿ ,,
ಅವರು ಎಲ್ಲಾ ಮಾತಾಡಿಕೊಂಡು ,,
ಅವರು ಸೋಬೇಟಗ್ಹೋಯಿತಾರೆ ,,
ನನ ಬಾಮೈದ ತಬ್ಬಲಿರಾಯರೆ ,,
ನಾವು ಬೇಟೆಗೆ ಹೋಗೂವ ,,
ರಾಯಾರೇ ರಾಯಾರೇ ,,
ನೀವು ಬೇಟೆಗೆ ಹೋಗಲುಬೇಡಿ ,,
ನಾನು ಕಾಗೆ ಕರೆಯೋದು ಕಂಡೆ ,,
ನಾನು ಮೇಳೆ ಮುರಿಯೋದು ಕಂಡೆ ,,
ನನ್ನ ಮುತ್ತೀನ ಮುಂಜೆರಗು ,,
ನಾನು ಹತ್ತಿ ಬೇಯೋದ ಕಂಡೆ ,,
ನಮ್ಮಣ್ಣ ಬಡ್ಡಿಮಕ್ಕಳು ,,
ಅವರು ಒಳ್ಳೆಯವರಲ್ಲಾ ರಾಯಾರೆ ,,
ಅವರು ಮಂದಲಗಿರಿ ಬೆಟ್ಟಕೆ ,,
ಅವರು ಬೇಟೆಗೆ ಹೋದಾರೆ ,,

ಇವರು ಬೇಡಾರ ಕನ್ನಯ್ನ ಮಕ್ಕಳು ಸುವ್ವಲಾಲೀ
ಆವರು ಕರಕೊಂಡು ಹೊಯಿತಾರೆ ,,
ಮುಂದಲಗಿರಿ ಬೆಟ್ಟದಲಿ ,,
ನಿಮ ತಾಯಿ ತಂದೆ ನೆನೆಕೊಳ್ಳಿ ,,
ನಿಮ ಹಿರಿಗುರುವ ನೆನೆಕೊಳ್ಳಿ ,,
ಎಲ್ಲಾರ್ನ ನೆನೆಕೊಂಡ ತಬ್ಬಲಿರಾಯ ,,
ಮುಂದಲಗಿರಿ ಬೆಟ್ಟದಲ್ಲಿ ,,
ಅವ್ನು ಹಿಡಿದ ಚಂದ್ರಾಯದಲ್ಲಿ ,,
ಅವ್ನ ತಲೆನಾದ್ರು ಕಡಿದುಬಿಟ್ರು ,,
ಆವರು ಊರಿಗೆ ಬರ್ತಾರೆ ,,
ಅವರ ಬೇಡರ ಕನ್ನಯ್ನ ಸೊಸೆದೀರು ,,
ಅವರು ಆರತಿಯ ತಕ್ಕೊಂಡು ,,
ಅವಳು ಹೋಯಿತಾಳೆ ಗುರುತಾಯಮ್ಮ ಸುವ್ವಲಾಲೀ
ಆರು ಜನ ಅಣ್ಣಾದೀರೆ ,,
ನಮ್ಮ ರಾಯರೆಲ್ಲಿಗೋದ್ರು ಹೇಳಿ ,,
ನಿಮ್ಮ ರಾಯರವರ್ಹೀಗ ,,
ನಮ್ಮಂದಿಗೆ ಬರಲಿಲ್ಲಾ ,,
ಅವಳು ಹಿಡಿದಿದ್ದ ಆರತಿಯ ,,
ಅವಳು ನೆಲಕಾದ್ರೆ ಹೊಗೆದಾಳೆ ,,
ನಾನು ಮುಂಡೆ ಆದ್ಹಂಗೆ ,,
ಹಿಂಗಂಥ ಶಾಪವ ಹಾಕ್ಯಾಳೆ ,,
ನಿಮ್ಮೆಂಡ್ರುದೀರು ಮುಂಡೆರಾಗ್ಲಿ ,,
ಅವಳು ಬಂದಾಳೆ ಗುರುತಾಯಮ್ಮ ,,
ಮುಂಚಾಕೆ ಮಕ್ಕಾಡಹಾಕಿ ,,
ಮುನಿಗ್ಯವಳೆ ಗುರುತಾಯಮ್ಮ ,,

ಅವಳ್ಗೆ ಅಮವಾಸೆ ಒಂಬತ್ತು ತಿಂಗಳು ಸುವ್ವಲಾಲೀ
ತುಂಬೀತು ಗುರುತಾಯಮ್ಮೆ ,,
ಹನ್ನೆರಡಾಳುದ್ದ ಬಾವೀಗೆ ,,
ಹನ್ನೆರಡಾಳುದ್ದ ಏಣಿಹೂಡಿ ,,
ಅವಳಿಗೆ ಹತ್ತಾರು ಇಳಿಸ್ಯಾರು ,,
ಅವಳಿಗೆ ಸೂರ್ಯ ನಾರಾಯಣ ,,
ಅವನು ಬಾವಿಗೆ ಜರಣವಾದ ,,
ನಾದಿನಿ ಗುರುತಾಯಮ್ಮ ,,
ನಿನ್ನ ಹೊಟ್ಟಿ ಒಳಗೆ ,,
ಬಂದು ಬಲಿಮುಂಡೆ ಹುಟ್ಟಿದೆ ,,
ಅವರು ಕಡೆ ಕೊಟ್ಟಗೆ ಒಳಗೆ ,,
ಅವರು ಕಗ್ಗಲರಾಗಿ ಮುಗ್ಗುಲುರುಳಿ ,,
ಅವರು ಹಾಕ್ಯವರೆ ಗುರುತಾಯಮ್ಮೆ ,,
ಹಾಕ್ಯಾರೆ ಸೊಸೆದೀರು ,,
ಅವನು ಸೂರ್ಯನಾರಾಯಣ ,,
ಅವನು ಬಾವೀಲಿ ಬೆಳೆದಾನೆ ,,
ಅವರು ಆರು ಜನ ಅತ್ತಿಗೆದೀರು ,,
ಅವರು ಬಾವಿ ನೀರಿಗೆ ಹೋಯಿತಾರೆ ,,
ಅವನು ಬಾವಿ ಒಳಗೆ ,,
ಅವನೆ ಸೂರ್ಯನಾರಾಯಣ ,,
ಬಾವಿಗೆ ಬಿಟ್ಟ ಬಿಂದಿಗೆ ಎಳಯಿತಾನೆ ,,
ರಾಯಾರೆ ರಾಯಾರೆ ,,
ಹಿತ್ತಲಲ್ಲಿರುವೊ ಬಾವೀಯ ,,
ನೀವು ಮುಚ್ಚಬೇಕು ರಾಯರೆ ,,
ಸೊಸೆದೀರಿಗೆ ಸ್ವಪ್ನ ಬಿದ್ದು ,,

ಬಾವಿಯಿಂದ ಮಗುವನು ಸುವ್ವಲಾಲೀ
ಅವರು ತಿಪ್ಪೆಗೆ ಬಿಟ್ಟಾರೆ ,,
ಅವಳು ಆರು ಜನ ಅತ್ತಿಗೆದೀರು ,,
ಅವರು ಕಸವನಾದ್ರೆ ಹೊತ್ತುಕೊಂಡು,,
ಅವರು ಹೋದಾಗ ಅಲ್ಲಿಗೆ ,,
ಅವನು ತಿಪ್ಪೆಮೇಲೆ ಆಡುತಾನೆ ,,
ಅವನು ಸೂರ್ಯನಾರಾಯಣ ,,
ಅವನು ದೊಡ್ಡೋರ ಬೀದೀಗೆ ,,
ಅವನು ದೊಡ್ಡೋರ ಬೀದೀಲಿ ,,
ಅವನು ಗೋಲಿ ಗಜ್ಜುಗ ಆಡುತಾನೆ ,,
ಅವನು ಲೆಗ್ಗೆ ಚಿಂಡು ಆಡುತಾನೆ ,,
ಅವರು ಗೋಲಿ ಆಡೋ ಹುಡುಗರೆಲ್ಲಾ ಸುವ್ವಲಾಲೀ
ಇವನು ತಂದೆ ಇಲ್ಲದೋನು ,,
ಗೋಲಿ ಗಜ್ಜುಗ ಆಡೋಕೆ ಬಂದವನೆ ,,
ಅದಕೆ ನಿಮ್ಮವ್ವ ಗುರುತಾಯಮ್ಮ ,,
ಕಗ್ಗಲರಾಗಿ ಮುಗ್ಗುಲುರುಳಿ ,,
ಅವಳು ತಿಂತಾವ ಬಿದ್ದವಳೆ ,,
ಹಿಂಗಾಡಹೊತ್ಗೆ ನಿಮ್ಮಪ್ಪ ತಬ್ಬಲಿರಾಯ್ನ ,,
ಮುಂದಲಗಿರಿ ಬೆಟ್ಟದಲ್ಲಿ ಸುವ್ವಲಾಲೀ
ಅವರು ತಲೆಯನು ಕಡಿದವರೆ ,,
ಆ ಮಾತು ಕೇಳಿದೋನು ,,
ಬಂದಾನು ಸೂರ್ಯನಾರಾಯಣ ,,
ಲೇ ಗೋಲಿ ಹುಡುಗರೆಲ್ಲಾ ,,
ನೀವು ನಮ್ಮವ್ನ ತೋರುಬನ್ನಿ ,,
ಅವರು ಗೋಲಿ ಆಡೊ ಹುಡುಗರೆಲ್ಲಾ,,

ಅವರು ಕರಕೊಂಡು ಬಂದಾರು ಸುವ್ವಲಾಲೀ
ಅವರ ತಾಯಿಯ ತೋರ್ಸ್ಯಾರೆ ,,
ಅವನು ಅಷ್ಟು ಹೊತ್ತಿಗೆ ಇನ್ನ ,,
ಅವನು ಹನ್ನೆರಡೊರುಷಾದ ಹುಡುಗನಾದ ಸುವ್ವಲಾಲೀ
ನೀನೆ ತಾಯಾದರೆ ಸುವ್ವಲಾಲೀ
ನಾನೇ ಮಗನಾದಾರೆ ,,
ಅವಳು ಹನ್ನೆರಡು ಬಟ್ಟಿ ತೆರೆಯ ಹಿಡಿಸಿ ಸುವ್ವಲಾಲೀ
ಅವಳ ಎದೆ ಹಾಲ ಕುಡಿದಾನೆ ,,
ತಾಯಿ ಗುರುತಾಯಮ್ಮ ,,
ನಮ್ಮ ತಂದೆ ಎಲ್ಲಿಗೋದ್ರು ಸುವ್ವಲಾಲೀ
ಅವನು ಸೂರ್ಯನಾರಾಯಣ ,,
ನಿಮ್ಮ ಸೋದರ ಮಾವಯ್ಯದೀರು ,,
ಅವರು ಮಂದಲಿಗಿರಿ ಬೆಟ್ಟದಲ್ಲಿ ,,
ತಲೆಯ ಕಡಿದು ಬಂದ್ರು ,,
ತಾಯಿ ಮಾತ ಕೇಳಿದ್ಹೋನು ,,
ಹಂಚಿ ಕಡ್ಡಿ ರಥವ ಮಾಡಿ ,,
ಅವನು ಜೈಪರಮೇಶ್ವರ ಅಂದಾನೆ ,,
ಅವನು ಜೈಪರಮೇಶ್ವರ ಅನ್ನುತಾಲಿ ,,
ಮಂದಲಗಿರಿ ಬೆಟ್ಟಕ್ಹೋಗಿ ,,
ಅವನು ಸೂರ್ಯನಾರಾಯಣ ,,
ನಾನು ಒಬ್ಬ ತಂದೆಗೆ ಹುಟ್ಟಿದಾರೆ ,,
ನಮ ತಂದೇಗೆ ಜೀವ ಬರಲಿ ,,
ಅವನು ಆ ಮಾತ ಕೇಳಿದೋನು ,,
ಶಿವ ಪಾರ್ವತಿ ಇನ್ನು ,,
ತಬ್ಬಲಿರಾಯ್ಗೆ ಜೀವಕಳೆ ತುಂಬ್ಯವರೆ,,

ಅವನು ಹಸ್ಸೆಂತ ಎದ್ದು ಕುಂತಾನೆ ಸುವ್ವಲಾಲೀ
ತಂದೆಯ ನೋಡಿದೋನು ,,
ಅವ್ನು ಮೇಕುರಿಸಿ ಬಿದ್ವಾನೆ ,,
ಅವ್ನು ಮಗನನ್ನು ನೋಡಿದೋನು ,,
ಅವ್ನು ಮೇಕುರಿಸಿ ಬಿದ್ವಾನೆ ,,
ಅರಿತು ಎಚ್ಚರಗೊಂಡು ,,
ಅವರು ಎದ್ದು ಕುಳಿತೆಕೊಂಡ್ರು ,,
ಅವರು ಹಂಚಿ ಕಡ್ಡಿ ರಥದ ಮೇಲೆ ,,
ಅವರು ಬಂದಾರೆ ಅವರೀಗ ,,
ಅವರು ಬೇಡಾರ ಕನ್ನಯ್ಯ ಮಕ್ಕಳ ,,
ಅವರ ಸೋದರ ಮಾವಯ್ಯದೀರ ,,
ಅವರು ಆರು ಜನ ಹೆಂಡತಿದೀರ ,,
ಅವನು ಕಡಿದಾನು ಸೂರ್ಯನಾರಾಯಣ ಸುವ್ವಲಾಲೀ
ಅವನ ಸೋದರ ಮಾವಯ್ನೋರ ಸುವ್ವಲಾಲೀ
ಅವನು ಕಡಿದಾನು ತಬ್ಬಲಿರಾಯ ,,
ಅವನು ಏಳು ಬಾಕಲಿಗಿನ್ನು ,,
ಅವನು ತೋರಣವ ಕಟ್ಟವನೆ ,,
ಅವರ ಪಟ್ಟಣದಲಿ ,,
ಅವರು ಸಂತೋಷದಲಿ ಬದುಕುತಾರೆ,,



ಕಲಿಯುಗದ ಬಾಲೆ

ಕಲಿಯುಗದೊಳಗೆ ಕರ್ಮ ಹೆಚ್ಚಿತು ತಿಳಿದು ನೋಡಿರಣ್ಣ।
ಇಂತಹ ನೆಲೆಯಿಲ್ಲದ ಬಾಲೆಯು ನೆಚ್ಚಿದರೆ-ಬಾಯಲಿ ಮಣ್ಣ ಣ್ಣ ।
ಶಿವ ! ಶಿವ ! ತಲೆಮೇಲೆ ಕಲ್ಲಣ್ಣಾ ....॥

ಜನಪದ ಸಾಹಿತ್ಯವು ಜನಪ್ರಿಯವಾಗುವುದಕ್ಕೆ ಅದರ ರಸವಾಣಿಯೆ ಕಾರಣ. ಅದು ವಿದಗ್ಧರನ್ನೂ ಮುಗ್ಧಗೊಳಿಸಿದೆ ಅದರಿಂದ ಕನ್ನಡದ ವಾಙ್ಮಯ ರಂಗಕ್ಕೆ ಹೊಸಬೆಳಕು ದೊರತಿದೆ. ಆದರಲ್ಲಿ ನಾಗರಿಕ ವಾಙ್ಮಯ ಭಂಡಾರಕ್ಕೆ ಸಲುವಳಿಯಾಗುವ ಶಬ್ದಗಳ, ಅಚ್ಚಗನ್ನಡ ನುಡಿಗಳ ವೈಪುಲ್ಯವಿದೆ; ಮನೋಜ್ಞವಾದ ಉಪಮೆಗಳು, ಒಳ್ಳೆಯ ವಾಕ್ಪ್ರಚಾರಗಳು ಸೊಗಸಾದ ಗಾದೆಯ ಮಾತುಗಳು–ನಮಗೆಲ್ಲ ಅಪರಿಚಿತವಾದುವು–ಬೇಕಾದಷ್ಟಿವೆ. ಅವುಗಳಿಗೆ ತಕ್ಕ ರೀತಿಯಲ್ಲಿ ಒಪ್ಪ ಕೊಟ್ಟು ಸ್ವೀಕರಿಸಿ ಸುಸಂಸ್ಕೃತ ಕಾವ್ಯದೇವಿಯನ್ನು ಇನ್ನು ಹೆಚ್ಚು ಸುಂದರವಾಗಿ ಅಲಂಕರಿಸಬಹುದಾಗಿದೆ. ಆದುದರಿಂದ ರಸಿಕರಿಗೆ ವಾಚನೀಯವೂ ಸಾಹಿತಿಗಳಿಗೆ ಆವಶ್ಯ ಅಭ್ಯಸನೀಯವೂ ಆಗಿರುವುದೀ ಸಾಹಿತ್ಯ.

—ಬೆಳಗಾವಿ ರಾಮಚಂದ್ರರಾವ್

ಕಲಿಯುಗದ ಬಾಲೆ*

ಕಲಿಯುಗದೊಳಗೆ ಕರ್ಮಹೆಚ್ಚಿತು ತಿಳಿದು ನೋಡಿರಣ್ಣಾ ।
ಇಂತಹ ನೆಲೆಯಿಲ್ಲದ ನಾರಿಯ ನೆಚ್ಚಿದರೆ—ಬಾಯಲಿ ಮಣ್ಣಣ್ಣಾ
ಶಿವ ! ಶಿವ ! ತಲೆಮೇಲೆ ಕಲ್ಲಣ್ಣಾ....॥

ಅಕ್ಕತಂಗೇರು ಅವರಾರು ಮುಂದಿ
ಸಣ್ಣವಳಿರುತಾಳೆ—ಬಾಲೆ ಚಿಕ್ಕವಳಿರುತಾಳೆ
ಇಂತಹ ಮಕ್ಕಳಿಲ್ಲದ ಮಲ್ಲಿಕಾರ್ಜುನಗೊಂದು
—ವರವ ಬೇಡುತಾಳೆ ।
ಬಾಲೆ ವರವ ಬೇಡುತಾಳೆ....।

ವರವ ಬೇಡಿದ ಒಂಬತ್ತು ತಿಂಗಳ್
ನವಮಾಸಾದೀತು ಬಾಲೆಗೆ—
ನವಮಾಸಾದೀತು ।
ಅಯ್ಯ ! ನವಮಾಸಾದ ಮೂರು ದಿನಕೆ—
ಬಾಲರ ಪಡೆದಾಳೆ—
ಬಾಲೆ ಪುತ್ರರ ಪಡೆದಾಳೆ ।

ಸೂರ್ಯ ಎಂಬೋ ಮಗನ
ಸುಕದಿಂದ ಹಡೆದಾಳೆ ।
ಹರಿಶ್ಚಂದ್ರ ಎಂಬೋ ಮಗನ
ಅಂದದಿ ಪಡೆದಾಳೆ—
ಬಾಲೆ ಅಂದದಿ ಪಡೆದಾಳೆ....।

ಇಬ್ಬರ ಮಕ್ಕಳು ಹೆಸರಕಟ್ಟಿ
ತೊಟ್ಲಗ್ಹಾಕಿದಾಳೆ—

---

*ಈ ಕಥನಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ದೊಂಬಿದಾಸರು ಏಳ ನಾದವನ್ನು ಹಿಡಿದುಕೊಂಡ್ದು–ಸುಗ್ಗಿಕಾಲದಲ್ಲಿ ಭಿಕ್ಷಗೆ ಕಣಗಳಿಗೆ ಬಂದಾಗ ಹಾಡುತ್ತಾರೆ.

ತೊಟ್ಲಗ್ಹಾಕೀದ ಫಳಿಗೊತ್ತೀಗೆ
ಜೋಗುಳ ಪಾಡುತಾಳೆ—
ನಾರಿ ಜೋಜೋ ಎನ್ನುತ್ತಾಳೆ ।
ಜೋಗುಳ ಪಾಡುವ ಸಮಯದಲ್ಲಿ—
ಏನಾಯಿತೆಂದರೆ—ಆಗ ಏನಾಯಿತೆಂದರೆ ?

ಆಗ ದಂಡಿಗೋಗುವ ಸೀಪಾಯಿಗಿನ್ನು
ಕಾಗದ ಬಂದಿತೋ ?
ಕಾಗದ ಓದಿನೋಡಿ ಏನಂಥ ಹೇಳುತಾನೆ—
ಸಿಪಾಯಿ ಏನಂಥ ಹೇಳುತಾನೆ ।

ನಾನು ಆದರೆ ದಂಡಿಗ್ಹೋಗುತೀನಿ
ಮಕ್ಕಳು ಬಲುಜೋಕೆ ?
ನನ್ನ ಮನೆ ಕಡೆ ಬಹುಜೋಕೆ ?
ಮೂರು ಮಾತು ಮಡದೀಗೆ—ಹೇಳಿ ದಂಡಿಗ್ಹೊರಟನು
ಗಂಡ ದಂಡಿಗ್ಹೊರಟಾನು....।

ಗಂಡನೋದ ಫಳಿಗ್ಹೊತ್ತೀಗೆ—ಟೀಕುಮಾಡುತಾಳೆ
ಮುಂಡೆ ಮಜಾಕು ಮಾಡುತಾಳೆ ।
ಹರಳು ಮೆಟ್ಟಿದ ಥಳ ಥಳ ಸೀರೆ ನರಿಗ್ಹಿಡಿದುಟ್ಟಾಳು ।
ವಾಲೆ ಕಪ್ಪು ಚಿಂತಾಕಿನಾಭರಣ ವಾರುಣಿಗಿಟ್ಟಾಳು—
ಬಾಲೆ ವಾರುಣಿಗಿಟ್ಟಾಳು ।

ತಲೆಯನಾದಾರೆ ಜಾಜಿ ಮುಡಿದು ಎಣಿಗಂಟ್ಹಾಕಿದಳು—
ಸಣ್ಣ ಮಲ್ಲಿಗೆ ಹೂಗಳು ತಂದು ಜಡೆಯಲಿ ಮುಡಿದಾಳು ।
ಕನ್ನಡಿಯಾದರೆ ಕೈಯಲಿ ಹಿಡಿದು—
ತಿಲುಕ ತಿದ್ದುತಾಳೆ—
ಬಾಲೆ ತಿಲುಕ ತಿದ್ದುತಾಳೆ ।

ಗಂಧ, ಕಸ್ತೂರಿ, ಪುನುಗು, ಜವ್ವಾಜಿ, ಲೇಪು ಮಾಡಿದಾಳು–
ಬಾಲೆ ಲೇಪುಮಾಡಿದಾಳು ।
ವ್ವಾರೊರ ಗೆಣೆತೀರ ಕೂಡಿಕೊಂಡು—ನೀರಿಗೆ ಹೊರಟಾಳು
ಬಾಲೆ ನೀರಿಗೆ ಹೊರಟಾಳು ।
ನೀರಿಗ್ಹೋಗುವ ದಾರಿಯಲ್ಲಿ—ಗೆಳೆಯನು ಕೂತಿದ್ದ ।
ಅಲ್ಲೊಬ್ಬ ನಲ್ಲನು ಕೂತಿದ್ದ ।

ಯಾವೋಳೆಣ್ಣೆ ನೀರಿಗ್ಹೋಗಾಳು—ನಿಂತು ಮಾತನಾಡೆ?
ಎಲೆ ಹೆಣ್ಣೆ ಕುಂತುಮಾತನಾಡೆ?
ಗಂಡನಾದಾರೆ ದಂಡಿಗ್ಹೋದ—ಸಂಜೆಗೆ ಬಾಗೆಣೆಯಾ
ಮನೆಗೆ ಸಂಜೆಗೆ ಬಾ ಗೆಣೆಯಾ ।
ಗಂಧ, ಕಸ್ತೂರಿ, ಪುನುಗು, ಜವ್ವಾಜಿ ಲೇಪುಮಾಡುತ್ತೀನೆ–
ನಿನಗೆ ಲೇಪು ಮಾಡುತ್ತೀನೆ ।

ಮೂರು ಮಾತು ತನ್ನ ಗೆಣೆಯನಿಗ್ಹೇಳಿ—ಮನೆಗೆ ಬಂದಾಳು
ಬಾಲೆ ಮನೆಗೆ ಬಂದಾಳು ।
ಗೆಣೆಯನಾದರೆ ಬರುತಾನೆಂದೂ—ಅಡಿಗೆ ಮಾಡುತಾಳೆ
ಬಾಲೆ ಅಡಿಗೆ ಮಾಡುತಾಳೆ ।
ಆರು ಕಾಲಿನ ಎಣೆ ತೆಗೆದೊಂದಟ್ಟಕ್ಕೆ ಹಾಕಿದಳು
ಬಾಲೆ ಅಟ್ಟಕೆ ಹಾಕಿದಳು ।

ಸಣ್ಣಕ್ಕಿ ತುಪ್ಪ ತಗರಿಬೇಳೆ—ಬೇಗನೆ ತೆಗೆದಾಳು
ಬಾಲೆ ಬೇಗನೆ ತೆಗೆದಾಳು ।
ಹೋಳಿಗೆ ತುಪ್ಪ ಕಜ್ಜಾಯದಲ್ಲೊಂದಡಿಗೆ ಮಾಡುತಾಳೆ
ಬಾಲೆ ಅಡಿಗೆ ಮಾಡುತಾಳೆ ।
ಅಡಿಗೆ ಮಾಡಿ ಮನೆಯಲ್ಲಿರಿಸಿ—
ದಾರಿ ನೋಡುತಾಳೆ—ನಾರಿ ದಾರಿ ನೋಡುತಾಳೆ ।
ಬಾಲೆ ದಾರಿ ಕಾಯುತಾಳೆ ।

ಬಳುತ್ತೀನಂತ ಹೇಳಿದ ಗೆಣೆಯಾ ।
ಸಂಜೆಗೆ ಬಂದಾನು—ಗೆಣೆಯಾ ಸಂಜೆಗೆ ಬಂದಾನು ।
ಯಾವೋಳೆಣ್ಣೆ ಒಳಗಿರುವೋಳು ಕದವ ತೆಗಿಯೆಣ್ಣೆ ?
ಗೆಣೆಯನಾದಾರೆ ದಣಿದಾನೆಂದೂ—ನೀರೆಕುಯ್ದಾಳು ।
ತರತರವಾದ ಪಿತಾಂಬರಗಳ–ಗೆಣೆಯನಿಗೆ ಕೊಟ್ಟಾಳು
ನಾರಿ ಗೆಣೆಯನಿಗೆ ಕೊಟ್ಟಾಳು ।

ಸ್ನಾನಮಾಡಿದ ಮೇಲೆ ಗೆಣೆಯಗೆ—ಊಟಕೆ ನೀಡ್ಯಾಳೆ
ಬಾಲೆ ಊಟಕೆ ನೀಡ್ಯಾಳೆ ।
ಊಟ ಮಾಡಿದ ಘಳಿಗೊತ್ತೀಗೆ ಮುಂಚದಿ ಕೂತಾರು
ಇಬ್ಬರು ಮುಂಚದಿ ಕೂತಾರು ।
ಕಳೆಯಡಕೆ–ಬಿಳಿಯಲೆ ತಕ್ಕೊಂಡು ಮೋಜು ಮಾಡುತಾರೆ
ಇಬ್ಬರು ಮೇಜು ಮಾಡುತಾರೆ ।

ಮೋಜುಮಾಡಿದ ನಿಮಿಷಕ್ಕೆನ್ನು ಪಗಡೆಯಾಡುತಾರೆ
ಒಳ್ಳೆ ಸರಸವಾಡುತಾರೆ ।
ಆಡೋಕ್ಹೊೀದ ಮಕ್ಕಳೀಗ ಅಲ್ಲಿಗೆ ಬಂದಾರು ।
ಅಮ್ಮ ! ಅಪ್ಪನಾದಾರೆ ದಂಡಿಗ್ಹೊೀದಾ ।

ಅವ್ವ ಇವನ್ಯಾರೆ ನಮ ತಾಯಿ—?
ಅಪ್ಪ ಬಂದ ಮೇಲೆ ತಾಯಿ ಈ ಮಾತ್ಹೇಳೀವು ?
ನಾವು ಈ ಮಾತ್ಹೇಳ್ಹೀವು ?
ಆಗ ಓಹೋ ಹೋ ! ಪ್ರಾಣಕೆ ಬಂತೆಂದು
ಬೇಗಾನೆ ತಿಳಿದಾಳು—ಬಾಲೆ ಬೇಗಾನೆ ಅರಿತಾಳು ।

ಸಣ್ಣನೂಲಿನ ಹಗ್ಗ ತಂದು ಕಾಲು ಬಿಗಿದಾಳು
ಮಕ್ಕಳಿಗೆ ಕಾಲಿಗೆ ಬಿಗಿದಾಳು ।

ಈ ಬಲುಚೆಲ್ವೆ ಹಿಡಿದಾ ಹಿಂಸೆ ತಾಳುತಾಳೆ ।
ನಾರಿ ಹಿಂಸೆ ಪಡುತಾಳೆ ।
ಇಂತಹ ಹಿಂಸೆ ತಡೆಯಬಾರದೆ—
ಮಕ್ಕಳು ಏನಂಥ ಹೇಳುತಾರೆ ।
ಅಮ್ಮ ನನ್ನನಾದರೆ ಕೊಲ್ಲು ತಾಯಿ
ತಮ್ಮನ ಕೊಲಬೇಡ ।

ಹರಿಶ್ಚಂದ್ರ ಎಂಬೋ ಮಗನ....
ನೀನು ಸುಖವಾಗಿ ಸಾಕಮ್ಮ—ನೀನು ಚೆನ್ನಾಗಿ ಸಲುವಮ್ಮ।
ಕನಿಕರವಿಲ್ಲದ ಬಾಲೆ ಈಗ ಏನು ಮಾಡುತಾಳೆ ।
ಸೂರ್ಯಚಂದ್ರ ಎಂಬೋ ಮಗನ ಕುತ್ತಿಗೆ ಕುಯಿದಾಳು
ಹರಿಶ್ಚಂದ್ರ ಎಂಬೋ ಮಗನ ಮೇಳೆ ಮುರಿದಾಳು ।

ಇಬ್ಬರ ಮಕ್ಕಳ ಕೊಂದ್ಹಾಕಿ ಮುಂಡೆ....
ಮುಂಕರೀಗೆ ತುಂಬ್ಯಾಳು—ನಾರಿ ಮುಂಕರೀಗೆ ತುಂಬ್ಯಾಳು ।
ಮುಂಕರೀಗೆ ತುಂಬಿ ಕೊಟ್ಟಗ್ಹೆಲರಿಸಿ ಸರಸವಾಡುತಾಳೆ
ಗೆಣೆಯನಕೂಡಿ—ಆಟವಾಡುತಾಳೆ ।
ಬಾಲೆ ಆಟವಾಡುತಾಳೆ ।

ಸತ್ತ ಮಕ್ಕಳು ಸ್ವಪ್ನಕ್ಹೋಗಿ ಏನಂಥ ಹೇಳುತಾರೆ
ದಂಡಿಗ್ಹೋದ ತಂದೆಗೆ—ಏನಂಥ ಹೇಳುತಾರೆ ।
ಅಪ್ಪ ನಮ್ಮನಾದರೆ—ಕೊಂದಳು ತಾಯಿ
ತಂದೆ ಏಳಯ್ಯ—ನೀನು ಮೇಲಕೆ ಏಳಯ್ಯ ।
ಸತ್ತ ಮಕ್ಕಳ ಸ್ವಪ್ನವ ಕಂಡು ಆಶ್ಚರ್ಯ ಪಟ್ಟಾನು
ಸಿಪಾಯಿ ಮೇಲಕೆ ಎದ್ದಾನು ।

ಅಯ್ಯೋ ಇದ್ದೇನು ಆಶ್ಚರ್ಯವೆಂದೂ—ಬೇಗನೆ ತಿಳಿದಾನು
ಸಿಪಾಯಿ ಬೇಗನೆ ಅರಿತಾನು ।

ಸತ್ತ ಮಕ್ಕಳ ಸ್ವಪ್ನವಕಂಡೆ—ಸಂಬಳ ಕೊಡಿರಯ್ಯ
ನೀವು ನನಗೆ ಸಂಬಳ ಕೊಡಿರಯ್ಯ ।
ಐನೂರು ರೂಪಾಯಿ ಸಂಬಳ ತೆಗೊಂಡು
ಅಂಗಡಿಗೆ ಹೊರಟಾನು ।
ಸಿಪಾಯಿ ಜವಳಿಗೆ ಹೊರಟಾನು ।

ಐವತ್ತು ರೂಪಾಯಿ ಕೊಟ್ಟು ಮಕ್ಕಳಿಗೆ ಕೋಟು ಹೊಲಿಸಿದ
ಇಪ್ಪತ್ತು ರೂಪಾಯಿ ಕೊಟ್ಟು ಮಕ್ಕಳಿಗೆ ಹಿಜಾರಹೊಲಿಸಿದ
ಕಾಲಿನ ಗೆಜ್ಜೆ ನಡುವಿನ ಸರಪಣಿ ಬೇಗಾನೆ ತೆಗೆದಾನು ।
ಹರಳು ಮೆಟ್ಟಿದ ಬೆಳಕಿನ ಸೀರೆ ಬೇಗಾನೆ ತೆಗೆದಾನು ।
ಸಿಪಾಯಿ ಅಂಗಡೀಲಿ ಕೊಂಡಾನು ।
ಇಷ್ಟೊಂದೆಲ್ಲಾ ಗಂಟುಕಟ್ಟ—ಬೆನ್ನಿಗೆ ಬಿಗಿದಾನು ।
ಸಿಪಾಯಿ ಬೆನ್ನಿಗೆ ಬಿಗಿದಾನು ।

. ಮೂರು ತಿಂಗಳು ಹೋಗೋದಾರಿ ಮೂರೆ ದಿನಬಂದಾ ।
ಊರಿಗೆ ಸಿಪಾಯಿ ಮೂರೆ ದಿನಕೆ ಬಂದಾ ।
ಬಂದಾ ಸಿಪಾಯಿ ಮನೆ ಮುಂದೆ ನಿಂತು—
ಏನಂದು ಕೇಳುತಾನೆ—ಸಿಪಾಯಿ ಏನಂಥ ಕೇಳುತಾನೆ ।
ಎಲೆ ಹೆಣ್ಣೆ ಮಕ್ಕಳಮೇಲೆ—ಸ್ವಪ್ನವ ಕಂಡೆ ಮಕ್ಕಳಿಲ್ಲಮ್ಮಿ ?
ನನ್ನ ಮಕ್ಕಳಿಲ್ಲಮ್ಮಿ ।

ಬಂದ್ಹೋರು ಬಂದಂಗೆ ಮಕ್ಕಳು ಕೇಳುತೀರಿ ।
ಏನ್ಹೋನು ತಂದಿದ್ದೀ ಸ್ವಾಮಿ ಏನ್ಹೋನು ತಂದಿದ್ದೀ ।
ಆಗ ಬೆನ್ನಿಗೆ ಬಿಗಿದ ಗಂಟ ಬಿಚ್ಚಿ ಕಯ್ಯಿಗೆ ಕೊಟ್ಟಾನು
ಸಿಪಾಯಿ ಹೆಡುತೀಗೆ ಕೊಟ್ಟಾನು ।
ಗಂಟನಾದರೆ ಬಿಚ್ಚಿನೋಡಿ—ಏನೆಂದು ಹೇಳುತಾಳೆ ।
ಬಾಲೆ ಏನೆಂದು ಹೇಳುತಾಳೆ ।

ಆಡೋ ಮಕ್ಕಳ ಕೂಡಿಕೊಂಡು—ಆಡಕ್ಹೋಗ್ಯವರೆ।
ಗೌಡರೇ ಆಡಕ್ಹೋಗ್ಯವರೆ।

ಮಾವನ ಮಕ್ಕಳ ಕೂಡಿಕೂಂಡು—ಮದ್ವೆಗೆ ಹೋಗ್ಯವರೆ
ಮಕ್ಕಳು ಮದ್ವೆಗೆ ಹೋಗ್ಯವರೆ।
ಅವರು ಇನ್ನು ಬರುತಾರ್ಹೀಗ....
ಮಕ್ಕಳು ಸಂಜೆಗೆ ಬರುತಾರೆ।

ಸುಳ್ಳು ಪಳ್ಳವೊ ಹೇಳಿ—ಸಿಪಾಯ್ಗೆ ಸುಮ್ಮನೆಮಾಡಿದಳು।
ಆಗ ಸಣ್ಣಕ್ಕಿಅನ್ನ ಒಲೆಮೇಲಿಟ್ಟು—ಅಂಗಡಿಗೆ ಹೊರಟಾಳು
ಬಾಲೆ ಅಂಗಡಿಗೆ ಹೊರಟಾಳು।
ಹಣ ಕಾಸು ತೂಗಿದ ಮದ್ಲೊಂದು ಎಡಗೈಲಿಡಿದಾಳು।
ನಾರಿ ಎಡಗೈಲಿಡಿದಾಳು।

ಆರು ಕಾಸಿನ ಪಾಷಾಣ ತಂದು—ಅನ್ನಕೆ ಬೆರಿಸ್ಯಾಳು।
ಬಾಲೆ ಅನ್ನಕೆ ಬೆರಿಸ್ಯಾಳು।
ಹಸ್ತಿದ್ದೀರಿ ಗೌಡರೇ—ನೀವು—ಊಟವ ಮಾಡ್ಹೀಳಿ।
ನೀವು ಊಟವ ಮಾಡ್ಹೀಳಿ।

ನಿನ್ನ ಊಟದ ಮನೆಯೆ ಹಾಳಾಗಿ ಹೋಗಲಿ।
ಮಕ್ಕಳು ತೋರಮ್ಮಿ—ನೀನು ಮಕ್ಕಳ ತೋರಮ್ಮಿ?
ಸುಳ್ಳು ಹೇಳಿ ಗಂಡನಿಗೀಗ ಊಟಕ್ಕಿಕ್ಕಿದಾಳು।
ಊಟ ಮಾಡಿದ ನಿಮಿಷಕ್ಕೆನ್ನು—ಚಳಿ ಜ್ವರ ಬಂದಾವು।
ಸಿಪಾಯಿಗೆ ಚಳಿ ಜ್ವರ ಬಂದಾವು।

ಇದು ಏನ್ಹೆಣ್ಣೆ ಚಳಿ ಜ್ವರ ಬಂದೊ ಮಕ್ಕಳು ತೋರಮ್ಮಿ?
ನೀನು ಬಾಲರ ತೋರಮ್ಮಿ।
ಚಳಿ ಜ್ವರಬಂದ್ರೆ ಏನಾಯ್ತು ಗೌಡರೇ।

ಸಣ್ಣ ಕಂಬಳಿ ದೊಡ್ಡ ಜಮಕಾನ ಕೊಟ್ಟಗೆಲಾಸಿವ್ನಿ ।
ನಾನು ನಿಮಗೆ ಕೊಟ್ಟಗೆಲಾಸಿವ್ನಿ ।
ಕೊಟ್ಟಗೆಗ್ಹೋಗುವ ದಾರಿಯಲ್ಲಿ ಕಣ್ಣೆ ಹೋದಾವು ।
ಸಿಪಾಯಿಗೆ ಕಣ್ಣೆ ಹೋದಾವು ।
ಕಣ್ಣು ಕಾಣದ ಕುರುಡನನ್ನು ಕೊಟ್ಟಗೆಗೆ ತಳ್ಯಾಳು ।
ಸಿಪಾಯಿ ಕೊಟ್ಟಗೆಗೆ ತಳ್ಯಾಳು ।

ಅಯ್ಯೊ ಕಣ್ಣು ಕಾಣದ ಕುರುಡನಾಗ ತಡಕಿನೋಡುತಾನೆ।
ಸಿಪಾಯಿ ಹುಡುಕಿ ನೋಡುತಾನೆ ।
ಸತ್ತ ಮಕ್ಕಳು ಕೈಯಿಗೆ ಸಿಕ್ಕಿ ದುಃಖ ಮಾಡುತಾನೆ ।
ಸಿಪಾಯಿ ದುಃಖಮಾಡುತಾನೆ ।
ತುತ್ ಬಡ್ಡಿ ನೀನು ಹಾದರಗಿತ್ತಿ ಮಕ್ಕಳ ಕೊಂದಿದ್ದಿ ।
ನೀನು ಬಾಲಾರ ಕೊಂದಿದ್ದಿ ।

ಸೂರ್ಯಚಂದ್ರ ಎಂಬೋ ಮಗನ ಹೇಗೆ ಕೊಂದಮ್ಮಿ ।
ನಿನ್ನ ಕಯ್ಯಿ ಹೇಗೆ ಬಂತಮ್ಮೀ ।
ಆಗ ಓಹೋ ಹೋ ನನ್ನ ಪ್ರಾಣಕೆ ಬಂತೆಂದು ।
ಬೇಗಾನೆ ತಿಳಿದಾಳು—ನಾರಿ ಬೇಗಾನೆ ಅರಿತಾಳು ।
ಕೊಟ್ಟಗೆ ಬೀಗ ಹಾಕಿ ನೆರಮನೆಗೆ ಹೊರಟಾಳು ।
ನಾರಿ ನೆರೆಮನೆಗೊರಟ್ಹಾಳು ।

ನೆರಮನೆಯಿಂದ ಬೆಂಕಿತಂದು ಕೊಟ್ಟಗೆ ತೋರ್ಯಾಳು ।
ಗಂಡ—ಮಕ್ಕಳು ಸತ್ತೋದರೆಂದು ಬಾಯಿಮಾಡುತಾಳೆ ।
ಬಾಲೆ ಬೊಬ್ಬೆಮಾಡುತಾಳೆ ।
ಕೈಲಾಸದಲ್ಲಿ ಶಿವನು ಆಗ ಕಣ್ಣಿಂದ ನೋಡ್ಯಾನು ।
ನರಲೋಕದ ಕಷ್ಟವ ಕಣ್ಣಿಂದ ನೋಡ್ಯಾನು ।

ಸತ್ಯವಂತ ನಮ್ಮ ಸಿಪಾಯಿ—ಪ್ರಾಣವ ಬಿಡುತಾನೆ।
ಅವನು ಜೀವವ ಬಿಡುತಾನೆ ।

ಹೂವಿನ ಮಳೆಯ ಕರೆದು—ಶಿವನು ಬೆಂಕಿಯ ತುಂಬೀದ।
ಶಿವನು ಬೆಂಕೀಯ ತುಂಬೀದ ।
ಕಣ್ಣು ಕಾಣದ ಸಿಪಾಯಿಗೀಗ ಕಣ್ಣೆ ಕೊಟ್ಟಾನು ।
ಶಿವನು ಕಣ್ಣೆ ಕೊಟ್ಟಾನು ।
ಸತ್ತುಹೋದ ಮಕ್ಕಳಿಗಿನ್ನು ಪ್ರಾಣವ ಪಡೆದಾನು ।
ಶಿವನು ಪ್ರಾಣವ ಕೊಟ್ಟಾನು ।

ಸತ್ತ ಮಕ್ಕಳು ಮೇಲಕೆ ಎದ್ದು ತಂದೇಯ ನೋಡಿದಾರು।
ನಂತರ ಇಬ್ಬರು ಕಿಲಿ ಕಿಲಿ ನಗುತಾರೆ ।
ಕರ್ಮಿನಾರಿ ಇಡಬಾರದೆಂದೂ—
ನರಲೋಕದಲ್ಲಿ ಇಡಬಾರದೆಂದು ತಿಳಿದ ಶಿವನು ।
ಸುಣ್ಣದಗುಂಡಿಗೆ ಹಾಕಿದಾನು ।

ಶಿವನು ಸುಣ್ಣದ ಗುಂಡಿಗೆ ಹಾಕಿದಾನು ।
ಮಕ್ಕಳ ಸಯಿತ ಸಿಪಾಯಿಯನ್ನು ರಥದಲ್ಲಿಟ್ಟುಕೊಂಡು ।
ಶಿವನು ರಥದಲ್ಲಿರಿಸಿಕೊಂಡ ಕಾಯ ಬೆರಸಕೈಲಾಸಕೇಗ—
ಪಯಣವ ಬೆಳಿಸ್ಯಾರು—ಎಲ್ಲರು ಪಯಣವ ಬೆಳಿಸ್ಯಾರು।

ಕಲಿಯುಗದೊಳಿಗೆ ಕರ್ಮಹೆಚ್ಚಿತು ತಿಳಿದು ನೋಡಿರಣ್ಣ ।
ಇಂತಹ ನೆಲೆಯಿಲ್ಲದ ಬಾಲೆಯ ನೆಚ್ಚಿದರೆ—ಬಾಯಲಿ ಮಣ್ಣಣ್ಣ ।
ಶಿವ ! ಶಿವ ! ತಲೆಮೇಲೆ ಕಲ್ಲಣ್ಣಾ....॥

ನುಚ್ಚಾಯ್ತು ನೀರ ಹೊಳೆಯಾಗೆ

ಅತ್ತೆ ಕಾಣದ್ಹಾಗೆ ಮಾವ ನೋಡದ್ಹಾಗೆ
ಒಪ್ಪದಲಿ ನಾನು ಬಳಸಿದ್ದೆ । (ಬಳಸಿದ್ದ) ಕೊಡವು
ಈಗ ನುಚ್ಚಾಯ್ತು ನೀರ ಹೊಳೆಯಲ್ಲಿ ॥

ಜಾನಪದ ಗೀತೆಗಳ ಸಂಸಾರ ಅಚ್ಚುಮೆಚ್ಚಿನ ಅಚ್ಚಗನ್ನಡ ತ್ರಿಪದಿ ಸಮುದ್ರದಂತಿದೆ; ತಿರುಳ್‌ಗನ್ನಡದ ನೆಲೆಯಾದ ಈ ಸಾಹಿತ್ಯವು ಕನ್ನಡ ನರ ನಾರಿಯರ ಮಾನಸ ಸರೋವರದಂತಿದೆ. ಹಾಡಿದವರೆಲ್ಲಾ ನಾಡಿನ ಹೆಮ್ಮಕ್ಕಳೇ. ಒಕ್ಕಡೆ ಹೆಣ್ಣು ಮಕ್ಕಳೆಂದೂ, ಇನ್ನೊಂದು ಕಡೆ ಗಂಡುಸರೆಂದೂ ವೇರ್ಪಡಿಸುವದು ಉಚಿತವೆಂದು ಕೆಲ ವಿಮರ್ಶಕರ ಅಭಿಪ್ರಾಯವಿರುವುದು. ಈ ಹಳ್ಳಿಯ ಹಾಡುಗಳು, ಹಳ್ಳಿಗರ ತುದಿನಾಲಿಗೆಯ ಮೇಲಿಂದ ಸಹಜವಾಗಿ ನುಣುಚಿ ಬಂದವು. ಇವುಗಳ ಹುಟ್ಟನ್ನು ನಾವು ಗುರುತಿಸಿಕೊಂಡರೂ, ಹುಟ್ಟಿದ ಕಾಲವನ್ನು ಖಚಿತಪಡಿಸಲಾರೆವು....

ಕನ್ನಡದ ಹೊಸ ಕವಿತೆಗೆ—ಹೊಸ ಪಯಿರಿಗೆ, ಜನಪದ ಕಾವ್ಯ ತನ್ನ ಸಸಿಯನ್ನು ಚಾಚಿದೆ; ರಸದ ಕಾಣಿಕೆಯನ್ನು ನೀಡಿದೆ....

—ಶ್ರೀ ಎಸ್. ಎಂ. ದೇಸಾಯಿ

ನುಚ್ಚಾಯ್ತು ನೀರ ಹೊಳೆಯಾಗೆ*

ನೀರಿಗೋಗೋ ಹೆಣ್ಣೆ ನಿಲ್ಲೆ ನಾನು ಬರುತೀನಿ
ನಿನ್ನಾಣೆ ನಿನ್ನ ಕೊಡದಾಣೆ । ಕೊರಳೀನ ಬಣ್ಣದ ಸರದಾಣೆ
ಕಯ್ಯೀನ ಬಳೆಯಾಣೆ—ನೀರ ಹೊಳೆಯಾಣೆ ॥

ಬಣ್ಣದ ಸರದ ಮೇಲ್ ಕಣ್ ಯಾಕೊ ಗಿಣಿರಾಮು
ಹಣ್ಣೆಲ್ಲವೇನೊ ಮೆಲುವೋಕೆ । ನಿಮುಕುಲದ
ಹೆಣ್ಣೆಲ್ಲವೇನೊ ತರುವೋಕೆ ॥

ಚಿನ್ನದ ಚೀಲಕ್ಕೆ ರನ್ನಾದ ಬಾಯ್ದಾರ
ನಿನ್ನೊಂದಿಗಾಡಿ ಗೆಣೆಗಾರ । ನಾನು
ನೆನ್ನಿಂದ ನೀರ ತರಲಿಲ್ಲಾ ॥

ನಿನ್ನೊಂದಿಗಾಡಿ ತಾತೀಯ ನಾನು ಮರೆತೆ
ಹಾಸ್ಕೇಲಿ ಮರೆತೆ ಹವಳಾವ । ನನ ಗೆಣೆಯಾ
ಮಾತಿನಲ್ಲಿ ಮರೆತೆ ಮನೆಯವನ ॥

ಹಾದೀಯ ಮನೆಯೋಳೆ ಗೋದೀಯ ನೆರಿಯೋಳೆ
ನನ ನೋಡಿ ಮೋರೆ ತಿರುವೋಳೆ । (ತಿರುವೋ) ಗೆಣಗಾತಿ
ನಾನು ಮಾಡಿದ ಹಗೆಯೇನೆ ॥

ಬರುವೆನು ಜಾಣ ಬರುವ ದಾರಿಯ ಕಾಯೊ
ಬತ್ತಿದ ಬಾಯಿಗೆ ಎಳೆನೀರು । ನಿಂಬೆಹಣ್ಣು
ತರುವೇನು ಜಾಣ ತಡಮಾಡೊ ॥

---

*ಈ ಜಾನಪದ ಕಥನ ಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ಹೆಂಗಸರು ರಾಗಿ ಬೀಸುವಾಗ ಹಾಡುವರು.

ಆಚೆ ದಡದಲಿ ನೀನು ಈಚೆ ದಡದಲಿ ನಾನು
ಭಾಷೆ ತಾರೆಣ್ಣೆ ಬಲಗೈಲಿ । ಎಲೆ ಹೆಣ್ಣೆ
ನಾನು ಭಾಷೆ ತಪ್ಪೆಂತ ಮಗನಲ್ಲಾ ॥

ಜೊಳ್ಳೆ ಹೂವಿನಂಗೆ ಜೋಕಾಡಿ ನನನಲ್ಲಾ
ತೆಳ್ಳಗಿದ್ದರೇನು ಗೆಣೆಗಾರ । ಹಾಕೀದ ಕೇಕೆ
ಮುಂಗಾರು ಸಿಡಿಲು ಹೊಡೆದ್ಹಂಗೆ ॥

ಕೇಕೆ ಹಾಕಿದ ಕಂಡು ಬೇಕಾಗಿ ನಾನು ಬಂದೆ
ಬಾರೊ ನನ ಗೆಣೆಯ ಬಯಲೀಗೆ । ನಾನೆಂದೊ
ಭಾಷೆ ತಪ್ಪೆಂತ ಮಗಳಲ್ಲಾ ॥

ಕೋಳಿ ಕೂಗೀತು ಕುಂಬಳದಹೂವೀಗೆ
ಬೆಟ್ಟಕೂಗೀತು ಬಿದರೀಗೆ । ನನ ಗೆಣೆಗಾರ
ನಾನು ಕೂಗೀದೆ ನಿನಗಾಗಿ ॥

ಎಲ್ಲೆಲ್ಲಿ ನೋಡಿದಾರೆ ಗೆಳತಿಯಂಥವರಿಲ್ಲಾ
ಹಲ್ಲು ನೋಡಿದರೆ ಹವಳಾವು । ಗೆಳತೀಯ
ಸೊಲ್ಲು ಕೇಳಿದರೆ ಸಮದಾನ ॥

ಕಾಣಾದೆ ಇರಲಾರೆ ಕಾಶಿ ಕರ್ಜೂರಾವ
ಬಾಣಸೂರೀನ ಗೆಣತೀಯ । ಮುಖವನ್ನು
ನಾನು ಕಾಣದರಳೆಳಿಗೆ ಇರಲಾರೆ ॥

ಮುತ್ತಿನೋಲೆ ಬೇಕೆ ರತ್ನದೋಲೆ ಬೇಕೆ
ಪಟ್ಟೆ ಬಣ್ಣಬೇಗ ನಡುವೀಗೆ । ನನ ಹೆಣ್ಣೇ
ನನ್ನ ಪಚ್ಚೆ ಆರತಿ ಪರಿಮಳವೆ ॥

ಹಸನಾದ ಹೆಣ್ಣೇ ಎಸಳೆ ತೋಟಕೆ ಬಾರೆ
ರಸಮೆಟ್ಟಿದೆಲೆಯ ಕುಯಿಸ್ಹೋನು । ನನ ಹೆಣ್ಣೇ
ನಿನಗೆ ಹಸನಾದ ನಗೆಯ ನಗಿಸ್ಹೋನು ॥

ಜಾತ್ರೀಗೆ ಹೊಗ್ತೀನಿ ಜವನಾವ ತತ್ತೀನಿ
ನಾನು ಹೂವು ತತ್ತೀನಿ ತುರುಬೀಗೆ । ನನ ಹೆಣ್ಣೆ
ನಿನಗೆ ಬಂದೀ ತತ್ತೀನಿ ಬಲಗೈಗೆ ॥

ಆಚೇಯ ಕೇರಿಯವನೆ ಚೀಟಿವಸ್ತ್ರಾದವನೆ
ಸೂರಿವಾಳಿದಂಗೆ ಸುಳಿಯೋನೆ । (ಸುಳಿಯೊ) ನನ ಗೆಣೆಯ
ದೂರು ಬರುತಾದೆ ನಿನಮೇಲೆ ॥

ದೂರು ಬಂದಾರೆ ಬರಲಿ ವೈಯಾರ ನಿನಗಿರಲಿ
ಇಂದು ರಾಣಿ ನಿನ್ನ ಮುಖ ಕಳೆಯಿರಲಿ । ಎಲೆ ಹೆಣ್ಣೆ
ನೂರು ಬಿದ್ದಾರು ನನಗಿರಲಿ ॥

ಕುಂದಿಸಿ ನುಡಿದಾರೆ ನಿನಗೇನು ಎಲೆ ಹೆಣ್ಣೆ
ನಾ.ಇದ್ದ ಮೇಲೆ ಭಯವೇನು । ನನ ಹೆಣ್ಣೆ
ನೂರು ಬಿದ್ದಾರು ನಾನು ಗೆಲುವೇನು ॥

ಏರೀಯ ಕೆಳಗೆ ಏಳು ತೆಂಗಿನಮರ
ಬೇರಲಿ ನೀರ ಮೊಗೆಯೊಳೆ । (ಮೊಗೆಯೊ) ಎಲೆ ಹೆಣ್ಣೆ
ಕ್ವಾರೆ ನಿನ ಕೈಗೆ ಹಿಡಿ ಹೊನ್ನ ॥

ಹಿಡಿ ಹೊನ್ನ ಕೊಟ್ಟಾರೆ ಗುಣವಿಲ್ಲಾ ಗೆಣೆಗಾರ
ಬಾ ಹೋಗು ನಮ್ಮ ಹೊಲಕಡೆ । ಮನೆಕಡೆ
ನಮ್ಮವರು ಕಂಡು ಬೋದಾಂತ ॥

ಬಿಳಿಯ ಕಂಬಳಿಬೇಡ ಕರಿಯ ಕಂಬಳಿಬೇಕು
ತಿಂಗಳ ಬೆಳಕಲ್ಲಿ ಬರಬೇಕು । ನನ ಹೆಣ್ಣೇ
ನಿನ್ನಿಂದೆ ದೂರು ಹೊರಬೇಕು ॥

ಚುಂಚನ ಗಿರಿಯಲ್ಲಿ ಆದಿ ಭೈರುವ
ಕನ್ನೆಣ್ಣು ನನಗೆ ಒಲಿದಾರೆ । ಚುಂಚನಗಿರಿಗೆ
ಕನ್ನಡಿಗೆ ಮುತ್ತ ಬಿಗಿಸೇನು ॥

ಹದ್ದಿನಕಲ್ಲಲ್ಲಿರುವ ಬೆಟ್ಟದ ಹನುಮಂತ
ಬೆಡಗೀನ ಹೆಣ್ಣು ಒಲಿದಾರೆ ! ಹನುಮಂತ
ನಾನು ಮುತ್ತ ಬಾಗಿಲ್ಗೆ ಹೆಣಿಸೇನು ॥

ಹಂಬಲ ಬಿಟ್ಟು ತಿಂಗಳ ಮೇಲಾದೊ
ಕಣ್ಣೀಗೆ ನಿದ್ದೆ ಕವಿಯಾದೋ । ನನ ಗೆಣಗಾತಿ
ಮುಖ ತೋರೆ ಬಂದು ಸೊಪುನಾಕೆ ॥

ಇಂಬೀಯ ಹಣ್ಣಿನಂಗೆ ತುಂಬೀತು ಮೈ ಬಣ್ಣ
ಹಂಬಲ ಬಿತ್ತು ನಿನಮೇಲೆ । ಗೆಣಗಾತಿ
ನಾನು ಮೈಸೂರ ಸಂಬಾಳ ಬಿಟ್ಟು ಬರುತ್ತೀನಿ ॥

ಇಂಬೀಯ ಹಣ್ಣಿನಂಗೆ ತುಂಬೀದ ಮೈಬಾಲೆ
ಕಾಣಾದೆ ನಿನ್ನ ಕೊರಗೇನು । ಗೆಣಿಗಾತಿ
ಕಾಣಲಿನ್ಹೆಂಗೆ ಮನೆದೂರ ॥

ಇಂಬೆ ಹಣ್ಣಿಗೆ ಬಂದೆ ತುಂಬೆ ಹೂವಿಗೆ ಬಂದೆ
ಹಂಬಲಿಸಿ ಬಂದೆ ನಿನ ಮನೆಗೆ । ಎಲೆ ಹೆಣ್ಣೇ
ತಾವೆಲ್ಲಿ ತೋರೆ ತಳುಗಾಕೆ ॥

ಯಾಕೋ ಕಾಣೆ ನನ್ನ ಎಡಬುಜವು ಜುಮ್ಮೆಂತು
ಯಾಕೆನ್ನ ಗೆಣೆಯ ನೆನೆದಾನೊ । ನನ್ನ
ಕಲ್ಲಂತ ಎದೆಯು ಕರಗೀತು ॥

ಕೋಟೀಯ ಮನೆಯವಳೆ ಕೋಗೀಲೆ ದನಿಯವಳೆ
ರಾಟೀವಾಲೇಯ ಮನೆಯವಳೆ । ನನ ಚೆಲುವೆ
ನಾನು ದಾಟೇ ಬರಲಾರೆ ನೀ ದನಿ ತೋರೆ ॥

ಹಿತ್ತಲವರೆಕಾಯ ಹಿಮ್ಮೆಟ್ಟ ಕುಯ್ಯೋಳೆ
ಸುತ್ತಾ ಓಣೀಯ ಮನೆಯವಳೆ । ನನ ಚೆಲುವೆ
ನಾನು ಸುತ್ತಿ ಬರಲಾರೆ ನೀ ದನಿತೋರೆ ॥

ಅಡ್ಡಗುಡ್ಡವ ದಾಟಿ ಕದ್ದು ಕಣವೆಯ ದಾಟ
ಬಿದ್ದೋಡಿ ಬಂದೆ ನಿನಗಾಗಿ । ನನ ಚೆಲುವೆ
ಕಬ್ಬಿನಂತವಳೆ ದನಿತೋರೆ ॥

ಪಂಜರದ ಗಿಣಿ ನಾ ಬರಲಾರೆ ತಾವಿಲ್ಲಾ
ದನಿ ತೋರಲಾರೆ ತೆರಣೆಲ್ಲಾ । ನನ ಗೆಣೆಯ
ಗಿಣಿಯಾಗಿ ಬಾರೋ ಹೊಸಲೀಗೆ ॥

ದನಿಹೆಂಗೆ ತೋರಾಲಿ ಕದಹೆಂಗೆ ತೆಗೆಯಾಲಿ
ಮಗ್ಗುಲಲ್ಲವನೆ ಮನೆಪುರುಷ । ನನ ಗೆಣೆಯ
ನೀನು ಮಗ್ಗಾಗಿ ಬಾರೋ ನನ್ನ ತುರುಬೀಗೆ ॥

ಕಾರೆಂಬೋ ಕತ್ತಲೆ ಭೋರೆಂಬೊ ಮಳೆ ಮೋಡ
ಏನು ಹಿಡಿದಿತ್ತೊ ಬರುವೋಕೆ । ನನ ಗೆಣೆಯ
ನಿನಗೆ ರಾಣಿಲ್ಲವೇನೊ ಮನೆಯಲ್ಲಿ ॥

ರಾಣಿದ್ದರೇನೆ ಪ್ರಾಣಕಾಂತೆ ನೀ ಕೇಳೆ
ನೀನೆ ಪಂಜರದ ಅರಗಿಣಿ । ನನ್ನ ರಾಣೀ
ನಾನು ಮರತ್ಹೆಂಗೆ ಇನ್ನು ಬದುಕಾಲಿ ॥

ಗಂಗೇಗೆ ಮುಂದಾಗಿ ಊರೀಗೆ ಇಂದಾಗಿ
ಸೂಯೆಂದು ಸೀರೆ ಒಗೆಯೋನೆ । (ಒಗೆಯೊ) ಮಡಿವಾಳ
ಊರಲ್ಲೀನಯ್ಯ ಹೊಸ ಸುದ್ದಿ ॥

ಹಳ್ಳಿ ಹೊಸೂರು ಕಟ್ಟಿ ಏರಿಮೇಲೆ
ಮಾಯೂರ ಮಲ್ಲ ಮಡಿದ್ಹೋದ । ಸುದ್ದೀಯು
ನಾರೀಗೆ ತಿಳಿಯೀತೆ ನೀರ ಹೊಳೆಯಲ್ಲಿ ॥

ಮಾಯೂರ ಮಲ್ಲ ಮಡಿದ್ಹೋದ ಸುದ್ದೀ ಕೇಳಿ
ಹೊತ್ತಿದ್ದ ಕೊಡವ ಕೆಳಗ್ಹಾಕಿ । ಆ ನಾರಿ
ದುಃಖ ಮಾಡ್ಯಾಳೆ ನೀರ ಹೊಳೆಯಲ್ಲಿ ॥

ಹೊತ್ತಿದ ಕೊಡವಾನೆ ದೊಪ್ಪಾನೆ ಎತ್ಹಾಕಿ
ಅವಳಿಚ್ಚೆ ಬಂದಂತೆ ದುಃಖಿಸಾಳೆ । (ದುಃಖಿಸಿ) ಬಾಲೆಯು
ಹಾಡ್ಹಾಡಿಕೊಂಡು ಅಳುತಾಳೆ ॥

ಚಿನ್ನದ ಕೊಡನಲ್ಲಾ ರನ್ನದ ಕೊಡನಲ್ಲಾ
ಮಣ್ಣೀನ ಕೊಡಕ್ಯಾಕೆ ಕಡುದುಃಖ । ಎಲೆ ಬಾಲೆ
ಪುರುಷಾಗೆ ಹೇಳು ತರುತಾನೆ ॥

ಕೊಡ ಕೊಡ ಎಂದಾರೆ ಈ ಸೀಮೆ ಕೊಡನಲ್ಲಾ
ನಾಗಮಂಗಲದ ಜಗಜೋಡಿ । ಕೊಡವ
ನಾನು ಹತ್ವರ್ಷದಿಂದ ಬಳಸಿದ್ದೆ ॥

ಅತ್ತೆ ಕಾಣದ್ಹಾನೆ ಮಾವ ನೋಡದ್ಹಾಗೆ
ಒಪ್ಪದಲಿ ನಾನು ಬಳಸಿದ್ದೆ । (ಬಳಸಿದ್ದ) ಕೊಡವು
ಈಗ ನುಚ್ಚಾಯ್ತು ನೀರ ಹೊಳೆಯಲ್ಲಿ ॥



ಹೆಣೆಗಂಟು ನಲುಗಿ ಉರಿದ್ಹೋದೊ....

ಕೊಂಡದ ಸುತ್ತಾ ಕೊಂಡದ ಹಸೆ ಹುಯ್ದು
ಬಂಗಾರದ ಕಳಸ ನಡುವಿರಿಸಿ । ನಾಗವ್ವನ
ಕೊಂಡಾಕೆ ಧಾರೆ ಎರೆದಾರು ॥

...ಸಾಂಗತ್ಯ, ಚೌಪದಿ, ತ್ರಿಪದಿ, ರಗಳೆ ಮೊದಲಾದ ಅನೇಕ ಅಚ್ಚಗನ್ನಡ ವೃತ್ತಗಳು ಬರುತ್ತವೆ. ಈ ಎಲ್ಲ ತರದ ವೃತ್ತಗಳಿಗೆ ತ್ರಿಪದಿಯೇ ಮೂಲ ತಾಯಿ. ತ್ರಿಪದಿಯ ನಡುವಿನ ಗೆರೆಯನ್ನು ತಿರಿಗೊಮ್ಮೆ ಹಾಡಿದರೆ ಅದು ಹಿಗ್ಗಿ ಚೌಪದಿಯಾಗುತ್ತದೆ. ಆದರ ಮೂರು ಪಾದಗಳನ್ನು ಇಮ್ಮಡಿ ಮಾಡಿದರೆ ಆರು ಗೆರೆಯ ಷಟ್ಪದಿಯಾಗುತ್ತದೆ. ಇವೆಲ್ಲ ಹಾಡಲಿಕ್ಕೆ ಬರುತ್ತಿದ್ದು ತಾಳ, ಲಯ, ಯತಿಗಳನ್ನು ಅನುಸರಿಸುವವುಗಳು. ಬೀಸುವದು, ಕುಟ್ಟುವದು, ತೊಟ್ಟಿಲ ತೂಗುವದು ಮುಂತಾದ ಅನೇಕ ಮನೆಗೆಲಸಗಳು ತಾಳಬದ್ಧವಾಗಿ ನಡೆಯುವದರಿಂದ ಜನಪದ ಸಾಹಿತ್ಯವು ಹಾಡುಗಳಿಂದ ಕೂಡಿದ್ದಾಯಿತು. ಶಾರೀರಿಕ ಶ್ರಮಜೀವಿಗಳೆಲ್ಲರೂ ಆಯಾಸವಿಲ್ಲದೆ ಆನಂದದಿಂದ ತಮ್ಮ ಹೋರೆಗಳನ್ನು ಮಾಡುವದಕ್ಕೆ ಅನುಕೂಲವೂ ಆಯಿತು. ರಗಳೆಯು ಸಹ ಅರಘಟವೆಂಬ ನೀರೆತ್ತುವ ಯಂತ್ರದ ಮೂಲಕವಾಗಿ ಗಡಿಗೆಗಳಿಂದ ನೀರು ಸುರಿಯುವಾಗ ಉಂಟಾಗುವ ತಾಳವನ್ನನುಸರಿಸಿಯೇ ಹುಟ್ಟಿದ್ದೆಂದು ಕೆಲವರ ಅಭಿಪ್ರಾಯ. ಇಲ್ಲಿ ಮೂಲರೂಪದ ತ್ರಿಪದಿಯೊಂದನ್ನು ಉದ್ಧರಿಸುತ್ತೇವೆ.

...ಪೌರಾಣಿಕ,ಐತಿಹಾಸಿಕ,ತಾತ್ವಿಕ ಮುಂತಾದ ಮನೋಹರವಾದ ವಿನೋದ ಕರವಾದ ಸಾವಿರಾರು ಕತೆಗಳು ಇನ್ನೂ ಜನತೆಯ ಬಾಯಲ್ಲಿ ಉಳಿದಿವೆ. ಗೊಂದಲಿಗರು ಬೆಳಗಿನವರೆಗೂ ಹೇಳುವ ಚಮತ್ಕಾರವಾದ ಅದ್ಭುತ ಕತೆಗಳನ್ನು ನಮ್ಮ ನಾಗರಿಕರು ಸಹ ಕುತೂಹಲದಿಂದ ಕೇಳಬರುವುದಾಗಿದೆ. ಈ ಕಥಾಸಾಹಿತ್ಯದಲ್ಲಿ ಅಜ್ಜಿಯಕತೆ, ಸಣ್ಣ ಕತೆ, ದೊಡ್ಡ ಕತೆ, ಉದ್ದ ಕತೆ, ಅಡ್ಡ ಕತೆ ಮುಂತಾದ ಬೃಹತ್ಕಥಾಸಾಹಿತ್ಯವೆಲ್ಲವು ಸೇರುತ್ತದೆ. ಇದನ್ನು ಕಲೆಹಾಕಿ ಹೊಸದಾಗಿ ಬರೆದು ವ್ಯವಸ್ಥಿತ ರೀತಿಯಿಂದ ಅಚ್ಚು ಹಾಕಿಸುವದು ಹೊಸ ಕತೆಗಳನ್ನು ಬರೆಯುವುದಕ್ಕಿಂತ ಹೆಚ್ಚು ಅಗತ್ಯವಾಗಿದೆ. ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಕನ್ನಡ ಜನಪದ ಸಾಹಿತ್ಯವನ್ನು ಭಾಷಾ ದೃಷ್ಟಿಯಿಂದಲೂ ಹೊಸದಾಗಿ ಅಭ್ಯಸಿಸುವುದು ಅಗತ್ಯ. ಅಚ್ಚಗನ್ನಡದ ಕೆಚ್ಚು, ಜನಪದ ಸಾಹಿತ್ಯದಲ್ಲಿ ಹೇರಳವಾಗಿರುವುದರಿಂದ, ಈ ತರದ ಕನ್ನಡವೇ ಇನ್ನು ಮುಂದೆ ಬಳಕೆಯಲ್ಲಿ ಬರಬೇಕಾಗಿದೆ. ಅಚ್ಚಕನ್ನಡದ ಪ್ರತಿಯೊಂದು ನುಡಿಗೂ ಅದರದೊಂದು ಆತ್ಮಕಥೆ ಇದೆ ಎಂಬುದನ್ನು ನಾವು ಮರೆಯಬಾರದು....

...ಜನಪದ ಸಾಹಿತ್ಯ ಸರೋವರದಲ್ಲಿ ನಾನಾ ವರ್ಣದ ಕಮಲ ಪುಷ್ಪಗಳಂತೆ ನುಡಿಗಟ್ಟುಗಳು ಬೆಳೆದಿವೆ. ಇವುಗಳನ್ನು ಎತ್ತಿಕೊಂಡು ನಾವು ಇಂದಿನ ಜನಪದವನ್ನು ಸಿಂಗರಿಸಬೇಕಾಗಿದೆ....

—ಶ್ರೀಮಾ ಉತ್ತಂಗಿ ಚೆನ್ನಪ್ಪ

ಹೆಣಿಗಂಟು ನಲುಗಿ ಉರಿದ್ಹೋದೋ....*

ಕಟ್ಟೆಯ ಹಿಂದೆ ಗಕ್ಕನ್ನವೇನಮ್ಮ
ಎತ್ತಿನ ಕೊರಳಗಲ ಹುರಿಗೆಜ್ಜೆ । ನಾಗವ್ವನ
ಕೇಳ ಬಂದವರೆ ದಿಳ್ಳಿದೊರೆಗಳು ॥

ಏರಿಯ ಹಿಂದೆ ಬೋರಾಡೋವೇನಮ್ಮ
ಹೋರಿ ಕೊರಳಗಲ ಹುರಿಗೆಜ್ಜೆ । ನಾಗವ್ವನ
ಕೇಳ ಬಂದವರೆ ದಿಳ್ಳಿ ದೊರೆಗಳು ॥

ಉಪ್ಪರಿಗೆ ಮುಂದೆ ಹರಳು ಕೇರುವ ಹೆಣ್ಣ
ಸಿರಿವಂತರ ಮನೆಗೆ ಕೊಡಿರಯ್ಯ । ನವಿಲೂರ
ಹರಳು ಹೇರಾಡೋ ಮಗನೀಗೆ ॥

ಮಾಳಿಗೆ ಮನೆಮುಂದೆ ಮುತ್ತು ಕೇರುವ ಹೆಣ್ಣ
ಬಿತ್ತಾರಿ ನಮಗೆ ಕೊಡಿರಯ್ಯ । ನವಿಲೂರ
ಮುತ್ತು ಹೇರಾಡೊ ಮಗನೀಗೆ ॥

ಒಪ್ಪ ಬಂದ ತಂಗಿ ಅಟ್ಟುಣ್ಣಕ್ಹೋಗ್ಯವಳೆ
ಪಟ್ಟಿ ಸಾಲಾಗೆ ಅವರಣ್ಣ । ಕೂತುಕೊಂಡು
ಕುಟ್ಟುಣ್ಣೊ ತಂಗಿ ನಾವು ಕೊಡಲಾರೋ ॥

ಚಿಕ್ಕದು ನಮ ಹೆಣ್ಣು ಸೀರೆ ಉಡಲರಿಯಾದು
ಬಟ್ಟಲು ಬೆಳುಗೋದ ಕಲಿಯಾದು । ನವಿಲೂರ
ಗೌಡರಿಗೆ ಹೆಣ್ಣು ನಾವು ಕೊಡಲಾರೋ ॥

---

*ಈ ಜಾನಪದ ಕಥನ ಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ಎಳವರು ಗೊಲ್ಲರು...ಮುಂತಾದವರು ಸಂತೋಷಕ್ಕಾಗಿ ಕಾಲಕಳೆಯಲು ಹಾಡುವರು.

ಆರಿಯಾದು ನಮ ಹೆಣ್ಣು ಆರಿವೇ ಉಡಲರಿಯಾದು
ಹರಿವಾಣ ಬೆಳುಗೋದ ಕಲಿಯಾದು । ನವಿಲೂರ
ದೊರೆಗಳಿಗೆ ಹೆಣ್ಣು ನಾವು ಕೊಡಲಾರೋ ॥

ಹಟ್ಟಿಗೆ ದನಬಂದೋ ತೊಟ್ಟುಕೊಳ್ಳಿ ನಾಗವ್ವ
ಬಟ್ಟೆಳದಗ್ಹೊನ್ನ ಅಳಕೊಡೆ । ನವಿಲೂರ
ಬಟ್ಟೆ ಮುತ್ತಿನಂಥ ಬಳೆಯ ತೊಡುಬಾರೇ ॥

ಬೀದಿಗೆ ದನಬಂದೋ ತೊಟ್ಟುಕೊಳ್ಳಿ ನಾಗವ್ವ
ತಂಬಿಗ್ಹೋಲೊನ್ನ ಅಳಕೊಡೆ । ನವಿಲೂರ
ಬಟ್ಟೆ ಮುತ್ತಿನಂಥ ಬಳೆಯ ತೊಡುಬಾರೇ ॥

ಬಳೆಯ ತೊಡುವಾಗ ಬಲಗಡೆ ಸೀತವರ್ಯಾರೆ
ಬಳೆಗಾರ ಶೆಟ್ಟ ಬಿಡುಕೈಯ್ಯ । ನಾಗವ್ವನ
ಅರ ಬಳೆಗೆ ಲಗುವ ಒದಗ್ಯಾವೆ ॥

ಬಳೆಯ ತೊಡುವಾಗ ಬೆಕ್ಕೈರಡು ಸೀತವು
ಬಳೆಗಾರ ಶೆಟ್ಟ ಬಿಡುಕೈಯ । ನಾಗವ್ವನ
ಅರಬಳೆಗೆ ಲಗುವ ಒದಗ್ಯಾವೆ ॥

ಶೆಟ್ಟ ಮೊಲ್ಲೆಗೆರೆಯ ಬಟ್ಟಬಂಡೆಯಮ್ಯಾಲೆ
ಆರುಖಂಡುಗ ಬತ್ತ ಹರಡವೆ । ನಾಗವ್ವಗೆ
ನಿಸ್ರೇಗೆ ಲಗುವ ಒದಗ್ಯಾವೆ ॥

ರಾಯರೊಲ್ಲೆಗೆರೆಯ ಬೋರೆಂಬರೆಯಮ್ಯಾಲೆ
ಹತ್ತುಖಂಡುಗ ಬತ್ತ ಹರಡ್ಯಾವೆ । ನಾಗವ್ವಗೆ
ನಾರಿಗೆ ಲಗುವ ಒದಗ್ಯಾವೆ ॥

ಕಂಚಿನ ಬಟ್ಟಲಿಗೆ ಮಿಂಚಿಣ್ಣೆ ಹುಯ್ಕೊಂಡು
ಕೆಂಚ ಚಿಂದಯ್ಗೆ ಉಗುರೆಣ್ಣೆ । ಆಗುವಾಗ
ತಂಗೆ ಚೆಲುವಮ್ಮ ಸುಳಿದಾಳು ॥

ತಂಗೆ ಚೆಲುವಮ್ಮ ಸುಳಿದು—ಏನಂದಾಳೆ
ಬೇಡಾರು ನಮ್ಮ ಆಡ ಹೊಡೆದಾರು....ಅಣ್ಣಯ್ಯ
ಬೇಡಾರು ನಮ್ಮ ಆಡ ಹೊಡೆದಾರು ॥

ಎದ್ದನೆ ಚಿಂದಯ್ಯ ಬೆದರಿ ಬಿದ್ದೋನಂಗೆ
ಗೆಜ್ಜೆಯ ಬಿಲ್ಲ ಹಿಡಕೊಂಡು । ಮೂಡಲಗಿರಿಯ
ಹೋದನೋ ಸೀಗೆ ಮೊಳೆದಾಟ ॥

ಕಟ್ಟದ ಕಂಕಣ ಇಕ್ಕಿದ ಸೆರಗೆಣ್ಣೆ
ಅಸರಂಜಿ ಬಿಲ್ಲು ಬಲಗೈಲಿ । ಹಿಡಕೊಂಡು
ಚಿಂದಯ್ಯ ಸೀಗೇಯ ದಾಟ ನಡೆದಾನು ॥

ಸೀಗೇಯದಾಟ ಹೋದಾನೆ ಬಲಕ್ಹಾಗಿ....
ಅವನು ಹೋದಾನೆ ಬಲಕ್ಹಾಗಿ—ಚಿಂದಯ್ಯ
ಅವನು ಬೇಡರ ದಂಡನೆಲ್ಲಾ ಕಡಿದಾನೆ ॥

ತುರುಕರ ಭಾಷೇಲಿ ದ್ವನಿಯೆತ್ತಿ ಕರೆದಾನು
ತುರುಮುಂದಿಗಾರ ನಿಲುಗಾರ । ಚಿಂದಯ್ಯ
ಅವನು ಆಡ್ಹಾಡನೆಲ್ಲಾ ಕರೆದಾನು ॥

ಬೇಡಾರ ದಂಡನೆಲ್ಲಾ ಒಬ್ಬನೆ ಕಡಿದ್ಹೋನು
ನೀರ ತತ್ತ ಹೋಗೆ ಕಿರುತಂಗೆ—ಚೆಲುವಮ್ಮ
ನೀ ನೀರ ತತ್ತ ಹೋಗೆ ಕಿರುತಂಗೆ....।

ಹೋಗೋದು ಹೊರಊರು ಬರುವೋದು ಬೇರೆಊರು
ನಾಗ ಸಂಪಂಗ್ಗೀ ನಡಿವೇಲಿ । ಬರುವಾಗ
ಆಡಿನಣ್ಣಯ್ಗೆ ತಲೆನೋವು ಬಂದೀತು ॥

ಗೊಲ್ಲರ ಭಾಷೇಲಿ ಕೊರಳಿಡಿದ್ಹಾಡ ಕರೆದು
ಬೇಲ್ಹೀಯ ಒಳಗೆ ನಿಲಗರೆದು । ಎಣೆಸ್ಯಾನೆ
ಕುಂಟಾಡಿನ ಮರಿಯ ಸುಳಿವಿಲ್ಲಾ ॥

ಮುಂಗೋಳಿ ಕೂಗೀತು ಮೂಡು ಕೆಂಪೇರಿತು
ಸೀಗೇಯ ಮೆಳೆಯಲ್ಲಿ ಮಲಗವನೆ । ಚಿಂದಯ್ಯ
ಹಾಳು ಬೇಡಾರು ಅವನ ಕಡಿದಾರು ॥

ಬಾಳೇಯ ಗಿಡದಡಿ ಬಾಲಾಗೆ ಗುಂಡಿ ತೆಗೆದು
ಬಾಳಗೇಡಿ ನಾಗವ್ವನ ಬಳಗಾವೆ । ಬಂದಳುವಾಗ
ಬಾಳೆ ಚಪ್ಪರವೆ ನೆರಳಾದೊ ॥

ಇಂಬೆಯ ಮರದಡಿ ರಂಬೆ ನೆಲಕುರುಳಿದಾಳು
ನಾರಿ ನಾಗವ್ವನ ಬಳಗಾವೆ । ಬಂದಳುವಾಗ
ಇಂಬೆ ಚಪ್ಪರವೆ ನೆರಳಾದೊ ॥

ಹಸುವಿನ ಹಾಲ ಕೊಡಿ ಹಸುವಿನ ಬೆಣ್ಣೆ ಕೊಡಿ
ಹಸುವಿನ ಹಾಲ ಕರೆಕೊಡಿ । ಚಿಂದಯ್ನ
ಮರುವಾದ ಋಣಕೆ ಬಿಡುತ್ತೀನಿ ॥

ಕೆಚ್ಚಿಗೆ ಸೌದೆ ಹೊರುವ ಎತ್ತಿನ ಚೆಂದವನೋಡಿ
ಕತ್ತಿಗೆ ಕೊರಳಿಗೆ ಚಲ್ಲವೆ ಹುರಿಗೆಜ್ಜೆ । ಹೂಮಾಲೆ
ಬಂದಾವು ನಾಗವ್ವನ ಎದೆಗುಂಡು ॥

ಕೊಂಡಾಕೆ ಸೌದೆ ಹೊರುವ ಕೋಣಾನ ಚೆಂದವನೋಡಿ
ಕೋಡೀಗೆ ಕೊರಳಿಗೆ ಚಲ್ಲವೆ ಹುರಿಗೆಜ್ಜೆ । ಹೂಮಾಲೆ
ಆದಾವು ನಾಗವ್ವನ ಎದೆಗುಂಡು ॥

ಕೊಂಡದಲಿರುವ ಕೆಂಡದ ಚವಲೀಯ
ತಕ್ಕೊಂಡು ಬಾರ್ಹೆಣ್ಣೆ ಇದುರೀಗೆ । ನಾಗವ್ವನ
ಗಂಡನ ಮನೆಗೆ ಕಳುವೋನ ॥

ಕಿಚ್ಚಿನಾಗಿರುವ ಕುಚ್ಚಿನ ಚವರಿಯ
ತಕ್ಕೊಂಡು ಬಾರ್ಹೆಣ್ಣೆ ಇದುರೀಗೆ । ನಾಗವ್ವನ
ಅವರತ್ತೀಯ ಮನೆಗೆ ಕಳುವೋನ ॥

ಮಾವೀನ ಕೊನೆ ಬಂದು ಮೂಡಾಗೆ ನಿಂದಾವೆ
ಮಾವ ನಿನ್ನೊಡಲು ಉರಿಯಾದೆ । ನೀನು ತಂದ
ಮಾಣಿಕವು ಕೊಂಡ ಹೋಗುವಾಗ ॥

ಹತ್ತಿಯ ಕೊನೆಬಂದು ಹಟ್ಟಾಕ್ಕೆ ನಿಂದಾವೆ
ಅತ್ತೆ ನಿನ್ನೊಡಲು ಉರಿಯಾದೆ । ನೀನು ತಂದ
ಮುತ್ತೈದೆ ಕೊಂಡ ಹೋಗುವಾಗ ॥

ಸುತ್ತಾ ನುಚ್ಚಕ್ಕಿ ಹಸೆಹುಯ್ದು
ಮುತ್ತೀನ ಕಳಸ ನಡುವಿರಿಸಿ । ನಾಗವ್ವನ
ಕಿಚ್ಚಿಗೆ ಧಾರೆ ಎರೆದಾರು ॥

ಕೊಂಡದ ಸುತ್ತಾ ಕೊಂಡದ ಹಸೆ ಹುಯ್ದು
ಬಂಗಾರದ ಕಳಸ ನಡುವಿರಿಸಿ । ನಾಗವ್ವನ
ಕೊಂಡಾಕೆ ಧಾರೆ ಎರೆದಾರು ॥

ಅತ್ತಿತ್ತ ನೋಡ್ಯಾಳೆ ಹತ್ಯಾಳೆ ಸತಿಕೆಲ್ಲ
ಹತ್ತೀರ ಬರುತಾರೆ ಅವರಪ್ಪ । ತಾಯಮ್ಮ
ನೂರು ಕೊಟ್ಟೀನು ಇರುಮಗಳೆ ?

ನೀನೂರ ಕೊಟ್ಟಾರೆ ನನ ಕೊಪ್ಪಿನ ಬೆಲೆಯಿಲ್ಲಾ
ಅತ್ತೆಯ ಮಗನೆ ಚಿಂದಯ್ಯ । (ನ) ಕುಟ್ಟಿ
ನಾನು ಹತ್ತೋದೆ ಲೇಸು ಒಡಗಿಚ್ಚ ॥

ಆಗೀಗ ನೋಡ್ಯಾಳೆ ಏರ್ಯಾಳೆ ಸತಿಕಲ್ಲ
ದೂರ ಬರುತಾಳೆ ಅವರವ್ವ । ಅಕ್ಕಯ್ಯ
ಹೊನ್ನು ಕೊಟ್ಟೀನು ಇರು ಮಗಳೆ ?

ನೀ ಹೊನ್ನು ಕೊಟ್ಟಾರೆ ನನ್ನ ವಾಲೆಯ ಬೆಲೆಯಿಲ್ಲಾ
ಮಾವನ ಮಗನೆ ಚಿಂದಯ್ಯ । (ನ) ಕುಟ್ಟಿ
ನಾನು ಹತ್ತೋದೆ ಲೇಸು ಒಡಗಿಚ್ಚ ॥

ಹೆಣ್ಣೀಗೆ ಮಣ್ಣು ಬಿದ್ದೊ ಕಣ್ಣಿಗೆ ಸೆತ್ತೆ ಬಿದ್ದೊ
ಸಣ್ಣ ಸೀರೆಮ್ಯಾಲೆ ಕಿಡಿಬಿದ್ದೊ । ನಾಗವ್ವನ
ಹೆಣಿಗಂಟು ನಲುಗಿ ಉರಿದ್ಹೋದೋ ॥



ನಾನಿದ್ದು ಬಂದೇನು ನಡೀರಣ್ಣ

ಆಚೆ ಕೇರೀಲಿ ಕೆಂಪನ್ನ ಹೆಣ್ಣನ್ಕೈ—ಬಾಲಾನ ತಾಯಮ್ಮೈ ।
ಅವಳ ನೀವು ಕರಕೊಳ್ಳಿ ಜವರಾಯ ಸುಮ್ನೀ ।
ನಾನಿದ್ದು ಬರುತ್ತೀನಿ ನೀವು ನಡೀರಣ್ಣ ಸುಮ್ನೀ ॥

ವರಕವಿಯು ಭಾವೋನ್ಮತ್ತನಾಗಿ, ಅಗೋಚರ ಶಕ್ತಿಯಿಂದ ಪ್ರಚೋದಿತನಾಗಿ ತನ್ನ ಲೇಖನಿಯ ಝರಿಯಿಂದ ಸಾಹಿತ್ಯದ ಸುಧಾ ಸ್ರೋತ್ರವನ್ನು ಹರಿಸುವಂತೆ, ಹಳ್ಳಿಯ ರೈತರು ಸಮಾಜದ ಹೊಲದಲ್ಲಿ ಅನುಭವದ ಬಿತ್ತನೆಯನ್ನು ಬಿತ್ತು ಜಗತ್ಕಲ್ಯಾಣದ ಬೆಳೆಯನ್ನೇನು ಬೆಳೆದರೋ, ಅದೇ ಜನಪದಸಾಹಿತ್ಯ. ಪ್ರೌಢಸಾಹಿತ್ಯವು ಪಂಡಿತೋತ್ತಮರ ಸುಂದರೋದ್ಯಾನಗಳಲ್ಲಿ ಕುಸುಮಸ್ತಬಕಸಂಕುಲವಾಗಿ ಪ್ರಭಾವಿಸಿದರೆ, ಜನಪದ ಸಾಹಿತ್ಯವು ರೈತರ ಹೊಲಗದ್ದೆಗಳಲ್ಲಿ ಧಾನ್ಯದ ತೆನೆಯಾಗಿ ಪ್ರಭವಿಸಿದೆ. ರೈತರ ಹೃತ್ಕೊಟರಗಳಿಂದ ಹೊರಟು, ಅವರ ಜಿಹ್ವೆಯ ಟೊಂಗೆಗಳ ಮೇಲೆ ಕುಳಿತು, ಭುವನಜನ ಮನಮೋಹಕ ನಯನ ಸ್ವರದಿಂದ ಜನತೆಯನ್ನು ತಣಿಸಿದ ಕೋಕಿಲಾನೀಕಗಳೇ ಜನಪದಗೀತೆಗಳು. ಜನಪದಗೀತೆಗಳು ರಾಗಿಕಲ್ಲಿನ ಗಭೀರ ನಿಸ್ವನಸ್ರೋತದೊಂದಿಗೆ, ವೇಣುವಿನ ಮಧುರ ನಿಸ್ವಣ ಲಹರಿಯೊಂದಿಗೆ ಗಾನತರಂಗಿಣಿಯಾಗಿ ಪ್ರಭವಿಸಿವೆ. ಅವು ಸತ್ಯದ ಝರಿಯಾಗಿ, ಧರ್ಮದಖನಿಯಾಗಿ, ಶಾಂತಿಯ ಆಗರವಾಗಿ, ನೀತಿಯ ತೂಗೀರವಾಗಿ ನಾಡಿನಲ್ಲೆಲ್ಲಾ ಆರಾಜಿಸುತ್ತಿವೆ.

ಇದು ಸಜೀವ ಸಾಹಿತ್ಯ. ಒಂದು ವಿಶಿಷ್ಟಜನಾಂಗಕ್ಕಾಗಲೀ, ದೇಶಕ್ಕಾಗಲೀ ಸಂಬಂಧಿಸಿದುದಲ್ಲ. ಜಗತ್ತಿನ ಸರ್ವ ಜನಾಂಗದವರಿಗೂ, ದೇಶದವರಿಗೂ ಸಂಬಂಧಿಸಿದ ವಿಶ್ವಸಾಹಿತ್ಯ ಪ್ರತ್ಯಹವೂ ಹಚ್ಚನೆಯ ಬಣ್ಣದಿಂದ ಕಂಗೊಳಿಸುವ ಪುಷ್ಪಲತಾ ಕಾನೀತ ಸುಂದರೋದ್ಯಾನ.

—ಜನಾಬ್ ಎಸ್. ಕೆ. ಕರೀಂಖಾನ್

ನಾನಿದ್ದು ಬಂದೇನು ನಡೀರಣ್ಣ*

ಬಂದಾನು ಜವರಾಯ ನಿಂದಾನು ಏರಿಮೇಲೆ
ಜವರಾಯ ಹೋದಾನು ಏರಿ ಮೇಲೆ ॥
ತುಂಬಿದಂಗೆ ಊರ ಹೋಗಲಮ್ಮ—ಸುವ್ವೀ ।
ತುಂಬಿದಂಗೆ ಊರ ಹೋಗನಲ್ಲೆ ಜವರಾಯ—
ಹೋಗನಲ್ಲೆ ಇಮಿರಾಯ ॥
ನಾನಿದ್ದು ಬಂದೇನು ನಡೀರಣ್ಣ ಸುವ್ವೀ ॥

ಮಂಚದ ಮೇಲೆ ಮಲಗಿರುವ ಹೆಣ್ಣೀಗೆ
ಮಲಗಿರುವ ರಾಣೀಗೆ ।
ಮಂಕು ಬೂದೀಯ ಎರೆದವ್ನೆ ಇಮಿರಾಯ ।
ಮಂಕು ಬೂದೀಯ ತಳೆದವ್ನೆ ಜವರಾಯ—ಸುವ್ವೀ ।
ನಾನು ಬಿಟ್ಟಂಗೆ ಬರಲೋ ಜವರಾಯ—ಸುವ್ವೀ ॥
ನಾನಿದ್ದು ಬಂದೇನು ನಡೀರಣ್ಣ—ಸುವ್ವೀ ।

ಮಂಚದ ಮೇಲೆ ಮಲಗಿರುವ ಹೆಣ್ಣೀಗೆ
ಮಲಗಿರುವ ರಾಣೀಗೆ—
ಮಂಕು ಬೂದೀಯ ತೊಳೆದಾನೆ—ಸುವ್ವೀ ॥
ಮಂಕು ಬೂದೀಯ ತೊಳೆದಾನೆ ಇಮಿರಾಯ—ಸುವ್ವೀ ॥
ಕಂದಯ್ಗೆ ಹಾಲ ಎರದವ್ನೆ ಜವರಾಯ—
ಎರದವ್ನೆ ಇಮಿರಾಯ—ಸುವ್ವೀ ।
ನಾನಿದ್ದು ಬಂದೇನು ನಡೀರಣ್ಣ—ಸುವ್ವೀ ।

ಕಂದಯ್ನ ಸಾಕಕೆ ಕಡಿ ಚೆಲುವೆ ಬರುತಾಳೆ—
ಅತಿರಂಬೆ ಬರುತಾಳೆ ಸುವ್ವೀ ।

---

*ಈ ಕಥನಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ದೊಂದಿದಾಸರು ಏಕನಾದವನ್ನು ಹಿಡಿದುಕೊಂಡು ಹಾಡುತ್ತಾರೆ.

ಬಾಲನುಳ್ಳ ತಾಯಿ ನೀ ನಡಿಯಮ್ಮ—ಸುವ್ವೀ ।
ಅಟ್ಟದ ಮೂಡಲ್ಲಿ ಅಗೇವ ತುಂಬಿದರೆ—
ಹೋಡೇಯ ತುಂಬಿದರೆ—
ಉಣ್ಣೋಳು ಮುಂದವಳೆ ನೀ ನಡಿಯಮ್ಮ—ಸುವ್ವೀ ॥

ಹನ್ನೆರಡು ತಿಂಗಳಿಗೆ ಬಾಲಯ್ನ ಪಡೆದಿವ್ನಿ—
ನಾನು ಕಂದಯ್ನ ಪಡೆದಿವ್ನಿ ॥
ನಾ ಬಟ್ಟಿಂಗೆ ಬರಲೋ ಜವರಾಯ—ಸುವ್ವೀ ॥
ಹನ್ನೆರಡು ತಿಂಗಳೀಗೆ ಪುತ್ರಾನ ಪಡೆದಾರೆ ಸುವ್ವೀ ।
ಬಾಲಾನ ಪಡೆದಾರೆ ಸಾಕಲು ಬರುತಾಳೆ—
ಸಲುವೋಳು ಬರುತಾಳೆ ನೀ ನಡಿಯಮ್ಮ ಸುವ್ವೀ ॥

ಹಾಲು ಕಾಸಿವ್ನಿ ಅರಿವಾಣ ಬೆಳಗಿವ್ನಿ—
ನಾನು ಅರಿವಾಣ ಬೆಳಗಿವ್ನಿ ಸುವ್ವೀ ।
ಅರಿವಾಣಕೆ ಹಾಲು ಸುರಿದ್ಹೋನು ಜವರಾಯ ಸುವ್ವೀ ।
ಈ ಕಂದಯ್ಗೆ ಹಾಲು ಎರೆದೇನು—ಸುವ್ವೀ ॥
ಹಾಲು ಎರೆವ ಬಾಲೆ ಇಂದೇನು ಬರುತಾಳೆ—
ಮುಂದೇನು ಬರುತಾಳೆ—ಸುವ್ವೀ ।
ನಿನ್ನ ಸವತಿ ಬರುತಾಳೆ ನಡೀಯಮ್ಮ—ಸುವ್ವೀ ।

ಹುಂಡೆ ಹೊಗೆ ಸೊಪ್ಪು ಮಾರಿ ಮಾಳೀಗೆ ಮನೆಕಟ್ಟಿ—
ನೀ ಉಪ್ಪರಿಗೆ ಮನೆ ಕಟ್ಟಿ ಸುವ್ವೀ ।
ಮಾಳಿಗೆಯೊಳಗೆ ಇರಲಿಲ್ಲ ಜವರಾಯ ।
ಇರಲಿಲ್ಲ ಇಮಿರಾಯ ಸುವ್ವೀ ।
ನಾನಿದ್ದು ಬಂದೇನು ನಡೀರಣ್ಣ—ಸುವ್ವೀ ॥

ಮಾಳಿಗೆಯೊಳಗೆ ಇರುವೋಳು ಇಮಿರಾಯ—
ಉಣ್ಣೋಳು ಮುಂದವಳೆ ಗಂಡನುಳ್ಳ ಗರತಿ ನಡಿಯಮ್ಮ
ಸುವ್ವೀ ।

ಅಟ್ಟದ ಮೂಡಲ್ಲಿ ಅಗೇವ ತುಂಬಿವ್ನಿ—
ನಾನು ಹೋಡೇಯ ತುಂಬಿವ್ನಿ ಸುವ್ವೀ ॥
ನಾನು ಬಿಟ್ಟಿಂಗೆ ಬರಲೋ ಜವರಾಯ ಸುವ್ವೀ ॥

ಒಳ್ಳೆದೊಳಗಿಟ್ಟು ಜೊಳ್ಳು ಧಾನವ ಮಾಡಿ—
ಜೊಳ್ಳು ಧಾನವ ಮಾಡಿ ಸುವ್ವೀ ।
ಕೊಳ್ಳಿಯಮೇಲೆ ತಲೆ ಸಿಡಿದು ಬರುವಾಗ—
ಅಲ್ಲಿ ಮಾಡೀದೆ ಧರ್ಮಾವ—ಸುವ್ವೀ ॥
ಧಾನ ಮಾಡೋಳು ಈಗಲೆ ಬರುತಾಳೆ ।
ಮುಂದೆ ಬರುತಾಳೆ-ನೀ ನಡೆಮುಂದೆ ಸುವ್ವೀ ।
ಗಂಡನುಳ್ಳ ಗರತಿ ನೀ ನಡೆ ಮುಂದೆ—ಸುವ್ವೀ ॥

ಮಕ್ಕಳ ಬಿಡಿರಯ್ಯ ಮನೆಬಿಟ್ಟ ಜವರಾಯ—
ಮನೆಬಿಟ್ಟ ಇಮಿರಾಯ ಸುವ್ವೀ ।
ಮಕ್ಕಳ ನಡೆಸೋಕೆ ಈಗಾಲೆ ಬರುತಾಳೆ—
ಮುಂದೇನು ಬರುತಾಳೆ ಸುವ್ವೀ ।
ಗಂಡನುಳ್ಳ ಗರತಿ ನೀ ನಡೆಮುಂದೆ—ಸುವ್ವೀ ॥

ಎಷ್ಟೊತ್ತು ನಿನ್ನ ಕಾಯಿಕೊಂಡಿರಬೇಕೆ—
ಬೇಡಿಕೊಂಡಿರಬೇಕೆ ಸುವ್ವೀ ।
ಏಳೆ ರಂಡೆನುತ ಕರೆದಾನೆ—ಜವರಾಯ ಸುವ್ವೀ ।
ಏಳೆ ರಂಡೆನುತ ಕರೆದಾನೆ—ಇಮಿರಾಯ ಸುವ್ವೀ ।
ನಾನಿದ್ದು ಬಂದೇನು ನಡೀರಣ್ಣ—ಸುವ್ವೀ ।

ಧಾನಧರ್ಮವ ಮಾಡೀದ ಮುಂಡವಳಲ್ಲಾ—
ರಂಡವಳಲ್ಲಾ ಸುವ್ವೀ ॥
ಏಳು ಬೀದೀಲಿ ಎಳಿಸವ್ನೆ ಜವರಾಯ—

ಎಳಿಸವ್ನೆ ಇಮಿರಾಯ ಸುವ್ವೀ ।
ನಾನಿದ್ದು ಬಂದೇನು ನಡೀರಣ್ಣ ಸುವ್ವೀ ।

ಚಿಕ್ಕ ಚಿಕ್ಕ ಜೋಗಿ ಚಿಕ್ಕ ಪ್ರಾಯದ ಜೋಗಿ—
ಸಣ್ಣ ಮರದಲ್ಲಿ ನಾನು ಅಕ್ಕಿಪಡಿ ತಂದಿವ್ನಿ ಸುವ್ವೀ ॥
ಅಕ್ಕಿ ಪಡಿ ನಾನ್ಹೇನು ಮಾಡಾಲೀ—ಸುವ್ವೀ ।
ನಾನ್ಹೇನು ಕುಟ್ಟಾಲೀ....ಸುವ್ವೀ ॥
ನೀನು ಜೀನಗಳಿಸಿದ್ದು ಅಡವೀಯ ಪಾಲು ಸುವ್ವೀ ॥
ತಾನು ಸಂಪಾದಿಸಿದ್ದು ಮಣ್ಣು ಪಾಲು ಸುವ್ವೀ ॥

ಧಾನಧರ್ಮವ ಮಾಡೀದ ಮುಂಡ್ಯಲ್ಲಾ—
ಮಾಡೀದ ರಂಡೆಯಲ್ಲಾ ಸುವ್ವೀ ।
ಎಳಿಸ್ಯವ್ನೆ ಇಮಿರಾಯ ಎಳಿಸ್ಯವ್ನೆ ಜವರಾಯ ಸುವ್ವೀ ॥
ಮುಳ್ಳೀನ ಮೇಲೆ ಎಳಿಸ್ಯವ್ನೆ ಇಮಿರಾಯ—
ಎಳಿಸ್ಯವ್ನೆ ಜವರಾಯ ಸುವ್ವೀ ॥
ಕಲ್ಲೀನ ಮೇಲೆ ಎಳಿಸ್ಯವ್ನೆ ಜವರಾಯ—ಸುವ್ವೀ ।
ಕಂಚೀನ ಕಾಗೆ ಬಿಡಿಸ್ಯವ್ನೆ ಯಮರಾಯ—ಸುವ್ವೀ ।

ಹದ್ದು ಕಾಗೆಗಳು ಕೀಳುತಾವೆ ಇಮಿರಾಯ—
ಕೀಳುತಾವೆ ಜವರಾಯ ಸುವ್ವೀ ॥
ನಾನಿದ್ದು ಬಂದೇನು ನಡೀರಣ್ಣ —ಸುವ್ವೀ ॥
ಧಾನ ಧರ್ಮವ ಕೊಡುವೋಳು ಬರುತಾಳೆ—
ತರುವೋಳು ಬರುತಾಳೆ ಸುವ್ವೀ ।
ಮುಕ್ಕಳ ತಾಯಿ ನೀ ನಡಿಯವ್ವ—ಸುವ್ವೀ ।

ಮುಕ್ಕಳ ಬಿಡಿರಯ್ಯ ಮನಬಿಟ್ಟಿ ಇಮಿರಾಯ—
ಮನೆ ಬಿಟ್ಟಿ ಜವರಾಯ ಸುವ್ವೀ ।
ನೀನು ರಾಯಾರ ಬಿಟ್ಟಿ ಸುವ್ವೀ॥

ರಾಯಾರ ನಡೆಸೋಕೆ ರಾಣಿಯಮ್ಮ ಬರುತಾಳೆ—
ತಾಯಮ್ಮ ಬರುತಾಳೆ ಸುವ್ವೀ ।
ನಿನ್ನ ಸವತಿ ಬರುತಾಳೆ ನೀ ನಡೆಮುಂದೆ—ಸುವ್ವೀ ॥

ಸೀಕು ಮಾರಿ ಚಿಂತಾಕು ಮಾಡಿಸಿವ್ನಿ ಸುವ್ವೀ ।
ನಾನು ಚಿಂತಾಕು ಮಾಡಿಸಿವ್ನಿ ಸುವ್ವೀ ।
ನಾನು ಚಿಂತಾಕರಘಳಿಗೆ ಇಕ್ಕಲಿಲ್ಲ ಇಮಿರಾಯ ಸುವ್ವೀ ।
ನಾನಿನ್ಯಾರು ಬರುತ್ತೀನಿ ನಡೀರಣ್ಣ ಸುವ್ವೀ ॥
ಚಿಂತಾಕಿಕ್ಕೊ ಬಾಲೆ ಈಗಲೆ ಬರುತಾಳೆ—
ಮುಂದೆ ಬರುತಾಳೆ ಸುವ್ವೀ ।
ನಿನ್ನ ಸವತಿ ಬರುತಾಳೆ ನಡೀಯಮ್ಮ—ಸುವ್ವೀ ॥

ತಂಗಳಟ್ಟು ಮಾರಿ ತಾತಿಯ ಮಾಡಿಸಿವ್ನಿ—
ನಾನು ತಾತಿಯ ಮಾಡಿಸಿವ್ನಿ ಸುವ್ವೀ ।
ನಾನು ತಾತೊಂದರಘಳಿಗೆ ಇಕ್ಕಲಿಲ್ಲ ಯಮರಾಯ ಸುವ್ವೀ।
ಇಕ್ಕಲಿಲ್ಲ ಜವರಾಯ ಸುವ್ವೀ ।
ನಾನಿಕ್ಯಾರು ಬರುತ್ತೀನಿ ನಡೀರಣ್ಣ ಸುವ್ವೀ ।

ತಾತೀಯ ಇಕ್ಕೊ ಬಾಲೆ ಈಗಲೆ ಬರುತಾಳೆ—
ಮುಂದೆ ಬರುತಾಳೆ ಸುವ್ವೀ ।
ನೀನು ಗಂಡನುಳ್ಳ ಗರತಿ ನಡಿಯವ್ವ ಸುವ್ವೀ ॥
ಉತ್ಕವ ಮಾರಿ ಪದಕವ ಮಾಡಿಸಿವ್ನಿ ।
ನಾನು ಪದಕವ ಮಾಡಿಸಿವ್ನಿ ಸುವ್ವೀ ।
ನಾನಿಕ್ಯಾರ ಬರುತ್ತೀನಿ ನೀವು ನಡೀರಣ್ಣ ಸುವ್ವೀ ॥
ಪದಕ ಇಕ್ಕೊ ಬಾಲೆ ಈಗಲೆ ಬರುತಾಳೆ—
ಮುಂದೇನು ಬರುತಾಳೆ ಸುವ್ವೀ ।
ಮಕ್ಕಳ ತಾಯಿ ನೀ ನಡಿಯವ್ವ ಸುವ್ವೀ ।

ಹೋರಿಯ ಮಾರಿ ವಾಲೇಯ ಮಾಡಿಸಿವ್ನಿ—
ನಾನು ವಾಲೇಯ ಮಾಡಿಸಿವ್ನಿ ಸುವ್ವೀ ।
ನಾನು ವಾಲೊಂದರ ಳೆಳಿಗೆ ಇಕ್ಕಲಿಲ್ಲ ಯಮರಾಯ—
ನಾನಿಕ್ಯಾರು ಬರುತ್ತೀನಿ ನೀವು ನಡೀರಣ್ಣ ಸುವ್ವೀ ।
ಮುಂದಾಲೆ ಬರುತಾಳೆ ಈಗಲೆ ಬರುತಾಳೆ—
ಕಂದನ ತಾಯಿ ನೀ ನಡಿಯಮ್ಮ ಸುವ್ವೀ ।

ಬತ್ತಾವ ಮಾರಿ ಬಣ್ಣಾವ ನೆಯಿಸಿವ್ನಿ—
ನಾನು ಬಣ್ಣಾವ ಕೊಂಡಿವ್ನಿ ಸುವ್ವೀ ।
ಬಣ್ಣಾವೊಂದರಳೆಳಿಗೆ ಹುಡಲಿಲ್ಲಾ ಜವರಾಯ—
ನಾವುಟ್ಟಾರು ಬರುತ್ತೀನಿ ನೀವು ನಡೀರಣ್ಣ ಸುವ್ವೀ ॥

ಬಣ್ಣ ಹುಡುವೋಕೆ ಇಂದಲೆ ಬರುತಾಳೆ—
ಮುಂದಲೆ ಬರುತಾಳೆ ಸುವ್ವೀ ।
ನಿನ್ನ ಸವತಿ ಬರುತಾಳೆ ನೀನಡಿಯವ್ವ—ಸುವ್ವೀ ।
ಬಣ್ಣ ಹುಡುವೋಕೆ ಯಾರೊಡಬೆ ಉಂಡೀಯಾ—
ಯಾರೊಡಬೆ ಹುಟ್ಟೀಯಾ ಸುವ್ವೀ ।

ಜೇನಗಳಿಸಿದ್ದು ಅಡವೀಯಾ ಪಾಲೊಂದ—
ಅಡವೀಯಾ ಪಾಲೊಂದ ಸುವ್ವೀ ।
ತಾನು ಸಂಪಾದಿಸಿದ್ದು ಮಣ್ಣು ಪಾಲು—ಸುವ್ವೀ ।
ಹಂದೀಯ ಮಾರಿ ಬಂಧೀಯ ಮಾಡಿಸಿವ್ನಿ ।
ನಾನು ಬಂಧೀಯೊಂದರಳೆಳಿಗೆ ಇಡಲಿಲ್ಲ ಜವರಾಯ ಸುವ್ವೀ।
ನಾನಿಕ್ಯಾರು ಬರುತ್ತೀನಿ ನೀವು ನಡೀರಣ್ಣ—ಸುವ್ವೀ।

ಬಂಧೀ ಇಕ್ಕೋ ಬಾಲೆ ಈಗಲೆ ಬರುತಾಳೆ
ಮುಂದಾಲೆ ಬರುತಾಳೆ ಸುವ್ವೀ ।
ನೀನು ಗಂಡನುಳ್ಳ ಗರತಿ ನಡೀಯವ್ವ ಸುವ್ವೀ ।

ಕೊಟ್ಟೀಗೆ ತುಂಬವ ಕರುಗಳು ಎಮ್ಮೆಗಳು ಬಿಟ್ಟಿ—
ನಾನು ಕಾಸೊ ಹಾಲು ಬಿಟ್ಟಿ ಸುವ್ವೀ ।
ನಾನು ಬಿಟ್ಟಂಗೆ ಬರಲೊ ಜವರಾಯ—
ನಾನು ಕಾಸ್ಯಾದ್ರು ಬರುತ್ತೀನಿ ನೀವು ನಡೀರಣ್ಣ ಸುವ್ವೀ ।
ಕೊಟ್ಟೀಗೆ ತುಂಬಾವ ಕರು ಎಮ್ಮೆಗಳಿವೆ—
ಕಾಸೊ ಹಾಲಿದ್ದಾರೆ ಸುವ್ವೀ ।
ಉಣ್ಣೋಳು ಮುಂದವಳೆ ಇಕ್ಕೋಳು ಮುಂದವಳೆ—
ನೀನು ಗಂಡನುಳ್ಳ ಗರತಿ ನೀ ನಡೀಯವ್ವ ಸುವ್ವೀ ।

ಆಚೆ ಕೇರೀಲಿ ಕೆಂಪನ್ನ ಹೆಣ್ಣವ್ಳೆ—ಬಾಲಾನ ತಾಯವ್ಳೆ ।
ಅವಳ ನೀವು ಕರಕೊಳ್ಳಿ—ಜವರಾಯ ಸುವ್ವೀ ।
ನಾನಿದ್ದಾರು ಬರುತ್ತೀನಿ ನೀವು ನಡೀರಣ್ಣ ಸುವ್ವೀ ॥

ಆಚೆ ಕೇರೀಲಿ ಕೆಂಪನ್ನ ಹೆಣ್ಣಿದ್ರೆ—
ಬಾಲಾನ ತಾಯಿದ್ರೆ ಸುವ್ವೀ ।
ಎಂದಿದ್ರೆ ನನ್ನೋಳು ನೀನು ನಡಿಯವ್ವ ಸುವ್ವೀ ।
ಆಚೆ ಬೀದಿಲ್ಲಿ ಮುಂಡೇರು ರಂಡೇರವ್ರೆ—
ಸೂಳೇರು ಸುಗಣೇರವ್ರೆ ಸುವ್ವೀ ।
ಅವ್ರು ನೀವು ಕರೆಕೊಳ್ಳಿ ಜವರಾಯ ಸುವ್ವೀ ।
ನಾನಿದ್ದಾರು ಬರುತ್ತೀನಿ ನೀವು ನಡೀರಣ್ಣ—ಸುವ್ವೀ ।

ಆಚೆ ಬೀದೀಲಿ ಮುಂಡೇರು ರಂಡೇರಿದ್ರೆ—
ಸೂಳೇರು ಸುಗುಣೇರಿದ್ರೆ ಸುವ್ವೀ ।
ಅವರು ಎಂದಿದ್ರು ನನ್ನೋರು ಸುವ್ವೀ ।
ನೀನು ಗಂಡನುಳ್ಳ ಗರತಿ ನೀ ನಡೀಯವ್ವ—ಸುವ್ವೀ ।
ಹಾರುವರ ಬೀದಿಲ್ಲಿ ಆಡೋ ಮಕ್ಕಳವ್ರೆ—
ಆಡೋ ಬಾಲಾರವ್ರೆ ಸುವ್ವೀ ।

ಅವ್ರುನಾದ್ರು ನೀನು ಕರೆಕೊಳ್ಳಿ ಸುವ್ವೀ—ಜವರಾಯ।
ನಾನಿದ್ದಾರು ಬರುತ್ತೀನಿ ನೀವು ನಡೀರಣ್ಣ—ಸುವ್ವೀ।
ಹಾರುವರ ಬೀದಿಲ್ಲಿ ಆಡೋ ಮಕ್ಕಳಿದ್ರೆ—
ಆಡೋ ಬಾಲಾರಿದ್ರೆ ಸುವ್ವೀ।
ಅವರು ಎಂದಿದ್ರು ನನ್ನೋರು—ಸುವ್ವೀ।
ನೀನು ಗಂಡನುಳ್ಳ ಗರತಿ ನೀ ನಡೀಯವ್ವ—ಸುವ್ವೀ।

ಅಕ್ಕಿ ಹಾಕಿವ್ನಿ ಅನ್ನಾವ ಮಾಡಿವ್ನಿ—
ಬಟ್ಟಲೀಗೆ ಅನ್ನ ಸುರಿದಿವ್ನಿ ಜವರಾಯ।
ನಾನ್ಹುಂಡು ಬರುತ್ತೀನಿ ನೀ ನಡೀರಣ್ಣ ಸುವ್ವೀ।
ಅನ್ನ ಉಣ್ಣೋಕೆ ಯಾರೊಡನೆ ಉಂಡೀಯಾ—
ಯಾರೊಡಬೆ ಹುಟ್ಟೀಯಾ ಸುವ್ವೀ।

ಜೀನ ಗಳಿಸಿದ್ದು ಆಡವೀಯ ಪಾಲೊಂದ ಇಮಿರಾಯ।
ಆಡವೀಯ ಪಾಲೊಂದ—ಸುವ್ವೀ।
ತಾನು ಸಂಪಾದಿಸಿದ್ದು ಮಣ್ಣು ಪಾಲು ಸುವ್ವೀ।

ಅಕ್ಕಿ ಹಾಕಿವ್ನಿ ತುಪ್ಪಾವ ಕಾಸಿವ್ನಿ ಇಮಿರಾಯ ಸುವ್ವೀ।
ತುಪ್ಪಾವ ಕಾಸಿವ್ನಿ ಜವರಾಯ ಸುವ್ವೀ।
ನಾನ್ಹುಂಡು ಬರುತ್ತೀನಿ ನೀವು ನಡೀರಣ್ಣ ಸುವ್ವೀ।
ತುಪ್ಪಾದ ಹುಗ್ಗೆ ನನಕೈಲಿ ಕೊಡಮ್ಮ—ನನಕೈಲಿ ತಾರಮ್ಮ।
ಅಲ್ಲುಣ್ಣೆವಂತೆ ಹಗಲೂಟ ಸುವ್ವೀ।
ಮಕ್ಕಳ ತಾಯಿ ನೀ ನಡಿಯಮ್ಮ ಸುವ್ವೀ।

ಬಾಣಾತಿ ಕಾಣಯ್ಯ ಬರಲಾರೆ ಇಮಿರಾಯ—
ನಾನು ಬರಲಾರೆ ಜವರಾಯ ಸುವ್ವೀ।
ನಾನಿದ್ದು ಬಂದೇನು ನೀ ನಡೀಯಪ್ಪ ಸುವ್ವೀ।

ಬಾಣಾತಿ ಕಾಣಂದು ಬಾಳೆ ಕಂಬವ ತರಿಸಿ ಇಮಿರಾಯೆ—
ಬಾಳೆ ಕಂಬವ ತರಿಸಿ ಜವರಾಯ ಸುವ್ವೀ ।
ನೂರೊಂದು ಪಂಜು ಹಿಡಿಸ್ಯವ್ನೆ ಯಮರಾಯ ಸುವ್ವೀ ।
ನೂರೊಂದು ಪಂಜು ಹಿಡಿಸ್ಯವ್ನೆ ಇಮಿರಾಯ—ಸುವ್ವೀ ।

ಸಣ್ಣ ಮೇಳದವ್ರ ಕರೆಸ್ಯವ್ನೆ ಇಮಿರಾಯ—
ಕರೆಸ್ಯವ್ನೆ ಜವರಾಯ ಸುವ್ವೀ ।
ಗಂಧದ ಹೂವನು ತರಿಸ್ಯಾನೆ—ಇಮಿರಾಯ
ತರಿಸ್ಯಾನೆ ಜವರಾಯ ಸುವ್ವೀ ।

ರಥವೊಂದನು ಕಟ್ಟಿಸ್ಯಾನೆ ಇಮಿರಾಯ—
ಕಟ್ಟಿಸ್ಯಾನೆ ಜವರಾಯ ಸುವ್ವೀ ।
ರಥದ ಮೇಲೆ ಕಟ್ಟಿಸ್ಯಾನೆ ಇಮಿರಾಯ—
ಕುಂಡ್ರಿಸ್ಯವ್ನೆ ಜವರಾಯ ಸುವ್ವೀ ।
ಏಳು ಬೀದಿಲ್ಲಿ ಎಳಿಸ್ಯವ್ನೆ ಇಮಿರಾಯ—
ಎಳಿಸ್ಯವ್ನೆ ಜವರಾಯ ಸುವ್ವೀ ।

ತಂತಿ ಮೇಲಿಟ್ಟು ನಡೆಸ್ಯಾನೆ ಇಮಿರಾಯ—
ನಡೆಸ್ಯಾನೆ ಜವರಾಯ ಸುವ್ವೀ ।
ನರಕದ ಗುಂಡೀಗೆ ಎಳಿಸ್ಯವ್ನೆ ಇಮಿರಾಯ—
ಎಳಿಸವ್ನೆ ಜವರಾಯ ಸುವ್ವೀ ।
ನರಕದ ಗುಂಡೀಗೆ ಎಳಿಸ್ಯವ್ನೆ ಇಮಿರಾಯ—
ಎಳಿಸ್ಯವ್ನೆ ಜವರಾಯ ಸುವ್ವೀ ।

ಮೂರಡಿ ಮಣ್ಣು ಕೊಡಿಸ್ಯವ್ನೆ ಇಮಿರಾಯ—
ಕೊಡಿಸ್ಯವ್ನೆ ಜವರಾಯ ಸುವ್ವೀ ।
ನಾನು ಹೋಗುತ್ತೀನ್ನೀಗ ವನದೇಶ ಇಮಿರಾಯ ಸುವ್ವೀ ।
ನಾನು ಹೋಗುತ್ತೀನ್ನೀಗ ವನದೇಶ ಜವರಾಯ ಸುವ್ವೀ ॥

ನಾಗರಗನ್ನೆ

ಪಟ್ಟಣದ ಒಳಗೆಲ್ಲಾ ಬಿಕ್ಷಾವ ಮಾಡ್ಯಾನೆ–ಹಿಂತಿರುಗಿ ನೋಡ್ಯಾನೆ।
ಚಿಕ್ಕೋಳು ನಾಗರಗನ್ನೆ—ಓಡ್ಹೋಡಿ ಬಂದಾಳೆ ।
ಜೂಲು ಜೂಲು ನಾಯಿ ಮಾಡ್ಯಾನೆ—ಮಾಯಾದ ಮರಿಜೋಗಿ ।

ಜನಪದ ಸಾಹಿತ್ಯದಲ್ಲಿ ಬಾರದ ವಿಷಯಗಳೇ ಇಲ್ಲ. ಅದು ನಮ್ಮ ಜನಜೀವನದ ಪ್ರತಿಬಿಂಬ, ಜೀವನದ ಸಮಸೃಷ್ಟಿ, ಪ್ರಪಂಚ ದರ್ಶನದ ಕಥಾಸಾರ. ಶಿವಶರಣರ ಸತ್ಯ ಸಂಕಲ್ಪ, ಒಟ್ಟನಮೇಲೆ ಅನ್ನಮಯದಿಂದ ಆನಂದಮಯಕ್ಕೇರುವ ಆತ್ಮ ಪ್ರಯಾಣದ ಮಹಾಕಥೆಯೆಂದೇ ಹೇಳಬಹುದು. ಅದಕ್ಕೆ ಕಟ್ಟುನಿಟ್ಟುಗಳಿಲ್ಲ, ಸಂಸ್ಕೃತದ ಭಾರವಿಲ್ಲ. ಜನವಾಣಿಯೇ ಮನವಾಣಿಯಾಗಿ ನಿರರ್ಗಳ ಶೈಲಿಯಲ್ಲಿ ಹರಿಯುತಿದೆ. ತ್ರಿಪದಿಯೇ ರಾಗವಾಗಿ ತನ್ನತನದಲ್ಲಿ ಗುಂಗಾನಗ್ಯೆಯುವುದು. ಇದೇ ಸಕಲ ಸಾಹಿತ್ಯದ ತಳಹದಿ ; ಲಲಿತ ಸಾಹಿತ್ಯದ ಉದಯದ ಬಾಗಿಲು. ಜೀವನದ ಹಂತದಲ್ಲಿ ಜನಜೀವನ ರವಿಯು ಭಾಗ್ಯೋದಯವಾಗಿ ರಸರಶ್ಮಿಗಳು ಪ್ರಫುಲ್ಲಿತವಾಗಿ ಹರಿಯಲು ಸಾಹಿತ್ಯೋದಯವಾಯಿತು. ಲಾಕ್ಷಣಿಕರು, ವಯ್ಯಾಕರಣಿಗಳು, ಇಂತಹ ರಸರಶ್ಮಿಗಳ ಬಂಧನ ಮಾಡಲು ಮಹಾಕಾವ್ಯೋದಯವಾಯಿತು. ಜನಪದ ಸಾಹಿತ್ಯ ಪರಿಮಳವೇ ಲಲಿತ ಸಾಹಿತ್ಯ. ಅದರಲ್ಲಿ ಸಾಹಿತ್ಯ ಮನಮೋಹಕ ನಗ್ನ ರೇಷೆಯನ್ನೇ ಕಾಣಬಹುದು. ಅದು ನಮ್ಮ ಸಂಸ್ಕೃತಿಯು ಕಣ್ಮರೆಯಾಗುವ ಸಮಯದಲ್ಲಿ ಜನಜೀವಾಳಕ್ಕೆಳೆಯುವ ಸಂಜೀವಿನಿ.

—ಡಾ॥ ಬಿ. ಎಸ್. ಗದ್ದಗಿಮಠ

ನಾಗರಗನ್ನೆ*

ಕಲ್ಯಾಣಿ ಪಟ್ಟಣದ ಗಾರೆ ಚಾವಡಿಮೇಲೆ
ತಂದಾನಿ ತಂದಾನಿ ತಂದೆನಾ ತಾನಾನಾ ।
ಏಳು ಮುಂದಿ ರಾಮುದೀರು ,,
ಕೂತು ಮಾತಾಡ್ಯಾರೆ ಕಲ್ಯಾಣಿ ಪಟ್ಟಣದ ಗಾರೆಚಾವಡಿಮೇಲೆ,,
ಏಳು ಮುಂದಿ ರಾಮದೀರು ,,
ತಾಯಿ ದೊಡ್ಡವ್ವ ತಾಯಿ ಬರೇವು ನೀಗಿಲ್ಲ ,,
ನಂದಿ ದುರ್ಗಕ್ಕೆ ಬೇಟೆಗೆ ಹೋಗುತ್ತೀವಿ ,,
ಅಂಗೈಯ ಅಕ್ಕಿನಾಕಿ ಮುಂಗೈಯ ಬೇಳೆನಾಕಿ ,,
ನಾವು ಏಳು ಮುಂದಿ ರಾಮುದೀರು ಬೇಟೆಗೆ ಹೋಗುತ್ತೀವಿ ,,
ಉಗುರೇಲಿ ಭತ್ತ ಎಡೆದು ಎದೆಹಾಲ ಪಾಲಕರೆದು ,,
ನಾವು ಏಳು ಜನ ರಾಮದೀರು ಬೇಟೆಗೆ ಹೋಗುತ್ತೀವಿ ,,
ಹಾಲು ಅನ್ನವ ಬೇಗದಿಂದ ಮಾಡವ್ವ ,,
ತುಪ್ಪವನು ಚೊಕ್ಕದಿಂದ ಕಾಸವ್ವ ,,
ನಾವು ಏಳು ಜನ ರಾಮದೀರು ಬೇಟೆಗೆ ಹೋಗುತ್ತೀವಿ ,,
ಊಟಾವ ಮಾಡಿದಾರೆ ರಾಮದೀರು ,,
ಕಳಿಯಡಕೆ ಬಿಳಿಯಾಲೆ-ಬೆಳ್ಳೀಯ ತಟ್ಟೀಲಿ ಕೆನೆಸುಣ್ಣ ಇರಿಸ್ಯಾರೆ,,
ಏಳು ಜನ ರಾಮದೀರು ವಿಳ್ಳೀವ ಮೆದ್ದಾರೆ ,,
ಏಳು ಜನ ರಾಮದೀರು ಎದ್ದಾರು ಎದ್ದಂಗೆ ,,
ಎದ್ದಾರು ಎದ್ದಂಗೆ ಏಳಂಗಿ ತೊಟ್ಟಾರೆ ,,
ಅವರು ದಡಬಿಡನೆ ನಡೆದಾರೆ ,,
ಅವರು ಏಳು ಕತ್ತಿ ಹೆಗಲಿಗ್ಹಾಕಿ ದುರುಗಾಕೆ ಹೊರಟಾರೆ ,,
ನಂದಿದುರ್ಗಾಕೆ ಹೆಬ್ಬಲದ ಮರವಂತೆ ,,

---

*ಈ ಜಾನಪದ ಕಥನ ಗೀತವನ್ನು ಮಲೆನಾಡಿನ ಹಳ್ಳಿಗಳಲ್ಲೂ, ಬಯಲು ನಾಡಿನ ಹಳ್ಳಿಗಳಲ್ಲೂ ಬೇಸಿಗೆ ಕಾಲದಲ್ಲಿ ಸಂತೋಷವಾಗಿ ಕಾಲಕಳೆಯಲು ಹೆಂಗಸರು ರಾತ್ರಿ ಕಾಲದಲ್ಲಿ ಹಾಡುತ್ತಾರೆ.

ಹೆಬ್ಬಲದ ಮರಕೆ ಕಟ್ಯಾರೆ ಕುದುರೇಯ
ತಂದಾನಿ ತಂದಾನಿ ತಂದೆನಾ ತಾನಾನಾ
ಕರಿಹಂದಿ ಗುಂಡೀಲಿ ಬಿಳಿಹಂದಿ ಮಲಿಗ್ಯಾವು ,,
ಬಿಳಿಹಂದಿ ಗುಂಡೀಲಿ ಕರಿಹಂದಿ ಮಲಿಗ್ಯಾವು ,,
ಅವರು ಏಳು ಮಂದಿ ರಾಮದೀರು ,,
ಹುಟ್ಟಕಟ್ಟಿ ಬೇಟೆನಾಡಿ ,,
ಅವರು ಏಳು ಜನ ರಾಮದೀರು ,,
ಕೊಳ್ಳಕಟ್ಟಿ ಬೇಟೆನಾಡಿ ,,
ಭೂತಾಳೆ ಪಟ್ಟಣದ ಮಾಯಾದ ಮರಿಜೋಗಿ ,,
ಕಲ್ಯಾಣಿ ಪಟ್ಟಣದ ಏಳು ಜನ ರಾಮರು ,,
ಅವರು ಏಳುಜನ ರಾಮಾರು ಬೇಟೆಗೆ ಹೋದ ಸುದ್ದೀಯಕೇಳಿ,,
ಆ ಭೂತಾಳೆ ಪಟ್ಟಣದ ಮಾಯಾದ ಮರಿ ಜೋಗಿ ,,
ಕಡ್ಡಿಯ ನಾಮಾವ ನೇಮದಿಂದ ಧರಿಸ್ಯಾನೆ ,,
ಕಡ್ಡಿಯ ನಾಮಾವ ನೇಮದಿಂದ ಧರಿಸ್ಯಾನೆ ,,
ಅಡ್ಡ ವಿಭೂತಿಯ ನೇಮದಿಂದ ಧರಿಸ್ಯಾನೆ ,,
ಕಲ್ಯಾಣಿ ಪಟ್ಟಣದ ದಾರೀಲಿ ಬಂದಾನೆ ,,
ಕಲ್ಯಾಣಿ ಪಟ್ಟಣದ ಬಾಗಿಲಿಗೆ ಒಂದೆ ಯೋಜನದಲ್ಲಿ ,,
ಬಂದು ಹಿಂಗೇಯ ಹೋದಾರೆ ಸುಮ್ಮಾನೆ ಬಿಟ್ಟಾರೆ ,,
ಹಿಟ್ಟನು ಹುಂಡು ಆರೇಯ ದಿನವಾದೊ ,,
ನೀರನು ಕುಡಿದು ಮೂರೇಯ ದಿನವಾದೊ ,,
ಪಟ್ಟಣಕೆ ಬಿಟ್ಟಾರೆ ಹಿಟ್ಟನು ತಿರುಕೊಂಡುಣ್ಣುತ್ತೀನಿ ,,
ಪಟ್ಟಣಕೆ ಬಿಟ್ಟಾರೆ ನೀರ ತಿರುಕೊಂಡು ಕುಡಿತ್ತೀನಿ ,,
ನಿಮ್ಮ ಕಲ್ಯಾಣಿ ಪಟ್ಟಣವ ನಾನ್ಹೇನು ಮಾಡ್ತೇನು ,,
ನಿಮ್ಮ ದಂಡು ದಾಳೀಯ ನಾನ್ಹೇನು ಮಾಡ್ತೇನು ,,
ನಿಮ್ಮ ದೊಡ್ಡಮ್ಮ ತಾಯಿ ನಾನ್ಹೇನು ಮಾಡ್ತೇನು ,,
ಚಿಕ್ಕ ನಾಗರಕನ್ನೆ ನಾನ್ಹೇನು ಮಾಡ್ತೇನು ,,

ಊರಿಗೆ ಬಂದ ಮಾಯಾದ ಮರಿಜೋಗಿ
ತಂದಾನಿ ತಂದಾನಿ ತಂದೆನಾ ತಾನಾನಾ ।

ಬೀದಿ ಬೀದಿಯೊಳಗೆಲ್ಲಾ ನಾಟ್ಯವ ನಾಡ್ಯಾನೆ ,,
ತಾಯಿ ದೊಡ್ಡಮ್ಮ ತಾಯಿ ಚಿನ್ನಾದ ಮುಚ್ಚಾಲ ,,
ಚಿನ್ನಾದ ಮುಚ್ಚಲೀಗೆ ನವರತ್ನ ತುಂಬಿಕೊಂಡು ,,
ಕೊಳ್ಳಯ್ಯ ಕೊಳ್ಳಯ್ಯ ಮರಿಜೋಗಿ ,,
ಮುಂಡೆ ಕೈಯೊಳಗಲ ಭಿಕ್ಷೆ ಮೋಕ್ಷಾವು ಇಲ್ಲವಮ್ಮ ,,
ನಾಗಂಡ ಸತ್ತಾಗಲಿಂದ ಈ ಮಾತ ಕೇಳಲಿಲ್ಲಾ ,,
ಈ ಹಾಳಾದ ಮರಿಜೋಗಿ ಈ ಮಾತನಾಡ್ಯಾನೆ ,,
ಚಿನ್ನಾದ ಮುಚ್ಚಲಾವ ತಟ್ಟಾನೆ ಬಿಸ್ಹಾಕಿ ,,
ತಾಯಿ ದೊಡ್ಡಮ್ಮ ತಾಯಿ ಅರಮಾನೆಯೊಳಗಾಲ ಗೊಳೇಯು ನಿರಿಧಾರ ,,
ಮಾಯಾದ ಮರಿ ಜೋಗಿ ,,
ಚಿಕ್ಕೋಳು ನಾಗರಕನ್ನೆ ಅರಮಾನೆ ಬಾಗಿಲಲ್ಲಿ ,,
ನಾಟ್ಯವನಾಡ್ಯಾನೆ ಮಾಯಾದ ಮರಿಜೋಗಿ ,,
ಚಿಕ್ಕೋಳು ನಾಗರಕನ್ನೆ ಮೂರು ದಿವಸಾದ ಬಾಣಾತಿ ,,
ನೀರನ್ನೆ ಮೀದಾಳೆ ನಾಗರಕನ್ನೆ ,,
ನೀರನೆ ಹುಯಿಕೊಂಡು ನಾಗರಕನ್ನೆ ,,
ಏಳಂಕಣದ ಮಾಡಿ ಮೇಲೆ ಮುಂಡೇಯ ,,
ಹೊದರೂತ ನಾಗರಕನ್ನೆ ,,
ಮಾಯಾದ ಮರಿಜೋಗಿ ನಾಟ್ಯಾವ ನಾಡ್ಯಾನೆ ,,
ಚಿಕ್ಕೋಳು ನಾಗರಗನ್ನೆ ಚಿನ್ನಾದ ಮುಚ್ಚಲಿಕೆ ,,
ನವರತ್ನ ತುಂಬಿಕೊಂಡು ,,
ಕೊಳ್ಳಯ್ಯ ಕೊಳ್ಳಯ್ಯ ಮರಿಜೋಗಿ ,,
ಕೊಳ್ಳಯ್ಯ ಮರಿಜೋಗಿ ಎಂದಾಳೆ ,,
ಏಳು ಜನ ರಾಮದೀರು ಹೋಗೋ ಕಾಲದಲ್ಲಿ ,,

ಹೋಗೊ ಕಾಲದಲ್ಲಿ ಅವರ್ಹೇಳು ಮಂಡಲಾವ ಬರೆದ್ಹೋಗ್ಯವರೆ
ತಂದಾನಿ ತಂದಾನಿ ತಂದೆನಾ ತಾನಾನಾ ।

ಮಂಡಾಲದೀಚಿಗೆ ಬಿಟ್ಟು ಬರಲಿಲ್ಲ ನಾಗರಗನ್ನೆ ,,
ಮಂಡಾಲದೀಚೆಗೆ ಬರಬೇಡಂದವರೆ ,,
ಆಗಲೆ ಮರಿಜೋಗಿ ಏನಂದು ಹೇಳ್ಯವನೆ ,,
ಒಂದು ಮಂಡಾಲ ದಾಟದಾರೆ ಮಗನೀಗೆ ಪುಣ್ಯಾವು ,,
ಎರಡು ಮಂಡಾಲ ದಾಟದಾರೆ ನಿನಗೇಯು ಪುಣ್ಯಾವು ,,
ಮೂರು ಮಂಡಾಲ ದಾಟದರೆ ಮೈದರೀಗೆ ಪುಣ್ಯಾವು ,,
ನಾಕು ಮಂಡಾಲ ದಾಟದರೆ ಭಾವದೀರಿಗೆ ಪುಣ್ಯಾವು ,,
ಐದನೆಯ ಮಂಡಾಲ ದಾಟದರೆ ಅತ್ತೀಗೆ ಪುಣ್ಯಾವು ,,
ಆರನೆಯ ಮಂಢಾಲ ದಾಟದರೆ ಗಂಡನಿಗೆ ಪುಣ್ಯಾವು ,,
ಏಳು ಮಂಢಾಳ ಧಾಟದರೆ ಪಟ್ಟಣಕೆ ಪುಣ್ಯಾವು ,,
ಅವನ್ಹೇಳ್ದಿಳಿದಂಗೆ ದಾಟ ಬಂದಾರೆ ,,
ವಂಕೀನಬೂದಿ ಮಲೆಯಾಳ್ದ ಕಪ್ಪು ,,
ಎಡದ ಚಳ್ಳಿಗರಲ್ಲಿ ಚಿಮ್ಮಾನೆ ,,
ಚಿಮ್ಮಿ ಬುಟ್ಟಾನೆ ಮಾಯಾಧ ಮರಿಜೋಗಿ ,,
ಮಂಕೀನ ಬೂದೀಲಿ ಏನ್ಯಾನು ಮಾಡ್ಯಾನೆ ,,
ಮಾಯಾದ ಮರಿಜೋಗಿ ಏನ್ಯಾನು ಮಾಢ್ಯಾನೆ ,,
ನನ ಕಟ್ಟಾಣಿ ರಾಮಣ್ಣ ಹುಟ್ಟ ಮೂರೆ ದಿನ ,,
ಕಟ್ಟಾಣಿ ರಾಮಣ್ಣ ಬಿಟ್ಟೀಯ ಹೋಗಬೇಕು ,,
ಮಾಯಾದ ಮರಿಜೋಗಿ ಬೀದಿ ಬೀದಿಯೊಳಗೆ ,,
ಆಗ ನಾಗರಗನ್ನೆ ಚಿನ್ನಾದ ತೊಟ್ಟಲೀಗೆ ,,
ನಾಗರಗನ್ನೆ ರನ್ನಾದ ನೇಕೆಯನ್ಹಾಕಿ ,,
ಕಟ್ಟಾಣಿ ರಾಮಣ್ಣ ಮನಗೀಸಿ ,,
ಕಟ್ಟಾಣಿ ರಾಮಣ್ಣ ಮನಗೀಸಿ ಏನಂಧಾಳೆ ,,
ಒಕ್ಕಳ ಸೀಗೆಕಾಯ ಬೇಗದಿಂಧ ಆಡ್ಯಾಳೆ ,,

ಜಿಟ್ಟಗೋಳಿ ಕರೆಸಿ ಎಣ್ಣೇಯ ಹೊತ್ತಿಸ್ಯಾಳೆ
ತಂದಾನಿ ತಂದಾನಿ ತಂದೇನಾ ತಾನಾನಾ ।

ಕೊಪ್ಪರಿಕ್ಹೇಲಿ ನೀರನೆ ಕರೆಸ್ಯಾಳೆ ,,
ಕಟ್ಟಾಣಿ ರಾಮಣ್ಣಾಗೆ ನೀರನೆ ಮಿಯ್ದಾಳೆ ,,
ನನ್ನ ಎಣ್ಣೇಯ ಋಣ ಇಲ್ಲೀಗೆ ಕಳೆದೊಯ್ತು ನನ ಕಂದಾ ,,
ನನ್ನ ಎದೆ ಹಾಲಿನ ಋಣವು ಕಳೆದೊಯ್ತು ನನ ಕಂದಾ ,,
ಕಟ್ಟಾಣಿ ರಾಮಣ್ಣ ಕಡಿದಾಳೆ ಕಚ್ಯಾಳೆ ,,
ಎತ್ತಿ ಮುದ್ದಾಡ್ಯಾಳೆ ನಾಗರಗನ್ನೆ ,,
ಆಗ ನಾಗರಗನ್ನೆ ಏನೆಂದು ಶಾಪಾವ ಕೊಡುತಾಳೆ ,,
ಆವರ್ಹೇಳು ಜನ ರಾಮದೀರು ,,
ಅವರು ಬೇಟೆಗೆ ಹೋಗ್ಯವರೆ ,,
ಬೇಟೆಗ್ಹೋಗ್ಯವರೆ ಮಾಯಾದ ಮರಿಜೋಗಿ ,,
ಆಗ ನಾಗರಗನ್ನೆ ಜೋಗಿ ಇಂದುಗಡೆ ,,
ಆಗ ನಾಗರಗನ್ನೆ ಏನಂದು ಹೇಳ್ಯಾಳೆ ,,
ಆರು ಜನ ಚಿಕ್ಕಪ್ಪದೀರು ,,
ಅವ್ರು ಬಂದಾರು ಅಳಬೇಡ ,,
ನಿಮ್ಮ ಚಿಕ್ಕವ್ವದೀರು ,,
ಅವ್ರು ಬಂದಾರು ಅಳಬೇಡ ,,
ನಿಮ್ಮ ತಾಯಿ ದೊಡ್ಡಮ್ಮ ತಾಯಿ ,,
ಅವ್ರು ಬಂದಾರೆ ಅಳಬೇಡ ,,
ನಿಮ್ಮ ಹಿರಿಯ ರಾಮದೇವರು ,,
ಜೋಜಿ ಬಂದು ನಿಂದಾಗ ,,
ಏಳು ಬಾಗಾಲ ಕದಗಳ ,,
ಬಗಬಗನೆ ತೆಗಿಯಪ್ಪ ,,
ನನ ಕಟ್ಟಾಣಿ ರಾಮಣ್ಣ ,,
ನೀನು ಗರಗರನೆ ತಿರುಗಪ್ಪಾ ,,

ಆಗ ಚಿಕ್ಕಪ್ಪದೀರು

ತಂದಾನಿ ತಂದಾನಿ ತಂದೇನಾ ತಾನಾನಾ ||

ಎತ್ತಿ ಮುದ್ದಾಡ್ಯಾರೆ ರಾಮಣ್ಣನ ,,
ಅವ್ರು ಚಿಕ್ಕವ್ವ ಏಳು ಜನ ,,
ಅವ್ರು ಎತ್ತಿ ಮುದ್ದಾಡ್ಯಾರೆ ,,
ತಾಯಿ ದೊಡ್ಡಮ್ಮ ತಾಯಿ ,,
ಬಾರವ್ವ ನೀನಿಲ್ಲಿ ,,
ನಮ್ಮ ಏಳು ಜನ ಮಗದೀರು ,,
ಸಾಕಿದಂಗೆ ಸಾಕಾಲಿ ,,
ನಮ್ಮ ಏಳು ಜನ ರಾಮದೀರು ,,
ಅವ್ನು ಕಡೆಗಣ್ಣೇಲಿ ಕಾಣವ್ವ ,,
ನಮ್ಮ ಕಟ್ಟಾಣಿ ರಾಮಣ್ಣನ ,,
ಅವ್ನು ನಿಜಗಣ್ಣೇಲಿ ಕಾಣವ್ವ ,,
ನಮ್ಮ ಏಳು ಜನ ಸಾಕಿದಂಗೆ ,,
ಸಾಕಮ್ಮ ತಾಯಮ್ಮ ,,
ಆಗ ರಾಮದೀರು ,,
ಎತ್ತೀಯ ಕೊಟ್ಟಾರೆ ರಾಮಣ್ಣನ ,,
ಆಗ ನಾಗರಗನ್ನೆ ತಾಯಿಲ್ಲಾ ಶಂದಿಲ್ಲಾ ,,
ನನ್ನ ಕಟ್ಟಾಣಿ ರಾಮಣ್ಣ ತಬ್ಬಾಲಿ ಮಗನವ್ವ ,,
ಮಾಯಾದ ಮರಿಜೋಗಿ ,,
ಅವ್ನು ಬೀದಿಯೊಳಗೆ ನಾಟ್ಯಾವನಾಡ್ಯಾನೆ ,,
ಪಟ್ಟಣದ ಪ್ರಜೆಗಳು ,,
ನಿಂತುಕೊಂಡು ನೋಡ್ಯಾರೆ ,,
ಪಟ್ಟಣದ ಜನರೆಲ್ಲಾ ,,
ಕುಂತುಕೊಂಡು ನೋಡ್ಯಾರೆ ,,
ಪಟ್ಟಣದ ಒಳಗೆಲ್ಲಾ ,,

ಭಿಕ್ಷಾವ ಮಾಡ್ಯಾನೆ ಮರಿಜೋಗಿ
ತಂದಾನಿ ತಂದಾನಿ ತಂದೇನಾ ತಾನಾನಾ।
ಭಿಕ್ಷಾವ ಮಾಡ್ಯಾನೆ ಹಿಂತಿರುಗಿ ನೋಡ್ಯಾನೆ ,,
ಚಿಕ್ಕೋಳು ನಾಗರಗನ್ನೆ ,,
ಓಡೋಡಿ ಬಂದಾಳೆ ,,
ಓಡೋಡಿ ಬಂದಾಳೆ ಮಾಯಾದ ಮರಿಜೋಗಿ ,,
ಹಿಂತಿರುಗಿ ನೋಡ್ಯಾಳೆ ,,
ಅವ್ನ ಜೂಲುನಾಯಿ ಮಾಡ್ಯಾನೆ ,,
ಜೂಲುನಾಯಿ ಮಾಡ್ಯಾನೆ ,,
ಕಬ್ಬಿಣದ ಸರಪಾಣಿ ,,
ಕಬ್ಬಿಣದ ಸರಪಾಣಿ ನಾಯೀಗೆ ಹಾಕ್ಯವನೆ ,,
ಮಾಯಾದ ಮರಿಜೋಗಿ ,,
ಇಡಕೊಂಡು ಹೋದಾನೆ ,,
ಕಲ್ಯಾಣಿ ಪಟ್ಟಣದ ಬಾಗಲಿಗೆ ಹೋದಾನೆ ,,
ಬಾಗಿಲಲ್ಲಿ ಏಳು ಜನ ,,
ಅಲ್ಲಿ ಗೊಲ್ಲಾರು ಇದ್ದಾರು ,,
ನೀನು ಹೋಗುವಾಗ ಒಬ್ಬಾನೆ ಹೋದೆ ,,
ನೀನು ಬರುವಾಗ ನಾಯಿತಂದೆ ,,
ಯಾರಯ್ಯ ಕೊಟ್ಟೋರು ,,
ಕಡೆಯ ಕೇರಿಲೊಬ್ಬು ,,
ಮುದುಕಮ್ಮ ಇದ್ದಾಳೆ ,,
ಮುದುಕಮ್ಮನೆಂಬೋಳು ಸಾಕ್ತಾಳೆ ಈ ನಾಯಿ ,,
ಪಟ್ಟಣದ ಮಡಕೇಯ ,,
ಹೊಡೆಯೋದೆ ಈ ನಾಯಿ ,,
ಮುದುಕಮ್ಮ ಎಂಬೋಳು ,,
ಹಿಡಿದೇಯೆ ಕೊಟ್ಟಾಳು ,,

ಕಬ್ಬಿಣದ ಸರಪಾಣಿ
ತಂದಾನಿ ತಂದಾನಿ ತಂದೇನಾ ತಾನಾನಾ !

ಅವಳೇಯ ಕೊಟ್ಟಾಳು ,,
ಹೊಡಿಯೊ ಸೂಳೆಮಗನ ,,
ಬಡಿರಿ ಸೂಳೆಮಗನ ,,
ಕಬ್ಬಿಣದ ಕಂಬಿಯಾಕೆ ಕಟ್ಟೀರಿ ಈ ನಾಯಿ ,,
ನಿಮ್ಮ ನಾಯಿಯಾದಾರೆ ,,
ನಿಮ್ಮತ್ತೆ ಇರುತಾರೆ ,,
ನಮ ನಾಯಿ ನನ ಕೂಡ ಬರುತಾದೆ ,,
ಆಗಾಲೆ ಗೊಲ್ಲಾರು ,,
ಕಂಬಾಕೆ ಕಟ್ಯಾರೆ ,,
ಮಾಯಾದ ಮರಿಜೋಗಿ ,,
ಭೂತಾಳೆ ಪಟ್ಟಣದ ,,
ಭೂತಾಳೆ ಪಟ್ಟಣದ ದಾರೀಲಿ ಹೋಗೋದಾ ,,
ಜೂಲು ನಾಯೊಂದು ನೋಡ್ಯಾದೆ ,,
ಕಬ್ಬಿಣದ ಕಂಬಾವ ಮುರಿಕೊಂಡು ,,
ಜೋಗಿ ಹಿಂದುಗಡೆ ,,
ಕಬ್ಬಿಣದ ಸರಪಾಣಿ ,,
ತುಂಡು ತುಂಡು ಮಾಡಿಕೊಂಡು ,,
ಜೋಗಿಯ ಹಿಂದೂಗಡೆ ,,
ಹೋಡೇಯ ಹೊಯ್ತಾದೆ ,,
ಜೋಗಿಯ ಹಿಂದುಗಡೆ ,,
ಓಡೇಯ ಹೋದಾಳೆ ,,
ಭೂತಾಳೆ ಪಟ್ಟಣಕೆ ,,
ಒಂದೇ ಯೋಜನದಲ್ಲಿ ,,
ಜೂಲು ನಾಯೆಂಬೋದು ,,

ಹೆಣ್ಣಾನೆ ಮಾಡ್ಯಾನೆ
ತಂದಾನಿ ತಂದಾನಿ ತಂದೇನಾ ತಾನಾನಾ!
ಅವಳ ಮಯ್ಯಕಯ್ಯಾನೆ "
ಅವಳ ಮಯ್ಯಾಕಯ್ಯಾನೆಲ್ಲಾ "
ಮುಟ್ಟಾಕೆ ಹೋದಾನೆ "
ಮಾಯಾದ ಮರಿಜೋಗಿ "
ನಮ್ಮ ಮಯ್ಯಕಯ್ಯಾನೆಲ್ಲಾ "
ಮುಟ್ಟಾಬೇಡ ಮರಿಜೋಗಿ "
ಇನ್ನ ಹನ್ನೆರಡು ವರ್ಷಾವೆ "
ನೀಪೀಯನುಲಿತೀನಿ "
ನೀಪೀಯನಬ್ಬ ಮಾಡುತೇನೆ "
ನೀಪೀಯನಬ್ಬ ಮಾಡುತೇನು "
ನನಗೆ ಇರುಬ ನುಸಿಯದಂತೆ "
ನೀ ಅರಮಾನೆ ಕಟ್ಟಸಯ್ಯ "
ಅರಮಾನೆಯೊಳಗೀಗ "
ತೂಗುಮಂಚ ತೂಗು ದೀವಿಗೆ "
ತೂಗುಮಂಚ ಹಾಕ್ಯಾರೆ "
ಇರುಬ ನುಸಿಯದಂಗೆ "
ಆಗ ನಾಗರಗನ್ನೆ ಅರಮನೆಗ್ಹೋದಾಳೆ "
ಅರಮನೆಗೆ ಹೋದೋಳು "
ಮುಂಚಾದ ಮೇಲಕೆ "
ಅವಳು ಹೋದಾಳು ನಾಗರಗನ್ನೆ "
ಮುಂಚದ ಮೇಲೆ ಕೂತಾಳು ನಾಗರಗನ್ನೆ "
ಅವ್ರು ಏಳುಜನ ರಾಮುದೀರು "
ಅವ್ರು ಬೇಟೆಗೆ ಹೋದಾರು "
ನನ್ನ ಕಟ್ಟಾಣಿ ರಾಮಣ್ಣ "

ಅವನು ಹೇಗೆ ಹೇಗೆ ಅಳುತಾನೆ
ತಂದಾನಿ ತಂದಾನಿ ತಂದೇನಾ ತಾನಾನಾ।

ನನ್ನ ಗಂಡನ ದೆಸೆಯೋರು ,,
ಇನ್ಯಾರು ಇಲ್ಲವಪ್ಪ ,,
ಆಗ ನಾಗರಗನ್ನೆ ,,
ಏಳು ಬಾಗಿಲು ಕದವ ,,
ಅವಳು ದಡದಡನೆ ಹಾಕ್ಯಾಳೆ ,,
ಕದವನ್ನೆ ಹಾಕ್ಯಾಳೆ ,,
ಶಾಪಾವ ನೀಡ್ಯಾಳೆ ,,
ನನ ಗಂಡನ ದೆಸೆಯೋರು ,,
ಯಾರ್ಯಾರು ಬಂದಾರೆ ,,
ಏಳು ಬಾಗಿಲ ಕದಗಳು ,,
ಅವು ಬಗಬಗನೆ ತೆಗಿಯಾಲಿ ,,
ಚಿಕ್ಕೋಳು ನಾಗರಗನ್ನೆ ,,
ಮುಂಚಾದಿ ಮಕ್ಕಾಡೆ ,,
ಮುಂಚದಿ ಮಕ್ಕಾಡೆ ಮನಿಗ್ಯಾಳೆ ,,
ನಂದೀದುರ್ಗದಲ್ಲಿ ,,
ಅವರು ಏಳು ಜನ ರಾಮದೀರು ,,
ಅವ್ರು ಸುಖನಿದ್ರೆ ಮಾಡ್ಯಾರು ,,
ಸುಖನಿದ್ರೆ ಮಾಡ್ಯಾರೆ ,,
ಹಿರಿಯ ರಾಮದಿರಿಗೆ ಸ್ವಪ್ನಾವೆ ಬಿದ್ದಾವೆ ,,
ಸ್ವಪ್ನಾವೆ ಬಿದ್ದಾವೆ ,,
ಚಿಕ್ಕೋಳು ನಾಗರಗನ್ನೆ ,,
ಜೋಗಿಯ ಹಿಂದುಗಡೆ ,,
ಹೋಗೋದೆ ಕಂಡಾನೆ ,,
ನೀವು ಏಳರಪ್ಪ ತಮ್ಮದೀರ ,,

ನಾವು ಪಟ್ಟಣಕೆ ಹೋಗೋಣಾ
ತಂದಾನಿ ತಂದಾನಿ ತಂದೇನಾ ತಾನಾನಾ!

ಅವರಾರು ಜನ ರಾಮದೀರು »
ದಡಬಡನೆ ಎದ್ದಾರು »
ಅವ್ರು ದಡಬಡನೆ ಎದ್ದಾರೊ »
ಅವರಾಯದಗಳ ಬಿನ್ನಿಗೆ ಬಿಗಿದಾರೆ »
ಅವರ ಕತ್ತಿ ಕಟಾರಿಗಳನ್ನೆಲ್ಲಾ »
ಅವ್ರು ಬೆನ್ನಿಗೆ ಬಿಗಿದಾರೆ »
ಆವರೇಳು ಜನ ರಾಮದೀರು »
ಎದ್ದಾರು ಎದ್ದಂಗೆ »
ಅವರು ಏಳು ಜೋಜಿ ಏರ್ಯಾರೆ »
ಅವರು ಪಟ್ಟಣಕೆ ಹೋದಾರೆ »
ಪಟ್ಟಣದ ಪ್ರಜೆಗಳು »
ಅವ್ರು ಪಚ್ಚೆ ಆರತಿ ಬೆಳಿಗ್ಯಾರು »
ಅವರಾರು ಜನ ತಮ್ಮದೀರು »
ಹಿರಿಯ ರಾಮದೀರ್ಗೆ »
ತಾಯಾರಾತಿ ತಂದಾಳೆ »
ನೀನ್ಯಾಕೆ ಆರತಿ ತಂದಲ್ಲೆ ತಾಯಮ್ಮ »
ನೀ ತಂದ ಗೌಡ್ಯೆಲ್ಲೆ »
ನಾ ತಂದ ಗೌಡೀಗೆ »
ಮುಂಡೇಯ ನೋವಪ್ಪ »
ನೀ ತಂದ ಆರತಿ »
ಬೇಡಕಾಣೆ ತಾಯಮ್ಮ »
ಅವರಾರು ಜನ ತಮ್ಮದೀರು »
ಏನಂದು ಹೇಳ್ಯಾರೆ »
ನಮ್ಮಣ್ಣನಿಗೆ ಬೇಡದ ಆರತಿ »

ನಮಗೆ ಬೇಡಕಾಣೆ ತಾಯಮ್ಮ
ತಂದಾನಿ ತಂದಾನಿ ತಂದೇನಾ ತಾನಾನಾ

ಅವರಾರು ಜನ ತಮ್ಮದೀರು ”
ಏನೆಂದು ಹೇಳ್ಯಾರೆ ”
ನಮ್ಮಣ್ಣನಿಗೆ ಬೇಡದಾರತಿ ”
ನಮ್ಮಿಗೆ ಬೇಡವೆಂದೊ ”
ಪಟ್ಟಣದ ಪ್ರಜೆಗಳು ”
ಪುತ್ತಿನ ಆರತಿ ”
ಪಚ್ಚೇಯ ಆರತಿ ”
ಅವ್ರು ಹಿಂದಾಕೆ ತಿರುಗ್ಯಾರೆ ”
ಆರು ಜನ ರಾಮದೀರು ”
ಜೋಜಿಗಳ ಹತ್ಯಾರೆ ”
ಅವ್ರು ಮುಂದಾಕೆ ಬಂದಾರೆ ”
ಚಿಕ್ಕೋಳು ನಾಗರಗನ್ನೆ ”
ಆರಮಾನೆ ಬಾಗಿಲಲ್ಲಿ ”
ನಿಂದಾವೆ ಜೋಚಿಗಳು ”
ಆಗಾಲೆ ಕದಗಳು ”
ಅವು ಬಗಬಗನೆ ತೆಗೆದಾವು ”
ಆಗಾಲೆ ರಾಮಣ್ಣ ”
ಅವ್ನು ಗರಗರನಾಡ್ಯಾನೆ ”
ಆಗಲೆ ರಾಮದೇವರು ”
ಕಣ್ಣಿಗೆ ಕಂಡಾಳೆ ನಾಗರಗನ್ನೆ ”
ಜೋಗಿ ಸೂಳೆಮಗನ ”
ನೋಡೇಯೆ ಬರುತೇನೆ ”
ರೊಟ್ಟಿಯ ಹಾಕವ್ವ ”
ಬುತ್ತಿಯ ಕಟ್ಟವ್ವ ”

ರೊಟ್ಟಿಯ ಹಾಕ್ಯಾಳೆ
ತಂದಾನಿ ತಂದಾನಿ ತಂದೇನಾ ತಾನಾನಾ

ರೊಟ್ಟಿಯ ಕಟ್ಯಾಳೆ "
ಬುತ್ತಿಯ ಮಾಡ್ಯಾಳೆ "
ಬುತ್ತಿಯ ಕಟ್ಯಾಳೆ "
ತಾಯಿ ದೊಡ್ಡಮ್ಮ ತಾಯಿ "
ಅವರ್ಹೋಳು ಜನ ರಾಮದೀರು "
ಅವ್ರು ಬೆನ್ನಿಗೆ ಬಿಗಿದಾರು "
ಬೆನ್ನಿಗೆ ಬಿಗಿದಾರು "
ಭೂತಾಳೆ ಪಟ್ಟಣದ "
ದಾರಿ ಕಂಡೆ ಹೋದಾರೆ "
ಭೂತಾಳೆ ಪಟ್ಟಣಕೆ "
ನೀರ ಬಾವಿ ದಂಡೇಗೆ "
ನೀರು ಬಾವಿ ದಂಡೇಗೆ "
ಹೋದಾರು ರಾಮದೀರು "
ಅವರ ತಾಯಿ ಕಟ್ಟಿದ ಬುತ್ತಿ "
ಅಲ್ಲೇಯೆ ತೆಗೆದಾರು "
ಭೂತಾಳೆ ಪಟ್ಟಣದ "
ನೀರೀನ ಬಾವೀಗೆ "
ಮುದುಕಮ್ಮ ಒಬ್ಬಾಳು "
ಅವಳು ನೀರಿಗೆ ಬಂದಾಳೆ "
ನೀರೀಗೆ ಬಂದೋಳು "
ಅವಳೇನೆಂದೇಳ್ಯಾಳೆ
ಈ ಹಾಳಾದ ಪಟ್ಟಣಕೆ "
ಯಾಕೆ ಬಂದ್ರಿ ದೊರೆಗಳೆ "
ಈ ಬೀಳಾದ ನರಕಕ್ಕೆ "

ಯಾಕು ಬಂದ್ರಿ ದೊರೆಗಳೆ
ತಂದಾನಿ ತಂದಾನಿ ತಂದೇನಾ ತಾನಾನಾ ।

ಯಾವ ಸೀಮೆಯೋಳು ,,
ಯಾವ ರಾಜ್ಯದೋಳು ,,
ಚಿಕ್ಕೋಳು ನಾಗರಗನ್ನೆ ,,
ಮಾಯಾದ ಮರಿಜೋಗಿ ,,
ಅವ್ನು ತಂದೇಯ ಮಡಿಗ್ಯವ್ನೆ ,,
ಚಿಕ್ಕೋಳು ನಾಗರಗನ್ನೆ ,,
ನಮ್ಮತ್ತಿಗೆ ಕಾಣಮ್ಮ ,,
ಚಿಕ್ಕೋಳು ನಾಗರಗನ್ನೆ ,,
ನನ್ನ ಹೆಡುತೀನೆ ಕಾಣವ್ವ ,,
ಇದೇ ಮಾರುಗದಲ್ಲಿ ,,
ಜೋಗಿಯ ಅರಮಾನೆ ,,
ಅವಳರೊ ಮನೆಮೇಲೆ ,,
ಹಿತ್ತಾಳೆ ಕಳಸೂಡಿ ,,
ಅಲ್ಲೇಯ ಇರುತಾಳೆ ನಾಗರಗನ್ನೆ ,,
ಇದೆ ಮಾರುಗದಲ್ಲಿ ,,
ನೀವು ಹೋಗಿರಪ್ಪ ದೊರೆಗಳೆ ,,
ಅವರೇಳು ಜನ ರಾಮದೀರು ,,
ಜೋಜೀನ ಹತ್ಯಾರೆ ,,
ಜೋಜಿ ಹೋಗಿ ನಿಂದೋ ,,
ಏಳು ಬಾಗಿಲ ಕದಗಳು ,,
ಅವು ಬಗಬಗನೆ ತೆಗೆದಾವೆ ,,
ಆಗ ನಾಗರಗನ್ನೆ ,,
ದಡಬಡನೆ ಎದ್ದಾಳೆ ,,
ಮುಂಚಾಕೆ ಮಕ್ಕಡವಾಗಿ ,,

ಮಲಗಿ ಹನ್ನೆರಡೊರುಷ ನಾಗರಗನ್ನೆ
ತಂದಾನಿ ತಂದಾನಿ ತಂದೇನಾ ತಾನಾನಾ
ನನ್ನ ಗಂಟಾಲ ಒಳಗೆಲ್ಲಾ ,,
ಜಾಡಾನ ಗೂಡಯ್ಯ ,,
ನನ್ನ ಕಣ್ಣೀನ ಒಳಗೆಲ್ಲಾ ,,
ಸೆಲುಬೆ ಸುತ್ತಿರುವೋದು ,,
ನೀರನ್ನೆ ಕುಡಿದಾಗಿ ,,
ಇಲ್ಲಿಗೆ ಹನ್ನೆರಡೊರುಷ ,,
ನಾನು ಊಟ ಮಾಡೇಯೆ ,,
ಇಲ್ಲಿಗೆ ಹನ್ನೆರಡೊರುಷ ,,
ನಾನು ಮನುಷ್ಯಾರ ನೋಡಿಲ್ಲ ,,
ಮುಖ ನೋಡಿ ಹನ್ನೆರಡೊರುಷ ,,
ಏಳು ಬಾಗಿಲ ಕದಗಳು ,,
ತೆಗೆದ ಕಾರಣವೇನು ,,
ನನ ಗಂಡಿನ ದೆಸೆಯೋರು ,,
ಯಾರೊ ಬಂದಿರಬಹುದು ,,
ಮುಂಚಾವ ಬಿಟ್ಟೀಗ ,,
ಕೆಳಕ್ಕೆ ಬಂದಾಳು ನಾಗರಗನ್ನೆ ,,
ಅವರ್ಹೋಳು ಜನ ರಾಮುದೀರು ,,
ಬಾಗಿಲಲ್ಲಿ ನಿಂದಾರೆ ,,
ಚಿಕ್ಕೋಳು ನಾಗರಗನ್ನೆ ,,
ನಿಂತುಕೊಂಡು ನೋಡ್ಯಾಳೆ ,,
ಕೈಯೆತ್ತಿ ಮುಗಿದಾರೆ ,,
ಆಗ ರಾಮುದೀರು ,,
ಅವರಾರು ಜನ ತಮ್ಮುದೀರು ,,
ಅವರಾರು ಜೋಜೀಯ ಏರ್ಯಾರೆ ,,

ಹಿರಿಯ ರಾಮದೇವರು

ತಂದಾನಿ ತಂದಾನಿ ತಂದೇನಾ ತಾನಾನಾ।

ಚಿಕ್ಕೋಳು ನಾಗರಗನ್ನೆ ,,
ಇಬ್ಬರ ಜೊತೆಗೂಡಿ ,,
ಏರ್ಯಾರೆ ಚೋಜೀಯ ,,
ಎಂಟು ಮುಂದಿ ರಾಮದೀರು ,,
ಕಲ್ಯಾಣ ಪಟ್ಟಣದ ದಾರಿಗಂಟ ಬಂದಾರೆ ,,
ಭೂತಾಳೆ ಪಟ್ಟಣವ ,,
ಒಂದೇ ಯೋಜನದಲ್ಲಿ ,,
ಬಿಟ್ಟೀಯ ಬಂದಾರೆ ,,
ಅವರ್ಹೇನೆಂದು ಹೇಳ್ಯಾರೆ ,,
ಅಣ್ಣಯ್ಯ ಅಣ್ಣಯ್ಯ ,,
ಬಹಳ ಹಸಿವಾಯ್ತು ,,
ಚಿಕ್ಕೋಳು ನಾಗರಗನ್ನೆ ,,
ಕೈಯಗಳ ಊಟಾವ ,,
ಕೈಯೊಗಳ ಊಟಾವ ಉಂಡು ,,
ಹನ್ರೆರಡೊರುಷವಾದವು ,,
ಅಂಗಡೀಗೆ ಹೋದಾರೆ ,,
ಅಕ್ಕಿಯ ತಂದಾರೆ ,,
ಅಡಿಗೇಯ ಮಾಡ್ಯಾರೆ ,,
ಏರಿಯ ಹಿಂದಾಕೆ ,,
ಹೋದಾರಣ್ಣದೀರು ,,
ಆಗ್ರಾರದ ಎಲೆಗಳೆ ,,
ತಂದಾರಣ್ಣದೀರು ,,
ಊಟಕೆ ಇಕ್ಯಾಳೆ ನಾಗರಗನ್ನೆ ,,
ಊಟಾವ ಮಾಡ್ಯಾರೆ ,,

ಏಳು ಜನ ರಾಮದೀರು

ತ್ಹಂದಾನಿ ತಂದಾನಿ ತಂದೇನಾ ತಾನಾನಾ ।

ಆಗಲೆ ಮರಿಜೋಗಿ ,,
ಇತ್ತಲಿಂದ ಬಂದಾನೆ ,,
ಅತ್ತ ಇತ್ತ ಬೀಳೊನಂಗೆ ,,
ಆಗಲೆ ವೇಶ ತಾಳ್ಯಾನೆ ,,
ಮಾಯಾದ ಮರಿಜೋಗಿ ,,
ಅವ್ನು ಏನೆಂದು ಹೇಳ್ಯಾನೆ ,,
ನಾನು ನೀರನು ಕುಡಿದ್ಹೇಯೆ ,,
ನಾನು ಮೂರಾನೆ ದಿನವಾಯ್ತು ,,
ನಾನು ಊಟವ ಮಾಡೇಯೆ ,,
ಆರನೆ ದಿನವಾಯ್ತು ,,
ನನಗಿಷ್ಟು ಅನ್ನಾವ ,,
ನೀವು ಕೊಡಿಸೀರಿ ಸ್ವಾಮಿಗಳೆ ,,
ಆಗಲೆ ರಾಮದೀರು ,,
ಅವರು ಏನೆಂದು ಹೇಳ್ಯಾರೆ ,,
ಚಿಕ್ಕೋಳು ನಾಗರಗನ್ನೆ ,,
ನೀ ಊಟಾಕೆ ನೀಡವ್ವ ,,
ಅವಳು ಊಟಾಕೆ ಇಕ್ಯಾಳೆ ,,
ಮಾಯಾದ ಮರಿಜೋಗಿಗೆ ,,
ಅವರ್ಹೇಳು ಜನ ರಾಮದೀರು ,,
ಅವರು ಊಟವ ಮಾಡ್ಯಾರೆ ,,
ದಡದಡನೆ ಎದ್ದಾರೆ ,,
ಅವರ್ಹಾರು ಜನ ತಮ್ಮುದ್ದೀರು ,,
ಅವರೆಲ್ಲಾ ಜೋಜೀಯ್ದು ಏರ್ಯಾರೆ ,,
ಹಿರಿಯ ರಾಮದೀರು ,,

ಜೋಜೀಯ ಏರ್ಯಾರೆ
ತಂದಾನಿ ತಂದಾನಿ ತಂದೇನಾ ತಾನಾನಾ ।
ಚಿಕ್ಕೋಳು ನಾಗರಗನ್ನೆ "
ಅವಳು ಜೋಜೀಯ ಏರ್ಯಾಳೆ ,,
ಆಗ ನಾಗರಗನ್ನೆ ,,
ಆ ಜೋಜೀಯ ಏರ್ಯಾಳೆ ,,
ಮಾಯಾದ ಮರಿಜೋಗಿನ ,,
ಏನೆಂದು ಹೇಳ್ಯಾರೆ ,,
ಆಗಲೆ ರಾಮದೇವರು ,,
ಪಟ್ಟಣಕೆ ಕರೆತಂದು ,,
ಕುದುರೇಯ ಮಾಲೀಸು ,,
ಆ ಕುದುರೇಯ ಮಾಲೀಸು ಮಾಡ್ಸಾರೆ ,,
ಸೂತಕವು ಇದ್ದಂಗೆ ,,
ಕೈಯಾಕೆ ಸುಡಬೇಕು ,,
ಆರು ಜನ ತಮ್ಮುದೀರು ,,
ಅಣ್ಣದೀರು ಹೇಳ್ಯಾರು ,,
ಆಗಲೆ ರಾಮಾರು "
ಪಟ್ಟಣಕೆ ಹೊರಟಾರು "
ಆರು ಜನ ತಮ್ಮುದೀರು ,,
ಮುಂದೆ ಮುಂದೆ ಹೊಯ್ತಾರೆ ,,
ಹಿರಿಯ ರಾಮಾರು ,,
ಹಿಂದೆ ಹಿಂದೆ ಹೊಯ್ತಾರೆ ,,
ಆಗಲೆ ಮರಿಜೋಗಿ ,,
ಅವಳ ಮುಂದಲಿಗೆ ಕೈಯಾಕೆ ,,
ಆ ಮಾಯಾದ ಮರಿಜೋಗಿ ,,
ಎಲ್ಲೀಗೆ ಹೊಯ್ತೀಯ ಎಲೆ ಮುಂಡೆ ,,

ಆ ಮಾಯಾದ ಮರಿಜೋಗಿ
ತಂದಾನಿ ತಂದಾನಿ ತಂದೇನಾ ತಾನಾನಾ ।
ಅಂಗಂಥ ಕರೆದಾನೆ ,,
ಏಳು ಜನ ರಾಮದೀರು ,,
ಅವ್ರು ಮುಂದೆ ಮುಂದೆ ಬಂದರಂತೆ ,,
ಆಗಲೆ ಮರಿಜೋಗಿ ,,
ಆ ಏಳು ಜನ ರಾಮದೀರ ,,
ಅವ್ನು ತುರುಗಳ್ಳಿ ಮುರಿಕೊಂಡು ,,
ಅವ್ನು ಮುರಿಕೊಂಡು ,,
ರಾಮಾದೀರ ಕಲ್ಲಾನೆ ಮಾಡ್ಯಾನು ,,
ಆಗಲೆ ಮಾಯಾದ ಮರಿಜೋಗಿ ,,
ನಾಗರಗನ್ನೆ ಜೊತೆಗೂಡಿ ,,
ಅವ್ನು ಚೋಜೀಯ ನೇರ್ಯಾನೆ ,,
ಅವ್ರು ಇದ್ದೋರು ಏಳುಮಂದಿ ,,
ಕಲ್ಲು ಮಾಡ್ಯಾನೆ ಮರಿಜೋಗಿ ,,
ನನ್ನ ಕಟ್ಟಾಣಿ ರಾಮಣ್ಣ ,,
ಅವ್ನು ಮೂರ್ದಿನದ ಮಗ ,,
ಆ ಕಟ್ಟಾಣಿ ರಾಮಣ್ಣ ,,
ಸತ್ತವನೊ ಬದುಕ್ಯವನೊ ,,
ನನ ಗಂಡ್ನ ದೆಸೆಯೋರು ,,
ಇನ್ಯಾರು ಇಲ್ಲವಯ್ಯ ,,
ಇನ್ನೆರಡು ವರುಷ ,,
ನಾನು ನೀಪೀಯ ನುಲಿತೀನಿ ,,
ನೀಪೀಯ ನುಲಿತೀನಿ ,,
ನೀಪೀಯಬ್ಬ ಮಾಡುತೀನಿ ,,
ಆಗ ನಿನ್ನ ಕೈವಷ ,,

ಆಯ್ತೀನಿ ಕಣಯ್ಯ
ತಂದಾನಿ ತಂದಾನಿ ತಂದೇನಾ ತಾನಾನಾ ।
ಹೂ ಕಟ್ಟಾಕೆ ಹೂವಾಡಗಿತ್ತಿಯ ,,
ನೀನು ಕರೆಯಿಸಿ ಕಳುವಯ್ಯ ,,
ನನ ಜೊತೆಗೇಯ ಗೌಡೀಯ ,,
ನೀನು ಕಳುಹಿಸಿ ಕೊಡಯ್ಯ ,,
ನನ ಬಟ್ಟೆ ಹೊಗೆಯಾಕೆ ,,
ನೀನು ಅಳನೆ ಮಡಗಯ್ಯ ,,
ನಾನ್ಹೆಲ್ಲಾರು ಕಾಣದಂಗೆ ,,
ನಾನಿರುತ್ತೀನಿ ಅರಮನೇಲಿ ,,
ನಿನಗೆ ಬಂದ ಕಷ್ಟ ,,
ನನಗ್ಹೇಯ ಕಾಣಯ್ಯ ,,
ಚಿಕ್ಕೋಳು ನಾಗರಗನ್ನೆ ,,
ಅವ್ಳು ಮಾಯಾದ ಮುಂಜೋಗಿ ಕೂಡ ,,
ಅಂಗಂಥ ಹೇಳ್ಯಾಳೆ ,,
ಆಗ ಮಾಯಾದ ಮುಂಜೋಗಿ ,,
ಬಹಾಳ ಎಚ್ಚಾಳದಿಂದ ,,
ಬಹಾಳ ಸಂತೋಷದಿಂದ ,,
ಅರಮನೆಗೆ ಬಂದಾನೆ ಮರಿಜೋಗಿ ,,
ನಾಲ್ಹೇರು ಕಾಣದಂತೆ ,,
ಇದ್ದಾಳು ನಾಗರಗನ್ನೆ ,,
ಕಲ್ಯಾಣಿ ಪಟ್ಟಣದ ತಾಯಿ ದೊಡ್ಡಮ್ಮ ತಾಯಿ ,,
ಉಪಾದ್ರಿ ಹಾರುವಯ್ನ ,,
ಕರೆಸ್ಯಾಳೆ ದೊಡ್ಡಮ್ಮ ,,
ನನ್ನ ಕಟ್ಟಾಣಿ ರಾಮಣ್ಣೆ ,,
ತಾಯಿಲ್ಲಾ ತಂದೆಯಿಲ್ಲಾ ,,

ಅಕ್ಕಿಲ್ಲಾ ತಮ್ಮಿಲ್ಲಾ
ತಂದಾನಿ ತಂದಾನಿ ತಂದೇನಾ ತಾನಾನಾ ।
ತಬ್ಬಲಿ ಮಗುಕಾಣೊ ,,
ವಿದ್ಯೆಯ ಬುದ್ದಿಯನೆಲ್ಲಾ ,,
ನೀನು ಚೆಂದಾಗಿ ಕಲಿಸಪ್ಪ ,,
ಜೋಳಿಗೆ ಹೊನ್ನನೆ ,,
ನಾನು ಕೊಡುತ್ತೀನೆ ಹಾರುವಯ್ಯ ,,
ನನ ಕಟ್ಟಾಣಿ ರಾಮಣ್ಣ ,,
ತಾಯಿ ದೊಡ್ಡಮ್ಮ ತಾಯಿ ,,
ಶಾಲೆಗೆ ಕಳುಹಿಸ್ಯಾಳೆ ,,
ಊರೆಲ್ಲಾರ ಮಕ್ಕಳು ,,
ಒಂದನೆ ಬರೆದಾರೆ ,,
ಊರೆಲ್ಲಾರ ಮಕ್ಕಳು ,,
ಹೊಡೆದಾರೆ ಬೈಯ್ದಾರೆ ,,
ಉಪಾದ್ರಿ ಹಾರುವಯ್ಯ ,,
ಒಂದಾನೆ ಬರೆದಾನೆ ,,
ಕಟ್ಟಾಣಿ ರಾಮಣ್ಣ ,,
ಎರಡಾನೆ ಬರೆದಾನೆ ,,
ಆಗಲೆ ರಾಮಣ್ಣ ,,
ಏನಂದು ಬೋದಾನು ,,
ಊರೆಲ್ಲಾರ ಮಕ್ಕಳು ,,
ಏನಂದು ಬೋದಾರು ,,
ಊರೆಲ್ಲಾರ ಮಕ್ಕಳು ,,
ಏನಂದು ಬೋದಾರು ,,
ಇಂಥ ಸೂಳೆ ಮಗನ್ಹುಟ್ಟೊಹೊತ್ತಿಗೆ ,,
ನಿಮ್ಮವ್ವ ಜೋಗಿ ಕುಟ್ಟಿ ,,

ನಿಮ್ಮಪ್ಪದೀರು ಏಳುಮಂದಿ
ತಂದಾನಿ ತಂದಾನಿ ತಂದೇನಾ ತಾನಾನಾ ।
ಜೋಗಿ ಪಟ್ಟಣದಲ್ಲಿ "
ಅವರು ಕಲ್ಲಾಗಿ ನಿಂದವರೆ "
ಆಗಲೆ ರಾಮಣ್ಣ "
ಅಳುತಲೆ ಬಂದಾನೆ "
ತಾಯಿ ದೊಡ್ಡಮ್ಮ ತಾಯಿ "
ಏನಂದು ಕೇಳ್ಯಾಳೆ "
ಯಾರಪ್ಪ ನಿನ್ನ ಹೊಡೆದೋರು "
ಯಾರಪ್ಪ ನಿನ್ನ ಬೋದೋರು "
ನನ್ನ ತಬ್ಬಲಿ ಮಗನನ್ನು "
ಯಾರಪ್ಪ ಹೊಡೆದೋರು "
ಉಸಾದ್ರಿ ಹಾರುವಯ್ನ "
ಹೊಡೆದೋನ ನನ ಕಂದ "
ಯಾರೂವೆ ಹೊಡಿಲಿಲ್ಲಾ "
ಯಾರೂವೆ ಬೈಯಲಿಲ್ಲಾ "
ಊರೆಲ್ಲಾರ ಮಕ್ಕಳು "
ಅವರೆಲ್ಲಾರು ಬೈಯ್ದಾರು "
ಇಂತ ಸೂಳೆಮಗನ್ನುಟ್ಟೊ ಹೊತ್ಗೆ "
ನಿಮ್ಮವ್ವ ಜೋಗಿ ಕುಟ್ಟಿ "
ನಿಮ್ಮಪ್ಪದೀರು ಏಳುಮಂದಿ "
ಜೋಗಿ ಪಟ್ಟಣದಲ್ಲಿ "
ಅವರು ಕಲ್ಲಾಗಿ ನಿಂದವರೆ "
ಊರೆಲ್ಲಾರ ಮಕ್ಕಳು "
ಅಂಗಂಥ ಬೈಯ್ದಾರೆ "
ಯಾರಪ್ಪ ಹೇಳಿದೋರು "

ಅವರ ಮನೆಯು ಹಾಳಾಗ್ಹೋಗ
ತಂದಾನಿ ತಂದಾನಿ ತಂದೇನಾ ತಾನಾನಾ!

ಜೋಗಿ ಸೂಳೆ ಮಗ ,,
ನೋಡಯ್ಯ ಬರುತೀನಿ ,,
ಉಗುರಲ್ಲಿ ಭತ್ತ ನೆಳದು ,,
ಎದೆಯಲ್ಲಿ ಪಾಲಕರೆದು ,,
ನೀನು ಬುತ್ತಿಯ ಕಟ್ಟಮ್ಮ ,,
ಹೋಗೇಯ ಬರುತೀನಿ ತಾತಮ್ಮ ,,
ಹಾಳಾದ ಪಟ್ಟಣಕೆ ,,
ಬೇಡ ಕಣೋ ನನ ಕಂದಾ ,,
ಬೀಳಾದ ಪಟ್ಟಣಕೆ ,,
ಬೇಡಕಣೋ ನನ ಕಂದಾ ,,
ಹೇಳಿದರೆ ಹೇಳಬಹುದು ,,
ಆ ದಾರಿಯ ಹೇಳಾದೆ ಹೋದಾರೆ ,,
ನಿನ ಪಾದದ ಮೇಲೆ ,,
ಪಾದಾಣ ಬಿಡುತೀನಿ ,,
ಆಗಲೆ ದೊಡ್ಡಮ್ಮ ,,
ಉಗುರಲ್ಲಿ ಭತ್ತ ನೆಳೆದು ,,
ಎದೆಯಲ್ಲಿ ಪಾಲಕರೆದು ,,
ಬುತ್ತಿಯ ಕಟ್ಯಾಳು ,,
ಬುತ್ತಿಯ ಕಟ್ಟಕೊಂಡು ,,
ಕಟ್ಟಾಣಿ ರಾಮಣ್ಣ ,,
ನಂದೀಯ ದುರ್ಗಾಕೆ ,,
ಹಾದಿ ಹಾದಿ ನೋಡಿ ,,
ಭೂತಾಳೆ ಪಟ್ಟಣಕೆ ,,
ರಾಮಣ್ಣ ಹೊರಟಾನೆ ,,

ಆಗಲೆ ದೊಡ್ಡಮ್ಮ

ತಂದಾನಿ ತಂದಾನಿ ತಂದೇನಾ ತಾನಾನಾ।

ನನ ಕಲ್ಯಾಣಿ ಪಟ್ಟಣಕೆ ,,
ಇನ್ಯಾರು ನನ ಕಂದಾ ,,
ನನ ಕಲ್ಯಾಣಿ ಪಟ್ಟಣಕೆ ,,
ಗುರಿಯಾರು ನನ ಕಂದಾ ,,
ಕಟ್ಟಾಣಿ ರಾಮಣ್ಣ ,,
ಮುಂದೆ ಮುಂದೆ ಹೊಯ್ತಾನೆ ,,
ತಾಯಿ ದೊಡ್ಡಮ್ಮ ತಾಯಿ ,,
ಹಿಂದೆ ಹಿಂದೆ ಹೊಯ್ತಾಳೆ ,,
ಅಡವಿಯ ಧೂಳನೆಲ್ಲಾ ,,
ತಾಯಿ ದೊಡ್ಡಮ್ಮ ತಾಯಿ ,,
ಬಾಯಿಗೆ ಹುಯಕೊಂಡು ,,
ನನ ಕಲ್ಯಾಣಿ ಪಟ್ಟಣಕೆ ,,
ದಿಕ್ಯಾರು ನನ ಕಂದಾ ,,
ಧೀರ ಗಂಡಾದ್ರೆ ಗೆದ್ದು ಬರುವೆ ,,
ಹೆಣ್ಣಾದ್ರೆ ಸೋತುಬರುವೆ ,,
ಅಂಗಂಥ ಹೇಳ್ಯಾನೆ ರಾಮಣ್ಣ ,,
ಏನೂವೆ ಹೇಳಿದ್ರೆ ,,
ಕೇಳುವೆ ತಾತಮ್ಮ ,,
ಗೋಳಿ ನೋಡಲಾರಾದೆ ,,
ಏನೆಂದು ಹೇಳ್ಯಾಳೆ ,,
ನಾನು ವಾಲೇಕಾರನಾದೆ ,,
ಮುಂದೆ ಕೆಲಸವಾದೆ ,,
ಹಿಂದೇಕೆ ನೋಡಮ್ಮ ,,
ಪಟ್ಟಣವೆ ಬೇಯಿತಾದೆ ,,

ಹಿಂದಾಕೆ ನೋಡುವಾಗ
ತಂದಾನಿ ತಂದಾನಿ ತಂದೇನಾ ತಾನಾನಾ!
ಅವಳು ದೊಡ್ಡಮ್ಮ ನೋಡುವಾಗ ,,
ಮಾಯವಾದಾನು ಕಟ್ಟಾಣಿ ರಾಮಣ್ಣ ,,
ಆಗಲೆ ದೊಡ್ಡಮ್ಮ ,,
ಅರಮನೆಗೆ ಬಂದಾಳೆ ,,
ಕಟ್ಟಾಣಿ ರಾಮಣ್ಣ ,,
ಭೂತಾಳೆ ಪಟ್ಟಣಕೆ ,,
ಹೋದಾನೆ ರಾಮಣ್ಣ ,,
ಭೂತಾಳೆ ಪಟ್ಟಣದ ,,
ಆ ಮಾಯಾದ ಮರಿಜೋಗಿ ,,
ಆ ನಾಗರಗನ್ನೆಯ ,,
ಅವಳು ನೀರಿಗ್ಹೋದಾರೆ ತೂಗುತಾನೆ ,,
ಅವಳು ಹೊರಗ್ಹೋದಾರೆ ತೂಗುತಾನೆ ,,
ಒಂದೇ ಹೂವಿನ ತೂಕಕ್ಕೆ ,,
ನೀನು ಹೆಚ್ಚಾಗಿ ಇದ್ದಾರೆ ,,
ನಾನು ಕಲ್ಲುಗಾಣಕಾಗಿ ,,
ನಾನು ಆರೆಸುತೆಂದಾನು ,,
ಅವರ ತಾಯಿ ನಾಗರಗನ್ನೆ ,,
ಹೂವನು ಕಟ್ಯಾಳು ,,
ಅವಳು ನೀರಿಗೆ ಬಂದಾಳು ,,
ಅವಳು ಕಂಡಾಳು ಕಟ್ಟಾಣಿ ರಾಮಣ್ಣನ ,,
ಹೀಗಂಥ ಹೇಳುತಾಳೆ ,,
ಹಾಳಾದ ಪಟ್ಟಣಕೆ ,,
ಯಾಕು ಬಂದೆ ದೊರೆಮಗನೆ ,,
ನೀನು ಯಾವ ಸೀಮೆಯಪ್ಪ ,,

ನು ಯಾವ ರಾಜ್ಯವಪ್ಪ
ತಂದಾನಿ ತಂದಾನಿ ತಂದೇನಾ ತಾನಾನಾ।
ನಾನು ಆ ಕಲ್ಯಾಣಿ ಪಟ್ಟಣ "
ಆ ಕಲ್ಯಾಣಿ ಪಟ್ಟಣದ "
ರಾಮದೀರ ಮಗವವ್ವ "
ಈ ಮಾತ ಕೇಳಿದ ನಾಗರಗನ್ನೆ "
ಅವಳು ಬಿಕ್ಕಿ ಬಿಕ್ಕಿ ಅಳುತೇಳ್ಯಾಳೆ "
ನಿಮ್ಮ ತಂದೆಗಳ್ಹೇಳು ಜನವ "
ಆ ಮಾಯಾದ ಮರಿಜೋಗಿ "
ಅವನು ಕಲ್ಲುಮಾಡಿ ನಿಲಿಸ್ಯನ್ನೆ "
ಈ ಬೀಳಾದ ಪಟ್ಟಣಕೆ "
ನೀನು ಯಾಕು ಬಂದೆ ದೊರೆಮಗನೆ "
ಚಿಕ್ಕೋಳು ನಾಗರಗನ್ನೆ "
ನಮ ತಾಯಿ ಕಾಣವ್ವ "
ಅವರ್ಹೇಳು ರಾಮದೀರು "
ನಮು ತಂದೆದಿರು ಕಾಣವ್ವ "
ನೀನ್ಹೇಯ ತಾಯಿಕಾಣೆ "
ನಾನ್ಹೇಯ ಮಗಕಾಣೆ "
ನಾನ್ಹೊಳಗ್ಹೋಗಿ "
ನೀರರಬಿ ಮಡಗಿ ಬರುತ್ತೀನಿ "
ಆಗ ರಾಮಣ್ಣ "
ಹೂವಾಡಗಿತ್ತಿಯ ಮನೆಗ್ಹೋದಾನೆ "
ಆಗಲೆ ಮಹಾರಾಣಿ "
ಆಲ್ಲಿಗೆ ಬಂದಾಳೆ ನಾಗರಗನ್ನೆ "
ಆಗಲೆ ರಾಮಣ್ಣ ಮಹಾರಾಣಿ ಬಳಿಗ್ಹೋಗ "
ಆಗ ಹೂವಾಡಿಗಿತ್ತಿಯು ಹೂವಾನು ತಂದಾಳೆ "

ಹೂವನು ತಂದಾಳೆ

ತಂದಾನಿ ತಂದಾನಿ ತಂದೇನಾ ತಾನಾನಾ ।

ಏನಂತ ಹೇಳ್ಯಾಳೆ "
ತಾಯಮ್ಮ ತಾಯಮ್ಮ "
ಅಡಿಗೇಯ ಮಾಡವ್ವ "
ನೀನಡಿಗೆ ಮಾಡವ್ವ "
ನಾನ್ಹೂವ ಕಟ್ಟುತ್ತೀನಿ "
ಹೂವಾಡಗಿತ್ತಿಯು "
ಅಡಿಗ್ಹೋಯ ಮಾಡ್ಯಾಳೆ "
ಕಟ್ಟಾಣಿ ರಾಮಣ್ಣ "
ಹೂವನೆ ಕಟ್ಯಾನೆ "
ಹೂವಿನ ಒಳಗೊಂದ "
ಓಲೇಯ ಬರೆದಾನೆ "
ನಾನ್ಹೋಯ ಮಗಕಾಣೆ "
ನೀನ್ಹೋಯ ತಾಯಿಕಾಣೆ "
ಹೂವಾಡಗಿತ್ತೀಯ "
ಹೂತಗೊಂಡೋದಾಳೆ ,,
ಚಿಕ್ಕೋಳು ನಾಗರಗನ್ನೀಗೆ ,,
ಹೂವನೇ ಈಸ್ಯಾಳೆ ,,
ಹೂವಿನ ಒಳಗೊಂದು "
ಓಲೇಯ ಮಡಿಗ್ಯಾನೆ ,,
ಬಾರಮ್ಮ ಹೂವಾಡಗಿತ್ತಿ ,,
ಹೂವ್ಯಾರು ಕಟ್ಟಿದ್ಹೋರು ,,
ನಮ್ಮಕ್ಕಾನ ಮಗನಯ್ಯ ,,
ಅವ್ನು ಕಟ್ಟದ ಕಾಣಮ್ಮ ,,
ನಿಮ್ಮಕ್ಕಾನ ಮಗನಲ್ಲಾ ,,

ನೀ ನಿಜವಾಗಿ ಹೇಳಮ್ಮ
ತಂದಾನಿ ತಂದಾನಿ ತಂದೇನಾ ತಾನಾನಾ
ನಿನ ಮಗ ಅಲ್ಲಕಾಣೆ ,,
ಅವ್ನು ನನ ಮಗ ಕಾಣಮ್ಮ ,,
ನನ ಕಟ್ಟಾಣಿ ರಾಮಣ್ಣ ,,
ನೀ ಚೆಂದಾಗಿ ಸಾಕಮ್ಮ ,,
ಜೋಳಿಗೆ ಹೊನ್ನಾನೆ ,,
ನಾ ಕೊಡುತ್ತೀನಿ ಕಾಣಮ್ಮ ,,
ನೀನ್ಹೇಯೆ ತಾಯಿಕಾಣೆ ,,
ಅವನ್ಹೇಯೆ ಮಗಕಾಣೆ ,,
ಆಗ ನಾಗರಗನ್ನೆ ,,
ಮಗನೀಗೆ ಓಲೇಯ ,,
ಏನಂದು ಬರೆದಾಳೆ ,,
ಮಹಾರಾಣಿ ಬಳಿಗ್ಹೀಗ ,,
ರಾಮಣ್ಣ ಬರೆದಾನೆ ,,
ತಾಯಿ ನಾಗರಗನ್ನೆ ,,
ಏನಂದು ಬರೆದಾನೆ ,,
ಸತ್ಯವಾಗಿ ಕೆಡಬೇಡ ,,
ಬೀಜವಾಗಿ ಬಿಡಬೇಡ ,,
ಅಂಗಂಥ ಬರೆದಾನೆ ,,
ಇಲ್ಲಿಗನ್ನೆರಡು ವರಷಾವು ,,
ತುಂಬೀತು ನಾಗರಗನ್ಗೆ ,,
ಹನ್ನೆರಡು ವರುಷಾವು ,,
ತುಂಬೇಯ ಹೋಯಿತು ,,
ನೀಪೀಯ ನುಲಿಬೇಕು ,,
ನೀಪಿಹಬ್ಬ ಮಾಡಬೇಕು ,,

ಚಿಕ್ಕೋಳು ನಾಗರಗನ್ನೆ
ತಂದಾನಿ ತಂದಾನಿ ತಂದೇನಾ ತಾನಾನಾ !

ಅಂಗಂಥ ಹೇಳ್ಯಾಳೆ ,,
ಅಗಲೆ ಮರಿಜೋಗಿ ,,
ಬಹಾಳ ಎಚ್ಚಾಳದಿಂದ ,,
ಬಹಾಳ ಸಂತೋಷದಿಂದ ,,
ಆಗಲೆ ಮರಿಜೋಗಿ ,,
ಅಕ್ಕೆಯ ತಂದಾನೆ ,,
ಮಾಯಾದ ಮರಿಜೋಗಿ ,,
ಬೇಕಾದ ಅಡಿಗೇಯ ,,
ಅಡಿಗ್ಹೇಯ ಮಾಡ್ಯಾಳೆ ,,
ಅಡಿಗ್ಹೇಯ ಮಾಡ್ಯಾಳೆ ನಾಗರಗನ್ನೆ ,,
ನೀಪಿಹಬ್ಬ ಮಾಡಾಕೆ ,,
ಆಗಾಲೆ ರಾಮಣ್ಣ ,,
ಏನಂದು ಬರೆದಾನೆ ,,
ಮಂಚಾಕೆ ಕರೆಯವ್ವ ,,
ಪಗಡೇಯ ಆಡಾಕೆ ,,
ಸತ್ಯಾವ ಬಿಡವ್ವ ,,
ನಿಜಕೆ ನಡಿಯವ್ವ ,,
ಅಂಗಂಥ ಓಲೆ ಬರೆದಾನೆ ,,
ತಾಯಿ ನಾಗರಗನ್ನೆ ,,
ನಮ ತಾಯಿ ಕೇಳವ್ವ ,,
ಹೂವಿನ ಒಳಗೆ ,,
ಓಲೇಯ ಮಡಿಗಿವ್ನಿ ,,
ಬಾರಾಲ ಮರಿಜೋಗಿ ,,
ಪಗಡೇಯನ್ಹಾಡೋಣ ,,

ಇಬ್ಬರು ಕೂತುಕೊಂಡು
ತಂದಾನಿ ತಂದಾನಿ ತಂದೇನಾ ತಾನಾನಾ ।
ವೀಳ್ಯೇವ ಮೆಲ್ಲೂನ ,,
ಮಾಯಾದ ಮರಿಜೋಗಿ ,,
ಬಹಾಳ ಎಚ್ಚಾಳದಿಂದೆ ,,
ಆಗಾಲೆ ಮರಿಜೋಗಿ ,,
ಇದನೆಲ್ಲಾ ಮಾಡೀದ ,,
ಮಾರಾನೆ ಬೆಳಗ್ಗೆ ,,
ಇನ್ನೇನ ಬರೆದಾನೆ ,,
ನಿನ್ನ ಸಹಾಸ ,,
ಶಕ್ತಿಗಳು ಯಾತರಲ್ಲಿರುವೋದೆ ,,
ಅಂಗಂಥ ಕೇಳೆಂದು ,,
ಓಲೇಯ ಬರೆದಾನೆ ರಾಮಣ್ಣ ,,
ನನ್ನ ಸಹಾಸ ಕೇಳೋಕೆ ,,
ಯಾವ ಗಂಡ ಹೇಳಿದಾನೆ ,,
ಆಗಲೆ ಮರಿಜೋಗಿ ,,
ಅಂಗಂದ ಮಾತೀಗೆ ,,
ನನ್ನ ಸಹಾಸ ಹೇಳುವೆ ,,
ನಿನ್ನ ಸಹಾಸ ಶಕ್ತಿಗಳು ,,
ಹೇಳಾಲ ಎಲ ಮುಂಡೆ ,,
ನನ್ನ ಶಾಷನಗಳು ,,
ಬಲದ ಕೈಯಗಳ ಹವಳಾದ ತೆಗಿದಾರೆ ,,
ಬಲದ ಕೈಯಗಳ ಹವಳದ ತೆಗೆದವೇಲೆ ,,
ಕತ್ತೇಯ ಬಿಟ್ಟಾರೆ ,,
ಕತ್ತೇಯ ಬಿಟ್ಟಾರೆ ಸತ್ತೇಯ ಹೊಯಿತ್ತೀನಿ ,,
ಕೈಯಿಗೆ ಕಟ್ಟದರೆ ,,

ಆಗಲೆ ನಾನ್ಹೋಯ
ತಂದಾನಿ ತಂದಾನಿ ತಂದೇನಾ ತಾನಾನಾ ।
ಎದ್ದೇಯೆ ಕೂತ್ಹೋನೆ ,,
ಅಂಗಂಥ ಓಲೇಯ ,,
ರಾಮಣ್ಣ ಗೆ ಬರೆದಾಳೆ ,,
ತಾಯಿ ನಾಗರಗನ್ನೆ ,,
ಆಗಲೆ ಮರಿಜೋಗಿ ,,
ಹವಳಾವ ಕೆತ್ತಾನೆ ,,
ಆಗ ಚಿಕ್ಕೋಳು ನಾಗರಗನ್ನೆ ,,
ಸತ್ತಂಗೆ ಮನಿಗ್ಯಾಳೆ ,,
ಅನಂತರ ಮರಿಜೋಗಿ ,,
ಕಯ್ಯಿಗೆ ಕಟ್ಟಿದಾನೆ ,,
ಆಗಾಲೆ ಎದ್ದಾಳೆ ನಾಗರಗನ್ನೆ ,,
ನಿಮ್ಮ ಶಾಷನ ಹೇಳಿ ,,
ಮಾಯಾದ ಮರಿಜೋಗಿ ,,
ಅಂಗಂಥ ಕೇಳ್ಯಾಳೆ ನಾಗರಗನ್ನೆ ,,
ನನ್ನ ಶಾಷನಗಳ ,,
ಹೇಳಬೇಡ ಎಲಮುಂಡೆ ,,
ಆಗಲೆ ಮರಿಜೋಗಿ ,,
ಏನಂದು ಹೇಳ್ಯಾನೆ ,,
ಉದ್ದ ಆರುವತ್ಹೋಜನ ,,
ಅಡ್ಡ ತೊಂಬತ್ಹೋಜನ ,,
ತೊಂಬತ್ತು ಯೋಜನದಿ ,,
ಹೆಬ್ಬೆಲದ ಮರವಂತೆ ,,
ಹೆಬ್ಬೆಲದ ಮರದಲ್ಲಿ ,,
ಕಂಚಿನ ಕಲುಬಾವಿ ,,

ಕಂಚೀನ ಕಲುಬಾವೀಲಿ

ತಂದಾನಿ ತಂದಾನಿ ತಂದೇನಾ ತಾನಾನಾ।

ಕರಬಾನಾದ ಸಾಲಾವೆ ,,
ಕರಬಾನಾದ ಸಾಲೊಳಗೆ ,,
ಈಶ್ವರನ ಹಕ್ಕಿಯಾದೆ ,,
ಈಶ್ವರನ ಹಕ್ಕೀಯ ,,
ಹಿಡಿದುಕಂಡಾರೆ ,,
ಹಕ್ಕೀಯ ಹಿಡಿದಾರೆ ,,
ಚಳಿ ಜ್ವರ ಬಂದಾವು ,,
ಹೂ ಜ್ವರ ಬಂದಾವು ,,
ಆಗಲೆ ಮರಿಜೋಗಿಗೆ ,,
ಚಳಿಜ್ವರ ಬಂದಾವು ,,
ಹಕ್ಕಿಯ ಕಾಲನೆ ,,
ಕಾಲನೆ ಮುರಿದಾರೆ ,,
ಎಲೆ ಹೆಣ್ಣೆ! ನನ ಕಾಲು ಮುರಿದ್ಹಂಗೆ ,,
ಹಕ್ಕೀಯ ರೆಕ್ಕೆಯ ,,
ಮುರಿದಾರೆ ಎಲೆ ಹೆಣ್ಣೆ ,,
ಹಕ್ಕೀಯ ರೆಕ್ಕೆಯ ,,
ನನ ಕೈಯಿ ಮುರಿದಂಗೆ ,,
ಹಕ್ಕೀಯ ಕುತ್ತಿಗೇಯ ,,
ಕುತ್ತಿಗೇಯ ಮರಿದಾರೆ ,,
ನನ್ನ ಕುತ್ತಿಗೆ ಮುರಿದಾಗೆ ,,
ಆಗಲೆ ಮರಿಜೋಗಿ ,,
ಎಲ್ಲಾನು ಹೇಳ್ಯಾನು ,,
ಆಗ ನಾಗರಗನ್ನೆ ,,
ಮಗನೀಗೆ ಓಲೀಯ ,,

ಬರೆದಾಳೆ ಅಂಗಂಥ ನಾಗರಗನ್ನಿ
ತಂದಾನಿ ತಂದಾನಿ ತಂದೇನಾ ತಾನಾನಾ ।

ಬೆಳಗ್ಹೀಗೆ ಹೊರಟಾನೆ	,,
ಹಕ್ಕೀಯ ತರಾಕೆ	,,
ಆಗಲೆ ಕಟ್ಟಾಣಿ ರಾಮಣ್ಣ	,,
ಅಲ್ಲೀಗೆ ಹೋದಾನೆ	,,
ಒಬ್ಬ ತಾಯಿಗೊಬ್ಬ ಮಗನುಟ್ಟಿದ್ದರೆ	,,
ಹೆಬ್ಬೆಲದ ಮರವೆ	,,
ಎರಡು ಭಾಗವಾಗಲಿ	,,
ಕಂಚೀನ ಬಾವೀಯ	,,
ನೀರೆಲ್ಲಾ ಸೀಯಾಲೀ	,,
ಹೆಬ್ಬೆಲದ ಮರವ್ಹೀಯು	,,
ಎರಡೇಯ ಭಾಗವಾಗಲೀ	,,
ಕಂಚೀನ ಬಾವೀಯ	,,
ನೀರೆ ಸೀಯ್ದಾವು	,,
ಆಗಲೆ ರಾಮಣ್ಣ	,,
ಕರಬಾನಾವ ಇಳಿಕ್ಯಾನೆ	,,
ಬಾನಾವ ಇಳಿಕ್ಯಾನೆ	,,
ಈಶ್ವರನ ಹಕ್ಕೀಯ	,,
ಅವನು ಹಿಡಕೊಂಡೆ ಬಂದಾನೆ	,,
ಈಚೀಗೆ ಬಂದಾನೆ	,,
ಊರೀಗೆ ಬಂದಾನೆ ರಾಮಣ್ಣ	,,
ಮಾಯಾದ ಮರಿಜೋಗಿಗೆ	,,
ಚಳಿ ಜ್ವರ ಬಂದಾವೆ	,,
ಹೂ ಜ್ವರ ಬಂದಾವೆ	,,
ಕಟ್ಟಾಣಿ ರಾಮಣ್ಣ	,,

ಬೀದಿಬೀದಿಯೊಳಗೆ

ತಂದಾನಿ ತಂದಾನಿ ತಂದೇನಾ ತಾನಾನಾ

ಅವನು ಬೀದಿ ಬೀದಿಯೊಳಗೆ ,,
ಏನಂದು ಸಾರ್ಯಾನೆ ,,
ಶಾಸ್ತ್ರವ ಹೇಳುತೀನಿ ,,
ನಾ ಕಣಿಯನು ಹೇಳುತೀನಿ ,,
ಮಾಯಾದ ಮರಿಜೋಗಿಗೆ ,,
ಆಗಲೊ ಈಗಲೊ ,,
ಜೀವಾವೆ ಹೊಯ್ತಾದೆ ,,
ಯಾವ ಸೀಮೆಯ್ಹೋರು ಕಾಣೆ ,,
ಯಾವ ದೇಶದ್ಹೋರು ಕಾಣೆ ,,
ಶಾಸ್ತ್ರವ ಹೇಳುತಾನೆ ,,
ಕಣಿಯೆಂದು ಹೇಳುತಾನೆ ,,
ಹೋಗಾಲ ಎಲಮುಂಡೆ ,,
ನೀನು ಶಾಸ್ತ್ರವ ಕೇಳ್ಹೀಗ ,,
ಆಗ ನಾಗರಗನ್ನೆ ,,
ಶಾಸ್ತ್ರಕೆ ಹೋದಾಳೆ ,,
ಆ ಶಾಸ್ತ್ರಗಾರ ಈ ರೀತಿ ಹೇಳ್ಹೀದ ,,
ಅವರ ಗಂಡದ್ಹೀರು ,,
ಕಲ್ಲುಮಾಡಿ ನಿಲಿಸೀದ ,,
ಅವನೆಡಕ್ಕಿೀರ ಕರೆಕೊಂಡು ,,
ಬಂದೇಯ ಇದ್ದೀಯ ,,
ಅವರ್ಹೇಳು ಜನ ತಮ್ಮುದೀರು ,,
ಜೀವ ಪಡೆದಾರೆ ,,
ಅವರೆಡಕ್ಕಿೀಯ ,,
ಅವರಿಂದೆ ಕಳುಹಿಸಯ್ಯ ,,

ಬಂದ ಕಾಯಿಲೆ ಎಲ್ಲಾ
ತಂದಾನಿ ತಂದಾನಿ ತಂದೇನಾ ತಾನಾನಾ ।
ಬಂದ ಕಷ್ಟವು ಎಲ್ಲಾ »
ಪರಿಹಾರವೆಲ್ಲಾವು »
ಅಂಗಂಥ ಶಾಸ್ತ್ರವು »
ಹೇಳ್ಯಾನೆ ರಾಮಣ್ಣ »
ಚಿಕ್ಕೋಳು ನಾಗರಗನ್ನೆ »
ಬಂದೇಯ ಹೇಳ್ಯಾಳೆ »
ಮಾಯಾದ ಮರಿಜೋಗಿಗೆ »
ಏನೇನು ಸಾಮಾನಾಗಬೇಕು »
ಎಲೆ ಮುಂಡೆ ನಾಗರಗನ್ನೆ »
ಹೊಸ ಚಿಬ್ಬಲಾಗಬೇಕು »
ಅಕ್ಕಸ್ತಿ ಗಂಧನಾಗಬೇಕು »
ನೆನಕ್ಕಿ ನೆಲಗಡಲೆ ಆಗಬೇಕು »
ಅರಿಷಾಣ ಕುಂಕುಮಬೇಕು »
ಎಲ್ಲಾನು ಚಿಬ್ಬಲಿಗೆ ಮಡಗಬೇಕು »
ಅವರ್ಹೋಳು ಜನ ತಮ್ಮಂದೀರು »
ಕಲ್ಲಾಗಿ ನಿಂದುತಾವ »
ಚಿಕ್ಕೋಳು ನಾಗರಗನ್ನೆ »
ಹೊತ್ತುಕೊಂಡೆ ಹೋದಾಳೆ »
ಮಾಯಾದ ಮರಿಜೋಗಿ »
ಹಿಂದುಗಡೆ ಹೋದಾನೆ »
ಕಟ್ಟಾಣಿ ರಾಮಣ್ಣ »
ಅವ್ನು ಹಿಂದುಗಡೆ ಹೋದಾನೆ »
ಅವರ್ಹೋಳು ಜನಗಳ ಕಲ್ಲ »
ತೊಳೆಯಾಲ ಎಲೆ ಮುಂಡೆ »

ಅಕ್ಕಸ್ತಿ ಗಂಧಾವ

ತಂದಾನಿ ತಂದಾನಿ ತಂದೇನಾ ತಾನಾನಾ।

ಇಕ್ಕಾಲ ಎಲ ಮುಂಡೆ	,,
ನೆನೆಯಕ್ಕಿ ನೆನೆಗಡಲೆ	,,
ಮಡಗಲ ಎಲೆ ಮುಂಡೆ	,,
ಅವರ್ಹೇಳು ಜನಕೆ	,,
ನೀನು ದೂಪಾವ ಹಾಕ್ಹೆಣ್ಣೆ	,,
ಅವರೇಳು ಜನ ರಾಮದೀರು	,,
ಜೀವವ ಪಡೆದಾರು	,,
ಈಶ್ವರನ ಹಕ್ಕೀಯ	,,
ಮೆಟರ್ಹೇಯ ಹಿಡಿದಾನು	,,
ಕಟ್ಟಾಣಿ ರಾಮಣ್ಣ	,,
ಅವರ್ಹೇಳು ಜನ ತಮ್ಮದೀರು	,,
ಎದ್ದೇಯ ನಿಂದವರೆ	,,
ಕುದುರೇಯ ಕುದುರ್ಹಂಗೆ	,,
ಜೀವವ ಪಡೆದಂಗೆ	,,
ಕಟ್ಟಾಣಿ ರಾಮಣ್ಣ	,,
ಮುಂದಾಕೆ ಕರೆದಾನೆ	,,
ಬಾರಾಲ ಎಲಾ ಜೋಗಿ	,,
ಇಲ್ಲೀಗೆ ನೀನೀಗ	,,
ನಿಮ್ಮವ್ವನ ಗಂಡ ಕಾಣೊ	,,
ನಿಮ್ಮವ್ವನ ಮಿಂಡ ಕಾಣೊ	,,
ನಿನ್ನ ಶಾಪನದಕ್ಕಿ ನೋಡಲ ಎಲಾ ಜೋಗಿ	,,
ನಿನ್ನ ಶಾಪನದಕ್ಕಿ ನೋಡೋ ಸೂಳೆಮಗನೆ	,,
ನಿಮ್ಮವ್ವನ ಗಂಡನು ನಾನ್ಹೇಯೆ ಕಾಣಾಲ	,,
ಹಕ್ಕೀಯ ಕುತ್ತಿಗೇಯ	,,

ಅವನು ಮುರಿದ್ಹೋಯ ಎಸೆದಾನೆ
ತಂದಾನಿ ತಂದಾನಿ ತಂದೇನಾ ತಾನಾನಾ ।
ಜೋಗೀಯ ಕುತ್ತಿಗ್ಹೋಯ ,,
ಮುರಿದ್ಹೋಯ ಹೋದಾಗ ,,
ಮಾಯಾದ ಮುರಿಜೋಗಿ ,,
ಸತ್ತೋಯ ಹೋದಾನು ,,
ಅವರ್ಹೋಳು ಜನ ರಾಮದೀರು ,,
ಕಟ್ಟಾಣಿ ರಾಮಣ್ಣಗೆ ,,
ಚಂದ್ರಾಯ್ದು ಎತ್ಯಾರೆ ,,
ಆಗ ಚಿಕ್ಕೋಳು ನಾಗರಗನ್ನೆ ,,
ಮುತ್ತಿನ ಮಂಜೆರಗ ರಾಮಣ್ಣಗೆ ,,
ಮರೆ ಮಾಡ್ಯಾಳೆ ನಾಗರಗನ್ನೆ ,,
ನನ್ನ ಮಗನುಟ್ಹೋಹೊತ್ತಿಗೆ ,,
ನಮ್ಮ ಜೀವವ ಕೊಟ್ಟಾನೆ ,,
ಚಿಕ್ಕಪ್ಪರ್ಹಾರು ಜನಗಳು ,,
ಎತ್ತಿ ಮುದ್ದಾಡ್ಯಾರೆ ರಾಮಣ್ಣನ ,,
ಹಿರಿಯೋರು ಮಹಾದೇವು ,,
ಎತ್ತಿ ಮುದ್ದಾಡ್ಯಾರೆ ರಾಮಣ್ಣನ ,,
ಆಗ ನಾಗರಗನ್ನೆ ,,
ಏನೆಂದು ಹೇಳ್ಯಾಳೆ ,,
ನಾನು ಬರುವ ಕಾಲದಲ್ಲಿ ,,
ಮೂರು ದಿಸಲ ಮಗೆನಪ್ಪ ,,
ಮೂರು ದಿಸಲ ಮಗ ರಾಮಣ್ಣನ ,,
ನಾನು ಬಿಟ್ಟೀಯೆ ಬಂದೆನಪ್ಪ ,,
ಒಂಬತ್ತು ಮಂದೀಯು ,,
ಅವರು ಪಟ್ಟಣಕೆ ಬಂದಾರೆ ,,

ಕಲ್ಯಾಣಿ ಪಟ್ಟಣದ
ತಂದಾನಿ ತಂದಾನಿ ತಂದೇನಾ ತಾನಾನಾ ।
ಆ ಪಟ್ಟಣದ ಪ್ರಜೆಗಳು ,,
ಅವರೊಂಬತ್ತುಮಂದೀಗೆ ,,
ಬೆಳಿಗ್ಯಾರೆ ಆರತಿಯ ,,
ಕಟ್ಟಾಣಿ ರಾಮಣ್ಣಗೆ ,,
ರಾಜ ಪಟ್ಟವ ಕಟ್ಯರಲ್ಲೊ ,,
ಕಟ್ಟಾಣಿ ರಾಮಣ್ಣ ,,
ಅವರು ಆಳುತವರೆ ರಾಜ್ಯವ ,,
ತಂದಾನಿ ತಂದಾನಿ ತಂದೇನಾ ತಾನಾನಾ ।
ತಂದಾನಿ ತಂದಾನಿ ತಂದೇನಾ ತಾನಾನಾ ।



ಉತ್ತರದೇವಿ

ತಾವರೆ ಎಲೆಮೇಲೆ ತಾನಾಗಿ ಕೂತುಕೊಂಡು ಉತ್ತರದೇವಿ
ತಪಸು ಮಾಡ್ಯಾಳೆ ಶಿವನೀಗೆ । ಉತ್ತರದೇವಿ
ನಾಡಮೇಲೆ ಉತ್ತರೆ ಮಳೆಯಾಗಿ ಹರಿದಾಳು....॥

.....ಜನಪದ ಸಾಹಿತ್ಯವು 'ಹಾಳರ್ಧ ಹೊಲೆಯರ ಬೀಳರ್ಧ ಹೆಂಗಳೆಯರ' ವಾಣಿಯಾಗಿದೆ; ಅದು ಬಹು ಸಂಖ್ಯಾತರ ಒಡನುಡಿಯಾಗಿದೆ; ಅಶಿಕ್ಷಿತ ಜನಾಂಗದ ಕೈಗೋಲಾಗಿದೆ; ಅದಕ್ಕೆ ಕರ್ಣೋಪಕರ್ಣಗಳಿಂದ ಬೆಳೆದುಳಿದು ಬಂದ ಅಮರ ಸಾಹಿತ್ಯವೆಂದೂ, ಪಂಡಿತಮನ್ನಣೆಯನ್ನು ಅಶಿಸದೆ ಲೋಕಮಾನ್ಯವಾಗಿ ಬದುಕಿದ ಜೀವಸಾಹಿತ್ಯವೆಂದೂ ಕರೆಯಬಹುದು. ಅದು ಏಳಂತಸ್ತಿನ ರಂಗಮಹಲಿನಲ್ಲಿ ಮಹಾರಾಜ್ಞಯಂತೆ ಉಯ್ಯಲಾಡದೆ, ಕೇರಿ ಕೇರಿಗೂ ಮನೆಮನೆಗೂ ಲಭ್ಯವಾಗಿರುವ—ಗಂಗೆಯಂತೆ ತಿಳಿಯಾಗಿರುವ ಸುಲಭ ಸಾಹಿತ್ಯ. ಈ ಸಾಹಿತ್ಯ ಕುಸುಮವು ಪಾಂಡಿತ್ಯರಾಜೋದ್ಯಾನದ ರಾಜೀವವಲ್ಲ; ಈ ಸಾಹಿತ್ಯ ಸಂಪತ್ತು ರಾಜಾಶ್ರಯದಲ್ಲಿ ಜೀವಹಿಡಿದ ಹಂಗಿನರಮನೆಯದಲ್ಲ; ಅದು ಸಹಜಸಾಹಿತ್ಯ. ಹವೆಯಂತೆ ನೆಲಮುಗಿಲುಗಳನ್ನು ವ್ಯಾಪಿಸಿದ ನಿಸ್ಸೀಮ ಸಾಹಿತ್ಯ; ನಿರಕ್ಷರ ಕುಟೀರದಿಂದ ಹೊರಹೊಮ್ಮಿದ ಮಹಾಮಹಿಮ ಸಾಹಿತ್ಯ; ಶಾಸ್ತ್ರಗಳ ಕಟ್ಟಿನಲ್ಲಿ ಸಿಲುಕದಿದ್ದರೂ ಅಚ್ಚುಕಟ್ಟಾಗಿರುವ ನಿಸ್ಸಂಗಸಾಹಿತ್ಯ.

....ಅವರು ಅಲ್ಪಶ್ರುತರು; ಬಳಸುವ ಶಬ್ದಸಂಖ್ಯೆ ಸಣ್ಣದು; ವ್ಯಾಕರಣ ಛಂದಸ್ಸು ಕಟ್ಟಳೆ ತಿಳಿಯರು. ವಿಶೇಷವಾದ ಆಡಂಬರವನ್ನರಿಯದೆ ಸಹಜವಾಗಿ ಹೇಳಿದ ಕಥೆ, ಹಾಡು, ಒಡಪು, ಗಾದೆ, ವರ್ಣನೆ ಇವುಗಳಿಂದ ಆನಂದವು ಲಭಿಸಿದರೆ ಅದು ಉತ್ತಮ ಸಾಹಿತ್ಯವಲ್ಲವೆ? ಸೂರ್ಯ, ಚಂದ್ರ, ಆಕಾಶ, ನಕ್ಷತ್ರ, ಪರ್ವತ, ನದಿ ಮೊದಲಾದ ಸೃಷ್ಟಿಯ ದೃಶ್ಯಗಳಂತೆ ಹಳ್ಳಿಯ ಸಾಹಿತ್ಯವು ನಿಸರ್ಗರಮಣೀಯವಾಗಿದೆ. ಅದರ ಬಹು ಭಾಗವೆಲ್ಲ ಸವಿಯಲ್ಲಿ ಕಾಂತೆಯರ ಮಾತಿನಂತಿದೆ.

—ಶ್ರೀ ಸಿಂಪಿ ಲಿಂಗಣ್ಣ

ಉತ್ತರದೇವಿ*†

ಅಂಗಳದಲಿ ಬಾವಿ ಅರಗಿನ ಮುಚ್ಚಾಳ
ಅರಗರಗಿ ನೀರ ಮೊಗೆಯೋಳೆ। (ಮೊಗೆಯೊ) ಉತ್ತರದೇವಿ
ಬಾಯಾರಿಕೆಗೆ ಉದಕ ಕೊಡು ಬಾರೇ—॥

ಉದಕ ಕೊಡುವೋಕೆ ಪದಕ ನಾ ತೊಡಲಿಲ್ಲಾ
ಹೋಗಯ್ಯ ಹರಿಯೊ ಜಲಧೀಗೆ—ನೀನು
ಹೋಗಯ್ಯ ಹರಿಯೊ ಜಲಧೀಗೆ....।

ಹರಿಯೊ ನೀರು ಹಾಸುಂಬ ಕೆರೆಯ ನೀರು ಕಗ್ಗಣಕು
ನೀ ಕೊಟ್ಟ ನೀರು ಕಡುರುಚಿ—ಉತ್ತರದೇವಿ
ನೀ ಕೊಟ್ಟ ನೀರು ಕಡುರುಚಿ....।

ಈವೂರ ಗಿಣಿಯಲ್ಲಾ ಆವೂರ ಗಿಣಿಯಲ್ಲಾ
ಮತ್ತೊಂದು ನಾಡ ಹೊಸಗಿಣಿ। ಬಂದ್ಹೀಗ
ನೀರೆಲ್ಲಾ ಕಣಕು ಕಗ್ಗಣಕು....।

ನೀರೆಣಿಸಿ ನೀರ ಮೊಗೆಯೊ ಹೊತ್ತಿನಲಿ
ಕಂಗಾಯಿ ಬಿದ್ದು ಕೊಡವೊಡೆದೊ—
ಕಂಗಾಯಿ ಬಿದ್ದು ಕೊಡವೊಡೆದೊ....।

---

*ಮಲೆನಾಡಿನ ತೀರ್ಥಹಳ್ಳಿ ಸಮೀಪದ ಅಕ್ಕಪಕ್ಕದ ಹಳ್ಳಿಗಳಲ್ಲಿ ದೀಪಾವಳಿಯ ಸಮಯದಲ್ಲಿ-ಗಂಡಸರು ಊರಿಂದೂರಿಗೆ ದೀಪವಿಡಿದುಕೊಂಡು ಮನೆಮನೆಗೆ ಹೋಗುವ ಸಂದರ್ಭದಲ್ಲಿ ಹಾಡುತ್ತಾರೆ.

†ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ದೇವಂಗಿ, ಮೇಳಗಿ, ಕೆರೆಕೊಪ್ಪ ಮತ್ತು ತುಂಗಾನದಿ ತೀರದ ಅಕ್ಕಪಕ್ಕದ ಹಳ್ಳಿಗಳಲ್ಲಿ ಪ್ರಚಾರದಲ್ಲಿದ್ದ ಈ ಉತ್ತರದೇವಿಯ ಹಲವು ಹಾಡುಗಳನ್ನು ಸಂಕಲಿಸಿ—ಈ ಸಂಕಲನದಲ್ಲಿ ಸೇರಿಸಿರುತ್ತೇವೆ.

ಕುಂಬಾರ ಮನೆಗ್ಹೋಗಿ ಹೊಸ ಮಡಕೆ ತಕ್ಕೊಂಡು
ನೀರಣಿಸಿ ನೀರು ಮೊಗೆದಿದ್ದೆ....ನಾನು
ನೀರಣಿಸಿ ನೀರು ಮೊಗೆದಿದ್ದೆ....।

ನೀರಣಿಸಿ ನೀರು ತರುವ ಹೊತ್ತಿನಲಿ
ಬಸವಾನವೆತ್ತು ಬೆರಸೀತು । ಅತ್ಯಮ್ಮ
ನಾನು ಬಸಳೆ ಮುಳ್ಳೊಳಗೆ ಹೊರಗೀದೆ....।

ಬಸಳೀಗೆ ಮುಳ್ಳುಂಟೆ ಬಾಳೀಗೆ ಕೆಂಚುಂಟೆ
ಸೊಸೆ ನಿನ ಮಾತು ನಿಜವುಂಟೆ ?—ಎಲೆ ಬಾಲೆ
ಸೊಸೆ ನಿನ ಮಾತು ನಿಜವುಂಟೆ ?

ಎತ್ತಿಗೆ ಮಾತುಂಟೆ ಕತ್ತೆಗೆ ಕೋಡುಂಟೆ
ನಿನ ಮಾತು ನಿಜವುಂಟೆ ?—ಅತ್ಯಮ್ಮ
ನಿನ ಮಾತು ನಿಜವುಂಟೆ ?

ನಾನು ತರುವಾಗ ಇನ್ನು ಸಣ್ಣವಳಲ್ಲೆ
ಇದು ಎಲ್ಲಿ ಕಲಿತೆ ಬಿಡಿಮಾತ ?—ನೀನು
ಇದು ಎಲ್ಲಿ ಕಲಿತೆ ಬಿಡಿಮಾತ ?

ನಿಮ್ಮಲ್ಲಾಡ್ಹೀದೆ ನಿಮ್ಮಲ್ಲೋಡ್ಹೀದೆ
ನಿಮ್ಮಲ್ಲೆ ಕಲಿತೆ ಬಿಡಿಮಾತ—ನಾನು
ನಿಮ್ಮಲ್ಲೆ ಕಲಿತೆ ಬಿಡಿಮಾತ ..।

ನೆಟ್ಟಮಲ್ಲಿಗೆ ನೆಟ್ಟಂಗೆಲ್ಲಿರುವೋದು ?
ದಿನಕೊಂದು ಚಂಬೀಗೆ ಉದಕಾವು । (ಉದಕಾನೆ) ಉದಾರೆ
ಗಿಣ್ಣಿ ಗಿಣ್ಣೀಗೆ ಕುಡಿಯೊಡೆದು । ಅತ್ಯಮ್ಮ

ಕುಡಿಗೊಂದು ಮೊಗ್ಗು ಬಿಡುವಾದು । ಅತ್ಯಮ್ಮ
ಉಗುರುಳ್ಳ ಜಾಣ ಕುಯಿದಾನೆ । (ಕುಯಿದು) ದಂಡೆಯಕಟ್ಟಿ
ತುರುಬುಳ್ಳ ಜಾಣೆ ಮುಡಿದಾಳು....॥

ಹಸಿದು ಬಂದ ಮಗನೀಗೆ ಹಾಲು ಅನ್ನವನಿಕ್ಕಿ
ಉತ್ತರದೇವಿಯೆಂಬ ಸೊಸೆಬೇಡ । ಎಲೆ ಮಗನೆ
ನೀನು ಬಿಟ್ಟು ಬಿಡವಳ ತೌರೀಗೆ....॥

ಬಿಟ್ಟು ಬಿಡುವಾಕೆ ಕುರಿಯೇನೆ ಮುರಿಯೇನೆ ?
ಒಂದ್ವರಹ ಮುಟ್ಟ ತೆರೆಮುಟ್ಟ । ತಂದೋಳ
ನಾನು ಬಿಟ್ಟಿಂಗೆ ಬಿಡಲೆ ಹಡೆದನ್ವ....॥

ಒಂದೇ ವ್ವರಹ ನನ್ನ ಮುರಾವ ಮಾರೂವೆ
ಮೇಲೊಬ್ಳಬಾಲೆ ತರಸೂವೆ । ಕಂದಯ್ಯ
ನೀನು ಬಿಟ್ಟುಬಿಡವಳ ತೌರೀಗೆ....॥

ಬಿಟ್ಟುಬಿಡೋಕೆ ಹಸುವೇನು ಕರುವೇನು ?
ಹತ್ತುಸಾವಿರ ಸಭೆಗೂಡಿ । ತಂದ್ಹೆಣ್ಣ
ಹೇಗಮ್ಮ ನಾನು ಕಳುವಾಲಿ....॥

ಹತ್ತು ಸಾವಿರೆಂಬೋದು ನನ ಬಂಧೀಯ ಬೆಲೆಯಿಲ್ಲಾ
ಬಂಧೀಗೆ ಮೂರ್ಹೆಣ್ಣು ತರುತ್ತೀನಿ । ಮಗನೆ
ನೀನು ಕಳುಹಿ ಬಾರವಳ ತೌರೀಗೆ....॥

ತಾಯಿ ಮಕ್ಕಳವಾದ ಕೇಳಿ ಉತ್ತರದೇವಿ
ಕಣ್ಣೀರ ಕೋಡಿ ಹರಿಸ್ಯಾಳು । (ಹರಿಸಿ) ಉತ್ತರದೇವಿ
ವಿಧಿಕೊಟ್ಟ ಬಾಳ ಜರಿದಾಳು....॥

ಆಚೆರಡು ಹೊಸಮುಂಚ ಈಚೆರಡು ಹೊಸಮುಂಚ
ಎರಡು ಮುಂಚದ ಎಡನಡುವೆ । ನಿಂತುಕೊಂಡು
ಹೋಗ್ತಿನತ್ಯಮ್ಮ ಹೊನ್ನ ತವರೀಗೆ....॥

ಹೋದರೋಗಮ್ಮ ಹೊನ್ನೋಲೆ ಕಿವಿಯೋಳೆ
ಅಟ್ಟಾದ ಮೇಲಿರುವೋ ಚಟ್ಟಕಂಬಳದಣ್ಣ । ನೀನು
ಆಟ್ಟುಂಡು ಹೋಗೆ ಸೊಸೆಬಾಲೆ....॥

ನೀನಾದ್ರು ಉಣ್ಣು ನಿನ್ ಮಗನಿಗಾದ್ರು ಇಕ್ಕು
ಹಾದಿ ಬೀದ್ಯೋರ ಕರೆದಿಕ್ಕು । ಅತ್ಯಮ್ಮ
ನಿನ್ ನಾಳೆ ಬರುವ ಸೊಸೆಗೆ ಮಡೆಗಿಕ್ಕು....॥

ಉಪ್ಪರಿಗೆ ಮೇಲಿರುವೊ ಪುಟ್ಟಾಣಿ ಸೀರೇಯ
ಒಂದುಟ್ಟು ಒಂದು ಮುಸುಕಿಟ್ಟು । ಎಲೆ ಹೆಣ್ಣೇ
ನಿಮ್ಮಪ್ಪಾನ ಮನೆಗೆ ನೀ ನಡೆ ಹೆಣ್ಣೆ... ॥

ನೀವಾರ ಹುಟ್ಟೊಳ್ಳಿ ನಿಮ್ಮಗಳಿಗಾರ ಹುಡ್ಸಿ
ಹಾದಿ ಬೀದ್ಯೋರ ಕರೆದುಡ್ಸಿ । ಅತ್ಯಮ್ಮ
ನಿನ್ ಬರುವ ಸೊಸೆಗೆ ಮಡೆಗಿರ್ಸು....॥

ಅಟ್ಟದ ಮೇಲಿರುವ ಸಣ್ಣಕ್ಕಿ ತಗರಿಬೇಳೇಯ
ಮಾಡಿ ಉಂಡಾರು ಹೋಗೆ ಸೊಸೆಬಾಲೆ—ನೀನು
ಮಾಡಿ ಉಂಡಾರು ಹೋಗೆ ಸೊಸೆಬಾಲೆ....।

ನೀನಾರು ಉಣ್ಣೆ ನಿನ್ನ ಮಗಳಿಗಾದ್ರು ಕರೆದಿಕ್ಕೆ
ಹಾದಿ ಬೀದ್ಯೋರ ಕರೆದಿಕ್ಕೆ । ಅತ್ಯಮ್ಮ
ನಿನ್ ಮುಂದೆ ಬರುವ ಸೊಸೆಗೆ ಮಡಗಿರ್ಸಿ....॥

ಮುಂಚಾದ ಮೇಲಿರುವೊ ಮಾವಯ್ಯ ನೀವು ಕೇಳಿ
ಹೋಯಿತ್ತೀನಿ ಹೊನ್ನ ತೌರಿಗೆ—ಮಾವಯ್ಯ
ನಾನು ಹೋಯಿತ್ತೀನಿ ಹೊನ್ನ ತೌರಿಗೆ....।

ಹೋಗೋಳು ಹೋಯ್ತೀಯೆ ಹೋನ್ನೋಲೆ ಕಿವಿಯೋಳೆ
ನಾನು ಮತ್ತೊಬ್ಳ ಬಾಲೆಯ ತರಬಲ್ಲೆ । ಉತ್ತರದೇವಿ
ನೀ ಹೋಗು ನಿನ್ನ ತೌರಿಗೆ....॥

ಬಾಗಿಲಲ್ಲಿರುವೊ ಮೈದರಸ ನೀವು ಕೇಳಿ
ಹೋಯಿತ್ತೀನಿ ಹೊನ್ನ ತೌರಿಗೆ—ಮೈದಯ್ಯ
ನಾ ಹೋಯಿತ್ತೀನಿ ಹೊನ್ನ ತೌರಿಗೆ....।

ಹೋಗೋಳು ಹೋಯ್ತೀಯೆ ಹೊನ್ನೋಲೆ ಕಿವಿಯೋಳೆ
ಕೆನ್ನೇಲಿ ವಜ್ರ ಹೊಳೆಯೋಳೆ । (ಹೊಳೆಯೊ) ಉತ್ತರದೇವಿ
ನೀವೀಗ್ಹೋಗಿ ಬೆಳಗಾಗ ಬರಬೇಡಿ....॥

(ನಾದಿನಿ, ವಾರಗಿತ್ತಿ, ಅತ್ತಿಗೆ, ಮುಂತಾದವರಿಗೆಲ್ಲಾ ಹೇಳಿ ಉತ್ತರದೇವಿ ತನ್ನ ತವರಿನಿಂದ ತಂದಿದ್ದ.. ತಪ್ಪಲೆ, ಬಿಂದಿಗೆ, ಆರಿವಾಣ ಮುಂತಾದವುಗಳನ್ನು ಕೇಳಲು ಅತ್ತಮ್ಮನ ಬಳಿಗೆ ಬರುತ್ತಾಳೆ.)

ಸಣ್ಣ ತಪ್ಪಲೆ ನಾನೂರು ಮಣಿ ತರದ ತಪ್ಪಲೆ ಐನೂರು
ನಮ್ಮಪ್ಪ ಕೊಟ್ಟ ತಪ್ಪಲೆ ಕೊಡುಬಾರೇ । ಅತ್ಯಮ್ಮ
ನಾ ಹೋಯಿತ್ತೀನಿ ಹೊನ್ನ ತೌರಿಗೆ....॥

ಸಣ್ಣ ಬಿಂದಿಗೆ ಅವನೂರು ದೊಡ್ಡ ಬಿಂದಿಗೆ ಇವನೂರು
ನಮ್ಮಮ್ಮ ಕೊಟ್ಟ ಬಿಂದಿಗೆ ಕೊಡುಬಾರೇ । ಅತ್ಯಮ್ಮ
ನಾ ಹೋಯಿತ್ತೀನಿ ಹೊನ್ನ ತೌರಿಗೆ....।

ಸಣ್ಣ ಅರಿವಾಣ ಐನೂರು ಮಣಿಕದ ಅರಿವಾಣ ಆರುನೂರು
ನಮ್ಮ ತಾಯಿ ಕೊಟ್ಟ ಅರಿವಾಣ ಕೊಡುಬಾರೇ । ಅತ್ಯಮ್ಮ
ನಾ ಹೋಯ್ದಿತೀನಿ ಹೊನ್ನ ತೌರೀಗೆ....॥

(ಹೀಗೆಯೆ—ಸಣ್ಣ ಕುಪ್ಪಿಗೆ, ಸಣ್ಣ ಗುಂಡು, ದೊಡ್ಡ ಗುಂಡು, ವಾಲೆ, ಮುರಾವು, ಕುಪ್ಪಿಗೆ, ಪಟ್ಟ ಮುಂತಾದ ಒಡವೆಗಳನ್ನು ಉತ್ತರದೇವಿ ಕೇಳುತ್ತಾಳೆ.)

ಅಷ್ಟೆಂಬ ಮಾತು ಕೇಳ್ಯಾಳು ಉತ್ತರದೇವಿ
ಕೌಲಿ ಕೊಟ್ಟಗೆ ನಡೆದಾಳೆ—ಉತ್ತರದೇವಿ
ಕೌಲಿ ಕೊಟ್ಟಗೆ ನಡೆದಾಳು....।

ಕೌಲಿ ನೀ ಕೇಳೆ ಕೌಲಿ ಕರು ನೀ ಕೇಳೆ ?
ಹೋಯಿತ್ತೀನಿ ಹೊನ್ನ ತವರೀಗೆ—ನಾನು
ಹೋಯಿತ್ತೀನಿ ಹೊನ್ನ ತವರೀಗೆ....।

ನೀ ಹೋದಾರೆ ಮುರ ಹಾಕೋರ್ಯಾರೆ
ಕರು ಬಿಡೋರ್ಯಾರೆ—ಉತ್ತರದೇವಿ
ಕರು ಬಿಡೋರ್ಯಾರು....।

ಮಾವಯ್ಯ ಮುರ ಹಾಕುತಾರೆ ಅತ್ಯಮ್ಮ ಕರು ಬಿಡುತಾರೆ
ಹೋಯಿತೀನಿ ಹೊನ್ನ ತೌರೀಗೆ—ನಾನು
ಹೋಯಿತೀನಿ ಹೊನ್ನ ತೌರೀಗೆ....।

ನೀ ಹೋಗೊಳೇನೆ ನಾ ಇರೋಳೇನೆ ?
ನಾನು ಬರುತ್ತೀನಿ ನಿನ್ನಿಂದೆ—ಉತ್ತರದೇವಿ
ನಾನು ಬರುತ್ತೀನಿ ನಿನ್ನಿಂದೆ....।

(ಉತ್ತರದೇವಿ ಹೀಗೆಯೆ, ಆನೆ, ಕುದುರೆ, ಎಮ್ಮೆ ಮುಂತಾದ ಪ್ರಾಣಿಗಳಿಗೆ ಹೇಳಿ ಮುಂದೆ ಬರುತ್ತಾಳೆ.)

ನಾನು ಬರುವಾಗ ಕಿತ್ತಲೆಲ್ಲಾ ಕಿರುಸೊಸಿ
ಕಿತ್ತಲಿಗೆ ನೀರೂದು ಸಲುವಿದೆ । ಸೊಸಿಗಳಿರಾ
ನಾನು ಹೋಯಿತ್ತೀನಿ ಹೊನ್ನ ತೌರೀಗೆ । ಸೊಸಿಗಳಿರಾ
ನೀವೆಲ್ಲಾ ಇಂದು ಉರಿದ್ಹೊಗಿ....ಸುವ್ವೀ....।

ನಾನು ಬರುವಾಗ ಸಂಪಿಗೆಲ್ಲಾ ಕಿರುಸೊಸಿ
ಸಂಪಿಗೆಗೆ ನೀರೂದು ಸಲುವಿದೆ । ಸೊಸಿಗಳಿರಾ
ನಾನು ಹೋಯಿತ್ತೀನಿ ಹೊನ್ನ ತೌರೀಗೆ । ಸೊಸಿಗಳಿರಾ
ನೀವೆಲ್ಲಾ ಇಂದು ಉರಿದ್ಹೊಗಿ....ಸುವ್ವೀ....।

(ಉತ್ತರದೇವಿ ತಾನು ಬೆಳಸಿದ ಬಾಳೆ, ಅಡಕೆ, ತೆಂಗು ಮುಂತಾದ ಸಸ್ಯಗಳಿಗೆ ಹೇಳಿ ತನ್ನ ತೌರೀಗೆ ಹೊರಡಲು ಅಣಿಯಾಗುತ್ತಾಳೆ.)

ಏತ್ಯಾಲು ಕಂದಯ್ನ ಇರಿಕ್ಯಾಳು ಚಾಪೇಯ
ಚಂದ್ರ ಚುಕ್ಕೀಯ ಬೆಳಕಲ್ಲಿ । ಉತ್ತರದೇವಿ
ಗೋಳು ಗೋಳೆಂದು ಹೋದಾಳೆ ಅಪ್ಪನ ಅರಮನೆಗೆ ।

ಅಪ್ಪಯ್ಯ ಕದ ತೆಗಿಯೊ ಅಪ್ಪಾಜಿ ಕದ ತೆಗಿಯೊ ?
ನನ್ನಪ್ಪ ನನಗೆ ಕದ ತೆಗಿಯೊ । ಹೊಸಲಲ್ಲಿ
ನಾನು ನಿಲಲಾರೆ ಬಳಲಿ ಬಂದೇನು....॥

ಚಾಪೆ ಹಾಸ್ಯಾದೆ ದೀಪಾವೆ ಲೇಸ್ಯಾದೆ
ನಿಮ್ಮ ಚಿಕ್ಕನ್ಮ ತೋಳ್ಮೇಲೆ ಹೊರಗ್ಯವಳೆ । ಉತ್ತರದೇವಿ
ನೀನು ಹೋಗೆ ನಿಮ್ಮನ್ಮನರಮನೆಗೆ....॥

(ಉತ್ತರದೇವಿ ಕೊನೆಗೆ ದೊಡ್ಡಪ್ಪ, ಚಿಕ್ಕಪ್ಪ, ಅಣ್ಣ, ತಮ್ಮ, ಅಕ್ಕ, ತಂಗಿ ಮುಂತಾದ ಬಂಧುಗಳ ಮನೆಯ ಬಾಗಿಲಿನಲ್ಲೆಲ್ಲಾ ತಿರುಗಿ—ಕೊನೆಗೆ ಯಾರ ಸಹಾಯವು ದೊರೆಯದೆ, ತನ್ನನ್ನು ಚಿಕ್ಕಂದಿನಿಂದ ಸಾಕಿ ಸಲುವಿದ ತನ್ನ ಅಜ್ಜಿಯ ಮನೆಗೆ ಬರುತ್ತಾಳೆ.)

ಎತ್ಯಾಳು ಬಾಲಯ್ನ ಇರಿಕ್ಯಾಳು ಚಾಪೇಯ
ಇಂದ್ರ ಚುಕ್ಕೀಯ ಬೆಳಕಲ್ಲಿ । ಉತ್ತರದೇವಿ
ಗೋಳು ಗೋಳೆಂದು ಹೋದಾಳು ಅಮ್ಮನ ಅರಮನೆಗೆ... ॥

ಅಮ್ಮ ಕದ ತೆಗಿಯೆ ಅಮ್ಮಾಜಿ ಕದ ತೆಗಿಯೆ?
ನನ್ನವ್ವ ನನಗೆ ಕದತೆಗಿಯೆ । ಹೊಸಲಲ್ಲಿ
ನಾನು ನಿಲಲಾರೆ ಬಳಲಿ ಬಂದೇನು ...॥

ಒಂದರಿಭೆ ಹಾಸಿದೆ ಒಂದರಿಬೆ ಹೊಚ್ಚೀದೆ
ಒಂದೊರ್ಷ್ಟು ಷ ನಿನ್ನ ಸಲುವಿವೆ । ಉತ್ತರದೇವಿ
ನನ್ನಾಡು ನಿನಗೆ ಮಡಗಿತ್ತೆ....ಸುವ್ವೀ....।

ಚಟ್ಟಿಯ ಹಾಲಿಗೆ ಬೆಟ್ಟಿನಷ್ಟೆ ತುಪ್ಪಹಾಕಿ
ಹನ್ನೆರಡು ವರುಷ ಸಲುವಿದೆ । ಉತ್ತರದೇವಿ
ನನ್ನಾಡ ನಿನಗೆ ಮಡಗಿತ್ತೆ....ಸುವ್ವೀ....॥

(ಅಜ್ಜಿ ಕದವನ್ನು ತೆರೆದು ದುಃಖದಿಂದ ಬಳಲಿ ಬಂದ ತನ್ನ ಮೊಮ್ಮಗಳನ್ನು ಮನೆಯೊಳಗೆ ಸ್ವಾಗತಿಸಿದಳು.)

ಅಗಣಿಯ ತೆಗೆದಾಳು ಗದ್ದವ ಹಿಡಿದಾಳು
ಗೋಳು ಗೋಳೆಂದು ಅತ್ತಾಳು । ಉತ್ತರದೇವಿ
ಇದು ಏನಮ್ಮ ಎಂದು ಕೇಳ್ಯಾಳು....ಸುವ್ವೀ....।

ಸಟ್ಟೂಂಬೊ ಸರುಹೊತ್ತು ನಿದ್ರೆವೇಳೆಯಲ್ಲಿ
ಇದು ಏನು ಉತ್ತರದೇವಿ ಈ ಕರಮ । ಯಾರಮ್ಮ
ಈ ಗೋಳು ಕೊಟ್ಯಾರು ಒಡಲ ಉರಿಸ್ದೋರು....॥

ನನಗಂಡ ನನಗೆ ಈ ಗೋಳುಕೊಟ್ಟಾನು
ನನ್ನತ್ತೆ ನನ್ನ ಒಡಲ ಉರಿಸ್ಯಾಳು । ಅಮ್ಮಾಜಿ
ನನ್ನ ಮನೆಯಿಂದ ಹೊರಗೆ ದೂಡ್ಯಾರು....॥


ನಿನ್ನ ಹೊಡೆದೋರ ಒಡಲು ಉರಿಯಾಲೀ
ಗಾಣದಿಂಡಿಯಾಗಿ ನುರಿಯಾಲೀ । ಉತ್ತರದೇವಿ
ದೀಪದೆಣ್ಣೆಯಾಗಿ ಉರಿಯಾಲೀ....॥

ನಿನ್ನಬೈದ್ಹೋರ ಕಣ್ಣೆರಡು ಇಂಗಾಲೀ
ಸುಣ್ಣಕುದಿದ್ಹಂತೆ ಕುದಿಯಾಲೀ । ಉತ್ತರದೇವಿ
ದಾಳಿಂಬೆಹಣ್ಣು ಬಿರಿದಂಗೆ ಬಿರಿಯಾಲೀ....॥

(ಇನ್ನು ಉತ್ತರದೇವಿ ಗಂಗಾದೇವಿಯ ಪೂಜಿಸಿದನಂತರ ತಪಸ್ಸು ಮಾಡಿ ನಾಡಿನಮೇಲೆ ಉತ್ತರೆ ಮಳೆಯಾಗಿ ಹರಿದಳು.)

ಅಮ್ಮನ ಕೂಡಿಕೊಂಡು ಉತ್ತರದೇವಿ
ಗಂಗೆಯ ಬಳಿಗೆ ನಡೆದಾಳು । (ನಡೆದು) ನುಡಿದಾಳು
ಗಂಗಮ್ಮ ತಾಯಿ ನನ್ನ ಎಳೆಕೊಳ್ಳೆ....॥

ತಾವರೆ ಎಲೆಮೇಲೆ ತಾನಾಗಿ ಕೂತುಕೊಂಡು
ತಪಸು ಮಾಡ್ಯಾಳೆ ಶಿವನೀಗೆ । ಉತ್ತರದೇವಿ
ನಾಡಮೇಲೆ ಉತ್ತರೆ ಮಳೆಯಾಗಿ ಹರಿದಾಳು....॥



—ಮೂರು

ಪರಿಯಾಪಟ್ಟಣದ ಕಾಫಿಗ

ಮತ್ತು

ಇತರ ಹಾಡುಗಳು





ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ....

ಸಿದ್ದ ಪಟ್ಟಣತಾವ ಶಿವಗಂಗೆ ಮೊದಲು
ಶಿವಗಂಗೆ ಮೊದಲಲ್ಲಿ ಸಂನ್ಯಾಸಿ ಮಠವು
ಸಂನ್ಯಾಸಿ ಮಠದಲ್ಲಿ ಜಂಗಮು ಇರುತಾನೆ—ಜಂಗಮಗೆ
ಕೊಟ್ಟೀಗ ಲಗ್ನಾವ ಮಾಡಯ್ಯ !

ನಾಡಪದಗಳು ನಮ್ಮಲ್ಲಿ ಸಾವಿರಾರು ಇವೆ. ಅವು ವೈವಿಧ್ಯದಿಂದ ಕೂಡಿರುವಷ್ಟೇ, ಭಾವಸೌಷ್ಠವದಿಂದಲೂ ಕೂಡಿವೆ. ಜೀವನದ ಸುಖ ದುಃಖಗಳು, ಕಷ್ಟ ಕಾರ್ಪಣ್ಯಗಳು, ಗೆಲುವು ಸೋಲುಗಳು, ಉಬ್ಬರ ವಿಳಿತಗಳು ಅವುಗಳಲ್ಲಿ ಚಿತ್ರಿತವಾಗಿವೆ. ಅವುಗಳಲ್ಲಿ ಸರಳವಾದ ಮತ್ತು ಸಹಜವಾದ ಶೃಂಗಾರವಿದೆ, ಹೊಡೆದೆಬ್ಬಿಸುವ ವೀರ್ಯವಿದೆ, ಮನಕರಗಿಸುವ ಕರುಣೆ ಇದೆ, ಬೆಳಕು ಹರಿಸುವ ತತ್ವವಿದೆ, ಬಾಳನ್ನು ಕುದುರಿಸುವ ಭಕ್ತಿಯಿದೆ. ಈ ಹಾಡುಗಳು ಅವರಿಗೆ ವೇದ, ಪುರಾಣ, ಪುಣ್ಯಕಥೆ, ಪ್ರಣಯಲೀಲೆ. ಅವು ಹಳ್ಳಿಯವರನ್ನು ಸುಮನಸ್ಕರನ್ನಾಗಿಯೂ ಸಂಮನಸ್ಕರನ್ನಾಗಿಯೂ ಮಾಡುವ ಸಾಮಾಜಿಕ ಹಾಗೂ ಸಾಮೂಹಿಕ ಸಾಹಿತ್ಯ.

ಈ ಹಾಡುಗಳಲ್ಲಿ ಕೆಲವು ಸಾಮಾನ್ಯವಾದುವು. ಆದರೆ ಕೆಲವು ಉತ್ತಮ ಸಾಹಿತ್ಯವಾಗುವಷ್ಟು, ವಿಶ್ವಸಾಹಿತ್ಯದಲ್ಲಿ ಸ್ಥಾನಪಡೆಯುವಷ್ಟು ಸೊಗಸಾಗಿವೆ. ಅಲ್ಲಿಯ ಮಾತೊಂದೊಂದರಲ್ಲೂ ಜೀವ ಮಿಡಿಯುತ್ತಿದೆ, ಲಯ ಮಿಟುತ್ತಿದೆ. ಗುಡ್ಡದ ತೊರೆ ಕುಣಿದು ಕುಪ್ಪಳಿಸಿ ಕೊನೆಗೆ ಮಟ್ಟವಾದ ಮೈದಾನವನ್ನು ಸೇರಿ ಪ್ರಶಾಂತವಾಗಿ ಹರಿಯುವಂತೆ, ಇಲ್ಲಿ ಭಾವವೂ ಪುಟಪುಟನೆ ನೆಗೆದು ನಲಿದು ಹಾಡು ಮುಗಿಯುವ ಹೊತ್ತಿಗೆ ಭಾವಸಮಾಧಿ ಮುಟ್ಟುತ್ತದೆ.

—ಶ್ರೀ ಜಿ. ಹನುಮಂತರಾವ್, ಎಂ.ಎ. (ವಿಜ್ಞಾನಭಿಕ್ಷು)

ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ*

ಹುಟ್ಟಿದಾಳೆಗೌರಮ್ಮ ಭೂಲೋಕದಲ್ಲಿ ।
ಅಷ್ಟಾಗಿ ಇಷ್ಟಾಗಿ ತಾ ದೊಡ್ಡೋಳಾಗಿ ।
ಹನ್ನೆರಡು ವರುಷಾವೆ ತುಂಬಿತೆಗೌರಿ ।
ಗೌರಮ್ಮನ ತಾಯಿ ತಂದೆ ಏನಂದರಾಗ ।
ಶ್ರೀಗೌರಿ ಹುಟ್ಟಿದಳು ಯಾರಿಗೆ ಕೊಡಲೆ ।
ಬಾಲೆ ಗೌರೇನೆಂದಾಳು ಯಾರೀಗೆ ಕೊಡಲೆಂದಾರೆ ।
ಬ್ರಾಹ್ಮಣರಿಗೆ ಕೊಡಲ್ಹೇನೆ ಮಗಳೆ ಗೌರಮ್ಮ ?
ಬ್ರಾಹ್ಮಣರ ಸಹವಾಸ ಹೇಳುವೆನು ಕೇಳೋ ।
ನಿತ್ಯ ತಣ್ಣೀರಲ್ಲಿ ನಾ ಬೀಳಲಾರೆ ।
ದಿನಕೊಂದು ಮಡಿ ಸೀರೆ ನಾ ಉಡಲಾರೆ ।
ಹೊತ್ತಿಗೆ ಒಪ್ಪತ್ತು ನಾನ್ಹುಣ್ಣಲಾರೆ ।
ಬ್ರಾಹ್ಮಣರ ಸಹವಾಸ ಬೇಡವೋ ತಂದೆ ।

ಇನ್ನು ಯಾರಿಗೆ ಕೊಡಲೆ ಮಗಳೆ ಗೌರಮ್ಮ ।
ಶಿವ ಭಕ್ತರಿಗೆ ಕೊಡಲೇನೆ ಶಿವಬಾಲಗೌರೀ ।
ಶಿವಭಕ್ತರ ಬಾಳು ತಂದೆ ಹೇಳುವೆನು ಕೇಳು ।
ಶಿವಭಕ್ತರ ಶಿವಪೂಜೆ ನಾ ಮಾಡಲಾರೆ ।
ಹರಿಭಕ್ತರ ಗುರಪೂಜೆ ನಾ ಮಾಡಲಾರೆ ।
ಲಿಂಗಕೆ ವಸ್ತ್ರವ ನಾ ಸುತ್ತಲಾರೆ ।
ಜಂಗಮರ ಕಾಲೀಗೆ ನಾ ಬೀಳಲಾರೆ ।
ಶಿವಭಕ್ತಾರ ಸಹವಾಸ ಒಲ್ಲೆನು ತಂದೆ !

---

*ಈ ಬಗೆಯ ಕೆಲವು ಹಾಡುಗಳನ್ನು ಬಯಲುನಾಡಿನ ಹಳ್ಳಿಗಳಲ್ಲಿ ದೊಂಬಿದಾಸರು ಏಕನಾದವನ್ನು ಹಿಡಿದುಕೊಂಡು ಮನೆಮನೆಗೂ ಬಂದು ಹಾಡಿ, ರೈತರನ್ನು ಮೆಚ್ಚಿಸಿ ಭಿಕ್ಷೆಯನ್ನು ಪಡೆಯುವಾಗ ಹಾಡುವರು.

ಇನ್ನು ಯಾರಿಗೆ ಕೊಡಲೆ ಮಗಳೆ ಗೌರಮ್ಮ ?
ಕೋಮಟಿಗೆ ಕೊಡಲೇನೆ ಮಗಳೆ ಗೌರಮ್ಮ ।
ಕೋಮಟಿಯರ ಸಹವಾಸ ಹೇಳುವೆನು ತಂದೆ ।
ಗೋಮಟಿಗರ ತರಗೆಲೆ ಗೋಟಡಿಕೆ ನಾ ಮಾರಲಾರೆ ।
ಜೂಜೀನ ವ್ಯಾಪಾರ ನಾ ಮಾಡಲಾರೆ ।
ಕಾಸಿ ಕಾಸಿಗೆ ಲೆಕ್ಕ ನಾ ಒಪ್ಪಿಸಲಾರೆ ।
ಕೋಮಟಿಗ ವ್ಯಾಪಾರ ನಾ ಒಲ್ಲೇನು ತಂದೆ ।

ಇನ್ನು ಯಾರಿಗೆ ಕೊಡಲೆ ಮಗಳೆ ಶ್ರೀಗೌರೀ ।
ಒಕ್ಕಲಿಗರಿಗೆ ಕೊಡಲೇನೆ ಮಗಳೆ ಗೌರಮ್ಮ ?
ಒಕ್ಕಲಿಗರ ಬಾಳು ನಾ ಹೇಳುವೆನು ಕೇಳಪ್ಪ ।
ಒಕ್ಕಲಿಗರ ಹೊಲಗಳ ನಾ ಗೆಯ್ಯಲಾರೆ ।
ಹೊಲದಲ್ಲಿ ಕಳೆ ಸೆತ್ತೆ ನಾ ಕೀಳಲಾರೆ ।
ದಿನಕೆ ನಾಗಳ ರಾಗಿ ನಾ ಬೀಸಲಾರೆ ।
ದಿನಕೆ ಮೂಗಳ ಬತ್ತ ನಾ ಕುಟ್ಟಲಾರೆ ।
ಹಟ್ಟಿ ಮುಂದಲ ಕಸವ ನಾ ತಿಪ್ಪೆಗ್ಹೊರಲಾರೆ ।
ಆರು ಗೆಯ್ಯೋತಕ್ಕೆ ನಾ ಮುದ್ದೆ ಹೊರಲಾರೆ ।
ಒಕ್ಕಲಿಗರ ಸಹವಾಸ ನಾ ಒಲ್ಲೆನು ತಂದೆ ।

ಇನ್ನು ಯಾರಿಗೆ ಕೊಡಲೇ ಮಗಳೆ ಶ್ರೀಗೌರಿ ?
ತುರುಕರಿಗೆ ಕೊಡಲೇನೆ ಮಗಳೆ ಗೌರಮ್ಮ ।
ಅಯ್ಯೋ! ತುರುಕಾರ ಬಾಳು ನಾ ಹೇಳುವೆನು ಕೇಳಪ್ಪ!
ತುರುಕ ಬುರಕಿಲಿ ನಾ ಇರಲಾರೆ ।
ತುರುಕರ್ಹತ್ತೊ ಕುದುರೆ ನಾನ್ಹತ್ತಲಾರೆ ।
ತುರುಕರ ಮುಚ್ಚಳದಲ್ಲಿ ನಾ ತಿನ್ನಲಾರೆ ।
ತುರುಕರ ಒಣರೊಟ್ಟಿ ನಾ ಕಡಿಯಲಾರೆ ।

ತುರುಕರ ದಂಡಿನಿಂದೆ ನಾ ತಿರುಗಲಾರೆ ।
ತುರುಕರ ಸಹವಾಸ ನಾ ಒಲ್ಲೆನು ತಂದೆ ।

ಅಮ್ಮ ಕುಂಬಾರರಿಗೆ ಕೊಡಲೇನೆ ಮಗಳೆ ಶ್ರೀ ಗೌರಿ ?
ಕುಂಬಾರರ ಸಹವಾಸ ಹೇಳುವೆನು ಕೇಳಪ್ಪ ।
ಕುಂಬಾರರ ಮಣ್ಣಿನ ಮುದ್ದೆ ನಾ ತುಳಿಯಲಾರೆ ।
ಕುಂಬಾರರ ಮುಚ್ಚಿಳವ ನಾ ತಟ್ಟಲಾರೆ ।
ಆವೀಗೆ ಸೌದೆಯ ನಾ ಹೊರಲಾರೆ ।
ಸಂತೆಗೂ ಜಾತ್ರೆಗೂ ನಾ ತಿರುಗಲಾರೆ ।
ಮಡಿಕೆ ಮಾರೋತಾವ ಮಾತು ಕೇಳಲಾರೆ ।
ಕುಂಬಾರ ಸಹವಾಸ ಒಲ್ಲೇನು ನಾ ತಂದೆ ।

ಕುರುಬರಿಗೆ ಕೊಡಲೇನೆ ಮಗಳೆ ಶ್ರೀಗೌರಮ್ಮ ? ।
ಕುರುಬಾರ ಸಹವಾಸ ಹೇಳುವೆ ತಂದೆ ।
ಕುರುಬರ ಸೆರಿಗಂಜಿ ನಾ ಮಾಡಲಾರೆ ।
ಕುರುಬರ ಸೆರಗಂಜಿ ನಾ ಕಾಸಲಾರೆ ।
ಕುರುಬರ ಕಂಬಳಿಯ ನಾ ನೇಯಲಾರೆ ।
ಕುರುಬರ ಕಂಬಳಿಯ ನಾ ಮಾರಲಾರೆ ।
ಕುರುಬರ ಸಹವಾಸ ನಾ ಒಲ್ಲೇನು ತಂದೆ ।

ನಾಯ್ಕರಿಗೆ ಕೊಡಲೇನೆ ಮಗಳೆ ಶ್ರೀಗೌರಮ್ಮ ?
ನಾಯ್ಕರ ಸಹವಾಸ ಹೇಳುವೆನು ಕೇಳಪ್ಪ ।
ಅಡವಿ—ಬೆಟ್ಟವ ತಿರುಗಿ ನಾ ಹುಡುಕಲಾರೆ ।
ನಾಯ್ಕರ ಬೇಟೆಯ ನಾ ಆಡಲಾರೆ ।
ನಾಯ್ಕರ ಬಿಲ್ಲು—ಅಂಬು ನಾ ಸೇದಲಾರೆ ।
ಬೇಡರ ಸಹವಾಸ ಒಲ್ಲೇನು ನಾ ತಂದೆ ।

ಗೊಲ್ಲರಿಗೆ ಕೊಡಲೇನೆ ಕಲ್ಯಾಣಿ ಶ್ರೀಗೌರಿ ?
ಗೊಲ್ಲರ ಸಹವಾಸ ಹೇಳುಮೆನು ಕೇಳೊ ।
ಗೊಲ್ಲರ ಗೋವಿನ್ಹಿಂದೆ ನಾ ತಿರುಗಲಾರೆ ।
ಗೊಲ್ಲರ ಹಾಲು ಮೊಸರ ನಾ ಕಡೆಯಲಾರೆ ।
ಗೊಲ್ಲರ ಸಹವಾಸ ಒಲ್ಲೇನು ನಾ ತಂದೆ ।

ಇನ್ನು ಯಾರಿಗೆ ಕೊಡಲೆ ಮಗಳೆ ಶ್ರೀಗೌರಿ ?
ಅಮ್ಮ ಜಾತಿ ನೀತಿಗಳನ್ನೆಲ್ಲಾವ ಏಣಿಸಿ ಕೊಟ್ಟೆ ।
ಕುಲವ ಗೋತ್ರವನ್ನೆಲ್ಲಾ ಒಪ್ಪಿಸಿಕೊಟ್ಟೆ ।
ಕರೆಯಮ್ಮ ಎಲೆಗೌರಿ ಯಾರ ಕರೆತೀಯೆ ।
ಮೆಚ್ಚಮ್ಮ ಎಲಾ ಗೌರಿ ಯಾರ ಮೆಚ್ಚೀಯೇ ।

ಕೇಳಯ್ಯ ನಮ ತಂದೆ— ದಕ್ಷ ಬ್ರಹ್ಮನೆ
ಸಿದ್ದ ಪಟ್ಟಣ ತಾವ ಶಿವಗಂಗೆ ಮೊದಲು
ಶಿವಗಂಗೆ ಮೊದಲಲ್ಲಿ ಸಂನ್ಯಾಸಿ ಮಠವು....
ಸಂನ್ಯಾಸಿ ಮಠದಲ್ಲಿ ಜಂಗಮನಿರುತಾನೆ ।
ಜಂಗಮಗೆ ಕೊಟ್ಟೀಗ ಲಗ್ನಾವ ಮಾಡಯ್ಯ ।

ಅಂಥ ಜಂಗಮಯ್ನ ನೀ ಹೇಗೆ ಕುರಿತಮ್ಮ ।
ಉಣ್ಣೋಕೆ ತಣಿಗಿಲ್ಲಾ ಮಣ್ಣು ಕೊಪ್ಪರಿಕೆ ।
ಧರಿಸೋಕೆ ಗಂಧವಿಲ್ಲ ಕಾಡು ವಿಭೂತಿ ।
ಹತ್ತೋಕೆ ಕುದುರಿಲ್ಲಾ ಮುದಿಯೆತ್ತು ಶಿವಗೆ ।
ಇಡುವಕೆ ಒಡವಿಲ್ಲಾ ನಾಗರ ಹಾವುಗಳು ।
ಅಂತಹ ಜಂಗಮನನ್ನು ನೀ ಹೇಗೆ ಒಲಿದಮ್ಮ ?
ಮಲಗೋಕೆ ಮಂಚವಿಲ್ಲಾ ನೆಲವೆ ಹಾಸಿಗೆ ।
ಹೆಬ್ಬುಲಿಚರ್ಮದಕಾಡು ಜಂಗಮನನ್ನು—
ನೀ ಹೇಗೆ ಒಲಿದ್ಹೇಳು ಮಗಳೆ ಶ್ರೀಗೌರಿ ?

ಕಣ್ಣೀಗೆ ಬಟ್ಟೆ ಕಟ್ಟ ಕಾಡಿಗೆ ಬಿಟ್ಟಾಗ ।
ಅದು ಬೆಟ್ಟ ಇದು ಬೆಟ್ಟ ನಡುವೆ ಹನ್ನೆರಡು ಬೆಟ್ಟ ।
ಹನ್ನೆರಡು ಬೆಟ್ಟದ ನಡುವೆ ಕುಂತಾಳೆ ಗೌರಿ ।
ಸೂಜೀಯ ಕೊನೆಗ್ಹೇಳು ದಬ್ಬಳವೆ ನಿಲಿಸಿ ।
ದಬ್ಬಳದ ಗೊನೆಗೊಂದು ನಿಂಬೆಹಣ್ಣು ಮಡಗಿ ।
ಶ್ರೀಪಾದ ಮೇಲಾಗಿ ಶಿರಸು ಕೆಳಗಾಗಿ ।
ಶಿವ ! ಶಿವ ! ಅಂದಾಳು ಶಿವನ ಕುರಿತಾಳು ।

ಇಲ್ಲಿ ಹಿಡಿದ ತಪಸು ಶಿವನಿಗೆ ಮುಟ್ಟಿ ।
ನಾಗರ ಹಾವುಗಳಿಡಿದು ನಡುಕಟ್ಟು ಕಟ್ಟಿ ।
ಹೆಬ್ಬಾವುಗಳಿಡಿದು ಜನಿವಾರ ಹಾಕಿ ।
ಒಳ್ಳೆಮುನಿ ಮುದಿ ಜಂಗಮ ಆದಾನು ಸ್ವಾಮಿ ।
ಕೊರಳಲ್ಲಿ ರುದ್ರಾಕ್ಷಿ ಧರಿಸೀದ ಸ್ವಾಮಿ ।
ಕಾಲಿಗೆ ಮುನ್ನೂರು ಜಂಗು ಬಿಗಿದಾನು ।
ಮುಂಗೈಲಿ ಜೋಳೀಗೆ ಧರಿಸ್ಹೀದ ಸ್ವಾಮಿ ।
ಗೌರಿ ಇದ್ದ ಬಳಿಗ್ಹೀಗ ಬಂದಾನು ಸ್ವಾಮಿ ।

ಗುರು ಧರ್ಮ ಕೋರಣ್ಯ ಭಿಕ್ವಾ ನೀಡೆಂದಾ ।
ಅಲ್ಲಡಿದ ತಪಸೀಗೆ ಗಕ್ಕಾನೆ ಬಿಟ್ಟು ।
ಕಾಡಿನಲ್ಲಿ ಸ್ವಾಮಿ ನಾನು ಏನು ಭಿಕ್ವಾದ ನೀಡಾಲೀ ।
ಕನ್ನೆ ಭಿಕ್ವಾವು ನನಗೆ ನೀಡಲೇಬೇಕೆಂದಾ ।
ಆಗ ತಾಳಿದಸ್ವಾಮಿ ಜಂಗಮ ರೂಪವು ।
ನಿನುದೊಂದು ನಿಜರೂಪು ನಾನ್ಹರಿಯದಾದೆ ।

ನಡಿಯಾಲ ಎಲಾಗೌರಿ ಮಠಕೆ ಹೋಗೋಣಾ ।
ಶಿವರಾಯ ಮುಂದಾಗಿ ಗೌರಮ್ಮ ಹಿಂದೆ ।
ಇಬ್ಬರು ಜೊತೆಯಾಗಿ ಮಠಕೆ ಬಂದಾರು ।

ಆಕಾಶವೇಣಷ್ಟು ಚಪ್ಪರ ಹಾಕಿದಾರು ।
ಭೂಮಿ ತಾಯಿಯಷ್ಟು ಹಸೆ ಜಗಲಿ ಬರೆದು ।
ದೇವ ದೇವೊಕ್ಕಾಲ ಅಲ್ಲಿಗೆ ಕರೆಸಿ ।
ದೊಡ್ಡ ದೊಡ್ಡ ಮೂರ್ತಿಗಳೆಲ್ಲಾ ತೋರಣಕಟ್ಟಿ ।
ಚಿಕ್ಕ ಚಿಕ್ಕ ಮಾತಿನಲ್ಲಿ ಸಾಸುವೆ ಇಟ್ಟಾರು ।
ಧಾರೆ ಮಹೋರ್ತವೂ ಈಗ ಆಯಿತು ಅಲ್ಲಿ ।
ಶ್ರೀ ಗೌರಿ ತಂದೆ ತಾಯಿಗಳ ಅಲ್ಲಿಗೆ ಕರೆಸಿ ।
ಲಗ್ನಾವು ಆಯಿತು ಗೌರೀಗೂ ಶಿವಗೂ ।



ನುಳೆರಾಯ-ಮೂರ್ಹೆಣ್ಣು

ಗರುಡಾನ ಕೊರಳೀಗೆ–ಪದಕಾವ ಕಟ್ಯಾನೆ ಸುವ್ವಲಾಲೀ
ನೀ ಹೋಗಿ ಗರುಡಾಳ–ಕರಿಯೋಳು ಮೂರ್ಹೆಣ್ಗೆ ಸುವ್ವಲಾಲೀ
ನೀ ಪದಕಾವ ಕೊಟ್ಟು ಬಾರೋ ಸುವ್ವಲಾಲೀ

Folk literature is essentially the voice of the people. The peasants toiling in the fields, the cowherd tending his cattle, the labourer working in the farm and the women doing domestic duties–all sing in a spontaneity of joy that is integral to their very being. These songs spring from the hearts of the People. They sing of their daily work, of their sorrows, their delights, their happiness and their longings, and know no inhibitions. Their life is simple. Their language is also simple, a blend of meaning and rhythm. Theyfollow nature and nature follows them, as it were.

The panorama of Karnataka folk-lore ranging from more simple songs to miraculous plays make a fascinating study. This is literature produced spontaneously by the people, showing their innate love of colour, rhythm and music. It has been said that a nation's ballads are more important than its laws. The folk-songs of India are important not merely for their music, charm and variety; they closely reflect the lives of the people, and are a valuble record of our cultural growth.

—SRI CHANDRIKA GUTTAL

ಮಳೆರಾಯ-ಮಾರ್ಹೆಣ್ಣು*

ಸುವ್ವೀ ಸುವ್ವಮ್ಮ ಲಾಲೆ ಸುವ್ವಲಾಲೀ

ಜಾಣೇ ಜಾಗರದ್ಹೆಣ್ಣೆ ,,
ಆರು ಜನ ಗೆಣತ್ತೀರು ,,
ಅವರು ಉಯ್ಯಾಲೆನಾಡುತಾರೆ ,,
ಆರು ಜನ ಅಣ್ಣದೀರು ,,
ನನಗೆ ಉಯ್ಯಾಲೆ ಹಾಕಿಕೊಡಿ ,,
ಉಯ್ಯಾಲೆನಾಡುವಾಗ ,,
ಮೂಡಲಿಂದ ಮಳೆಬಂತು ,,
ಈಗ ಬಾರೊ ಮಳೆರಾಯ ,,
ನೀನು ರಾತ್ರೀಕೆ ಬಾರಪ್ಪ ,,
ಅಂಗಂದ ಮಾತೀಗೆ ,,
ಬಿದ್ದ ಮಳೆರಾಯ ,,
ಹಿಂದಾಕೆ ಹೋದಾನು ,,
ಅವರು ಆರು ಜನ ಅಣ್ಣದೀರು ,,
ಅವರು ಉಯ್ಯಾಲೆ ನಾಕ್ಯಾರೆ ,,
ಕಿರಿಯೋಳು ಮಾರ್ಹೆಣ್ಣು ,,
ಅವಳು ಅಡಿಗ್ಹೇಯ ಮಾಡ್ಯಾಳು ,,
ಅವರು ಆರು ಜನ ಅಣ್ಣದಿರಿಗೆ ,,
ಅಡಿಗೇಯ ಮಾಡ್ಯಾಳು ,,
ಅವಳು ಊಟಾಕೆ ಬಡಿಸ್ಯಾಳು ,,
ಊಟಾಕೆ ಬಡಿಸ್ಯಾಳು ,,
ಅವಳು ಹೊರಟು ಬಂದಾಳು ,,
ಮಾರ್ಹೆಣ್ಣು ಹೊರಟು ಬಂದಾಳು ,,

---

*ಈ ತರಹದ ಹಾಡುಗಳನ್ನು ಬಯಲುನಾಡಿನ ಹಳ್ಳಿಗಳಲ್ಲಿ—ಬೇಸಗೆ ಕಾಲದಲ್ಲಿ ಹೆಂಗಸರು ಸಂತೋಷವಾಗಿ ಕಾಲ ಕಳೆಯಲು ಹಾಡುವರು.

ಅರಮನೇಲಿ ಉಯ್ಯಾಲೆನಾಡುತಾಳೆ ಸುವ್ವಲಾಲೀ
ಮಾರ್ಹೆಣ್ಣು ಉಯ್ಯಾಲೆನಾಡುತಾಳೆ ,,
ಮಳೆರಾಯ ಬಂದಾನೆ ,,
ಮಳೆರಾಯ ಬಂದೋನು ,,
ಕಿರಿಯೋಳು ಮಾರ್ಹೆಣ್ಗೆ ,,
ತೆಗಿಯೆ ಅಗಣೀಯ ,,
ಯಾರಪ್ಪ ನೀವೆಂದು ,,
ಎಂತಪ್ಪ ನೀವೆಂದು ,,
ನೀವು ಉಯ್ಯಾಲೆನಾಕುವಾಗ ,,
ಇದು ಬರೊ ಮಳೆರಾಯ ,,
ನೀನು ರಾತ್ರೀಕೆ ಬಾರಪ್ಪ ,,
ಅದಕೆ ಈಗ ಬಂದಿದ್ದೀನಿ ,,
ತೆಗಿಯೆ ಮಾರ್ಹೆಣ್ಣೆ ಅಗಣೀಯಾ ,,
ಅಗಣೀಯ ತೆಗೆದಾಳು ,,
ಅವಳು ಮಂಚಾವನಾಕ್ಯಾಳು ,,
ಮಳೆರಾಯ ಮಾರ್ಹೆಣ್ಣು ,,
ಸಂತೋಷ ಪಟ್ಟಾರು ,,
ಆಗ ಮಳೆರಾಯ ,,
ನಾನು ಹೋಗುಷ್ಟೀನಿ ಹೊರಟಾನು ,,
ಇಂದು ಹೋದ ಮಳೆರಾಯ ,,
ಮತ್ತೆಂದು ಬಂದೀರೊ ,,
ನಾನು ಬರೋದಿಲ್ಲಾ ,,
ನನ್ನ ಗರುಡಾನ ಕೈಯಲ್ಲಿ ,,
ಪದಕಾವ ಕಳಿಸೇನು ,,
ನೀನಾದ್ರೂ ಈಸಿಕೋ ,,

ಅಂಗೆಂದು ಮಳೆರಾಯ	ಸುವ್ವಲಾಲೀ
ಅವನು ಹೊರಟಾನು ಹೋದಾನು	,,
ಅವನು ಹೋದಾನು ಮಳೆರಾಯ	,,
ಗರುಡಾನ ಕೊರಳೀಗೆ	,,
ಪದಕಾವ ಕಟ್ಯಾನೆ	,,
ನೀ ಹೋಗಿ ಗರುಡಾಳ	,,
ಕಿರಿಯೋಳು ಮಾರ್ಹೆಣ್ಗೆ	,,
ನೀ ಪದಕಾವ ಕೊಟ್ಟು ಬಾರೊ	,,
ಓಡೋಡಿ ಬರುತಾನೆ	,,
ಕತ್ತಲೆ ಹೊತ್ತಾಯಿತು	,,
ಮಳೆರಾಯ್ನ ಹಳೆಸೂಳೆ	,,
ಗರುಡಾಳನ ಕಂಡಾಳೆ	,,
ಬಾರಪ್ಪ ಗರುಡಾಳ	,,
ಹೊತ್ತು ಮುಳುಗೀತು	,,
ಈವೊತ್ತು ತಳಿಗಿದ್ದು	,,
ನೀ ನಾಳೀಕೆ ಹೋಗುವಂತೆ	,,
ಅಂಗಂದ ಮಾಷ್ಟೀಗೆ	,,
ಆಗ ಗರುಡಾಳ ಉಳಿದಾನು	,,
ಆಗ ಸೂಳೆ ನೀರನ್ನೆ ಕಾಸ್ಯಾಳೆ	,,
ಅಡಿಗ್ಹೋಯ ಮಾಡ್ಯಾಳೆ	,,
ಬಾರಪ್ಪ ಗರುಡಾನೆ	,,
ನೀನು ಎಷ್ಟು ಯೋಜನದಿಂದ	,,
ನೀನು ರೆಕ್ಕೆ ಅಲ್ಲಾಡಿಸಿ	,,
ನೀನು ಕಾಲಾನೆ ಆಡೀಸಿ	,,
ಎಷ್ಟು ಸೊಡಿರುವುದು	,,

ನೀನು ತಾನಾವ ಮಾಡಪ್ಪ	ಸುವ್ವಲಾಲೀ
ತಾನಾವೆ ಮಾಡಪ್ಪ	,,
ಮಡಿಯನ್ನೆ ಉಡಪ್ಪ	,,
ಸೂಳೆ ಅಂಗಂದ ಮಾತೀಗೆ	,,
ಗರುಡಾಳ ಎದ್ದಾನು	,,
ಅವನು ಪದಕಾವ ತೆಗೆದಾನು	,,
ಅವನು ಗೂಟಾಕೆ ನೇತಾನೆ	,,
ಅವನು ತಾನಾವ ಮಾಡ್ಯಾನೆ	,,
ತಾನಾವ ಮಾಡ್ದೋನು	,,
ಅವನು ಮಡಿಯನ್ನೆ ಉಟ್ಟಾನೆ	,,
ಬಾರಪ್ಪ ಗರುಡಾನೆ	,,
ಊಟಾವ ಮಾಡಾಕೆ	,,
ಅವನು ಒಳಗೇಯ ಹೋದಾನು	,,
ಸೂಳೆ ಊಟಾಕೆ ನೀಡ್ಯಾಳೆ	,,
ಮಳೆರಾಯ್ನ ಹಳೆಸೂಳೆ	,,
ಅವುನ್ಗೆ ಊಟಾಕೆ ನೀಡ್ಯಾಳೆ	,,
ಅವಳು ಒಳಗಿನಿಂದ ಓಡಿ ಓಡಿ	,,
ಓಡ್ಹೋಡಿ ಬಂದಾಳು	,,
ಗೂಟದ ಪದಕಾವ	,,
ಪದಕಾವ ಕಯ್ಯೀಗೆ	,,
ತಕ್ಕೊಂಡು ನೋಡ್ಯಾಳೆ	,,
ಹೊಸ ಪದಕ ತಕ್ಕೊಂಡು	,,
ಅವಳು ಹಳೆ ಪದಕ ನೇತಾಕೆ	,,
ಆಗ ಗರುಡಾನು ಊಟಾವ ಮಾಡ್ಯಾನು	,,
ಅವನು ನಿದ್ದೇಯ ಮನಿಗ್ಯಾನೆ	,,

ಆಗ ಬೆಳಕರಿಯಾಕೆ ಬಂತು	ಸುವ್ವಲಾಲೀ
ಅಕ್ಕಯ್ಯ ಅಕ್ಕಯ್ಯ	,,
ನಾ ಹೋಗಿ ಬರುವೆ ನಾನೆಂದು	,,
ನಡಿಯಪ್ಪ ಗರುಡಾನೆ	,,
ನೀನು ಹೋಗಿ ಬೇಕಾದ್ರೆ ಇಲ್ಲೆ ಬಾರಪ್ಪ	,,
ಆಗ ಗರುಡಾನು	,,
ಪದಕಾವ ತೆಗೆದಾನು	,,
ಪದಕವ ತೆಗೆದು	,,
ಕೊರಳೀಗೆ ಕಟ್ಟಕೊಂಡು	,,
ಹೊರಟಾನು ಗರುಡಾನು	,,
ಕಿರಿಯೋಳು ಮಾರ್ಹೆಣ್ಣಿನ	,,
ಅವನು ಅರಮನೆಗೆ ಬಂದಾನು	,,
ಕಿರಿಯೋಳೆ ಅಕ್ಕಯ್ಯ	,,
ನೀ ತೆಗಿಯೆಂದ ಅಗಣೇಯಾ	,,
ಯಾರಪ್ಪ ನೀನೆಂದು	,,
ನೀನೆಂತಪ್ಪ ನೀನೆಂದು	,,
ನಾನು ಮಳೆರಾಯ್ನ ಬಾಮೈದ	,,
ನಾನು ನಿನ್ನ ಕಿರಿ ತಮ್ಮ	,,
ಬೇಗೆದ್ದು ತೆಗಿಯಕ್ಕ	,,
ನೀನು ರನ್ನಾದ ಅಗಣೇಯಾ	,,
ಅಗಣೇಯ ತೆಗೆದಾಳು	,,
ಅವಳು ನೀರನ್ನೆ ಕಾಸ್ಯಾಳು	,,
ಅವಳು ಅಡಿಗ್ಹೋಯ ಮಾಡ್ಯಾಳು	,,
ಬಾರಪ್ಪ ಗರುಡಾನೆ	,,
ನೀನು ತಾನಾವ ಮಾಡಪ್ಪ	,,
ಎಷ್ಟು ಯೋಜನದಿಂದ	,,

ನೀನು ರೆಕ್ಕೇಯ ಅಲ್ಲಾಡಿಸಿ	ಸುವ್ವಲಾಲೀ
ರೆಕ್ಕೇಯ ಅಲ್ಲಾಡಿಸಿಕೊಂಡು	,,
ನೀನು ಕಾಲಾನೆ ಅಲ್ಲಾಡಿಸಿಕೊಂಡು	,,
ನೀನು ಸೋತು ಬಂದಿರುವೆ	,,
ಬಾರಪ್ಪ ತಾನಾವ ಮಾಡಪ್ಪ	,,
ತಾನಾವ ಮಾಡ್ಯಾನೆ	,,
ಅವನು ಮಡಿಯಾನೆ ಉಟ್ಟಾನೆ	,,
ಊಟಾಕೆ ಬಡಿಸ್ಯಾಳೆ	,,
ಅಕ್ಕಯ್ಯ ಅಕ್ಕಯ್ಯ	,,
ಮಾವಯ್ಯನಾದಾರೆ	,,
ಪದಕಾವ ಕಳಿಸ್ಯವ್ರೆ	,,
ನೀನು ಪದಕಾವ ತಗಳವ್ವ	,,
ಪದಕಾವ ತಕ್ಕೊಂಡು	,,
ಅವಳು ತಿರುತಿರುಗಿ ನೋಡ್ಯಾಳೆ	,,
ಒಳ್ಳೆ ಪದಕಾವ ಕಳುಹಿತಿನೆಂದಾರು	,,
ಅಂಗೆಂದು ಮಾರ್ಹೆಣ್ಣು	,,
ಹಳೆ ಪದಕಾವ ಕಳಿಸ್ಯವ್ರೆ	,,
ಅವಳು ಕೈಯಾಗೆ ಹಾಕ್ಯವಳೆ	,,
ಹೊಸಗಿ ಉಂಡೆ ಕಟ್ಟ	,,
ಅವಳು ಸೊಂಟಕೆ ಮಡಿಗ್ಯಾಳೆ	,,
ಅವಳು ಭದ್ರವಾಗಿ ಮಡಿಗ್ಯಾಳೆ	,,
ಇನ್ನೇನು ಮಳೆರಾಯ ಬಂದ್ರೆ	,,
ನಾನು ಕದವನ್ನು ತೆಗೆಯೋದಿಲ್ಲಾ	,,
ನಾನು ಅಗಣೀಯ ತೆಗಿಯೋದಿಲ್ಲಾ	,,
ಗರುಡಾನು ಹೊರಟಾನು	,,
ಹೊತ್ತು ಹುಟ್ಟೀತು	,,

ನಾನು ಹೋಗುತ್ತೀನಕ್ಕಯ್ಯ	ಸುವ್ವಲಾಲೀ
ಹೋಗಪ್ಪ ಗರುಡಾನೆ	,,
ನೀನು ಇಂದ್ಹೋಗಿ	,,
ಮುತ್ತೈಂದು ಬರುತ್ತೀಯ	,,
ನಮ್ಮ ಮಾವಯ್ಯ ಮಳೆರಾಯ	,,
ನನ್ನ ಕಳುವಿದರೆ ಬರುತ್ತೀನಿ	,,
ಮಾತನಾಡಿಸಿದರೆ	,,
ನಾನು ಮಾತನಾಡೋದಿಲ್ಲಾ	,,
ಅಗಣೀಯಾ ತೆಗೆಯೆಂದ್ರೆ	,,
ನಾನು ಅಗಣೀಯಾ ತೆಗೆಯೋದಿಲ್ಲಾ	,,
ಅಂಗೆಂದು ಶಪಥ	,,
ಮಾಡ್ಯಾಳು ಮಾರ್ಹೆಣ್ಣು	,,
ಅಂಗೆಂದು ಮಾರ್ಹೆಣ್ಣು	,,
ಜಡಿದು ಹಾಕ್ಯಾಳೆ ಅಗಣೀಯಾ	,,
ಹೊತ್ತು ಮುಳುಗೀತು	,,
ಆಗ ಮಳೆರಾಯ ಬಂದಾನು	,,
ತೆಗಿ ತೆಗಿಯೆ ಮಾರ್ಹೆಣ್ಣೆ	,,
ತೆಗಿಯೆ ರನ್ನಾದ ಅಗಣೀಯ	,,
ಏನು ಮಾಡಿದರು ಅವಳು ಮಾತನಾಡಲಿಲ್ಲ	,,
ಅವಳು ಮಾರ್ಹೆಣ್ಣು ಮಾತನಾಡಲಿಲ್ಲ	,,
ಅವಳು ರನ್ನಾದ ಅಗಣೀಯ	,,
ಅವಳು ತೆಗಿಲಿಲ್ಲಾ ಮಾರ್ಹೆಣ್ಣು	,,
ಕರೆದು ಕರೆದು ಸಾಕಾದ	,,
ಕೊನೆಗೆ ಮಳೆರಾಯ ಸೋತಾನೆ	,,
ನಿಮ್ಮೈಳು ಜನ ಅಣ್ಣದಿರಿಗೆ	,,

ನಾನು ಬಡಸ್ತಾನ ಕೊಡುತ್ತೀನಿ ಸುವ್ವಲಾಲೀ
ಬಡಸ್ತಾನ ಕೊಡುತ್ತೀನಿ ,,
ವನವಾಸ ಹೋಗುವಂತೆ ಮಾಡುತ್ತೀನಿ ,,
ನಾನು ವನವಾಸ ಹೋಗುವಂತೆ ಮಾಡುತ್ತೀನಿ,,
ಹೋಗುವ ದಾರಿಯಲ್ಲಿ ,,
ನಾನು ಹಳ್ಳವಾಗಿ ಹರಿತ್ತೀನಿ ,,
ನಿಮ್ಮ ಅಣ್ಣದೀರು ನೀರನ್ನೆ ಕುಡಿತಾರೆ ,,
ಬಾಯಾರಿ ಬಾಯಾರಿ ನೀರನ್ನು ,,
ನೀನೂವೆ ಕುಡಿತ್ತೀಯ ಮಾರ್ದೆಣ್ಣೆ ,,
ಅಲ್ಲಿಗೆ ಮಾತಾಡ್ತಂಗೆ ,,
ಆಗಲಿಲ್ವೆ ಮಾರ್ದೆಣ್ಣೆ ,,
ಹೋಗುವ ದಾರೀಲಿ ,,
ನಾನು ಜೋಳದ್ಹೊಲ ಮಾಡುತ್ತೀನಿ ,,
ಹೊಟ್ಟೆ ಹಸಿದು ಅವರು ,,
ನಿಮ್ಮಣ್ಣದೀರು ಜೋಳಾವ ಬಡಿತಾರೆ ,,
ನಿನಿಗಾದ್ರು ಕೊಡುತಾರೆ ,,
ನೀನಾದ್ರೂ ತಿನ್ನುತ್ತೀಯಾ ,,
ಅಲ್ಲೀಗೆ ನಮು ತಾವ ,,
ಮಾತಾಡ್ತಂಗಾಗಲಿಲ್ಲವೆ ,,
ಹೋಗುವ ದಾರ್ಹೀಲಿ ,,
ನಾನು ಅಡಿಗ್ಹೇಯ ಮಾಡಿಸ್ಯೇನು ,,
ನಿಮ್ಮಣ್ಣದಿರು ಅವರು ,,
ಹಸ್ತಿದ್ರು ಉಣ್ಣುತಾರೇ ,,
ನೀನಾದ್ರು ಉಣ್ಣುತ್ತೀಯ ,,
ಅಲ್ಲೀಗೆ ಮಾತಾಡ್ತಂಗಾಗಲಿಲ್ವೆ ,,

ಅಲ್ಲೀಗೆ ಹೊತ್ತು ಮುಳುಗೀತು ,,


ಅವರು ಒಂದು ಪಟ್ಟಣವ ಸೇರುತಾರೆ ಸುವ್ವಲಾಲೀ
ಅವರು ಪಟ್ಟಣವ ಸೇರುತಾರೆ ,,
ನಿಮ್ಮಣ್ಣ ದೀರಾದಾರೆ ,,
ಅವರು ಕೂಲಿಗಾದ್ರೆ ಹೋಗುತಾರೆ ,,
ಅವರು ರಾಗಿಯಾದ್ರೆ ತರುತಾರೆ ,,
ನಿನಕೈಲಿ ಕೊಡುತಾರೆ ,,
ಹಸಿ ರಾಗಿಯೆಂದು ಬಿಸಲೀಗೆ ಒಣಹಾಕಿ ,,
ಕೋಳಿ ಹುಂಜನಾಗಿ ,,
ನಾನು ಪರ ಪರನಾಗಿ ಕೆರಿತ್ಹೀನಿ ,,
ಅಲ್ಲಿಗೆ ಮಾರ್ಹೆಣ್ಣೆ ,,
ನೀನು ಚೋಚು ಚೋಚು ಅನ್ನುತ್ಹೀಯಾ ,,
ಅಲ್ಲಿಗಾದ್ರು ನೀನು ಮಾತನಾಡಂಗಾಗಲಿಲ್ವೆ ,,
ಒಂದಾನೆ ಮನೆಯಾಗೆ ,,
ಬಾಡಿಗ್ಹೇಯ ಮಾಡ್ಯಾರೆ ,,
ವೇಶ ಹಾಕಿ ಬಳೆಗಾರನಾಗಿ ಬಳೆಯ ,,
ನಾನು ತರುತ್ಹೀನಿ ಮಾರ್ಹೆಣ್ಣೆ ,,
ನಿಮ್ಮಣ್ಣ ದೀರು ಬಳೆಯನ್ನೆ ತೊಡಿಸುತಾರೆ ,,
ನಾನು ಕೈಯನ್ನೆ ಹಿಡಿತ್ಹೀನಿ ,,
ನೀನು ಅಲ್ಲಿಗೆ ಮಾತನಾಡೀದ್ಹಂಗೆ ,,
ಆಗ ಮಳೆರಾಯ ,,
ಅವನು ಹೊರಟು ಹೋದಾನೆ ,,

ಎಲ್ಲಿ ಇಲ್ಲದಂದು ಅವರು ,,
ಏಳು ಜನ ಅಣ್ಣ ದಿರಿಗೆ ,,
ಬಡಸ್ತಾನ ಬಂದೀತು ,,
ಆಗ ಆರುಜನ ಅಣ್ಣ ದೀರನಾದರೆ ,,
ಅವರೀಗೆ ಉಣ್ಣಾಕೆ ಅನ್ನವಿಲ್ಲಾ ,,

ಅವರೀಗೆ ಹುಡುವಾಕೆ ಬಟ್ಟಿಯಿಲ್ಲಾ ಸುವ್ವಲಾಲೀ
ಬಾರಮ್ಮ ತಂಗ್ಯಮ್ಮ ,,
ನಾವು ವನವಾಸ ಹೋಗುವಾಗ ,,
ಏಳು ಜನ ಅಣ್ಣಂದಿರು ವನವಾಸ ಹೊರಟಾರೆ ,,
ಅವ್ರು ಹೋಗೂವ ದಾರೀಲಿ ,,
ಹಸಿ ಹಳ್ಳವಾಗಿ ಹರಿದಾವು ,,
ಅವರು ಬಾಯಾಡಿಸಿ ಕುಡಿದಾರು ,,
ಬಾರಮ್ಮ ತಂಗ್ಯಮ್ಮ ,,
ಒಂದಗುಕ್ಕು ನೀರನ್ನು ಕುಡಿಯಮ್ಮ ,,
ತಂಗ್ಯಮ್ಮ ನೀರನ್ನು ಕುಡಿಯಲೆ ಇಲ್ಲ ,,
ಮುಂದಾಕೆ ಹೊರಟಾರು ,,
ಅವರು ಹೋಗೊವ ದಾರೀಲಿ ,,
ಜೋಳಾದ ಹೊಲವುಂಟು ,,
ಅವರ್ಗೆ ಹೊಟ್ಟೀಯು ಹಸ್ತೀತು ,,
ಅವ್ರು ಜೋಳಾವ ಮುರಿದಾರು ,,
ಕೊಳ್ಳಮ್ಮ ತಂಗ್ಯಮ್ಮ ,,
ನೀನೊಂದು ಗುಕ್ಕನ್ನು ,,
ಅವಳು ಜೋಳಾವ ಈಸಿಕೊಳ್ಳಲಿಲ್ಲಾ ,,
ಮಾರ್ಹೆಣ್ಣು ತಿನ್ನಲಿಲ್ಲಾ ,,
ಅವರು ಹೋಗೂವ ದಾರೀಲಿ ,,
ಮಳೆರಾಯ ಅಡಿಗ್ಹೇಯ ಮಾಡಿಸ್ಯವ್ನೆ ,,
ಅವರಣ್ಣಂದೀರು ಹಸಿದಾರೆ ,,
ಅವರ್ಹುಂಡಾಗ ಆರುಜನ ,,
ಬಾರಮ್ಮ ತಂಗ್ಯಮ್ಮ ನೀನಾದ್ರು ಉಣ್ಣಮ್ಮ ,,
ಅವಳಾದ್ರೆ ಉಣಲಿಲ್ಲಾ ,,
ಮಾರ್ಹೆಣ್ಣು ಉಣಲಿಲ್ಲಾ ,,

ಹೊತ್ತು ಮುಳುಗೀತು	ಸುವ್ವಲಾಲೀ
ಅವರು ಒಂದು ಪಟ್ಟಣವ ಸೇರ್ಯಾರು	”
ಅವರು ಏಳು ಜನ ಅಣ್ಣದೀರು	”
ಕೂಲೀಗೆ ಹೋದಾರು	”
ರಾಗೀಯ ತಂದಾರು	”
ತಂಗೀ ಕೈಲಿ ಕೊಟ್ಟಾರು	”
ಹಸಿ ರಾಗಿಯೆಂದು ಬಿಸಿಲೀಗೆ ಸುರಿದಾಳು	”
ಮಳೆರಾಯ ವೇಶಹಾಕಿ ಕೋಳಿಹುಂಜನಾಗಿ	”
ಅವರು ರಾಗೀಯ ಕೆರೆದಾರು	”
ಕೆರೆದಾರೆ ಕೆರೆಯಾಲಿ	”
ಅವಳು ಮಾತನಾಡಲಿಲ್ಲಾ	”
ಮಳೆರಾಯ ವೇಶಹಾಕಿ ಬಳೆಗಾರನಾಗಿ	”
ಬಳೆಯೆಂದು ಸಾರೂತ ಬಂದಾನು	”
ಅವರು ಏಳು ಜನ ಅಣ್ಣದೀರು	”
ಬಳೆಯನ್ನು ತೊಡಿಸ್ಯಾರು	”
ಮಾರ್ಹೆಣ್ಗೆ ಬಳೆಯನ್ನು ತೊಡಿಸ್ಯಾರು	”
ಮಳೆರಾಯ ಆಗ ಕೈಯನ್ನು ಹಿಡಿದಾನೆ	”
ಮಳೆರಾಯ ಆಗಲೆ ಕೇಳ್ಯಾನೆ	”
ಎಷ್ಟು ಕೇಳಿದರೂ	”
ಅವಳು ಮಾತನಾಡಲಿಲ್ಲಾ ಮಾರ್ಹೆಣ್ಣು	”
ಅವಳು ಪದಕಾವ ತೆಗೆದಾಳೆ	”
ಮಾರ್ಹೆಣ್ಣು ಪದಕಾವ ತೆಗೆದಾಳೆ	”
ಅವಳು ಮಳೆರಾಯ್ನ ಮುಂದಾಕೆ	”
ಆಗಲೆ ಎಸೆದಾಳೆ	”
ಇಷ್ಟಕ್ಕೂ ಮಾತನಾಡಲಿಲ್ವೆ	”
ನೀನು ಕಿರಿಯೋಳೆ ಮಾರ್ಹೆಣ್ಣೆ	”

ಅದು ನಾನು ಮಾಡಿದ್ದು ಅಲ್ಲಾ ಸುವ್ವಲಾಲೀ
ನಾನು ಹೊಸ ಪದಕ ಕಳಿವಿದ್ದೆ "
ನನ್ನ ಹಳೆ ಸೂಳೆ ಮಾಡಿರುವ ಕೆಲಸವನ್ನು "
ನಿನ್ಗೆ ಹೊಸ ಪದಕವ "
ಕಳಿಸ್ವೇನು ಮಾರ್ಹೆಣ್ಣೆ "
ಇದ್ದ ರಾಜ್ಯವ ಕೊಟ್ಟ ಮಳಿರಾಯ "
ಇದ್ದ ಐಶ್ವರ್ಯ ಕೊಟ್ಟ ಮಳೆರಾಯ "
ಮಾರ್ಹೆಣ್ಗೆ ನೀನು ಸುಖವಾಗಿ ಬದುಕೆಂದ "
ಏಳು ಜನ ಬಾಮೈದಿರೆ ಬಾಳಿರೆಂದ "



ಶ್ರೀಕೃಷ್ಣ-ಪಾರಿಜಾತ

ಇಂದ್ರಲೋಕದಿ ಸ್ವಾಮಿ ತಂದೇ ಹೂವನು ।
ಒಳ್ಳೆ ಪಾರಿಜಾತವ—ಸ್ವಾಮಿ ಇಲ್ಲಿ ತಂದೆನು ।
ನಾನು ಸ್ವಾಮಿ—ತಂದೇ ಹೂವನು ।

ಗೊಂಡಾರಣ್ಯದಲ್ಲಿ ಹಳ್ಳಕೊಳ್ಳಗಳ ಮಧ್ಯೆ, ಕಲ್ಲುಮುಳ್ಳುಗಳ ಮಧ್ಯೆ ತೂರಿರುವ ಮುತ್ತುರತ್ನಗಳನ್ನು ಆರಿಸ ಹೊರಟಂತೆ ಜನಪದ ಸಾಹಿತ್ಯ ಸಂಗ್ರಹ ಕಾರ್ಯ ಬಹಳ ಕಷ್ಟಕರವಾದ ಕೆಲಸ. ಆದರೆ ಅದು ಎಷ್ಟೇ ಕಷ್ಟದ ಕಾರ್ಯವಾಗಿರಲಿ, ಆ ಮುತ್ತುರತ್ನಗಳನ್ನು ಸಂಗ್ರಹಿಸುವ ಕೆಲಸವಂತೂ ಆಗಲೇಬೇಕು. ಇಲ್ಲದಿದ್ದರೆ ಆ ಅಮೂಲ್ಯ ಸಂಪತ್ತು ಮಣ್ಣಿನಲ್ಲಿ ಬೆರೆತು ಎಂದೆಂದಿಗೂ ಕಣ್ಮರೆಯಾಗಿ ಹೋಗಿಬಿಡುತ್ತದೆ.

....ಕರ್ನಾಟಕದಲ್ಲಿರುವ ಜನಪದ ಸಾಹಿತ್ಯ, ಪ್ರಪಂಚದ ಮಿಕ್ಕ ಯಾವುದೇ ದೇಶದ ಜನಪದ ಸಾಹಿತ್ಯಕ್ಕೂ ಕಡಿಮೆಯಿಲ್ಲ ; ಬದಲು, ವಿಶ್ವದ ಅತ್ಯುತ್ತಮನೆನಿಸಿದ ಜನಪದ ಗೀತೆಗಳ ಸಾಲಿನಲ್ಲಿರಲು ತಕ್ಕುದಾದ ಪದ ನಮ್ಮಲ್ಲಿ ಬೇಕಾದಷ್ಟಿವೆ.

—ಮತಿಘಟ್ಟ ಕೃಷ್ಣಮೂರ್ತಿ

ಶ್ರೀಕೃಷ್ಣ-ಪಾರಿಜಾತ*


ಯದು ಕುಲೇಶನೇ ಸ್ವಾಮಿ ಪದಮನಾಭನೇ ।
ಮೊದಲು ನೆನೆದ್ಹೇನು ಕೃಷ್ಣನ ಪದವ ಪೇಳುವೆನು ।
ದ್ವಾರವತಿಯಲ್ಲಿ ಹದಿನಾರು ಸಾವಿರಾ ।
ಗೋಪಿಸ್ತ್ರೀಯರು ಹದಿನಾರು ಸಾವಿರಾ ।
ನೂರೆಂಟನೆ ಸ್ತ್ರೀಯರ ಆಳುತಿರ್ಪನು ।
ನೂರು ಹೆಂಡಿರೂ ಸ್ತ್ರೀಯರಾಳುತಿರ್ಪನು ।
ಸುಜನರೆಲ್ಲರೂ ಕೃಷ್ಣಗೆ ಅಜನು ಪಿತನೆಂದೂ ।
ಭಜನೆಮಾಡಲೂ ಅಲ್ಲಿಗೆ ದ್ವಿಜನ ಬಂದನೂ ।
ಬಂದ ದ್ವಿಜನಿಗೇ ಅಜನೆ ತಂದು ಹಾಕಿದಾ ।
ವಂದನೆ ಮಾಡಿದಾ ಸುಖವೆ ಎಂದು ಕೇಳಿದಾ ।
ದೇವಲೋಕದಾ ಪಾರಿಜಾತ ಪುಷ್ಪವೂ ।
ನಾರಿ ರುಕ್ಮಿಣೀಗಲ್ಲದೆ ಬೇರೆ ಸಲ್ಲದೂ ।
ನಾರೀ ರುಕ್ಮಿಣೀ ಹೀಗೆ ಬಾರೆ ಎನುತಲೀ ।
ಅವಳ ವಾರೆ ತುರುಬೀಗೆ ಪಾರಿಜಾತ ಮುಡಿಸಿದ ।
ಶ್ರೀಕೃಷ್ಣ ಪಾರಿಜಾತ ಮುಡಿಸಿದಾ ।
ಪಾರಿಜಾತದಾ ಪರಿಮಳೂರು ತುಂಬಿತೂ ।
ಮೂರು ಲೋಕಕೇ ಹರುಷಮೀರಿ ಹೋಯಿತು ।
ಯೋಗಿ ನಾರದ ಸಾಗಿ ಸತ್ಯಭಾಮೆಗೇ ।
ಇಲ್ಲಾದ ಸುದ್ದೀಯಾ ಹೋಗಿ ಬೇಗ ಹೇಳಿದಾ ।
ಕೇಳಿದಾಕ್ಷಣಾ ಭಾನೆ ಬಹಳ ಕೋಪದೀ ।
ತಾಳಲಾರದೇ ಮನವ ಹಾಳು ಕೊಂಡಳು ।
ವಾಲೆ ಸರಿಗಿಯೂ ವಂಕಿ ತೋಳ ಬಾಪುರೀ ।
ಕೀಲು ಕಂಕಣಾ ಭೂಮಿ ಮೇಲೆ ಒಗೆದಳೊ ।

---

*ಈ ಜಾನಪದ ಕಥನ ಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ದೊಂಬಿ ದಾಸರು ಏಕನಾದವನ್ನು ನುಡಿಸಿಕೊಂಡು ಹಾಡುವರು.

ಸರಿಯ ಸವತಿಯೂ ಈಕೆ ಮೆರೆವ ಭಾಗ್ಯವೊ ।
ಗಿಡವನ್ಹಾಯನೋ—ದೊಡ್ಡ ಮಡುವ ದುಮುಕನೋ ।
ಏಳು ಪರ್ವತಾ ಹತ್ತಿ ಹಾರಿ ಬೀಳಲೋ ।
ಯಾರಿಗೇಳಲೋ ಮನದ ಘೋರ ತಾಪವಾ ।
ಒಂದು ಹೂವಿಗೇ ಭಾಮೆ ಇಂದು ಮುನಿವರೇ ।
ಇಂದ್ರಲೋಕದಾ ಮರವ ತಂದು ಇಳುಹುವೇ ।
ಹರಿಯ ಹಾರವ ತೆಗೆದು ಅತ್ತ ಒಗೆದಳು ।
ಸತ್ಯಭಾಮೆ ತೆಗೆದು ಇತ್ತ ಒಗೆದಳು ।
ಹರಿದ ಹಾರವ ಕೃಷ್ಣ ಕೊರಳಿಗ್ಹಾಕಿದ ।
ಒಂದೇ ಹೂವಿಗೆ ನೀನು ಹಿಂಗೆ ಮುನಿದರೆ ।
ತಂದು ನಿಲಿಸೂನೆ ಪಾರಿಜಾತವನನವನು ।
ಒಂದೇ ಹೂವನು ನಾನು ಹೆಂಗೆ ಸಲುವೆನು ।
ತಂದು ಕೊಡುವೆನು ಪಾರಿಜಾತ ಮರವನು ।
ಯಾಕೆ ಕೃಷ್ಣನೆ ನಿನಗೆ ಕಾಕ ಬುದ್ಧೀಯು ?
ಯಾರೇನೆಂದಾರೆ ನಿನ್ನ ಮೋರೆ ಬಾಡಿದೆ ।
ತಾಳಲಾರೆನು ಮನದ ಘೋರತಾಪವ ।
ನಾ ಒಂದೇ ಹೂವನು ನಾಹಿಂಗೆ ಸಾಕೀದೋ ।
ಯಾಕೆ ಸತ್ಯಭಾಮೆ ನಿನ್ನ ಮುಖವೆ ಬಾಡೀದೆ ।
ತಡೆಯಲಾರೆನು ಮನದ ಘೋರ ತಾಪವ ।
ಸಾಕು ನಡಿ ನಡಿ ಸರಿಯ ಸವತಿ ಮನೆಗೆ
ಕೈಲಾಸದಿಂದಲಿ ನಾರದ ಮುನಿವರ ।
ಒಂದೇ ಹೂವನು ತಂದನಾಗಲೇ ।
ತಂದನಾಗಲೆ ನಾರದ ಮುನಿವರ ।
ಹರಿಯ ಕಂಡನು—ಅವನಲ್ಲೆ ಮುನಿದನು ।
ಏನೋ ನಾರದ ನೀನಿಲ್ಲಿ ಬಂದೆಯೋ ।
ಏನು ಚಾಡಿಯ ನೀನು ಹೇಳಲು ಬಂದೆಯೋ ।

ಇಂದ್ರಲೋಕದಿ ಸ್ವಾಮಿ ತಂದೇ ಹೂವನು ।
ಒಳ್ಳೆ ಪಾರಿಜಾತವ ಸ್ವಾಮಿ ಇಲ್ಲಿ ತಂದೆನು
ನಾನು ಸ್ವಾಮಿ ತಂದೆ ಹೂವನು ।
ಏನೋ ನಾರದ ಹೂವು ಯಾರಿಗೆ ಕೊಡುವೆ ?
ನೀನು ಹೂವು ಯಾರಿಗೆ ಕೊಡುವೆ ?
ಏನು ಮಾಯವೋ ಏನಿದೀ ವಿಚಿತ್ರವೋ ।



ಚೆನ್ನಿಗರಾಯ

ನಾ ಕಾಣೆ ನಿನ್ನಾಣೆ–ಪತಿಪುರುಷ ಅಂತಾವ ಸುವ್ವಲಾಲೀ ।
ಆಗಲೆ ಆ ಬಾಲೆ–ಕಾಲನೆ ಕೊಳೆದಾಳೆ ಸುವ್ವಲಾಲೀ ।
ಕೈ ಎತ್ತಿ ಮುಗಿದಾಳೆ–ನಿಮ್ಮ ಸತ್ಯಾಕೆ ನಾ ಮೆಚ್ಚಿದೆ ಸುವ್ವಲಾಲೀ ।

....ಸುಗ್ಗಿಯಕಾಲ, ಹಬ್ಬ ಹರಿದಿನಗಳು, ಮದುವೆ, ಇವೇ ಮೊದಲಾದ ಸಂದರ್ಭದಲ್ಲಿ ಜನತೆಯ ಕವಿಗಳು ಹಾಡುಗಳನ್ನು ಕಟ್ಟಿ ಅವುಗಳ ಮೂಲಕ ತಮ್ಮ ಬಾಳಿನ ಸುಖದುಃಖಗಳನ್ನು ತೋಡಿಕೊಳ್ಳುತ್ತಿದ್ದರು. ಹೀಗೆ ಹಾಡುಗಳನ್ನು ಕಟ್ಟಿ ಹೇಳುತ್ತಿದ್ದುದರಿಂದ ಆಗುತ್ತಿದ್ದ ಪ್ರಯೋಜನವನ್ನು ಇಲ್ಲಿ ಉಲ್ಲೇಖಿಸಬಹುದು. ತಂಪಾದ ಹುಣ್ಣಿಮೆಯ ಚಂದ್ರನ ಬೆಳುದಿಂಗಳಿನಲ್ಲಿ ಎತ್ತಿನ ಗಾಡಿಗಳಲ್ಲಿ ಊರಿಂದೂರಿಗೆ ಪ್ರಯಾಣಮಾಡುತ್ತಿದ್ದಾಗ, ಗಾಡಿ ಹೊಡೆಯುವವರು ಪಂಥಕಟ್ಟಿ ಹಾಡುಗಳನ್ನು ಹೇಳುತ್ತಿದ್ದುದರಿಂದ ಬೇಸರವಿಲ್ಲದೆ ದಾರಿ ಸವೆಯುತ್ತಿತ್ತು. ನಿಶ್ಶಬ್ದವಾದ ಆದರೆ ಉಲ್ಲಾಸಕರವಾದ ತಂಗಾಳಿ ಬೀಸುವ ಬೆಳಗಿನ ಜಾವದಲ್ಲಿ ದನಿಯೆತ್ತಿ ಹಾಡುಗಳನ್ನು ಹೇಳುತ್ತ ಹೆಣ್ಣುಮಕ್ಕಳು ಆಯಾಸವಿಲ್ಲದೆ ಹಿಟ್ಟನ್ನು ಬೀಸುತ್ತಿದ್ದರು. ಹಾಗೆಯೇ ಮಗುವನ್ನು ತೂಗುವಾಗ, ಮದುವೆಗಾಗಿ ನಲಿಯುವಾಗ, ಸಾವಿಗಾಗಿ ಅಳುವಾಗ, ಸಾಮು ಕಾಳಗ ಬೇಟೆ ಇವುಗಳನ್ನು ನಡೆಸುವಾಗ ಹಾಡುಗಳನ್ನು ಹಾಡಿ ಮನಸ್ಸಿನ ಭಾರವನ್ನು ಇಳಿಸಿಕೊಳ್ಳುತ್ತಿದ್ದರು. ಜನಸಾಮಾನ್ಯರು ರಚಿಸಿದ ಈ ಸಾಹಿತ್ಯವೇ ಜನಪದ ಸಾಹಿತ್ಯ.

....ಕೆಲವು ಹಾಡುಗಳನ್ನು ಓದಿದಾಗಲಂತೂ ಶಾರದೆಯೇ ಆ ಕವಿಗಳ ಬಾಯಲ್ಲಿ ನಿಂತು ನುಡಿಸುತ್ತಿದ್ದಾಳೆಂದು ನಮಗೆ ಸ್ಪಷ್ಟವಾಗುತ್ತದೆ. ಈ ಪದಗಳ ಸ್ವಾರಸ್ಯ ಎಷ್ಟೋ ವೇಳೆ ಹೆಸರುವಾಸಿಯಾದ ಕವಿಗಳು ರಚಿಸಿರುವ ಪದಗಳ ಸ್ವಾರಸ್ಯಕ್ಕೆ ಯಾವ ರೀತಿಯಿಂದಲೂ ಕಡಮೆಯಾಗಿರುವುದಿಲ್ಲ. ಅದ್ದರಿಂದಲೇ ವಿದ್ವಾಂಸರು ಕೂಡ ಇವುಗಳ ಸೊಗಸಿಗೆ ಮರುಳಾಗಿದ್ದಾರೆ.

ಇಷ್ಟು ಸೊಗಸಾದ ಇಂಪಾದ ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳೇ ಕಟ್ಟಿರುವ ಹಾಡುಗಳಲ್ಲಿ ಬಿಡಿಪದ್ಯಗಳು ಮಾತ್ರವಲ್ಲದೆ ಬಗೆಬಗೆಯ ಛಂದಸ್ಸುಗಳಲ್ಲಿ ರಚಿತವಾದ ಕಥೆಗಳಿವೆ; ನೀಳ್ಗತೆಗಳಿವೆ. ನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಸಂಗತಿಗಳಿವೆ. ಕೋಲಾಟ ಕೊರವಂಜಿಯ ಪದಗಳಿವೆ; ಸುಗ್ಗಿಯ ಕುಣಿತದ ಹಾಡುಗಳಿವೆ. ಹೆಚ್ಚೇನು? ಒಂದು ಮಾತಿನಲ್ಲಿ ಹೇಳಬಹುದಾದರೆ ಈ ಜನಪದ ಸಾಹಿತ್ಯದಲ್ಲಿ ವೈವಿಧ್ಯಕ್ಕೆ ಮಿತಿಯೇ ಇಲ್ಲ. ಈ ನಾಡಕವಿಗಳು ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ಇನಿದಾದ ಕನ್ನಡ ನುಡಿಯಲ್ಲಿ, ಹಾಗು ಕನ್ನಡ ಛಂದಸ್ಸಿನಲ್ಲಿ, ಸಹಜವಾದ ಅಲಂಕಾರಗಳಿಂದ ಕೂಡಿ ನಿರೂಪಿಸುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಬರವಣಿಗೆಗೆ ಸಿಲುಕದೆ ಬಾಯಿಂದ ಬಾಯಿಗೆ ಅನೇಕ ಪಾಠಗಳನ್ನು ಒಳಗೊಂಡು ಬಂದಿರುವ ಈ ಹಾಡುಗಳು ತಮ್ಮ ಒಟ್ಟು ಕನ್ನಡ ಒಂದೇ ಆಗಿದ್ದರೂ ಇನ್ನೂ ಉಳಿದುಕೊಂಡು ಬಂದಿರುವುದರಿಂದ ಇವುಗಳನ್ನು ಓದುವ ರಸಿಕರಿಗೆ ಒಂದು ಹಬ್ಬವೆನಿಸಿದೆ.

—ಶ್ರೀ ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ಚೆನ್ನಿಗರಾಯ*

ಸುವ್ವಿ ಸುವ್ವಮ್ಮಲಾಲೀ ಸುವ್ವಲಾಲೀ

ಜಾಣೇ ಜಾಗರದೆಣ್ಣೆ ,,

ಬಂದಾನು ಚೆನ್ನಿಗ ,,

ಗಂಡ ಚೆನ್ನಿಗರಾಯ ,,

ಗಂಡ ಚೆನ್ನಿಗರಾಯ ,,

ದಂಡಿಗೆ ಹೋದಾನೆ ,,

ಬಳೆಗಾರ ಊರಿಗೆ ಬಂದಾನು ,,

ಬಾರೆಲೆ ಎಲೆ ಹೆಣ್ಣೆ ,,

ಬಳೆಯನು ತೊಡುತ್ತೀನಿ ,,

ಕೇರಿಕೇರಿಯೊಳಗೆ ,,

ಬಳೆಯೆಂದು ಸಾರ್ಯಾನೆ ,,

ಬಾರೆಲೆ ಎಲೆ ಹೆಣ್ಣೆ ,,

ಬಳೆಯನು ತೊಡಬೇಕು ,,

ಬಳೆಯನು ತೊಡುವಾಗ ,,

ಅತ್ತಿಲ್ಲಾ ಮಾವಿಲ್ಲಾ ,,

ಚಿಕ್ಕ ಮೈದರಸಮೊದಲಿಲ್ಲಾ ,,

ಚಿಕ್ಕ ಮೈದರಸಿಲ್ಲಾ ,,

ನಾನು ಕೂಡಿದ ಪುರುಷರಿಲ್ಲಾ ,,

ನಾನು ಕೂಡಿದ ಪುರುಷಾರು ,,

ಮೊದಲಿಲ್ಲಾ ಬಳೆಗಾರ ,,

ಬಳೆಗಾರ ಶೆಟ್ಟಯ್ಯ ,,

ನಾನು ಬಳೆ ಹೇಗೆ ತೊಡಲಯ್ಯ ,,

---

*ಈ ಕಥನ ಗೀತವನ್ನು ಮಲೆನಾಡು ಪ್ರಾಂತ್ಯಗಳಲ್ಲೂ ಬಯಲುನಾಡಿನ ಹಳ್ಳಿಗಳಲ್ಲೂ ಬೇಸಿಗೆ ಕಾಲದಲ್ಲಿ—ಹೆಂಗಸರು ಬೇಸರವನ್ನು ಕಳೆಯಲು ಹಾಡುವರು.

ಬಳೆಯ ತೊಡುವಾಕೆ	ಸುವ್ವಲಾಲೀ
ಅತ್ಯಾಕೆ ಮಾವ್ಯಾಕೆ	,,
ಚಿಕ್ಕ ಮೈದರಸರ್ಯಾಕೆ	,,
ಚಿಕ್ಕ ಮೈದರಸಾರು	,,
ಮೊದಲೇಕೆ ಬೆಲೆವೆಣ್ಣೆ	,,
ನಾನು ಬಿನ್ನಾಣೆ ಬಳೆಗಾಳ	,,
ನಾನು ತೊಡುಸ್ಯೇನು ಬಾರೆಣ್ಣೆ	,,
ಬಳೆಯಾನು ತೊಡಿಸ್ಯಾನೆ	,,
ಅವನು ಅರಮನೆಗ್ಹೋದಾನೆ	,,
ಅವನು ಅರಮನೆಗ್ಹೋಗಿ	,,
ಅವನು ಏನೆಂದು ಹೇಳ್ಯಾನೆ	,,
ಅಕ್ಕೀಯ ಹಾಕೆಣ್ಣೆ	,,
ನೀನು ತುಪ್ಪಾವ ಕಾಸೆಣ್ಣೆ	,,
ನೀನು ಹರಿವಾಣ ಬೆಳಗ್ಹೊಣ್ಣೆ	,,
ಹರಿವಾಣ ಬೆಳಗ್ಯಾಳೆ	,,
ಅವಳು ನೀರನೆ ಕೊಟ್ಟಾಳೆ	,,
ನೀರಾ ಕೊಡೊ ಹೊತ್ಗೆ	,,
ಅವನೇನೆಂದು ಕೇಳ್ಯಾನೆ	,,
ನೀರನು ಈಸಿಗ್ಹೋಕೆ	,,
ಸುಮ್ಮಾನೆ ಈಸಲಾಕೊರೆ	,,
ನಿನ ಗಂಡ ಚೆನ್ನಿಗರಾಯ	,,
ಉಣ್ಣುನಂತ ಹರಿವಾಣ	,,
ನಿನ ಗಂಡ ಕುಡಿಯುವ	,,
ಗಿಂಡಿಲಿ ಕೊಟ್ಟಾರೆ	,,
ನಿನ ಗಂಡ ಕುಡಿಯೂವ	,,

ಗಿಂಡಿಯ ಕೊಟ್ಟಾರೆ ಎಲೆ ಹೆಣ್ಣೆ ಸುವ್ವಲಾಲೀ
ನಾನು ಊಟಾವ ಮಾಡುತೀನಿ ,,

ನನ ಗಂಡ ಚೆನ್ನಿಗರಾಯ ,,
ಅವ್ನು ದಂಡೀಗೆ ಹೋಗ್ಯವ್ನೆ ,,
ಅವರುಣ್ಣೊ ಹರಿವಾಣ ,,
ಕೊಟ್ಟಾರೆ ನನ ಬಿಟ್ಟಾರೆ ,,
ಅವರು ಕುಡಿಯೂವ ಗಿಂಡಿಯ ,,
ಕೊಟ್ಟಾರೆ ನನ ಬಿಟ್ಟಾರೆ ,,
ಆಗಲೆ ಆಬಾಲೆ ,,
ಹಂಗಂತ ಹೇಳ್ಯಾಳೆ ,,
ನಿನ ಗಂಡ ಚೆನ್ನಿಗರಾಯ ,,
ಮಲಗೂವ ಮಂಚಾವ ,,
ಕೊಡೆಲೆ ಎಲೆ ಹೆಣ್ಣೆ ,,
ನನ ಗಂಡ ಚೆನ್ನಿಗರಾಯ ,,
ಅವ್ರು ದಂಡೀಗೆ ಹೋಗ್ಯವ್ರೆ ,,
ನಾನು ಮಂಚಾವ ಕೊಟ್ಟಾರೆ ,,
ಅವ್ರು ಸುಮ್ಮಾನೆ ಬಿಟ್ಟಾರೆ ,,

ಹಾಳಾದ ಬಳೆಗಾರಗೆ ,,
ಕಯ್ಯನ್ನ ಕೊಟ್ಟನಲ್ಲಾ ,,
ನಾನು ಹಾಳಾದ ಮುಂಡೇಯ ,,
ನಾನೇಕೆ ಬಳೆಯನು ತೊಟುಗೊಂಡೆ ,,
ನನ್ನ ಗಂಡ ಚೆನ್ನಿಗರಾಯ ,,
ದಂಡೀಗೆ ಹೋಗಿದಾರೆ ,,
ಆಗಾಲೆ ಆಬಾಲೆ ,,
ಕೈಯನ್ನೆ ಒದಿರ್ಯಾಳೆ ,,

ಅವಳು ಚಿಂತೆಯ ಮಾಡ್ಯಾಳೆ	ಸುವ್ವಲಾಲೀ
ಹಾಳಾದೊ ಬಳೆಗೋಳು	”
ಆಗಲೆ ಚೆನ್ನಿಗರಾಯ	”
ಊರಿಗೆ ದಂಡಿನಿಂದ ಬಂದಾನೆ	”
ಬಂದಾನೆ ಚೆನ್ನಿಗರಾಯ	”
ಯಾರಾಲ ಎಲೆ ಹೆಣ್ಣೆ	”
ನಿನಗೆ ಬಳೆಯನು ತೊಡಿಸಿದೋರು	”
ಯಾರೆಲ ಎಲೆ ಹೆಣ್ಣೆ	”
ಬಳೆಯನು ತೋಡಾಕೆ	”
ಎಲ್ಲೀಗೆ ಹೋಗಲಿಲ್ಲ	”
ನಮ್ಮ ಮನೆಯ ಹತ್ತಿರಕೆ	”
ಅವ್ನು ಬಂದಾನೆ ಬಳೆಗಾರ	”
ಪಡಸಾಲೆ ಮೇಲಕೆ	”
ಅವ್ನು ಬಂದಾನೆ ಬಳೆಗಾರ	”
ಬಳೆಯನು ತೊಡುಬಾರೇ	”
ನೀನು ಬೆಲೆವೆಣ್ಣೆ	”
ಎಂದಾನು ಬಳೆಗಾರ	”
ಆಗಾಲೆ ರಾಯಾರೆ	”
ಏನೆಂದು ಕೇಳ್ಯಾರೆ	”
ಏಕಾಲ ಎಲೆ ಹೆಣ್ಣೆ	”
ಬಿನ್ನಾಣೇಯ ಬಳೆಗಳು	”
ನೀನೇಕೆ ತೊಟ್ಟೇಯೆ	”
ಬಳೆಯಾನೆ ತೊಡುವಂಕೆ	”
ಅತ್ತಿಲ್ಲಾ ಮಾವಿಲ್ಲಾ	”
ನನ ಚಿಕ್ಕ ಮೈದರಸನಿಲ್ಲಾ	”

ಬಳೆಯನು ತೊಡುವಾಕೆ	ಸುವ್ವಲಾಲೀ
ಅತ್ಯಾಕೆ ಮಾವ್ಯಾಗೆ	”
ಚಿಕ್ಕ ಮೈದರೆಸರ್ಯೇಕೆ	”
ಮೊದಲೇಕೆ ಬೆಲೆ ವೆಣ್ಣೆ	”
ಹಂಗಂತ ಹೇಳೀದೆ	”
ಅವ್ನು ಕೇಳ್ಯಾನೆ ಬಳೆಗಾರ	”
ಏನು ಹೇಳಿದರೆ	”
ಕೇಳ್ಯಾರೆ ರಾಯಾರೆ	”
ಆಗಲೆ ಬಳೆಗಾರ	”
ನನಗೆ ಬಳೆಯಾನೆ ತೊಟ್ಟಾನೆ	”
ಬಳೆಯಾನೆ ತೊಟ್ಟಾರೆ	”
ಅವನೇನೆಂದು ಹೇಳ್ಯಾನೆ	”
ಬಹಳಾವು ಹಸಿವಾಯ್ತು	”
ಅಡಿಗೇಯ ಮಾಡ್ಲೆಣ್ಣೆ	”
ಅಕ್ಕೀಯ ಹಾಕೀದೆ	”
ತುಪ್ಪಾವ ಕಾಸೀದೆ	”
ನಾನು ಹರಿವಾಣ ಬೆಳಗೀದೆ	”
ನೀರಾನೆ ಕೊಡಾಕೆ	”
ನಾನು ನೀರಾನೆ ಕೊಡಾಕೆ	”
ನಾನು ಹೋದೆ ರಾಯಾರೆ	”
ಆಗಲೆ ಬಳೆಗಾರ	”
ಏನಂದು ಕೇಳ್ಯಾನೆ	”
ನಿನ ಗಂಡ ಚೆನ್ನಿಗರಾಯ	”
ಉಣ್ವಂತ ಹರಿವಾಣ	”
ನಿನ ಗಂಡ ಚೆನ್ನಿಗರಾಯ	”
ಕುಡಿಯಂತ ಗಿಂಡೀಯ	”

ಅವರು ಕುಡಿಯಂತ ಗಿಂಡೀಯ ಸುವ್ವಲಾಲೀ
ನೀನು ಕೊಟ್ಟಾರೆ ಎಲೆ ಹೆಣ್ಣೆ ,,
ನಿನ ಗಂಡ ಚೆನ್ನಿಗರಾಯ ,,
ಮನಗಂತ ಮಂಚಾವ ,,
ನನಗೆ ಮಂಚಾವ ಕೊಟ್ಟಾರೆ ,,
ನಾನು ಊಟಾವ ಮಾಡುತ್ತೀನಿ ,,
ಆಗಲೆ ಬಳೆಗಾರ ,,
ಅವ್ನು ಏನಂತ ಹೇಳ್ಯಾನೆ ,,
ಮಂಚಾವ ಕೊಟ್ಟಾರೆ ,,
ನನ ಸುಮ್ಮನೆ ಬಿಟ್ಟಾರೆ ,,
ಆಗಲೆ ಅಂಗಂಥ ,,
ನಾನು ಹೇಳೀದೆ ರಾಯಾರೆ ,,

ಆಗ ಚೆನ್ನಿಗರಾಯ ,,
ಸತ್ಯಾವ ಮೆಚ್ಚೀದ ,,
ನಿನ ಸತ್ಯಾಕೆ ,,
ಮೆಚ್ಚೀದೆ ಬೆಲೆವೆಣ್ಣೆ ,,
ಚಿಕ್ಕ ಪ್ರಾಯದಲ್ಲಿ ,,
ಲಗ್ನಾವ ನಾನಾದೆ ,,
ದಂಡೀಗೆ ನಾ ಹೋದೆ ,,
ಬಳೆಗಾರ ಶೆಟ್ಟಯ್ಯ ,,
ಬಳೆಗಾರ ಶೆಟ್ಟಯ ,,
ನಾವೇಶ ಹಾಕಿದೆ ,,
ಬಳೆಗಾರನಾಗಿ ನಾ ಬಂದೆ ,,
ನಾನೇಯ ಹಾದೇಯಿ ,,
ಬಳೆಯೆಂದು ಸಾರೀದೆ ,,

ಬಳೆಯನು ತೊಡುವಾಕೆ	ಸುವ್ವಲಾಲೀ
ನಿನ್ನ ಲಗ್ನಾವ ಆಗಿಲ್ಲಿಗೆ	,,
ಹನ್ನೆರಡು ವರ್ಷವಾಯ್ತು	,,
ಹನ್ನೆರಡು ವರ್ಷದಿಂದ	,,
ನಿನ್ನಾನೆ ನೋಡಲಿಲ್ಲಾ	,,
ನಿನ ನೋಡಬೇಕಂತ	,,
ನಾನ್ಹೇಯೆ ಬಂದೆನ್ಹೆಣ್ಣೆ	,,
ಆಗಾಲೆ ಆಬಾಲೆ	,,
ಏನಂದು ಹೇಳ್ಯಾಳೆ	,,
ನಿನ ಸತ್ಯವ ನೋಡಬೇಕು	,,
ಅಂತಾವ ಬಂದೆನೆಣ್ಣೆ	,,
ಆಗಲೆ ಆ ಪುರುಷ	,,
ಹಂಗಂತ ಹೇಳ್ಯಾನೆ	,,
ನಾಕಾಣೆ ನಿನ್ನಾಣೆ	,,
ಪತಿಪುರುಷ ಅಂತಾವ	,,
ಆಗಲೆ ಆಬಾಲೆ	,,
ಕಾಲನೆ ತೊಳೆದಾಳೆ	,,
ಕೈಎತ್ತಿ ಮುಗಿದಾಳೆ	,,
ನಿಮ ಸತ್ಯಕೆ ನಾ ಮೆಚ್ಚಿದೆ	,,
ನಾನೀಗ ಇದ್ದೇನೆ ರಾಯಾರೆ	,,
ಆಗಲೆ ಚೆನ್ನಿಗರಾಯ	,,
ತಾಯಮ್ಮ ಕರೆದಾಳೆ	,,
ತಾಯಮ್ಮು ಬಂದಾಳೆ	,,
ಅವಳು ಏನೆಂದು ಹೇಳ್ಯಾಳೆ	,,
ಚಿಕ್ಕ ಹೆಣ್ಣನು ತಂದು	,,

ನಾನು ಲಗ್ನಾವ ಮಾಡೀದೆ	ಸುವ್ವಲಾಲೀ
ಆಗಾಲೆ ದಂಡಿಗೋದೆ	,,
ಸನ್ನವ್ವ ನಿನ್ ಸೊಸೆಗೆ	,,
ಬುದ್ದೀಯ ಏನೆಂದು ಕಲಿಸ್ಹೀಯ	,,
ಕೆಟ್ಟ ಬುದ್ದಿಗಳ	,,
ನೀನು ಕಲಿಸಿರಬಹುದು ಅಂತಾವ	,,
ನಾನು ನೋಡಬೇಕಂತಾವ	,,
ನಾನು ಬಳೆಗಾರನಾಗೀದೆ	,,
ನಾನು ನೋಡುಬೇಕಂತಾವ	,,
ನಾನು ಬಂದಿದ್ದೆ ತಾಯಮ್ಮ	,,
ನಾ ಕಾಣೆ ನಿನ್ನಾಣೆ ಚೆನ್ನಿಗರಾಯ	,,
ನನ್ಗೆ ಮಗನೆಂದು ತಿಳಿಯಾದು	,,
ಆಗಲೆ ಚೆನ್ನಿಗರಾಯ	,,
ನಾನು ಬಣಜೀಗನಾಗಿ ಬಂದೆನವ್ವ	,,
ನಿನ್ನ ಸತ್ಯಾವ ಮೆಚ್ಚೀದೆ	,,
ಮೆಚ್ಚಿದೆ ಚೆನ್ನಿಗರಾಯ	,,
ನಾನು ಅತ್ತೀರ ಸೊನೇಯರ	,,
ಸತ್ಯಾವ ಮೆಚ್ಚಿದೆ	,,
ಮೆಚ್ಚಿ ಚೆನ್ನಿಗರಾಯ	,,
ಆಗ ಚೆನ್ನಿಗರಾಯ	,,
ಹಂಗಂತ ಹೇಳ್ಯಾನೆ	,,
ಸುವ್ವೀ ಸುವ್ವಮ್ಮಲಾಲೀ ಸುವ್ವಲಾಲೀ ।	
ಜಾಣೇ ಜಾಗರದೆಣ್ಣೆ ಸುವ್ವಲಾಲೀ ।	

ದೇವಗನ್ನೇರು ತಾನಾಕೆ ನಡೆದಾರು

ಮಳೆಯ ಗಾಳಿ ಬಂದು—ನಮ್ಮ ಸೀರೆ ಮಾಯವಾದವೇನೆ ?
ಕಳ್ಳರು ಬಂದು ನಮ್ಮ—ಸೀರೆ ಕದ್ದೊಯ್ದರೇನೆ ?
ಸುಂಟರಗಾಳಿ ಬಂದು ನಮ್ಮ—ಸೀರೆ ಸುತ್ತಿಕೊಂಡೊಯಿತ್ತೇನೆ !

ಜಾನಪದ ಗೀತೆಗಳು ಒಂದು ಜನಾಂಗದ ಒಂದು ಸಂಸ್ಕೃತಿಯ ಹೃದಯದಿಂದ ಮೂಡಿಬಂದ ಸಾರಸ್ವತ ಸಂಪತ್ತು. ನಾಗರೀಕತೆಯಿಂದ ವಿರೂಪಗೊಳ್ಳದೆ ತನ್ನ ಸಹಜ ಸೊಬಗನ್ನು ಉಳಿಸಿಕೊಂಡು ಅವಿನಾಶಿಯಾಗಿ ಕಳಕಳಿಸುತ್ತಿರುವ ಕುಸುಮ ಸಂಚಯ. ಹೃದಯದಿಂದ ಮೂಡಿ, ನೇರವಾಗಿ ಹೃದಯವನ್ನೂ ಪ್ರವೇಶಿಸಿ, ಪ್ರವೇಶಿಸಿದ ಹೃದಯವನ್ನು ತನ್ನದಾಗಿಸಿಕೊಳ್ಳುವ ಶಕ್ತಿ ಜಾನಪದ ಗೀತೆಗಳಿಗಿದ್ದಂತೆ ಮತ್ತಾವ ಸಾಹಿತ್ಯ ಪ್ರಕಾರಕ್ಕೂ ಇಲ್ಲ. ಎಂತಲೇ ಜಾನಪದ ಗೀತೆಗಳು ಕಾಲಕಾಲಕ್ಕೆ, ನವಸಾಹಿತ್ಯ ಸೃಷ್ಟಿಗೆ ಸ್ಫೂರ್ತಿ ಚೇತನವಿತ್ತು, ಅಮರ ಗಂಗಾ ಪ್ರವಾಹದಂತೆ ಹರಿದುಬಂದಿದೆ.

ದೇಶ ದಾಸ್ಯದಲ್ಲಿದ್ದಾಗ ಜನ ತಮ್ಮದಲ್ಲದ ಪರಸಂಸ್ಕೃತಿಗೆ ಮಾರುಹೋದಾಗ ಜಾನಪದ ಗೀತೆಗಳು ನಾಗರೀಕತೆಯ ಕೃತಕ ಮೆರುಗಿಗೆ ಮಾರುಹೋದ ಜನಕ್ಕೆ ಬೇಡವಾಗಿದ್ದವು. ಆದರೆ ಆ ಜನಗಳ ಸ್ವಾತಂತ್ರ್ಯ ತೃಷೆ ಜಿನುಗಿದಾಗ, ಜನರ ಕಣ್ಣು ಸಹಜ ಸರಳತೆಯತ್ತ ತಿರುಗಿದಾಗ, ಮತ್ತೆ ಜಾನಪದ ಗೀತೆಗಳು ತನ್ನ ಪೂರ್ವದ ಸ್ಥಾನವನ್ನು ಅಲಂಕರಿಸಿ ಜನತೆಗೆ ಸ್ಫೂರ್ತಿಯನ್ನೊದಗಿಸಿದವು. ನವೋದಯದ ಹರಿಕಾರರಾದವು.

ಜಾನಪದ ಗೀತೆಗಳು ಕೇವಲ ಸಾಹಿತ್ಯಕ್ಕಷ್ಟೇ ಸ್ಫೂರ್ತಿಯನ್ನು ನೀಡಬಲ್ಲ ಶಕ್ತಿಯನ್ನು ಪಡೆದಿಲ್ಲ. ಅವು ತಮ್ಮ ಸಂಗೀತ, ನೃತ್ಯ, ಕಲೆಗಳಿಗೂ ಸ್ಫೂರ್ತಿಯನ್ನು ನೀಡಬಲ್ಲವು. ಆದರೆ, ಅವಾಗಿ ಅಲ್ಲ. ಜಾನಪದ ಗೀತೆಗಳು ನಮ್ಮ ಬದುಕಿಗೆ ನೀಡಬಲ್ಲ ಕಾಂತಿಯನ್ನು ಪಡೆಯುವ ಕೆಲಸ ನಮ್ಮ ದೇಶದಲ್ಲಿ ಆಶ್ಚಾಗಿ ನಡೆದಿಲ್ಲ.

—ಶ್ರೀ ತ. ರಾ. ಸುಬ್ಬರಾವ್

ದೇವಗನ್ನೇರು ತಾನಾಕೆ ನಡೆದಾರು....*

ಹದಿನಾಲ್ಕು ಮಂದಿ—ಅವರು ದೇವಗನ್ನೇರು ।
ಕೈ ಕೈ ಒಡುಕೊಂಡು ತಾನಾಕೆ ನಡೆದಾರು ।
ದೇವಗನ್ನೇರು ತಾನಾಕೆ ನಡೆದಾರು ।
ಒಳ್ಳೆ ನೀರು ಬಾವಿ—ಅಕ್ಕ ಮಲ್ಲಿಗೆ ವನ ತೋಟ ।

ನಗೆಯನಾಡುತ ದೇವಗನ್ನೇರು ಜಳಕಕೆ ನಡೆದಾರು ।
ಉಟ್ಟಂಥ ಸೀರೆಗಳ ಕನ್ನೇರು ಕಟ್ಟೀ ಮೇಲೆ ಮಡಗಿ ।
ತೊಟ್ಟಂಥ ಒಡವೆಗಳ ಅವರು ಕಟ್ಟಿಮೇಲೆ ಮಡಗಿ ।
ಮೈ ಕೈ ಮರತಂಗೆ ಕನ್ನೇರು ತಾನಮಾಡುವಾಗ ।

ಮೈ ಕೈ ಮರೆತಂಗೆ ಬಾಲೇರು ಜಲಕ್ರೀಡೆಯಾಡುವಾಗ ।
ಮಾಯವಾಗಿ ಬಂದ ಸ್ವಾಮಿ । ಮಾಯಕಾರ ಕೃಷ್ಣ ।
ಲೋಲನಾಗಿ ಬಂದ ಸ್ವಾಮಿ । ಲೋಲಕಾರ ಕೃಷ್ಣ ।
ಸೀರೆನೆಲ್ಲ ಕದ್ದು ಸ್ವಾಮಿ ಮೂಟೆ ಕಟ್ಟಿದಾನು ।

ಒಡವೆನೆಲ್ಲಾ ಕದ್ದು ಸ್ವಾಮಿ ಭರಣೇಗೆ ತುಂಬಿದಾನು ।
ಎಡಗೈಯಲೊಂದು ಮೂಟೆ–ಸ್ವಾಮಿ ಬಲಗೈಯಲೊಂದು ಮೂಟೆ।
ಎತ್ತ ಹೋಗುಲೆನುತ ಸ್ವಾಮಿ ಚಿಂತೆಮಾಡುವಾಗ ।
ಓಡಿ ಓಡಿ ಹೋಗಿ ಸ್ವಾಮಿ ಹೊನ್ನೇಯ ಮರನೇರಿ ।

ಹೊನ್ನೇಯ ಮರದಮೇಲೆ ಕೃಷ್ಣ ಕೊಳಲನೂದುವಾಗ ।
ಬಾಳಿಪಟ್ಟಿಯ ಸೀರೆ ಕೃಷ್ಣ—ಗಾಳಿಗೆ ಕಟ್ಟಿದಾನು ।
ಇಂಬಿ ಹೂವಿನ ಸೀರೆ ಸ್ವಾಮಿ—ಕೊಂಬೆಗೆ ಕಟ್ಟಿದಾನು ।
ತಾನಾವ ಸಾಕುಮಾಡಿ ದೇವಗನ್ನೇರು—ತಡಿಗೆ ಬಂದರಾಗ ।

---

* ಈ ಹಾನಪದ ಕಥನಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ಗೊಲ್ಲರು ಸಂತೋಷ ಸಂದರ್ಭಗಳಲ್ಲಿ ಹಾಡುವರು.

ಜಳಕವ ಸಾಕುಮಾಡಿ—ಬಾಲೇರು ದಡಕೆ ಬಂದರಾಗ ।
ಅಯ್ಯೋ ಅಕ್ಕನೋಡೆ ನಮ್ಮ ಸೀರೆನಿಲ್ಲವಲ್ಲೆ ।
ಯಾರು ಬಂದಾರಮ್ಮ ಈ ಕಾನನದೊಳಗೆ ।
ಅರಣ್ಯ ಮಧ್ಯದೊಳಗೆ—ಇಲ್ಲಿ ಗಿರಿಯ ಮಧ್ಯದೊಳಗೆ ।

ಯಾರು ಬಂದರಮ್ಮ ತಂಗಿ—ಈ ಕಾನನದೊಳಗೆ ।
ಮಳೆಯ ಗಾಳಿ ಬಂದು ನಮ್ಮ ಸೀರೆ ಮಾಯವಾದವೇನೆ ?
ಕಳ್ಳರು ಬಂದು ನಮ್ಮ ಸೀರೆ ಕದ್ದೊಯ್ದರೇನೆ ?
ಸುಂಟರಗಾಳಿ ಬಂದು ನಮ್ಮ ಸೀರೆ ಸುತ್ತಿ ಕೊಂಡೆಯಿತ್ತೇನೆ ।

ಮುಚ್ಚ್ಕರು ಬಂದರೇನಿ ನಮ್ಮ ಸೀರೆ ಮುಚ್ಚಿಕೊಂಡೊಯ್ದರೇನೆ ।
ಕಪಿಗಳು ಬಂದವೇನೆ ನಮ್ಮ ಸೀರೆ ಕಚ್ಚಿಕೊಂಡೊಯ್ದವೇನೆ ।
ಹೆಜ್ಜೆ ಚೆಂದ ನೋಡೀರಮ್ಮ—ಈತನ ಜಾಡ ನೋಡಿರಮ್ಮ ।
ಪುಟ್ಟ ಪುಟ್ಟ ಹೆಜ್ಜೆಗಳೇ—ಅಕ್ಕ ಚಿತ್ತಾರದ ಹೆಜ್ಜೆಗಳೇ ।

ದೊಡ್ಡ ದೊಡ್ಡ ಹೆಜ್ಜೆಗಳೇ—ನಮ್ಮ ಸ್ವಾಮಿಯ ಹೆಜ್ಜೆಗಳೇ ।
ಕೃಷ್ಣನ ಬಳಿಗೀಗ—ನಾವ್ಯಾ ಹ್ಗೆ ಹೋಗುವುದಮ್ಮ ।
ಸ್ವಾಮಿಯ ಎದುರಿಗೆ ನಾವ್ಯಾ ಹ್ಗೆ ನಿಲುವುದಮ್ಮ ।
ಮುತ್ತುಗುದೆಲೆಯ ತಂದು—ಕನ್ನೀರು ಮರೆಯಮಾಡಿಕೊಂಡು ।

ವೀಳ್ಯೆದೆಲೆಯ ತರಿಸಿ—ಬಾಲೇರು ಇಂಬಾಗುಟ್ಟುಕೊಂಡು ।
ಪೂವಿನೆಲೆಯ ತರಿಸಿ—ಕನ್ನೀರು ಮುಸುಕು ಹಾಕಿಕೊಂಡು ।
ಹುಣಿಸೆ ಎಲೆ ತರಿಸಿ—ಕನ್ನೀರು ಕುಪ್ಪಸ ಮಾಡಿಕೊಂಡು ।
ಬಾಳೆ ಎಲೆಯ ತರಿಸಿ—ಕನ್ನೀರು ಸೀರೆ ಮಾಡಿಕೊಂಡು ।

ಸಾಲಾಗಿ ಬಂದಾರೋ ಕನ್ನೀರು—ಸಾಲಾಗಿ ಬಂದಾರೋ ।
ಬಾರೇಲಿ ನಿಂದರೋ—ದೇವಗನ್ನೀರು ಬಾರೇಲಿ ನಿಂದರೋ ।
ಕೊಡು ಕೊಡು ದೇವ—ನೀ ಮಡದೀರ ಸೀರೆಗಳೆ ।
ಕೊಡು ಕೊಡು ದೇವ—ನೀ ಮಡದೀರ ಒಡವೆಗಳ ।

ಸೀರೆಯ ಕೊಡುವೆನು ಹುಡುಗೀರೆ ಶರಣುಮಾಡೀರೆಂದ ।
ಒಡವೆಯ ಕೊಡುವೆನು ಹುಡುಗೀರೆ ಕೈ ಮುಗಿಯಿರೆಂದ ।
ಒಂದು ಕೈಯನೆತ್ತಿ ಬಾಲೀರು ಶರಣು ಮಾಡಿದರು ।
ಒಂದು ಕೈಯ ಶರಣ ನಾನೊಪ್ಪನಲ್ಲ ಕಾಣೆ ।

ಎರಡೂ ಕೈಯನೆತ್ತಿ ದೇವಗನ್ನೇರ ಶರಣು ಮಾಡೀರೆಂದ ।
ತಾಯಿ ತಂದೆ ಹೊಟ್ಟೀಲಿ ಕೃಷ್ಣ ಹುಟ್ಟದೋನಲ್ಲ ಕಾಣೆ ।
ಅಕ್ಕತಂಗೀರೊಂದಿಗೆ ಸ್ವಾಮಿ ಬೆಳೆದವನಲ್ಲಾ ಕಾಣೆ ।
ಅವನಿಗೆ ನಾಚಿಕೆಲ್ಲ—ಅಕ್ಕ ನಮಗೇತರ ನಾಚೀಕೆ ।

ಅವನಿಗೆ ಸಿಗ್ಗಿಲ್ಲ—ಅಕ್ಕ ನಮಗೇತರ ಸಿಗ್ಗು ।
ಎರಡೂ ಕೈಯನೆತ್ತಿ ದೇವಗನ್ನೇರು ಶರಣುಮಾಡಿದರು ।
ಮಾಯದ ಗಾಳಿ ಬಂದು ಆಗಲೆ ಎಲೆಗಳು ಉದುರಾವೆ ।
ಸುತ್ತಿದ ಎಳೆಗಾಳಿ ದೇವಗನ್ನೇರ ಎಲೆಗಳು ಉದುರಾವೆ ।

ಸ್ವಾಮಿ ಕೆಲ ಕೆಲನೆ ನಗುತಾನೆ—ಕೃಷ್ಣ ಕಿನ್ನುಡಿ ನುಡಿಸುತಾನೆ ।
ಸ್ವಾಮಿ ಪಕಪಕನೆ ನಗುತಾನೆ—ಕೃಷ್ಣ ಜಾಗರವಾಡುತಾನೆ ।
ಮಧ್ಯಾಹ್ನ ಹೊತ್ತಾಯ್ತು ಸ್ವಾಮಿ ಮುಂದೋಗಬೇಕು ।
ನಮ ನಮ ಸೀರೆಗಳ ಕೃಷ್ಣ ನಮ ನಮಗೆ ಕೊಡಿರಯ್ಯ ।

ನಮ ನಮ ಒಡವೆಗಳ ಕೃಷ್ಣ ನಮ ನಮಗೆ ಕೊಡಿರಯ್ಯ ।
ನಿಮ್ಮ ನಿಮ್ಮ ಸೀರೆಗಳ ದೇವಕನ್ನೇರ ನೀವೇ ಉಟ್ಟುಕೊಳ್ಳಿ ।
ನಿಮ್ಮ ನಿಮ್ಮ ಒಡವೆಗಳ ಕನ್ನೇರ ನೀವೇ ಇಟ್ಟುಕೊಳ್ಳಿ ।
ತಮ್ಮ ತಮ್ಮ ಸೀರೆಗಳು ಬಾಲೀರು–ತಾವು ತಾವೆ ತೊಟುಕೊಂಡು ।

ತಮ್ಮತಮ್ಮ ಒಡವೆಗಳ ಹುಡುಗೀರು ತಾವುತಾವೆ ತೊಟುಕೊಂಡು ।
ಮಲ್ಲಿಗೆ ಹೂ ತಂದು ಕನ್ನೇರು ಮುಡಿಯ ತುಂಬೀಕೊಂಡು ।
ಮುಡಿಯ ತುಂಬೀಕೊಂಡೆ—ಕನ್ನೇರು ನೀರನು ಹೊತ್ತುಕೊಂಡು ।
ನೀರು ಹೊತ್ತುಕೊಂಡು ಕನ್ನೇರು—ಪಟ್ಟಣಕೆ ಹೊರಟಾರು ।

ಮನೆಗೆ ಬರುತೀನಿ ನನಗೆ ಹಾಲನು ಕೊಡಬೇಕು ।
ನೀ ಹಾಲಿಗೆ ಬರುವಾಗ ಸ್ವಾಮಿ—ನಿನ ಹಾವು ಕಡಿಯದ್ಹೇನೊ ।
ನನಗೆ ಹಾವು ಕಡಿದಾರೆ ಹೆಣ್ಣೆ—ಆಯುಷ್ಯವುಂಟುಕಾಣೆ ।
ದೊಡ್ಡಿಗೆ ಬರುತೀನಿ—ನನಗ ಮೊಸರ ಕೊಡಬೇಕು ।

ಮೊಸರಿಗೆ ಬರುವಾಗ ನಿನ್ನ ಹುಲಿಯು ತಿನ್ನದೇನೋ ।
ಹುಲಿಯು ಕಂಡಾರ್ಹೆಣ್ಣೆ ನನಗೆ ಹುಲ್ಲಿಕರುವೂ ಕಾಣೆ ।
ಮನೆಗೆ ಬರುತೀನಿ ನನಗೆ ತುವ್ವಾವ ಕೊಡಬೇಕು ।
ಮನೆಗೆ ಬರುವಾಗ ನಿನ್ನ ಚೇಳು ಕಡಿಯದೇನೊ ।

ಚೇಳು ಕಡಿದಾರ್ಹೆಣ್ಣೆ—ನನಗೆ ಮುಂತುರ ಉಂಟು ಕಣೆ ।
ಕೃಷ್ಣ ಮೂರು ಮಾತು ನುಡಿದು–ಸ್ವಾಮಿ ಗೋಕುಲ ಸೇರಿದಾನು ।
ನಾಕು ಮಾತನಾಡಿ ಸ್ವಾಮಿ ನಾಗಲೋಕಾಕ್ಹೋದ ।
ದೇವಗನ್ನೇರು ನೀರನು ಹೊತುಕೊಂಡು ಪಟ್ಟಣ ಸೇರಿದಾರು ।

ದೇವಗನ್ನೇರು ಕೃಷ್ಣನ ಹುಡಿಕ್ಯಾರೆ ।
ಕನ್ನೇರು ಕಾಡೆಲ್ಲಾ ತಿರುಗ್ಯಾರೆ ।
ದೇವಗನ್ನೇರು ಕಾಡೆಲ್ಲಾ ತಿರುಗ್ಯಾರೆ–ಕನ್ನೇರು ಕೃಷ್ಣನ ಹುಡಿಕ್ಯಾರೆ।



ಗಂಗೆ ಗೌರಿ ಜಗಳ

ಶಿವನು ಮಲಗೊ ಮಂಚ ನಿನಗೆ ಕೊಡುತ್ತೀನೀ ।
ಬರಿಯ ಮಂಚವ ತಕ್ಕೊಂಡು ಬಡಕೊಳ್ಳಲ್ಲೀನೆ ।
ಗುಟ್ಟಾಗಿ ನನ ಬಾಗದ ಗಂಡನ್ನ ಕೊಡುತ್ತೀನಿ ।

"ಸಾಹಿತ್ಯ ಜನಜೀವನದ ಪ್ರತಿಬಿಂಬ" ಎಂಬ ನುಡಿಯಂತೆ ಈ ಗೀತೆಗಳು ಭಕ್ತರ ಗುರುದೇವತಾಭಕ್ತಿ, ಪ್ರೇಮ, ಪರಿಶುದ್ಧತೆ, ಸೌಂದರ್ಯಪ್ರಿಯತೆ, ದಾನ, ಧರ್ಮ, ಪರೋಪಕಾರ, ತ್ಯಾಗ ಸೇವೆಗಳಿಂದ ಲಭಿಸತಕ್ಕ ಸಂತೃಪ್ತಿ ಮುಂತಾದ ಸದ್ಗುಣಗಳನ್ನು ಪ್ರತಿಬಿಂಬಿಸುತ್ತವೆ. ಅಲ್ಲದೆ ಅವರ ಜೀವನದ ನಡೆನುಡಿ, ಆಚಾರ ವಿಚಾರ, ಸುಖದುಃಖ, ಆಶೆ ಆಕಾಂಕ್ಷೆ. ವಿನೋದ ಹಾಸ್ಯ ಇವುಗಳನ್ನು ನವರಸ ಭರಿತವಾಗಿ ವ್ಯಕ್ತಪಡಿಸುತ್ತವೆ. ಮತ್ತು ದೈನಂದಿನ ದುಡಿಮೆಯಿಂದ ಉಂಟಾದ ಆಯಾಸ ಶ್ರಮಗಳನ್ನು ನೀಗಿಕೊಳ್ಳಲು ಒಂದೆಡೆ ಕಲೆತು ಮುಂದಿನ ದುಡಿಮೆಗೆ ಹುರುಪು ಉತ್ಸಾಹ ಚೇತನಗಳನ್ನು ಪಡೆದುಕೊಳ್ಳಲು ಸಹಾಯಮಾಡುತ್ತವೆ' ಜನ ಪ್ರಿಯವಾಗಿರುವುದರಿಂದ ಹೃನ್ಮನಗಳನ್ನು ಪರಿಶುದ್ಧಿಗೊಳಿಸಿ ಸೂರೆಗೊಳ್ಳುತ್ತವೆ.

...ಮಾನವನು ಮಾನವನಾಗಿಯೇ ಬಾಳಿ ಬಾಳ್ವೆಯನ್ನು ಸಾರ್ಥಕಪಡಿಸಿಕೊಳ್ಳಬೇಕಲ್ಲದೆ ದಾನವನ ದಾರಿ ಹಿಡಿದು ನಿರರ್ಥಕಪಡಿಸಿಕೊಳ್ಳಬಾರದು ಎಂಬ ಉನ್ನತ ಧ್ಯೇಯವನ್ನು ಅವು ಸಾರುತ್ತವೆ. ಇವುಗಳ ಆಂತಃಸ್ಫೂರ್ತಿಯಿಂದ ಲೋಕಕಲ್ಯಾಣ ವಾಗುತ್ತವೆ. ಇವು ಉನ್ನತ ಜೀವನದ ಮಹೋನ್ನತ ತತ್ವಗಳನ್ನು ಸಾರುವ ಕ್ಲಿಷ್ಟ ಗೀತೆಗಳಾದರೆ ದಿನನಿತ್ಯದ ಸಾದಾಜೀವನದ ಸರಳತೆಯನ್ನೂ ರಸನಿಮಿಷಗಳನ್ನೂ ವರ್ಣಿಸುವ ಲಘು ಗೀತೆಗಳೂ ಇವೆ. ಆದ್ದರಿಂದ ಅವು ಸ್ವಾರಸ್ಯವಾಗಿವೆ ಹಾಗೂ ಸುಲಲಿತವಾಗಿವೆ. ಅವುಗಳಲ್ಲಿ ಶೃಂಗಾರವಿದೆ, ಹಾಸ್ಯವಿದೆ, ಕರುಣವಿದೆ. ಇಲ್ಲಿ ಪಾಂಡಿತ್ಯವಾಗಲೀ ಶಬ್ದಾಲಂಕಾರವಾಗಲೀ ಇಲ್ಲ. ಇವು ಕೀರ್ತಿ, ಸ್ಥಾನ ಐಶ್ವರ್ಯ ಗಳ ಗಳಿಕೆಗಾಗಿ ರಚಿತವಾದುವೂ ಅಲ್ಲ. ಸಹೃದಯರು ಇವುಗಳನ್ನು ಓದಿ, ಹಾಡಿ ನಲಿದಾಡಿ ಜನತೆಯಲ್ಲಿ ಪ್ರಚಾರಮಾಡುವುದರ ಮೂಲಕ ತಮ್ಮ ಬಾಳಿನಲ್ಲಿ ಹೊಸ ಕಾಂತಿ, ಸ್ಫೂರ್ತಿ, ಸೊಬಗು ಕಂಡುಕೊಂಡರೆ ನಮ್ಮ ಶ್ರಮ ಸಾರ್ಥಕವಾಯಿ ತೆಂದು ನಂಬುತ್ತೇವೆ.

—ಶ್ರೀಶ್ರೀ ಚಂದ್ರಶೇಖರನಾಥಸ್ವಾಮಿಜಿ, ಬಿ. ಎ.

ಗಂಗೆ ಗೌರಿ ಜಗಳ*

ಶಿವನು ತಂದಾಕ್ಹೀದ ಮಲ್ಲಿಗೆ ತೋಟ ।
ತೋಟಕೆ ವೀರಣ್ಣ ಕೋಟಿ ಕಟ್ಟಿದನು ।
ತೋಟಾದಾಗಾಳ ಹೂವ ಚೆಂದಾಗಿ ಬಿಳಿದು ।
ಕುಯ್ದಾಳೆ ಪಾರ್ವತಿ ಮಲ್ಲಿಗೆ ಹೂವ ।
ಕುಯ್ದಷ್ಟು ಮಲ್ಲಿಗ್ಹೂವ ರಾಶಿಮಾಡಿದಳು ।
ಸಂಪಿಗೆ ಮಲ್ಲಿಗೆ ಜಾಜಿ ಪಾರ್ವತಿ ಮುಡಿದು ।
ಸಣ್ಣ ಮಲ್ಲಿಗೆ ಹೂವ ಶ್ರೀ ಗೌರಿ ಮುಡಿದು ।
ಮುಡಿದು ಮಿಕ್ಕಿದ ಹೂವು ತಟ್ಟೀಲಿಸುರಿದು ।
ಮನೆಯಲ್ಲಿ ಇರುವೋನೆ ಮಗನೆ ವೀರಣ್ಣ ।
ಬಾರಪ್ಪ ಚೆನವೀರ ಬಾರೋ ನನ ಮಗನೆ ।

ಕರೆದಂಥ ಮಾತೇನೆ ತಾಯಿ ಪಾರ್ವತಿಯೆ ?
ಈ ಹೂವನಾದರೆ ಗಂಗೇಗೆ ಕೊಟ್ಟುಬಾರೊ ಮಗನೆ ।
ಒಳ್ಳೀದು ನಮ ತಾಯಿ ನಾ ಹೋಗಿ ಬರುವೆ ।
ಹೋದಾನು ಚೆನವೀರ ವಾಡೆಮೀಲಿ ಇಳಿದು ।
ನಿಂತಾನು ಚೆನುವೀರ ಗಂಗೆ ಅರಮನೇಲಿ ।
ತಾಯೀರೊ ನಮ್ಮಮ್ಮ ಚಿಕ್ಕಮ್ಮ ಗಂಗಮ್ಮ ।
ನಮ್ಮಮ್ಮನಾದರೆ ಈ ಹೂಗಳೆ ಕಳಿಸಿದಳೆ ।
ಎಲ್ಲೆಲ್ಲಿ ವೀರಣ್ಣ ಹೂಗಳ ನೋಡೋಣಾ ।
ಹೂಗಳ ನೋಡಿ ಗಂಗೆ ಏನೆನ್ನುತಾಳೆ ।
ಅಯ್ಯ ಒಳ್ಳೆ ಒಳ್ಳೆ ಹೂವನೆಲ್ಲಾ–ನಿಮ್ಮಮ್ಮ ಮುಡಿದು ।
ಬಾಡಿ ಬತ್ತಿದ ಹೂವ–ಅವಳು ನನಗೆ ಕಳಿಸ್ಯಾವಳೆ ।
ಒಲ್ಲೆನಂತ ಗಂಗೆ ಓಣೀಗೆ ಚೆಲ್ಲಿ ।

---

*ಈ ಬಗೆಯ ಕೆಲವು ಪದಗಳನ್ನು ಬಯಲುನಾಡಿನ ಹಳ್ಳಿಗಳಲ್ಲಿ ದೊಂಬಿ ಪಾಸರು ತಂಬೂರಿ ನುಡ್ಸಿಸಿಕೊಂಡು ಹಾಡುವರು.

ಬ್ಯಾಡ ವೆಂತಲಿ ಗಂಗೆ ಬೇಲಿಗೆ ಚೆಲ್ಲಿ ।
ಹಿಂದಲೆ ಗೌರಮ್ಮ ಒಂದಾಗಿ ಬಂದು ।
ಅದು ಏನೆ ಎಲಗಂಗೆ ನೀನಾಡ್ದ ಮಾತು ।
ಸಾಲಾದ ನನ ಕೋಟಿ ಸರಿ ಬಂದಿಯೇನೆ ?

ಸರಿಯವಳು ನಾನಾಲ್ಲಾ ಎಲೆ ಗೌರಿಯ್ಹೆಂಗೆ ।
ಸನತಿಯಂಗಾದೆ ಈತನಲ್ಲಿ ಸನುನಲ್ಲ ।
ಶಿವನ್ಹೆಂಗೆ ತಂದಾ—ಶಿವನೆಲ್ಲಿ ನಿನ ತಂದನೆ ।
ಶಿವಲೋಕದಿಂದ—ಬೇಟ್ಟಿಗೋದ ಶಿವನ ।
ನೀನು ಬೆನ್ನಾಡಿ ಬಂದೆಯಲ್ಲೇ ।
ಕೂಡಿ ನೀ ಬಂದೆಲ್ಲೆ ಕುಲಕೆಟ್ಟಗಂಗೆ ।
ಮೆಚ್ಚಿ ನೀ ಬಂದೆಲ್ಲೆ ಬೆಸ್ತಾರ ಹುಡುಗಿ ।
ಮೀನು ಮಾರುವರಲ್ಲೆ ನಿಮ್ಮಪ್ಪದೀರು ।
ಸೀಗಡಿ ಮಾರುವರಲ್ಲೆ ನಿಮ್ಮಣ್ಣದೀರು !
ಬೆಣ್ಣೆ ಹೊರುವರಲ್ಲೆ ನಿಮತಾಯಿ ತಂದೆಗಳು ।
ಸುಣ್ಣ ಸುಡುವರಲ್ಲೆ ನಿಮು ಬಂಧುಬಳಗ ।
ನೀ ಹೀನ ಕುಲವಲ್ಲೆ ನೀ ಕುಲಗೆಟ್ಟ ಗಂಗೆ ।

ಜಡೆಜಡೆ ಹಿಡಕೊಂಡು ಜಗಳವಾಡಿದರು ।
ಹೊರ ಸೆರಗ ಹಿಡಕೊಂಡು ವೈರವಾಡಿದರು ।
ಗಂಗಮ್ಮ ಕೆಳಗಾಗಿ ಗೌರಿ ಮೇಲಾಗಿ ।
ಎರಡು ಮೂರು ಪೆಟ್ಟು ಹೊಡೆದಾಳೆ ಗೌರಿ ।
ಗಂಗಮ್ಮ ಕೆಳಗಾಗಿ ಗೌರಿ ಮೇಲಾಗಿ ।
ಎರಡು ಮೂರು ಪೆಟ್ಟು ತಡೆದಾಳು ಗಂಗೆ ।
ನಿನ ಕಯ್ಯಿ ಬರುತೈತೆ ತಪ್ಪಿಸಿ ಕೊಳ್ಳೆ ।
ಅಷ್ಟರಲ್ಲಿ ಕಂಕಣದಿಂದ ಗಂಗೆ ಕೈಎತ್ತಿ—
ಅಷ್ಟರಲ್ಲಿ ಶ್ರೀಗೌರಿ....

ತನುಮಯದಿಂದ ಸೂತಕವಾದಳು ।

ಸೂತಕವಾದ ಸುದ್ದಿ ಗಂಗಮ್ಮ ಕೇಳಿ ?
ನಮ್ಮಕ್ಕ ನನಕೈಗೆ ಸಿಕ್ಕಿದಾಳೆಂದೂ ।
ಉಗುರಪ್ಪೆ ವಿಭೂತಿ ಈ ಭೂಮಿ ಮೇಲ್ಹಾಕಿ ।
ಮಳೆ ದೇವರು ಕರೆದು ಆಣೆ ಮಾಡಿದಾಳು ।
ಗಾಳಿ ದೇವರು ಕರೆದು ಬಾಷೆ ಮಾಡಿದಾಳು ।
ಸುತ್ತೇಳು ಸಮುದ್ರಾವು ಬತ್ತೋಗಲೆಂದು ।
ಹಕ್ಕಿ ಕುಡಿಯೊಕ್ಕಿಷ್ಟು ನೀರಿಲ್ಲದಾಗೆ ।
ನೀರು ಮಾಯ ಮಾಡಿದಾಳು ನಿಜವಾದ ಗಂಗೆ ।
ಹಾಲು ಬೆಟ್ಟ ಸೇರಿದಳು ಮಾಯಕಾರಿ ಗಂಗೆ ।

ಮೂರುದಿನ ತುಂಬೀತು ಗೌರಮ್ಮಗಿನ್ನು ।
ಮನೆಯಲ್ಲಿ ಇರುವೋರೆ ಮಗನೆ ವೀರಣ್ಣ ।
ಬಾರಪ್ಪ ನನ ಕಂದಾ ಮಗನೆ ಚಿನುವೀರ ।
ಕರೆದಂಥ ಮಾತೇನೆ ತಾಯಿ ಪಾರ್ವತಿಯೆ ।
ಅಪ್ಪ ನಾನು ಸೂತಕವಾದೆ ನೀರ ತಾರೋ ಮಗನೆ ?
ನಾನೇನ ಮಾಡಲೀ ನನ್ನ ಹೆತ್ತ ಗೌರಮ್ಮ ।
ಶಿವಭಕ್ತರ ಮನೆಗ್ಹೋಗಿ ನೀರು ನೀ ತಾರಪ್ಪ ।
ಶಿವಭಕ್ತರ ಮನೆಯಲ್ಲಿ ಶಿವಪೂಜೆಗಿಲ್ಲಾ ।
ನಮ್ಮತ್ತೆ ಕಟ್ಟಸ್ಯವಳೆ ರತ್ನಾದ ಕೊಳವು ।
ರತ್ನದ ಕೊಳಕ್ಕೊಗಿ ನೀರು ತಾ ಮಗನೆ ।
ರತ್ನದ ಕೊಳದಲ್ಲಿ ರತ್ನ ಬೆಳದಾತೆ ।
ನಮ್ಮನ ಕಟ್ಟಸ್ಯವನೆ ಮುತ್ತಿನ ಕೊಳವು ।
ಮುತ್ತಿನ ಕೊಳದಲ್ಲಿ ಮುತ್ತು ಬೆಳೆದಾವೆ ।

ನಾನು ಏನು ಮಾಡಾಲೆ ನಾನ್ಹೆತ್ತ ಗೌರಮ್ಮ ।
ಬ್ರಾಹ್ಮಣರ ಮನೆಗ್ಹೋಗಿ ನೀರು ತಾರೊ ಮಗನೆ ।

ಅಮ್ಮ ಬ್ರಾಹ್ಮಣರ ಮನೆಯಲ್ಲಿ ಬಳಸೋಕೆ ಇಲ್ಲಾ ।
ಇನ್ಯಾಕೊ ನನ ಕಂದಾ ನಾನು ಬಾಳುವುದು ।
ಕಾಶೀಗೆ ಹೋಗಿ ಬಾರೋ ಕಂದ ವೀರಣ್ಣಾ ।
ಕಾಶೀಗೆ ಹೋಗಲು ಹಣವಾಗಬೇಕು ।
ಕಂಡ್ಹೋಗೋ ಮಗನೆ ಹಣಕೇನು ಕಮ್ಮಿ ।
ಹನ್ನೆರಡು ತಂಬಿಗಡ್ಡಿ ಕಟ್ಟದನು ಹಣವೂ ।
ಆನೆ ಕುದರೆಮೇಲೆ ಹಣವೇರಿಕೊಂಡು ।
ನಡೆದಾನು ಕಾಶೀಗೆ ನೀರುಕ್ಹೋಗಿ ।
ಅಲ್ಲಿ ಹದಿನಾರು ಸಾವಿರ ದೇವ ಬ್ರಾಹ್ಮಣರು ।
ಎದ್ದಾನು ವೀರಣ್ಣ ಕಾಶಿ ಪ್ರಯಾಣವು ।

ನಡೆದಂಥ ಪಾದಕ್ಕೆ ಬೊಬ್ಬೆ ಎದ್ದಾವು ।
ಬೀಸೀದ ತೋಳೀಗೆ ರಕ್ತ ಇಳಿದಾವು ।
ಕಾಶಿವಿಶ್ವನಾಥ ಕಾಳ ಭೈರುವನು ।
ಇಲ್ಲೀಗ್ಯಾಕೆ ಬಂದೇಯೊ ಕಂದಾ ವೀರಣ್ಣ ।
ನೀರು ನಾ ಬೇಕಾಗಿ ಬಂದೇನು ಸ್ವಾಮೀ ।
ಅಪ್ಪ ಕಾಶೀಲಿ ನೀರಿದ್ರೆ ಕುಂಡ್ಹೋಗೋ ಕಂದಾ ।
ಕಾಶಿನೆಲ್ಲಾ ಹುಡುಕಿದರು ನೀರು ಕಾಣ ಬರಲಿಲ್ಲ ।
ಆನೆ ಕುದುರೆಗಳ ಧರ್ಮ ಮಾಡಿದಾನು ವೀರಣ್ಣ ।
ಬರಿಕೈಲಿ ಬರುತಾನೆ ತಾಯಿದ್ದ ಬಳಿಗೆ ।

ಮಗನು ಬರುವೊ ಹಾದಿ ಗಂಗಮ್ಮನೋಡಿ ।
ಗೌರಿಗೂ ಮಗನ್ಹುವುದು ನನಗೂವೆ ಮಗನು ।
ನನ ಮಗ ಈಗಲೆ ಹಸಿದು ಬರುತಾನೆ ।
ವೀರಣ್ಣ ಬರೋದಾರಿ ಸಣ್ಣದೊಂದ್ಹಳ್ಳ ।
ಆ ಹಳ್ಳದಲ್ಲೀಗ ನೀರು ಕಂಡಾನು ವೀರಣ್ಣ ।
ಕುಂಡ್ಹೋಗೊ ನೀರು ನೋಡ್ಹೀಗ ಏನಂಬುತಾನೆ ।

ಈಗಲೆ ನಮ ತಾಯಿ ಸೂತಕ ತೀರುತೈತೆ ।

ಕುಂಡ್ಹೋದ ಬುತ್ತಿ ಅನ್ನ ಇಲ್ಲಿ ಬಚ್ಚಿದಾನು ।
ಕೈಕಾಲ ಮುಖವನ್ನು ಬೇಗ ತೊಳೆದಾನು ।
ತಾನವನ್ನೇ ಅಲ್ಲೀಗ ಮಾಡಿದಾನು ।
ಶಿವನೀಗೆ ಶಿವಪೂಜೆ ಅಲ್ಲಿ ನಡೆಸ್ಯಾನು ।
ಕುಂಡ್ಹೋದ ಅನ್ನವನ್ನು ಎರಡುಪಾಲು ಮಾಡಿ ।
ಗಂಗೆ ಪಾಲನ್ನವನೆ ಗಂಗೆಗೆ ಬಿಟ್ಟಾ ।
ತನ್ನ ಪಾಲನ್ನವನೆ ತಾನೂಟಮಾಡಿ ।
ಹನ್ನೆರಡು ಕಂಬಿ ಆಡ್ಡೆನೀರು ಮಗೆದಾನು ।
ನೀರ ಮಗೆದ ಅರುಬಿ ಹೆಗಲಮೇಲೆ ಮಡಗಿ ।
ಮುಂದಾಕೆ ಮಾರ್ಹೆಜ್ಜೆ ಬಂದಾ ವೀರಣ್ಣ ।

ಅಷ್ಟರಲ್ಲಿ ಗಂಗೇಯು ನೋಡಿದಾಳು ಅಲ್ಲಿ ।
ನನ ಸವತಿ ಗೌರೀಗೆ ನೀರು ಹೋಗುತಾದೆ ।
ಹಳ್ಳದಲ್ಲಿ ನೀರು ಮಾಯಮಾಡಿ ಗಂಗೆ ।
ಹೆಗಲ ಮೇಲಿದ್ದ ನೀರು ಮಾಯ ಮಾಡಿದಾಳು ಗಂಗೆ ।
ಇವು ಎಲ್ಲಾ ನಮ ತಾಯಿ ಗಂಗಮ್ಮ ಮಾಯಗಳು ।
ಬರಿಕೈಲಿ ಬರುತಾನೆ ತಾಯಿ ಇದ್ದ ಬಳಿಗೆ ।
ನೀರೆಲ್ಲೊ ? ನೀರೆಲ್ಲೊ ? ಮಗನೆ ವೀಡಣ್ಣ ?
ನೀರು ನಾ ಕಾಣೆನವ್ವ ನಿನ್ನ ನಾ ಕಂಡೆ ।
ಕಾಶಿನೆಲ್ಲಾ ಬಳಸಿದರು ನೀರು ಕಾಣಬರಲಿಲ್ಲಾ ।
ಗವಿಯಲ್ಲಿ ತೀರ್ಥಾವೂ ಒಂದು ಸ್ಯಾರೆ ಇಲ್ಲಾ ।
ನಾನ್ಹೇನು ಮಾಡಾಲೆ ನನ್ನೆತ್ತ ಗೌರೀ ।

ಇನ್ಯಾಯಕೋ ನನ ಕಂದ ನಾನು ಬಾಳುವುದು ।
ಹನ್ನೆರಡು ದಿನದಿಂದ ಅನ್ನ ನೀರಿಲ್ಲಾ ।
ಮುವ್ವತ್ತು ದಿನದಿಂದ ಊಟ ಸೇರಿಲ್ಲಾ ।

ಇನ್ನು ಮೂರು ದಿವಸ ನೀರಿಲ್ಲದಿದ್ದಾರೆ ।
ಸಾಯೋದು ದಿಟ ಕಂದಾ—ನಾನು ಬಾಳೊದಿನ್ನಿಲ್ಲಾ ।
ನಾನೇನ ಮಾಡಾಲೆ ನನ್ಹೆತ್ತ ತಾಯೀ ಗೌರಮ್ಮ ।
ನನ್ನ ಕಷ್ಟವನು ಕಾಯೊ ನನ್ನ ಮುದ್ದು ಮಗನೆ ।
ನೀ ಕೈಲಾಸಗಿರಿಗೀಗ ಹೋಗಿ ಬಾರಯ್ಯ ।
ಆ ಕೈಲಾಸಗಿರಿಯಲ್ಲಿ ನಿಮ ತಂದೆ ಇಹನು ।
ನಿಮ ತಂದೆ ಬಳಿಗೀಗ ನೀ ಹೋಗಿ ಬಾರಯ್ಯ ।
ಆಗಲಿ ನಮತಾಯಿ ನಾ ಹೋಗಿ ಬರುವೆ ।

ಹೋದಾನು ಚೆನುವೀರ ಆ ಕೈಲಾಸ ಗಿರಿಗೆ ।
ನಿಂತಾನು ಚೆನುವೀರ ಆ ಕೈಲಾಸ ಗಿರೀಲಿ ।
ಕೈಲಾಸ ಗಿರಿಯಲ್ಲಿ ಶಿವನು ಪ್ರತ್ಯಕ್ಷವಾಗಿ ।
ನೀ ಇಲ್ಯಾಕೆ ಬಂದೀಯೊ ಮಗನೆ ಚೆನುವೀರಾ ?
ನೀರು ನಾ ಬೇಕಾಗಿ ಬಂದೇನು ತಂದೆ ।
ಯಾರು ಒಂದಿಗೆ ಗೌರಿ ಜಗಳವಾಡಿದಾಳು ।
ನೆನ್ನೆ ಮೊನ್ನೆ ಗಂಗ್ಯಮ್ಮ ಜೊತೆಯಲ್ಲಿ ಜಗಳವಾಡಿದಾಳು ।
ಅಯ್ಯಾ ಕೂಡಿ ಬಂದವಳೆಂದು ಸದರ ಮಾಡಿದಾಳು ।
ಮೆಚ್ಚಿ ಬಂದವಳೆಂದು ಹೆಚ್ಚಾಳವೆ ನೂಡಿದಾಳು ।

ಭೂಮಿ ಭೂಲೋಕಕ್ಕೆಲ್ಲಾ ಗೌರಿ ಚಿಕ್ಕವಳು ।
ಭೂಮಿ ಭೂಲೋಕಕ್ಕೂ ಗಂಗೆ ದೊಡ್ಡವಳು ।
ನಾನಾದ್ರು ಬರುತ್ತೀನಿ ನಡಿಯೊ ವೀರಣ್ಣ ।
ಶಿವರಾಯ ಮುಂದಾಗಿ ವೀರಣ್ಣ ಹಿಂದೆ ।
ಶಿವನು ಬರುವೊ ದಾರಿ ಗೌರಮ್ಮ ನೋಡಿ ।
ಹದಿನಾರು ಬಾಗಿಲು ತೆರೆದು ಹೊರಗೆ ಕುಂತವಳೆ ।
ಅದೇನೆ ? ಎಲಾ ಗೌರೀ ಹೊರಗೆ ಕುಂತಿದ್ದೀಯಾ ?
ಅದು ಏನು ಎಲಾ ಶಿವನೆ ಅರಿತಂಗೆ ಕೇಳೀರಿ ?

ನನ ಮೇಲೆ ಪ್ರತಿಯಾಗಿ ಸವತಿ ನೀ ತಂದೆ ।
ಸವತೀಗೂ ನನಗೀಗ ಜಗಳವೆ ಬಂತು ।
ನೀವು ಗಾಳಿ ಹಿಡಿದೊದ್ದಂಗೆ ಸುಮ್ನಿದ್ದೀರಾ ?

ನೀರಿಲ್ಲಾ ಎನುತಾಲೆ ದಾಪಂತ್ರ ಬೇಡಾ ।
ಹಾಲೀನ ಅಡ್ಡೆಗಳ ತರಲ್ಹೇನೆ ಗೌರೀ ?
ಹಾಲಿನಲಿ ಸೂತಕ ತೀರದು ಶಿವನೆ ।
ತುಪ್ಪದ ಅಡ್ಡೆಗಳ ತರಲೇನೆ ಗೌರೀ ।
ತುಪ್ಪದಲಿ ಈ ಸೂತಕ ಹರಿಯಾದು ಶಿವನೆ ।
ಮಸರೀನ ಅಡ್ಡೆಗಳ ತರಲ್ಹೀನೆ ಗೌರಿ ?
ಮಸರಲ್ಲಿ ಈ ಸೂತಕ ಮತ್ತೆ ತೀರಾದು ।
ಜೇನಿನ ಅಡ್ಡೆಗಳ ತರಲ್ಹೇನೆ ಗೌರೀ ?
ಜೇನೀಗೆ ಇದು ಬಾಳ ನೊಣಗಳು ಶಿವನೆ ।
ಮತ್ತೆ ತೀರಾದು ನೀನ್ಹೋಗೆ ಗೌರಿ ।
ನಿನ ಸವತಿ ಗಂಗೆ ಬೇಡಿಕೋ ಗೌರಾಂಬೆ ।
ಎಂತಹ ಮಾತಾಡುತ್ತೀರಿ ಶಿವರಾಯ ।
ಗಂಗೆ ಹೆಸರನು ಶಿವನೆ ನೀವೆತ್ತಬೇಡಿ ।
ಸತ್ತು ಮಣ್ಣಾದರು ನಾನು ಸವತಿ ಕೇಳಲಾರೆ ।
ಮತ್ತೆ ಮಣ್ಣಾದಾರು ನಾನು ಸವತಿ ಕೇಳಲಾರೆ ।

ನೀನು ನೀರಿಗ್ಹೋಗದಿದ್ದಾರೆ ವೀರಣ್ಣನ ಕಳುವೆ ।
ಹಿಂಗಂಥ ಮೂರು ಮಾತು ಹೇಳಿದ ಸ್ವಾಮಿ ।
ಇದ್ದೋನು ಇದ್ದಂಗೆ ಮಾಯವಾದನು ಶಿವನು ।
ಕೈಲಾಸಪುರಿಪಟ್ಟಣ ಸೇರಿದಾನು ಸ್ವಾಮಿ ।
ಮನೆಯಲ್ಲಿ ಇರುವೋನೆ ಬಾರೋ ವೀರಣ್ಣ ।
ಕರೆದಂಥ ಮಾತೇನೆ ತಾಯಿ ಪಾರ್ವತಿಯೆ ?
ಅಯ್ಯಾ ಗಂಗೆ ಅರಮನೆಗೀಗ ನೀನು ।

ಹ್ಞೋಗಿ ಬಾರಪ್ಪ ಕಂದ ನೀ ವೀರಣ್ಣ ।
ಅಮ್ಮ ಹಿಂದೆ ಹೋದಾ ಮಾತು ಎತ್ತಾಡುತಾಳೆ ।
ಏನಾದರನ್ನಾಲಿ ಹೋಗಿಬಾರಯ್ಯ ।
ಆಗಲಿ ನಮ್ಮವ್ವ ಹೋಗಿ ನಾ ಬರುವೆ ।

ಹೋದಾನು ಚೆನುವೀರ ವಾಡೆಮೇಲಿಳಿದು—
ನಿಂತಾನು ಚೆನುವೀರ ಗಂಗೆ ಆರಮನೇಲಿ ।
ತಾಯಿ ಇರೊ ಎಲಾ ತಾಯಿ ಚಿಕ್ಕವ್ವ ಗಂಗೆ ।
ಹತ್ತು ಪಟ್ಟು ಕೂಗಿದಾರು ಮಾತಾಡಲಿಲ್ಲಾ ।
ಕೂಗಿ ಕೂಗಿ ಮಗನು ಮೂರ್ಛೆ ಬಿದ್ದಾನು ।
ಆದೇಕೊ ಎಲಾ ಕಂದ ನೀನು ಮೂರ್ಛೆ ಆದೇಯೊ ?
ಇಲ್ಲಾಕೆ ಬಂದೀಯೊ ಕಂದ ವೀರಣ್ಣ ।
ನೀರು ನಾ ಬೇಕಾಗಿ ಬಂದೆನು ತಾಯಿ ।
ನೀವು ಉತ್ತುಮರಲ್ಲೊ ನಾವು ಬೆಸ್ತರಕುಲದೋರು ।
ಬೆಸ್ತಾರ ಮನೆಗೀಗ ನೀನು ಬರಬಹುದೆ ಕಂದಾ ।
ನಮ್ಮೂರ ಬಾವೀಲಿ ಕಪ್ಪೆ ಇರುತಾವೆ ।
ಕಪ್ಪೆ ಇರುವ ನೀರು ಕಲಕುನೀರಪ್ಪ ।

ನಮ್ಮೂರ ಕೆರೆಯಲ್ಲಿ ಮೀನು ಇರುತಾವೆ ।
ಮೀನು ಇರೋ ನೀರು ಹೊಲಸು ನೀರಪ್ಪ ।
ಅಮ್ಮ ಹಿಂದೆ ಹೋದಾ ಮಾತು ಎತ್ತಾಡಬೇಡ ।
ನಿನಗಾದ್ರೆ ಒಂದು ಜೊಂಬು ನೀರು ಕೊಡುತೀನಿ ।
ನನ ಸವತಿ ಗೌರೀಗೆ ನೀರಿಲ್ಲಾ ಕಂದಾ ।
ತಾಯಿಗಿಲ್ಲದ ನೀರು ನನಗ್ಯಾಕೆ ಅಂದ ।
ತಿರುಗಿ ಬರುತಾನೆ ತಾಯಿ ಇದ್ದ ಬಳಿಗೆ ।
ನೀರೆಲ್ಲೊ ? ನೀರೆಲ್ಲೊ ? ಕಂದ ವೀರಣ್ಣ ।

ಅಮ್ಮ ಹಿಂದೆ ಹೋದ ಮಾತು ಏತ್ತಾ ಯಡುತಾಳೆ ।
ನೀ ಸಾಯಿ ಗಂಗೆ ಸಾಯಿ ನನ ಕೈಲಿ ತೀರದು ।
ನೀನ್ಹೋಗದಿದ್ದಾರೆ ನಿನಗೆ ನೀರಿಲ್ಲಾ ಕಾಣೆ ಗೌರಮ್ಮ
ಪಂತಾವೆ ಬಿಟ್ಟಾಳು ಪಾರ್ವತಿ ಗೌರಿ ।

ಪೆಟ್ಟಿಗೆಯೊಳಗಿದ್ದ ಪಟ್ಟಿ ಸೀರೆ ಉಟ್ಟಾಳು ಗೌರಿ ।
ಆಭರಣನೆಲ್ಲಾನು ಮೈತುಂಬ ಧರಿಸಿ ।
ಐದು ಜನ ಮಕ್ಕಳು ಮುಂದೆ ಕರೆಕೊಂಡು ।
ತಾಳ ಮೇಳಾದಿಂದ ಗಂಗೆ ಅರಮನೆಗೀಗ ಹೊರಟಾಳು ಗೌರಿ।
ಗೌರಮ್ಮ ಬರೊ ಹಾದಿ ಗಂಗಮ್ಮ ನೋಡಿ ।
ಬಂಟ ನನ ಸವತೀಗ ಬರುತಾಳೆ ಎಂದು ।
ಬೀದಿ ಬೀದಿಯೊಳಗೆಲ್ಲಾ ಕರಿಮೀನ ಎರಚಿ ।
ಸಂದಿ ಗೊಂದಿಗೆಲ್ಲಾ ಸೀಗಡಿ ಎರಚಿದಳು ।
ಹದಿನಾರು ಬಾಗಲು ಬೀಗ ಹಾಕಿದಾಳು ।
ಕಡೆಯ ಬಾಗಲುತಾವ ಬಂದು ನಿಂತಾಳು ।

ತಂಗಿರೊ ಎಲಾ ತಂಗೀ ತಂಗಿ ಗಂಗವ್ವ !
ತೆಗಿಯೆ ಬಾಕಲ ನೀನು ತಾಯಿ ಗಂಗವ್ವ ।
ಕೂಗಿ ಕೂಗಿ ಈಗ ಮೂರ್ಛೆ ಬಿದ್ದಾಳು ।
ನಿನಗೇನ ಕರ್ಮಾವ ಮಾಡಿದ್ದೆನವ್ವ ।
ತಂಗಿರೊ ಎಲಾ ತಂಗೀ ತಂಗಿ ಗಂಗವ್ವ ।
ತೆಗಿಯೆ ಬಾಕಲ ನೀನು ಗಂಗೆ ತಾಯವ್ವ ?
ಹತ್ತು ಪಟ್ಟು ಕೂಗಿದಾರು ಮಾತಾಡಲಿಲ್ಲಾ ಗಂಗೆ ।
ನಿನಗೇನ ಪಾಪವೂ ಮಾಡಿದ್ದೆ ತಂಗೀ ।
ಹಂಗೇಕೆ ಬರಲೀಯ ಬಂಡ ನನಸವತಿ ।
ಏನಾರನ್ನಮ್ಮ ನನ ಸೂತಕ ತೀರಿಸೆ ಗಂಗಮ್ಮ ।
ಏನಾದಾರಾಗಾಲೀ ನೀರಿಲ್ಲಾ ಹೋಗೆ ಗೌರಿ ।

ಹುಟ್ಟಿರೊ ಪಟ್ಟಸೀರೆ ನಿನಗೆ ಕೊಡುತೀನಿ ।
ನಿನಗಿರೊ ಪಟ್ಟಸೀರೆ ನನಗಿಲ್ಲವೇನೆ ?
ಇಕ್ಕಿರೊ ಆಭರಣ ನಿನಗೆ ಕೊಡುತೀನೀ ।
ನಿನಗಿರೊ ಆಭರಣ ನನಗಿಲ್ಲವೇನೆ ।
ಶಿವನಾಳೊ ಶಿವಭೂಮಿ ಸರಿಪಾಲು ಕಾಣೆ ।
ಐದು ಜನ ಮಕ್ಕಳ ನಿನಗೆ ಕೊಡುತೀನಿ ।
ಐದು ಜನ ಮಕ್ಕಳು ನನ ಮಕ್ಕಳ್ಹೋಗೆ ।
ಶಿವನು ಮಲಗೊ ಮಂಚ ನಿನಗೆ ಕೊಡುತೀನೀ ।
ಬರಿಯ ಮಂಚವ ತಕ್ಕೊಂಡು ಬಡಕೊಳ್ಳಲೇನೆ ?
ಗುಟ್ಟಾಗಿ ನನ ಬಾಗದ ಗಂಡನ್ನ ಕೊಡುತೀನಿ ।
ಈಗ ಆಡಿದ ಮಾತು ತಿರುಗಾಡೆ ನೀನು ।
ಗಂಡ್ನ ಕೊಡೊ ಮಾತಿಗೆ ನೀ ತಪ್ಪಿದಾರೆ ।
ಕಾಶೀಲಿ ಬ್ರಾಹ್ಮಣರ ಕೊಂದ್ಹಂಗೆ ಕಾಣೆ ಗಂಗೆ ।
ನೀರು ಕೊಡುತೀನಂಥ ನಾ ತಪ್ಪಿದಾರೆ ।
ಕಾಶೀಲಿ ಗೋವಿನ ಕತ್ತು ಕೂದ್ಹಂಗೆ ಗೌರಿ ।

ಹಾಲು ಅನ್ನವ ಮುಟ್ಟಿ ಭಾಷೆ ಮಾಡಿದಾರು ।
ಭಾಷೆ ಮಾಡಿ ಈಗ ಕದವ ತೆಗಿದಾಳು ಗಂಗೆ ।
ಉಗುರಷ್ಟೆ ವಿಭೂತಿ ಭೂಮಿ ಮೇಲ್ಹಾಕೆ ।
ಮಳೆಯರಾಯನ ಕರೆದು ಆಣೆ ಬಿಡಿಸಿದಳು ।
ಗಾಳಿದೇವಾರು ಕರೆದು ಭಾಷೆ ಬಿಡಿಸಿದಳು ।
ಗುಡ ಗುಡನೆ ಗುಡುಗ್ಹೀತು–ಥಳಥಳನೆ ಮಿಂಚೀತು ।
ಜಡಿಮಳೆ ಉಯ್ದಾಗ–ನೀರು ಜಲ್ಲನೆ ಬಿತ್ತು ।

ನೀನ್ಹೋಗಿ ನಿನ ಸೂತಕ ತೀರಿಸಿಕೊಳ್ಳೆ ಗೌರೀ ।
ಅಕ್ಕ ತಂಗೇರು ಎಲಾ ತಂಗಿ ಗಂಗವ್ವ ।
ಹೊಸ ನೀರು ಕಂಡಾರೆ ನನಗೆ ಭಯನಾಗುತೈತೆ ।

ನಾನಾದ್ರು ಬರುತೀನಿ ನೀ ನಡಿಯೆ ಗೌರಮ್ಮ !
ವೀರಣ್ಣನ ಕೊಳದಲ್ಲಿ ಈಜಾಡಿದಾರು....।
ಮುಲ್ಲಣ್ಣನ ಕೊಳದಲ್ಲಿ ಸೂತಕ ತೀರಿಸಿದರು ।
ಜಾತಿ ಜಾತಿ ಹೂವುಗಳ ಬೇಗ ಕುಯ್ದಾರು ।
ಶಿವನೀಗೆ ಶಿವಪೂಜೆ ಬೇಗ ಮಾಡಿದಾರು ।
ಅಕ್ಕ ತಂಗೇರಿಬ್ಬಾರು ಅರಮನೆಗೆ ಬಂದು....
ಹಾಲು ಅನ್ನ ಜೊತೆಯಲ್ಲಿ ಉಂಡು....
ತಂಪೀನ ಹೊತ್ತಿನಲ್ಲಿ ನೀರೀಗೆ ಹೊರಟಾರು ।
ಚಿನ್ನದೊಂದರಬೀಯು ಬೆಳ್ಳಿದೊಂದರಬಿ ।
ಎರಡರಬಿ ತಕ್ಕೊಂಡು ನೀರೀಗೆ ಹೊರಟ್ಹಾರು ।
ವೀರಣ್ಣನ ಕೊಳೆದಲ್ಲಿ ನೀರು ಮಗೆದಾರು ।
ನೀರು ಮೊಗೆದ ಅರಬಿ ತೊಡೆಯ ಮೇಲೆ ಮಡಗಿ ।
ಗಕ್ಕನೆ ಜ್ಞಾಪಕ ಬಂದೀತು ಗಂಗೇಗೆ ।
ಅಕ್ಕ ನೀರು ಕೊಡುತೀನಂಥ ನಾ ಕೊಟ್ಟಿನಕ್ಕ ।
ಇವೊತ್ತು ಒಂದು ರಾತ್ರಿ ಶಿವನಾದ್ರು ಕಳುಹೆ ।
ದಬ ದಬನೆ ಅರಬೀಯ ಕುಕ್ಕಿದಾಳು ಅಲ್ಲಿ ।
ಪಡಿಯಲ್ಲಿ ಒಂದು ಪಡಿ ಉಪ್ಪು ಸಾಲವುಂಟು ।
ಎಲ್ಲಾದ್ರೂ ಉಂಟೀನೆ ಗಂಡ್ನ ಕೊಡೋ ಸಾಲ....
ಮಾತೀಗೆ ತಪ್ಪಿದೇನೆ ಮಳ್ಳಿ ನನ ಸವತಿ ।
ಜಡೆ ಜಡೆ ಹಿಡಿಕೋಡು ಜಡಿದಾಡಿದಾರು ।

ಎರಡು ಮೂರು ಪೆಟ್ಟು ತಡೆದಾಳು ಗಂಗೆ ।
ನಿನ ಕೈಯಿ ಮಿಂಚುತೇನೆ ಬಾಲೆ ಗೌರಮ್ಮ ।
ನನ ಕೈಯಿ ಬರುತೈತೆ ತಪ್ಪಿಸಿಕೊಳ್ಳಿ ।
ಕೈಬೀಸಿ ಕರೆದಾಳು ಮಳೆರಾಯ ದೇವಾನು ।
ಜಡಿ ಮಳೆ ಹುಯ್ದು ಜಲ್ಲಾನೆ ಬಿಡಿತು ।

ಗಂಗೇಯು ನಡೆದಾರೆ ಮೊಣಕಾಲು ಉದ್ದ ಬಂದೀತು ನೀರು ।
ಗೌರೀಯು ನಡೆದಾರೆ ಕೊಚ್ಚಿ ಹೋದಾಳು ।

ಬೇಟಗ್ಹೋದ ಶಿವನು ಬೆನ್ನಾಡಿ ಬಂದು ।
ಮೊಸಳೆ ಬಂತೆಂದು ಆ ಪರಮ ಶಿವನು ।
ಹೋಗಂಥ ಶಿವನು ಶಿರಸ ಹಿಡಿದಾನು ।
ಶಿರಸ ತಂದು ಶಿವಪೂಜೆ ಮಾಡಿ....
ಒಂದು ತಾಯಿ ಮಕ್ಕಳೀಗೆ ಬುದ್ಧಿಯಿಲ್ಲವೇನೆ ।
ಬೆಸ್ತಾರ ಮನೆಗೀಗ ನೀ ಬಾರೆ ಗಂಗೆ ।
ವರ್ಷಕ್ಕೆ ಒಂದು ಮಾರಿ ಹಬ್ಬಾವು ಕೇಳೆ ।
ಮಾರಿ ಹಬ್ಬದಲ್ಲಿ ನೀ ಬಾರೇ ಎಲೆ ಗಂಗೆ ।
ನಡುಊರಿನಲ್ಲೀಗ ನಿನ್ನ ಪೂಜುವರು ।
ಕುರಿಗಳ ಕೋಳಿಗಳ ನಿನಗೆ ಕಡಿತಾರೆ ।

ವರ್ಷಾಕೆ ಒಂದು ಪಟ್ಟು ಗೌರಿ ಹಬ್ಬಾವು ।
ಗೌರೀ ಹಬ್ಬದಲ್ಲಿ ನೀ ಬಾರೇ ಗೌರಿ ।
ನೀ ಹೊಗಿ ಬ್ರಾಹ್ಮಣರ ಸೇರಿಕೊಳ್ಳೆ ।
ಹೊಸ ಮರದಲ್ಲಿ ನಿನ್ನ ಪೂಜುವರು ।
ಮಲ್ಲಿಗೆ ಹೂವಿನ ಪೂಜೆ ನಿನ್ಗೆ ಮಾಡುವರು ।
ಹೋಳೀಗೆ ಒಬ್ಬಟ್ಟು ನಿನಗೆ ಮಾಡುವರು ।

ಇಬ್ಬರು ಮಧ್ಯದ ಶಿವರಾತ್ರಿ ಹಬ್ಬ ।
ಶಿವರಾತ್ರಿ ಹಬ್ಬದಲ್ಲಿ ನಾನು ಬರುತೀನಿ ।
ನಾ ಹೋಗಿ ಶಿವಭಕ್ತರ ಮನೆಯ ಸೇರುತೀನಿ।
ಹೊಸ ವರ್ಷದಲ್ಲಿ ನನ್ನ ಪೂಜುವರೆಣ್ಣೆ ।
ವಾರಾವೆ ಒಂಬತ್ತು ನನಗೆ ಇರುತಾರೆ ।
ಹೋಳಿಗೆ ಒಬ್ಬಟ್ಟು ನನಗೆ ಮಾಡುತಾರೆ ।
ಮೂವರಿಗೆ ಮೂರ್ಹಬ್ಬ ನಿಯಮಿಸಿದ ಸ್ವಾಮಿ ।

ಕೃಷ್ಣ-ಕೊರವಂಜಿ

ದಾದೀರಿಲ್ಲದೆ ಮನೆ ಸೇರುವಳಲ್ಲಾ ।
ಪುರುಷರಿಲ್ಲದ ಮನೆ ಸೇರುವಳಲ್ಲಾ ।
ಮಕ್ಕಳಿಲ್ಲದ ಮನೆ ಹೊಕ್ಕವಳಲ್ಲಾ ।

ಈ ಹಳ್ಳಿಯ ಹಾಡುಗಳಿಗೆ ಜಾನಪದ ಸಾಹಿತ್ಯ–ಇಂಗ್ಲೀಷಿನಲ್ಲಿ Literature of the dump-millions ಅಂದ ಹಾಗೆ ಜನತಾ ಕೋಟಿಯ ಸಾಹಿತ್ಯ ಎಂಬ ಹೆಸರು ಬಂದಿದೆ. ಈ ಸಾಹಿತ್ಯ ಕೃತಿಗಳೆಲ್ಲ ಬಾಯಿಂದ ಬಾಯಿಗೆ ಹರಿದುಬಂದ ರಸ ವಾಹಿನಿಗಳು ಬರವಣಿಗೆಗೆ ಬಂದವು ತೀರ ವಿರಳ–ಯಾಕೆಂದರೆ ಅವುಗಳನ್ನು ಹಾಡಿದ ಆಶುಕವಿಗಳು dump millions ಅಂದಂತೆ ಓದು ಬರಹ ಬಾರದಿದ್ದ ಮೂಕಕವಿ ಗಳು. ಗದ್ಯವಿರಲಿ ಪದ್ಯವಿರಲಿ, ಆದು ಬಳಸುವ ನುಡಿಗಳೂ, ಉಪಮಾ, ರೂಪ ಕಾದಿ ಅಲಂಕಾರ (Images ಗಳೂ ಹಳ್ಳಿಗಾಡಿನ, ಅಶಿಕ್ಷಿತರೆಂಬ ಸಾಮಾನ್ಯ ಜನತೆಯ ದಿನಬಳಿಕೆಯಲ್ಲಿರುವವು. ಸುತ್ತಮುತ್ತಿನ ನಿಸರ್ಗದಿಂದ ಆರಿಸಿಕೊಂಡವು. ಜನರ ನಿತ್ಯಜೀವನದ ಪ್ರೇಮ ಕಾಮ, ಕೋಪ ತಾಪಗಳನ್ನೆಲ್ಲ ಇದರಲ್ಲಿ ಕಾಣ ಬಹುದು. ಆದ್ದರಿಂದ ಇದು ಜೀವನದಿಂದ ಚಿಮ್ಮಿ ಬಂದ ನೈಸರ್ಗಿಕ, ಪ್ರಾಕೃತಿಕ, ಅಕೃತಕ ಸಾಹಿತ್ಯ. ಈ ಸಾಹಿತ್ಯ ಹಳ್ಳಿಯಬಾಳಿಗೆ ಕನ್ನಡಿ, ಗ್ರಾಮ್ಯ ಭಾಷೆಗೆ ನಿಘಂಟು.

...ಇವುಗಳಲ್ಲಿ ಅರಳಿರುವ ಪ್ರತಿಭೆ, ಭಾವಕ್ಕೆ ತಕ್ಕ ಮಾತಿನ ಉಡುಗೆ ತೊಡಿಸಿದ ಹಾಡಿನ ಧಾಟಿ, ಯಾವ ದೇಶದ ಉಚ್ಚಕವಿಗಳ ಕವನಕ್ಕೂ ಕಡಿಮೆ ಯಾದುದಲ್ಲ, ಕಥೆ ಹೇಳುವ ಕೌಶಲವಂತೂ ಶ್ರೇಷ್ಠ ಕಥಾ ಲೇಖಕರಿಗೂ ಮೇಲ್ಪಂಕ್ತಿ ಹಾಕಿಕೊಡುವಂತಿದೆ.

—ಶ್ರೀ ಗಣಪತಿರಾವ್ ಪಾಂಡೇಶ್ವರ್

ಕೃಷ್ಣ-ಕೊರವಂಜಿ*

ಆ ಗ ತನ್ನದೊಂದು ಅವತಾರ ತಾ ಮಾಯ ಮಾಡಿ ।
ಹೆಣ್ಣು ಒಂದವತಾರ ನೋಡಬೇಕೆಂದೂ ।
ಬಾಸಿಯ ಬಗುತಾಲೆ ತೆಗೆದಾನು ದೇವ ।
ಪಂಜರದ ವಾಲೆರೆಡು ಕಿವಿತುಂಬ ತೊಟ್ಟು ।
ತಾನು ಸೀರೇಯ ಉಟ್ಯಾನು ದೇವ ।

ವಾಲೆ ಚಿಂತಾಕೆಂಬ ಒಡಬೆಯ ಧರಿಸಿ ।
ಅಪರಂಜಿ ಬಳೆಗಳ ಕೈತುಂಬ ಧರಿಸಿ ।
ಒಳ್ಳೆ ಬೆತ್ತದ ಕೋಲು ಬಲಗೈಲಿ ಹಿಡಿದು ।
ಮಾಯಾದ ಮಗುವನು ಬೆಸ್ನಿಗೆ ಬಿಗಿದು ।
ಚಿನ್ನಾದ ಗಿಲಕೇಯ ಕೈಯಲಿ ಹಿಡಕೊಂಡು ।
ಚಿನ್ನಾದ ಸಿಂಬಿಯ ತಲೆಮೇಲೆ ಮಡಗಿ ।
ಚಿನ್ನದ ಸಿಂಬಿಮೇಲೆ ಗೂಡೇಯ ಇರಿಸಿ ।
ತಾನು ಬೀದಿ ಬೀದಿಯೊಳಗೆ ಸಾರುತ ಬಂದ ।

ಅಪರೂಪ ಕೊರವಂಜಿ ಆದಾನು ದೇವ ।
ಬೀದಿ ಬೀದಿಮೇಲೆ ಸಾರುತ ಬಂದು ।
ಕಣಿಯ ಕೇಳುವರಿಗೆ ಕಣಿಯ ಹೇಳುವೆನು ।
ಗುರುತು ಕೇಳುವರಿಗೆ ಗುರುತು ಹೇಳುವೆನು ।
ಕಣಿ ಎಂಬೊ ಆ ಮಾತ ರುಕ್ಮಿಣಿ ಕೇಳಿ ।
ಕರೆತಾರೆ ಕೊರವಂಜಿಯ ಅರಮನೆ ದಾದೀರೆ ।
ಓಡೋಡಿ ಓಡೋಡಿ ಬಂದು ಕೊರವಂಜಿ ।
ಅಮ್ಮಯ್ಯ ನೀಬಾರೇ ಅಕ್ಕ ನೀಬಾರೇ ।
ನಮ್ಮರಾಣಿ ಕರೆದಾಳು ಬಾರೆಲಾ ಕೊರವಂಜಿ ।

---

*ಈ ಜಾನಪದ ಕಥನ ಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ಗೊಲ್ಲರು ಗೋಕುಲಾಷ್ಟಮಿಯ ಧಿನ ಬೆಳದಿಂಗಳಲ್ಲಿ ಕೋಲುಹಯ್ದುಕೊಂಡು ಹಾಡುವರು.

ನಿಮ್ಮ ರಾಣಿ ಹೆಸರೇನು ನಿನ್ನ ಊರೇನು ।
ನಮ್ಮ ರಾಣಿ ಹೆಸರಮ್ಮ ರುಕ್ಮಿಣಿದೇವಿ ।
ನಾವು ಈ ಅರಮನೆ ದಾದೀರು ಕಣೆ ।
ದಾದೀರಲ್ಲದೆ ಮನೆ ಸೇರುವಳಲ್ಲಾ ।
ಪುರುಷರಿಲ್ಲದ ಮನೆ ಸೇರುವಳಲ್ಲಾ ।
ಮಕ್ಕಳಿಲ್ಲದ ಮನೆ ಹೊಕ್ಕವಳಲ್ಲಾ ।
ನಾವೆಲ್ಲಾ ಇರುವಾಗ ನಿನಗೇನೆ ಭಯವು ।
ನಮ್ಮ ರುಕ್ಮಿಣಿ ಇರುವಾಗ ನಿನಗೇನೆ ಚಿಂತೆ ।
ಅಂಜಿಕೊ ಬೇಡವೆ ಅಕ್ಕಯ್ಯ ನಾರೀ ।

ಅಂಜುತ ಅಳೊಂದೆಜ್ಜೆ ಅಂಜಿದೊಂದೆಜ್ಜೆ ।
ಹದಿನಾರು ಬಾಗಿಲ ದಾಟಿ ಬಂದಾಳು ।
ವಜ್ರದ ಬಾಗಿಲ ಹೊರಗೆ ನಿಂತಾಳು ।
ಕಡೆಯ ಬಾಗಿಲ ತಾವ ಬಂದು ನಿಂತಾಳು ।
ಕೊರವಂಜಿ ಬರೋದಾರಿ ರುಕ್ಮಿಣಿ ನೋಡಿ ।
ಮುತ್ತಿನ ಗದ್ದುಗೆ ಇಳಿದು ಬಂದಾಳು ।
ರತ್ನಗಂಬಳಿ ತಂದು ನೆಲಕೆ ಹಾಸಿದಳು ।

ಚಿನ್ನದ ಚ್ಯಾಪೆ ತಾನ್ಹಾಸಿಕೊಂಡು ।
ಕೂತುಕೊ ಎಲೆನಾರೀ ಎಂದಾಳೆ ರುಕ್ಮಿಣಿ ।
ಕೂತುಕೊಂಡಮ್ಯಾಲೆ ಕೇಳ್ಯಾಳೆ ನಿಮದಾವೂರೆಂದು ।
ಯಾವೂರು ಯಾವ ಸೀಮೆ ಎಲ್ಲಿಂದ ಬಂದೆ ।
ನಮ್ಮೂರು ನಮಸೀಮೆ ಕೇಳಿಯಾ ನೀನು ।

ಅಕಟಿಂಕಿಣಿ ನಮಗೆ ಗೌರಮ್ಮಳಿಯಾಳು ।
ಆದಿಗಣೇಶ್ವರನ ಮಗಳಲ್ಲವೇನೆ ?
ಸಿದ್ಧಲಿಂಗೇಶ್ವರನು ಚಿಕ್ಕಪ್ಪ ಎನಗೆ ।
ವಯ್ಯಾರಿ ಪುರದಿಂದ ಒಬ್ಬಾಳೆ ಬಂದೆ ।

ಹೊಟ್ಟೆಗೆ ಹಿಟ್ಟಗೆ ಬಂದ ಹೆಣ್ಣು ನಾನ್ಹಲ್ಲಾ ।
ತೊಟ್ಟು ಗೂಡೆಯ ತಂದು ನಾ ಮಾರೋಳಲ್ಲಾ ।
ಹೊಟ್ಟೆಗೆ ಹಿಟ್ಟಗೆ ಬಂದ ಹೆಣ್ಣು ನಾನ್ಹಲ್ಲಾ ।
ಸುಳ್ಳಲ್ಲ ಕಣಮ್ಮ ಮಗು ಮೇಲೊಂದಾಣೆ ।

ಮಾಯಾದ ಮಗುವಿನ ಹಣೆಯ ಮುಟ್ಟಿದನು ।
ಹಣೆಯ ಮುಟ್ಟಿದ ನಾರಿ ಬಾಷೆ ಮಾಡಿದನು।
ಕಣಿಯ ಹೇಳೊದಕ್ಕೆ ಏನು ಕೊಡಬೇಕು ।
ಮುತ್ತು ನಾ ಕೊಡಿಸ್ಹೆನು ಕಣೆ ಹೇಳೆ ನಾರಿ।
ಮುತ್ತು ನನ್ನರಮಾನೆ ಮಿಕ್ಕೆ ಜೋಳಮ್ಮ ।
ಹವಳಾವ ನಾ ಕೊಡಿಸ್ಹೇನು ನೀ ಕಣಿ ಹೇಳೆ ಕೊರಮಿ ।
ಮಾಣಿಕ್ಯ ನಾ ಕೊಡಿಸ್ಹೇನು ನೀ ಕಣಿ ಹೇಳೆ ನಾರಿ ।
ಮಾಣಿಕ್ಯ ನನ್ನರಮಾನೆ ಮಲ್ಲಿಗೆ ಹೂವು ।
ನಾ ನವರತ್ನ ಕೊಡಿಸ್ಹೇನು ನೀ ಕಣಿ ಹೇಳೆ ನಾರಿ ।
ನವರತ್ನ ನನ್ನರಮಾನೆ ರಾಗಿಯ ಕಾಳು ।
ಕುದುರ್ಹೇಯ ನಾ ಕೊಡಿಸ್ಹೇನು ನೀ ಕ ಹೇಳೆ ಕೊರಮಿ।
ಕುದುರ್ಹೇಯು ನನ್ನರಮಾನೆ ಕುರಿ ಹಿಂ ಕಾಣೆ ।
ಒಂಟಿಯ ನಾ ಕೊಡಿಸ್ಹೇನು ನೀ ಕಣಿ . ಳೆ ನಾರಿ ।
ಒಂಟೀಯು ನನ್ನರಮಾನೆ ಬಂಟಾರು ಕ

ಏನು ಕೊಟ್ಟಿನೆಂದಾರು ಒಲ್ಲೆನೆಂದೀಯ ।
ಮತ್ತೇನು ಕೊಡಬೇಕೆ ಮಾಯದ ನಾರೀ ।
ನೀ ಕೊಡೊ ಆಭರಣ ನನಗೇನು ಬೇಕು ।
ನಿನ್ ಮನಸಿನಲ್ಲಿರುವಂಥ ಮಾತು ಹೇಳಿದ್ರೆ ।
ನಿನ್ ಕನಸಿನಲ್ಲಿ ಕಂಡಂಥ ಕಾರ್ಯವೇಳಿದರೆ ।
ನಿನ ನೆಪ್ಪು ನಿನ ಗುರುತು ನಿನಗೆ ಹೇಳಿದರೆ ।
ಕೃಷ್ಣ ಬರೊ ದಾರಿ ತಿಳದು ಹೇಳದರೆ ।

ಮತ್ತೇನು ಕೊಡಿಸ್ತೀಯ ರುಕ್ಮಿಣಿ ನನಗೆ ?

ಮಗುವಿಗೊಂದು ಒಡವೆಯ ಮಾಡೀಸಿಕೊಡುವೆ।
ಬೆಳ್ಳಿ ಬೆತ್ತದ ಕೋಲು ಹೆಣೆಸಿ ನಾ ಕೊಡುವೆ ।
ಅಪರಂಜಿ ಬಳೆಗಳ ಕೈತುಂಬ ನಾ ಕೊಡುವೆ ।
ಪಟ್ಟಿ ಸೀರ್ಹೀಯ ನಾನ್ಹೇಯಿಸಿ ಕೊಡುವೆ ।
ಈ ಮಾತಿಗೆ ಕೊರವಿ ಒಪ್ಪಿಕೊಂಡಾಳು ।

ಒಪ್ಪಿಕೊಂಡ ನಾರಿ ಏನಂತಳ್ಹೀಗ ।
ಮಟ್ಟು ಮಂಗಳವಾರ ಮನೆ ಸಾರಿಸು ಹೆಣ್ಣೆ ।
ಗಂಟು ಮೂಟೆಗಳನೆಲ್ಲಾ ಹೊರಗೆ ತಂದಿರಿಸು ।
ಎಂಟು ಗಾಡಿಯ ನೀರನಲಿ ನೀ ತಾನಮಾಡು ।
ಎಂಟು ತರಹದ ಕಾಸು ನೀ ತಂದು ಮಡಗು ।
ಗೊಪ್ಪೆಯ ಬಾಳೆಯ ಹಣ್ಣು ನೀ ತಂದಿರಿಸು ।
ಗೊನೆಯ ತೆಂಗಿನಕಾಯ ನೀ ತಂದಿರಿಸು ।
ನಾಕು ಮೂಲೇಗೆ ನಾಕು ಹಣ ಒಂದೆ ಇರಿಸು ।
ನೆನೆಅಕ್ಕಿ ನೆನೆಗಡಲೆ ತಂದು ನೀನ್ ಮಡಗು ।
ಆಭರಣ ಒಡಬೆನೆಲ್ಲಾ ನೀನು ತಂದು ಶೃಂಗರಿಸು ।
ನಿಮ್ಮ ದೇವರು ನೀನ್ ನೆನಕೊಳ್ಳೆ ದೇವಿ ।
ನಮ್ಮ ದೇವರು ನಮ್ಮ ಭಾಗದಲ್ಲವನೆ ।
ಮೂಡಲ ತಿಮ್ಮಕಾಯ ಮುತ್ತೊತ್ತರಾಯ ।
ಆರಣೆ ಜ್ಞಾನೇಶ್ವರ ಹನುಮಂತರಾಯ ।
ಹಲ್ಲೂರಿ ಪಲ್ಲೂರಿ ಹನುಮಂತರಾಯ ।

ಕೈತಾರೇ ರುಕ್ಮಿಣಿ ಕೈನೋಡಿ ನಿನಗೊಂದು ।
ನಾ ಕಣಿಯ ಹೇಳುವೆನು ।
ಅಂಟಾದೆ ಮುಂಟಾದೆ ಕಣಿ ಹೇಳು ನನಗೆ ।
ಅಂಟಾದೆ ಮುಂಟಾದೆ ಕಣಿ ಹೇಳೊದಿಲ್ಲಾ ।

ಅಂಜಿಕೊಂಡು ಅಂಜಿಕೊಂಡು ಕೈಕೊಟ್ಟಾಳ್ಹಾಗ ।
ಕೈನೋಡಿ ಕೃಷ್ಣ ಏನನ್ನುತಾನೆ ।
ಎಂಟು ಮಂದಿಯು ನಿನ್ನ ನೆಂಟರುಕಾಣೆ ।
ನೆಂಟರು ನಿನ್ನ ನೆಚ್ಚಿಕೊಂಡು ಇದ್ದರು ನಿನ್ನ ।
ಸುಂಟರ ಗಾಳ್ಹೀಲಿ ತಿರುಗೂತೀಯಲ್ಲೆ ।
ಉಂಟವೊ ಇಲ್ಲವೇನೆ ಅನುಮಾನ ಬೇಡ ।
ಮೂಡಾಲ ಸೀಮೆಗೆ ಹೋಗ್ಯವನೆ ಸ್ವಾಮಿ ।
ಮುತ್ತು ನವರತ್ನ ನಿನಗೆ ತರುತಾನೆ ।
ವಜ್ರ ವೌಡೂರ್ಯ ನಿನಗೆ ತರುತಾನೆ ।

ಇವತ್ತೆ ಬರುವೋನೆ ನಾಳೆ ಬರುವೋನೆ ?
ಬರುವೋದು ತಡವಾಗಿ ಮದ್ವೆಯಮ್ಮ ನಿನದು ।
ಈ ಮನೆ ಮುಂದುಗಡೆ ಚಪ್ಪರ ಹಾಕುವರು ।
ಈ ಮನೆ ಮುಂದುಗಡೆ ಧಾರೆ ಎರೆವರು ।
ಈ ಮನೆ ಮುಂದುಗಡೆ ತಾಲಿ ಕಟ್ಟುವರು ।
ಇಷ್ಟೊಂದೆಲ್ಲಾ ಹೇಳಿ ತಾ ನಿಜರೂಪ ತೋರಿ ।
ಇದು ಎಲ್ಲಾ ಹೆಣ್ಣ ಮಾಯವೆಂದು ತಿಳಿದ ರುಕ್ಮಿಣಿ ।
ನಾಚಿಕೆ ಪಟ್ಟಾಳು ಕೋಣೆ ಸೇರ್ಯಾಳು ।

ಹೆಂಗಸರ ನಾಚಿಕೆ ಕೆಡಸಬಾರದೆಂದೂ ।
ಇದ್ದೋನು ಇದ್ದಂಗೆ ಮಾಯವಾದನು ಸ್ವಾಮಿ ।
ದ್ವಾರಕಪುರಿ ಪಟ್ಟಣ ಸೇರಿದಾನು ಸ್ವಾಮಿ ।
ಕೊರಮರ ಗೂಡೆಯ ಕೊರಮರಿಗೆ ಕೊಟ್ಟು ।
ಆಭರಣ ಒಡವೆನೆಲ್ಲಾ ಪೆಟ್ಟಿಗೆ ಮಡಗಿದಾನು ।
ಮಾಯದ ಮಗುವನು ಮಾಯ ಮಾಡಿದಾನು ।
ಕಾವೇರಿ ನದಿಯಲ್ಲಿ ತಾನ ಮಾಡುತಾನೆ ।
ಪಟಪಟ್ಟಿ ನಾಮಗಳ ಧರಿಸ್ಹೀದ ಸ್ವಾಮಿ ।

ಫವಲಕ್ಕೆ ಕಿರೀಟ ಧರಿಸೀದ ಸ್ವಾಮಿ ।
ಅಲ್ಲಿಂದ ತಾಳ ಮೇಳದಿಂದ ಬರುತಾನೆ ಸ್ವಾಮಿ ।

ಕೃಷ್ಣ ಬರುವೋದೆ ತಡವಾಗಿ ಪಾದ ಹಿಡಿದಾಳು ।
ಪನ್ನೀರು ತಂದ್ಹೀಗ ಪಾದವ ತೊಳೆದಾಳು ।
ಪಾದ ತೊಳೆದ ನೀರ ಪಾವನವ ಮಾಡಿದಾಳು ।
ಆಕಾಶ ಏಣಿಯಷ್ಟು, ಚಪ್ಪರಹಾಕಿದರು ।
ದೊಡ್ಡದೊಡ್ಡ ಮುತ್ತುಗಳ ಸಾಸುವೆ ಇಕ್ಕಿದರು ।
ಚಿಕ್ಕಚಿಕ್ಕ ಮುತ್ತುಗಳ ಸಾಸುವೆ ಇಕ್ಕಿದರು ।
ಆನೆ ಮುತ್ತು ತಂದು ಧಾರೆ ಎರೆದಾರು ।
ಕೃಷ್ಣನ ತಾಯಿ ತಂದೆ ಧಾರೆ ಎರೆದಾರು ।
ರುಕ್ಮಿಣಿ ತಾಯಿ ತಂದೆ ಧಾರೆ ಎರೆದಾರು ।
ಗೊಲ್ಲ ಸ್ತ್ರೀಯರ ಕರೆದು ಸೋಭನವ ಮಾಡಿದರು ।
ರಂಬೆ ಊರ್ವಸಿ ಕರೆಸಿ ನಾಟ್ಯ ಮಾಡ್ಯಾರು ।
ಹನ್ನೆರಡು ದಿವಸಕ್ಕೆ ಲಗ್ನ ತೀರಿಸ್ಯಾರು ।

ಕಲ್ಯಾಣವಾಗ್ಹೀತು ಕೃಷ್ಣ ನಿನಗೆ ।
ಮದುವೆ ಆಗಿತು ರುಕ್ಮಿಣಿ ನಿನದು ।
ಕೃಷ್ಣನ ಕತೆಯನು ಕೇಳಿದವರಿಗೆ—
ಮಾಡಿದ ಪಾಪ ಪರಿಹಾರವೆಂದು ।
ರುಕ್ಮಿಣಿ ಕತೆಯನು ಕೇಳಿದವರಿಗೆ ।
ಮಾಡಿದ ಪಾಪ ಪರಿಹಾರವೆಂದು ।
ಹೇಳ್ವಾರು ಜನರು ಧರಣಿಯಲೆಲ್ಲಾ ।

ಹೊಂಗೇಲಿ ಈರಣ್ಣ ಮಡಿದಾನೆ....

ಜಾಣನ ತಲೆಹೋಗಿ ಜಾಲೀಲಿ ಮೆರೆದಾವೆ
ಜಾಣ ಈರಣ್ಣ ನ ತಲೆಹೋಗಿ । ಅರೆಹಳ್ಳಿಯ
ಹೆಬ್ಬಾಗಿಲಾಗೆ ಮೆರೆದಾವೆ ॥

....ಜನಪದ ಸಾಹಿತ್ಯವೂ ಕೂಡ ಜನಜೀವನದ ರಸವಾಣಿಯೆಂದು ಬೇರೆ ಹೇಳಬೇಕಾಗಿಲ್ಲ. ಜನತೆಯ ಹೃದಯ ವೀಣೆಯಿಂದ ಮಿಡಿದುಬಂದ ಸಹಜ ಸಂಗೀತದ ಸವಿಯಾದ ಹೊನಲನ್ನು ಸೂಸುಂಪ ಜಾನಪದಗೀತೆಗಳೇ ಜನಪದ ಸಾಹಿತ್ಯವು. ನೆಲದ ಮಕ್ಕಳಾದ ನಿರಕ್ಷರಿಗಳಾದ ರಸಿಕರಾದ ಹಳ್ಳಿಯ ಕವಿಗಳ, ಕವಿಯಿತ್ರಿಯರ ಎದೆಯಿಂದ ನೆಗೆದು ಬಂದ, ನಲಿದು ನಿಂದ, ತ್ರಿಪದಿಯ ಸಹಜ ಗತಿಯಲ್ಲಿ ರಸ ತರಂಗಿಣಿಯಾಗಿ ಓತಪ್ರೋತವಾಗಿ ಹರಿಯುತ್ತಿರುವ ಹಳ್ಳಿಯ ಹಾಡುಗಳಲ್ಲಿ ಹಳ್ಳಿಗರ ಜೀವನ ಸೌಂದರ್ಯವು ನಿಚ್ಚಳವಾಗಿ ಮೂಡಿನಿಂತಿದೆ. ಈ ಸೌಂದರ್ಯದ ಆಂತರಾಳದಲ್ಲಿ ನಮ್ಮ ನಾಡಿನ ಜನತೆಯ ಸಂಸ್ಕೃತಿಯು ಕನ್ನಡಿಸಲ್ಪಟ್ಟಿದೆ. ಜನ ಸಾಮಾನ್ಯರು ತಮ್ಮ ಬಾಳಿನಲ್ಲಿ ಕಂಡುಂಡ ಈ ಸವಿ ಕಹಿಗಳನ್ನೂ, ಸಾವು ನೋವುಗಳನ್ನೂ, ನಯ ವಿನಯಗಳನ್ನೂ, ಧೈರ್ಯ ಸ್ಥೈರ್ಯಗಳನ್ನೂ, ಆಶೆ ನಿರಾಶೆಗಳನ್ನೂ, ಭಕ್ತಿ ಪ್ರೀತಿಗಳನ್ನೂ ಕುರಿತು ಆಯಾ ಸಂದರ್ಭಗಳಲ್ಲಿ ಹಾಡಿನ ರೂಪದಲ್ಲಿ ಹೇಳಿಕೊಂಡಿದ್ದಾರೆ. ಆದುದರಿಂದ ಸುಂದರವಾದ ಅವರ ಹಳ್ಳಿಯ ಬಾಳಿನ ಸಮಯ ಸನ್ನಿವೇಶಗಳ ಮೋಹಕವಾದ ಚಿತ್ರ ಅಲ್ಲಿ ಪ್ರತಿಬಿಂಬಿತವಾಗಿದೆ. ಆ ಚಿತ್ರದ ಚೌಕಟ್ಟಿನಲ್ಲಿ ಅವರ ಬಾಳಿನ ಎತ್ತರ ಬಿತ್ತರಗಳ ಸಮಗ್ರವಾದ ಸಾಂಸ್ಕೃತಿಕ ಚರಿತ್ರೆ ಎದ್ದು ಕಾಣುವದು. ವಿವಿಧಾನುಭವ ರಂಜಿತವಾದ ರಸಾನುಭೂತಿಯ ಹಿಗ್ಗಿನ ಬುಗ್ಗೆಗಳಾದ ಈ ಹಾಡುಗಳಲ್ಲಿ ನಮ್ಮ ನಾಡಿನ ಸಾಮಾನ್ಯತಾತ್ರೀಯ ಸೊಗಸಿನ ಕಥೆ ಚಿರಂತನವಾಗಿ ಹೇಳಲ್ಪಡುತ್ತಿದೆ. ಆದನ್ನು ಸುಸಂಸ್ಕೃತರೆಂದು ಹೇಳಿಕೊಳ್ಳುತ್ತಿರುವ ಹೊಸ ನಾಗರಿಕತೆಯ ಗರಿಗಳನ್ನು ತಲೆಯಲ್ಲಿಟ್ಟುಕೊಂಡು ಮೆರೆಯುತ್ತಿರುವ ನಾವಿಂದು ಚನ್ನಾಗಿ ಕೇಳಬೇಕಾಗಿದೆ. ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿ ಸಮರಸವಾಗಿ ರೂಪುಗೊಂಡು ಬಂದಿದ್ದ ಆ ಬಾಳಿನ ನಯ, ಭಯ, ವಿನಯ, ವೈಭವಗಳ ಸೌಂದರ್ಯವನ್ನು ನಮ್ಮ ಜೀವನದಲ್ಲಿ ಇಂದು ತುಂಬಿಕೊಳ್ಳಬೇಕಾಗಿದೆ. ಬಗೆಯನ್ನು ಬೆಳಗಬಲ್ಲ, ನಗೆಯನ್ನು ಚಿಗಿಸಬಲ್ಲ, ಚಲುವನ್ನು ರಚಿಸಬಲ್ಲ ಅಂಥ ಹಳ್ಳಿಗರ ಹಾಡುಗಬ್ಬಗಳಲ್ಲಿ ಹುದುಗಿನಿಂದ ರಸವನ್ನು ಹೀರಿ ನಮ್ಮ ಬಾಳಿಗೆ ಬಣ್ಣವನ್ನೂ, ಹೃದಯಕ್ಕೆ ಸಂಸ್ಕಾರವನ್ನೂ, ಆತ್ಮಕ್ಕೆ ಆನಂದವನ್ನೂ ತಂದುಕೊಳ್ಳುವದು ಅವಶ್ಯ.

—ಶ್ರೀ ಎಸ್.ಡಿ. ಇಂಚಲ, ಬಿ.ಎ.ಬಿ.ಟಿ.

ಹೊಂಗೇಲಿ ಈರಣ್ಣ ಮಡಿದಾನೆ....*

ಹಟ್ಟೀಲಿ ಕೆಸರೆದ್ದೊ ಆಡುವಲ್ಲೊ ನಿನ್ನೆಂಡ್ರು
ಹಾಕೆ ವಜ್ಜುರದ ಹಲಗೆಯ । ಈರಣ್ಣ
ಬೀಸಯ್ಯ ಬೆಳ್ಳಿ ಚವಲಾವ ॥

ಕೇರೀಲಿ ಕೆಸರೆದ್ದೊ ಆಯವಲ್ಲೊ ನಿನ್ನೆಂಡ್ರು
ಬೀಸಯ್ಯ ಬೆಳ್ಳಿ ಚವಲಾವ—ಈರಣ್ಣ
ಬೀಸಯ್ಯ ಬೆಳ್ಳಿ ಚವಲಾವ ॥

ದಾಸಹಳ್ಳಿ ಟಗರಿಗೆ ಆಸೆ ಬಿದ್ದ ಈರಣ್ಣ
ದಳವಲ್ಲ ದವನಾವ । ಪೂಜಿಸಿ ಮುಂದೆ
ಬಾಷೇಲಿ ಟಗರ ಕರೆದಾನೆ ॥

ಉಂಡ ಟಗರಿಗೆ ಇಂಬೆಹಣ್ಣು ಕೊಟ್ಟು
ಇಂಬಾಗಿ ಕರೆಯೊ ಕುರಿಹಿಂಡ । ಈರಣ್ಣ
ಇಂಬೆಯ ಚಪ್ಪರದ ನೆರಳಿಗೆ ॥

ಬಾಳೊ ಟಗರಿಗೆ ಬಾಳೆಹಣ್ಣು ಕೊಟ್ಟು
ಬಾವಾಗಿ ಕರೆಯೊ ಕುರಿಹಿಂಡ । ಈರಣ್ಣ
ಬಾಳೆ ಚಪ್ಪರದ ನೆರಳಿಗೆ ॥

ಆಸೆವಂತ ಟಗರಿಗೆ ಕಾಸಿನ ಬಾಳೆಹಣ್ಣು ಕೊಟ್ಟ
ಕಾಸಿನ ಕಡಲೆ ಮಡಿಲಾಗೆ ! ಕಟ್ಟಿಕೊಂಡು
ಆಸೆವುಳ್ಳ ಟಗರ ಕಲಿಮಾಡೊ ॥

---

*ಈ ಹಾಡುಕತೆಯನ್ನು ಶ್ರೀ ಆದಿಚುಂಚನಗಿರಿಯ ಆಳ್ಕಹಳ್ಳದ ಬೆಟ್ಟಗಳ ತಪ್ಪಲಿನಲ್ಲಿರುವ ಹಳ್ಳಿಗಳಲ್ಲಿ ಗೊಲ್ಲ ಜನಾಂಗದ-ಹೆಂಗಸರು ರಾಗಿ ಬೀಸುವಾಗ ಹಾಡುವರು.

ಹಾಲುಕುರುಬರು ಹೋದರು ಕುರಿಹಟ್ಟಿಗೆ
ಬೇಗನೆ ಮಾಡಮ್ಮ ಅಡಿಗೆಯ । ಈರಣ್ಣನ
ಹಿಂಡಿಗೆ ತಂದಾರೆ ಹಿಡಿಹೊನ್ನ ॥

ಕತ್ತರಿ ಕುರುಬರು ಒಕ್ಕರು ಕುರಿಹಟ್ಟಿಯ
ತಟ್ಟನೆ ಮಾಡಮ್ಮ ಅಡಿಗೆಯ । ಈರಣ್ಣನ
ಹಿಂಡಿಗೆ ತಂದಾರೆ ಪಡಿಹೊನ್ನ ॥

ಬೆಳ್ಳೂರ ಒಡ್ಡಿ ಭೈರುವನ ಬೆಟ್ಟಸುತ್ತಿ
ದಾಸಾನ ಕೆರೆಯ ದಳವೊಡ್ಡಿ । ಮೇದಾವಲ್ಲೆ
ಆಸೆವಂತ ಈರಣ್ಣನ ಕುರಿಹಿಂಡು ॥

ಏತದ ಬಾವಿಯಾಗೆ ತೋಟದ ಮೂಲೆಗೆ
ಗಂಧ ಸುರುವನ್ನೆ ಬಯಲಾಗೆ । ಈರಣ್ಣನ
ಹಿಂಡು ಸಾವಿರಕೆ ಬೆಲೆಯಾದೊ ॥

ಆರಾಳುದ್ದ ತೋಟದ ಮಡುವಾಗೆ
ತೋಳಾಡಿ ಕುರಿಯ ತೊಳೆಯೇನೆ । (ತೊಳೆಯೊ) ಈರಣ್ಣನ
ತೊಳೀಗೆ ಗಂಗಮ್ಮ ಒಲಿದಾಳೆ ॥

ಹತ್ತಾಳುದ್ದ ತಳುಕಿದ ಕಾಲುವೆಯಾಗೆ
ಬೆಟ್ಟಾಡಿ ಕುರಿಯ ತೊಳೆಯೇನೆ । (ತೊಳೆಯೊ)ಈರಣ್ಣನ
ಬೆಟ್ಟಾಡಿ ಗಂ ಮ್ಮ ಒಲಿದಾಳೆ ॥

ಚಿಕ್ಕಬೆಳ್ಳೂರ ಸುತ್ತಿಮೇಸೋನ್ಯಾರೆ
ಸುತ್ತಿನುಂಗುರದ ಚೆಲುವಾನು । (ಚೆಲುವ) ಈರಣ್ಣನು
ಸುತ್ತಿ ಮೇಸ್ಯಾನೆ ಚಿ ಗುರ್ದುಲ್ಲ ॥

ದೊಡ್ಡ ಬೆಳ್ಳೂರ ಒಡ್ಡಿಮೇಸೋನ್ಯಾರೆ
ಮುದ್ರೆ ಉಂಗುರದ ದೊರೆಮಗ । ಈರಣ್ಣ ನು
ಒಡ್ಡಿ ಮೇಸ್ಯಾನೆ ಒಡೆಹುಲ್ಲ ॥

ದ್ದವೆಂದು ಗುಂಡುಮೇಲೆ ಕೂತಾನೆ
ಗುಂಡು ಗಡಗಡನೆ ಆಡ್ಯಾವೆ । ಈರಣ್ಣ
ಇಂದೆದ್ರೆ ಭೂಮಿ ಹಿಡಿಯಾವು ॥

ಇಂದೆದ್ರೆ ಭೂಮಿ ಹಿಡಿಯಾವು—ಈರಣ್ಣ
ಮುಂಡೇವ್ದ ಮುರುಗ ಮುಡಿಯಾಕೆ ॥

ಅಗಸರ ಹೊಳೆಯಾಗೆ ಮಗೆಸಾನೆ ಕೆಂದೂಳ
ಅಗಸರ ಹುಡುಗಿ ಮಡಿಯತ್ತೆ । ಈರಣ್ಣನ
ಕುರಿಹಿಂಡು ನೀರ ಕುಡಿಯಲಿ ॥

ಕುರಿಯ ಕಾಯೊನಿಗೆ ತುರುಬಿನ ಹೆಣ್ಯಾಕೆ
ಕುರಿಬಿಟ್ಟು ಮನೆಗೆ ಬರಲಿಲ್ಲಾ । ಈರಣ್ಣ
ತುರುಬಿನ ಹೆಣ್ಣು ತರವಲ್ಲಾ ॥

ಹತ್ತು ಕುರಿಯ ನೊಸಲಿ ತೆಕ್ಕೇಲಿ ತಬ್ಬಿಕೊಂಡು
ಮಚ್ಚಣ ಕೋಲು ಬಲಗೈಲಿ । ಹಿಡಕೊಂಡು
ಹಂಗಲ ಮೇಸೋದು ಐಭೋಗ ॥

ಆರು ಸಾವಿರ ನೊಸಲಿ ತೋಳ ತಬ್ಬಿಕೊಂಡು
ಬಣ್ಣ ಚಂಪವನ ಬಲಗೈಲಿ । ಹಿಡಕೊಂಡು
ಕೂಳೆ ಮೇಸೋದು ಐಭೋಗ ॥

ಕಟ್ಟಿ ಏರಮೇಲೆ ಕಟ್ಟರ ಸಾಲಿಟ್ಟಂಗೆ
ಈರಣ್ಣನ ಹಿಂಡು ಬರುತಾವೆ । ಚಿಕ್ಕಮ್ಮ
ಕುರಿ ಬಂದೊ ಮರಿಯ ಬಿಡೆ ಹೇಳೆ ॥

ಮರಿಯ ಬಿಡುವೋಕೆ ಈರಣ್ಣ ಮನೆಯಾಗಿಲ್ಲ
ಇನ್ಯಾರೆ ಮರಿಯ ಬಿಡುವೋರು ॥

ಏರಿಯ ಮೇಲೆ ಇರುಬ ಸಾಲಿಟ್ಟಂಗೆ
ದೊರೆಗಳ ಹಿಂಡು ಬರುತಾವೆ । ಚಿಕ್ಕಮ್ಮ
ಈರಣ್ಣನ ಮರಿಯ ಬಿಡಹೇಳೆ ॥

ಮರಿಯ ಬಿಡುವೋಕೆ ಈರಣ್ಣ ಮನೆಯಾಗಿಲ್ಲ
ಇನ್ಯಾರೆ ಮರಿಯ ಬಿಡುವೋರು ॥

ಬೆಳ್ಳೂರ ಒಡ್ಡಿ ಬೇಲಿಯ ಕೇರಿಯ ಒಡ್ಡಿ
ದಾಸಾನಕೆರೆಯ ದಳವೊಡ್ಡಿ । ನೀರ ಕುಡಿದು
ಮುಗಿಹ್ಹೀವು ಈರಣ್ಣನ ಕುರಿಹಿಂಡು ॥

ಹಾಲ ಕುಡಿದಾವೆ ಆಕರಿಸಿ ನೆಗೆದಾವೆ
ಗ್ಯಾನವುಳ್ಳೋರ ತುಳಿದಾವೆ । ಈರಣ್ಣ
ಗ್ಯಾನ ಹೇಳಯ್ಯ ಟಗರಿಗೆ ॥

ತುಪ್ಪ ಕುಡಿದಾವೆ ಕುಪ್ಪಳಿಸಿ ನೆಗೆದಾವೆ
ಬುದ್ಧಿವುಳ್ಳೋರ ನೆಗೆದಾವೆ । ಈರಣ್ಣ
ಬುದ್ಧಿ ಹೇಳಣ್ಣ ಟಗರಿಗೆ ॥

ಸುಂಠಿ ಹುಟ್ಟೀತು ಸುಂಟೊಂದು ದಿನದಾಗೆ
ಜೇನು ಇಕ್ಕೀತು ಮೆಳೆಯಾಗೆ । ಕರಡಿಯರ
ಜಾಣ ಹುಟ್ಟವನೆ ಕಲಿಯಾಗೆ ॥

ಆನೆ ಹುಟ್ಟೆತು ಆನೆವೊಂದು ದಿನದಾಗೆ
ಸುಂಠಿ ಹುಟ್ಟೀತು ಕೆರೆಯಾಗೆ । ಕರಡಿಯರ
ಬಂಟ ಹುಟ್ಟವನೆ ಊರಾಗೆ ॥

ಜಾಣನ ತಲೆಹೋಗಿ ಜಾಲೀಲಿ ಮೆರೆದಾವೆ
ಜಾಣ ಈರಣ್ಣನ ತಲೆಹೋಗಿ । ಅರೆಹಳ್ಳಿಯ
ಹೆಬ್ಬಾಗಲಾಗೆ ಮೆರೆದಾವೆ ॥

ಬಂಟನ ತಲೆಹೋಗಿ ಬೇಲೀಲಿ ಮೆರೆದಾವೆ
ಬಂಟ ಈರಣ್ಣನ ತಲೆಹೋಗಿ । ಅರೆಹಳ್ಳಿಯ
ಹೆಬ್ಬಾಗಲಾಗೆ ಮೆರೆದಾವೆ ॥

ರಾಯ ಅರೆಹಳ್ಳಿಯ ಮುಂದೆ ತಲೆಯ ಬಾಗಲಲ್ಲಾ
ಆಳು ನಿಲ್ಲಾಕೆ ನೆರಳಿಲ್ಲಾ । ಚಿಕ್ಕಮ್ಮ
ಹಾಳೂರಿಗ್ಯಾಕೆ ಕಳುಹಿದೆ ॥

ಚಿಕ್ಕ ಅರೆಹಳ್ಳಿಯ ಮುಂದೆ ತಲೆಯ ಬಾಗಲಿಲ್ಲಾ
ಮುಂದೆ ನಿಲ್ಲಾಕೆ ನೆರಳಿಲ್ಲಾ । ಚಿಕ್ಕಮ್ಮ
ಬೆಂದೂರಿಗ್ಯಾಕೆ ಕಳುಹಿದೆ ॥

ರಾಯ ಅರೆಹಳ್ಳಿಯ ಚಿತ್ತರದ ಏರಿಯ ಮೇಲೆ
ನಿಂಬೆಯ ಕಡಿದು ಮರೆಮಾಡಿ । ಚಿಕ್ಕಮ್ಮ
ನಿನ್ ಬಾಲಾನ ಕೈಸೆರೆಯ ಹಿಡಿದಾರೆ ॥

ದೊಡ್ಡ ಅರೆಹಳ್ಳಿಯ ರುವ್ವಾರದ ಏರಿಯ ಮೇಲೆ
ನಿಂಬೆಯ ಕಡಿದು ಮರೆಮಾಡಿ । ಚಿಕ್ಕಮ್ಮ
ನಿಮ್ ಪುತ್ರಾನ ಕೈಸರೆಯ ಹಿಡಿದಾರೆ ॥

ಚೆಂಡು ಬಂದಾವೆ ಕೊಂಡುಕೊಳ್ಳಿ ಚಿಕ್ಕಮ್ಮ
ದಂಡಿಗೋಗ್ಯವನೆ ನಿನ ಮಗ । ಈರಣ್ಣ
ಚೆಂಡಿಲ್ಲಿದ ಊರ ಹೋಗನಲ್ಲೆ ॥

ಓಲೆ ಬಂದಾವೆ ಓದಿಕೊಳ್ಳಿ ಚಿಕ್ಕಮ್ಮ
ದಾಳಿ ಹೋಗ್ಯವನೆ ನಿನ ಮಗ । ಚಿಕ್ಕಮ್ಮ
ಓಲೆ ಇಲ್ಲದ ಊರ ಹೋಗನಲ್ಲೆ ॥

ಕತ್ತಿ ಕೊಡೀರಿ ಶೂರ ಈರಯ್ಯಾಗೆ
ಹಟ್ಯಾಗೆ ದುರ್ತು ಹೊಡಿಯೋನೆ । (ಹೊಡಿಯೊ) ಈರಣ್ಣಾಗೆ
ಕತ್ತಿಕೊಟ್ಟಮ್ಮ ಸುಮಿಬಾಳು ॥

ಸೂರಿ ಕೊಡಿರಮ್ಮ ಧೀರ ಈರಯ್ಯಾಗೆ
ಕೇರ್ಯಾಗೆ ದುರ್ತು ಹೊಡಿಯೋನೆ । (ಹೊಡಿಯೊ) ಈರಣ್ಣಾಗೆ
ಸೂರಿ ಕೊಟ್ಟಮ್ಮ ಸುಮಿಬಾಳು ॥

ಕತ್ತಿಯ ಕೊಡಿ ನತ್ತುಲದ ಅರಿಬೆಕೊಳ್ಳಿ
ಕತ್ತಿಯ ಕೊಳ್ಳಿ ಗುರುತೀಗೆ । ಅರೆಹಳ್ಳಿಯ
ಕತ್ತಿ ಕಾಳಗವ ಗೆಲ್ಲುಬೇಕು ॥

ಸೂರಿಕೊಳ್ಳೀರಿ ಗಾಯದ ಅರಿಬೆಕೊಳ್ಳಿ
ಸೂರಿಕೊಳ್ಳಿ ಗುರುತೀಗೆ । ಅರೆಹಳ್ಳಿಯ
ಸೂರಿ ಸಾವಿರಕೆ ಬೆಲೆಯಾದೊ ॥

ಅಪ್ಪ ಮಡಿದ ತಾವ ಹಣ್ಣಿನ ಗಿಡವಾದೊ
ಹೆಣ್ಣು ಮಕ್ಕಳ್ಹೊಗಿ ನೋಡಿಬನ್ನಿ । ಅರೆಹಳ್ಳಿಯ
ನತ್ತುಲಾದ ಕೋಡಿ ಹರಿದಾವೆ ॥

ಅಣ್ಣ ಮಡಿದುತಾವ ತುಪ್ಪದ ಮಡುವಾದೊ
ಸೊಸೆಯೋರ ಹೋಗಿ ನೋಡಿ ಬನ್ನಿ । ಅರೆಹಳ್ಳಿಯ
ನತ್ತುಲಾದ ಕೋಡಿ ಹರಿದಾವೆ ॥

ಕಡೆದ ಬೆಣ್ಣೆಯ ಅನ್ನಾಕೆ ಇಕ್ಯಾಳೆ
ಹೆತ್ತಮ್ಮ, ಒಂದಿಗೆ ಉಣುಬಾರೇ । ಅರೆಹಳ್ಳಿಯ
ಹಡೆದ ಋಣ ಇಲ್ಲಿಗೆ ಸಮವಾದೊ ॥

ಕಾಸಿದ ತುಪ್ಪ ಅನ್ನಾಕೆ ಬಿಟ್ಟಾಳೆ
ತಾಯಮ್ಮ, ಒಂದಿಗೆ ಉಣುಬಾರೇ । ಅರೆಹಳ್ಳಿಯ
ಹಡೆದ ಋಣ ಇಲ್ಲಿಗೆ ಸಮವಾದೊ ॥

ಕಾಸಿದ ತುಪ್ಪ ಅನ್ನಾಕೆ ಬಿಟ್ಟಾಳೆ
ತಾಯಮ್ಮ, ಒಂದಿಗೆ ಉಣುಬಾರೇ । ಅರೆಹಳ್ಳಿಯ
ಹಡೆದ ಋಣ ಇಲ್ಲಿಗೆ ಸಮವಾದೊ ॥

ಚಿನ್ನದ ಹಲಗೇಲಿ ಇನ್ನೆಲ್ಲಿ ಕಡೆದಾರೆ
ನಾಡ ಗೌಡನ ಕೆರೆಯ ಬಯಲಾಗೆ । ಅಪ್ಪದಿರು
ಒಂದುಕೊಟ್ಟು ಹಲಗೆ ಕಡೆಸ್ಯಾರೆ ॥

ಮುತ್ತಿನ ಹಲಗೆ ಮತ್ತೆಲ್ಲಿ ಕಡೆದಾರೆ
ಮುದ್ದು ಗೌಡಾನ ಕೆರೆಯ ಬಯಲಾಗೆ । ಅಣ್ಣದೀರು
ಮುತ್ತುಕೊಟ್ಟು ಹಲಗೆ ಕಡೆಸ್ಯಾರೆ ॥

ಆ ನಾಡಿನ ಅರಸು ಇತ್ತನಾಡಿಗೆ ಬರುವಾಗ
ಸಾರಡಿಗಟ್ಟಾವೆ ಬಿಳಿಯಾಲೆ । ಅರೆಹಳ್ಳಿಯ
ತಾವಿಗೆ ಈರಣ್ಣ ಬರುವಾಗ ॥

ಅತ್ತ ನಾಡಿನ ಅರಸು ಈ ನಾಡಿಗೆ ಬರುವಾಗ
ಹೊತ್ತಾಲಗಟ್ಟಾವೆ ಬಿಳಿಯಾಲೆ । ಅರೆಹಳ್ಳಿಯ
ದಿಕ್ಕಿಗೆ ಈರಣ್ಣ ಬರುವಾಗ ॥

ಬಿದ್ದಾವೆ ಕರಿಯಾಲೆ ಬಿದ್ದಾವೆ ಬಿಳಿಯಾಲೆ
ಬಿದ್ದಾನೆ ಚಿಕ್ಕಮ್ಮ ಮಡಲಿಗೆ । ಅರೆಹಳ್ಳಿಯ
ಬಗ್ಗಿ ಚಾವಡಿಗೆ ಹೋಗುವಾಗ ॥

ಬಾಡ್ಯಾವೆ ಬಿಳಿಯಾಲೆ ಬಾಡ್ಯಾವೆ ಕರಿಯಾಲೆ
ಬಾಡ್ಯಾವೆ ಚಿಕ್ಕಮ್ಮ ಮಡಿಲೆಲೆ । ಅರೆಹಳ್ಳಿಯ
ಬಾಗಿ ಚಾವಡಿಗೆ ಹೋಗುವಾಗ ॥

ಆರಂದಡಿವಾಗೆ ಗೋರಿಕಲ್ಲು ಬಾರ್ಯಾಗೆ
ಯಾರು ನನ್ನ ಮಗನಿಗೆ ಇರಲಿಲ್ವ । ಸೀಗಲಕಟ್ಟೆ
ಕಾಳಯ್ಯ ನಮ್ಮ ಮೇಲೆ ಮುನಿದ ॥

ಆರಂದಡವೀಲಿ ಗೋರಿಕಲ್ಲ ಬಾರೇಲಿ
ಯಾರು ನನ್ನ ಮಗನಿಗೆ ಇರಲಿಲ್ವ । ನಂಧಿಒಳದ
ಹಾಲಯ್ಯ ನಮ್ಮ ಮೇಲೆ ಮುನಿದ ॥

ಯಾರಮ್ಮ ಹೋಗುವೋರು ಯಾರಮ್ಮ ಬರುವೋರು
ಎಂದೆಂದು ಉಣ್ಣೊ ನಿಧುನಾವ । ಕೊಟ್ಟೀವು
ಯಾರಲ್ಲಿ ಈ ಮಾತ ತಿಳಿಸ್ಹೀರಿ ॥

ಆ ನಾಡಿನ ಅರಸು ಇತ್ತನಾಡಿಗೆ ಬರುವಾಗ
ಸಾರಣಿಗಟ್ಟಾವೆ ಬಿಳಿಯಾಲೆ । ಅರೆಹಳ್ಳಿಯ
ತಾವಿಗೆ ಈರಣ್ಣ ಬರುವಾಗ ॥

ಅತ್ತ ನಾಡಿನ ಅರಸು ಈ ನಾಡಿಗೆ ಬರುವಾಗ
ಹೊತ್ತಾಲಗಟ್ಟಾವೆ ಬಿಳಿಯಾಲೆ । ಅರೆಹಳ್ಳಿಯ
ದಿಕ್ಕಿಗೆ ಈರಣ್ಣ ಬರುವಾಗ ॥

ಬಿದ್ದಾವೆ ಕರಿಯಾಲೆ ಬಿದ್ದಾವೆ ಬಿಳಿಯಾಲೆ
ಬಿದ್ದಾನೆ ಚಿಕ್ಕವ್ನ ಮಡಲಿಗೆ । ಅರೆಹಳ್ಳಿಯ
ಬಗ್ಗಿ ಚಾವಡಿಗೆ ಹೋಗುವಾಗ ॥

ಬಾಡ್ಯಾವೆ ಬಿಳಿಯಾಲೆ ಬಾಡ್ಯಾವೆ ಕರಿಯಾಲೆ
ಬಾಡ್ಯಾವೆ ಚಿಕ್ಕವ್ನ ಮಡಿಲೆಲೆ । ಅರೆಹಳ್ಳಿಯ
ಬಾಗಿ ಚಾವಡಿಗೆ ಹೋಗುವಾಗ ॥

ಆರಂದಡಿವಾಗೆ ಗೋರಿಕಲ್ಲು ಬಾರ್ಯಾಗೆ
ಯಾರು ನನ್ನ ಮಗನಿಗೆ ಇರಲಿಲ್ವ । ಸೀಗಲಕಟ್ಟಿ
ಕಾಳಯ್ಯ ನಮ್ಮ ಮೇಲೆ ಮುನಿದ ॥

ಆರಂದಡವೀಲಿ ಗೋರಿಕಲ್ಲ ಬಾರೇಲಿ
ಯಾರು ನನ್ನ ಮಗನಿಗೆ ಇರಲಿಲ್ವ । ನಂಧಿಒಳದ
ಹಾಲಯ್ಯ ನಮ್ಮ ಮೇಲೆ ಮುನಿದ ॥

ಯಾರನ್ಮ ಹೋಗುವೋರು ಯಾರಮ್ಮ ಬರುವೋರು
ಎಂದೆಂದು ಉಣ್ಣೂ ನಿಧುನಾವ । ಕೊಟ್ಟೀವು
ಯಾರಲ್ಲಿ ಈ ಮಾತ ತಿಳಿಸ್ಹೀರಿ ॥

ಫಲಬಿಡುವ ಮರಗಳ ಕಡಿಸನೆ

ಬಟ್ಟಾಲು ಬೆಳಗಿ ಹಟ್ಟಿಗೆ ಚೆಲ್ಲಲಿಲ್ಲಾ
ಅಪ್ಪಾನ ಕುಟ್ಟಿ ಉಣಲಿಲ್ಲಾ। ಜವರಾಯ
ಉಂಡೆನೆಂದಾರೆ ಬಿಡಲಿಲ್ಲಾ ॥

...ಜನಪದ ಸಾಹಿತ್ಯ ಭಂಡಾರದಲ್ಲಿ ಕಥಾ ಸಾಹಿತ್ಯ ವಿಪುಲವಾಗಿದೆ. ಅನೇಕ ಪೌರಾಣಿಕ, ಐತಿಹಾಸಿಕ, ಕಾಲ್ಪನಿಕ ವಸ್ತುಗಳನ್ನೊಳಗೊಂಡ ಆ ಕಥೆಗಳಲ್ಲಿ ಕಂಡು ಬರುವ ಲೋಕಾನುಭವ, ಜೀವನ ವಿಮರ್ಶೆ, ಪಾತ್ರ ಸೃಷ್ಟಿ, ಸನ್ನಿವೇಶ ರಚನೆ, ನೀತಿ ಬೋಧೆ, ಸವೇಗವಾದ ಸುಲಭ ಕಥನ ರೀತಿ, ಹಾಸ್ಯ, ಚಮತ್ಕಾರಾದಿಗಳು ತಮ್ಮನೇ ಆದ ರೀತಿಯಲ್ಲಿ ಜನಮನವನ್ನು ಸೆಳೆಯುತ್ತ, ಸಂಸ್ಕಾರಗೊಳಿಸುತ್ತ, ದುಡಿದು ಸೋತ ಮನಕ್ಕೆ ನಲವನ್ನು ಸೂಡುತ್ತ ಉಳಿದುಬಂದಿವೆ. ಅವು ಪಂಡಿತರಿಗಾಗಿ ಬರೆದುವಲ್ಲ, ಪಾಮರರಿಗಾಗಿ, ಜನಸಾಮಾನ್ಯರಿಗಾಗಿ. ..

...ಗಾವುದ ಗಾವುದಕ್ಕೂ ನುಡಿಯಲ್ಲಿ, ನಡೆಯಲ್ಲಿ ಅಲ್ಪಸ್ವಲ್ಪವಾದರೂ ತಾರತಮ್ಯವನ್ನು ತೋರುವ ಕನ್ನಡದ ಜಾಯಮಾನ ಜನಪದ ಸಾಹಿತ್ಯದ ಮೇಲೂ ಪ್ರಭಾವವನ್ನು ಬೀರದಿಲ್ಲ. ಅದು ಜನತೆಯ ಸಾಹಿತ್ಯವಾದುದರಿಂದ, ಜನತೆಯ ನೋವು ನಲವುಗಳಿಗೆ ಮಾರ್ದನಿಗೊಟ್ಟು ಹೃದಯದಿಂದಲೇ ಹೊಮ್ಮಿದುದರಿಂದ ಸಹಜಸೌಂದರ್ಯ ಎಲ್ಲಿಯೂ ಮುಕ್ಕಾಗುವುದಿಲ್ಲ. ಕೃತಕತೆ ತಲೆಹಾಕುವುದಿಲ್ಲ. ನಿನಿದ್ದರೂ ಭಾಷೆಯಲ್ಲಿ ತುಸು ತಾರತಮ್ಯ ಕಂಡುಬಂದರೂ ಅದರ ಮೂಲಭೂತವಾದ ಅಂತಃಶಕ್ತಿ ರಸರೂಪವಾಗಿ ಒಂದೇ ರೀತಿಯಲ್ಲಿ ಹರಿದಿರುತ್ತದೆ; ಒಂದೇ ಜೀವಕಳೆಯಿಂದ ಕಂಗೊಳಿಸುತ್ತದೆ.

ಇಂಥ ಸಾಹಿತ್ಯವನ್ನು ಸಂಗ್ರಹಿಸುವುದೂ, ಸಂಗ್ರಹಿಸಿ ಸಂಪಾದಿಸುವುದೂ ಎಲ್ಲರಿಂದಲೂ ಆಗತಕ್ಕ ಕೆಲಸವೇನಲ್ಲ. ಅದಕ್ಕೆ ತಕ್ಕ ಭಾಷಾಜ್ಞಾನ, ಸಾಹಿತ್ಯ ಜ್ಞಾನಗಳ ಜೊತೆಗೆ ಆಯಾ ಪ್ರಾಂತದ ಆಡುಮಾತಿನ ನಿಕಟಪರಿಚಯವನ್ನು ಪಡೆದವರೂ ಆಗಬೇಕು. ಅಕ್ಷರಜ್ಞಾನವಿಲ್ಲದ, ಔಚಿತ್ಯ ಪ್ರಜ್ಞೆಯಿಲ್ಲದ ಗ್ರಾಮಸ್ಥರು ಹೇಳುವ ಪದಗಳನ್ನು ಹಾಗೆಹಾಗೆಯೇ ಬರೆದುಕೊಳ್ಳುವುದರ ಜೊತೆಗೆ ಎಲ್ಲಿ ಸಂಶಯ ಬರುತ್ತದೆ, ಯಾವೆಡೆಯಲ್ಲಿ ಪದಗತಿ ಶಿಥಿಲವಾಗುತ್ತದೆ, ಮತ್ತೆಲ್ಲಿ ಅರ್ಥ ಮುಸುಕಾಗುತ್ತದೆ ಎಂಬುದನ್ನು ಅರಿಯುವ ದಕ್ಷತೆಯೂ, ಅದನ್ನು ಸರಿಪಡಿಸಿಕೊಳ್ಳುವ ಸಂಪಾದನಾ ಸಾಮರ್ಥ್ಯವೂ ಬರಬೇಕು.. .

...ಜನಪದ ಸಾಹಿತ್ಯ ನಮ್ಮ ಜನತೆಯ, ನಮ್ಮ ಸಂಸ್ಕೃತಿಯ ಒಂದು ಸಾರ ಸ್ವತ ಸಂಪತ್ತು. ಗ್ರಂಥಸ್ತವಾಗದಿದ್ದರೂ ಶತಶತಮಾನಗಳಿಂದ ಸಾಮಾನ್ಯ ಜನತೆಯ ಸ್ವತ್ತಾಗಿ, ಅವರ ಅನುಭವಕ್ಕೆ, ಅವರ ಬದುಕಿಗೆ ಮಾರ್ದನಿಗೊಟ್ಟು ರೂಪುಗೊಳ್ಳುತ್ತಾ ಉಜ್ವಲವಾಗಿ ಬೆಳಗಿ ಬಂದಿದೆ. ನಿಜವಾದ ಸಾಹಿತ್ಯವಾದುದರಿಂದಲೇ ಇಂದಿಗೂ ಉಳಿದು ಬಾಂದಿದೆ ; ಬೆಳೆದು ಬಂದಿದೆ. ಬಾಯಿಂದ ಬಾಯಿಗೆ ಹರಿದು ಬಂದ ಈ ಮೌನ ತರಂಗಿಣಿ ಹಳ್ಳಿಗರ ಬದುಕಿನ ಮೇಲೆ ತನ್ನ ನಿಚ್ಚಳ ಪ್ರಭಾವವನ್ನು ಬೀರಿದೆ; ಅವರನ್ನು ತಿದ್ದಿದೆ, ಮನವನ್ನು ಸಂಸ್ಕಾರಗೊಳಿಸಿದೆ....

—ಶ್ರೀ ಜೀ. ಶಂ. ಪರಮಶಿವಯ್ಯ

ಫಲಬಿಡುವ ಮರಗಳ ಕಡಿಸನೆ*

ಬಂದಾನು ಜವರಾಯ ನಿಂದಾನೂರ ಮುಂದೆ
ಗಂಧಾವನೊಲ್ಲ ಪುಣಗೊಲ್ಲ। ಜವರಾಯ
ಗಂಡುಕೊಡಲೀಯ ಹೆಗಲೇರಿ ॥

ಗಂಡುಕೊಡಲೀಯ ಹೆಗಲೇರಿ-ಜವರಾಯ
ಫಲಬಿಡುವ ಮರಗಳ ಕಡಿಸನೆ ।

ಒಬ್ಬರ ಅಳಿಸಿದ ಒಬ್ಬರ ನಗಿಸಿದ
ಇಬ್ಬಂದಿಗಾರ ಜವರಾಯ । ಅವನು
ತಾಯಿ ಮಕ್ಕಳ ಕರಕೊಂಡ ॥

ಏರಿಯ ಹಿಂದಾಲ ಹೋದತ್ತೆಂದಾಲ
ಹೋದುತ್ತು ಕಂಡು ಬರಲಿಲ್ಲ । ನಮ್ಮಜ್ಜನ
ಕಾಡು ವನ ಸೆರೆಯ ಹಿಡಿದಾವು ॥

ಕಟ್ಟಿಹಿಂದಾಲ ಒಕ್ಕಲ್ತೊಂದಾಲ
ಹೋದುತ್ತು ಕಂಡು ಬರಲಿಲ್ಲ । ನಮ್ಮಜ್ಜನ
ಗಿಡು ವನ ಸೆರೆಯ ಹಿಡಿದಾವು ॥

ಕಟ್ಟಿ ಕಟ್ಟಿಸ್ಯಾನೆ ಕಾಲುವೆ ತೆಗಿಸ್ಯಾನೆ
ಬಿಟ್ಟಿ ಹೋಗೋರ ಬಿಡಿಸ್ಯಾನೆ । ನಮ್ಮಜ್ಜಗೆ
ತೆಟ್ಟಿಯೋರು ಓಲೆ ಕಳಿಸ್ಯಾರೆ ॥

---

*ಈ ಕಥನ ಗೀತವನ್ನು ಬಯಲುನಾಡಿನ ಹಳ್ಳಿಗಳಲ್ಲಿ ಹೆಂಗಸರು ರಾಗಿ ಬೀಸುವಾಗಲೂ ಮತ್ತು- ದೊಂಬಿದಾಸರು ತಂಬೂರಿ ನುಡಿಸಿಕೊಂಡು ಬಿಕ್ಷೆ ಕೇಳಲು ಊರಿಂದೂರಿಗೆ ಹೋದಾಗ ಹಾಡುವರು.

ಶೆಟ್ಟಿಯೋರು ಓಲೆ ಏನಂದು ಕಳಿಸ್ಯಾರೆ
ಪಟ್ಟಣಕೆ ಯಾರು ದೊರೆಯಿಲ್ಲ । ನಮ್ಮಜ್ಜನ
ತಟ್ಟನೆ ಗಾಡ ಬರಹೇಳಿ ॥

ಕೆರೆಯ ಕಟ್ಟಿಸ್ಯಾನೆ ಅರವಂಟಿಗೆ ಹಿಡಿಸ್ಯಾನೆ
ಸೆರೆಯ ಹೋಗೋರ ಬಿಡಿಸ್ಯಾನೆ । ನಮ್ಮಜ್ಜಗೆ
ದೊರೆಗಳು ಓಲೆ ಕಳಿಸ್ಯಾರೆ ॥

ದೊರೆಗಳ ಓಲೆ ಏನಂದು ಕಳಿಸ್ಯಾರೆ
ಪಟ್ಟಣಕೆ ಯಾರು ದೊರೆಯಿಲ್ಲ । ನಮ್ಮಜ್ಜನ
ತಟ್ಟನೆ ಗಾಡ ಬರಹೇಳಿ ॥

ಸೆರೆಯ ಹೋಗೋನ ಸೆರಗು ನಾವು ಹಿಡಿದೇವು
ಪಾಪ ಕಾಣಮ್ಮಿ ಬಿಡಿಸೆರಗ । ನಮ್ಮನಿಗೆ
ಆಕಾಶದಿಂದ ಅವರೋಲೆ ।

ಆಕಾಶದಿಂದ ಅವರೋಲೆ—ಬಂದಾವೆ
ಆಸೆ ನಿನಗ್ಯಾಕೆ ಮರೆಯಮ್ಮ ॥

ಬಿಟ್ಟು ಹೋಗೋನ ದಟ್ಟನಾವು ಹಿಡಿದೇವು
ಪಾಪ ಕಾಣಮ್ಮಿ ಬಿಡಿಸೆರಗ । ನಮ್ಮನಿಗೆ
ಅಂಬಾರದಿಂದ ಅವರೋಲೆ ।

ಅಂಬಾರದಿಂದ ಅವರೋಲೆ—ಬಂದಾವೆ
ಹಂಬಾಲ ಇನ್ಯಾಕೆ ಮರೆಯವ್ವ ॥

ಆಚೆ ಕೇರ್ಯಾಗೆ ಅಜ್ಜವಳೆ ಗುಜ್ಜವಳೆ
ಕರೆಕೊಂಡೊಹೋಗೊ ಜವರಾಯ
ಗಂಡು ಮಕ್ಕಳುಳ್ಳೋಳು ಬರಲರಿಯೆ ॥

ಅಜ್ಜೀರು ಗುಜ್ಜೀರು ಎಂದಿದ್ರು ನಮ್ಮೋರು
ಗಂಡುಮಕ್ಕಳುಳ್ಳೋನೆ ನಡಿಮುಂದೆ ।

ತೆಂಕಾಲ ಕೇರೀಲಿ ಮುಂಡೇರು ರಂಡೇರವರೆ
ಕರೆಕೊಂಡು ಹೋಗೊ ಜವರಾಯ
ಹೆಣ್ಣುಮಕ್ಕಳುಳ್ಳೋಳು ಬರಲರಿಯೊ ॥

ಮುಂಡೇರು ರಂಡೇರು ಎಂದಿದ್ರು ನನ್ನೋರು
ಹೆಣ್ಣು ಮಕ್ಕಳುಳ್ಳೋಳೆ ನಡೆಮುಂದೆ ॥

ಜವರಾಯ ನಿನಮನೆ ನವುದ್ಹ್ಹೋಗಿ ಉರಿಯಾಲಿ
ತಾಯಿ ಮಕ್ಕಳಿಗೆ ಋಣವಿಲ್ಲಾ । (ದ) ಓಲೇಯ
ಹಿರಿಯಮ್ಮ ಓದಿ ಕಳಿವ್ಯಾಳು ॥

ಬಟ್ಟಾಲು ಬೆಳಗಿ ಹಟ್ಟಗೆ ಚೆಲ್ಲಲಿಲ್ಲಾ
ಅಪ್ಪಾನ ಕುಟ್ಟೆ ಉಣಲಿಲ್ಲಾ । ಜವರಾಯ
ಉಂಡೆನೆಂದಾರೆ ಬಿಡಲಿಲ್ಲಾ॥

ಗಂಗಳವ ಬೆಳಗಿ ಅಂಗಳಕೆ ಚೆಲ್ಲಲಿಲ್ಲಾ
ತಂದೆಯ ಕುಟ್ಟೆ ಉಣಲಿಲ್ಲಾ । ಜವರಾಯ
ಉಂಡೆನೆಂದಾರೆ ಕರೆಕೊಂಡ ॥

ಹಾಳೂರ ಮುಂದೆ ಕೋಳಿಯ ಕಾಳಿಗ
ಆಳು ನಿಲ್ಲಾಕೆ ನೆರಳಿಲ್ಲಾ । ನಮ್ಮಜ್ಜ
ಹಾಳೂರಿಗ್ಯಾಕೆ ಸೆರೆಹೋದಾ ॥

ಹೆಂಡರಬಿಟ್ಟು ಹಿಂಡಿನಲಿ ಹೋಗಾನ
ಕಂಡ ಕಂಡೋರ ಕರೆತನ್ನಿ । ನಮ್ಮಜ್ಜನ
ಹೆಂಡರ ಗೋಳು ಶಿವಗೋಳು ॥

ಮಕ್ಕಳಬಿಟ್ಟು ಒಕ್ಕಲ ಹೋದಾನೆ
ಸಿಕ್ಕಿ ಸಿಕ್ಕೆದೋರ ಸೆರೆತನ್ನಿ । ನಮ್ಮನೆಯ
ಮಕ್ಕಳ ಗೋಳು ಶಿವಗೋಳು ।

ಹಟ್ಟಿಯ ನಮ್ಮಜ್ಜ ಗಟ್ಟೀಸಿ ನಡೆದಾರೆ
ಕೆಟ್ಟ ಕೆಟ್ಟಿಂದು ಜವರಾಯ । ನಿನ ಬಾಗಲಿಗೆ
ತೊಟ್ಟಿಯ ಮುಳ್ಳ ಎಳೆಕೊಂಡ ॥

ಹಾದಿಯ ನಮ್ಮಜ್ಜ ತೋಳು ಬೀಸಿ ನಡೆದಾರೆ
ತಾಳು ತಾಳೆಂದು ಜವರಾಯ । ನಿನ ಬಾಗಲಿಗೆ
ತಾಳೆಯ ಮುಳ್ಳ ಎಳೆಕೊಂಡ ॥

ಬಾಳ ಬಾಳೋದೆಲ್ಲಾ ಬಾಳೆಯ ಹಾಕೆದರೆ
ಬಾಳಗೇಡಿ ನಮ್ಮಜ್ಜ ಬದನೇಯ । ಹಾಕೊಹೊತ್ಗೆ
ಬಾಗಿಲಾಗೆ ಇದ್ದ ಜವರಾಯ ॥

ಅಟ್ಟುಣ್ಣೋನೆಂದು ಚಟ್ಟ ಮಡಿಕೆಯ ತಂದೆ
ನಿಸ್ತ್ರೇಯ ತಂದು ಬದುಕೇನು । ಅನ್ನೊಹೊತ್ಗೆ
ಬಾಗಿಲಾಗೆ ಇದ್ದ ಜವರಾಯ ॥

ಬಾಳೇಯಹಣ್ಣು ಸೂರೆ ಬಾಳೇಯಕಾಯ ಸೂರೆ
ಬಾಲೆ ನಮ್ಮಮ್ಮನ ಮಗ ಸೂರೆ । ಹೋಗುವಾಗ
ಬಾಗಿಲ ಗೌಳಿ ನುಡಿದಾವೆ ॥

ಬಾಗಿಲ ಗೌಳಿ ಏನಂದು ನುಡಿದಾವೆ
ಬಾಲಯ್ಯ ನಿನಗೆ ಋಣವಿಲ್ಲಾ ॥

ಇಂಬೆಹಣ್ಣು ಸೂರೆ ಇಂಬೆಯಕಾಯಿ ಸೂರೆ
ರಂಬೆ ನಮ್ಮಮ್ಮಿ ಮಗಸೂರೆ । ಹೋಗುವಾಗ
ಕಂಬದ ಗೌಳಿ ನುಡಿದಾವೆ ॥

ಕಂಬದ ಗೌಳಿ ಏನಂದು-ನುಡಿದಾವೆ
ಕಂದಯ್ಯ ನಿನಗೆ ಋಣವಿಲ್ಲಾ ॥

ಹಾಲೊಲೆಯ ಮೇಲೆ ಬೋನ ಕೆಂಡದಮೇಲೆ
ಬಾಳೇಯಹಣ್ಣು ಅವಳ ಮಡಿಲಾಗೆ । ಕಟ್ಟಿಕೊಂಡು
ಬಾಲೆಯ ಬೀದಿಯಾಗೆ ಕರೆದಾನೆ ॥

ಅನ್ನ ಒಲೆಯ ಮೇಲೆ ತುಪ್ಪ ಕೆಂಡದಮೇಲೆ
ಕಿತ್ತಲೆಯ ಹಣ್ಣು ಮಡಿಲಾಗೆ । ಕಟ್ಟಿಕೊಂಡು
ಪುತ್ರನ ಬೀದಿಯಾಗೆ ಕರೆದಾನೆ ॥

ಅತ್ತಿ ಮರದಡಿಯ ಆಟ್ಟುಂಡೊನಿವನ್ಯಾರೆ
ಅತ್ತಿಯಕಾಯ ಒಲೆಹೂಡಿ । ನಮ್ಮಜ್ಜ
ಮುತ್ತಿನ ಕಡಗ ತಿರುವಿಟ್ಟ ॥

ಮಾವಿನ ಮರದಡಿಯ ಮಡಗಿಟ್ಟ ಹೋತುರವ
ಮಾಮಾಲೆ ಕಡುಕು ತಿರುವಿಟ್ಟ । ನಮ್ಮಜ್ಜ
ಮಾವಾನ ಮನೆಗ್ಹೋಗೊ ಸಡಗಾರ ॥

ಹಾಲು ಮುಖದಮೇಲೆ ಆದೊ ಬೆವರಸಾಲೆ
ಹಾಲಿಗೋದವರು ಬರಲಿಲ್ಲಾ । ಕಂದಯ್ಯನ
ಹಾಲ ಮುಖವೆಲ್ಲಾ ಗೆದ್ದಲಿಡಿದೊ ॥

ಮುದ್ದು ಮುಖದಮೇಲೆ ಎದ್ದೇವು ಬೆವರಸಾಲೆ
ಮದ್ದಿಗೋದವರು ಬರಲಿಲ್ಲಾ । ಕಂದಯ್ಯನ
ಮುದ್ದುಮುಖನೆಲ್ಲಾ ಗೆದ್ದಲುಂಡೊ ॥

ಆಲದ ಮರದಡಿಯ ಹೂಡ್ಯವರೆ ಸೆಳಮಂಚ
ನ್ಯಾಯ ಉಳ್ಳೋನ ಮಗಳು । ತಾಯಮ್ಮಾಗೆ
ಹೂಡ್ಯವನೆ ಶಿವನ ಸೆಳಮಂಚ ॥

ಕಗ್ಗೆ ಗಿಡದಡಿಯ ಇಕ್ಯವನೆ ಸೆಳಮಂಚ
ಲೊಚ್ಚನುಳ್ಳೋನ ಮಗಳು । ತಾಯಮ್ಮಾಗೆ
ಇಕ್ಯವನೆ ಶಿವನ ಸೆಳಮಂಚ ॥

ಬಿಟ್ಟರಲಾರೆ ಬಟ್ಟನ್ನ ಮುಖದೋಳ
ಬಟ್ಟೂಡಿ ನನ್ನ ನೆನೆಯೋಳ । (ನೆನೆಯೊ) ತಾಯಮ್ಮನ
ಬಿಟ್ಟೊಂದರಘಳಿಗೆ ಇರಲಾರೆ ॥

ಅಗಲಿರಲಾರೆ ಅಗಲಂದೆ ಮುಖದೋಳ
ಹಗಲೊಂದರಘಳಿಗೆ ನನ್ನ ನೆನೆಯೋಳ । (ನೆನೆಯೊ)
ಹಗಲೊಂದರಘಳಿಗೆ ಇರಲಾರೆ ॥ ತಾಯಮ್ಮನ

ಅಜೆ ಹಳ್ಳಿಬಿಟ್ಟಿ ಈಜೆ ಕಣಿವೆ ಬಿಟ್ಟಿ
ನಮ್ಮಮ್ಮ, ನಮಗೆ ಮುಖತೋರೆ ॥

ಮುಖವೆಂಗೆ ತೋರಲಮುಸುಗ್ಹೀಗೆ ತೆಗಿಯಲಮ್ಮ
ಅಳುದ್ದ ಮಣ್ಣು ಎದೆಯ ಮೇಲೆ । ಎಳೆಕೊಂಡು
ನನ್ನ ಅಸೆ ನಿನಗ್ಯಾಕೆ ಮರೆಯಮ್ಮ ॥

ಮಾಣಿಕದ ಹರಳು ಮಾಚಿಕೊಂಡೊರ್ಯಾರೆ
ರಾಯ ಬೆಳ್ಳೂರ ನಡುವೇಲಿ । ತಾಯಮ್ಮನ
ಮಾಯಿ ಕೊಂಡೋರು ಬದುಕೋರು ॥

ಮುತ್ತಿನ ಹರಳು ಮುಚ್ಚಿಕೊಂಡೋರ್ಯಾರೆ
ಶೆಟ್ಟಿ ಬೆಳ್ಳೂರ ಬಯಲಾಗೆ । ತಾಯಮ್ಮನ
ಮುಚ್ಚಿ ಕೊಂಡೋರು ಬದುಕೋರು ॥

ಊರಿಗೆ ಇದಿರಾಗಿ ನೀರಿಗೆ ಮುಖವಾಗಿ
ನಾಮ ಇಕ್ಕೋನು ಇವನ್ಯಾರೆ । ಮಡಿವಾಳಶೆಟ್ಟಿ
ಹರೆ ಬಡಿದೊ ಊರ ಹೆಸರೇಳೋ ॥

ಹರೆ ಬಡಿಯ ಊರು ಜವರಾಯ್ನ ಪಟ್ಟಣ
ಜವರಾಯ್ನ ಮಗನ ಮದುವೆಯಂತೆ । (ಮದುವೆಗೆ)ನಮ್ಮಜ
ತರಳೆಯ ಕಂಬ ತರಲ್ಹೋದ ॥

ಹಟ್ಟಿಗೆ ಇದಿರಾಗಿ ಕಟ್ಟಿಗೆ ಮುಖವಾಗಿ
ನಾಮ ಇಡೋನು ಇವನ್ಯಾರೆ । ಮಡಿವಾಳಶೆಟ್ಟಿ
ಹರೆ ಬಡಿದೊ ಊರ ಹೆಸರ್ಹೇಳೊ ॥

ಹರೆಬಡಿದೋ ಊರು ಜವರಾಯ್ನ ಪಟ್ಟಣ
ಜವರಾಯ್ನ ಮಗನ ಮದುವೆಯಂತೆ । (ಮದುವೆಗೆ)ನಮ್ಮಜ್ಜ
ಮೀಸಲ ನೀರ ಹೊರಲ್ಹೋದ ॥

ಹತ್ತು ವರಹದ ಪಟ್ಟಿ ಮಂಚದ ಮೇಲೆ
ಬೆಟ್ಟೊತ್ತಿವೆಂದೊ ಮನಿಗ್ಯಾವೆ । ನಮ್ಮಜ್ಜಾನು
ನುಚ್ಚು ಕಲ್ಲಿಗೆ ತಲೆಕೊಟ್ಟ ॥

ಆರು ವರಹದ ಸಾಲೆ ಮಂಚದ ಮೇಲೆ
ತೋಳತ್ತಿವೆಂದೊ ಮನಿಗ್ಯಾನೆ । ನಮ್ಮಜ್ಜನು
ನುಚ್ಚು ಕಲ್ಲಿಗೆ ತಲೆಕೊಟ್ಟ ॥

ಶೆಟ್ಟ ನಮ್ಮಜ್ಜಗೆ ಹಟ್ಟೀಲಿ ಆದಾವೆ
ತಿಟ್ಟು ಮೇಗಾಲಿಂದ ಗಳು ಬಂದೊ । ನಮ್ಮಜ್ಜಾಗೆ
ತಿಟ್ಟನ ಮೇಲಾದೆ ಅರಮಾನೆ ॥

ಮಹಾರಾಯ ನಮ್ಮಜ್ಜಗೆ ಮನೆಯಲ್ಲಿ ಆದಾವೆ
ಮಹಾನಾಡಿನಿಂದ ಗಳು ಬಂದೊ । ನಮ್ಮಜ್ಜಗೆ
ಬಾರೆಯ ಮೀಲಾದೆ ಅರಮಾನೆ ॥

ಸತ್ಯವಂತರು ಸತ್ತರೆ ಹತ್ತು ಗುದ್ದಲಿ ಬಂದೊ
ಹತ್ತೂರಿಗೆ ಹತ್ತು ಹರೆಬಂದೊ । ನಮ್ಮಜ್ಜ
ಸತ್ಯವಂತ ಕಾಡ ಹೋಗುವಾಗ ॥

ಭಾಗ್ಯವಂತರು ಸತ್ತರೆ ಬಾಳೆಯ ಕಂಬ ಬಂದೊ
ಆರೂರಿಗೆ ಆರು ಹರೆಬಂದೊ । ನಮ್ಮಜ್ಜ
ಭಾಗ್ಯವಂತ ಕಾಡ ಹೋಗುವಾಗ ॥

ಅತ್ತಿಯ ಕೊಂಡು ಬಂದು ಹಟ್ಟೀಲಿ ನಿಂತಾವೆ
ಅತ್ತೆ ನಿನ್ನೊಡಲು ಉರಿಯಾಲಿ । ನೀನು ತಂದಿರುವ
ಮುತ್ತೈದೆ ಕಾಡ ಹೋಗುವಾಗ ॥

ಮಾವಿನ ಕೊಂಡು ಬಂದು ಮೂಡಾಗೆ ನಿಂದಾವೆ
ಮಾವ ನಿನ್ನೊಡಲು ಉರಿಯಾಲಿ । ನೀನು ತಂದಿರುವ
ಮಾಣಿಕವೆ ಕಾಡ ಹೋಗುವಾಗ ॥



ಬಾಷೆಯೇಕೊ ನಿನ್ನ ಬಲಗೈಯಿ

ಸೂಳೆಗೆ ಹೋದೋನು ಸುಮ್ಮಾಕೆ ಬರಲಿಲ್ಲಾ
ಸೂಳೇರಣ್ಣ ದೀರ ಸುಣಕಾಯಿ ।ಕದ್ದುಕೊಂಡು
ಕಲ್ಲು ಬಾವೀಯ ಇಳಿದಾನೊ ॥

...ಈ ಹಾಡುಗಳು ಒಂದು ಬಗೆಯಿಂದ ವೇದಮಂತ್ರಗಳಂತಿವೆ. ವೇದ ಮಂತ್ರಗಳು ಬರೆಹವೂ ಬರೆಹದ ಸಾಧನಗಳೂ ಇಲ್ಲದ ಕಾಲದಲ್ಲಿ ಹುಟ್ಟಿ ಬೆಳೆದು ಬಾಯಿಂದ ಬಾಯಿಗೆ ನಡೆದು ಬಂದು ಬಾಳಿದಂತೆ, ಈ ಜನಪದ ಗೀತಗಳಾದರೂ ಬರೆಹವಿಲ್ಲದಾಗಳೂ ಬರೆಹವಿದ್ದರೂ ಅದನ್ನು ತಿಳಿಯದ ಮೂಲಕ ನಿರುಪಯುಕ್ತವಾಗಿದ್ದಾಗಳೂ ಹುಟ್ಟಿ ಬೆಳೆದುಬಂದಿವೆ. ಮೊನ್ನೆ ಮೊನ್ನೆಯವರೆಗೂ ಅವು ಬಾಯಿಯಲ್ಲಿಯೇ ಇದ್ದವು. ಈ ಹಾಡುಗಳೆಂದರೆ ಜನಜೀವನದ ಸತ್ವತತ್ವಗಳ ಕಾವ್ಯ ರೂಪಗಳು. ಇವನ್ನು ವೇದಗಳಂತೆ ಅಪೌರುಷೇಯಗಳೆಂದೂ ಹೇಳಬಹುದು. ಜೀವನರಂಗದಲ್ಲಿ ತಪಿಸಿ ಮುಪ್ಪಾದ, ಅನುಭವನಿಕರಾದ ಹೆಣ್ಣುಮುಕ್ಕಳ ಹೃದಯದಿಂದ ಸ್ವಯಂಸ್ಫೂರ್ತಿಯಿಂದ ಹೊರಟ ಕಾವ್ಯದ ಚುಟಕಗಳಿವು.

ಹಿಂದಕ್ಕೆ, ಪೂರ್ವಕಾಲದಲ್ಲಿ ನಾವು ಎಂದರೆ ಸುಶಿಕ್ಷಿತರೆಂದು ಗಣ್ಯರಾದವರು. ಈ ಜೀವನಸಂಗೀತದ ಕಡೆಗೆ ಲಕ್ಷ್ಯ ಕೊಡಲಿಲ್ಲ. ಕೆಲವರಂತೂ ತಿರಸ್ಕರಿಸಿದುದುಂಟು. ಇವುಗಳನ್ನು ಬರೆದಿಡುವ ಗೊಡವೆಗೆ ಯಾರೂ ಹೋಗಲಿಲ್ಲ. ಅವು ಹಳ್ಳಿಯ ಹೆಣ್ಣುಮುಕ್ಕಳದೇ ಒಂದು ಪ್ರಪಂಚದಲ್ಲಿ ಬರೀ ಬಾಯಲ್ಲಿ ಉಳಿದುಬಿಟ್ಟಿದ್ದವು. ಅವು ಇಂದಿನವರೆಗೂ ಬಾಳಿರುವುದು ನಮ್ಮ ಸಾಹಿತ್ಯದ ಸುದೈವವೆಂದು ಹೇಳಬೇಕು. ಅವುಗಳಲ್ಲಿ ನಮಗಿಂದು ನಾದರಸಸೌಂದರ್ಯಗಳ ದರ್ಶನವಾಗತೊಡಗಿದೆ ; ಅವುಗಳಿಂದ ಆನಂದದ ಅನುಭವವಾಗುತ್ತಿದೆ. ಇವು ನಿಜವಾಗಿಯೂ ಕಾವ್ಯಗಳು. ಸಾಹಿತ್ಯವು ಜನಜೀವನದ ಪ್ರತಿಬಿಂಬವಾದುದರಿಂದ ಹಳ್ಳಿಯ ಹಾಡುಗಳೆಂದರೆ ಶ್ರೀಸ್ಥ ಸಾಹಿತ್ಯವೇ ಸರಿ. ಈಗ ಈ ಸಾಹಿತ್ಯಕ್ಕಿದ್ದ ಅಸ್ಪೃಶ್ಯತೆಯು ಕಳೆದು ಹೋಗಿದೆ. ಇಂದು ಪಂಡಿತರು ಸಾಹಿತ್ಯಮಂದಿರದಲ್ಲಿ ಮಾನ್ಯವಾದ ಸ್ಥಾನವನ್ನು ಇವಕ್ಕೆ ಕೊಡುತ್ತಿದ್ದಾರೆ. ಈ ಗರತಿಯ ಹಾಡುಗಳೆಲ್ಲ ಹೆಣ್ಣುಮುಕ್ಕಳ ಕೃತಿಗಳು.

—ಶ್ರೀಮತಿ ಬೆಳಗಾವಿ ಶ್ಯಾಮಲಾದೇವಿ

ಬಾಷೆಯೇಕೊ ನಿನ್ನ ಬಲಗೈಯಿ*

ದಂಡಿಗ್ಹೋಯಿತೀನಿ ಗುಂಡಿನ ಮಣಿ ತಾರೇ
ಗೊಂಡೇವ ತಾರೇ ನಡುವಿಗೆ । ಚಿಕ್ಕಮ್ಮ
ನಾನು ದಂಡಿಗೆ ಹೋಗಿ ಬರುತ್ತೀನಿ ॥

ಜಾತ್ರೆಗೆ ಹೋಗುತೀನಿ ತಾತಿಯ ಮಣಿಯಕೊಡೆ
ಜೋತುರವ ಕೊಡೆ ನಡುವಿಗೆ । ಚಿಕ್ಕಮ್ಮ
ನಾನು ಜಾತುರಿಗೆ ಹೋಗಿ ಬರುತ್ತೀನಿ ॥

ಬೆಡ ಬೆಟ್ಟನನೇರಿ ತುರುಕ ನಂದಿನೇರಿ
ಮಾಯಕಾರ ಕೆಂಗಪ್ಪ ಮರನೇರಿ । ಕೂಗ್ಯಾನಲ್ಲೆ
ಸೂಳೇಯ ಮನೆಗೆ ಹಗೇಯ ॥

ಸೂಳೇಯ ಮನೆಗೆ ದಾಳಿಂಬೆ ಕದವ್ಯಾಕೆ
ಜಂಬುಲೋಕಾವನಾಳೊ ದಂಡುಣ್ಣೆ । ಸೂಳೇಗೆ
ಬಾಷೆ ಕೊಡಯ್ಯ ಬಲಗೈಯ ॥

ಗಂಧದುಂಡೆಕೊಳ್ಳೆ ಗಾಜಿನ ಭರಣಿ ಕೊಳ್ಳೆ
ಅಂದುಳ್ಳೆ ಮುಖಕೆ ಹೊಸಕಳೆ !

ಗಂಧದುಂಡೆ ಎಲ್ಲೊ ಗಾಜಿನ ಭರಣಿ ಎಲ್ಲೊ
ಹಿಂಡಿನ ಟಗರ ಹಿಡಿಕೊಡೊ ॥

---

*ಈ ಹಾಡುಗತೆಯನ್ನು ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹದ್ದಿನಳ್ಳಿಲು ಹನುಮಂತರಾಯನ ಬೆಟ್ಟದ ತಪ್ಪಲಿನಲ್ಲಿರುವ ಗೊಲ್ಲರ ಹಟ್ಟಿಗಳಲ್ಲಿ-ಗೊಲ್ಲಜನಾಂಗದ ಸ್ತ್ರೀಯರು ಬೇಸಿಗೆ ಕಾಲದಲ್ಲಿ ಬೇಸರ ಕಳೆಯಲು ಹಾಡುವರು.

ಹಲಗು ಹೊಂಟಾರೆ ಗಲಗಲನೆ ನಗುದೀರ
ಹಲಗೀನ ಹೆಸರು ಕರಿಯಲಗು । ದೇವರಲಗು
ಹಲಗೊಂಟೊ ಮೂಡಲಾದಿಯಾಗೆ ।

ಹಲಗೆ ಹೊಂಟೊ ಮೂಡಲ ಹಾದಿಯಾಗೆ–ಕೆಂಗಪ್ಪ
ತಾನೊಂಟ ಕಾಳಗವ ಜಯಿಸಾಕೆ ॥

ಕಾಳಗಕ್ಹೋದ ಮಗನ ತಾಯಿ ಹಿಂದಕೆ ಕರೆದು
ಬ್ಯಾಡಕಾಣಪ್ಪ ತುದಿಕಾಲು । ಸಾಪಾಕ್ಷಿ
ನಮ್ಮಂಥ ಬಾಳೋರ ಮಕ್ಕಳಿಗೆ ತರವಲ್ಲಾ ॥

ಬಿದ್ದನು ಕೆಂಗಪ್ಪ ಬಿಳಿ ಅಂಬು ಮೇಲಾಗಿ
ವಜ್ಜುರದ ಬಾಕು ಅಡಿಯಲಿ । (ಅಡಿಯ) ಮೇಲಾಗಿ
ಬಿದ್ದನು ಕಾಳಗದ ನಡುವಾಗೆ ॥

ಹಾಲೊಲೆಯ ಮೇಲೆ ಬೋನ ಕೆಂಡದ ಮೇಲೆ
ಬಾಳೆಯ ಹಣ್ಣು ಮಡಿಲಾಗೆ । ಚಿಕ್ಕಮ್ಮ
ಬಾಲಾನ ಬೀದ್ಯಾಗೆ ಕರೆದಾಳೋ ॥

ವೀರ ಓಯೆನ್ನೊ ವೀರಣ್ಣ ಓಯೆನ್ನೊ
ನೀರ ಹೊಳೆಯಾಗೆ ಕರೆದಾಳೊ । ನಿಮ್ಮವ್ವ
ವೀರಣ್ಣ ಓಯೆನ್ನೊ ಹಲಗ್ಹಾಗೆ ॥

ವೀರ ಕೆಂಗಪ್ಪ ಇಳ್ಳೃತ ಎದೆಹಾಲ
ಭೂಮಿಯ ಮೇಲೆ ಕೆರೆಕೋಡಿ । (ಗೆ) ಹರಿದಾವೊ
ತಾಯಿ ಚಿಕ್ಕಮ್ಮನ ಎದೆಹಾಲು ॥

ಚಳಿ ಬಿಟ್ಟಾರಿ ಒಳ ಜ್ವರ ಬಿಡುವೊಲ್ಲೊ
ಎದೆ ಹಾಲಿನ ಸೇದು ಬಲವಲ್ಲೊ । ಕೆಂಗಪ್ಪ
ಗೋಳು ಗೋಳಲ್ಲೊ ನಿನಗಾಗಿ ।

ಗೋಳು ಗೋಳಲ್ಲೊ ನಿನಗಾಗಿ–ನಿಮ್ಮವ್ವ
ದುಃಖ ಮಾಡ್ಯಾಳೆ ಶಿವನಲ್ಲಿ ॥

ನುಲಿಯನೂರ ಹಾದೀಲಿ ನೀರಿಲ್ಲಾ ನೆರಳಿಲ್ಲಾ
ಹಸು ಮಗ ನೀನ್ಹೆಂಗೆ ನಡೆದಯ್ಯ । ನುಲಿಯನೂರ
ಹಾಸಿಪ್ಪ ಮರದ ನೆರಳಾಗೆ ।

ಹಾಸಿಪ್ಪ ಮರದ ನೆರಳಾಗೆ–ಕೆಂಗಪ್ಪ
ಹಸ್ಸೆಂದು ಕುದುರೆ ಇಳಿದಾನೊ । ಕೆಂಗಪ್ಪ
ಅಲ್ಲಿ ಮಾಡ್ಯಾನೆ ಸುಖನಿದ್ರೆ ॥

ಅಲ್ಲಿ ಸುಖನಿದ್ರೆ ಮಾಡುವಾಗ
ಏಳು ಮಂದಿ ಸೂಳೆರು ನೀರಿಗೋಗಿ । ಕೆಂಗ್ಯಾರಲ್ಲೆ
ಯಾವ ಸೀಮೆಯ ಹಳ್ಳಿಗಾರ ॥

ಹಳ್ಳಿಗಾರನಲ್ಲಾ ಹಳ್ಳಿಗೌಡನಲ್ಲಾ
ಭದ್ರೆ ಚಿಕ್ಕವ್ವ ಮಗಕಾಣ್ರೆ ।

ಭದ್ರೆ ಚಿಕ್ಕವ್ವ ಮಗನಾದರೇನಾಯ್ತು
ಬಾರಯ್ಯ ನಮ್ಮ ಅರಮನೆಗೆ ॥

ಅರಮನೆಗೆ ಬರುವೋಕೆ ಕುಲದಲ್ಲಿ ಬೇಡರಲ್ಲೆ
ಕೃಷ್ಣ ಗೋಕುಲವೆ ನಮದಲ್ಲಿ । ಬೇಡಾರುಡುಗಿ
ಹಿಂದವರೆ ನಮ್ಮ ಹಿರಿಯಾರು ॥

ಹಿಂದವರೆ ನಮ್ಮ ಹಿರಿಯ ಅಣ್ಣಯ್ಯದೀರು
ಮಾತು ಬಂದಾವು ನಾಳೆ ಕುಲದಾಗೆ ॥

ಮಾತು ಬಂದಾರೆ ಮಾಯ ಮಾಡಲು ಬಲ್ಲೆ
ಹೋಗಾನ ನಡಿಯೋ ಅರಮನೆಗೆ ॥

ಮುಂಚದ ಗೌಡ ಮುಂಚಕೆ ಬರುವಾಗ
ಮುಂಚದ ಮೇಲೆರಡು ಅರಗಿಣಿ । ಕೂತುಕೊಂಡು
ಮುಂಚಕೆ ಕೆಂಗಪ್ಪ ಬರದೀರೊ ॥

ಮುಂಚಕೆ ಕೆಂಗಪ್ಪ ಬರಬೇಡ–ಬೇಡಾರ್ದುಡುಗಿ
ಲಂಚದಿಂದ ತಲೆಯ ಹೊಡಿಸ್ಯಾಳೊ ॥

ನಾಗಳ್ಳೂವು ಹಾಸ್ಯಾಳೆ ನಾಗಳ್ಳೂವ ಹರಡ್ಯಾಳೆ
ಸಾಲುದೀವಟಿಗೆ ಉರಿಸ್ಯಾಳೆ । ಬೇಡಾರ್ದುಡುಗಿ
ಸಾಲು ಮುಂಚಾಕೆ ಕರೆದಾಳೆ ।

ಇಕ್ಕಳ್ಳೂವು ಹಾಸ್ಯಾಳೆ ಇಕ್ಕಳ್ಳೂವ ಹರಡ್ಯಾಳೆ
ಸುತ್ತ ದೀವಟಿಗೆ ಉರಿಸ್ಯಾಳೆ । ಬೇಡಾರ್ದುಡುಗಿ
ಪಟ್ಟಿ ಮುಂಚಾಕೆ ಕರೆದಾಳೆ ॥

ಆಚೆ ಕೇರೀಲಿ ಜೋಜೀಗವೇನಮ್ಮ
ಜೋಜಿಯ ಮೇಲೆ ಗಳಬೀಸಿ । ಕೆಂಗಪ್ಪ
ಸೂಳೆಗೆ ಕಟ್ಟಿಸ್ಯವನೆ ಅರಮನೆಯ ॥

ಸೂಳೆಯ ಮನೆಗೆ ದಾಳಿಂಬೆ ಕದವೇಕೊ
ಜುಂಬು ಲೋಕಾದ ಅರಣಿಯೇಕೊ । ಸೂಳೇಗೆ
ಬಾಷೆಯೇಕೊ ನಿನ್ನ ಬಲಗೈಯಿ ॥

ಬಿದ್ದೊ ಕರಿಯಾಲೆ ಬಿದ್ದಾವೆ ಬಿಳಿಯಾಲೆ
ಬಿದ್ದ ಕೆಂಗಪ್ಪನ ಮಡಿಲಲೆಲೆ । ಬೇಡತಿ
ತಾಳೆ ಹೂವೆಂದು ಮುಡಿದಾಳೆ ॥

ಬಾಗೇವು ಕರಿಯಾಲೆ ಬಾಗೇವು ಬಿಳಿಯಾಲೆ
ಬಾಗೇವು ಕೆಂಗಪ್ಪನ ಮಡಿಲೆಲೆ । ಬೇಡತಿ
ಸಂಪಿಗ್ಹೂವೆಂದು ಮುಡಿದಾಳೆ ॥

ಸೆರಗು ಬಿಡು ರಾಯ ಸೇವಂತಿಗೆ ಉದಿರ್ಯಾವು
ಅಚ್ಚಮಲ್ಲಿಗೆ ಅನುರಾಜ । ಉದಿರಾವೊ
ಹಟ್ಟ ಕೆಂಗಪ್ಪ ಬಿಡಿ ಸೆರಗ ॥

ಸೆರಗು ಬಿಟ್ಟಾರೆ ನಿನ್ನಾಣೆ ಬಿಟ್ಟಂಗೆ
ರಾಯ ತುರುನೇಕರೆ ಮದುಗಾವೆ। (ಮದುಗದೇರಿಯ)ಮೇಲೆ
ನಾರಿ ನಿನ್ನ ಬಳೆಯ ಹೊಡೆದ್ಹೀನು ॥

ಬೇಡತಿ ಸಂಘ ಬೇಡ ಕಾಣೊ ಕೆಂಗಪ್ಪ
ಬೇಡಾತಿ ನಮ್ಮ ಬೆಡಗ ಅರಿಯಾಳು । ಸಭೆಯಮುಂದೆ
ಬಾರೆಂದು ಸೆರಗ ಹಿಡಿದಾಳು ॥

ಸೂಳೀಯ ಮನೆ ಮುಂದೆ ಸುಳಿಯದಿರೂ ಕೆಂಗಪ್ಪ
ಆನೆ ಕಟ್ಟವಳೆ ನಿನ ಮೇಲೆ । ಅಡಕೇಯ
ಹೋಳ ಕಟ್ಯವಳೆ ಸೆರಗೀಗೆ ॥

ಸೂಳೆಯ ಮನೆಯ ಸೂರೆಲ್ಲಾ ಮಲ್ಲಿಗೆ
ಜಾಣ ಕೆಂಗಪ್ಪ ಮಲಗೇನು । (ಮಲಗೊ) ಮಂಚದ ಮೇಲೆ
ತಾಳೇಯ ಹೂವುತಲೆದಿಂಬು ॥

ಒಪ್ಪಿ ಮಾಡಿಸಿದ ಪಟ್ಟಿ ಮಂಚದ ಮೇಲೆ
ನಿಸ್ತ್ರೀರ ಕೂಟ ಪಗಡೇಯ । (ಪಗಡೆ) ಆಡುವಾಗ
ಕತ್ತಿ ಮಸೆದಾರೆ ಒಳಮನೇಲಿ ॥

ಏಳಿ ಮಾಡಿಸಿದ ಸಾಲುಮಂಚದ ಮೇಲೆ
ನಲ್ಲೀರ ಕೂಟಿ ಪಗಡೇಯ । (ಪಗಡೆ) ಆಡುವಾಗ
ಚೂರಿ ಮಸೆದಾರೆ ಒಳಮನೇಲಿ ॥

ಸೂಳೆಗಾರ ಕೆಂಗಪ್ಪಗೆ ಹೇಳಲಾರೆ ಬುದ್ದೀಯ
ದಾಳ ದೂಳಿಗೆ ದನ ಬರುವೊ । ಹೊತ್ತೇಲಿ
ಸೂಳೆಯ ಮನೆಯ ಗಿಲುಕೇಯ ।

ಸೂಳೇಯ ಮನೆಯ ಗಿಲುಕೆ–ಮಂಚದ ಮೇಲೆ
ನಾಗೇಂದ್ರನಾಗಿ ಹೊರಗ್ಯವನೆ ॥

ಮುದ್ರೆವುಂಗುರದೋನೆ ಮೊಗ್ಗಿನ ರುಮಾಲುದೋನೆ
ಹೆಬ್ಬಾಗಿಲಲ್ಲಿ ಬರುವೋನೆ । (ಬರುವೊ) ಕೆಂಗಪ್ಪಗೆ
ಭದ್ರೇರು ಬಾಯ ಬಿಡತಾರೇ ॥

ಹಿಂದಾಲ ಕೇರೀಲಿ ವೀರಣ್ಣ ಅವನಂತೆ
ಗಂಧ ಕಸ್ತೂರಿ ಪುಣಗೀನ । ಘಮನಾಕೆ
ಒಂದಿಕೊಂಡವನೆ ಬಿಡಿರಮ್ಮ ॥

ಆಚೆ ಕೇರೀಲಿ ಸೇರಿಕೊಂಡಿರುವೋನೆ
ಸಾದಾ ಕಸ್ತೂರಿ ಪುಣಗೀನ । ನಾತಾಕೆ
ಸೇರಿಕೊಂಡವನೆ ಬಿಡಿರಮ್ಮ ॥

ಬಿಡಿ ನಮ್ಮ ವೀರಾನ ಬಿಡಿ ನಮ್ಮ ಶೂರಾನ
ಸೇರಕ್ಕಿ ಉಣ್ಣೊ ಚೆಲುವಾನ । (ಚೆಲುವ) ಕೆಂಗಪ್ಪ
ಬಿಡಿರೆ ಬಳ್ಳಾರಿ ಬಸವೀರ ॥

ಭದ್ರಕಾಳಿ ಗಂಡ ರುದ್ರಿಕಾರಿರಣ್ಣ
ಬಗ್ಗಿ ಹೋಗೋಳ ಸೆರಗಿಡಿದ । (ದು) ನಿಲ್ಲೀಸಿ
ಭದ್ರೆ ನೀನ್ಯಾರ ಹೆಸರ್ಹೇಳೆ ॥

ಸೂಳೆಗೆ ಹೋದೋನು ಸುಮ್ಮಾಕೆ ಬರಲಿಲ್ಲಾ
ಸೂಳೇರಣ್ಣ ದೀರ ಸುಣಕಾಯಿ । ಕದ್ದು ಕೊಂಡು
ಕಲ್ಲು ಬಾವೀಯ ಇಳಿದಾನೊ ॥

ಕಲ್ಲು ಬಾವಿಯ ಇಳಿದು ನೋಡುವಾಗ
ಸೂಳೆಗಾರಣ್ಣ ದೀರು ಬರುತಾರೆ। ಕೆಂಗಪ್ಪ
ಕೆಟ್ಟನೆಂದು ಬಾಯ ಬಿಡುತಾನೆ ।

ಕೆಟ್ಟನೆಂದು ಬಾಯ ಬಿಡುತಾನೆ–ಬೇಡರು
ಸುತ್ತಿ ಬಂದು ಅಂಬಾಗೆ ಇರಿದಾರೆ ॥

ಅಂಬಾಗೆ ಇರಿದಾರೆ ಅಯ್ಯಯ್ಯೊ ಅಂದಾನೆ
ಕೆಟ್ಟನೆಂದು ಬಾಯ ಬಿಡುತಾನೆ । ಕೆಂಗಪ್ಪ
ಾ ಾಟ್ಟೆಯ ಕಳ್ಳ ಸುರಿದಾವೆ ॥

ಹೊಂಟಂಥ ಕಳ್ಳು ಹೊಟ್ಟಿಗೆ ತುಂಬಿಕೊಂಡು
ಉತ್ತಾದ ಮುಂದೆ ಮನಿಗ್ಯವನೆ ।

ಮುದ್ದು ಕಂಬಳಿಯ ಉದ್ದಾಕೆ ಹೊದ್ದುಕೊಂಡು
ನಿದ್ದೆ ಬಂದೋನಂಗೆ ಮನಿಗ್ಯವನೆ । ಕೆಂಗಪ್ಪ
ಮುದ್ದು ಮಗನೆ ಹೇಳೋ ದುರುತಾಕೆ ।

ಕರಿಯ ಕಂಬಳಿಯ ಕಾಲಿಗೆ ಸುತ್ತಿಕೊಂಡು
ಜ್ವರ ಬಂದೋನಂಗೆ ಮನಿಗ್ಯವನೆ । ಕೆಂಗಪ್ಪ
ಹಸು ಮಗನೆ ಹೇಳೊ ದುರುತಾಕೆ ॥

ಕಾದು ಮಡಿದಾರೆ ಕಗ್ಗಲ್ಲ ಬೇಡಾರು
ಕಾಮಜೇನೆಂಬೊ ನುಲಿಯನೂರ । ಹೊಂಗೇಲಿ
ಕಾದ ಕೆಂಗಪ್ಪ ಮಡಿದಾರೆ ।

ಮಡಿದಾರೆ ಮಡಿಯಾಲಿ ಕಡಿದಾರೆ ಕಡಿಯಾಲಿ
ಮಡಿದ್ದೀಳಿ ದಿನಕೆ ಬರುತ್ತೀನಿ । ಬೇಡಾರ
ಹುಟ್ಟನೆಲ್ಲಾನು ಉರಿಕೊಂಡು ॥

ತುಪ್ಪದರಬಿಯ ಹೊತ್ತಾಳೆ ಚಿಕ್ಕಮ್ಮ
ಉಕ್ಕಡದ ಮುಂದೆ ಇಳಿದಾಳೆ । ಕೆಂಗಪ್ಪನ
ಹಚ್ಚಡವ ನೋಡಿ ಅಳುತಾಳೆ ॥

ಹಾಲಿನರಬಿಯ ಹೊತ್ತಾಳೆ ಚಿಕ್ಕಮ್ಮ
ಹಳ್ಳಾದ ಮುಂದೆ ಇಳಿದಾಳೆ । ಕೆಂಗಪ್ಪನ
ಸಾಲೀಯ ನೋಡಿ ಅಳುತಾಳೆ ॥

ಊರಿಗ್ಯಾಕ್ಹೋದ ಚೆಳ್ಳುಗರ ಕೆಂಗಪ್ಪ
ಹಳ್ಳಾದ ಮೇಲೆ ಮಳೆ ನೋಡ । ನಿಮ್ಮವ್ವ
ಹಳ್ಳಾಕೆ ವ್ವಾಲ್ಹೋಲಿ ಅಳುತಾಳೆ ॥

ಬೇಡರ ಹಟ್ಟಗ್ಯಾಕ್ಹೋದ ಬಟ್ಟುಗಾರ ಕೆಂಗಪ್ಪ
ಕಟ್ಟಿಯ ಮೇಲೆ ಮಳೆವೋಡ । ನಿಮ್ಮವ್ವ
ಕಟ್ಟಿಗೆ ವ್ವಾಲ್ಹೋಗಿ ಅಳುತಾಳೆ ॥

ಜಾಣ ಕೆಂಗಪ್ಪ ಜಾರಿ ಬಿದ್ದುದುತಾವ
ಜಾವಾಕೆ ತನ್ನ ಕುದುರೇಯ । (ಕುದುರೆ) ನುಲಿಯನೂರ
ಓಣಿಯೆಲ್ಲಾ ರಾಮು ರಯಿತಾವೊ ॥

ಶೆಟ್ಟ ಕೆಂಗಪ್ಪ ಸೊಕ್ಕಿ ಬಿದ್ದುದುತಾವ
ವತ್ತಿಗೆ ತತ್ತನ್ನಿ ಕುದುರೇಯ । (ಕುದುರೆ) ನುಲಿಯನೂರ
ತಿಟ್ಟಿಲ್ಲಾ ರಾಮು ರಯಿತಾವೊ ॥

ವೀರಣ್ಣನ ಕಡಿದತಾವ ಚೂರಿ ಪಲ್ಲೆಣಿಸಾವೆ
ವೀರ ಕೆಂಗಪ್ಪ ಮಡಿದತಾವ । ಬೇಡಾರು
ನೀರೆಂದು ಕುಡಿದಾರೆ ರಗುತಾವ ॥

ಬಂಟನು ಮಡಿದತಾವ ಕತ್ತಿ ಪಲ್ಲೆಣಿಸಾವೆ
ಬಂಟ ಕೆಂಗಪ್ಪ ಮಡಿದತಾವ । ಬೇಡಾರು
ತುಪ್ಪೆಂದು ಕುಡಿದಾರೆ ರಗುತಾವ ॥

ಕಟ್ಟದ ತಲೆಯ ಬಿಚ್ಹೋರು ದಿಕ್ಕೆಲ್ಲಾ
ಚಿಕ್ಕನುಲಿಯನೂರ ಕೆರೆಯಾಗೆ । ಬೇಡಾರು
ಬಿಚ್ಚಿದರು ಬಿಲಪತ್ರೆ ಮರದಡಿಯ ॥

ಸೋಸಿದ ತಲೆಯ ಬಾಚೋರು ದಿಕ್ಕೆಲ್ಲಾ
ರಾಯ ನುಲಿಯನೂರ ಕೆರೆಯಾಗೆ । ಬೇಡಾರು
ಸೋಸ್ಯವರೆ ಬಿಲಪತ್ರೆ ಮರದಡಿಯ ॥

ತೋಟಕ್ಹೋಗದಿರೋ ತಾಟಗಿತ್ತಿರು ಅಲ್ಲವರೆ
ಜೋತುರಕೆ ನಾಯಿ ಬಗಳ್ಯಾವೆ । ಕೆಂಗಪ್ಪ
ತೋಟಕೆ ನೀನು ಹೋಗದಿರೊ ॥

ಸಂತೆಗೋಗದಿರೋ ಸಂಗಾತಿರಲ್ಲವರೆ
ಜೋಕೆಗೆ ನಾಯಿ ಬಗಳ್ಯಾವೆ । ಕೆಂಗಪ್ಪ
ಸಂತೆಗೆ ನೀನು ಹೋಗದೀರೊ ॥

ತುಮಕೂರ ಸಂತೆ ತುಂಬು ಕಾಣೊ ಕೆಂಗಪ್ಪ
ನಿಂಬೆ ಹೂವಿನ ನಿಲುವಂಗಿ । ಇಕ್ಕೊಂಡು
ದೊಂಬರಾಡಿಸ್ಯವನೆ ಮಳಿಗ್ಹಾಗೆ ॥

ಹಿರಿಯೂರ ಸಂತೆ ದೂರ ಕಾಣೋ ಕೆಂಗಪ್ಪ
ಈರಿ ಹೂವಿನ ನಿಲುವಂಗಿ । ಇಕ್ಕೊಂಡು
ಸೂಳೆರಾಡಿಸ್ಯವನೆ ಮಳಿಗ್ಹಾಗೆ ॥

ಎಲ್ಲಿಗ್ಹೋಗಿದ್ದೊ ದಳ್ಳಾಳಿ ಕೆಂಗಪ್ಪ
ಎಲ್ಲೆಲ್ಲಾ ಬರಿಯ ಮದುರಂಗಿ । ಚಾವಡಿಯಮುಂದೆ
ನ್ಯಾಯಕೆ ನಿನ್ನ ತಡೆದಾರೊ ॥

ಎತ್ತಹೋಗಿದ್ದೊ ಬಿತ್ತಾರಿ ಮನೆಯಗೌಡ
ದಟ್ಟಿಯಲ್ಲಾ ಬರಿಯ ಅಪರಂಜಿ । ಚಾವಡಿಯಮುಂದೆ
ಲೆಖ್ಖಾಕೆ ನಿನ್ನ ತಡೆದಾವೊ ॥

ತಡೆದಾರೆ ತಡೆಯಾಲಿ ಬಡಿದು ಕೇಳಲುಬೇಡಿ
ನಲವತ್ತು ನಾಲ್ಕಳ್ಳಿ ಕಸಬೆ । ಹೊಬೇನಹಳ್ಳಿ
ತೂಗಿ ಆಳೋರ ಮಗನಯ್ಯ ॥

ಉದ್ದಾನೆ ನೀರಿಗೆ ಮುದ್ರೆ ಉಂಗುರ ಬಿಟ್ಟು
ಭದ್ರೆ ಚಿಕ್ಕಮ್ಮ ಇದ್ದನೋಡೆ । ನಿನಮಗ
ಮಧುಗಿರಿ ಗೆದ್ದು ಬರುತಾನೆ ॥

ಹರಿಯೋ ನೀರಿಗೆ ಹವಳಾದ ಉಂಗುರ ಬಿಟ್ಟು
ಹರದಿ ಚಿಕ್ಕಮ್ಮ ಇದನೋಡೆ । ನಿನಮಗ
ಹರಿಹರ ಗೆದ್ದು ಬರುತಾನೆ ॥

ಕೆಂದ ಕುದುರೆಯ ರೊಂಡಿ ಮೇಗಾಲ ಗಾಯ
ರಂಬೆ ಚಿಕ್ಕಮ್ಮ ಇದನೋಡೆ । ನಿನಮಗ
ಅಂಬಿನ ಗಾಯ ರಣಗಾಯ ॥

ಕರಿಯ ಕುದುರೆಯ ಕಾಲ ಮೇಗಲ ಗಾಯ
ನಾರಿ ಚಿಕ್ಕಮ್ಮ ಇದನೋಡೆ । ನಿನಮಗ
ಸೂರೀಯ ಗಾಯ ರಣಗಾಯ ॥

ಹತ್ತೆ ಕೈಗಲ್ಲೊ ಹದಿನಾರು ಕೈಗಲ್ಲೊ
ಲಕ್ಕಿನಾಡವೆ ಕೈಗಲ್ಲೊ । ಕೆಂಗಪ್ಪನ
ಮುತ್ತಿನ ರಾಡಿನ ಹುದಿಯಾಗೆ ॥

ಆರೆಯ ಕೈಗಲ್ಲೊ ಹದಿನಾರು ಕೈಗಲ್ಲೊ
ದಾಯನಾಡವೆ ಕೈಗಲ್ಲೊ । ಕೆಂಗಪ್ಪನ
ಹೂವಿನ ರಾಡಿನ ಹುದಿಯಾಗೆ ॥

ಬೇಲಿ ಮೇಗಲ ಹೂವು ಬೆಳ್ಳಗಿದ್ದರೇನು
ಸೆಳ್ಳೆ ಕಾಯೋಟೆ ಸೆವೆಕೂಡಿ । ಕೆಂಗಪ್ಪ
ತೆಳ್ಳಗಿದ್ದರೇನೆ ದೊರೆಮಗ ॥

ಹಲಗಿಲ್ಲವೆಂದು ಮುನೆಗಾರ ಮುನಿದಾನೆ
ಹಲಗೆ ನೆಡುವಾಕೆ ಉರಿಗೆಜ್ಜೆ । ಇಲ್ಲವೆಂದು
ಮನೆಗಾರ ಕೆಂಗಪ್ಪ ಮುನಿದಾನೆ ॥

ಮನೆಗಾರ ಕೆಂಗಪ್ಪ ಮುನಿದಾರೆ ಅಪ್ಪಗಳು
ಸೇರು ಹೊನ್ನು ಕೊಟ್ಟು ಕಡೆಸ್ಯಾರೆ । (ಕಡೆಸಿದ) ಹಲಗೆ
ಮನೆಗಾರ ಕೆಂಗಪ್ಪ ಮೆರೆದಾನೆ ॥ ಮೇಲೆ

ಅಂಬಿಲ್ಲವೆಂದು ಗಂಭೀರ ಮುನಿದಾನೆ
ಅಂಬು ನೆಡುವಾಕೆ ಉಡಿಗೆಜ್ಜೆ । ಇಲ್ಲಾವೆಂದು
ಗಂಭೀರ ಕೆಂಗಪ್ಪ ಮುನಿದಾನೆ ॥

ಗಂಭೀರ ಕೆಂಗಪ್ಪ ಮುನಿದಾರೆ ಅಪ್ಪಗಳು
ಬಿಂದಿಗ್ಹೊನ್ನ ಕೊಟ್ಟು ಕಡೆಸ್ಯಾರೆ। (ಕಡೆಸಿದ)ಹಲಗಿನಮೇಲೆ
ಗಂಭೀರ್ ಕೆಂಗಪ್ಪ ಮೆರೆದಾನೆ ॥

ಹಲಗೀಗೆ ಬಾರೋ ಮನಗೊ ರಾಯರ ಮಗನೆ
ಹಲಗಿನೊಂದೆಸಳು ಕಡಿಸಿಡಿದು । ಹೋಗುವಾಗ
ಪೌದಿ ಕೇಳ್ಯಾನೆ ಪಡಿಹೊನ್ನ ॥

ಪೌದಿ ಕೇಳ್ಯಾನೆ ಪಡಿಹೊನ್ನ ಅಪ್ಪಗಳು
ಹೂವ ಸೂರೆಯ ಬಿಡಿಸ್ಯಾರೆ ॥

ಮಂಚಕೆ ಬಾರೋ ಲಂಚಗಾರರ ಮಗನೆ
ಮಂಚದೊಂದೆಸಳು ಕಡಿಸಿಡಿದು। ಹೋಗುವಾಗ
ಲಂಚ ಕೇಳ್ಯಾನೆ ಪಡಿಹೊನ್ನ ॥

ಲಂಚ ಕೇಳ್ಯಾನೆ ಪಡಿಹೊನ್ನ ಅಪ್ಪಗಳು
ಮುತ್ತಿ ಸೂರೆಯ ಬಿಡಿಸ್ಯಾರೆ ॥

ಹೊಸ ಹಲಗೆ ಬಂದೊ ಹಸನಾಗೊ ಕೆಂಗಪ್ಪ
ಎಸಳು ಬಾಸಿಂಗ ಅರಿವಾಣ । (ದ) ಆರತಿ ಬಂದೊ
ಹಸನಾಗೊ ನಿಮ್ಮ ಹಲಗ್ಹಾಗೆ ।

ಕರಿಯ ಹಲಗೆ ಬಂದೊ ಕಲಿಯಾಗೊ ಕೆಂಗಪ್ಪ
ತೆರಳು ಬಾಸಿಂಗ ಅರಿವಾಣ ।(ದ) ಆರತಿ ಬಂದೊ
ಕಲಿಯಾಗೊ ನಿಮ್ಮ ಹಲಗ್ಹಾಗೆ ॥

ದೇವರ ಹಲಗೆಯಾಗೆ ಬಾಳೆಹಣ್ಣು ಕಡೆಯೊ
ಜಾಜಿ ಮಲ್ಲಿಗೆ ಹೂವು ಕಡೆಯೊ । ಮೂಡಿ ಬರುವೊ
ಸೂರ್ಯನ ಕಡೆಯೊ ಹಲಗ್ಹಾಗೆ ॥

ಅಪ್ಪನ ಹಲಗೇಲಿ ನಿಂಬೆಹಣ್ಣು ಕಡೆಯೊ
ದುಂಡು ಸಂಪಿಗೆ ಹೂವು ಕಡೆಯೊ । ಮೂಡಿಬರುವೊ
ಚಂದ್ರಮನ ಕಡೆಯೊ ಹಲಗ್ಹಾಗೆ ॥

ಗದ್ದೆಯ ಬದುವ ತಿದ್ದಿದೋರ್ಯಾರಮ್ಮ
ಒಬ್ಬ ತಾಯಿಗೆ ಒಬ್ಬ ಮಗನಮ್ಮ । ಕೆಂಗಪ್ಪ
ಹುಬ್ಬ ತಿದ್ದವಳೆ ಹಿರಿಯಮ್ಮ ॥

ವ್ಹಾಲೆ ಮಾಟಾಕೆ ತಿರುಪುರ ನೋಟಾಕೆ
ಭಾವ ಭಾವೈದರ ಸರಸಾಕೆ । ಕಟ್ಯಾರಲ್ಲೆ
ವೀರ ಕೆಂಗಪ್ಪನ ಅರಮನೆಯ ॥

ಕೆಂಪನ ಮಾಟಾಕೆ ತಿರುಪುರಿ ನೋಟಾಕೆ
ನೆಂಟ ನೆಂಟಾರ ಸರಸಾಕೆ । ಕಟ್ಯಾರಲ್ಲೆ
ಬಂಟ ಕೆಂಗಪ್ಪನ ಅರಮನೆಯ ॥

ಬಂಟಲ್ಲದ ಮೇಲೆ ಹಟ್ಟಿ ಜುಮ್ಮೆಂದಾವೆ
ಕಟ್ಟಕ್ಕಿವೀರ ಕಡುಜಾಣ । ಇಲ್ಲದಮೇಲೆ
ಕತ್ತಲೆ ನಮ್ಮೇಲೆ ಕವಿದಾವೆ ॥

ವೀರ ಇಲ್ಲದಮೇಲೆ ಕೇರಿ ಜುಮ್ಮೆಂದಾವೆ
ಭಾವಕ್ಕಿ ವೀರ ಬಲಿಗಾರ । ಇಲ್ಲದಮೇಲೆ
ಕಾವಳ ನಮ್ಮ ಮೇಲೆ ಕವಿದಾವೆ ॥

ಅವ್ವನ ಪೂಜೆಯಮಾಡಿ ಪುಷ್ಪಮಂಡೆಗೆ ಧರಿಸಿ
ಉತ್ಸಾಸದಾಟ ಬರುವೋರು । (ಬರುವೊ) ಅಣ್ಣಯ್ಯಾಗೆ
ಪುತ್ರಾನ ಕೊಡೊ ಮನೆಸ್ವಾಮಿ ॥

ದೇವರ ಪೂಜೆಯಮಾಡಿ ಹೂವು ಮಂಡೆಗೆ ಧರಿಸಿ
ದಾರವಂದ್ರದಾಟ ಬರುವೋರು (ಬರುವೊ) ಅಣ್ಣಯ್ಯಾಗೆ
ಬಾಲಾನ ಕೊಡೊ ಮನೆಸ್ವಾಮಿ ॥

ಆಚೆಯ ಸಾದ ಈಚೆಗೆ ಹೂರಿಕೊಂಡು
ದಾಟಾಡಿ ಮಾಲೆ ಬಿಡುವೋರು । (ಬಿಡುವೊ)ಅಣ್ಣಯ್ಯಾಗೆ
ಜೋತುರ ಬಂದಾವೆ ಉಡುಗೊರೆ ॥

ಇಂದಾಲಸಾದ ಮುಂದಕೆ ಹೂರಿಕೊಂಡು
ಜಗ್ಗೀಸಿಮಾಲೆ ಬಿಡುವೋರು । (ಬಿಡುವೊ) ಅಣ್ಣಯ್ಯಾಗೆ
ಉಂಗುರ ಬಂದಾವೆ ಉಡುಗೊರೆ ॥

ಪೂಜೆ ಮಾಡೋರು ಪೂಜಾರಿ ಯಾರಮ್ಮ
ಪೂಜೆಗೆ ಪೂಜೆ ಥಳುಕಿನ । ಪೂಜೆ ಮಾಡೊ
ಪೂಜಾರಿ ಯಾರ ಮಗನವ್ವ ॥

ಮಾಲೆ ಹೆಣೆಯೋರು ಮಹಾರಾಯ್ರು ಯಾರಮ್ಮ
ಮಾಲೆಗೆ ಮಾಲೆ ತಳುಕಿನ । ಮಾಲೆಯ ಹೆಣೆಯೊ
ಮಹಾರಾಯನ್ಯಾರ ಮಗನವ್ವ ॥

ಇಪ್ಪತಾಳುದ್ದ ಮುತ್ತಿನ ಮಡದಾಗೆ
ಬಿಟ್ಟ ಮಲ್ಲಿಗೆಯ ಬಿಡಿಸ್ಯಾರೆ । (ಬಿಡಿಸಿ) ಮಾಲೆಯಕಟ್ಟ
ಅಪ್ಪನ ಪೂಜೆಗೆ ಧರಿಸ್ಯಾರು ॥

ಆರ್ಹಾಳಾದ್ದ ಹೂವಿನ ಮಡದಾಗೆ
ಆದ ಮಲ್ಲಿಗೆಯ ಬಿಡಿಸ್ಯಾರೆ । (ಬಿಡಿಸಿ) ಮಾಲೆಯಕಟ್ಟ
ದೇವರಪೂಜೆಗೆ ಧರಿಸ್ಯಾರು ॥

ಜ್ಯೋತಿ ಕುಣಿದಾವೊ ಜಗಜ್ಯೋತ ಕುಣಿದಾವೊ
ನೀತಿಗಾರನ ಮನೆಮುಂದೆ । ಕೆಂಗಪ್ಪ
ಜೋತ್ಯಮ್ಮ ಹೊಳೆದಂಗೆ ಹೊಳೆದಾನೊ ॥

ಚಂದ್ರ ಕುಣಿದಾನೊ ಚಂದ್ರಾಮ ಕುಣಿದಾನೊ
ಸುಂದರಗಾರನ ಮನೆಮುಂದೆ । ಕೆಂಗಪ್ಪ
ಚಂದ್ರಮ ಹೊಳೆದಂಗೆ ಹೊಳೆದಾನೊ ॥

ಮೊಗ್ಗಿನ ತೋಟಕೆ ನುಗ್ಗವನೆ ಪೂಜಾರಿ
ನುಗ್ಗೆ ನುರಿಯಾದೊ ಮರದಲಗೆ । ಕೆಂಗಪ್ಪ
ಮೊಗ್ಗು ಮಲ್ಲಿಗೆಯ ಬಿಡಿಸ್ಯಾನೆ ॥

ಹೂವಿಲ್ಲವೆಂದು ಹೂವಿಗ್ಹೋಗದೀರಿ
ಹೂವು ಕೆಂಗಪ್ಪ ಮನೆ ಮುಂದೆ । ಕೆಂಗಪ್ಪನ
ಹೂವರಳಿ ಬಾಯಿ ಬಿಡುತಾವೆ ॥

ಮೊಗ್ಗಿಲ್ಲವೆಂದು ಮೊಗ್ಗಿಗ್ಹೋಗದೀರಿ
ಮೊಗ್ಗು ಕೆಂಗಪ್ಪ ಮನೆಹಿಂದೆ । ಮಲ್ಲಿಗೆ ಜಾಜಿ
ಮೊಗ್ಗರಳಿ ಬಾಯಿ ಬಿಡುತಾವೆ ॥



ಹೂವು ಮಾರುವ ದೊರೆ ಚೆಲುವ

ನಾನ್ಯಾವ ಸೀಮೆಯಲ್ಲಾ ಯಾವ ರಾಜ್ಯವಲ್ಲಾ
ಮೇಲುಕೋಟೆ ನಮ್ಮ ಘನ ಸೀಮೆ । ಒಳಗಿರುವ
ವೈಷ್ಣವರ ಮಗ ಕಾಣೆ ಚೆಲುವಯ್ಯ ॥

...ಜನಪದ ಸಾಹಿತ್ಯವು ವೇದಗಳಂತೆ, ಶ್ರುತಿಗಳಂತೆ ಅನಾದಿಯಾದುದು; ಬರವಣಿಗೆಯನ್ನು ಕಾಣದ ಸುಗುಣಮುಖಿಯರ ಇನಿದನಿಯ ಮೂಲಕ ಕವಿಯಿಂದ ಕವಿಗೆ ಅವಿರಳವಾಗಿ ಅನರ್ಗಳವಾಗಿ ಹರಿದು ಬಂದುದು. ಜನಪದ ಸಾಹಿತ್ಯವು ಬರವಣಿಗೆ ಹುಟ್ಟುವುದಕ್ಕೆ ಮುಂಚೆಯೇ ಉದಿಸಿರಬೇಕು. ಅಮೇಲೆ ಪಂಡಿತ ಸಾಹಿತ್ಯವೂ, ಜನಪದ ಸಾಹಿತ್ಯವೂ, ನುಡಿಯ ಇರ್ಕೆಲಗಳಲ್ಲಿಯೂ ನಡೆದುಬರುತ್ತಿರುವುದು ಕಾಣುತ್ತದೆ. ಈ ಎರಡು ಸಾಹಿತ್ಯಗಳು ಎಲ್ಲ ಕಾಲಗಳಲ್ಲಿಯೂ, ಎಲ್ಲ ನಾಡುಗಳಲ್ಲಿಯೂ ಸಾಹಿತ್ಯರಥದ ಎರಡು ಚಕ್ರಗಳಂತೆ ಶೋಭಿಸುತ್ತಿವೆ.

ಸಾಹಿತ್ಯ ನಿಸರ್ಗದ ಒಂದು ಹೂ ಇದ್ದಂತೆ. ಮನುಷ್ಯನು ಸುಖದುಃಖಗಳನ್ನು ಹೊಂದಿದಾಗ ತನ್ನಲ್ಲಿ ಉಂಟಾಗುವ ಭಾವನೆಗಳನ್ನು ಚಿತ್ರಿಸುವ ಚೈತನ್ಯವನ್ನು ಪಡೆದಿದ್ದಾನೆ. ಅವನ ಆ ಭಾವನೆಯು ಮತ್ತೊಬ್ಬರ ಹೃದಯವನ್ನು ಮುಟ್ಟಿ, ಅಲ್ಲಿಯೂ ಅದೇ ಭಾವನೆಯನ್ನು ಹುಟ್ಟಿಸಿದರೆ ಸಾಹಿತ್ಯವೆನಿಸುವುದು. ಬರೆದಿಡದಿದ್ದ ಭಾಗವಾದರೂ ಚಿಂತೆಯಿಲ್ಲ; ಅದೂ ಸಾಹಿತ್ಯವೇ. ಸಾಹಿತ್ಯದಿಂದ ನಿಯಮಗಳು ಹುಟ್ಟಿದುವೇ ಹೊರತು, ನಿಯಮಗಳಿಂದ ಸಾಹಿತ್ಯ ಜನಿಸಲಿಲ್ಲ. 'ಯಾವ ನಿಯಮದ ಬಂಧನಕ್ಕೂ ಸಿಕ್ಕದೆ ತಾನೇತಾನಾಗಿ ನಳನಳಿಸುವ ಜ್ಯೋತಿ ಪೂರ್ಣವಾದ ಭಾವನೆ ಸಾಹಿತ್ಯ.' ಆದುದರಿಂದ ಜನಪದಗಳನ್ನು ಸಾಹಿತ್ಯಾಭ್ಯಾಸಕರು ತಮಗೆ ಪಂಡಿತಸಾಹಿತ್ಯದ ಮೇಲಿಟ್ಟಿರುವಷ್ಟು ಆಸಕ್ತಿಯಿಂದಲೇ ಸೇವಿಸಬೇಕು. ಈ ಸಾಹಿತ್ಯದ ಉದ್ಧಾರಕರು ಯಾರುಯಾರೋ ನಮಗೆ ತಿಳಿಯದು. ಹಿಂದೆ ಪಂಡಿತರು ಜನಪದ ಸಾಹಿತ್ಯವನ್ನು 'ವರ್ಣಿಕ' 'ಹಾಡುಗಬ್ಬ' ಎಂಬ ಹೆಸರುಗಳಿಂದ ಕರೆಯುತ್ತ ರಸವಿಲ್ಲದ ಕಸವೆಂದು ಗಣಿಸಿದ್ದರು. ಸಾಹಿತ್ಯಾಭಿವೃದ್ಧಿಯನ್ನೇ ಜೀವನಮಾರ್ಗವಾಗಿ ಗಣಿಸದೆ, ಯಾರ ಆಸರೆಯನ್ನೂ ಆಶ್ರಯವನ್ನೂ ಕೋರದೆ, ದುಡಿಯುವಾಗ ಹೊರೆಯ ಭಾರ ಕಳೆಯಲು ಹಾಡುಕಟ್ಟಿ ಹಾಡುವುದು ನಮ್ಮ ಹಳ್ಳಿಗರ ಹುಟ್ಟುಗುಣ. ಅವರು ದುಡಿಯುತ್ತಾ ಹಾಡುತ್ತಾರೆ; ಹಾಡುತ್ತಾ ದುಡಿಯುತ್ತಾರೆ. ಇಲ್ಲದಿದ್ದರೆ ಅವರ ಬಾಳು ಅವರಿಗೆ ಹೊರೆ. ಹಾಗೆ ಹಾಡಿದ ಹಾಡುಗಳೇ ಜನಪದ ಸಾಹಿತ್ಯಭಂಡಾರದ ಮುತ್ತುರತ್ನಗಳು.

...ಜನಪದ ಸಾಹಿತ್ಯದಲ್ಲಿ, ಜಗತ್ತಿನ ವಸ್ತುಗಳಲ್ಲಿ ಯಾವುದನ್ನು ಬೇಕಾದರೂ ಕಾವ್ಯವಸ್ತುವನ್ನಾಗಿ ಆರಿಸಿಕೊಂಡು, ಹೇಗೆಬೇಕಾದರೆ ಹಾಗೆ ವರ್ಣಿಸಬಹುದು. ವರ್ಣನೆಗೆ ಕಟ್ಟುನಿಟ್ಟಿಲ್ಲ. ಒಂದು ರೀತಿಯ ಗಾಂಭೀರ್ಯ ಈ ಎಲ್ಲ ಪದ್ಯಗಳಲ್ಲೂ ಇದೆ. ಪ್ರಾಸವೂ, ಉಪನಮೆ ಮುಂತಾದ ಅಲಂಕಾರಗಳೂ ಒಂದೊಂದು ವೇಳೆ ತಾವುತಾವಾಗಿಯೇ ಬಂದುಬಿಡುತ್ತವೆ. ರಾಗಕ್ಕೆ ತಕ್ಕಂತೆ ಶಬ್ದಕ್ಕೆ ರೂಪುಕೊಡುವುದೂ ಒಂದು ವೈಶಿಷ್ಟ್ಯ. ಇವುಗಳು, ಹಾಡಿ ಆನಂದಪಡಲು ಕಟ್ಟಿದವುಗಳೇ ಹೊರತು, ಬರೆದವನ ಹೆಸರು ಎಲ್ಲೆಲ್ಲೂ ಹರಡಿ, ಚಿರಕಾಲ ಬಾಳಲಿ ಎಂಬ ಉದ್ದೇಶದಿಂದಲ್ಲ.

—ಶ್ರೀ ರಾ. ವೆಂ. ಶ್ರೀನಿವಾಸ

ಹೂವು ಮಾರುವ ದೊರೆ ಚೆಲುವ*†

ಚೆಂದಕೆ ಚೆಲುವಯ್ಯ ಅಂಗಯ್ಯಮೇಲೆ ಗಿಡುಗನಾಡಿಸೂತ
ಹೋದನು ವರನಂದಿ ಅರಮನೆಗೆ....ಚೆಲುವಯ್ಯ
ಹೋದನು ವರನಂದಿ ಅರಮನೆಗೆ ।

ನಾರಿ ಒಳಗಿರುವ ವರನಂದಿ ಏನೆಂದಳು
ನಿನ್ಯಾವ ಸೀಮೆಯ ಬಡದಾಸ ?

ನಾನ್ಯಾವ ಸೀಮೆಯೆಲ್ಲಾ ಯಾವ ರಾಜ್ಯವಲ್ಲಾ
ಮೇಲುಕೋಟೆ ನಮ್ಮ ಧನ ಸೀಮೆ । ಒಳಗಿರುವ
ವೈಷ್ಣವರ ಮಗ ಕಾಣೆ ಚೆಲುವಯ್ಯ ॥

ಚೆಂದಕೆ ಚೆಲುವಯ್ಯ ತುಂಡಗಿನಿಕ್ಕೊಂಡು
ಮುಂಗೈಯ ಮೇಲೆ ಗಿಡುಗನಾಡಿಸುತ । ಚೆಲುವಯ್ಯ
ಹೋದನು ವರನಂದಿ ಅರಮನೆಗೆ ॥

ನಾರಿ ಒಳಗಿರುವೊಳೇನೆಂದಾಳು
ನೀನ್ಯಾವ ಸೀಮೆಯ ಬಡದಾಸ ?

---

*ಈ ಹಾಡುಗತೆಯನ್ನು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೋಕಿನ ಹಳ್ಳಿಗಳಲ್ಲೂ ಹಾಗೂ ನಾಗಮಂಗಲ ತಾಲ್ಲೋಕಿನ ಹಳ್ಳಿಗಳಲ್ಲೂ ಚೆಲುವರಾಯ ಸ್ವಾಮಿಯ ಭಕ್ತರು ಹಾಡುವರು.

†ಚೆಲುವರಾಯಸ್ವಾಮಿ ಕುರಿತ ಹಲವಾರು ಕತೆಗಳು ಇಂದು ಜನತೆಯಲ್ಲಿ ಪ್ರಚಾರದಲ್ಲಿವೆ. ಹಳ್ಳಿನಾಡಿನ ನಮ್ಮ ಜನತೆ ಹಾಡಿರುವ ಅನೇಕ ಕತೆಗಳಲ್ಲಿ–ಒಂದು ಕತೆಯನ್ನು ಮಾತ್ರ ಈ ಸಂಕಲನದಲ್ಲಿ ಓದುಗರ ಅಭಿರುಚಿಗಾಗಿ ಇಲ್ಲಿ ಸಂಕಲಿಸಿರುತ್ತೇನೆ. ಇನ್ನು ಉಳಿದ ಕತೆಗಳು ಇದೇ ಸಂಪಾದಕರ ಮುಂದೆ ಬಂದಿರುವ "ಜನಪದ ಗೀತೆಗಳಲ್ಲಿ–ಮೇಲುಕೋಟೆ ಚೆಲುವರಾಯ" ಎಂಬ ಸಂಗ್ರಹದಲ್ಲಿ ಚೆಲುವರಾಯಸ್ವಾಮಿಯನ್ನು ಅಪೂರ್ವ ಸುಂದರನೆಂದೂ ದಿಲ್ಲಿಯ ಬಾದಷಹನ ಮಗಳಾದ ವರನಂದಿ ಮೆಚ್ಚಿ ಮೇಲುಕೋಟೆಗೆ ಬಂದು ನೆಲೆಸಿದ ಕತೆಯನ್ನು ಕಾಣಬಹುದಾಗಿದೆ.

ನಾನ್ಯಾವ ಸೀಮೆಯಲ್ಲಾ ಯಾವ ರಾಜ್ಯವಲ್ಲಾ
ಮೇಲುಕೋಟೆ ಸೀಮೆ ನಮ್ಮ ಹೆನಸೀಮೆ । ಒಳಗಿರುವ
ನಾನು ಹೂವು ಮಾರುವ ದೊರೆ ಚೆಲುವ ॥

ಕಿತ್ತಲೆ ಮರದಡಿಯ ಅವರ ಮಾವಾಗೆ
ಕಯ್ಯ ಮುಗಿದಾನೊ ಚೆಲುವಯ್ಯ ।

ಏನಂದು ಕಯ್ಯ ಮುಗಿದಾನೊ—ಚೆಲುವಯ್ಯ
ದೊಡ್ಡೋಳ ವರನಂದಿ ಕೊಡಿ ನಮಗೆ ।

ನಾವು ತುರುಕರು ನೀವು ವಷ್ಣವರು
ಕುಲದೋರು ಮೆಚ್ಯಾರ ಚೆಲುವಯ್ಯ ।

ನಾನು ಮೆಚ್ಚಿದರೆ ಕುಲವೆಲ್ಲಾ ಮೆಚ್ಚಿದಂಗೆ
ದೊಡ್ಡೋಳು ವರನಂದಿ ಕೊಡಿ ನಮಗೆ ।

ಹೋದನು ಚೆಲುವಯ್ಯ ಇಂಬಿ ಮರದಡಿಯ
ಅರವತ್ತಮ್ಮಗೆ ಕಯ್ಯ ಮುಗಿದಾನೊ ಚೆಲುವಯ್ಯ ।

ಅವರತ್ತಮ್ಮಗೆ ಕಯ್ಯ ಏನಂದು ಮುಗಿದಾನೊ–ಚೆಲುವಯ್ಯ
ದೊಡ್ಡೋಳು ವರನಂದಿ ಕೊಡಿ ನಮಗೆ ।

ನಾವು ತುರುಕರು ನೀವು ವಷ್ಣವರು
ಕುಲದೋರು ಮೆಚ್ಯಾರ ಚೆಲುವಯ್ಯ ।

ನಾನು ಮೆಚ್ಚಿದರೆ ಕುಲವೆಲ್ಲ ಮೆಚ್ಚಿದ್ದಂಗೆ
ದೊಡ್ಡೋಳು ವರನಂದಿ ಕೊಡಿ ನಮಗೆ ?

ದೊಡ್ಡೋಳು ವರನಂದಿ ಕೊಡಿ ನಮಗೆ—ಎಂದ್ಹೇಳಿ
ಬಂದಾನು ತನ್ನರಮನೆಗೆ ॥

ಕಪ್ಪುಕಸ್ತೂರಿ ಹಣೆ ಬಟ್ಟು ಇಟ್ಟುಕೊಂಡು
ಹಸೆಯಮೇಗಲ ದಸುರಿ ಪಟ್ಟಿಯಸೀರೆ
ಒಂದ್ಹುಟ್ಟು ಒಂದು ಮುಸುಕಿಡೆ ।

ಒಂದ್ಹುಟ್ಟು ಒಂದು ಮುಸುಕಿಟ್ಟು
ತಾಯಿ ವರನಂದಿ ಗಂಡನ ಕುಟ್ಟೋಗವ್ವ ।

ತಾಯಿ ವರನಂದಿ ಅಪ್ಪನಮನೆ ಬಿಟ್ಟೋಗುವಾಗ
ಚಿಕ್ಕ ಮನೆಗೆ ಅವಳೋದಾಳೊ । ಅವರ ತಾಯಿ
ಮುತ್ತು ತುಂಬ್ಯಾಳೊ ಮಡಲಿಗೆ ॥

ತಾಯಿ ವರನಂದಿ ಅಮ್ಮನಮನೆ ಬಿಟ್ಟೋಗುವಾಗ
ದೊಡ್ಡಮ್ಮನ ಮನೆಗೆ ಅವಳೋದಾಳೊ । ಅವರ ಅಮ್ಮ
ಹೊನ್ನು ತುಂಬ್ಯಾಳೊ ಮಡಲಿಗೆ ॥

ತಾಯಿ ವರನಂದಿ ಅವರಪ್ಪನಮನೆ ಬಿಟ್ಟೋಗುವಾಗ
ಗೂಡಲ್ಲಿ ಎರಡು ಗಿಣಿಗಳು । ಕೂತುಕೊಂಡು
ಅವಳ ನರಿಗೆಮೇಲೆ ಬಿದ್ದು ಹೊರಳ್ಯಾವೊ–ವರನಂದಿ
ನಿನ ಕುಟ್ಟಿ ನಾವು ಬರುತ್ತೀವಿ ।

ತಾಯಿ ವರನಂದಿ ಅಮ್ಮನಮನೆ ಬಿಟ್ಟೋಗುವಾಗ
ಬಾಗಿಲಿನಲೆರಡು ಗಿಣಿಗಳು । ಕೂತುಕೊಂಡು
ಅವಳ ಪಾದದ ಮೇಲೆ ಬಿದ್ದು ಹೊರಳ್ಯಾವೊ–ವರನಂದಿ
ನಿನ ಕುಟ್ಟಿ ನಾವು ಬರುತ್ತೀವಿ ॥

ನಮಕುಟ್ಟಿ ನೀವು ಬರಬೇಡಿ—ಗಿಣಿಗಳಿರಾ
ಆಳು ಬಿಟ್ಟು ಹಣ್ಣಿನ ವನಕೆ ಕಳಿಸ್ಹೇನು । (ಕಳಿಸಿ) ನಾನು
ಹಣ್ಣು ತರಿಸ್ಹೇನು ನಿಮಗಾಗಿ ॥

ತಾಯಿ ವರನಂದಿ ಗಂಡನ ಕುಟ್ಟೋಗುವಾಗ
ಮುತ್ತಿಕೊಂಡರು ತುರುಕರು । ಅವರು
ದೂರದಿ ಬಾಣ ಬಿಡುವಾರು ॥

ಚೆಲುವಯ್ಯ ವರನಂದಿ ಕರೆಕೊಂಡ್ಹೋಗುವಾಗ
ಸುತ್ತಿಕೊಂಡರು ತುರುಕರು । ಅವರು
ದೂರದಿ ಬಾಣ ಬಿಡುವಾರು ॥

ವರನಂದಿ ಗಂಡನ ಕುಟ್ಟೋಗುವಾಗ ನರಿಗೆ ಚೆಲ್ಲಾಟ
ತಿರುಗಿ ನೋಡ್ಯಾಳೆ ತವರೂರ । ಅಪ್ಪನ ಮನೆಯ
ಸಣ್ಣಕ್ಕಿ ಬೈಲು ಬೆಳೆಯಾತೀ ॥

ಹಳ್ಳಕೊಳ್ಳದಲ್ಲಿ ಮುಳ್ಳು ಜಾಜಿ ವನದಲ್ಲಿ
ನಗ್ಲಿಲಮುಳ್ಳ ತುಣಿಕೊಂಡು । ಚೆಲುವಯ್ಯ
ಹೋದನ್ಹೇರಿಯ ದಡಗೊಂಡು ॥

ಹೋದನರಮನೆಗೆ .. ಚೆಲುವಯ್ಯ
ಕರೆಯೆ ನಾಚಾರಿ ಆಚೆಮನೆ ಗರತೀರ
ಮಾಡೆಂದ ತನ್ನ ಮುದುವೆಯ ॥

ದಿಳ್ಳಿಗ್ಹೋಗುತ್ತೀನಿ ಕಟ್ಟಿಣ್ಣೆ ಬುತ್ತೀಯ
ದಿಳ್ಳಿಯ ಗೆದ್ದು ಬರುತ್ತೀನಿ । ನಾಚಾರಿ
ಬಾಷೆಯ ಕೊಡುತ್ತೀನಿ ಬಲಗೈಗೆ ।

ಏರ್ಯಾನೊ ಚೋಜಿಯ ಬಿಗಿದಾನೊ ಬುತ್ತೀಯ
ಾರೋದಾನೊ ಶ್ರೀರಂಗನಾಥನ ಗುಡಿಗಂಡು ।

ಯಾವತ್ತು ಬರದ ಚೆಲುವಯ್ಯ ಬಂದನಲ್ಲೆ ನಮ್ಮನೆಗೆ
ಕುಂಡಿರಕೆನ್ಹಾಕಿ ಮಣೆಕೊಡಿ—ಚೆಲುವಯ್ಗೆ ।

ಕುಂತುಕೊಳ್ಳಾಕೆ ಮನೆಕಡೆ ಜಂಬಾರ
ಹೋಗಾನ ಬಾರಣ್ಣ ಮದುವೆಗೆ ।

ಇದೇನು ಚೆಲುವಯ್ಯ ಇದೇನು ಹೊಸಸುದ್ದಿ
ನೀನು ಹೀನ ತಂದಲ್ಲೊ ನಮ ಕುಲಕೆ ।

ಹೀನ ತರುವೋಕೆ ನಾನು ಒಬ್ಬನಲ್ಲಾ
ನಿನೇಕೆ ಮಡಗಿದ್ದೀಯ ತಿಗಳ್ತೀಯ ।

(ಹೀಗೆಯೆ ಮೂಡಲಗಿರಿಯಪ್ಪ, ನಂಜನಗೂಡ ನಂಜುಂಡೇಶ್ವರ, ಚುಂಚನಗಿರಿ ಭೈರುವ, ಮುಂತಾದ ತನ್ನ ಬಂಧುಗಳಿಗೆಲ್ಲಾ ತನ್ನ ಮದುವೆಗಾಗಿ ಕರೆಯಲು ಹೋಗುತ್ತಾನೆ.)

ಕರೆಯೆ ನಾಚಾರಿ ಆಚೆಮನೆ ಗರತೀರ....
ಆಚೆಮನೆ ಗರತೀರ–ಈಚೆಮನೆ ಅಕ್ಕಂದಿರಾ....
ಅರೆಯೊಂದರುಷಾಣ ಸೀಗೆಕಾಯ–ಮಾಡೆಂದ ತನ್ನ
ಮದುವೆಯ ।

ಗರುಡನ ಗರಿ ನೋಡಿ–ನಾಗರೆಂಬುದ ಜಡೆಯನೋಡಿ
ಆಗ್ಹೋಗಿ ನಾವು ಹಸೆಯ ಬರೆದೇವು ।

ಹೂಡ್ಹೇವು ಹೊನ್ನಿನ ಕಳಸವ—ಆಕ್ಹೇವು ಬಾಳೆ ಚಪ್ಪರವ
ಬಾಳೆ ಚಪ್ಪರನಾಕೆ ಮುತ್ತು ವಜ್ಜುರವ ಬಿಗಿಸ್ಹೇವು
ನಾವೆಲ್ಲಾ ಮಲ್ಲಿಗೆ ಹೂವ ಹರೆಗ್ಹೇವು ॥

ಸ್ವಾಮಿ ಮದುವೆಗೆ ಏನೇನು ಸಮಕಟ್ಟು
ಬಾಣಬಿರುಸು ಕೈತಾಳ । ಚೆಲುವಯ್ನ
ಸ್ವಾಮಿ ಮದುವೆ ಶನಿವಾರ ॥

ಸವತಿ ಸವತಿರಿಗೂ ಹತ್ತಿತು ಜಗಳಾವು
ಅಚ್ಚ ತುರುಕನ ಮಗಳೆ—
ಮೆಚ್ಚಿ ಬಂದೇನೆ ಚೆಲುವನ ।

ಮುಚ್ಚಳದಲ್ಲುಣ್ಣೋಳೆ ತುರುಕಾತಿ
ಮೆಚ್ಚಿ ಬಂದಲ್ಲೆ ಚೆಲುವನ—ವರನಂದಿ
ನೀನು ಮೆಚ್ಚಿ ಬಂದಲ್ಲೆ ಚೆಲುವನ ॥

ಮೆಚ್ಚಿ ಬರಲಿಲ್ಲ ಆಸೆ ಬೀಳಲಿಲ್ಲ
ಚಿಕ್ಕಂದಿನಲ್ಲಿ ಹಣೆಯಲ್ಲಿ । ಬರೆದಂತೆ
ನಾನು ಸಿಕ್ಕೀದೆ ಮೇಲು ಕುಲದ್ಹೋರಿಗೆ ॥



ಪಿರಿಯಾಪಟ್ಟಣದ ಕಾಳಗ

ನನ್ನ ದೊರೆಯೆ ರೋಸ ನಿನ್ನೊಳಗಿಲ್ಲವಯ್ಯ....ತಂದನಾನಾ ।
ಆ ಬಾಳನೆ ನಾವು ಬಾಳಲಾರೋ ನನ್ನ ದೊರೆಯೆ....ತಂದನಾನಾ ।
ಮಸ್ಕಾಣಿ ಬೇಡ ಮಡದೀರ ಕೊಲ್ಲಯ್ಯ....ತಂದನಾನಾ ।

This folk literature, though it is unavaidably regiona and based on limited experience of life, not only offers many piece of shrewd wordly wisdom, but also opens a window to profound philosophy and essential religion I should like to isolate the attitude of what the ancient Greeks called 'Sophrosyne' (nothing too much; just moderation) and the attitude of liberal minded tolerance for which there seems to be no name beyond the frontiers of India, and emphasise them as the heart and soul and sweet vermilion mark on the fore head of Mother Karnataka.

—SRI S.V. RANGANNA, M.A.

ಪಿರಿಯಾಪಟ್ಟಣದ ಕಾಳಗ*

ತಂದನಾನಾ ತಂದನ್ನ ತಾನಾನಾ—
ತಂದೇನಾನಾ ತಂದನ್ನ ತಾನಾನಾ ।

ಕೊಡಗು ಮಲೆಯಾಳದ ರಾಜ್ಯಕ್ಕೆ
ಗಡಿಯಾವುದೆಂದರೆ–ಬೆಡಗಿನಂತ ಪಿರಿಯಾಪಟ್ಟಣ ತಂದನಾನಾ....
ಬೆಡಗಿನಂತ ಪಿರಿಯಾಪಟ್ಟಣಕೆ ದೊರೆಯಾರೆಂದಾರೆ
ಹೆಚ್ಚೀನ ದೊರೆ ವೀರಾಜೆ ಅರಸು....ತಂಡನಾನಾ....

ಮೂರು ಮನೆ ಹಳ್ಳಿಯಾದಾರೊ ಪಿರಿಯಾಪಟ್ಟಣ ।
ನಾಗಾರ ಹಾವು ಮರಿದಂಗೆ ಮರಿಯುವುದು....ತಂದನಾನಾ ।
ಹತ್ತು ವರ್ಷದ ಬಾಲಕರೆಲ್ಲರೂ—
ಪಿರಿಯಾಪಟ್ಟಣದೊಳಗೆ ಬಿಲ್ಲುಬಾಣವ ಹಿಡಿದವರೆ....ತಂದನಾನಾ
ಪಿರಿಯಾಪಟ್ಟಣದ ಹೆಸರ ಹೇಳಿದರೆ....
ದಿರುಳಿ ಮದುರಂಗ ಗಡಗಡನೆ ನಡುಗುವುದು....ತಂದನಾನಾ ।
ಮೈಸೂರ್ ದೊರೆಗಳ ಹೆಸರ ಕೇಳಿದರೆ....
ಕುಂಪಣಿ ದೊರೆಗಳು ಟೋಪಿ ಕಳೆದು ಸಲಾಮು ಮಾಡುವರು
....ತಂದನಾನಾ ।

ಹೆಚ್ಚೀನ ದೊರೆ ವೀರಾಜೆ ದೊರೆಯೆಲ್ಲಾ....ತಂದನಾನಾ ।
ವೀರಾಜೆ ದೊರೆಗೆ ಕೇಡುಗಾಲಕೆ ಬುದ್ದಿ ಕೂಡಿತು....ತಂದನಾನಾ ।
ಕೇಡುಗಾಲದಿ ಬುದ್ದಿ ಕೂಡಿತು....
ವೀರಾಜೆ ದೊರೆ ಕೇಡುಗಾಲದಿ ಓಲೆ ಬರೆದಾನು....ತ ಂದನಾನಾ ।

---

*ಈ ಲಾವಣಿಯನ್ನು ಪಿರಿಯಾಪಟ್ಟಣ, ಹುಣಸೂರು ಮುಂತಾದ ಪ್ರದೇಶಗಳಲ್ಲಿ ಹರಿಜನರು ತಂಬೂರಿ ನುಡಿಸಿಕೊಂಡು ಹಾಡುವರು—ಮತ್ತು ಕೊಡಗಿನ ವಿಭಾಗದಲ್ಲಿ ಕಾಡುಕುರುಬರು ಕೆಲಸ ಕಾರ್ಯಗಳಲ್ಲಿ ತೊಡಗಿದಾಗ ಹಾಡುವರು.

ಎಂದಿಗೂ ಹುಟ್ಟಿ ಇಂದಿಗೂ ಬೆಳೆದರೂ....
ದಳವಾಯಿ ಮಾವಣ್ಣ ರಕ್ತದ ಮುಖ ನೋಡೆ ಇಲವಲ್ಲಾ
....ತಂದನಾನಾ ।
ಗಂಡು ಆದರೆ ದಂಡೆತ್ತಿ ಬರಲಯ್ಯ....ತಂದನಾನಾ ।
ದಳವಾಯಿಯವರು ಹೇಡಿಯಾದರೆ....
ತನ್ನರಮನೇಲಿರಲಯ್ಯ....ತಂದನಾನಾ ।

ಸುಮ್ಮನೆ ಇದ್ದರೆ ಒಪ್ಪುದಿಲ್ಲವಲ್ಲಾ.... ತಂದನಾನಾ ।
ದಳವಾಯಿಯವರು ಬಣ್ಣ ಹುಟ್ಟುಕೊಂಡು....ತಂದನಾನಾ ।
ದಳವಾಯಿಯವರು ಬಳೆಯ ತೊಟ್ಟುಕೊಂಡು
ಹೇಡಿಯಾಗಿ ತನ್ನರಮನೇಲಿರಲಯ್ಯ....ತಂದನಾನಾ ।
ಕುಂದಕದ ಓಲೆ ಓದಿದರು....ತಂದನಾನಾ ।
ದಳವಾಯಿಯವರು ಹೆತ್ತಯ್ನ ಬಳಿಗೆ ಬರುತಾರೆ ....ತಂದನಾನಾ ।
ಕುಂದಕದ ಓಲೆ ಓದಿಕೊಂಡು....ತಂದನಾನಾ ।
ಹೆಂಗೆ ನನ್ನ ಪ್ರಾಣ ಮಡಗಾಲಿ....ತಂದನಾನಾ ।
ಮೂರು ಸಾವಿರ ರಾಣ್ಯ ಕಳುವಯ್ಯ ।
ಹೆತ್ತಯ್ಯನವರೆ ಮೂರುತಿಂಗಳ ಭತ್ಯ ಕಳುವಯ್ಯ....ತಂದನಾನಾ ।

ಸತ್ತರೆ ನಾನಲ್ಲೆ ಸಾಯುತೀನಿ....
ಉಳಿದರೆ ಪಿರಿಯಾಪಟ್ಟಣ ತರುತೀನಿ ...ತಂದನಾನಾ ।
ಮೂರು ಸಾವಿರ ರಾಣ್ಯ ಕಳುಹಿದ—
ಹೆತ್ತಯ್ಯನವರು ಮೂರುತಿಂಗಳ ಭತ್ಯ ಕಳುಹಿದ ....ತಂದನಾನಾ ।
ಮೂರು ಸಾವಿರ ರಾಣ್ಯ ಕಟ್ಟಿಕೊಂಡು—
ದಳವಾಯಿಯವರು ಶ್ರೀರಂಗಪಟ್ಟಣಕೆ ಬಂದರಲ್ಲಾ....ತಂದನಾನಾ।
ಶ್ರೀರಂಗಪಟ್ಟಣಕೆ ಬಂದರಲ್ಲಾ ದಳವಾಯಿಯವರು ।
ತಾನ ಮಡಿಗಳ ಮಾಡಿದರು....ತಂದನಾನಾ ।

ಪಿರಿಯಾಪಟ್ಟಣಕೆ ವಾಸ ಹೋದಾರೆ....
ಚಾಮುಂಡಮ್ಮ ನಿನಗೆ ಸೋಭನದ ಹಂತ ಗೆಯಿಸೂವೆ
....ತಂದನಾನಾ ।
ಚಾಮುಂಡಮ್ಮ ಮಜ್ಜಣಕೆ ಮದ್ದಾನೆ ಕಳುಹೂವೆ ।
ಚಾಮುಂಡಮ್ಮ ಹಂತ ಹಂತಕೆ ಮುರಿಯ ಕಡಿಸೂವೆ
....ತಂದನಾನಾ ।

ಮೂರು ಸಾವಿರ ರಾಣ್ಯ ಕಟ್ಟಿಕೊಂಡು ।
ದಳವಾಯಿಯವರು ಪಿರಿಯಾಪಟ್ಟಣಕೆ ದಂಡೆತ್ತಿ ಬಂದರು
....ತಂದನಾನಾ ।
ಗಂಗಲಾಲ ಛತ್ರಕೆ ಬಂದರಲ್ಲಾ ....ತಂದನಾನಾ ।
ದಳವಾಯಿಯವರು ಎಲ್ಲಾ ದಂಡನು ಕೂಚು ಕಟ್ಟಿಕೊಂಡು
....ತಂದನಾನಾ ।
ದಳವಾಯಿ ವೀರಾಜೆ ದೊರೆಗೆ ಓಲೆ ಬರೆದಾನು....ತಂದನಾನಾ ।
ಹೇಳಿದ ಮಾತಿನಂತಲ್ಲಾ ವೀರಾಜೆ ಮಾವಣ್ಣ....ತಂದನಾನಾ ।
ದಂಡೆತ್ತಿಕೊಂಡು ಬಂದಿದ್ದೀನೀ....ತಂದನಾನಾ ।

ಮರದ ಮಂಚವ ತಾಳಲಾರದೆ ವೀರಾಜೆ ದೊರೆ ।
ಕಲ್ಲಿನ ಮಂಚದಲ್ಲೊರಗಿ ಮುಲಗ್ಯವರೆ....ತಂದನಾನಾ ।
ಕೋಳಿಕೂಗಿ ಬೆಳಗಾಗ ಹೊತ್ತಿಗೆ
ಹಿರಿಯ ಮಡದಿಗೆ ನಿದ್ರೆ ಹರಿದಿತು....ತಂದನಾನಾ ।
ಪಟ್ಟದ ಮಲ್ಲಮ್ಮ ಕೋಟೆಯಿಂದಲ ಗೋಳ ಕೇಳಿ....ತಂದನಾನಾ।
ಪಟ್ಟದ ಮಲ್ಲಮ್ಮ ದೊರೆಗಳಿದ್ದ ಬಳಿಗೆ ಬರುತಾಳೆ ...ತಂದನಾನಾ ।
ಏಕೆ ದೊರೆಗಳೆ ಯಾತರ ಸುಖನಿದ್ರೆ ...ತಂದನಾನಾ ।
ತಮ್ಮ ಪಟ್ಟಣದ ಕಾಳೆಗದ ಹೊತ್ತಾಯಿತು ಏಳಿರಯ್ಯ
....ತಂದನಾನಾ ।

ತಟ್ಟೆ ತಟ್ಟೆ ದೊರೆಗಳ ಏಳಿಸಿದಳು ಪಟ್ಟದಮಲ್ಲಮ್ಮ
....ತಂದನಾನಾ।
ಕಣ್ಣು ತೀಡಿ ಮಯ್ಯ ಮುರಿದಾನು....ತಂದನಾನಾ ।
ವೀರಾಜೆ ದೊರೆಎದ್ದು ಬಲಗಡೆಗೆ ಕೂತುಕೊಂಡು....ತಂದನಾನಾ ।
ವೀರಾಜೆ ದೊರೆ ಕೋಟೆಯಿಂದಲ ಗೋಳ ಕೇಳಿದ....ತಂದನಾನಾ ।
ತತ್ತರೆಣ್ಣೀ ಚಂದ್ರಾಯುದ ಕತ್ತಿಯ....ತಂದನಾನಾ ।
ಹೊಕ್ಕೆ ಬರುವೆ ಮೈಸೂರರಾಣ್ಯನ....ತಂದನಾನಾ ।

ಮಿಂಚಿದ ಕಾರ್ಯಕ್ಕೆ ಚಿಂತೆಯಾತಕೆ....ತಂದನಾನಾ ।
ಹಾಲು ಅನ್ನವ ಊಟವ ಮಾಡಯ್ಯ....ತಂದನಾನಾ ।
ಈ ಹೊತ್ತಿನ ಜಗಳ ಬೇಡಯ್ಯ....ತಂದನಾನಾ ।
ನನ್ನ ದೊರೆಯೆ ನಾಳೆ ಪ್ರಯಾಣ ಮಾಡಯ್ಯ ।
ಹೆಂಗಸಿನ ಮಾತ ಕೇಳಿ ಉಳಿದಾರೆ....ತಂದನಾನಾ ।
ಮೈಸೂರಿನವರು ಹೇಡಿಯಂತ ಕರೆವಾರು ರಣದಲ್ಲಿ....ತಂದನಾನಾ ।

ಹಾಲು ಅನ್ನವ ಊಟಕೆ ಇಕ್ಕಿದರು....ತಂದನಾನಾ ।
ವೀರಾಜೆ ದೊರೆಗೆ ಹಾಲು ಅನ್ನವ ಊಟಕ್ಕೆ ಇಕ್ಕಿದರೆ
....ತಂದನಾನಾ ।
ಮೂರು ಜನ ಮಡದೀರ ನೆನೆಕೊಂಡು....ತಂದನಾನಾ ।
ಎಂದಿಗೆ ಹುಟ್ಟಿ ಎಂದಿಗೆ ಬೆಳೆದೇವೊ ..ತಂದನಾನಾ ।
ಮೂರು ಜನ ಮಡದಿರೆ ಒಂದಿಗೆ ಉಣ್ಣುವ ಬನ್ನಿರೆಣ್ಣೆ
....ತಂದನಾನಾ ।
ದೊರೆಗಳಾಡಿದ ಮಾತ ಕೇಳಿದರು....ತಂದನಾನಾ ।

ಮಡದಿರು ದೊರೆಗಳಾಡಿದ ಮಾತ ಕೇಳಿ....ತಂದನಾನಾ ।
ಮೂರು ಜನ ಮಡದಿರು ಒಂದೆ ದ್ರುಡದಲಿ....ತಂದನಾನಾ ।
ಒಂದೆ ಮನದಲಿ ಬಲಗಡೆ ಪಟ್ಟದ ಮಲ್ಲಮ್ಮ....ತಂದನಾನಾ।

ವೀರಾಜೆ ದೊರೆಗಳ ಎಡಗಡೆ ಚೆನ್ನಮಲ್ಲಮ್ಮ....ತಂದನಾನಾ ।
ದೊರೆಗಳ ಮುಂದುಗಡೆ ಕೆಂಪಗೌರಮ್ಮ....ತಂದನಾನಾ।
ವೀರಾಜೆ ದೊರೆಗಳ ತೊಡೆಯ ಮ್ಯಾಲೆ ಕಂದವೀರಣ್ಣ
....ತಂದನಾನಾ ।
ಕಯ್ಯಿನ ತುತ್ತು ಬಾಯಿಗೆ ಬಂತಲ್ಲೋ ತಂದನಾನಾ ।
ವೀರಾಜೆದೊರೆ–ಬಾಯಿನ ತುತ್ತು ನೆಲಕೆ ಬೀಳುತಲ್ಲೋ
... ತಂದನಾನಾ ।
ವೀರಾಜೆ ದೊರೆಗೆ–ಹಾಲುಅನ್ನದ ಚುಂಗು ಎದ್ದಿತು... ತಂದನಾನಾ।
ವೀರಾಜೆ ದೊರೆ ತಟ್ಟನೆದ್ದು ಅಂಗಯ್ಯ ತೊಳಕೊಂಡ
....ತಂದನಾನಾ ।

ಜಕಾಯ್ದ ಕತ್ತಿ ತಕ್ಕೊಂಡ—
ಜಗಳ ಮಾಡೋ ಸರದಾರ ಕಂಡಾನು....ತಂದನಾನಾ ।
ಕೆಂಜೆರಗಣ್ಣು ಕ್ವೋರೆ ಮಿಸೆಯ ವೀರಾಜೆ ದೊರೆಗೆ ।
ಹುಲಿಯ ರಾವು ನಿಲ್ಲಬಾರದು....ತಂದನಾನಾ ।

ಅಲ್ಲಿ ಮಿಂಚಿ ಇಲ್ಲಿ ಗುಡುಗಿದ ।
ಇಲ್ಲಿ ಮಿಂಚಿ ಅಲ್ಲಿ ಗುಡುಗಿದ....ತಂದನಾನಾ ।
ಕೈಯೆತ್ತಿ ಮುಗಿದವನ ಬಿಡನಲ್ಲೊ ।
ವೀರಾಜೆದೊರೆ ಕಾಲಿಗೆ ಬಿದ್ದವನ ಬಿಡನಲ್ಲೊ....ತಂದನಾನಾ ।
ಅಣ್ಣನ ಮೇಲೆ ತಮ್ಮನ ಕೊಲ್ವಾನು....ತಂದನಾನಾ ।
ತಮ್ಮನ ಮೇಲೆ ಅಣ್ಣನ ಕೊಲ್ವಾನು ...ತಂದನಾನಾ ।
ದೊಡ್ಡ ದೊಡ್ಡ ಸರದಾರರ ಕೊಂದನಲ್ಲೊ....ತಂದನಾನಾ ।
ವೀರಾಜೆದೊರೆ ರಾಣ್ಯದಲಿ ಮಡದಿರ ನೆನೆಕೊಂಡ....ತಂದನಾನಾ ।

ಚಿನ್ನ ಎನ್ನೊ ಎಂಬಾ ಆಸೆಗೆ ಮೈಸೂರ....ಹುಡುಗರು....
....ತಂದನಾನಾ ।

ಕನ್ನೀರ ಮೈ ಕೈ ಮುಟ್ಟುವರು ತಂದನಾನಾ ।
ಒಡವೆ ಎನ್ನೂವ ಆಸೆಗೆ ಮೈಸೂರುಡುಗರು....ತಂದಾನಾನಾ ।
ಮಡದಿರ ಮೈ ಕೈ ಮುಟ್ಟುವರು....ತಂದನಾನಾ ।
ಮೈಸೂರ ಹುಡುಗರು ಅರಮನೆಗೆ ಹೋಗಿ
ಮಡದಿರ ಮೈ ಕೈ ಮುಟ್ಟುವರು....ತಂದನಾನಾ ।

ಮಡದಿರ ಕೊಲ್ಲುವನೆಂದು....ತಂದನಾನಾ ।
ತಾಮುಂದು ಹಿಂದಕೆ ಬಂದನಲ್ಲಾ....ತಂದನಾನಾ ।
ಬನ್ನಿ ಬನ್ನಿರೇ ನನ್ನ ಮಡದಿರಾ....ತಂದನಾನಾ ।
ಬನ್ನಿರೆಣ್ಣೆ ಎಂದು ಕರೆದನು ವೀರಾಜ....ತಂದನಾನಾ ।
ದೊರೆಗಳಾಡಿದ ಮಾತ ಕೇಳಿದರು ।
ಮೂರು ಜನ ಮಡದಿರು ತಂದನಾನಾ ।
ಮೂರು ಜನ ಮಡದಿರು ದೊರೆಗಳ ಎದುರಿಗೆ ಬಂದರು
....ತಂದನಾನಾ ।

ಮಕ್ಕಳುಟ್ಟು ವರು ಮನೆಯ ಕಟ್ಟುವರು .. ತಂದನಾನಾ ।
ನನ್ನ ಮಡದಿ ಮಗ ಹುಟ್ಟ ಮುಂದಕೆ ಬರಬೇಕು ...ತಂದನಾನಾ ।
ನನ್ನ ಮಡದಿ ಮಗ ಹುಟ್ಟೆಹಾಳಾಗಿ ಹೋದನಲ್ಲೊ ...ತಂದನಾನಾ।
ಈಗ ಕಳುಹಲೇನು ಮಡದಿರಾ ।
ನಿಮ್ಮ ತೌರೂರುಗಳಿಗೆ ...ತಂದನಾನಾ ।
ನೀವು ಕಂದ ವೀರಣ್ಣನ ಸಾಕಿಕೊಳ್ರಿ ...ತಂದನಾನಾ ।
ಕಂದ ವೀರಣ್ಣನ ಸಾಕಿದಾರೆ ರಾಜ್ಯವನಾಳುವ....ತಂದನಾನಾ ।
ಕಂದ ವೀರಣ್ಣ ಧೀರನಾಗಿ ಪಟ್ಟಣನಾಳುವ ತಂದನಾನಾ ।
ಅಣ್ಣಾ ನನ್ನವನಾದಾರೆ ಅಣ್ಣನ ಹೇಡತಿ ನನ್ನವಳಾದಳ
....ತಂದನಾನಾ ।
ಬಾಳಿ ಕೆಟ್ಟು ಬಾಗಲಿಗೆ ಹೋದಾರೆ ...ತಂದನಾನಾ ।

ಅತ್ತಿಗನ್ಮನವರು ಬಾಗಿಲ ಕಸವ ಗುಡಿಸಲಿ ಎನ್ನುವರು
....ತಂದನಾನಾ ।
ಅತ್ತಿಗನ್ಮನವರು ಹಾಳೇಲಿ ಅಂಬಲಿ ಹುಯ್ಯುವರು
....ತಂದನಾನಾ ।

ಆ ಬಾಳನೆ ನಾವು ಬಾಳಲಾರೋ....ತಂದನಾನಾ ।
ಈನಾಯ ಬರುವುದು ರಾಜ್ಯವಂಶಕೆ... ತಂದನಾನಾ ।
ಬದುಕುವಂತ ಬುದ್ಧಿ ಹೇಳಯ್ಯ... ತಂದನಾನಾ ।
ನನ್ನ ದೊರೆಯೆ ಬದುಕುವಂತ ಉಪಾಯ ಹೇಳೆಯ್ಯ....ತಂದನಾನಾ।
ಬಾಳುವಂತ ಧೈರ್ಯ ಹೇಳಯ್ಯ ತಂದನಾನಾ ।
ನನ್ನ ದೊರೆಯೆ ಬಾಳುವಂತ ತೆರನ ಹೇಳಯ್ಯ....ತಂದನಾನಾ ।
ಮದ್ದು ಕುಡಿದು-ನೇಣಹಾಕಳಿರೆ . ತಂದನಾನಾ ।
ನೀವು ರಾಣಿಗಳಿರಾ—ಮುದ್ದು ಕುಡಿದು ನೇಣನಾಕಳಿರೆ
....ತಂದನಾನಾ ।
ನೀರು ತುಂಬದ ಬಾವೀಲಿ ಬಿದ್ದು ಪ್ರಾಣಬಿಡಿರೆಣ್ಣೆ .. ತಂದನಾನಾ।
ಮದ್ದು ಕುಡಿದು ನಾವು ನೇಣ ಹಾಕೋದ್ಕೆ....ತಂದನಾನಾ ।
ಬಿದ್ದು ಬಿದ್ದು ನಾವು ಪ್ರಾಣ ಬಿಡುವುದ್ಕೆ .. ತಂದನಾನಾ ।
ಮೀಸೆ ನಿನ್ನೊಳಗೆ ಇಲ್ಲವಯ್ಯ....ತಂದನಾನಾ ।
ನನ್ನ ದೊರೆಯೆ ರೋಸ ನಿನ್ನೊಳಗಿಲ್ಲವಯ್ಯ... ತಂದನಾನಾ ।
ಆ ಬಾಳನೆ ನಾವು ಬಾಳಲಾರೋ ನನ್ನ ದೊರೆಯೆ....ತಂದನಾನಾ ।
ಮನ್ನಾಣಬೇಡ ಮಡದೀರ ಕೊಲ್ಲಯ್ಯ .. ತಂದನಾನಾ ।

ಕೈಯೆತ್ತಿ ನಾನು ಹೊಡೆದವನಲ್ಲಲ್ಲಾ....ತಂದನಾನಾ ।
ನನ್ನ ಮಡದಿರ ಬಾಯೆತ್ತಿ ಬೈಯ್ದವನಲ್ಲಲ್ಲಾ .. ತಂದನಾನಾ ।
ನಿಮ್ಮ ತಂದೆ ಪಟ್ಟಣಕೆ ಹೋಗದಿದ್ರೆ ಕಷ್ಟಬಂದಿತು....ತಂದನಾನಾ।
ನಿಮ್ಮ ತಾಯಿ ತವರೀಗೆ ಕಳುಹಲೇನೆಣ್ಣೆ... ತಂದನಾನಾ ।

ಮೂರು ಜನ ಮಡದಿರಾ ಕಂದ ವೀರಣ್ಣನ ಸಾಕಿಕೊಳ್ರೆ
....ತಂದನಾನಾ ।
ಕಂದ ವೀರಣ್ಣನ ಸಾಕಿದಾರೆ....ತಂದನಾನಾ ।
ಕಂದ ವೀರಣ್ಣ ಧೀರನಾಗಿ ರಾಜ್ಯವನಾಳುವ....ತಂದನಾನಾ ।
ಗಂಡಸತ್ತ ಮುಂಡೆರಿವರೆಂದು....ತಂದನಾನಾ ।
ಅತ್ಯಮ್ಮನವರು ಹಾಳುದ್ದ ಹಳ್ಳವ ತೆಗಿಸುವರು....ತಂದನಾನಾ ।
ಅತ್ಯಮ್ಮನವರು ಮೇಳೆ ತನಕ ಮರಳ ಹುಯಿಸುವರು
....ತಂದನಾನಾ ।
ಅತ್ಯಮ್ಮನವರು ಸೊಸೆಗಳ ಮುಂದೆಲೆಯ ಎಳೆವಾರು
....ತಂದನಾನಾ ।

ಕೊಂದರೆ ನಮ್ಮ ಪ್ರಾಣವಕೊಲ್ಲಪ್ಪ....ತಂದನಾನಾ ।
ಕೊಲ್ಲದಿದ್ದರೆ–ನಿನ್ನ ಕೊಂದು ನಾವು ಕಡೆಗೆ ಸಾಯುತ್ತೀವಿ
....ತಂದನಾನಾ ।
ಆಗ ಪಟ್ಟದ ಮಲ್ಲಮ್ಮ ನಡೀನಲ್ಲಿದ್ದ....ತಂದನಾನಾ ।
ಬಾಕನೆಳಕೊಂಡು ಹೃದಯವ ಇರಿದಾಳು ...ತಂದನಾನಾ ।
ಕತ್ತಿ ವರಿಸೆ ಕಂಡಿದ್ದ ಮನಿಗಾರ ವೀರಾಜ....ತಂದನಾನಾ ।
ರಾಣಿ ಹೊಡೆದ ಏಟ ತಪ್ಪಿಸಿಕೊಂಡನಲ್ಲಾ....ತಂದನಾನಾ ।
ದೊರೆಗಳ ಹೊಟ್ಟೆಯಲ್ಲಿ ಹುಟ್ಟಲ್ಲೆ....ತಂದನಾನಾ ।
ಪಟ್ಟದ ಮಲ್ಲಮ್ಮ ಹಿಂಗ್ಯಾಕೆ ಉಂಟು ಇಷ್ಟು ವಾಂಚಾಲ
....ತಂದನಾನಾ ।
ನನ್ನ ಪ್ರಿಯೆ ಮೊದಲ ಏಟಗೆ ನೀನೆ ಬಾರ್ದೆಣ್ಣೆ ...ತಂದನಾನಾ ।
ದೊರೆಗಳಾಡಿದ ಮಾತ ಕೇಳಿದ ಪಟ್ಟದಮಲ್ಲಮ್ಮ....ತಂದನಾನಾ ।
ಗಂಡುಗಚ್ಚೆ ದುಂಡುಡಗೆ ಸುತ್ತಿಕೊಂಡು....ತಂದನಾನಾ ।
ಪಟ್ಟದ ಮಲ್ಲಮ್ಮ ದೊರೆಗಳಿಗೆತ್ತಿ ಸಲಾಮು ಮಾಡಿದಾಳು
....ತಂದನಾನಾ ।

ಸಲಾಮು ಮಾಡೋ ಮಡದಿ ಕಂಡೆನಲ್ಲಾ....ತಂದನಾನಾ ।
ವೀರಾಜೆ ದೊರೆ ಹೊಡೆದನಲ್ಲಾ ಎರಡು ತುಂಡಿಗೆ....ತಂದನಾನಾ ।
ಒಬ್ಬಳನೆ ಕೊಂದೆನಲ್ಲಪ್ಪ ವೀರಾಜೇ ದೊರೆ....ತಂದನಾನಾ ।
ಇನ್ನೊಬ್ಬಳ ಕರೆತನಲ್ಲಾ....ತಂದನಾನಾ ।
ದೊರೆಗಳಾಡಿದ ಮಾತ ಕೇಳಿದಳಲ್ಲಾ ।
ಚನ್ನಮಲ್ಲಮ್ಮ ದೊರೆಗಳ—ಎದುರಿಗೆ ಬಂದಳಲ್ಲಾ....ತಂದನಾನಾ।
ಎದುರಿಗೆ ಬರುವ ಮಡದಿನ ಕಂಡೆನಲ್ಲಾ....ತಂದನಾನಾ ।
ವೀರಾಜೆ ದೊರೆ ಹೊಡೆದನಲ್ಲಾ ಎರಡೆತುಂಡಿಗೆ....ತಂದನಾನಾ ।
ಇಬ್ಬರ ಮಡದಿರ ಕೊಂದೆನಲ್ಲಪ್ಪ....ತಂದನಾನಾ ।
ವೀರಾಜೆ ದೊರೆ ಇನ್ನೊಬ್ಬಳ ಕರೆತನಲ್ಲಾ....ತಂದನಾನಾ ।
ಮೊದಲು ನಿನ್ನ ಕಂದನ ತಾರ್ಹೆಣ್ಣೇ....ತಂದನಾನಾ ।
ಕೆಂಪಗೌರೀ–ಮೇಲಕೆ ಎಸೆದು ಕತ್ತಿಯೊಡ್ಡುವೆ....ತಂದನಾನಾ ।
ಕಂದ ವೀರಣ್ಣನ ಕತ್ತು ಕುಯ್ದು ನಾನು ರಾಣ್ಯಕೆ ಎಸೆಯುವೆ
....ತಂದನಾನಾ ।

ಹೆತ್ತ ಒಡಲ ಹೇಗೆ ತಡೆಯಲೋ ।
ನನ್ನ ದೊರೆಯೆ–ನನ್ನ ಕೊಂದು ಏನಾರ ಮಾಡಯ್ಯ
....ತಂದನಾನಾ ।

ನಿನ್ನ ಕೊಲ್ಲುವುದಕೆ ಕತ್ತಿ ಎತ್ತಿದರೆ ...ತಂದನಾನಾ ।
ಕಂದವೀರಣ್ಣ ಓಡಿಬಂದು ನನ್ನ ನಡುವ ತಬ್ಬುವ....ತಂದನಾನಾ ।
ಎತ್ತಿದ ಕತ್ತಿ ಇಳದೆ ಹೋಯಿತಾವೆ ತಂದನಾನಾ ।
ನಾನು ತುಪ್ಪ ಅನ್ನವ ಊಟಕ್ಕೆ ಬಡಿಸುವೆ.... ತಂದನಾನಾ ।
ಪುತ್ರ ಕೆಳಕ್ಕೆ ಇಳಿಯಯ್ಯ... ತಂದನಾನಾ ।
ನಾನು ಹಾಲು ಅನ್ನವ ಊಟಕ್ಕೆ ಬಡಿಸುವೆ . ತಂದನಾನಾ ।
ಬಾಲವೀರಣ್ಣ ನೀನು ಕೆಳಕ್ಕೆ ಇಳಿಯಯ್ಯ ।

ತಾಯಿಯಾಡಿದ ಮಾತುಕೇಳಿ....ತಂದನಾನಾ ।
ಓಡಿಬಂದು ಮಾತುಕೇಳಿ....ತಂದನಾನಾ ।
ಬಾಲವೀರಣ್ಣ ಓಡಿಬಂದು ತಾಯಿ ತಬ್ಬಿಕೊಂಡ....ತಂದನಾನಾ ।
ತಾಯಿ ಬೇರೆ ಮಾಡಿದರಲ್ಲಪ್ಪ....ಮೈಸೂರ್ ದೊರೆಗಳು ।
ತಂದೆ ಬೇರೆ ಮಾಡಿದರಲ್ಲಯ್ಯ....ತಂದನಾನಾ ।
ಮೈಸೂರ್ ದೊರೆಗಳು–ಕಂದನ ಬೇರೆ ಮಾಡಿದರಲ್ಲಯ್ಯ
....ತಂದನಾನಾ ।
ಮನೆದೇವರ ದೇವಸ್ಥಾನಕೆ ಓಡಿದಕಂದ–ವೀರಣ್ಣ
....ತಂದನಾನಾ ।
ಓಡಿಹೋಗಿ ಕಲ್ಲುಬಾಗಿಲು ಹೊಚ್ಚಿಕೊಂಡ....ತಂದನಾನಾ ।

ನಮ್ಮ ಗೋಳು ತಗಲಬಾರದೆ–ಮೈಸೂರ ದೊರೆಗಳಿಗೆ
....ತಂದನಾನಾ ।
ಹತ್ತೆಂಟು ಮಕ್ಕಳುಟ್ಟದರೆ–ಮೈಸೂರ್ ದೊರೆಗಳಿಗೆ ।
ಪಟ್ಟಕೆ ಒಂದು ಸುಳಿಯೆ ಉಳಿಯಾಲೀ....ತಂದನಾನಾ ।
ಮೈಸೂರ ದೊರೆಗಳಿಗೆ ಒಂದುಸಾರಿ ದತ್ತುಆಗಲೀ....ತಂದನಾನಾ।
ಮೈಸೂರ–ರಾಜವಂಶದ ಯಾವರಾಜರ ಕಾಲಕು....ತಂದನಾನಾ ।
ಮೈಸೂರ ದೊರೆಗಳಿಗೆ ಹತ್ತಿದ ಜಗಳ ಹರಿಯದೆ ಹೋಗಲಿ
....ತಂದನಾನಾ ।
ಎಂದವಳು ಶಾಪ ಕೊಟ್ಟಾಳೆ....ತಂದನಾನಾ ।

ರಾಣಿ ಕೆಂಪಗೌರಿ ಶಾಪ ಕೊಟ್ಟಾಳೆ....ತಂದನಾನಾ ।
ಭಂಡಾರದ ಅರಮನೆ ಬೀಗಕ್ಕೆ ಶಾಪ ಕೊಟ್ಟಾಳೆ....ತಂದನಾನಾ ।
ಆ ಆನೆ ಏಟಿಗೆ ಅಳ್ಳಾಡಬೇಡವೋ....ತಂದನಾನಾ ।
ನಾನು ಹಾಕಿದ ಬೀಗ ಪಿರಂಗಿ ಏಟಿಗೆ ಜಗ್ಗಬೇಡವೋ
....ತಂದನಾನಾ ।

ಬಂಧು–ಬಳಿಗದವರು ಬಂದು ಬಾಗಿಲು ತೆಗಿದರು
....ತಂದನಾನಾ ।
ನಾನು ಹಾಕಿದ ಬೀಗ ತಾನೆ ತಾನಾಗಿ ಸಡಿಲಾಲೀ....ತಂದನಾನಾ।
ಕದಗಳ ಬೀಗಕ್ಕೆ ಒಳ ಶಾಪಕೊಟ್ಟಾಳು....ತಂದನಾನಾ ।
ದೊರೆಗಳ ಎದುರಿಗೆ ಬರುತಾಳೆ....ತಂದನಾನಾ ।
ಎದುರಿಗೆ ಬರುವ ಮಡದಿನ ಕಂಡೆನಲ್ಲಾ....ತಂದನಾನಾ ।
ಇಬ್ಬರ ಮಡದಿರ ಒಂದು ಕಣ್ಣಲ್ಲಿ ಕಂಡಿದ್ದೆ....ತಂದನಾನಾ ।
ಕೆಂಪಗೌರೀ–ನಿನ್ನೊಬ್ಬಾಳೆ ಒಂದು ಕಣ್ಣಲ್ಲಿ ಕಂಡಿದ್ದೆ
....ತಂದನಾನಾ ।

ಹಿರಿಯ ಅಕ್ಕದಿರಾ ಕೊಂದೆಯೆಲ್ಲಾ....ತಂದನಾನಾ ।
ಮಹಾಪ್ರಭು–ನನ್ನ ಪ್ರಾಣವಕೊಂದುಹೋಗಯ್ಯ....ತಂದನಾನಾ।
ಮೂರನೆ ಮಡದಿ ಮಾತ ಕೇಳಿದ–ವೀರಾಜೆ ದೊರೆ....ತಂದನಾನಾ।
ಹೊಡೆದೆನಲ್ಲಾ ಎರಡೆ ತುಂಡಿಗೆ....ತಂದನಾನಾ ।
ನಮ್ಮ ಕೊಂದೆ ಎಂದು ನಿಮಗ್ಯಾಕೆ ಕಡುಚಿಂತೆ....ತಂದನಾನಾ ।
ನಾನು ಬರುತ್ತೀನಿ ನಿಮ್ಮ ಜೊತೆಯಲ್ಲೀಗಲೆ....ತಂದನಾನಾ ।
ನಾನು ಬರುತ್ತೀನಿ ನಿಮ್ಮ ಜೊತೆಯಲ್ಲಿ ಎಂದು ।
ವೀರಾಜೆ ದೊರೆ ಕತ್ತಿಯೊಳಗೆ ಹೊಡೆದೆ ಕೊಂಡನಲ್ಲಾ
....ತಂದನಾನಾ ।
ವೀರಾಜೆ ದೊರೆ ಹೊಡದೆ ಕೊಂಡನಲ್ಲಾ....ತಂದನಾನಾ ।

ಪಿರಿಯಾಪಟ್ಟಣ ತಮ್ಮ ವಾಸಕೆ ಮಾಡಿಕೊಂಡು
....ತಂದನಾನಾ ।
ಮೈಸೂರವರು–ಮೈಸೂರಿಗೆ ಜಯಭೇರಿ ಹೊಡೆಯುತ–ಸಾಗಿ
ಬಂದರಲ್ಲಾ....ತಂದನಾನಾ ।
ದಳವಾಯಿ ಆಡಿದ ಮಾತ ಕೇಳಿದರು ಹೆತ್ತ ಯ್ಯನವರು ।

ಏನಂತ ಮಾತ ನುಡಿದರು... ತಂದನಾನಾ ।
ಕೊಡುಮುಲೆನಾಡಿನ ರಾಜ್ಯಕ್ಕೆ ಗಡಿಯಾವುದೆಂದರೆ ।
ಬೆಡಗೀನಂತ ಪಿರಿಯಾಪಟ್ಟಣ....ತಂದನಾನಾ ।
ಬೆಡಗೀನಂತ ಪಿರಿಯಾಪಟ್ಟಣಕೆ ದೊರೆಯಾರೆಂದರೆ ।
ಹೆಚ್ಚಿನ ದೊರೆ ಮೈಸೂರ್ ದಳವಾಯಿ ದೊರೆಯುವುದು
....ತಂದನಾನಾ ।

ತಂದನಾನಾ—ತಂದನ್ನ ತಾನಾನಾ
ತಂದೇನಾನಾ—ತಂದನ್ನ—ತಾನಾನಾ ।





—ನಾಲ್ಕು

ಚೆನ್ನಿಗ ಜೋಗಯ್ಯ
ಮತ್ತು ಇತರ ಹಾಡುಗಳು





ಕೋಳೂರ ಕೊಡಗೂಸು

ಕರುಣವ ಬೀರಿ ಕರುಣಾದಿ ನೋಡಯ್ಯ
ಯ್ಯಾತಕೆ ಕಳ್ಳಾಟ ಆಡುವೆ । ನೀ ಕುಡಿಯದೆ
ನಾ ನಿನ್ನ ಬಿಡನಯ್ಯ ಮುಲ್ಲಯ್ಯ ॥

ಅನೇಕ ವಿಮರ್ಶಕರು ಯಶಸ್ವಿಯಾಗಿ ಎತ್ತಿ ತೋರಿಸಿರುವಂತೆ ಈ ಜನಪದ ಸಾಹಿತ್ಯ ಅಭೂತಪೂರ್ವವಾಗಿ ಹೃದಯಂಗಮವಾಗಿರುವುದಕ್ಕೆ, ಕಾಂತಾಸಮ್ಮಿತವಾಗಿರುವುದಕ್ಕೆ, ಉತ್ತಮ ವರ್ಗದ ಭಾವಗೀತೆಗಳಾಗಿರುವುದಕ್ಕೆ ಕಾರಣವನ್ನು ವಿವೇಚಿಸಿದಾಗ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಮೊದಲನೆಯದು ಇವು ಜನಜೀವನಕ್ಕೆ ನೇರವಾಗಿ ಸಂಬಂಧಿಸಿರುವುದು; ಎರಡನೆಯದು ಇವುಗಳಲ್ಲಿ ಬಹು ಪಾಲಿನವು ಜನ ಆಂದಂದು ಆಡುವ ಭಾಷೆಯಲ್ಲಿ ಹಾಡಲ್ಪಟ್ಟಿರುವುದು. ಕವಿ ವರ್ಡ್ಸ್‌ವರ್ತ್ ತಾನು ತನ್ನ ಕಾವ್ಯವಸ್ತುವನ್ನಾಗಿ ಗ್ರಾಮದ ಸಾಮಾನ್ಯಜನರ ಜೀವನವನ್ನು ಘಟನೆಗಳನ್ನು ಏಕೆ ಆರಿಸಿಕೊಳ್ಳುತ್ತೇನೆ ಎಂಬುದನ್ನು ವಿವರಿಸುತ್ತ ಕೊಡುವ ಕಾರಣಗಳು ಇವುಗಳಿಗೂ ಅನ್ವಯಿಸುತ್ತವೆ. ಗ್ರಾಮದ ಜನರ ಹೃದಯದ ಮೂಲ ಭಾವಗಳು ಯಾವ ಕೃತಕತೆಗೂ ಎಡೆಗೊಡದೆ, ಇರುವುದು ಇದ್ದಂತೆಯೇ ಹೊರ ಹೊಮ್ಮುತ್ತವೆ; ಹಾಗೆ ಹೊರಹೊಮ್ಮುವಾಗ ಅತ್ಯಂತ ಶಕ್ತಿಪೂರ್ಣವಾಗಿ ಹೊರ ಹೊಮ್ಮುತ್ತವೆ.

"Humble and rustic life was generally chosen, because, in that condition, the essential passions of the heart find a better soil in which they can attain their maturity, are less under restraint, and speak a plainer and more emphatic language..."

ಅಲ್ಲದೆ ಸಹಜ ಕವಿಗಳಾದ ಆ ಜನ ಕಣ್ಣು ತೆರೆದು ಸುತ್ತಲೂ ಪ್ರಕೃತಿಲೋಕವನ್ನೂ, ಜನಜೀವನವನ್ನೂ ನೋಡಿ ಹೊಸ ಹೊಸ ಚಿತ್ರಗಳನ್ನು ನೀಡುತ್ತಾರೆ. ಒಮ್ಮೊಮ್ಮೆ ತಮ್ಮ ಹೃದಯದಾಳಕ್ಕೆ ಮುಳುಗಿ ತಮ್ಮ ಸ್ವಂತ ಸುಖದುಃಖಗಳ ಭಾವಗಳನ್ನು ಸುಂದರವಾದ ಮಾತುಗಳಲ್ಲಿ ನೀಡುತ್ತಾರೆ. ಆದುದರಿಂದಲೇ ಅವುಗಳಲ್ಲಿ ಅನೇಕ ಹೃದಯಂಗಮವಾದ ಭಾವಗೀತೆಗಳನ್ನು ನಾವು ಕಾಣುತ್ತೇವೆ.

ಮಹಾಕಾವ್ಯಗಳಂತೆಯೇ ಇವು ಕೂಡ ನಾಡಿನ ಜನರ ಅಮೂಲ್ಯವಾದ ಭಂಡಾರ. ಇವೇ ಮಹಾಕಾವ್ಯಗಳ, ಏಕೆ ಎಲ್ಲ ಕಾವ್ಯಗಳ ತಾಯಿ ಎಂದು ಕೂಡ ಹೇಳುವವರುಂಟು .....

"...The Folk-tale is the father of all fiction, and the Folk-song is the mother of all poetry."

—ಡಾ|| ಪ್ರಭುಶಂಕರ, ಎಂ.ಎ.ಪಿಎಚ್.ಡಿ.

*

ಕೋಳೂರ-ಕೊಡಗೂಸು*

ಕಸವ ಗುಡಿಸಿವ್ನಿ ಹೊಸ ಮಂದಲಿಗೆ ಹಾಸಿವ್ನಿ
ಪರಶಿವನ ವಚನ ಪೇಳುವರಿಂದು । ಧ್ಯಾನದಲಿ ಕೇಳಿದರೆ
ಎಲ್ಲಾ ಭಾಗ್ಯವು ನಮಗುಂಟು ॥

ಇರುಳಿ ಚೆನ್ನಿರುಳಿ ತಾಳೆಲ್ಲ ನವರತುನ
ತಾಯಿ ಸರಸ್ವತಿಯೆ ನುನೆಮುಂದೆ । (ಯ) ಬಾಗಿಲ ಮುಂದೆ
ಕೊಂಡಾಡುವರು ಸತ್ಯವಂತ ಹೆಣ್ಣಿನ ಕತೆಯ ॥

ಕೊಳೂರಲ್ಲೊಂದು ಏಳು ವರ್ಷದ ಹೆಣ್ಣುಟ್ಟಿ
ಕಡು ಜಾಣೆ ಕನ್ನಡಿಯ ಮುಖದವಳು । ಬೋಳು ಮಲ್ಲಯ್ಯನಿಗೆ
ನಿತ್ಯ ನೇಮದಿ ಮಾಡಿದ ಪೂಜೆ ಹಸನಾದೊ ॥

ಬಾಲಕಿ ಕಿರಿಯೊಳು ರಂಗಬೊಂಬೆಯಂತಿದ್ದವಳು
ಬೆಳಗಿ ಬರುವ ಬೆಳಗಿನ ಸೂರ್ಯನ ಕಿರಣಗಳಂತೆ । ಬೆಳಗಿದವಳ
ಶಿವ ಆನಂದದಿಂದಲಿ ಅವಳೊಲಿದ ॥

ಸತ್ಯ ಸತ್ಯವಂತರ ವಚನ ನಿಚ್ಚಉಂಟಾಗುವುದೊ
ಮಕ್ಕಳಿಗೊತ್ತು ಮನೆಗ್ಹೋಳಿ । ಬಾರೆಂದೂರಿಗೆ
ಹಟ್ಟೀಲಲ್ಲವೆ ಯಮಗೊಂಡ ॥

ದೇವ ದೇವಗಳ ವಚನ ಯಾವಾಗ ಉಂಟಾಗುವುದೊ
ಮಾವ ಬಂದತ್ತೊ ಮನೆಗ್ಹೋಳಿ । ಬಾರೆಂದೂರಿಗೆ
ಬಾಗಿಲಲ್ಲವೆ ಯಮಗೊಂಡ ॥

---

*ಈ ಜಾನಪದ ಕಥನ ಗೀತವನ್ನು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೋಕಿನ ಹಳ್ಳಿಗಳಲ್ಲೂ ಕನಕಪುರ ತಾಲ್ಲೋಕಿನ ಹಳ್ಳಿಗಳಲ್ಲೂ–ಹೆಂಗಸರು ರಾಗಿ ಬೀಸುವಾಗ ಹಾಡುವರು.

ಅಡ್ಡ ಮಾತಾಡೋರು ದೊಡ್ಡನುಡಿಯ ನುಡಿಯೋರು
ನಿದ್ರೆಗಣ್ಣಲ್ಲಿ ಜಡವೇರೋರು । ನೀವೆಲ್ಲ
ಎದ್ದೋಗ್ರೆ ನಿಮ್ಮ ಮನೆಗ್ಹಾಗಿ ॥

ಕಾಳಗದ ಕತೆಯಲ್ಲ ಊಳುಗದ ಮಾತಲ್ಲ
ಕೋಳಿ ಹೋದಮ್ಮನ ಕತೆಯಲ್ಲ । ಈ ಕತೆ
ಗ್ಯಾನದಲಿ ಕೇಳಿ ಫಲವುಂಟು ॥

ಹೇಳಿದಮ್ಮನಿಗೆ ಹತ್ತು ಕೇಳಿದಮ್ಮನಿಗೆ ಹನ್ನೊಂದು
ಸುವ್ವೀ ಎಂದಮ್ಮನಿಗೆ ಹರುಳೋಲೆ । ಹಸ್ತಕಡಗ
ಗಿರಿಯ ಮಲ್ಲಯ್ಯ ಕಳುಹವರೆ ॥

(ತಮ್ಮನ ಮದ್ವೆಗಾಗಿ ತನ್ನ ಒಡಹುಟ್ಟಿದ ಅಕ್ಕನನ್ನು
ಕರೆಯಲು ಅಕ್ಕನ ಮನೆಗೆ ಬಂದಿದ್ದಾನೆ ಅಣ್ಣಯ್ಯ)

ಹೇಗೆ ಬರಲೊ ತಮ್ಮ ಏಳೆಮ್ಮೆ ಜೊನ್ನಿಗೆ
ಹಟ್ಟೇಲಿ ಕರುನೂರು । ಮರಿನೂರು
ಹೇಗೆ ಬರಲಣ್ಣ ಮದುವೇಗೆ ॥

ಕರುವ ಕಾಯಲು ಕಿರಿತಮ್ಮನ ಕಳುಹೂವೆ
ಮಾಯೆ ಕಾರೆಂಬ ಮನೆಮಗಳ-ಕರೆಕೊಂಡು
ಮರೆಯದೆ ಬಾರಕ್ಕ ಮದುವೇಗೆ ॥

ಹೇಗೆ ಬರಲೋ ತಮ್ಮ ಎಂಟೆಮ್ಮೆ ಜೊನ್ನಿಗೆ
ಹಟ್ಟೇಲಿ ಕರುನೂರು । ಮರಿನೂರು
ಎಂತು ಬರಲೊ ತಮ್ಮ ಮದುವೇಗೆ ॥

ನಿನ್ನ ಎಮ್ಮೆ ಕಾಯಲು ಚೆನ್ನವ್ವ ಕಳುಹೂವೆ
ಸತ್ಯವಂತೆ ಮನೆ ಮಗಳ । ಕರೆಕೊಂಡು
ಮತ್ತೆ ಬಾರಕ್ಕ ಮದುವೇಗೆ ॥

ಹತ್ತಿ ಬಿಡಿಸಿಲ್ಲ ಅಳುಕಾಯಿ ಮುರಿಲಿಲ್ಲ
ತಿಟ್ಟವ್ಯಾಗಳ ಕಡಲೆ ಕೀಳಲಿಲ್ಲ । ತಮ್ಮಯ್ಯ
ಹೇಗೆ ಬರಲೊ ತಮ್ಮನ ಮದುವೇಗೆ ॥

ಹತ್ತಿ ಬಿಡಿಸೇನು ಅಳುಕಾಯಿ ಮುರಿಸೇನು
ತಿಟ್ಟ ವ್ಯಾಗಳ ಕಡಲೆ ಕೀಳಿಸ್ಹೇನು । ಅಕ್ಕಯ್ಯ
ಮರೆಯದೆ ಬಾರಕ್ಕ ಮದುವೇಗೆ ॥

ತಳ್ಳು ತರಿಯಲಿಲ್ಲ ತೊಗರಿ ಮುರಿಯಲಿಲ್ಲ
ಕೆಂಬತ್ತಿ ಗದ್ದೆ ಕೊಯಲಿಲ್ಲ । ತಮ್ಮಯ್ಯ
ಎಂತು ಬರಲೋ ತಮ್ಮಯ್ಯ ಮದುವೇಗೆ ॥

ತಳ್ಳು ತರಿಸ್ಹೇನು ತೊಗರಿ ಮುರಿಸ್ಹೇನು
ಕೆಂಬತ್ತಿ ಗದ್ದೆಯ ಕೊಯ್ಸೇನು । ಅಕ್ಕಯ್ಯ
ಮತ್ತೆ ಬಾರಕ್ಕ ಮದುವೇಗೆ ॥

ಅಂಗಳ ಸಾರಿಸುವರಿಲ್ಲ ರಂಗೋಲೆ ಬಿಡುವರಿಲ್ಲ
ನಿಂಗಾಜಿ ಎಂಬ ಮನೆಮಗಳ । ಕರೆಕೊಂಡು
ಹೇಗೆ ಬರಲಣ್ಣ ಮದುವೇಗೆ ॥

ಎಲ್ಲರಿಗೂ ಹಿರಿಯೋಳೆ ಮಲ್ಲಿಗೆ ತುರುಬೋಳೆ
ಎಲ್ಲರಿಗಿಂತ ಕಿರಿಯೋಳ । ಮದುವೇಗೆ
ನೀವೆಲ್ಲಾ ಬಂಧುಗಳು ಬರಬೇಕು ॥

ಶಿವಪೂಜೆಯ ಬಿಟ್ಟು ಅವರ್ಹೆಂಗೆ ಬಂದಾರೊ
ಅವರಿಲ್ಲದೆ ನಾನ್ಹೇಗೆ ಬರಲೊ । ತಮ್ಮಯ್ಯ
ಮನೆಮಗಳು ಚಿಕ್ಕೋಳ ಕರೆಕೊಂಡುಹೋಗೊ ಮದುವೇಗೆ॥

ಚಿಕ್ಕೋಳು ಮುಯ್ಯ ಇಕ್ಕಿದರೆ ಒಪ್ಪುವರು ಮಲ್ಲಯ್ಯ
ಹೆತ್ತ ತಾಯಿ ಹೋಗಿ ಮದುವೇಗೆ । ಪರಮೇಶ್ವರನ
ನಾ ಎಚ್ಚರಿಸಿ ಹಾಲ ಸಲಿಸೇನು ॥

(ಮಗಳ ಬಯಕೆಯಂತೆ ಅಂತು ಇಂತು ಮದುವೆಗೆ ಹೋಗಲು ಒಪ್ಪಿದರು ತಂದೆ ತಾಯಿಗಳು–ಊರಿನಿಂದ ಹೋಗುವ ಮುನ್ನ ತಮ್ಮ ಮಗಳಿಗೆ ಸಂನಾರದ ಕರ್ತವ್ಯ ಗಳನ್ನು ಈ ರೀತಿ ಅರುವಿದರು.)

ನಾ ಹೋತ್ಗೀನಿ ಹೊಸ್ತಿಲೆ ಹೋಗ್ತಿನಿ ಬಾಗಿಲೆ
ನಾಗೋಲೆ ಬರೆವ ನಡುಮನೆ । ಜೋತ್ಯಮ್ಮ
ನಾ ಹೋಯ್ತೀನಿ ನನ್ನ ತವರೀಗೆ ॥

ಆಯದ ಅಡ್ಡಗೋಡೆ ಛಾಯದ ಹೊನ್ನ ಜಗುಲಿ
ಎಂತೆಂಬ ಪ್ರಣಯ ಸೊಬಗಿನ । ಸಾದನುದಿಗೆ
ಹೋಯ್ತೀನಿ ನನ್ನ ತವರೀಗೆ ॥

ಅಂತದ ಅಡ್ಡಗೋಡೆ ಜಂತದ ಹೊನ್ನುಜಗಲಿ
ಎಂತೆಂಬ ಪ್ರಣಯ ಸೊಬಗಿನ । ಸಾದನುದಿಗೆ
ಹೋಯ್ತೀನಿ ನನ್ನ ತವರೀಗೆ॥

ನಾದ್ಹೋಟ ನಾಗಸಂಪಿಗೆ ಅಲ್ಲಿ ಹೋದರೆ
ಉರಿಗುಂಜಿ ಬೆಟ್ಟತಾವರೆ । ಪುಷ್ಪಗಳ
ತಂದು ಪೂಜಿಸಿದರೆ ನಿಂಗಯ್ನ ಪೂಜೆ ಹಸನಾದೊ ॥

ಚೆಜ್ಜೆ ದನಿಕೇಳಿ ಎದ್ದು ಮಜ್ಜಣಮೀದು
ರುದ್ರಾಕ್ಷಿ ತೊಟ್ಟು ಮಡಿಯುಟ್ಟು । ಸಿದ್ಧರಊಳಿಗದ
ಶಿವಗುಡಿಗೆ ಹೋಗಮ್ಮ ॥

ತಾಯಿಚೆನ್ನಮ್ಮ ಬಾಲರೊಡನಾಡಿಕೆ
ಕೇಲು ಬೊಂಬೆಗಳ ತರುವೆ ನಿನಗೆ । ಕೋಳೂರ
ಬೋಳು ಮಲ್ಲಯ್ಯನವರಿಗೆ ಹಾಲಸಲಿಸಮ್ಮ ॥

ಅಕ್ಕ ಚೆನ್ನಮ್ಮ ಮಕ್ಕಳನೊಡನಾಡಿಕೆ
ಮುತ್ತಲು ಬೊಂಬೆಗಳ ತರುವೆ ನಿನಗೆ । ಕೋಳೂರ
ಮಕ್ಕಣ್ಣನಿಗೆ ಹಾಲ ಸಲಿಸಮ್ಮ ॥

ಕಾಳೆ ದನಿಕೇಳಿ ಬಾಲೆ ಮಜ್ಜಣ ಮೀದು
ನಾವೊಣನ ತೊಟ್ಟು ಮಡಿಹುಟ್ಟು । ಕೋಳೂರ ಹೆಣ್ಣು
ದ್ಯಾವರ ಊಳಿಗಕ್ಕೆ ನಡೆದಾಳು ॥

ಒಂದು ಪುಷ್ಪದಿಂದ ಗಂಧದಕ್ಷರದಿಂದ
ತಂದ ಮಲ್ಲಿಗೆಯ ಸರದಿಂದ । ಕೋಳೂರ
ಪುಟ್ಟಮಲ್ಲಯ್ಯನ ಶಿವಪೂಜೆ ಹಸನಾದೊ ॥

ಆಯ್ದ ಪುಷ್ಪದಿಂದ ಆರಿಸಿದ ಅಕ್ಷರದಿಂದ
ಸಾದ ಮಲ್ಲಿಗೆಯ ಸರದಿಂದ । ಕೋಳೂರ
ಪುಟ್ಟಮಲ್ಲಯ್ಯನ ಪೂಜೆ ಹಸನಾದೊ ॥

ಎತ್ತೆತ್ತೆ ನೋಡಿದರು ಹತ್ತಿ ಆಲದಮರ
ಸುರಹೊನ್ನೆ ಪಾಸುಪಕಳಾವೊ । ಕೋಳೂರ
ಮಲ್ಲಪ್ಪನ ಊಳಿಗಕ್ಕೆ ನಡೆದಾಳು ॥

ಎಲ್ಲೆಲ್ಲಿ ನೋಡಿದರು ನೆಲ್ಲಿ ನೇರಲಮರ
ಚೆಲ್ಲಿದ ಹೆಮ್ಮರ ಪಕಳಾರ । ಕೋಳೂರ ಹೆಣ್ಣು
ದ್ಯಾವರ ಊಳಿಗಕ್ಕೆ ನಡೆದವಳೆ ॥

ತಣ್ಣೀರು ಮೀದಾಳೆ ದಣಿ ಬಾವೆ ಹುಟ್ಟಾಳೆ
ಎಮ್ಮೆ ಆಬ್ಬರಿಸಿ ಕರೆದಾಳೆ । ಕೋಳೂರ ಹೆಣ್ಣು
ಬೋಳು ಮಲ್ಲಯ್ಯನವರಿಗೆ ಹಾಲ ಸಲಿಸಾಳು ॥

ಬಿಸಿನೀರು ಮೀದಾಳೆ ದಸುರಿಯ ಹುಟ್ಟಾಳೆ
ಹಸುವ ಎಬ್ಬರಿಸಿ ಕರೆದಾಳೆ । ಕೋಳೂರ ಹೆಣ್ಣು
ಪುಟ್ಟಮಲ್ಲಯ್ಯನವರಿಗೆ ಹಾಲ ಸಲಿಸಾಳು ॥

ಗಡಿಗೆ ಬಾಯಿಗೆ ಬಡಗಲ ವಸ್ತ್ರವ ಧರಿಸಿ
ನಡುಬೆನ್ನ ಕೊಟ್ಟು ಕರೆದಾಳೊ । ಕೋಳೂರ ಹೆಣ್ಣು
ಬೋಳು ಮಲ್ಲಯ್ಯನಿಗೆ ಹಾಲ ಸಲಿಸಾಳು ॥

ಚೊಂಬಿನ ಬಾಯಿಗೆ ಗುಂಬದೊಸ್ತ್ರವ ಧರಿಸಿ
ಇಂಬೆನ್ನಕೊಟ್ಟು ಕರೆದಾಳೊ । ಕೋಳೂರ ಹೆಣ್ಣು
ಪುಟ್ಟಮಲ್ಲಯ್ಯನಿಗೆ ಹಾಲ ಸಲಿಸಾಳು ॥

ಕೆಂದಿ ತಾವು ಕರೆದ್ಹಾಲು ದುಂಡಿ ತಾವು ಕರೆದ್ಹಾಲು
ಹಿಂಡೆಮ್ಮೆ ಕರೆದ ನೊರೆ ಹಾಲು । ತಂದಿವ್ನಿ
ಪುಟ್ಟಮಲ್ಲಯ್ಯ ಹಾಲ ಸಲಿಸ್ದೇಳಿ ॥

ಕಾಳಿತಾವು ಕರೆದ್ಹಾಲು ಬೋಳಿತಾವು ಕರೆದ್ಹಾಲು
ಏಳೆಮ್ಮೆ ಕರೆದ ನೊರೆಹಾಲು । ತಂದಿವ್ನಿ
ಪುಟ್ಟಮಲ್ಲಯ್ಯ ಹಾಲ ಸಲಿಸ್ದೇಳಿ ॥

ಕಾಳಸಿನ ಹಾಲು ಕಾದರೆ ಕಡುರುಚಿ
ಹಾಲು ಸಕ್ಕರೆ ಅದುಗೂಡಿ । ತಂದಿವ್ನಿ
ಬೋಳು ಮಲ್ಲಯ್ಯ ಹಾಲಸಲಿಸ್ಹೋಳಿ ॥

ಕೆಂದಸಿನ ಹಾಲು ಸುಂಡಿದರೆ ಕಡುರುಚಿ
ಗಂಧಕಸ್ತೂರಿ ಆದಗೂಡಿ । ತಂದಿವ್ನಿ
ಪುಟ್ಟಮಲ್ಲಯ್ಯ ಹಾಲ ಸಲಿಸ್ಹೋಳಿ ॥

ತುಪ್ಪಗಣಕೆಯ ಹಣ್ಣ ತಪ್ಪದೆ ನಾ ತಂದಿವ್ನಿ
ತುಪ್ಪವ ತಂದೆ ಒಳಲಂಚ । ಕೋಳೂರ
ಪುಟ್ಟಮಲ್ಲಯ್ಯ ಹಾಲ ಸಲಿಸ್ಹೋಳಿ ॥

ಬೆಲ್ಲ ಗಣಕೆಯಹಣ್ಣ ಮೆಲ್ಲಾದೆ ನಾ ತಂದೆ
ಬೆಲ್ಲಾವ ತಂದೆ ಒಳಲಂಚ । ಕೋಳೂರ
ಬೋಳು ಮಲ್ಲಯ್ಯ ಹಾಲ ಸಲಿಸ್ಹೋಳಿ ॥

ಬೆಟ್ಟ ಹತ್ತುವನೆ ಅಲ್ಲಿಂದ ಬೀಳುವೋನೆ
ದೃಷ್ಟಿಲಿ ಮಡುವ ಕಲಕೋನೆ । ಕೋಳೂರ
ಪುಟ್ಟ ಮಲ್ಲಯ್ಯ ಹಾಲ ಸಲಿಸ್ಹೋಳಿ ॥

ಹಳ್ಳ ಹತ್ತುವನೆ ಅಲ್ಲಿಂದ ಬೀಳುವೋನೆ
ದೃಷ್ಟಿಲಿ ಮಡುವ ಕಲುಕೋನೆ । ಕೋಳೂರ
ಚೆನ್ನಮಲ್ಲಯ್ಯ ಹಾಲ ಸಲಿಸ್ಹೋಳಿ ॥

ತಟ್ಟಿ ಬಟ್ಟಲ ಒಪ್ಪಾದಿ ಬಚ್ಚಿಟ್ಟು
ಸುತ್ತೊನ್ನೆ ರಜದಿಂದ ಬೆಳಗಿ । ಕೋಳೂರಹೆಣ್ಣು
ದೊಡ್ಡಬಟ್ಟಾಲು ಹಾಲ ಸಲಿಸಿವ್ನಿ ॥

ದೊಡ್ಡ ಬಟ್ಟಲ ಒಪ್ಪಾದಿ ಬಚ್ಚಿಟ್ಟು
ನಿಂದಿವ್ನಿ ಕಂಬದ ಮರೆಯಲ್ಲಿ । ಚೆನ್ನಮಲ್ಲಯ್ಯ
ಪ್ರೀತೀಲಿ ಹಾಲ ಸಲಿಸಪ್ಪ ॥

ಸಣ್ಣವಳವಳೆಂದು ಬಿಗುಮಾನವೇಕಪ್ಪ
ತಂಡತಂಡದಿ ಚೆಂಡು ಕುಸುಮವ ತಂದಿವ್ನಿ । ತಂದಸರಗಳ
ಮಾಡಿ ನಿನ್ನ ಪೂಜಿಸಿರುವೆ ॥

ಒಪ್ಪತ್ತು ಬಟ್ಟವ್ನಿ ಪ್ರೀತೀಲಿ ನೆನೆದಿವ್ನಿ
ಒಪ್ಪದಿ ನಿನ್ನ ಪೂಜೆ ಮಾಡಿವ್ನಿ । ಏಕಪ್ಪ
ನಿನಗೆ ನನಮ್ಯಾಲೆ ಮುನಿಸು ॥

ಕರುಣವ ಬೀರಿ ಕರುಣಾದಿ ನೋಡಯ್ಯ
ಯ್ಯಾತಕೆ ಕಳ್ಳಾಟ ಆಡುವೆ । ನೀ ಕುಡಿಯದೆ
ನಾ ನಿನ್ನ ಬಿಡನಯ್ಯ ಮುಲ್ಲಯ್ಯ ॥

ಗಟ್ಟಿಗಿತ್ತಿ ಹೆಣ್ಣೆ ಆಟ್ಟುಳಿಯ ಮಾಡುವಿಯೊ
ಬಚ್ಚಿಟ್ಟು ಕಡೆಯೆ ತೊಲಗಲ್ಲೆ । ಕೋಳೂರ ಹೆಣ್ಣೆ
ಬಾ ನಿನ್ನ ಹಾಲ ಸಲಿಸಿವ್ನಿ ॥

ಕಳ್ಳಿ ಚೆನ್ನಮ್ಮ ಇಲ್ಲದ ಮಾತಾಡೀಯೆ
ಕಲ್ಲೋಳು ಹಾಲ ಸಲಿಸಾವೆ । ಸುಳ್ಳಾಡಿ
ನೀ ಹಾಲ ಕುಡಿವೆಯಾ ॥

ಕಲ್ಲಲ್ಲಿ ಕನಮಯ್ಯ ಒಳ್ಳೆಯ ಜಂಗುಮರು
ಆವರಕಲ್ಲು ಸುರುಪಲ್ಲು ಕಿರುಜಡೆಯ । ಜಂಗುಮರು
ಬೋಳು ಮಲ್ಲಯ್ಯನವರಿಗೆ ಹಾಲ ಸಲಿಸಿದೆ ॥

ಹಣ್ಣು ಸಲಿಸೆಂದರೆ ಹೆಣ್ಣು ಸಲಿಸಿಕೊಂಡರು
ಆಕೆ ನೀತಿವಂತರ ಮಗಳಾದ್ಲು । ಅವರಪ್ಪ
ಮುತ್ತಿನ ಚಂಡಿಕೆಯ ಹಿಡಿದು ನಿಲಿಸ್ಯಾರೊ ॥

ಹಸಿವ ಸಲಿಸೆಂದರೆ ಶಿಶುವ ಸಲಿಸಿಕೊಂಡರು
ಆಕೆ ನೀತಿವಂತರ ಮಗಳಾದ್ಲು । ಅವರಪ್ಪ
ಹೂವಿನ ಚಂಡಿಕೆಯ ಹಿಡಿದು ನಿಲಿಸ್ಯಾರೊ ॥



ಮುನಿಯಾಗಿ ಬಂದ....

ಪಾರ್ವತಿ ಮನದ ದೃಢವ ನೋಡುವ ಎಂದು
ಮುಕ್ಕಣ್ಣ ಮಲ್ಲಿಕಾರ್ಜುನ-ಸ್ವಾಮಿ
ಮುನಿಯಾಗಿ ಬಂದ ಮಲ್ಲಯ್ಯ ।

ನಿಜವಾಗಿಯೂ ಜನಗಳ ಸಾಹಿತ್ಯವೆಂದರೆ ಜನಪದ ಸಾಹಿತ್ಯವೇ. ಇದು ನೂರಕ್ಕೆ ನೂರು ಪಾಲು ಜನಗಳದು. ಜನಸಾಮಾನ್ಯರ ನೋವು ನಲವುಗಳನ್ನು ಸಾಮಾನ್ಯ ಜನರೇ ಕಟ್ಟಿ ಹಾಡಿದ್ದೇ ಜನಪದ ಸಾಹಿತ್ಯ. ಗಾಳಿಯಲ್ಲಿನ ಗಂಧವಾಗಿ, ಶಾಖವಾಗಿ, ಶೀತವಾಗಿ ಹಳ್ಳಿಹಳ್ಳಿಗೂ ಈ ಹಾಡುಗಳು ಹರಡಿದುದರಲ್ಲಿ ಆಶ್ಚರ್ಯವಿಲ್ಲ. ಸಂಸಾರದ ಕಷ್ಟ-ಕಾರ್ಪಣ್ಯ, ಸಮಾಜದ ಅಂಕು-ಡೊಂಕು, ರಾಗದ್ವೇಷಗಳ ತಾಕಲಾಟ---ಇವೆಲ್ಲಾ ಇಲ್ಲಿ ಸುಲಭ ಶೈಲಿಯಲ್ಲಿ ವರ್ಣಿತವಾಗಿವೆ. ಕಷ್ಟವನ್ನು ಹಗುರಗೊಳಿಸಲು, ಸುಖವನ್ನು ವಿಸ್ತೃತಗೊಳಿಸಲು ಇವು ಸಾಧನವಾಗಿವೆ. ಇವು ನೆಲವನ್ನು ಬಿಟ್ಟು ನೋಲಕ್ಕೆ ಜಿಗಿದು ಅಂತರಿಕ್ಷದಲ್ಲಿ ಹಾರುವ ಸಾಹಸವನ್ನು ಎಂದಿಗೂ ಮಾಡಿಲ್ಲ. ರಾಮ-ಸೀತೆ ಪಾರ್ವತಿ-ಪರಮೇಶ್ವರರನ್ನು ಕುರಿತು ಕತೆಗಳೂ ಕೂಡ ನೆಲದ ಕಂಪಿನಿಂದಲೇ ಕೂಡಿವೆ. ಇದು ಈ ಹಾಡುಗಳ ದೊಡ್ಡ ಗುಣ.

ಒಂದಾನ ಸಮಾಜದಲ್ಲಿ ಜನಪದ ಗೀತಗಳಿಗೆ ಒಂದು ವಿಶಿಷ್ಟ ಸ್ಥಾನವಿತ್ತು. ಸರಳವಾದ ಸಮಾಜ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಈ ಗೀತಗಳು ಇಂದು ಸ್ವಲ್ಪ ತಾಳ ತಪ್ಪಿವೆ. ಗ್ರಾಮಾಂತರ ವ್ಯವಸ್ಥೆ ಕ್ಷೀಣಿಸಿದಂತೆ, ಅದರ ಇತರ ಹಲವು ಅಂಗಗಳಂತೆ ಇವೂ ಕೂಡ ನೆಲೆಗೆಟ್ಟಿವೆ. ನಮ್ಮ ಜೀವನ ಸಂಕ್ಷೀರ್ಣವಾಪಂತೆ ಹೊಸ ಸಮಸ್ಯೆಗಳನ್ನು ಚಿತ್ರಿಸುವ ಸಾಹಿತ್ಯ ಬಾರದಾಗಿದೆ. ಯಾರಿಗಾಗಿ ಯಾರಿಂದ ಇವು ರಚಿತವಾದುವೋ ಅವರಿಗೇ ಇಂದು ಇವು ಬೇಡವಾಗದ ಪರಿಸ್ಥಿತಿ ಒದಗಿದೆ. ಬೇರು ಕತ್ತ ಗಿಡಕ್ಕೆ ನೀರೆರೆಯುವ ಸಾಹಸ ಇಂದು ಸಾಗಿದೆ. ಮತ್ತೆ ಅದಕ್ಕೆ ನೆಲೆ ದೊರಕಿಸುವ ಯತ್ನ ಮಾತ್ರ ನಡೆಯುತ್ತಿಲ್ಲ.

—ಪ್ರೊ|| ಎಚ್.ಎಸ್. ಕೃಷ್ಣ ಸ್ವಾಮಿಐಯ್ಯಂಗಾರ್, ಎಂ.ಎ.

ಮುನಿಯಾಗಿ ಬಂದ*

ಪಾರ್ವತಿ ಮನದ ದೃಡವ ನೋಡುವ ಎಂದು
ಮುಕ್ಕಣ್ಣ ಮಲ್ಲಿಕಾರ್ಜುನ–ಸ್ವಾಮಿ
ಮುನಿಯಾಗಿ ಬಂದ ಮಲ್ಲಯ್ಯ ।

ಕಾವೇರಿ ತಾನಕೆ ಹೋಗಿ ಲಿಂಗಯ್ನ ಪೇಷ್ಟತೆಗೆದು
ಜಂಗುಮನ ವೇಶ ತಾಳಿ–ಪಾರ್ವತಿ ಮನೆಗೆ ಬಂದು
ತಂಗಳದೊಳಗೆ ನಿಂತುಕೊಂಡು
ಆತ್ಮ ಸಂಗಯ್ಯನ ದಾನ ।
ಜ್ಯೋತಿ ಲಿಂಗಯ್ಯನ ದಾನ ।
ಜೋಳಿಗೆ ಹಿಡಿದು ಆತನ ದಾನ ।
ಜ್ಯೋತಿ ಲಿಂಗಯ್ಯನ ಭಿಕ್ಷೆ ।

ದಾನವ ನೀಡೆ ಬಾಲೆ ಪಾರ್ವತಿದೇವಿ ।
ದಾನವ ನೀಡೆಂಬ ನುಡಿಯ ಪಾರ್ವತಿ ಕೇಳಿ
ಎಂದೂ ಇಲ್ಲದ ಜಂಗುಮದೇವ
ಇಂದು ದಾನಕೆ ಬಂದವರೆಂದು
ತಟ್ಟನೆ ತಾನೆದ್ದಳಂತೆ–ಉಟ್ಟಳು ಪಟ್ಟೆಯ ಸೀರೆ
ಕಟ್ಟದ್ದ ಮಾರುದ್ದ ಮಂಡೆ ।
ಬೆತ್ತದ ಮರವ ತೆಗೆದು ।
ಮುತ್ತು ನವರತ್ನ ತುಂಬಿ ।
ಪುಸಿಯ ರಾಜಣವ ತುಂಬಿ ।

---

*ಈ ಬಗೆಯ ಕೆಲವು ಹಾಡುಗಳನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಮತ್ತು ಚಾಮರಾಜನಗರ ತಾಲ್ಲೂಕಿನ ಅಕ್ಕಪಕ್ಕದ ಹಳ್ಳಿಗಳಲ್ಲಿ— ಭಿಕ್ಷೆಗೆ ಹೋದಾಗ ಗಂಡಸರು ತಂಬೂರಿ ನುಡಿಸಿಕೊಂಡು ಹಾಡುವರು.

ನಡುನೆ ಒಂದು ದುಡ್ಡು ಮಡಗಿ ।
ಹರನಿಗೆ ಭಿಕ್ಷವ ತಂದು
ಪಟ್ಟಿಯ ವಸ್ತ್ರದೊಳಗೆ ಪಾದವಿಡಿದು
ಶರಣು ಮಾಡಿ–ಪಾರ್ವತಿ ।
ಕ್ವಾರಣ್ಯ ಕೊನ್ನಿ ಸ್ವಾಮಿ–ಜಂಗುಮರೆ ।

ದಾನ ತಂದಂಥ ಹೆಣ್ಣು ಕಂಡು ಮಲ್ಲಯ್ಯನವರು ।
ದಾನಕೆ ನಾವು ಬಂದವರಲ್ಲಾ ।
ಭಿಕ್ಷಕೆ ನಾವು ಬಂದವರಲ್ಲಾ ।
ಲೋಕ ಲೋಕವ ತಿರುಗಿ ।
ಲೋಕ ಸಂಚಾರ ಮಾಡಿ ।
ಕಡೆಯಲ್ಲಿ ನಿನ್ನಟ್ಟಿಗೆ ಬಂದೆ ।
ನಿನ್ ಅಂದ ನೋಡದಕೆ ಬಂದೆ
ನಿನ್ ಚಂದ ನೋಡದಕೆ ಬಂದೆ
ನಿನ್ನೊಪ್ಪ ನಾವೇ ಬಂದೊ ಪಾರ್ವತಿ ।

ಕೇಳಯ್ಯ ಜಂಗುಮದೇವ ।
ನನ ಗಂಡ ಮಲ್ಲಯ್ಯ ಎಂದಾರೆ
ಪಂಚಾಗ ಪಾಪಿ ಸ್ವಾಮಿ ।
ನನ್ನನು ಬಿಡುವುದಿಲ್ಲ ।
ನಿನ್ನನ್ನು ಬಿಡುವುದಿಲ್ಲ
ದುಡು ದುಡ್ಡಿಗೆ ಕುಯ್ದು ।
ದುಂಡಿಗೆ ಪಂಚೇರು ಮಾಡುವ–ಮಲ್ಲಯ್ಯ ।
ನಿನಗೆ ಈ ಬುದ್ಧಿ ತರವಲ್ಲ ಹೋಗಪ್ಪ

ನಿನ ಗಂಡ ಮಲ್ಲಯ್ಗೆ ಕಾವಿ ಕೊಟ್ಟವರು ನಾವು ।

ನಿನ ಗಂಡ ಮಲ್ಲಯ್ಯ ಕಂತೆ ಕೊಟ್ಟವರು ನಾವು
ನಾವೆ ಗುರುಗಳು ಕಾಣೆ ಪಾರ್ವತಿ ।
ನನ ಗಂಡ ಮಲ್ಲಯ್ಯ ನೀವೆ
ಗುರುಗಳಾದ ಮೇಲೆ....

ಸಾಲು ಮೂರುತಿ ವಾಲೆ ಕೊಡುವೆ ।
ಮೇಲೆ ಚಿಂತಾಕು ಕೊಡುವೆ ।
ಹಸ್ತಕೆ ಧರಿಸಿದ ಹವಳ ಕೊಡುವೆ
ಕಸ್ತೂರಿ ಬಳೆಯ ಕೊಡುವೆ ।
ಚಿಕ್ಕನೆರಡು ಹಣವ ಕೊಡುವೆ ।
ಮುತ್ತಿನ ಮಣಿಗಳ ಮುನ್ನೂರ ಕೊಡುವೆ ।
ಕೊರಳಲ್ಲಿರುವ ಪದುಕ ಕೊಡುವೆ ।
ಮಂಚಕೆ ನಾನು ಬರುವಳಲ್ಲಪ್ಪ ।
ನೀ ಜಂಗುಮಯ್ಯ ಹೋಗಪ್ಪ ।

ಇಂದು ನಿನ್ನ ಮಂಚದ ಮೇಲೆ
ಇಂದೊಂದು ಅರಗಳಿಗೆ
ಇಳ್ಯೀವ ಸಲಿಸಿ-ಇನವಂದ ಆಡಿದರೆ
ಪುಣ್ಯ ಬರುತಾದೆ ಕಾಣೆ ಪಾರ್ವತಿ ।

ಪಾರ್ವತಿ ಹೇಳಿದ ಮಾತ ಕೇಳಿದ
ಮಲ್ಲಯ್ಯನವರು....
ಆಗ ನಿಜರೂಪತೋರಿಸಿದರು ಪಾರ್ವತಿಗೆ ।

ನಾ ನಂಜುಂಡಲಿಂಗ ಬಿಡೆ ಸೆರಗ....

ಆಯ ಉಳ್ಳೋಳು ನೀನು ಛಾಯ ಉಳ್ಳೋಳು ನೀನು
ನಿನ ದಂಡೆಗೊಬ್ಬನು ಬರುವೆನು । ಚಾಮುಂಡಿ
ನೀ ಬೇಗೆದ್ದು ಕದವ ತೆಗಿಬಾರೆ ॥

ನಗರ ಪ್ರದೇಶಗಳ ನಯ ನಾಜೂಕಿನ ಪ್ರಭಾವವನ್ನರಿಯದ ಹಳ್ಳಿಹಳ್ಳಿಗಳ ಹೃದಯಾಂತರಾಳದಲ್ಲಿ ಜನತೆಯ ಕವಿಗಳು ಜೀವನವನ್ನೇ ಹಾಡಿದ್ದಾರೆ. ಅವರ ಕೃತಿಗಳು ಪುಸ್ತಕಗತವಾಗದೆ, ಹಳ್ಳಿಯ ಜನತೆಯ ಕಂಠಾಭರಣಗಳಾಗಿವೆ. ಹೀಗೆಂಥ ಮಾತ್ರಕ್ಕೆ ಜನಪದಸಾಹಿತ್ಯವೊಂದೇ ಸಾಹಿತ್ಯವೆಂದಂತಾಗಲಿಲ್ಲ. ಹಾಗೆಯೇ ಒಂದು ಕಾಲದಲ್ಲಿ ಕೆಲವರು ಪ್ರಾಚೀನ ಕನ್ನಡ ಕವಿಗಳು ಜನಪದ ಕವಿತೆಗಳನ್ನು ತಪ್ಪಷ್ಟು ಗೌರವದಿಂದ ಪ್ರೀತಿಯಿಂದ ಕಾಣಬಹುದಾಗಿತ್ತು ಎಂದರೂ ಅಪರಾಧವಲ್ಲ. ಕವಿಯು ಪಂಡಿತನೂ ಆದರೆ ಸರಳತೆಯ ಕಡೆಗೆ ಗಮನಕೊಡುವುದು ಅವನಿಗೆ ಅಸಾಧ್ಯನಾಗ ಬಹುದು. ಆದರೆ ಆ ಹಳೆಯ ತಪ್ಪನ್ನು ನಾವು ಈಗ ಮಾಡಬೇಕಾಗಿಲ್ಲ. ನಿಧಾನ ವಾಗಿ ಈಗ ನೋಡಬಹುದು—ಯಾವುದು ತಿರುಳು, ಯಾವುದು ಟೊಳ್ಳು ಎಂಬು ದನ್ನು, ಹಾಗೆ ನೋಡುತ್ತಲೇ, ನಮ್ಮ ಹೊಸ ಕವಿತೆಯ ಜಾಡನ್ನೂ ಸರಿಪಡಿಸಿ ಕೊಳ್ಳಬಹುದು.

ಈ ದೃಷ್ಟಿಯಿಂದ ನೋಡುತ್ತ ಹೋದರೆ ಹೆಚ್ಚು ಸಂಸ್ಕೃತವನ್ನು ಬಳಸಿ ಶಬ್ದ ಮಾಡದೆ ನಿರ್ಮಲವಾದ ನಾಡನುಡಿಯಲ್ಲಿ, ಅದರ ಪ್ರಾಂತೀಯ ಕಂಪು, ಸೊಗಸು, ವಿಲಾಸಗಳೊಂದಿಗೆ ನೇರವಾಗಿ ಕವಿತೆಕಟ್ಟಿದ ನಮ್ಮ ಜನಪದ ಕವಿಗಳು ಅಚ್ಚ ಕವಿತೆಯ ವೈಭವವನ್ನು ಚೆನ್ನಾಗಿ ಕಂಡವರು, ವಿಶಾಲ ಹೃದಯರು. ಒಂಪೆ ರಡು ಮಾತಿನಲ್ಲಿ ಅಡಕವಾಗಿ—(ಕೃಷ್ಣನ ತೆರೆದ ಬಾಯಲ್ಲಿ ಲೋಕ ಲೋಕಾಂತರ ಗಳೇ ಮೆರೆದಂತೆ)—ಗಂಭೀರವಾಗಿ ಆಡಂಬರವಿಲ್ಲದೆ ಕಾವ್ಯರಚನೆ ಮಾಡುವವರ ವಿಷಯದಲ್ಲಿ ಈ ಕಾಲದ ಜನಕ್ಕೆ ಪ್ರಾಯಶಃ ಮುಂದೆ ಬರುವವರಿಗೂ ಕೂಡ, ಪ್ರೀತಿ ಹುಟ್ಟುವುದು ಸ್ವಾಭಾವಿಕವಾಗಿ, ಇಲ್ಲಿಂದು ಹರಿದುಬರುವ ಜೀವನಸ ಮೇಲಿನ ಟೀಕೆಯನ್ನು ಕೇಳಲು ಕವಿ ತೆರೆಯುವುದೂ ಸಹಜವೇ. ಆಗತ್ಯವಲ್ಲದ ಆಡಂಬರದ ಕವಿತೆಯ ಆ ಶಕ್ತಿ ಬೇಗ ಬಯಲಾಗುತ್ತದೆ; ಅದನ್ನು ಯಾರೂ ಉಳಿಸಿ ಕೊಳ್ಳಲಾರರು.

ಈ ಜಾನಪದ ಗೀತೆಗಳು ನಮ್ಮಲ್ಲಿ ಬಹುವಾಗಿವೆ; ಬಹುಕಾಲದಿಂದ ಬರು ತ್ತಿವೆ. ಅದನ್ನು ಬರೆದವರು—ಕಟ್ಟಿದವರು—ಯಾರೋ ನಮಗೆ ತಿಳಿಯದು. ಅಂತೂ ಅವರು ಬದುಕನ್ನು ಚೆನ್ನಾಗಿ ಕಂಡವರು ವಿನ್ನಬಹುದು. ಅನೆಲ್ಲ ಆಡುವ ಮಾತಿನಲ್ಲಿ ರುವುದರಿಂದ ಬಾಯಿಂದ ಬಾಯಿಗೆ ಬಂದುಬಿಡುತ್ತವೆ; ಒಬ್ಬನೇ ಹಾಡಿ ಕೊಂಡಾಗ ನಗೆಯಲ್ಲಿ ಮಿನುಗುತ್ತವೆ; ಇಬ್ಬರು ಕೂಡಿ ಹಾಡುವಾಗ ಒಬ್ಬರ ಬಳಿ ಗೊಬ್ಬರು ಸರಿದು ಕುಳಿತು ಹಾಡುವಷ್ಟು ಸರಸವಾಗಿರುತ್ತವೆ ಅರ್ಥ ಸುಲಭ; ಅನುಭವಿಸಿದಷ್ಟೂ ಸುಂದರ; ಅಳತೆಯುಂಟು ಧ್ವನಿಗೆ, ಆದರೆ ಅದರ ಪ್ರಭಾವಕ್ಕೆ ಮೇರೆಯಿಲ್ಲ. ನಾವೇ ಆಡಿದ ಮಾತನ್ನು ನಮಗೇ ಯಾರೋ ಜ್ಞಾಪಿಸಿದಂತೆ ಆಗು ತ್ತದೆ, ನಗುಬರುತ್ತದೆ, ಅಳುಬರುತ್ತದೆ, ಅಳು ಮುಗಿದು ಆನಂದೆ ಉಳಿಯುತ್ತಹೆ. ಯಾರೂ ಇವನ್ನು ಕಾವ್ಯವೆಂದಾಗಲಿ, ಮಹಾಕಾವ್ಯವೆಂದಾಗಲೀ ಕರೆದುಕೊಳ್ಳುವು ದಿಲ್ಲ; ಇಷ್ಟರಿಂದಲೇ ಇವುಗಳೊಳಗಿನ ಸಂಪತ್ತು ಒಂದೆಳೆಯೂ ನಲುಗುವುದಿಲ್ಲ.

—ಶ್ರೀ ಕೆ. ಎಸ್. ನರಸಿಂಹಸ್ವಾಮಿ

ನಾ ನಂಜುಂಡಲಿಂಗ ಬಿಡೆ ಸೆರಗ....*

ಅಕ್ಕಾ ಹೊರಟಾಳೆ ಅಕ್ಕಯ್ಯ ಹೊರಟಾಳೆ
ಅಡಿಕೆ ಹೊಂಬಾಳೆ ಮುಡುಕೊಂಡು । ಚಾಮುಂಡಿ
ಅಕ್ಕ ಹೊರಟಾಳೆ ಜಳಕಕ್ಕೆ ॥

ತಾಯಿ ಹೊರಟಾಳೆ ತಾಯವ್ವ ಹೊರಟಾಳೆ
ಕಾಯಿ ಹೊಂಬಾಳೆ ಮುಡುಕೊಂಡು । ಚಾಮುಂಡಿ
ತಾಯಿ ಹೊರಟಾಳೆ ಜಳಕಕ್ಕೆ ॥

ಅರಿಷಿಣ ಸೀಗೆಕಾಯಿ ಹಸನಾಗಿ ತೊಟ್ಟುಕೊಂಡು
ನವರತ್ನದ ಸೀರೆ ಉಟ್ಟುಕೊಂಡು । ಚಾಮುಂಡಿ
ಬಂದಾಳು ಕಾರಂಜಿ ಕೆರೆಯಾಗೆ ॥

ಕಾರಂಜಿ ಕೆರೆಯಮೇಲೆ ಬಂದು ಚಾಮುಂಡಿ
ನವರತ್ನ ಸೀರೆ ಅಳಿದಿಟ್ಟು । ಚಾಮುಂಡಿ
ಮನಸಿಗೆ ಬಂದ್ಹಂಗೆ ಜಲಕವ ॥

(ಮೈಸೂರ ಬಳಿಯ ಚಾಮುಂಡಿಬೆಟ್ಟದ ತಡಿಯಲ್ಲಿರುವ ಕಾರಂಜಿ ಕೆರೆಯಲ್ಲಿ ಮನಸ್ಸಿಗೆ ಬಂದಹಾಗೆ ಜಳಕಮಾಡುತ್ತಿರುವ ಚಾಮುಂಡಿಯನ್ನು ಕಂಡ ನಂಜುಂಡ ವೇಷ ಮರೆಸಿ ಜೋಗಿಯಾಗಿ, ತುಂಬೆ ಹೂವನ್ನು ಕುಯ್ಯಲು ಕೆರೆಯಬಳಿಗೆ ಬಂದು ಚಾಮುಂಡಿ ಕೆರೆಯ ಮೇಲಿಟ್ಟಿದ್ದ ನವರತ್ನದ ಸೀರೆಯನ್ನು ಕದ್ದುಕೊಂಡು ಮುಂದೆ ಓಡುತ್ತಾನೆ.)

---

*ಈ ಹಾಡುಗಳನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹಳ್ಳಿಗಳಲ್ಲೂ ಮತ್ತು ಇತರ ಬಯಲುನಾಡಿನ ಹಳ್ಳಿಗಳಲ್ಲೂ ಹೆಂಗಸರು ರಾಗಿ ಬೀಸುವಾಗ ಹಾಡುವರು.

ಜಲಕವನಾಡುವಾಗ ಆಗ್ಯಾರು ಕಂಡಾರು
ನಂಜನಗೂಡಿನ ನಂಜುಂಡ । ತಾನೆದ್ದು
ಮಡದೀಗೇನೆಂದು ಹೇಳ್ಯಾನೆ ।

ತುಂಬೆ ಹೂವನು ತಂದು ಲಿಂಗಪೂಜಿಸಬೇಕು
ಶಿವನಬಳಿಗೆ ನಾನ್ಹೋಗಬೇಕು । ದೇವೀರಿ
ನಾ ಪಾರಿಜಾತವ ತರುತೀನಿ ।

ಪಾರಿಜಾತವ ತರ್ತೀನಂಥ ಹೇಳಿ
ಬಂದಾನು ಕಾರಂಜಿ ಕೆರೆಯಾಗೆ । ನಂಜುಂಡ
ಬಂದಾನು ಕಾರಂಜೀ ಕೆರೆಬಳಿಗೆ ।

ಕಾರಂಜಿ ಕೆರೆಯ ಏರಿಯ ಮೇಲಕೆ ಬಂದು
ನವರತ್ನ ಸೀರೆ ಕದ್ದುಕೊಂಡು । ನಂಜುಂಡ
ಕೈಯಿ ಚಪ್ಪಾಳೆ ಹೊಡೆದಾನು ।

ಕೈಯಿ ಚಪ್ಪಾಳೆ ಹೊಡೆದಿದ್ನ ಕೇಳಿ
ಚಾಮುಂಡಿ ಸುತ್ತಾಲು ನೋಡ್ಯಾಳೆ ।

ಕಾ ಅನ್ನೊ ಕಾಗಿಲ್ಲ ಗೂಎನ್ನೊ ಗೂಬಿಲ್ಲ
ನರಮನ್ಸರ ಸುಳಿವೇ ಮೊದಲಿಲ್ಲ । (ಮೊದಲಿಲ್ಲಾಂಥ)ಹೇಳಿ
ಹತ್ತೀ ಬಂದಾಳೇ ಏರಿಯಮೇಲೆ ।

ಹತ್ತಿ ಬಂದಾಳು ಏರಿಯ–ಚಾಮುಂಡಿ
ನವರತ್ನ ಸೀರೆ ಸಿಗಲಿಲ್ಲ ।

ತನ್ನ ಮಂಡೆಯ ಬಚ್ಚಿ ತನ್ನ ಸೊಂಟಕೆ ಸುತ್ತಿ
ಓಡ್ಯಾಳೆ ಚಾಮುಂಡಿ ಬೆಟ್ಟಕೆ—ಚಾಮುಂಡಿ
ಓಡ್ಯಾಳೆ ಚಾಮುಂಡಿ ಬೆಟ್ಟಕೆ ।

ಎಲೆಎಲೆ ಹೆಣ್ಣೆ ಮುಂದೋಡೋಳು ನೀನ್ಯಾರೆ
ನಿಲ್ಲೆಲೆ ನಾನು ಬರುತೀನಿ—ಚಾಮುಂಡಿ
ನಿಲ್ಲೆಲೆ ನಾ ನಂಜುಂಡ ಬರುತೀನಿ ।

ಜೋಗಿ ಇವನಲ್ಲಾ ಜಂಗುಮ ಇವನಲ್ಲಾ
ಬುಂಡು ತಲೆಯಾ ಬ್ರಹ್ಮ । ಬರ್ತಾನೆಂದು
ಬಾಗಿಲು ಬಂಟರಿಗೆ ಹೇಳ್ಯಾಳೆ ।

ಬಾಗಿಲು ಭಂಟರಿಗೆ–ಏನಂತ ಹೇಳ್ಯಾಳೆ
ಬಂದಾವರೊಳಿಗೆ ಬಿಡಬೇಡಿ....ಬಂಟರೆ
ಬಂದಾವರೊಳಗೆ ನೀವು ಬಿಡಬೇಡಿ ।

ಬಂದಾವರೊಳಗೆ ಬಿಡ ಬೇಡಂತಾ ಹೇಳಿ
ಮಂಚಾದಮೇಲೆ ಮಲಗ್ಯನಳೆ । (ಮಲಗಿದ) ಚಾಮುಂಡಿಗೆ
ಸ್ವಪ್ನದಾಗೆ ನಂಜುಂಡ ಭೋಗ ಕೊಡುತಾನೆ ॥

(ಆರಮನೆಯಲ್ಲಿ ನಂಜುಂಡ ಇಲ್ಲದಿರುವುದನ್ನು ಕಂಡ ದೇವೀರಿ ಬಾಗಿಲ ಬಸವನನ್ನು ಕರೆದು ಕೇಳಲು—ಸೇರು ಆಡಕೆ–ಬಿಳಿಯಲೆ ತೆಕ್ಕೊಂಡು ಚಾಮುಂಡಿ ಮನೆಗೆ ಹೋದರೆಂದು ಹೇಳಿದನು)

ಎದ್ದಳು ದೇವೀರಿ ಸುತ್ತಮುತ್ತ ನೋಡ್ಯಾಳು
ಬಾಗಿಲು ಬಸವನ ಹಲುಬ್ಯಾಳು—ದೇವೀರಿ
ಬಾಗಿಲು ಬಸವನ ಹಲುಬ್ಯಾಳು ॥

ಬಾಗಿಲು ಬಸವನೆ ಈಬತ್ತಿಲೋಲನೆ
ನಿಮ್ಮ ಭಾವರೋಗಿದ್ದ ಬಗೆಹೇಳು ।

ಉಟ್ಟ ದೋತುರ ಮುತ್ತಿನ ಕೈಚೆಂಬು
ಭೂಮಿಮೇಲೆ ಬೆಳೆಯೊ ಬುಡದುಂಬಿ । ಹೂಗಳ
ಕುಯ್ಯಾಕ್ಹೋಗವರೆ ಉಗುರಲ್ಲಿ ॥

ಉಟ್ಟ ದೋತುರ ಮುತ್ತಿನ ಕೈಚೆಂಬು
ಭೂಮಿಮೇಲೆ ಬೆಳೆಯೊ ಬುಡದುಂಬಿ । ಹೂಗಳು
ಹಾಕಿತ್ತು ನಮ್ಮ ಅರಮನೇಲಿ ॥

ಸಾಕಾದ ಸಂಪಿಗೆ ಬೇಕಾದ ಮಲ್ಲಿಗೆ
ಲೋಕದಮೇಲೆ ಬೆಳೆಯೊ ಬುಡದುಂಬಿ । ಹೂಗಳು
ಹಾಕಿತ್ತು ನಮ್ಮ ಅರಮನೇಲಿ ॥

ಹಾಕಿತ್ತು ನಮ್ಮ ಅರಮಲ್ಲಿ–ಬಸವಯ್ಯ
ನಮ್ಮ ರಾಯರು ಹೋದ ಬಗೆ ಹೇಳೊ ॥

ಹೋಳು ಸೇರಡಕೆ ಬಿಳಿಯಲೆ–ತಕ್ಕೊಂಡು
ಸ್ವಾಮಿ ಸೂಳೆಯ ಮನೆಗಾಗಿ....

ಹೋಳು ಸೇರಡಕೆ ಬಿಳಿಯಲೆ ತಕ್ಕೊಂಡು
ಅವರ್ಹೋದರು ಚಾವುಂಡಿ ಅರಮನೆಗೆ ।

ಹತ್ತು ತೆಂಗಿನಮರ ಒತ್ತಲ್ಲಿ ಸುರುಹೊನ್ನೆ
ಮತ್ತೆ ಓಲಾಡಿ ಬೆಳೆಯೋದೆ । ನಂಜನಗೂಡ
ಸ್ವಾಮಿ ನಂಜಯ್ಯ ಸಲುವಾಲಿ ॥

ಸೂಳೆ ಚಾಮುಂಡಿ ಸೂತಕವಾಗಿ
ಗಾಜಿನಂಬ ನಂಬಿ ಅಳುತಾಳೆ । ಚಾಮಾಯಿ
ನೀವು ಬೇಗ ನಂಜಯ್ನ ಬರಹೇಳಿ ॥

ನಂಜನಗೂಡಿನಯ್ಯ ತೆಂಗಿನತೋಪಿನಯ್ಯ
ಗಂಧಕಾರಯ್ಯ ಗಮಕೀನ । ನಂಜಯ್ಯ
ನಾನು ಬಿನ್ನಾಕೆ ಬಂದೇನು ದಯಮಾಡೊ ॥

ಪಪ್ಪಟ್ಟು ಪರುಹೊತ್ತಿನಲಿ ನಮ್ಮಟ್ಟಿಗೆ ಬಂದವರ್ಯಾರು
ಹೇಸರೇಳಿ ನಿಮ್ಮ ಕುಲವೇಳಿ । ಮಹಾಸ್ವಾಮಿ
ನಿಮಗೆ ಮಡದಿಲ್ಲವೇನೊ ಮನೆಯಾಗೆ ॥

ಮಡದಿದ್ದರೇನೆ ಮನಸಿಗೆ ಬಾರಾದಮೇಲೆ
ನೀನೆ ಪಂಜರದ ಅರಗಿಣಿ । ಚಾಮಾಯಿ
ನೀನು ಬೇಗೆದ್ದು ಅಗಣಿ ತೆಗಿಬಾರೇ ॥

ಯಾರು ಅಲ್ಲಾಕಾಣೆ ಎತ್ತಲೊರಲ್ಲಾ ಕಾಣೆ
ಕಾಲಿಗೆ ಪಿಲ್ಲಿ ಕರಡಿಗೆಯ । ಧರಿಸೊ
ನಾ ಕಾಣೆ ನಿನ್ನ ಪತಿಪುರುಷ ॥

ತೆಂಕಲರಮಾನೆ ತೆಗಿ ನನ್ನ ಚಂದ್ರಶೂಲೆ
ಗಂಡನಿಗೆ ಓಲೆ ಬರೆಯೋಳೆ । (ಬರೆಯೊ) ಚಾಮುಂಡಿ
ನೀ ಬೇಗೆದ್ದು ಅಗಣಿ ತೆಗಿಬಾರೇ ।

ಬಡಗಲರಮಾನೆ ತೆಗಿ ನನ್ನ ಚಂದ್ರಶೂಲೆ
ಗಂಡನಿಗೆ ಓಲೆ ಬರೆಯೋಳೆ । (ಬರೆಯೊ) ಚಾಮುಂಡಿ
ನೀ ತೆಗಿಯೆ ವಜ್ಜುರದ ಅಗಣಿಯ ॥

ಆಯ ಉಳ್ಳೋಳು ನೀನು ಛಾಯ ಉಳ್ಳೋಳು ನೀನು
ನಿನ ದಂಡೆಗೊಬ್ಬನು ಬರುವೆನು । ಚಾಮುಂಡಿ
ನೀ ಬೇಗೆದ್ದು ಕದವ ತೆಗಿಬಾರೆ ॥

ಕರಿಯ ಕೋಳಿ ತಿನ್ನೊ ಕರಿಯ ಚಾಮುಂಡಮ್ಮ
ನೀವು ಲಿಂಗ ಜಂಗುಮರು ಬರಬಹುದೆ ?

ಮೀನು ಮಿಡಚೆ ತಿನ್ನೊ ಉಕ್ಕುರಿ ಚಾಮುಂಡಿ ಮನೆ
ನೀ ಹುಡುಗ ಜಂಗುಮರು ಬರಬಹುದೆ । ಮಾಸ್ವಾಮಿ
ನಾನ್ಹೊಂಗೆ ಕದವ ತೆಗೆಯಾಲಿ ॥

ಆಯ ಉಳ್ಳೋಳು ನೀನು ಛಾಯ ಉಳ್ಳೋಳು ನೀನು
ನಾ ಬಾಗಿಲ ಹೊರಗೆ ಇರಲಾರೆ ।

ಗುಂಡಿನ ಕೈಯ ದಂಡಿಗೆ ಒದರುತ
ನಿನ್ನೊಂದಿಗೆ ನಾನು ಬರುತೀನಿ । ಚಾಮುಂಡಿ
ನೀ ಬೇಗೆದ್ದು ಕದವ ತೆಗಿಬಾರೇ ॥

ಕೋಳಿ ಕೂಗಿತು ಕುಂಬಳದ ಹೂವಿಗೆ
ಬೆಟ್ಟ ಕೂಗಿತು ಬಿದರಿಗೆ । ಚಾಮುಂಡಿ
ಕತ್ತಿ ಕೂಗ್ಯಾವು ಕದ ತೆಗಿಯೆ ॥

ಕದವ ತೆಗಿಯೋಕೆ ತಡವೇನು ಮಹಾಶಿವನೆ
ಸೀರಿಲ್ಲಾ ಶಿವನೆ ನಿರ್ವಾಣಿ ॥

ಹಸಿಯಮೇಲಿರುವ ದಸುರಿ ಪಟ್ಟಿಯಸೀರೆ
ಒಂದುಡೆ ಒಂದು ಮುಸಕಿಡೆ । ಚಾಮುಂಡಿ
ನೀ ಬೇಗೆದ್ದು ಕದವ ತೆಗಿಬಾರೆ ॥

ಕದವ ತೆಗೆದಾಳು ಕೈಎತ್ತಿ ಮುಗಿದಾಳು
ಅವಳೊಂದುನುಡಿಯ ನುಡಿದಾಳು । (ನುಡಿದು) ಏನಂದಾಳೆ
ಅರಮಾನೆ ಸಯಿವಾಗಿ ಮುದ್ವೆಯಾದ ॥

ಅರಮಾನೆ ಸಯಿವಾಗಿ ಮುದ್ವೆಯಾದ–ಮಡದಿಬಿಟ್ಟು
ನಾ ನೇಪೀನ ಸೂಳೆ ಸ್ಥಿರವೇನೊ ॥

ಬೆಟ್ಟದ ಮೇಲೋಳೆ ಬಿಟ್ಟ ಮಂಡೆ ಚಾಮಾಯಿ
ಬಿಟ್ಟು ಹೋಗ್ಯವರ ಹಿಡಿಸ್ಯಾಳೆ । (ಹಿಡಿಸಿ) ಮಿಂಡನ ಮೇಲೆ
ತುಪ್ಪದ ಕಾಗುಡಿಯ ಹೊರಿಸ್ಯಾಳೆ ॥

ಅಟ್ಟಕ್ಕಾಹಕ್ಕಾನೆ ಹತ್ತು ಕಾಲೇಣಿಯ
ಕೊಪ್ಪು ಬಂಗಾರ ಇಳಿವ್ಯಾನೆ....ನಂಜುಂಡು
ಕೊಪ್ಪು ಬಂಗಾರ ಇಳಿಕ್ಯಾನು ।

ಮಾಳಿಗಾಹಕ್ಕಾನೆ ಆರುಕಾಲೇಣಿಯ
ವಾಲೆ ಬಂಗಾರ ಇಳಿವ್ಯಾನೆ–ನಂಜುಂಡು
ವಾಲೆ ಬಂಗಾರ ಇಳಿಕ್ಯಾನು ।

(ದೇವೀರಮ್ಮ ತನ್ನ ಪತಿ ಇಲ್ಲದಿರುವುದನ್ನು ಕಂಡು ಬಾಗಿಲು ಕಾಯುವ ಬಂಟರನ್ನು ಕರೆಸಿ ನಂಜುಂಡ ಹೋದ ಬಗೆ ಹೇಗೆ ಎಂದು ಕೇಳುತ್ತಾಳೆ)

ಕಗ್ಗಲ್ಲ ಕೊರಡ ಮಗ್ಗುಲಲ್ಲಿ ಮಲಗಿಸಿ
ಅವನೆದ್ದನು ಚಾಮುಂಡಿಯರಮನೆಗೆ ...ನಂಜುಂಡು
ಅವನೆದ್ದನು ಚಾಮುಂಡಿ ಅರಮನೆಗೆ ।

ಕಾಗೇಯ ಹಳ್ಳದಲ್ಲಿ ಗೂಬೇಯ ಗುಟ್ಟಲ್ಲಿ
ಏಳು ಸರ್ಪಾನ ಅಡವೀಲಿ । ಭಾವಯ್ಯ
ಎಲ್ಲಿಗೆ ನಂಜಯ್ಯ ನಿಮ ಪಯಣ ॥

ಬಾಗಿಲು ಬಸವನೆ ಈಬುತ್ತಿ ಲೋಲನೆ
ಪಟ್ಟಿಮಂಚದ ಮೇಲೆ ದೇವೀರಿ । ಒಬ್ಬಳೆ
ಮಲಗವಳೆ ಬಲು ಜೋಕೆ ॥

ಚಾವುಂಡಿ ಅವ್ಯಾನೆ ಮಾಗುಡಿ ರಂಗನ ಮಡದೀಯೆ
ದೇವೀರಮ್ಮನ ಗಿಲುಕೇಯ । ಮಂಚದ ಮೇಲೆ
ಅವಳು ದೇಪಂತನಾಡ್ಯವಳೆ ಪಗಡೆಯ ॥

ಸೂಳೆಯ ಮನೆಯ ಸೂರೆಲ್ಲ ಮಲ್ಲಿಗೆ
ಜಾಜಿ ಹೂವಿನ ತಲೆದಿಂಬು । ಹಾಕಿಕೊಂಡು
ಚಾಣ ನಂಜಯ್ಯ ಹೊರಗವನೆ ॥

ಎದ್ದಳು ದೇವೀರಿ ಸುತ್ತುಮುತ್ತ ನೋಡ್ಯಾಳೆ
ಬೇಗನೆ ಗೌಡಿರ ಕರೆಸ್ಯಾಳೆ । (ಕರೆಸಿ) ದೇವೀರಿ
ಪಟ್ಟದ ಕುದುರೆಯ ತರಿಸ್ಯಾಳೆ ॥

ಬಂದಳು ದೇವೀರಿ ಸುತ್ತ ಮುತ್ತ ನೋಡ್ಯಾಳೆ
ಗಂಡಾನ ಕುದುರೆಯ ತರಿಸ್ಯಾಳೆ ।

ಪಟ್ಟದ ಕುದುರೇಯನೇರಿಕೊಂಡು ಹುಡುಕ್ಯಾಳೆ
ದುಂಡಿನಲಿ ಗಂಡನ ಸುಳಿವಿಲ್ಲ ।

ಹಸ್ತು ದೇವೀರಿ ಪರಿಸೇಲಿ ಹುಡುಕ್ಯಾಳೆ
ಪರಿಸೇಲಿ ಪುರುಷರ ಸುಳಿಪಿಲ್ಲ ।

(ಚಾಮುಂಡಿ ಬೆಟ್ಟದ ಆರಮನೆಯಲ್ಲಿದ್ದ ನಂಜುಂಡನಿಗೆ ತನ್ನ ಸತಿ ದೇವೀರಿ ಕೂಗಿದ ಧ್ವನಿ ಕೇಳಿಸಿತು! ಇನ್ನು ಹೊರಡಲು ಆಣಿಯಾಗುತ್ತಾನೆ.)

ಕೋಳಿ ಕೂಗಿತು ಮಕ್ಕಳ ಗಲಗಾಯ್ತು
ದೇವೀರಿ ನೆನಪು ಘನವಾಯ್ತು । ಚಾಮುಂಡಿ
ನಾನೋಡಿ ಹೋದೇನು ಕದತೆಗಿಯೆ ॥

ಕೋಳಿ ಕೂಗಿಲ್ಲ ಮಕ್ಕಳ ಗಲಗಿಲ್ಲ
ನೀರಿನ ಗಲಗು ಬಹುಗಲಗು । ಚಾಮುಂಡಿ
ನಾ ಬೇಗ ಹೋದೇನು ತೆಗಿ ಕದವ ॥

ಕದವ ತೆಗಿದಳೆ ಕೈಯೆತ್ತಿ ಮುಗಿದಾಳೆ
ಜೋತುರದ ಸೆರಗ ಹಿಡಿದಾಳೆ । (ಹಿಡಿದು) ಏನಂದಾಳೆ
ನೀವು ಕೊಟ್ಟೋಗಿ ಕೊರಳ ಪದಕವ ॥

ಸೆರಗು ಬಿಡು ಸೇವಂತಿಗೆ ಉದುರ್ಯಾವು
ಅಚ್ಚನುಲ್ಲಿಗೆ ಅನುರಾಜ । ಉದುರ್ಯಾವು
ನೀ ಸೂಳೆ ಚಾಮುಂಡಿ ಬಿಡೆ ಸೆರಗ ॥

ಸೆರಗು ಬಿಟ್ಟರೆ ಹಂಗೆ ಬಂದಳೇನು
ಅರಮನೆ ಸಯಿವಾಗಿ ಮಪ್ಪೈಯಾಗಿ। (ಮಪ್ಪೈಯಾದ)
ನೇಪೀಸ ಸೂಳೆ ತರವೇನು ॥ ನುಡದಿ ಬಿಟ್ಟು

ನೇಪೀನ ಸೂಳೆ ತರವೇನು–ಮಹಾತಿವನೆ
ನೀಪು ಕೊಟ್ಟೋಗಿ ಕೊರಳ ಪದಕವ ॥

ಪದಕವ ಕೊಡುವುದಕೆ ನಿಂದೇನೆ ನಂದೇನೆ
ದೇವೀರಿರಣ್ಣ ಬಸವಣ್ಣ । (ನ) ಪದಕವ
ಕೊಟ್ಟೋಗೊದೊಳ್ಳೆತನವೇನೆ ॥

ಕದವ ತೆಗೆದಾಳೆ ಜೋತುರದ ಸೆರಗ ಹಿಡಿದಾಳೆ
ನಿಮ್ಮ ಹೆಸರೇಳಿ ಸ್ವಾಮಿ ಕುಲವೇಳಿ ॥

ನಿಮ್ಮ ಹೆಸರೇಳಿ ಸ್ವಾಮಿ ಕುಲವೇಳಿ–ನಂಜನಗೂಡಿನ
ನಡುವೆ ತೋಪೇಲಿರುವ ನಾ
ನಂಜುಂಡಲಿಂಗ ಬಿಡೆ ಸೆರಗ ॥

ಯಾಕಿರಣ್ಣ ಬೆದರಿದಿರಿ ಬೆಚ್ಚಿದಿರಿ
ಏನ ಕಂಡೀರಿ ಬೆಟ್ಟದಲಿ....ಮಾಸ್ವಾಮಿ
ಏನ ಕಂಡೀರಿ ಬೆಟ್ಟದಲಿ.... ।

ಕಪನಿ ಹೊಳೆಯ ನಂಜನಗೂಡಲ್ಲಿ
ಪೂಜೆ ಆಗುತ್ತಿದ್ದೊ ನಂಜಯ್ಯ ಬರುವಾಗ ।

(ನಂಜುಂಡ ಇನ್ನು ಚಾಮುಂಡಿ ಆರಮನೆಯಿಂದ ನಂಜನ
ಗೂಡಿಗೆ ಬಂದು ದೇವೀರಿಯ ಬಾಗಿಲು ತೆರೆ ಎಂದು ಬೇಡುತ್ತಿದ್ದಾನೆ)

ಮೂಡುಸೀಮೆಗ್ಹೋಗಿ ಮುತ್ತು ಭಿಕ್ಷುವ ಮಾಡಿ
ಜೋಳಿಗೆ ತುಂಬಿ ಭುಜ ನೊಂದೊ । ದೇವೀರಿ
ನೀನೆದ್ದು ಬಾಗಿಲ ತೆಗಿ ಬಾರೆ ॥

ಬಾಗಿಲು ತೆರೆಯಾಕೆ ಯಾರೆಂದು ನಾಕಾಣೆ
ಸ್ವಾಮಿ ಸೂಳೆಯ ಮನೆಗ್ಹೋದರು ॥

ಹತ್ತು ಕುರಿ ರಕುತ ಚೆಲ್ಲವೆ ನಿಮು ಮೇಲೆ
ಚಾಮುಂಡಿ ಸೂತಕ ಕಳಕೊಳ್ಳಿ....ನಂಜಯ್ಯ
ಚಾಮುಂಡಿ ಸೂತಕ ಕಳಕೊಳ್ಳಿ ।

ಆರು ಕುರಿ ರಕುತ ಚೆಲ್ಲವೆ ನಿಮುಮೇಲೆ
ಚಾಮುಂಡಿ ಸೂತಕ ಕಳಕೊಳ್ಳಿ—ನಂಜಯ್ಯ
ಚಾಮುಂಡಿ ಸೂತಕ ಕಳಕೊಳ್ಳಿ ।

ಕಂಡುಗ ಬಾಡು ತಿನ್ನೊ ದುಂಡಿ ಕುಟ್ಟಾಡಿ
ನವಲಿಂಗವಂತರ ಕುಲವ ಕೆಡಿಸಿದಿರಿ । ಮಾಸ್ವಾಮಿ
ನೀವು ಮುಳುಗ್ಹೋಗಿ ಕಪನಿ ಹೊಳೆಯಲ್ಲಿ ।

ಕುರಿ ಕೋಳಿ ತಿನ್ನೊ ಬೇಡತಿ ಮನೆಗ್ಹೋಗಿ
ಹಾಲಿನಂತ ಕುಲವು ಹದಗೆಟ್ಟೊ । ಮಾಸ್ವಾಮಿ
ನೀವು ಮುಳುಗ್ಹೋಗಿ ಕಪನಿ ಹೊಳೆಯಲ್ಲಿ ॥

ಅರಿಸಿಣವ ಅರಕೊಳ್ಳಿ ಚಚ್ಚಿಕೊಳ್ಳಿ ಸೀಗೆಯ
ಕಪನಿ ಹೊಳೆಗೋಗಿ ಮುಳುಗೀರಿ । ರಾಯರೆ
ಮಾಡುಂಡು ಬನ್ನಿ ಅರೆಮೇಲೆ ॥

ಅಕ್ಕಿಪಡಿ ಕೊಳ್ಳಿ ಮತ್ತೆ ತಪ್ಪಲಿ ಕೊಳ್ಳಿ
ಮಾಡುಣ್ಣೋಗಿ ಅಡಿಗೆಯ ॥

ಎರಡು ಕಲ್ಲು ಮಡಗಿ ಮೇಲೆ ತಪ್ಪಲೆ ಮಡಗಿ
ಬಾಳೆಯ ದಿಂಡ ಒಲೆಗೊಟ್ಟ । ಉರುಬಿದರೆ
ಹೊಗೆಯೆದ್ದು ಕಣ್ಣ ಬಗೆದಾವು ॥

ತೋಟದ ಸಾಲಿನಲಿ ಊಟಕ್ಕೆ ಹೋಗವರೆ
ಹೋಗಿ ನೋಡಿರೆ ಗೌಡೀರ....

ಅರಿಸಿಣವ ಅರಿಕೊಂಡು ಚಚ್ಚಿಕೊಂಡು ಸೀಗೆಯ
ಕಪಸಿ ಹೊಳೆಯಲ್ಲಿ ಮುಳುಗೀದೆ । (ಮುಳುಗಿ) ಸ್ನಾನವ
ನಾ ಮಾಡುಣ್ಣುದ್ದೆಂಗೆ ಅರಿಮೇಲೆ ॥ ಮಾಡಿ

ಮೂರು ಕಲ್ಲಮಡಗಿ ಮೇಲೆ ತಪ್ಪಲಿ ಮಡಗಿ
ತ್ಯಾಗದ ನೌದೆ ಒಲೆಗೊಟ್ಟ । ಮಾಸ್ವಾಮಿ
ನೀವು ಮಾಡುಂಡು ಬನ್ನಿ ಅರಮನೆಗೆ ॥

ಎರಡು ಕಲ್ಲ ಮಡಗಿ ಮೇಲೆ ತಪ್ಪಲಿ ಮಡಗಿ
ಬಾಳೆಯ ದಿಂಡ ಒಲೆಗೊಟ್ಟ । ಮಾಸ್ವಾಮಿ
ಬಾಗಿಬಾಗಿ ಒಲೆಯ ಉರಿಬ್ಯಾನೆ ॥

ಅನ್ನವಾಯ್ತೆ ಸ್ವಾಮಿ ಊಟವಾಯ್ತೆ ಶಿವನೆ
ನಮಗೊಂದು ತುತ್ತು ಕೊಡುತೀರ....।

ಅನ್ನವು ಹಾಗಿಲ್ಲ ಬಿನ್ನವು ಮುಗಿದಿಲ್ಲ
ಹೆಂಗಸಿನ ಮಾಯೆ ಹೆಂಗೆಂಗೊ । ನಾಕಾಣೆ
ಮಾಡುಣ್ಣೊದ್ದೆಂಗೆ ಗೌಡೀರ ।

ಮೂರ ಕಲ್ಲ ಮಡಗಿ ಮೇಲೆ ತಪ್ಪಲೆ ಮಡಗಿ
ತ್ಯಾಗದ ಸೌದೆ ಒಲೆಗಿಡಿ । ಮಾಸ್ವಾಮಿ
ನೀವು ಮಾಡುಂಡು ಬನ್ನಿ ಅರಮನೆಗೆ ।

ಆರೇಳು ಅಂಕಣದ ಸಾಲು ಮಾಳಗೆಯೊಳಗೆ
ಮನೆಯ ಜಂಗುಮರು ಬರುತಾರೆ । ಬಿಡಿರಮ್ಮ
ನೀವು ಬೀದಿ ಚೌಕಾವ ॥

ಮಾಡುಂಡು ಬಂದೆ ಅರಿಮೇಲೆ–ದೇವೀರಿ
ಈಗಾದರೂ ಕದವ ತೆಗಿಬಾರೆ ॥

ಕದವ ತೆಗೆದಾಳು ಕೈಯೆತ್ತಿ ಮುಗಿದಾಳು
ಚಿನ್ನದ ಗಿಂಡೀಲಿ ನೀರ ತೆಗೆದಾಳು । (ತೆಗೆದು) ದೇವೀರಿ
ನಂಜಯ್ಯ ಪಾದ ತೊಳೆದಾಳು ॥



ಬಿಟ್ಟೆಕಾಣೆ ಇವಳ ಜಲುಮಾಕೆ

ಹೆಣೆಗಂಟನ್ನೂಡಿ ಬೆನ್ನಮ್ಯಾಲೆ ಬಿಡದಿರೆ
ಚೆನ್ನಿಗ ರಂಗಯ್ಯ ಬರುತಾನೆ । ಲಕ್ಕಮ್ಮ
ಚಿನ್ನದ ಸೆರಗ ಮರೆಮಾಡೆ ॥

ಜಾನಪದ ಸಾಹಿತ್ಯ ಸಹಜ, ಸುಂದರ ಹಾಗೂ ನಿರಾಡಂಬರ. ಅದನ್ನು ರಚಿಸಿದವರು ಯಾರೆಂಬುದು ಗೊತ್ತಿಲ್ಲ. ಅಷ್ಟೇ ಅಲ್ಲ ಯಾರ ಮೆಚ್ಚಿಗೆಗೂ ಅದನ್ನು ರಚಿಸಲಿಲ್ಲ. ತಮ್ಮ ದಿನಚರಿಯ ಜೀವನದ ಸಜೀವ ಅನುಭವಗಳನ್ನು ಸಹಜ ಸುಂದರ ಶೈಲಿಯಲ್ಲಿ ಅಸಂಖ್ಯಾತ ಹಾಡುಗಳನ್ನು ಕಟ್ಟಿ ಹಾಡಿದರು, ನಲಿದರು, ಬಿಟ್ಟು ಹೋದರು. ಸುಲಭ ಶೈಲಿಯಿಂದ ಕೂಡಿದ್ದರಿಂದಲೇ ಎಲ್ಲರಿಗೂ ಅತಿ ಸುಲಭವಾಗಿ ಅರ್ಥವಾಗುತ್ತವೆ.

ಯಾವುದು ನೇರವಾಗಿ ಹೃದಯದಿಂದ ಬಂದುದೋ, ಯಾವುದು ಹೃದಯವನ್ನು ನೇರವಾಗಿ ಮುಟ್ಟುತ್ತದೋ ಅದೇ ಉತ್ತಮ ಸಾಹಿತ್ಯವೆಂದು ಹಿರಿಯರೊಬ್ಬರ ಅಭಿಮತ. ಈ ಸೂತ್ರಕ್ಕೆ ಹೆಚ್ಚು ಅನ್ವಯಿಸುವುದೆಂದರೆ ಜಾನಪದ ಗೀತೆಗಳೆಂದು ಧಾರಾಳವಾಗಿ ಹೇಳಬಹುದು. ಯಾವ ಶಾಲಾ ಕಾಲೇಜುಗಳಲ್ಲಿಯೂ ಅಭ್ಯಾಸಮಾಡದ ಹೃದಯದಿಂದ ನೈಸರ್ಗಿಕವಾಗಿ ಹೊರಹೊಮ್ಮಿದ ಗೀತೆಗಳಿವು. ಅವರ ಮುಟ್ಟಿಗೆ ಜೀವನವೇ ಒಂದು ಶಾಲೆ. ಅವರ ದಿನದಿನದ ಕಷ್ಟನಷ್ಟಗಳು ನಗುವು ಬಿಗುವುಗಳು, ಸುಖ ದುಃಖಗಳು ಈ ಬಗೆಯ ಸಾಹಿತ್ಯದ ಉಗಮಕ್ಕೆ ಬುಗ್ಗೆಗಳು. ನಮ್ಮ ಜನ ಎಂದಿನಿಂದಲೂ ಮತ್ತು ಇಂದೂ ಸಹ ಬಡವರಾದರೂ, ಬಡತನದಲ್ಲಿಯೇ ಜೀವನದ ಸೌಂದರ್ಯವನ್ನು ಕಂಡು ನಲಿದವರು, ನಲಿದು ಹಾಡಿದವರು. "ರಸವೆ ಜನನ, ವಿರಸ ಮರಣ, ಸಮರಸವೇ ಜೀವನ" ಎಂದಿದ್ದಾರೆ ಕವಿವರ್ಯ ಬೇಂದ್ರೆಯವರು. ಅಂತಹ ಸಾಮರಸ್ಯ, ಸಮನ್ವಯ ದೃಷ್ಟಿಯನ್ನು ಸಜೀವ ಸಾಹಿತ್ಯದಲ್ಲಿ ನೋಡಬೇಕಾದರೆ ಜಾನಪದ ಸಾಹಿತ್ಯಕ್ಕೆ ಬರಬೇಕು.

—ಶ್ರೀ ಕೆ. ಆರ್. ಲಿಂಗಪ್ಪ, ಬಿ.ಎ., ಎಲ್.ಎಲ್.ಬಿ.

ಬಿಟ್ಟೆಕಾಣೆ ಇವಳ ಜಲುಮಾಕೆ*

ಕಡಗದ ಕಯ್ಯನು ಬೆಡಗಲಿಬೀಸುತ
ನಿಲ್ಲುತ ನಗುತ ನಿಂತು ಮಾತಾಡುತ....ಲಕ್ಕಮ್ಮ
ನಿಂತುಮಾತಾಹುತ ಬರುತಾಳೆ ।

ಅಂದದ ಹೆಣ್ಣಿಗೆ ಗಂಧದ ಸೀರೆಯ
ಒನಪಿನ ಓಲೇನಿಟ್ಟು—
ದುಂಡೊಂದು ರಾಜುಣವ ಮುಂಡೆಯ ಒಳಗಿಟ್ಟು
ನೂರೊಂದು ರಾಜುಣವ ಕೊರಳಿಗೆ ಇಟ್ಟು
ನಾರಿಯ ಕೊರಳೊಳ್ಳಿ ಗರಿಗಳ ತಾನು
ತೆಳ್ಳಗುರೊಳೆತ್ತುತ....।

ನಾರಿ ಲಕ್ಕಮ್ಮನ ತೋಳ ಮೇಲಾಡುವ
ಲೋಲ ರಂಗಯ್ಯ.....

ಹಾರುವರ ಮಗಳಲ್ಲೆ ಕಾಲ ಉಂಗುರದೋಳಿ
ಮೇಲೆ ಒಳ್ಳೆಯ ಮನೆಯೋಳೆ । ಲಕ್ಕಮ್ಮ
ಉಯ್ಯಾಲೆ ನಿಳಿಯೆ ದೊರೆಬಂದ ॥

ಉತ್ತಮರ್ಹೆಣ್ಣಲ್ಲೆ ಮುತ್ತಿನ ಚೆಂಡಲ್ಲೆ
ನಮ್ಮಟ್ಟಗ್ಯಾಕೆ ಬಂದೆ ಸಿರಿಲಕ್ಕು । ನಿನ್ನ ಕಂಡು
ರಂಗಯ್ಯ ಲೆಕ್ಕ ಮರೆತಾನೆ ॥

---

*ಈ ಹಾಡುಗತೆಯನ್ನು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದ ಆಕ್ಕಪಕ್ಕದ ಬೆಟ್ಟಗಳ ತಪ್ಪಲಿನಲ್ಲಿರುವ ಗೊಲ್ಲರಹಳ್ಳಿಗಳಲ್ಲಿ ಗೊಲ್ಲ ಜನಾಂಗದ ಹೆಂಗಸರು ತಮ್ಮ ಮನೆ ದೇವತೆಯನ್ನು ಕುರಿತು ಹಬ್ಬ–ಹರಿದಿನಗಳಲ್ಲಿ ಹಾಡುವರು.

ಬೆಡಗಿನ ಹೆಣ್ಣಿಲ್ಲೆ ರೂವರದ ಚೆಂಡಲ್ಲೆ
ನಮ್ಮೂರಿಗ್ಯಾಕೆ ಬಂದೆ ಸಿರಿಲಕ್ಕ । ನಿನ್ನಾ ಕಂಡು
ರಂಗಯ್ಯ ನ್ಯಾಯ ಮರೆತಾನೆ ॥

ಹೆಣಿಗಂಟನ್ಹೂಡಿ ಬೆನ್ನಮ್ಯಾಲೆ ಬಿಡದಿರೆ
ಚೆನ್ನಿಗ ರಂಗಯ್ಯ ಬರುತಾನೆ । ಲಕ್ಕಮ್ಮ
ಚಿನ್ನದ ಸೆರಗ ಮುರೆಮಾಡೆ ॥

ಅಡಿಕೆಯ ಕೈ ಬಣ್ಣ ಕಿಡಿ ಕಿಡಿಯಾರೊ ರವಿಕೆ
ಮಡಕೆಯ ತುಂಬ ಕೊಡುವೋಳೆ । (ಕೊಡವೊ) ಲಕ್ಕಮ್ಮನ
ಕಡುಕಟ್ಟ ನೋಡೆ ಶಿವಬಂದ ॥

ನೇತುರವನುಟ್ಟು ನೀರಿಗ್ಹೋಗೋ ಹೆಣ್ಣೆ
ಯಾತಾರಲಿಟ್ಟೆ ಶ್ರೀರಂಗ ।

ಗಂಧ ದುಂಡೇಲಿಟ್ಟೆ ನಾ ಗಾಜಿನ ಭರಣೆಲಿಟ್ಟೆ
ಸಂದಿರು ಸಾಲಂಬೊ ಗುರುಡೀಯ । ಸಾಲಾಗೆ
ಮಡಗಿಟ್ಟವಳೆ ಸರಸಕ್ಕೆ ॥

ಸರಸಕ್ಕಿಟ್ಟ ಭರಣಿ ತಾಗ್ಯಾವೆ ಬಾಗ್ಯಾವೆ
ತೊಟ್ಟಿಲ ತೂಗಿ ಮಗನೆದ್ದ । ಕೋಪಕೆ
ಕಿತ್ತಿಟ್ಟಳು ಕೀಲು ಕಡಗವ ॥

ಕಿತ್ತಟ್ಟ ಕಡಗವ ಕಿರುಬೆರಳಲಿಡುಕೊಂಡು
ನಾನೆಂದೆನೆ ಸತಿಯೋಳೆ । ಅನ್ನತ
ನಂಬಿಸುತಾನೆ ಮಡದೀಯ ॥

ಕಾರೆಯ ಕರುಕೆಂದು ಬೇಲುದಾಕಾಯ್ ಒಗರೆಂದು
ಈ ನಾಡಿನ ಹೆಣ್ಣು ಕರಿದೆಂದು । ರಂಗಯ್ಯ
ತರದೀರೋ ಅವಳ ಬೆಡಗೀಯ ॥

ತಂದರೇನಾಯ್ತು ಅಂಗಳವಗುಡಿಸ್ಯಾಳೆ
ಬಿಂದಿಗೇಲಿ ಮೊಸರ ಕಡೆದಾಳೆ । (ಕಡೆದು) ರಾತ್ರಿಗೆ
ಬಂದು ನಮ್ಮ ಮುಂಚಕೆ ಒರಗ್ಯಾಳೆ ॥

ಒರಗಿದರೊರಗಾಲಿ ಸುರ ಹೊನ್ನೆ ಬಾಡಾದೆ
ನೀನೊಪ್ಪಿ ಮುಡಿದ ಪರಿಮಳ । ಪಚ್ಚೆಯತೆನೆಯ
ಯಾವೊಬ್ಬಳಾರ ಮುಡಿಲೇಳೆ ॥

ಹಾಗಲುಕಾಯಂಗೆ ಕೋಗಿಲೆನಾಮವನಿಟ್ಟು
ಆರಾಳ ನಡುವೆ ಬರುವನು । ರಂಗಯ್ನ
ಆಯ ನೋಡ್ಯಾಳೆ ಸಿರಿಲಕ್ಕು ॥

ಆಯ ನೋಡೋಕೆ ನಾನು ಕಳ್ಳನೇನೆ
ಹೋಗಿದ್ದೆ ತೊಳಸಿ ಅರಮನೆಗೆ ।

ಉದ್ದಿನ ಕಾಯಂಗೆ ತಿದ್ದಿದನಾಮವನಿಟ್ಟು
ಬುದ್ಧಿವಂತರ ಮುಂದೆ ಬರುವೋನೆ । (ಬರುವೊ) ರಂಗಯ್ನ
ಬುದ್ಧಿನೋಡ್ಯಾಳೆ ಸಿರಿಲಕ್ಕು ॥

ಬುದ್ಧಿನೋಡಾಕೆ ನಾನು ಕಳ್ಳನೇನೆ ?
ಹೋಗಿದ್ದೆ ತೊಳಸಿ ಅರಮನೆಗೆ ॥

ಬಾಳೆಯ ತೋಟಕೆ ಹೋದನೆ ರಂಗಯ್ಯ
ಬಾಳೆಗೆ ಎರೆಯೊ ಹರಿನೀರ । ಕುಡಿಯಲ್ಹೋಗಿ
ಬಾಲೆಗೆ ರಂಗಯ್ಯ ಮನಜೋತ ॥

ಜಮ್ಮನೇರಲೆಹಣ್ಣು ತಿನ್ನೋರಿಗೆ ಕಡುರುಚಿ
ಕೊಂಬೆ ಜಾರಿದರೆ ಅಸುಮಾನ । (ದ) ಹೆಣ್ಣಿಗೆ
ಚೆಲುವ ರಂಗಯ್ಯ ಮನಜೋತ ॥

ಜೋತರೆ ಜೋಲಾಲಿ ಮನಿಗೇಕೆ ಬರಲಿಲ್ಲ
ಇರುಳಾಕಿದ ಮುಂಡೆ ತಲೆದಿಂಬು । ಬರಿಹಾಸಿಗೆ
ಮಾಯಕಾರನ ಮನೆಗೆ ಬರಹೇಳಿ ॥

ಬಣ್ಣಕಿರುದೇನೆ ಬಂಗಾರ ವಸಿಯೇನೆ
ಗಂಡು ಮಕ್ಕಳವರೆ ನಿನಗೇನೆ । ಲಕ್ಕಮ್ಮ
ಕೊಟ್ಟಾರೆ ಕೊಡೆ ತೊಳಸಿಗೆ ॥

ಗಂಡು ಮಕ್ಕಳಿದ್ದರೆ ಗಂಡನಿದ್ದಂಗೇನೊ
ಬಂಡಿ ಮ್ಯಾಲ್ಹೋಗೊ ಎಳವಾನೆ । ಇದ್ದರೆ
ಗಂಡನುಳ್ಳಮ್ಮ ಪತಿವ್ರತೆ ॥

ತಿರುಪತಿ ಬಣ್ಣ ತಿರುಗಂಚಿನ ತಿರುಬಣ್ಣ
ಮುಳುಬಾಗಿಲು ಬಣ್ಣ ಎಳಿಸಣ್ಣ । ಲಕ್ಕಮ್ಮ
ಕೊಟ್ಟಾರ ಕೊಡೆ ತೊಳಸಿಗೆ ॥

ಮಾಯಕಾರ ರಂಗ ಮಾಯವನೆಲ್ಲ ಕಲಿತೆ
ಮಾಯನಾಗಿದ್ದೆ ಗಿರಿಮ್ಯಾಲೆ ॥

ಉಟ್ಟುಬಿಟ್ಟ ಸೀರ್ಯಾವೆ ತೊಟ್ಟುಬುಟ್ಟು ತಾಳ್ಯಾವೆ
ಕೊಟ್ಟುಬಾರೋ ರಂಗಯ್ಯ ತೊಳಸಿಗೆ ॥

ಮೋಸುಗಾರ ರಂಗ ಮೋಸವ ಕಲಿತಾನೆ
ದಾಸನಾಗಿದ್ದ ಗಿರಿಮೇಲೆ । ಹಾರುವರ ಮಗಳ
ಮೋಸವ ಮಾಡಿ ಕರೆತಂದ ॥

ಅವಳಗಂಡಾಗೆ ಇವಳು ಸುಣ್ಣವಕೊಟ್ಟು
ಕವಳಿಗೆ ಎಲೆಯ ಮಡು ಮಡುಚಿ । ಕೊಟ್ಟರೆ
ದಿಮ್ಮ ದಿಗಿಲೆಂದೊ ಇವಳೆದೆ ॥

ದಿಮ್ಮ ದಿಗಲನದೀರೆ ದಿಗಿಲುಗುಟ್ಟದಿರೆ
ಕಟ್ಟಕೊಳ್ಳೆ ಸೀರೆಸೆರಗೀಗೆ । ಲಕ್ಕನ್ಮ
ಪಟ್ಟಣದೆನ್ನಿಗೆ ಮನಸೋತೆ ॥

ಪಟ್ಟಣದಾಗೆ ಮನಸಿಟ್ಟ ಮದ್ವಾನೆಯ
ಕಟ್ಟ ಮೇಸೋರ ಹೆಸರೇಳು....ರಂಗಯ್ಯ
ನೀನು ಕಟ್ಟ ಮೇಸೋರ ಹೆಸರೇಳು ।

ಹೆಸರೇಳೊಳಲ್ಲಾ ಬಿಸಲಿಗೆ ಬರೊವೊಳಲ್ಲಾ
ದೆಸವಂತರ ಕೋಟಿ ಹಗಲೆಯ । ಕನ್ನವ ಕೊರೆದು
ಕದ್ದು ರಂಗಯ್ಯ ಕರತಂದ ॥

ಬಳೆಗಾರರ ನುನೆಗೆ ಬಳಿಗೆ ನುಗ್ಗಿದಂಗೆ
ಬಾಯಲ್ಹೋರಿ ಬರೊ ಜಗಳಕೆ । ಬಿಟ್ಟುಕೊಂಡು
ಮಾಯಕಾರ ರಂಗ ನಗುತಾನೆ ॥

ಕಂಚುಗಾರರ ಮನೆಗೆ ಕಂಚನುಗ್ಗಿ ದಂಗೆ
ಕೆಂಚೆರಿಬ್ಬರ ಜಗಳವ । ನೋಡಿಕೊಂಡು
ಕಗ್ಗಣ್ಣಲ್ಲಿ ರಂಗ ನಗುತಾನೆ ।

ಹತ್ತು ಬೆಟ್ಟವ ಸುತ್ತಿ ಒಬ್ಬ ರಂಗಯ್ಯ ಬಂದ
ಕಗ್ಗನ್ನೊ ಲಕ್ಕು ಕದತೆಗಿಯೆ ॥

ಕದವ ತೆಗಿಯೋಕೆ ಬಾಲ ತೊಡೆಮೇಲೆ
ಸೀರಿಲ್ಲ ಶಿವನೆ ಹೊರಗಲಿ ॥

ಬಾಲನ ತೆಗೆದು ಗೆಜ್ಜೆ ಮುಂಚಕೆ ಬಿಡೆ
ಹಸೆಯ ಮೇಗಲ ದಸರೀಯ । ಜರತಾರಿಯ
ಒಂದುಡೆ ಒಂದ ಮುಸಗಿಡೆ ॥

ತೆಗಿ ನನ್ನ ಚಿನ್ನವೆ ತೆಗಿ ರನ್ನವೆ
ತೆಗಿ ನನ್ನ ಕೊರಳ ಪದಕವೆ । (ಪದಕದ) ಪಟ್ಟದರಾಣಿ
ತೆಗಿಯೇ ವಜ್ಜುರದ ಅಗಳೀಯ ॥

ಸಿಣಿಮಿಣಿಗುಟ್ಟುತ್ತ ನೆರಿಗೆ ಚೆಲ್ಲಾಡುತ್ತ
ಎಡಗೈಯಲಗಣಿ ತೆಗೆದಾಳೆ ॥

ಅಗಣಿ ತೆಗೆದ್ಯಾಳೆ ಕಣ್ಣೆತ್ತಿ ನೋಡ್ಯಾಳೆ
ತಂದ್ಹಾಕಳೆರಡು ಹೊಸಮಣೆ ।

ಯಾಕೆ ಲಕ್ಕಮ್ಮ ಮತ್ತೊಂದು ಮಣೆ ಎರಡು
ನಿನಗಿಬ್ಬರೇನೆ ಪುರುಷರು ।

ಅಂಜುವೆ ರಂಗಯ್ಯ ಅಣಕದ ಮಾತಿಗೆ
ಸುರಳಿ ಕೆಂಜಡೆಯ ಮುಗುಟೀನ । ಮುಂಡೇಲಿರುವ
ಸುರನಾರಿಗೊಂದು ನಿನಗೊಂದು ॥

ಒಪ್ಪಿದೆ ಕಾಣ್ಹೆಣ್ಣೆ ಕಟ್ಟಾಣಿ ಮಾತುಗಳ
ಬಿಟ್ಟಿಕಾಣೆ ಇನಳ ಜಲುಮಾಕೆ ॥

ಹಟ್ಟಿಗರು ಕಾತಿ ಪಟ್ಟಣಕೆ ಗುರುಕಾತಿ
ಗೊಲ್ಲರ ಲಕ್ಕಮ್ಮ ಛಲಗಾತಿ । ಅಂಬೋಸುದ್ದಿ
ದಿಳ್ಳಿ ಬಾಗಿಲಿಗೆ ಹರಿದಾವು ॥

ಹಾರುವರ ಕೇರಿಗೆ ಹೋದಾಳೆ ಲಕ್ಕಮ್ಮ
ವಾಲೆ ಬಂಗಾರ ಕೊಡಿರಯ್ಯ । ರಂಗನಕುಟ್ಟಿ
ಓಡಿ ಬಂದೋಳ ಮದುವೆಗೆ ॥

ಉತ್ತಮರ ಕೇರಿಗೆ ಒಕ್ಕಾಳೆ ಲಕ್ಕಮ್ಮ
ಕೊಪ್ಪು ಬಂಗಾರ ಕೊಡಿರಯ್ಯ । ರಂಗನಕುಟ್ಟಿ
ಮೆಚ್ಚಬಂದೋಳ ಮದುವೆಗೆ ॥

ಉತ್ತುಮರ ಮನೆಯ ಉಪ್ಪರಿಗೆಲಿದ್ದೋಳ
ಮುತ್ಯಾರೆ ಲಕ್ಕಮ್ಮ ಕರೆದಾರು । ಸುಂದರಗಿರಿಯ
ರಂಗಯ್ಯ ಕೈ ಬೀಸಿ ಕರೆದಾನೆ ॥

ಹಾರುವರ ಮನೆಯ ಹಲಗೆ ಮೇಲಿದ್ದೋಳ
ನಿನ್ಯಾರೆ ಲಕ್ಕಮ್ಮ ಕರೆದೋರು । ಸುಂದರಗಿರಿಯ
ರಂಗಯ್ಯ ಕೈ ಬೀಸಿ ಕರೆದಾನೆ ॥

ಆಕಾಶದರಣಿ ಭೂಮಿ ಚಪ್ಪರಹೂಡಿ
ದೇವಗನ್ನೇರು ಕಳಸೂಡಿ । ಲಕ್ಷ್ಮೀಪುರದ
ರಂಗಯ್ಯಗೆ ಧಾರೆ ಎರೆದಾರೊ ॥

ಆಂಬಾರದರಣಿ ನಿಂಬೆ ಚಪ್ಪರಹೂಡಿ
ರಂಭೆ ಲಕ್ಕಮ್ಮನ ಕಳಸೂಡಿ । ಲಕ್ಷ್ಮೀಪುರದ
ರಂಗಯ್ಯಗೆ ಧಾರೆ ಎರೆದಾರು ॥

ಹಿಂದಲಸಾದ ಮುಂದಕ್ಹೂರಿಕೊಂಡು
ಮುಂದೇಳು ಗಿರಿಯ ಮರೆನೂಡಿ । ಮೂಡ್ಯಾರಲ್ಲೆ
ತಂದೆ ರಂಗಯ್ನ ಮದುವೆಯ ॥

ತಂದೆ ರಂಗಯ್ನ ಮದುವೆಗೆ—ಹಾರುವರು
ಹೂವಿನ ಕಿನ್ನುಡಿಯ ನುಡಿಸ್ಯಾರೊ ॥

ಮುಂದಲಪಾದ ಈಚೆಗೂರಿಕೊಂಡು
ಹಿಂದಲೇಳು ಗಿರಿಯ ಮರೆನೂಡಿ । ಮೂಡ್ಯಾರಲ್ಲೆ
ದಾಸ ರಂಗಯ್ನ ಮದುವೆಯ ॥

ದಾಸ ರಂಗಯ್ನ ಮದುವೆಗೆ—ಹಾರುವರು
ಮೊಗ್ಗಿನ ಕಿನ್ನುಡಿಯ ನುಡಿಸ್ಯಾರೊ ॥

ಬೆಳದಿಂಗಳ ಬೆಳಕಾಗೆ ಕೆಳಗಿಬ್ಬ ಹಾರುವರು
ಅಳಗೆ ಬಟ್ಟಲ ಹಿಡಕೊಂಡು । ಸುಂದರಗಿರಿಯ
ಬೆಳಗೆದ್ದು ಧಾರೆ ಎರೆದಾರು ॥

ಮುಂದಿಂಗಳೆ ಬೆಳೆಕಾಗೆ ಮುಂದಿಬ್ಬರ ಹಾರುವರು
ಗಂಧದ ಬಟ್ಟಲ ಹಿಡಕೊಂಡು । ಸುಂದರಗಿರಿಯ
ಮುಂದೆದ್ದು ಧಾರೆ ಎರೆದಾರು ॥

ಮಂಗಳವಾರ ದಿನ ಮಂಡಗಿ ನೀರುಮಿಂದು
ಗಂಡನಕುಟ್ಟಿ ಗಿಣಿನೂತು । ಏನೇಳಿ
ಹೋಗಿ ಬತ್ತೀನಿ ರಾಯ ತವರೂರಿಗೆ ॥

ಬೇಸಿಗೆ ಬರಲಿ ಬಲಬೆಳ್ಳಿ ತಿರುಗಲಿ
ಕಾರಬ್ಬ ಬರಲಿ ಕಳಿಸೇನು । ಲಕ್ಕಮ್ಮ
ಆಗ್ಹೋಗಿ ಆಗ ಬರುವಂತೆ ॥

ಆಗ್ಹೋಗಿ ಬರುವಾಕೆ ಈ ನಾಡಿನ ತವರಲ್ಲ
ಜೇನಂಗಿನಾಡು ಮಲೆನಾಡು । (ಡ) ತವರಿಗೆ
ತಿಂಗಳಿಲ್ಲದೆ ತಿರುಗೇನೊ ॥

ತಾಯಿ ಲಕ್ಕಮ್ಮ ತೌರಿಗ್ಹೋಗುವಾಗ
ಸಾಲುಗಿರಿಮ್ಯಾಲೆ ಸಿರಿರಂಗ । ಕೂತುಕೊಂಡು
ಸಾವಿರ ಕೊಟ್ಟೀನು ತಿರುಗೆಂದ ॥

ಸಾವಿರ ಕೊಟ್ಟರೆ ಕೊಪ್ಪಿನ ಬೆಲೆಯಿಲ್ಲ
ಇಕ್ಕೇರಿ ಸೀಮೆ ಮರುಗವ । ಕೊಟ್ಟೋರಿಗೆ
ನಾನಿಟ್ಟ ಮೂಗುತಿಗೆ ಬೆಲೆಯಿಲ್ಲ ॥

ನಾರಿ ನಿಮ್ಮೋರುಕಣೆ ಬಹಳ ತಿರುಕರುಕಣೆ
ಬಾಲನ ಕಿವಿಮೇಗಲ ಹರುಳೋಲೆ । ಮುದ್ದುಗೆಯ
ಕಿತ್ತುಕೊಂಡಾರು ಒಳಗೋಗೆ ॥

ನಿನ್ತೈ ನಿನ್ಮೋರು ಹುಟ್ಟು ತಿರುಕರುಕಣೆ
ಪುತ್ರನ ಕಿವಿಯೋಳ ಹರುಳೋಲೆ । ಮುದ್ದುಗೆಯ
ಕದ್ದು ಕೊಂಡಾರು ಒಳಗೋಗೆ ॥

ವಾಲಿಲ್ಲವೆಂದು ನಾರ್ಯಾಕೆ ಮುನಿದಾಳು
ಪಾಳ್ಯದ ಅಗಸಾಲೆ ಕರೆಸ್ಯಾನೆ (ಕರೆಸಿ) ಹೂವಿನ ಕಾವಟಗೆ
ಸಾಲ ದೀವಟಿಗೆ ಬೆಳಗಾಗೆ ॥

ಸಾಲ ದೀವಟಿಗೆ ಬೆಳಿಕಲ್ಲಿ—ರಂಗಯ್ಯ
ವಾಲೆ ಮಾಡಿಸಿದ ಮಡದಿಗೆ ।

ಕೊಪ್ಪಿಲ್ಲವೆಂದು ಅಕ್ಕನೇಕೆ ಮುನಿದಾಳು
ಬೆಳ್ಳೂರ ಪಟ್ಟಣದ ಅಗಸಾಲೆ ಕರೆಸಾರೆ । (ಕರೆಸಿ) ಕಾವಟಗೆ
ಸುತ್ತ ದೀವಟಿಗೆ ಬೆಳಕಾಗೆ ॥

ಸುತ್ತ ದೀವಟಿಗೆ ಬೆಳಕಾಗೆ—ರಂಗಯ್ಯ
ಕೊಪ್ಪು ಮಾಡಿಸಿದ ಮಡದಿಗೆ ॥

ದಾಸಯ್ಯ ತಂದವನೆ ತರವುಳ್ಳ ಬಣ್ಣವ
ಬೆಡಗಿ ಲಕ್ಕಮ್ಮ ಉಡುಬಾರೆ । ಪರ್ವತದ
ಜ್ಯೋತಿ ಬರೆದಾವೆ ಸೆರಗೀಗೆ ॥

ರಂಗಯ್ಯ ತಂದವನೆ ಇಂಬೆಹೂವಿನ ಬಣ್ಣ
ರಂಭೆಲಕ್ಕಮ್ಮ ಉಡುಬಾರೆ । ಪರ್ವತದ
ಗೊಂಬೆ ಬರೆದಾವೆ ಸೆರಗೀಗೆ ॥

ಹಸಿಯಳು ಲಕ್ಕವ್ವ ದಸುರಿಉಡೆಂದರೆ
ಮುಸಿಯಾದವೆಂದು ಮಡಿಗ್ಯಾಳೆ । ಮದರೆಯ
ಮುಸಗಿನ್ಹೊಂಬಾಳೆ ವನದಾಗೆ ॥

ತಾಯಿಲಕ್ಕವ್ವ ತಾನಾಗೆ ಒಲಿದಾಳೆ
ಹಾಲುಂಡು ಬಾಯ ತೊಳೆಯೋರು ।(ತೊಳೆಯೊ)ಗೊಲ್ಲರಿಗೆ
ನಾರಿ ಲಕ್ಕವ್ವ ಒಲಿದವಳೆ ॥

ಅಕ್ಕ ಲಕ್ಕವ್ವ ನುತ್ಯಾರಿಗೊಲಿದಾಳೆ
ತುಪ್ಪುಂಡು ಬಾಯ ತೊಳೆಯೋರು ।(ತೊಳೆಯೊ)ಗೊಲ್ಲರಿಗೆ
ಅಕ್ಕ ಲಕ್ಕವ್ವ ಒಲಿದವಳೆ ॥



ಚೆನ್ನಿಗ ಜೋಗಯ್ಯ

ಮಾವನು ಬೋದರು ಬೈಯಲಿ ಕೇಳಕ್ಕಯ್ಯ !
ಬಾವ ಹೊಡೆದರು ಹೊಡೆಯಾಲೀ
ಕೈಹಿಡಿದ ಗಂಡನು ಹಿತಗತಿಯು ಮಾಡಿಹರು
ಸರಿ ಕಾಣ್ರೇ ಜೋಗಯ್ನ ಹೊಂದೀಗೆ ಹೋಗಬೇಕು !

ಜಾನಪದ ಸಾಹಿತ್ಯದ ಉಗಮಸ್ಥಾನ ಭಾರತದ ಜೀವನಾಡಿಯಂತಿರುವ ಹಳ್ಳಿಗಳು. ಹಳ್ಳಿಯ ಜನಕ್ಕೆ ಹಾಡುವುದೊಂದು ನಿಸರ್ಗದ ದೇಣಿಗೆ ! ಅವರು ದೇವರ ಮೇಲೆ ಇಟ್ಟಿದ್ದ ಅಚಲವಾದ ನಂಬುಗೆಯಿಂದ ಅವರ ಬಾಳು ಬಂಧುರವಾಗಿತ್ತು, ಕಾವ್ಯಮಯವಾಗಿತ್ತು. ಕವನ ಕಟ್ಟಿ ಹಾಡಿ ಬಾಳಿನ ಕಹಿ ಮರೆತ ಜನ ! ಜೀವನದ ಕೊಂಕು ಡೊಂಕುಗಳನ್ನು ಸರಿಪಡಿಸಿಕೊಂಡು ಧರ್ಮಬದ್ಧವಾಗಿ ನಡೆಯಬೇಕೆಂಬ ಆದರ್ಶ ಜೀವಿಗಳು. ತಮ್ಮ ನಿತ್ಯ ಜೀವನದ ನಡೆನುಡಿಗಳನ್ನೇ ನುಡಿಗಟ್ಟು ಹಾಡಿದ್ದಾರೆ. ನಮಗೆ ಬಿಟ್ಟು ಹೋಗಿದ್ದಾರೆ. ಅವರ ಹಾಡುಗಳಲ್ಲಿ ಅನುಭವವಿದೆ; ಅಮೃತವಿದೆ. ಅನುಭವ ಸಿದ್ಧವಾದ ಸಾಹಿತ್ಯವೇ ಬಾಳಿನ ಕೈದೀವಿಗೆ. ಪಂಡಿತ ಸಾಹಿತ್ಯ ಪಟ್ಟಣದ ವಿದ್ಯುಚ್ಛಕ್ತಿಯಾದರೆ ಜಾನಪದ ಸಾಹಿತ್ಯ ಹಳ್ಳಿ ಹಳ್ಳಿಯ ಮನೆ ಮನೆಯ ಪ್ರಣತಿ ! ಎಂತಲೇ ಜಾನಪದ ಗೀತೆಗಳ ಕರ್ತೃಗಳಾದ ಹಳ್ಳಿಯ ರೈತರು, ಹೆಣ್ಣು ಮಕ್ಕಳು ನಮ್ಮ ಕೃತಜ್ಞತೆಗೆ ಪಾತ್ರರು. "ಅಂಬಲಿ ಉಂಡು, ಕಂಬಳಿ ಹೊದೆದು, ಅಂಬುಜಾಕ್ಷನ ನಂಬಿ" ಸಂಸಾರ ಸಾಗಿಸಿದ ಜನ ಕನ್ನಡಸಾಹಿತ್ಯ ಭಂಡಾರವನ್ನೂ ತಮ್ಮ ಹಾಡುಗಳಿಂದ ತುಂಬಿದರು. ನುಡಿ ತಾಯಸೇವೆ ಮಾಡಿದರು.

ಜಾನಪದ ಸಾಹಿತ್ಯವನ್ನು ರಚಿಸಿದವರು ಯಾವ ವಿಶ್ವವಿದ್ಯಾಲಯದ ಪದವೀಧರರೂ ಆಗಿರಲಿಲ್ಲ. ಅಕ್ಷರ ಪರಿಚಯವಿಲ್ಲದ ಹಳ್ಳಿಯ ಅಸಂಖ್ಯಾತ ರೈತಜನ ಅದರ ಕರ್ತೃಗಳು. ಅವರಿಗೆ ಅನುಭವವೇ ಅಭ್ಯಾಸವಾಗಿತ್ತು. ಪ್ರಕೃತಿಯೇ ಪದವಿಯಾಗಿತ್ತು. ಅಂತೇ ಅವರಿಂದ ಸುಂದರವಾದ, ಸರಳವಾದ, ಅನುಭವಪೂರ್ಣವಾದ ಸಾಹಿತ್ಯ ಸೃಷ್ಟಿಯಾಯಿತು. ಜಾನಪದ ಸಾಹಿತ್ಯವೆಂದರೆ ಮತ್ತೇನೂ ಅಲ್ಲ. ಅದು ನಿಸರ್ಗದೊಲವಿನಿಂದ, ಹಳ್ಳಿಗರ ಕಂಠವಿಂದ ಹರಿದು ಬಂದ ಕಾವ್ಯರಸ! ಅಲ್ಲಿ ನಮಗೆ ಸಿಕ್ಕುವ ಉಪಮೆಗಳು, ನೀತಿಗಳು, ಸಿದ್ಧಾಂತಗಳು, ತತ್ವಗಳು: ನಗೆ ಬುಗ್ಗೆಗಳು, ಸರಸ ಸನ್ನಿವೇಶಗಳು, ವಿರಸ ವಿಕೃತಿಗಳು—ನಮ್ಮನ್ನು ಬೆರಗುಗೊಳಿಸುತ್ತವೆ. ಜಾನಪದ ಸಾಹಿತ್ಯದಲ್ಲಿರುವ ಜ್ಞಾನಪ್ರಕಾಶವನ್ನು ನೋಡಿ ಆನಂದಿಸಬೇಕು. ಅದರಲ್ಲಿ ಸಾಮರಸ್ಯ ರಹಿತವಾದ ಸಂಕೀರ್ಣತೆಯಿಲ್ಲ. ಸಮರಸವುಳ್ಳ ಸರಳತೆಯಿದೆ. ಕಪಟವಿಲ್ಲದ ಪ್ರೇಮವಿದೆ ಕಾತಿಣ್ಯವಿಲ್ಲದ ಕರುಣೆಯಿದೆ. ನಗೆಸಾರವಿಲ್ಲದ ಗಾಂಭೀರ್ಯವಿದೆ. ಶ್ರೇಷ್ಠ ಸಾಹಿತ್ಯದಲ್ಲಿರಬೇಕಾದ ಎಲ್ಲ ಗುಣಗಳು ಅಲ್ಲಿ ತುಂಬಿವೆ.

—ಶ್ರೀ ಗೋ. ರು. ಚನ್ನಬಸಪ್ಪ

ಚೆನ್ನಿಗ ಜೋಗಯ್ಯ*

ಜೋಗಿಯ ವೇಷ ತಾಳಿ ಅರ್ಜುನ
ಬಂದಾನು ಹಸ್ತಿನ ಪುರಕೆ ।
ಹಸ್ತಿನಪುರಕೆ ಬಂದು ಅರ್ಜುನ ನಿಂದೊಂದು ರಾಗನೆಳೆದ
ಅರ್ಜುನ ನಿಂದೊಂದುರಾಗನೆಳೆದ ।
ಬೇಲೀಯ ಮೇಗಲ ಬುರುಡೆ
ನೀ ಎನ್ನ ಬೆಟ್ಟದ ಮೇಗಲ ಸೋರೆ ಬಿದುರೆ
ಎಳು ಕಾವಿನ ಒಳಗೆ ಸೋಸಿದ ಉಕ್ಕಿನ ತಂತಿ
ಮಾತನಾಡಲೇ ಕಿನ್ನುಡೀ ॥
ಬಾರೇ ಕಿನ್ನುಡಿಯಮೇಲೆ ಅರ್ಜುನ
ಸಣ್ಣ ಬೆರಳಲಿ ನುಡಿಸುತ....
ಹೆಚ್ಚಾದ ಬಿರುಡೆಯ ಎಡಗೈಲಿ ತಿದ್ದುತ
ಅರ್ಥದಲಿ ಕುಣಿದನಾಗ ।
ಅಕ್ಕಯ್ಯ ನೋಡು ಬಾರೇ
ಇವ ಚಿಕ್ಕರೂಪಿನ ಚೆಲುವನ
ಚಿಕ್ಕಂದಿ ಮೊದಲಿಂದ
ನೋಡೇನೀತನು ರೂಪ ಚಿತ್ರದಲ್ಲಿ ಕಾಣಲಿಲ್ಲ
ಅನ್ಯಾಯಕಾರ ಬ್ರಹ್ಮ ಈತನ ಸನ್ಯಾಸಿ ಮಾಡಬಹುದೆ ।
ಹರ ಹರ ಹರನ ಜಯತೊ
ಇವ ಮೂರು ಪುರುವ ಗೆದ್ದವನೊ ಜಯತೊ
ಚೆನ್ನಿಗಜೋಗಯ್ಯ ಪಟ್ಟಣದಲ್ಲಿ ದೊರೆಯಾಗಿದ್ದರೆ
ಕಣ್ಣಿಂದ ನೋಡಬಹುದು

---

*ಈ ಜಾನಪದ ಕಥನ ಗೀತವನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತು ಚಾಮರಾಜನಗರದ ತಾಲ್ಲೂಕಿನ ಹಳ್ಳಿಗಳಲ್ಲಿ ಹರಿಜನರು ಭಿಕ್ಷೆಗೆ ಹೋಗುವಾಗ ತಂಬೂರಿ ನುಡಿಸಿಕೊಂಡು ಹಾಡುವರು.

ಕಣ್ಣಿಂದ ನೋಡಿದರೆ–ಕೇಳಕ್ಕಯ್ಯ ಕೈಗೆ ಇವನು ಸಿಕ್ಕುವನೆ
ನಮ್ಮ ವಿಧಿ ಬೆನ್ನ ಬಿಡದು
ಹೆಡ್ಡ ಮನುಜಾನ ಕೂಡಿ ಗೆಡ್ಡೆ ಹಣವಿದ್ದರೇನೆ
ಸುಂದಾರ ಜೋಗಿ ಒಂದಿರುಳು ಒಡನಾಡಿ
ಇಂದೆ ಸತ್ತಾರು ಸರಿಯೆ ?
ಮಾವನು ಬೋದರು ಬೈಯಲಿ ಕೇಳಕ್ಕಯ್ಯ
ಬಾವ ಹೊಡೆದರು ಹೊಡೆಯಾಲಿ
ಕೈ ಹಿಡಿದ ಗಂಡನು ಹಿತಗತಿಯ ಮಾಡಿದರು
ಸರಿ ಕಾಣ್ಸೇ ಜೋಗಯ್ನ ಹೊಂದೀಗೆ ಹೋಗಬೇಕು ।
ಕೂಡಬೇಕು ಸಂಸಾರದ ಮಾತನಾಡಬೇಕು ಇವನೊಡನೆ
ಅತ್ತನೋಡು ಇತ್ತನೋಡು
ಜೋಗಿ ಭಾವ ಇತ್ತಲಾಗಿ ತಿರುಗಿ ನೋಡು ?
ಬಹಳ ದೂರದಿಂದ ಭ್ರಮೆ ಪಟ್ಟುಬಂದ ಬಾಲೆ
ಮ್ಯಾಲೆ ಗ್ಯಾನವಿಲ್ಲವೆ ರಾಯನೆ ?
ನಮ್ಮನೆಗೆ ಬಂದರಕ್ಕ ಈ ಜೋಗೀಗೆ ಹಾಲು ಅನ್ನ ಇಕ್ಕುವೆ
ಹಾಲು ಅನ್ನ ಉಂಡ ಮೇಲೆ ವೀಳ್ಯವ ಸಲಿಸಿ
ನಮ್ಮನೆಯ ಸಾಲುಮಂಚದ ಮೇಲೆ
ಜೋಗಯ್ನ ನಾವು ಸಮನಾಗಿ ಮಲಗಬಹುದು
ನಾ ಬಿಡೆನೆ ಈ ಚೆಲುವನ ನಾ ಬಿಡೆನೆ ಈ ಆತನ
ನಾ ಬಿಡೆನೆ ತಾ ಬಿಡೆನೆ ಅಂತೇಳಿ ಅವರವರು
ಹೊಡೆದಾಡಿ ಸಾಯುತಾರೆ ।
ಬಾಲೇರ ಮಾತಕೇಳಿ ಆರ್ಜುನ ಭಾವದೊಳಗೆ ಏನಂದನೆ
ಭಾವುಳ್ಳ ತಾಯಿಗಳಿರಾ ನೀವೆತ್ತ ಬಾಲನು ಸಮನಲ್ಲವೆ
ನೀವೆತ್ತ ಬಾಲನ ಸಮನ ಜೋಗಿಯೊಂದಿಗೆ
ಇನ್ನೆಂತಹ ಮಾತದವ್ವ ।

ಮುತ್ತೈದೆ ತಾಯಿಗಳಿರಾ
ನೀವೆತ್ತ ಪುತ್ರಾರ ಸಮನಲ್ಲವೆ ?
ನೀವೆತ್ತ ಪುತ್ರರ ಸಮದ ಜೋಗಿಯೊಂದಿಗೆ
ಇನ್ನೆಂತಹ ಮಾತನವ್ವ ।
ಅನ್ಯಾಯಕಾರ ಜೋಗಿ ಇವನನ್ನ
ಅವ್ವೆದೀರನ್ನ ಬಹುದೆ ॥
ಇವ ಅಕ್ಕದೀರಿನ್ನ ಬಹುದೆ
ಹಾಳಾಗಲವ್ವ ಜೋಗಿ ನೀನೆಷ್ಟು
ಬೀಳಾಗೋ ಹೋಗೋ ಜೋಗಿ ।
ಹಾಳಾಗಿ ಬೀಳಾಗಿ ಎನುತೆಂದು
ದೂಳು ಶಾಪವ ಕೊಟ್ಟಾರು ।
ಸೂರ್ಯನಿಗೆ ದೂಳಿಟ್ಟರೆ ಸೂರ್ಯನಿಗೆ ತಗಲಲುಂಟೆ
ಶಾಪವ ಕೊಡಲೆಂದ್ರೆ ನೀವು ಹುಚ್ಚೆಡಿದು
ಓಡಬೇಕು ।
ದಮ್ಮಯ್ಯ । ಜೋಗಿ ದೇವ ನಮಗೆ ಶಾಪಗಳ ಕೊಡಲೆಬೇಡ
ಶಾಪಗಳು ಕೊಟ್ಟರೆ ತಾಪಗಳು ತಾಗುವುವು ।
ಈಶ್ವರನ ಸಮದ ಜೋಗಿ ।
ಮುತ್ತೈದೆ ತಾಯಿಗಳಿರ ನನ್ನತ್ತೆ ಮುಸ್ಪವ್ವ
ಮುದುಕಿಯವರೆ ।
ಭಿಕ್ಷಾವ ಕುಂಡ್ಹೋಗಿ ಸುರುಕೆಕೊಟ್ಟು
ಬರುತೀನಿ ಬಿಟ್ಟಿನ್ನ ಕಳುವಿರಮ್ಮ ।
ರಂಡೇರ ಬೀದಿಯು ತರವಲ್ಲವೆನುತಂದು
ನಡೆದಾ ಮುಂದಲ ಬೀದಿಗೆ ॥
ಆಚೆಯ ಬೀದಿಯೊಳಗೆ ಅರ್ಜುನನು
ತಾಯಮ್ಮನ ನೆನೆದುಕೊಂಡ ।

ಅಣ್ಣ ತಮ್ಮಂದಿರ ಬಿಟ್ಟಿ ।
ಸೀಮೆ ದೊರೆತಾನ ತುಂಬಿತು ಹನ್ನೆರಡು ವರುಷ
ಹನ್ನೆರಡು ವರುಷಾವು ತುಂಬಿ ಹೋದಮೇಲೆ
ಹಂತಿ ಸೇರುವುದಿಲ್ಲ ಪಂತೀಲಿ ಉಣ್ಣೋದಿಕ್ಕಿಲ್ಲ ।
ಬೇಲಿಗೆ ತಲೆಯಾಕಿ ಬಿಸಲೀಗೆ ಕಾಲಾಕಿ
ಸುಮ್ಮನೆ ಕಾಲಗಳ ಕಳೆಯ ಬಾರದೆಂದು
ಈ ನಮತಾಯಿ ತರಮನೆಗೆ ಹೋದರೆ
ಹೊಟ್ಟೆಯಲಿ ಹುಟ್ಟಿದ ಮಗಬಂದ
ಎನ್ನುವುದ ನೆಪ್ಪುಗಳ ಬಲ್ಲಳೇನೊ ।
ನಮತಾಯಿ ನೆಲಗಳ ತಿಳಿಯಲೇನೊ ।
ನೆಪ್ಪುಗಳ ಬಲ್ಲಳ ನೆಲೆಗಳ ತಿಳಿಯಾಲಿ
ನೋಡಬೇಕೆನುತೆಂದು ಬಂದ ।
ತಾಯಮ್ಮನ ಮನೆಗೆ ತಾಯಿ ಮುಹಲಿನ ಮುಂದೆ
ನಿಂದೊಂದು ರಾಗನೆಳೆದ ।
ಅರ್ಜುನ ನಿಂದೊಂದು ರಾಗನೆಳೆದ ।
ರಾಗದ ಇಂಪಿಗೆ ಘಗ್ರದ ಶಬತಕ್ಕೆ
ಕಿನ್ನುಡಿಯಲಹರಿಗೆ ರಾಗದ ಇಂಪಿಗೆ ।
ಪಟ್ಟಿಮಂಚದಮೇಲೆ ಕುಂತಿದ್ದ ಕುಂತಮ್ಮ
ಮುಂಕು ಮರುಳಾದಳಯ್ಯ ।
ಮುಂಕೀನ ಗ್ಯಾನದೊಳಗೆ ತಟ್ಟನೆ ಮುಂಚವಿಳಿದು
ಎತ್ತಲಾದೇಶದವನೋ ಯಾವನಾಡಿನಿಂದ ಬಂದೊ ।
ಕೊಕ್ಕರೆಗೆ ಒಂದು ಕೆರೆಯು ಕೊರಮರಿಗೆ ಒಂದು ಊರು
ನಾಡುನಾಡಿನಮ್ಯಾಲೆ ಬೀಡುಣ್ಣೊ ಜೋಗಯ್ಯ
ಊರ್ಯಾವುದೇಳಲಮ್ಮ ?
ರೆಕ್ಕೆ ಹುಟ್ಟಿದ ಪಕ್ಷಿ ಗೂಡು ಮಾಡಿರುವುದಯ್ಯ

ಮೊಟ್ಟೆಯಿಕ್ಕಿ ಮರಿಮಾಡಿ
ಮರಿಗಳಿಗೆ ಗುಟುಕನೆ ತರುವುದಕೆ ।
ಹನ್ನೆರಡು ಗಾವುದ ಹೋಗುವುದು ಜೋಗಯ್ಯ
ಹಾರಾಡಿ ಸೇರುವುದಕೆ ।
ಹಕ್ಕಿಗೂ ಮನೆಯುಂಟಪ್ಪ ಪಕ್ಷಿಗೂ ಸ್ಥಳಗಳುಂಟಪ್ಪ
ನಾಡಿನಾಡಿನಮೇಲೆ ಬೇಡುಣ್ಣ ಜೋಗಿಗೆ
ಮನೆ ಮಠಗಳು ಇಲ್ಲವೆ ಸ್ವಾಮೀ ।
ಯಾವುದೇಳೊ ಜೋಗಿ ನಿನಸೀಮೆ ಯಾವುದ್ಹೇಳೊ ಜೋಗಿ
ಅಂದ್ರಗಿರಿ, ಚಂದ್ರಗಿರಿ....ನಮಸೀಮೆ ಹಿಮಗಿರಿ ಪರ್ವತವು
ಕುಂತಿಯ ರಾಜ್ಯವು ಧರ್ಮರ ಸೀಮೆಯು
ನೀಮದಿಂದ ಬಾಳುತಾರೆ ಎಂದರು ಕಾಣಮ್ಮ
ನಿನ್ನ ಪಟ್ಟಣಕೆ ನಾನು ಭಿಕ್ಷಕೆ ಒಂದೆನಮ್ಮ ।
ಚೆಂದುಳ್ಳಿ ಚೆಲುವ ಜೋಗಿ ನನ ಕಂದ
ತಂದೆ ತಾಯಿಗಳು ಉಂಟೆ ।
ಒಂದಿಗೆ ಹುಟ್ಟಿದವರು ಸಂಗಡ ಬೆಳೆದವರು
ನನ ಕಂದ ನೀವೆಷ್ಟು ಜನಗಳಯ್ಯ ?
ಅಣ್ಣ ದೀರಿಬ್ಬರವರೆ ಮುದುಕಮ್ಮ ತಮ್ಮದೀರಿಬ್ಬರವರೆ
ಒಂದೀಗೆ ಹುಟ್ಟಿದವರು ಸಂಗಡ ಬೆಳೆದವರು
ಪಂಚೈವರು ಜನಗಳಮ್ಮ ।
ನಾವೈವರು ಒಡಹುಟ್ಟಿ ಪಡೆಯಲಿಲ್ಲಾ
ಒಡಹುಟ್ಟಿ ಪಡೆಯಲಿಲ್ಲಾ ।
ತಂದೆ ನಮಗೆಇಲ್ಲವಮ್ಮ ।
ನವಮಾಸ ತಿಂಗಳು ನನ್ನನು
ಕುಕ್ಷದಲಿ ಸಾಕೀದ ತಾಯಮ್ಮ
ನನ್ನ ಕಣ್ಣೆದುರಿಗೆ ಮುತ್ತಿನ

ಮಂಚದ ಮೇಲೆ ಗುಂಡಿನಂಗವಳೆ ತಾಯೇ ।
ಗುಂಡಿನಂಗವಳೆಂದರೆ ಬೆಪ್ಪವ್ವ ತಿಳಿಯಲಿಲ್ಲ
ನಿಮ ತಾಯಿ ಇದ್ದಮೇಲೆ
ಈ ಚೆಲುವನ ಬಿಟ್ಟಿಂಗೆ ಇರುವಳಯ್ಯ ।
ಪಾಪಿಗೆ ಹೊಟ್ಟಿಯಾರ ಉರಿಯದೋಯ್ತ
ಹೆತ್ತಂತ ಮನವಾರ ಮರುಗದೈತ ।
ಹಾಲನು ಅಟ್ಟರವ್ವ ಮುದುಕವ್ವ
ಹಣೆಯಲಿ ಬರೆದರವ್ವ ।
ಬ್ರಹ್ಮನ ಬಳಿಯಲ್ಲಿ ತಂದಿರುವ ಫಲಗಳ
ಯಾರೀಗೆ ಕೊಡಲಿ ತಾಯಿ ।
ನನ್ನ ಮಗನು ಇದ್ದ ಕಾಣೋ-ಜೋಗಯ್ಯ
ನಿನ್ನಂಗೆ ಇದ್ದನಯ್ಯ ।
ನಿನ್ನಂಗೆ ಇದ್ದನಪ್ಪ ನಿನಗಿಂತ ಚೆಲುವ ಕಾಣೊ ।
ಗಂಧದಲಿ ಗರುಡ ಕಾಣೊ-ನನ ಮಗ
ಜಂತದ ಸೊಂಬೆ ಕಾಣೋ ।
ನಡೆವದ ನುಡಿವದ ನೋಡಿದರೆ-ನನ ಮಗ
ಅರ್ಜುನನಾಗೆ ಕಾಣುತೀಯೆ—ಜೋಗಯ್ಯ
ನೀನು ಎಲ್ಲಿಂದ ಬಂದೆ ಹೇಳೊ ॥
ಊರು ಮುಂದಾಡೋ ಮಕ್ಕಳು
ನಿನ್ನ ಮಕ್ಕಳಾಗ ಬಲ್ಲೇವ ।
ದೇವಲೋಕದಿಂದ ನಿನ್ನ ಪಟ್ಟಣಕೆ
ನಾನು ಭಿಕ್ಷಾಕೆ ಒಂದಾರೆ—
ನೀನೆನ್ನ ಮಗನು ಸಮನೆನ್ನಬಹುದೆ ?
ಕಣ್ಣು ಕಾಣದ ತಾಯಿ
ಕಿವಿಯ ಕೇಳದ ಮುದುಕಿ....

ತಿಳಿಯಾದೆ ಮಾತಾಡೊ ಹೊತ್ತಿಗೆ
ನಿನ್ಗೆ ಕೋಪ ಬಂತಪ್ಪ ಜೋಗಿ।
ಅರ್ಜುನನು ಎಂದರಮ್ಮ ನಿನ್ನ ಮಗನೇನೆ ತಾಯೀ।
ಅರ್ಜುನನು ಎಂದರಮ್ಮ ಮುದುಕಮ್ಮ।
ನನ್ನೊಳಗೆ ಬಚ್ಚಿದ್ದನಮ್ಮ।
ತಂದೆಯಾರೆನ್ನವೊತ್ತಿಗೆ ನಮತಂದೆ ಪಾಂಡವರು ಎಂದನಮ್ಮ
ತಾಯಿಯಾರನ್ನವೊತ್ತಿಗೆ ನಮತಾಯಿ ಕುಂತಮ್ಮ ಎಂದನಮ್ಮ
ನಮ್ಮಣ್ಣ ಭೀಮನು ನಮ್ಮಣ್ಣ ಧರ್ಮನು।
ನನ ತಮ್ಮ ನಕುಲ ಸಹದೇವರು।
ನನ್ನ ಹೆಸರು ಅರ್ಜುನರಾಯನೆನ್ನ ಬಹುದೆ।
ಅರ್ಜುನನೆಂದನಮ್ಮ ಮುದುಕಮ್ಮ।
ನಿಜವೇನೆ ನೋಡೆ ತಾಯೀ ?
ಹೌದು। ಹೌದಪ್ಪ ಜೋಗಿ।
ಎಲ್ಲ ಕಂಡೆಪ್ಪ ಜೋಗಿ।
ನಿನ ಮಗನ ನಾನೆಲ್ಲಿ ಕಂಡೆನೆಂದರೆ..
ಕಾಶಿಲ್ಲಿ ಕಂಡೆ ತಾಯೀ।
ಕಾಶಿಕಾಳ ಬೀರನ ಹತ್ತಿರಕೆ ದೀಕ್ಷೆಗಳು
ನಾವು ಹೋಗಿ....
ಮೋಕ್ಷಾರ್ಥಿನ ಪಡೆದವು।
ಅಲ್ಲಿಂದ ದಕ್ಷಿಣಿಕೆ ಬಂದೆವಮ್ಮ
ಆಲ್ಲಿ ಆಲದ ಮರವಿತ್ತು !
ಆ ಆಲದ ಮರದೊಳಗೆ ಹಾಲಿನ ಕೊಳವಿತ್ತು !
ಅಲ್ಲಿ ತಾನಗಳ ಮಾಡೀದೊ ನೇಮಗಳ ಮುಗಿಸೀದೊ।
ಊಟವನು ಮಾಡಿ ವೀಳ್ಯವನು ಸಲಿಸುವ ಸಮಯದಲ್ಲಿ।
ಸರ್ಪದುಟವಾಯಿತಮ್ಮ।
ನಿನ ಮಗ ಸಂದೋದ ಕಣೆ ಮುದುಕಿ ।

ಬೇಲೀಗೆ ತಲೆಯಾಕಿ ।
ಬಿಸಲಿಗೆ ಕಾಲಾಕಿ ।
ನಿನ ಮಗ ಪ್ರಾಣವನು ಬಿಟ್ಟನಮ್ಮ ।
ಮಗನಲ್ಲ ಕಾಣೊ ಜೋಗಿ ।
ಅವನು ನನಗೆ ತಂದೆ ಸಮಾನನು ಹೌದು ।
ಮುಂಚಿ ಕೇಳೊ ಹೊತ್ತಿಗೆ ಮಗನೆಂದು ಹೇಳಿದೆ—
ಈಗ ತಂದೆಂಗೆ ಹೌದೇನಮ್ಮ ।
ಕೇಳಪ್ಪ ಜೋಗಯ್ಯ ।
ನಮ್ಮಕ್ಕ ಗಾಂಧಾರಿ ಎಂಬುವಳು ।
ಲೋಭಿ ಹಬ್ಬವಮಾಡಿ ನನ್ನನ್ನು—
ಕರೆತೀನಿ ಎಂದು ಹೇಳಿದಳು ।
ನೂರೊಂದ ಮಕ್ಕಳ ಸಂತೋಷದಲಿ ನನ್ನ ಮರೆತಳು ।
ಆಗ ದುಃಖವನು ಮಾಡುವಾಗ—
ಅರ್ಜುನನು ಬೆನ್ನಿಂದೆ ಗರ ಗರನೆ ಓಲೆ ಬರೆದನು ।
ದೇವೇಂದ್ರನ ಹತ್ತಿರಕೆ ಕಳುಹಿಸಿ ।
ಅಲ್ಲಿಂದ ಬಿಳಯಾನೆ ಬರಮಾಡಿ ।
ಲೋಭಿ ಹಬ್ಬ ಮಾಡಿ ನನ್ನ ದುಃಖ ತೀರಿಸಿದನು ।
ಅವನು ನನಗೆ ತಂದೆ ಸಮಾನನು ಹೌದು ।
ಹೊಟ್ಟೆ ಬಾಳ ಹಸಿಯುತೀದೆ ಮುದುಕಮ್ಮ....
ಚಿಟ್ಟೆಗಳು ಬರಳುತ್ತಿವೆ ।
ಹೊಟ್ಟೆ ತುಂಬ ಅನ್ನವನು ಊಟಮಾಡಿ
ಮುದುಕಮ್ಮ ತುಂಬಿತು ಹನ್ನೆರಡು ವರುಷ ।
ನಿನ್ನ ಅರಮನೆಯೊಳಗೆ ನನಗಿಷ್ಟು
ತುತ್ತನ್ನ ಕೊಟ್ಟರೆ–ಪುಣ್ಯಗಳು ಬರುವುದಮ್ಮ ।
ಅನ್ನವನು ಕೇಳಬೇಡ ಜೋಗಯ್ಯ

ಇನ್ನೊಂದ ಹೇಳುತೀನಿ ।
ಒಂದ್ಹೊತ್ತಿನ ಊಟಕಾಣೋ–ನನ್ನ ಮಕ್ಕಳಿಗೆ
ತಣ್ಣೀರು ತಾನವಪ್ಪ ।
ಒಂದ್ಹೊತ್ತಿನ ಊಟದಲಿ ತಣ್ಣೀರು ತಾನದಲಿ ।
ಐದು ಜನ ಮಕ್ಕಳವರೆ ಜೋಗಯ್ಯ ।
ಹೆಣೆದು ಕಂಡವರೆ ವ್ರತವ ।
ಮುಂದಲನ್ನದ ಮನೆ ಮುಂಚೆ ಹೋಯಿತದೆ ಕಂದ
ಇನ್ನೊಂದು ಬೀದಿಗೆ ಹೋಗು ಜೋಗಯ್ಯ !
ಆಚೆಯ ಬೀದಿಯೊಳಗೆ–ಜೋಗಯ್ಯ !
ಇಕ್ಕುತಾರೆ ಅನ್ನ ಹೋಗೋ !
ಅಮ್ಮ ! ಮುದುಕಮ್ಮ ಆಚೆಯ ಬೀದಿಯೊಳಗೆ
ಕನ್ನೆ ಒಂದೆಣ್ಣು ಬಾಲೆ ।
ನನ್ನ ಅಂದ ಭಾವವ ನೋಡಿ ।
ನನ್ನ ಚೆಂದ ಚೆಲುವಿಕೆ ನೋಡಿ ।
ನೋಡಿ–ನನಗವಳು
ಹಾಸು ಮುಂಚನೆ ತಂದು ಕರೆವಾಳು ।
ಸೂಳೇರು ಉಂಟು ಕಾಣೋ ಜೋಗಯ್ಯ ।
ಈ ಪಟ್ಣದಲಿ ರಾಣೀರು ಅವರೆ ಕಾಣೋ ।
ಅರಗಿಣಿಯ ಭಾಮದಲಿ ಬಂದಿರುವ ಜೋಗಿಯ—
ಮೈಬಣ್ಣ ಕೆಡಿಸುವರು ।
ಬುದ್ಧಿವಂತನಾಗಿ ಹೋಗೋ–ಜೋಗಯ್ಯ ।
ನೀನು ಬುದ್ಧಿವಂತನಾಗಿ ಹೋಗೋ ।
ಸೂಳೇರು ಎಂದಿರಮ್ಮ... ನಿಮ್ಮ ಪಟ್ಣದಲಿ ।
ಅವಂಯ್ಯಾವ ಬೀದಿಲ್ಯವರೆ ।
ರಾಣೀರು ಎಂದಿರಮ್ಮ... ಮುದುಕಮ್ಮ ।

ನಿಮ್ಮ ನಗರದಲಿ ಅವರ್ಯಾವ ಕೇರಿಲ್ಯವರೆ ।
ಅಕತಹವರ ಆಟ ಕೋಟಲೆಗೆಲ್ಲಾ
ದಕ್ಕುವನು ನಾನಲ್ಲಾ ಕಾಣಮ್ಮ ।
ನಾನು ಮಾಯದ ಜೋಗಿ ತಾಯಿ ।
ಅಕ್ಕಿ ಬೇಳೆಯ ಕೊಡುವೆ–ಜೋಗಯ್ಯ ।
ಅದಕೆ ತಕ್ಕ ಹುಳಿಗೆ ಉಣಿಸೆಹಣ್ಣ ಕೊಡುವೆ।
ಎಮ್ಮೆ ನೊರೆಹಾಲ ಕೊಡುವೆ–ಜೋಗಯ್ಯ ।
ರಸಬಾಳೆಹಣ್ಣು ಕೊಡುವೆ ।
ಅಕ್ಕಿ ಬೇಳೆಯ ಕೊಡುವೆ ।
ಅದಕೆ ತಕ್ಕ ಹುಳಿಗೆ ಮಿಣಿಸೆಹಣ್ಣ ಕೊಡುವೆ ।
ನಿನಗೆ ತಪ್ಪಲಿ ಚವರಿಗಳ ಕೊಡುವೆ ।
ಅಕ್ಕ ಗಾಂಧಾರಿ ಎಂಬೋ
ಸರ್ವರ ತೋಟದಲಿ ।
ಅಟ್ಟುಂಡು ಬಾರೋ–ಜೋಗಿ ।
ನಿನ್ನೈವರು ಮಕ್ಕಳು ಪಟ್ಟಸುಖಿ ಬಾಳಲೆಂದು ।
ಹರಸುವೆನು ನಾನಿಂದು ।
ಕಾಶಿಕಾಳ ಭೈರುವನ ಹತ್ತಿರಕೆ ನಾನು ಹೋಗಿ ।
ಧೀಕ್ಷೆಗಳ ನಾನ್ಹಾಗಿ ಮೋಕ್ಷಾರ್ತಿನಾ ಪಡೆವೆನು ।
ಅಡಿಗೇಯ ಮಾಡುವ—
ಆತರ ಹೋಲು ಪಡೆ ತಿಳಿಯದಮ್ಮ ।
ಆನ್ನವಿಲ್ಲದಿದ್ದರೆ ಮುದುಕಿ....
ನಿನ್ನರಮಲ್ಲಿ ಒಂದ್ಕೆಣ್ಣಾದ್ರೆ ಕೊಡಿಸೆ ತಾಯೀ ।
ಕೇಳಯ್ಯೆ ಜೋಗಯ್ಯ ।
ಹೆಣ್ಣುಮಗಳ ಪಡೆದಿದ್ದೆ ।

ನಿನ್ನಂತಹ ಸಿದ್ದ ಜೋಗಯ್ಯ ಬಂದಿದ್ರೆ।
ಲಗ್ನವ ಮಾಡಿ ಕಳುಹುವೆನು ಕಂದಣ್ಣ ।
ನಾನು ಹೆಣ್ಣು ಮಕ್ಕಳ ಪಡೆಯಲಿಲ್ಲಾ ।
ಈ ಪಟ್ಟಣಕೆ ಹೋಗಪ್ಪ ।
ನಿನ್ನ ಕಣ್ಣಿಗೆ ಬೇಕಾದಂಥ ಹೆಣ್ಣುಗಳ....
ನೋಡಿಕೊಂಡು ಬಾಗಪ್ಪ ಜೋಗಯ್ಯ ।
ಐದು ಹೆಣ್ಣುಗಳ ನೋಡಿಕೊಂಡು ಬಾರಪ್ಪ ।
ಪಂಚ ಕಲ್ಯಾಣ ಮಾಡಿ ಕಳುಹುವೆನು ।
ಕಂದಣ್ಣ ಕರೆಕೊಂಡು ಹೋದೀಯೇನೊ ।
ಅಲ್ಲೆಲ್ಲ ಏಕೆ ಮುದುಕಿ–ನಿನ್ನ ಮನೆಲಿಲ್ಲವೇನೆ ?
ಬ್ರಾಹ್ಮಣರ ಮನೆಗೆ ಜೋಗಿ
ನಿನಗೆ ಊಟಕೆ ಹೇಳಲೇನೊ ।
ಬ್ರಾಹ್ಮಣರ ಮನೆಯಲ್ಲಿ ಹೊಕ್ಕು ಸಲುಸುವನಲ್ಲಾ ।
ನಾನು ಕ್ಷತ್ರಿಯ ಜಾತಿಯವನು ।
ಮುದುಕಮ್ಮ–ನಿನ್ನ ಹಸ್ತದಲಿ ।
ನನಗಿಷ್ಟು ತುತ್ತನ್ನು ನೀಡು ತಾಯಿ ।
ಮುತ್ತು ಮೂಗಳ್ನ ಕೊಡುವೆ–ನನ್ನ ಮನೆಯ
ರತ್ನ ನಾಗಳನ ಕೊಡುವೆ ।
ನಿನ್ನ ದೊಡ್ಡ ಜೋಳಿಗೆ ತುಂಬಿ ...
ದಾನ ಕೊಡುತೀನಿ–ಜೋಗಪ್ಪ ।
ನನ್ನ ಮನೆಯ ಬೆಂದನ್ನ ಕೇಳಬೇಡ ।
ಊರೂರು ಸುತ್ತು ಜೋಗಿ ।
ಅದನ್ನೆಲ್ಲಾ ನಾನೇನು ಮಾಡಲಮ್ಮ ।
ಆಚೆ ಮಹಲಿನಲ್ಲರುವ ನಿನ್ನ ಸೊಸೆ
ದ್ರೌಪದಿಯ ದಾನಕ್ಕೆ ಕೊಟ್ಟರೆ ।

ನಾನು ಸುಮ್ಮಾನೆ ಹೋಗುತೀನಿ ।
ಛೇ ! ನಿಮ್ಮಣ್ಣನ ತಿಂದೀಯಯ್ಯ ।
ಜೋಗಯ್ಯ ನಿಮ್ಮ ತಮ್ಮಾನ ತಿಂದೀಯಯ್ಯ ।
ಜೋಗಯ್ಯ ನಿಮ್ಮ ತಮ್ಮಾನ ತಿಂದೀಯಯ್ಯ ।
ನಿಮ್ಮ ಅಣ್ಣ ತಮ್ಮದೀರ ಒಡಿದು
ಬಾಯಿಗೆ ಹಾಕಿಕೊಳ್ಳುವ–ಜೋಗಯ್ಯ
ನನ್ನ ಸೊಸೆಮೇಲೆ ಅನ್ಯಾಯ ಹೇಳಬಹುದೆ ?
ನಮ್ಮಣ್ಣ ತಮ್ಮದೀರ ನನಗ್ಯಾಕೆ ತಿನ್ನಸ್ತೀಯೆ ।
ನಿಮ್ಮ ಶಕನಿ ಸೋದರಮಾವನ ಬಡಿದು
ಬಾಯಿ ಗಾಕಳ್ಳಿರ ತಾಯೀ ।
ನಿನ್ನ ಸೊಸೆನ್ಯಾಲೆ ಅನ್ಯಾಯ ಹೇಳಲಿಲ್ಲ ।
ದ್ರೌಪದಿ ಕರೆವೆ ಏನೋ ನಿನಗೆ ।
ಮೋಕ್ಷಾರ್ತಿನ ಕೊಡಸಲೇನೋ ।
ನಿನ ಸೊಸೆ ನನಗವಳು ಶಾಪಾವ ಕೊಡುವುಡಕೆ ।
ಅಂತಹ ಪತಿವ್ರತೆ ಅಮ್ಮ ।
ಬೀದಿ ಬೀದಿಗೊಂದು ನಾಂಟ್ಯವನಾಡಿಕೊಂಡು ಬರತಾಗ....
ನಿನ್ನ ಸೊಸೆ ಗೌಡರ ಕಳುಹಿಸಿ ।
ನನ್ನ ಕರೆಸಿಕೊಂಡಿದ್ದ ತಾಯಿ ।
ದಮ್ಮಯ್ಯ ಜೋಗಿದೇವ ।
ನನ್ನನನೈವರ ಮಕ್ಕಳ ಮಾನವ ಕಳೆಯಬೇಡ ।
ನೀನ್ಯಾಕೆ ಒಳಗುಟ್ಟಿನ ಒಳಗೆ ।
ಹೇಳೀಯೆ ಮುದುಕಮ್ಮ ।
ಧರ್ಮರ ಹೆಂಡತಿ ನನ ಕೈಗೆ ಸಿಕ್ಕಿದೆ ಏನುತೆಂದು ।
ಬೀದಿ ಬೀದಿಗಾಣೆ ಸಾರೂತ ಹೋಗುತೀನೀ ।
ಕ್ಷತ್ರಿಯರ ಮನೆಯಲ್ಲಿ ಹೆಚ್ಚು ಮಾತಾಡಿದರೆ

ಕಟ್ಟಿಸುವೆನು ಎರಡು ತೋಳ ।
ಅಜಗಟ್ಟಿ ಕಟ್ಟಿಸಿ ಬೆನ್ನೊಡೆಯ ಬಡಿಸುವೆನು ।
ಅಜಗಟ್ಟಿ ಕಟ್ಟಿಸಿ ಬೆನ್ನೊಡೆಯ ಬಿಡಿಸಿದಕೆ
ನಿನ್ನರಮನೇಲಿ ಹೆಣ್ಣುಕದ್ದಲ್ಲಿ ತಾಯೀ ।
ಆಗಲೆ ಬಿತ್ತಿದರು ಆಗಲೆ ಬೆಳೆದರು ।
ಒಂದು ಬಾಂಡವದೊಳಗೆ ಅಡಿಗೆಯ ಮಾಡಿಸಿ.....
ನಾಲ್ಕುವರ ಮಕ್ಕಳಿ ಬರಮಾಡಿ ಕುಂತಮ್ಮ !
ನಾಲ್ಕುವರ ಮುಂದು ಹಾಡಿಯೊಳಗೆ ಕುಳ್ಳಿರಿಸಿ ।
ಜೋಗಯ್ಯ ಒಕ್ಕಡೆ ಕುಳ್ಳಿರಿಸಿ ।
ಊಟಕೆ ಇಕ್ಕುತಾಳೀ ।
ಊಟಕೆ ಇಕ್ಕುತಾಳೀ ।
ಊಟಕೆ ಇಕ್ಕುವ ಸಮಯದಲ್ಲಿ ।
ಅರ್ಜುನ ಮತ್ಯೈನಂದನಾಗ—
ನಾಲ್ಕುವರು ಮಕ್ಕಳು ವೂಟವ ಮಾಡುತೀರಿ ಧರ್ಮಣ್ಣ....
ಇನ್ನೊಬ್ಬ ತಮ್ಮಯ್ಯ ಎಲ್ಲಿಗ್ಹೋದ ।
ಗೌಡೀರ ಕಳುಹಿಸಿ.....।
ದ್ರೌಪತಿ ವಾಸದಲಿ
ನನತಮ್ಮ ಅರ್ಜುನ ಇರುವನು ।
ಕರೆಕೊಂಡು ಬನ್ನಿ ಎಂದ ।
ದ್ರೌಪತಿವಾಸದಲ್ಲಿ ಹೋಗಿ ಕೇಳುವ ಕಾಲದಲ್ಲಿ ।
ದ್ರೌಪತಿ ನನ್ಮನೆ ವಾಸದಲ್ಲಿ ।
ಪಗಡೆಯಾಡಿ ಸೊತ ಕಾರಣದಿಂದ.....
ಅರ್ಜುನನು ದಿರಿಯ ಹನ್ನೆರಡೊರುಷ.....
ಜೋಗಿಯಾಗಿ ಹೋದಳೆಂದ ।
ಬಂದು ಹೇಳುವ ಕಾಲದಲ್ಲಿ ಗೌಡಿರು।

ಆಗ ಕೃಷ್ಣ ಪರಮಾತ್ಮನು ಬಂದನು ।
ಏಳು ತೆರೆಯ ಕಟ್ಟಿಸಿ ಏಳು ತೆರೆಯೊಳಗೆ ।
ಅರ್ಜುನನು ಮುಖವನ್ನು ತೋರಿಸುತಾನೆ ।
ಭಾವನಾದಂಭಿ ಕೃಷ್ಣ ಪರಮಾತ್ಮನು
ಆಗ ಬಿತ್ತಿ ಆಗಲೆ ಬೆಳೆದರು ।
ಒಂದು ಬಾಂಡುವದೊಳಗಡೆ ಅಡಿಗೆಯ ಮಾಡಿಸಿ ।
ಪಂಚೈದು ಮಕ್ಕಳ ಒಂದಿಗೆ ಕುಳ್ಳಿರಿಸಿ ।
ಊಟಕೆ ಇಕ್ಕುತಾಳೆ ಕುಂತಮ್ಮ ।
ಅಲ್ಲಿಗೆ ಆ ಸಂಧೀಯು ಮುಂದಿಕೆ ಕೇಳಿಮಾಳ್ವ ।
ನಂಜನಗೂಡಲ್ಲಿ ಇರುವ ನಂಜುಂಡಲಿಂಗ
ಎಲ್ಲ ಕಾರ್ಯದಲಿ ಸಲ್ವ
ಎಲ್ಲಾ ಕಾರ್ಯದಲಿ ಸಲ್ವೆಲ್ಲದ ಭಾರತದ ಕಥೆಯಿದು
ಬಲ್ಲವರು ನೀವೆಲ್ಲಾ ಲಾಲೈಸರೀ



ಕಥಾವಿಹಾರ



ಯಲ್ಲಿ ಬಾಳಬೇಕಾಗುತ್ತದೆ. ಗಂಗೆಮಾಳಿಯ ರೂಪು, ಲಾವಣ್ಯ, ಶಿವನ ಮೇಲಿನ ಪ್ರೇಮ ಅಂಥವು. ಕೊನೆಗೂ ಅವಳು ತನ್ನ ಪಾಲಿಗೆ ದೊರೆತುದು ಗಂಗಾಧರನಿಗೂ ಆನಂದ. ಆ ಕಡೆ ಗಂಗೆಮಾಳಿ ಈ ಕಡೆ ಪಾರ್ವತಿಯನ್ನು ಕೂರಿಸಿಕೊಂಡು ಹೂ ಮುಡಿಸಿ ನಲಿಯುವ ರಸಿಕ ಅರಸಾತ.

ಚಿಕ್ಕಜಾಜಿ ಮರಕೆ ತಲೆಕೊಟ್ಟ :—

ಚಿನ್ನಮ್ಮ ಜುಂಜಪ್ಪ ದಂಪತಿಯರು ಎತ್ತುಗಳನ್ನು ಸಾಕಿ ಆ ಸುತ್ತಿಗೆ ಹೆಸರಾದವರು. ಎತ್ತು ಮೇಯಿಸುತ್ತಾ ಹೋದರೆ ಅವುಗಳ ಧೀರರೂಪಿಗೆ ಬೆರಗಾದ ಹೆಣ್ಣುಮಕ್ಕಳು ಆರತಿಯನ್ನು ತಂದು ಬೆಳಗುತ್ತಿದ್ದರು. ಅವನ್ನು ಪಿಡಿದು ನಿಂತ ಜುಂಜಪ್ಪನೂ ವೈಭವದಿಂದ ಕಂಗೊಳಿಸುತ್ತಿದ್ದ. ಆ ಎತ್ತುಗಳ ಆಕರ್ಷಕರೂಪಿಗೆ ಅಸೂಯೆಪಟ್ಟ ಯಾರೋ ಮದ್ದನ್ನು ಬೆರಸಿದ ಘಾಸನ್ನು ತಿನಿಸಿ ಮೂಕ ಪ್ರಾಣಿಗಳ ಮರಣಕ್ಕೆ ಕಾರಣರಾಗುತ್ತಾರೆ. ತನ್ನ ಪ್ರೀತಿಯ ಎತ್ತುಗಳನ್ನು ಕಳೆದುಕೊಂಡ ಜುಂಜಪ್ಪ, ಚಿನ್ನಮ್ಮ ಬಹುವಾಗಿ ದುಃಖಿಸುತ್ತಾರೆ. ಈ ಸುದ್ದಿ ದೂರದ ಊರಿಗೆ ಕೊಟ್ಟಿದ್ದ ಕರಿಯವ್ವನಿಗೆ ತಿಳಿಯುತ್ತದೆ. ಆಕೆ ಮಹಿಮಾವಂತೆ. ಪವಾಡಗಳನ್ನು ಬಲ್ಲವಳು, ಮಾಯ ಮಂತ್ರಗಳನ್ನು ತಿಳಿದವಳು. ತಾಯಿ–ತಂದೆಯರ ದುಃಖವನ್ನು ತಿಳಿದು, ಅಲ್ಲಿಂದ ತೌರಿಗೆ ಬಂದು ಬೇವಿನ ಎಲೆಯನ್ನು ಮಂತ್ರಿಸಿ ತನ್ನ ತಂದೆತಾಯಂದಿರನ್ನು ಹರ್ಷಗೊಳಿಸುತ್ತಾಳೆ (ಆದರೂ ನ್ಯಳದೇವತೆ ಕರಿಯವ್ವನನ್ನು ಕುರಿತು ಹಾಡುವ ಈ ಕಥನ ಕವನದ ಪೂರ್ವಾರ್ಧದ ಕಥನ ಭಾಗ ಸ್ವಲ್ಪ ಅಸ್ಪಷ್ಟ.)

ಸಂಗಾತಿ :

ಇಬ್ಬರು ಗೆಳತಿಯರ ನಡುವೆ ಮೈತ್ರಿ ಬೆಳೆಯುತ್ತದೆ. ಕೆರೆಯ ನೀರಿಗೆ ಕರಿಯ ಸೀರೆಯನ್ನುಟ್ಟು ಹೋದಾಗ, ತನ್ನ ಸಂಗಾತಿ ಸಂಗಮ್ಮನನ್ನು ನೆನೆದು ಮತ್ತೊಬ್ಬಳು ಗೆಳತಿ ಮರುಗುವ ಒಂದು ಬಂಧುರ ಚಿತ್ರ. ಅವಳಿ

ಗಿಂತಲು ಚೆಲುವೆಯೂ, ಸ್ನೇಹಪ್ರಿಯೆಯೂ ಆದ ಸಂಗವ್ವ ಮದುವೆಯಾಗಿ ಹೋದರೂ, ತನ್ನ ಪುರುಷನ ಮಂಚದ ಮೇಲೆ ಒರಗಿದ್ದರೂ ಇವಳ ಚಿಂತೆಯಲ್ಲೆ ಇರುವಳಂತೆ. ಅವಳ ಆನಂದದ ಮಾತುಗಳೆಷ್ಟು ಚೆನ್ನು. ಅವಳು ಇವಳಿಗಿಂತಲೂ ಗುಣವಂತೆ. ರಾಮಪಟ್ಟಣದಲ್ಲಿ ಎಂದಾದರೂ ಸಿಕ್ಕರೆ ಕುದುರೆಯನ್ನಿಳಿದಾದರೂ ಮಾತಾಡಿಯಾಳು. ಸಂಗವ್ವನ ಪತಿಯನ್ನು ಅಂದು ಕೆರೆಯ ಏರಿಯ ಮೇಲೆ ಕಂಡಿದ್ದಳು. ಅವನ ಹವಳದಂಥ ಹಲ್ಲುಗಳು ಎಷ್ಟು ಚೆಲುವಾಗಿದ್ದವು! ಸಂಗವ್ವ ತನ್ನ ಮಗನ ಮದುವೆಗೆ ವೀಳ್ಯವನ್ನು ಕಳಿಸಿದ್ದಾಳೆ. ಮದುವೆಗೆ ಹೊರಟು ನಿಂತು ಅವಳ ಊರನ್ನು ತಲುಪಿ, ಅವರಿವರನ್ನು ಕೇಳಿ ಮನೆಯನ್ನು ಅರಸುತ್ತಾಳೆ. ಎಂಥಾ ಶ್ರೀಮಂತರ ಮನೆಯಲ್ಲಿ, ಕೋಣೆಯ ಒಳಗೆ ಇಪ್ಪತ್ತು ಕಾಲಿನ ಮಂಚದ ಮೇಲೆ ಮಲಗುವ ಅವಳ ವೈಭವವೆಷ್ಟು?.... ಸಂಗವ್ವ ದೂರವಾದಳು....ಅವಳ ನೆನಪು ಮನಸ್ಸಿನ ಮೇಲೆ ನಿಂತಿದೆ. ಅವಳನ್ನು ಬಿಟ್ಟರಲು ಎಷ್ಟು ದುಃಖವಾಗುತ್ತದೆ. ಅಂಥ ಸಂಗಾತಿ ಕೆಲವು ದಿನಗಳ ನಂತರ ತೀರಿಕೊಂಡರೆ ಅವಳ ಮೃತತನುವನ್ನು ಶ್ರೀಗಂಧದ ಕೊರಡಿನಿಂದ ಸುಡಿಸಿಯಾಳು. ಅವಳ ಮೂರ್ತಿಯನ್ನು ಅಂಗೈಯಲ್ಲಿಟ್ಟು ಪೂಜಿಸಿಯಾಳು. ಅವಳ ಹೆಸರಿನಲ್ಲಿ ಗೆಳತಿಯರೆಲ್ಲರೂ ಸೇರಿ ಒಂದು ಬಾವಿಯನ್ನು ತೆಗೆಸಿ ಆ ನೀರನ್ನು ಸೇದಿ ಸೇದಿ ಹರಿವಾಣಗಳನ್ನು ಬೆಳಗಿದ ನೀರು ತೊರೆಯಾಗಿ ಹರಿದು ಹಲವು ಉಪಯೋಗಗಳಿಗೆ ಬರುತ್ತದೆ.

ಒಡ್ಡರ ಜೋಯಿ:—

ಹಣತಿಯ ಕೆರೆಯನ್ನು ಆ ಊರಿನಗೌಡ ಕಟ್ಟಿಸುತ್ತಾನೆ. ಆದರೆ ಕೋಡಿ ನಿಲ್ಲುವುದಿಲ್ಲ. ಅದನ್ನು ಕಟ್ಟಿದ ಒಡ್ಡರ ಜೋಯಿಗಳನ್ನು ಕರೆದು ಗೌಡ ವಿಚಾರಿಸುವಲ್ಲಿ ಅದು ಬಯಸುವ ಬಲಿಯನ್ನು ಜೋಯಿ ವಿವರಿಸುತ್ತಾನೆ. ತನ್ನ ಹಿರಿಯ ಸೊಸೆಯ ಮೇಲೆಯೇ ಅವರ ಆಸೆ ಹೆಚ್ಚೆಂದು ತಿಳಿದು ಗೌಡ ಮನೆಗೆ ಬಂದು ಸೊಸೆಯನ್ನು ಕುರಿತು ಅವರ ತೌರಿನಲ್ಲಿ ಕೋಡಿಯ

ಹಬ್ಬವೆಂದು ಆಕೆಯನ್ನು ಹೊರಡಿಸುತ್ತಾನೆ. ಸಂಶಯದಿಂದಲೇ ಆಕೆ ಹೊರಡುತ್ತಾಳೆ. ತನ್ನ ಮಾವ ತನ್ನನ್ನು ಕೆರೆಗೆ ಬಲಿಕೊಡುವ ದುರುದ್ದೇಶ ಗೊತ್ತಾಗಿಹೋಗುತ್ತದೆ. ತೌರಿಗೆ ಹೋಗಿ ತನ್ನ ಬಳಗಕ್ಕೆ ಈ ವಿಷಯವನ್ನು ತಿಳಿಸಿ ಕೊನೆಯದಾಗಿ ಸಮಾಧಾನಗೊಳಿಸಿ ತನ್ನ ಕಂದನೊಡನೆ ಕೆರೆಯ ಬಳಿಗೆ ಬರುತ್ತಾಳೆ. ಅಲ್ಲಿ ಕಾದಿದ್ದ ಗೌಡ ಕೆರೆಗೆ ಬಲಿಯಾಗುವಂತೆ ಅವಳನ್ನು ಪ್ರೇರೇಪಿಸುತ್ತಾನೆ. ಅವಳ ಶವ ಕೆರೆಯಲ್ಲಿ ತೇಲಾಗುತ್ತದೆ–ಅಷ್ಟರಲ್ಲಿ ದಂಡಿಗೆ ಹೋಗಿದ್ದ ಆಕೆಯ ಗಂಡ ಹಿಂದಿರುಗುತ್ತಾನೆ; ಅವನನ್ನು ಕಂಡು ಕೆರಿಯ ಸೊಸೆ ಅತ್ತೆಯೊಡನೆ ಮಾತಾಡಿ ಹಿತ್ತಿಲಲ್ಲಿದ್ದ ಹಾವನ್ನು ಹೊಡೆಸಿ ಅದನ್ನು ಹಾಕಿ ಅಡಿಗೆ ಮಾಡುತ್ತಾಳೆ. ಅನಂತರ ಅವನನ್ನು ಕರೆಯಲು ಅವನು ಶುಕ್ರವಾರ ಒಂದುಹೊತ್ತು ಮಾತ್ರ ಊಟವೆಂದು ತಿಳಿಸಿ ಊಟಕ್ಕೆ ಬರುವುದಿಲ್ಲ. ಅವಳೇ ಅದನ್ನು ಊಟಮಾಡಿ ಮಡಿಯುತ್ತಾಳೆ. ಇತ್ತ ಗೌಡನ ಹಿರಿಯಮಗ ತನ್ನ ಮಡದಿ ಕೆರೆಗೆ ಬಲಿಯಾದ ವಿಷಯವನ್ನು ತಿಳಿದು ಅಲ್ಲಿಗೆ ಹೋಗಿ ಅವಳು ಪತಿವ್ರತೆಯಾಗಿದ್ದರೆ ಕಾಣಿಸಿಕೊಳ್ಳಲಿ ಎನ್ನುತ್ತಾನೆ-ಅವಳು ಮತ್ತೆ ಬದುಕಿ ಬರುತ್ತಾಳೆ.

ಮದುವಣ್ಣ :—

ಹಳ್ಳಿಯ ಮದುವೆಯ ಸಂಭ್ರಮ. ಹಸೆಮಣೆಗಳಿಗೆ ಹೇಳಿ ತರಿಸುತ್ತಾರೆ. ಮುತ್ತಿನ ಬಿಂದಿಗೆಯಲ್ಲಿ ನೀರು ತುಂಬಿ ಸ್ನಾನಕ್ಕೆ ಅಣಿಮಾಡುತ್ತಾರೆ. ನೀರಿಲ್ಲದೆಡೆಯಲ್ಲೆಲ್ಲಾ ನೀರು ಇರುತ್ತದೆ ದೊಡ್ಡವರ ಮಗ ಸ್ನಾನಮಾಡಿ, ಆ ನೀರು ಹೊಳೆಯನ್ನು ದಾಟಿ ಆಚೆಯ ದಾಳಿಂಬೆ ಬಾಳೆಗಳು ಸೊಂಪಾಗಿ ಬೆಳೆಯಲು ನೆರವಾಗುತ್ತದೆ. ಸ್ನಾನಮಾಡಿ ಹೊರಗೆ ಬರುವಾಗ 'ಗೌಳಿ' ನುಡಿಯುತ್ತದೆ. ಮದುಮಗನಿಗೆ ಹನ್ನೆರಡು ಫಲವುಂಟೆಂದು. ಮದುಮಗನನ್ನು ಕರೆದುಕೊಂಡು ಮೆರವಣಿಗೆಯಲ್ಲಿ ಹೊರಡುತ್ತಾರೆ. ಮುಂದೆ ಮದುವೆಯ ಸಂಭ್ರಮದ ದೀರ್ಘ ವರ್ಣನೆ ಬರುತ್ತದೆ. ಹೆಣ್ಣಿನ ಊರಿಗೆ ಬರುತ್ತಾರೆ. ಹಸೆಮಣೆಯನ್ನು ವಧು ಏರುವ ಸಂಭ್ರಮದ ವರ್ಣನೆ ಬರುತ್ತದೆ–ಮುಂದೆ

ಲಗ್ನದ ವರ್ಣನೆ, ವರನ ವರ್ಣನೆ. ಕಾಡಿನ ಕಣಿಗಲೆ ಮುಂತಾದ ಹೂಗಳನ್ನು ಮಗನ ಶಾಸ್ತ್ರಕ್ಕೆ ತಂದಿರುತ್ತಾರೆ. ಮನೆಯ ಪುರೋಹಿತರು ಧಾರೆಗಾಗಿ ಕಾದಿದ್ದಾರೆ. ಮುಂದೆ ಧಾರೆಯ ವರ್ಣನೆ ಬರುತ್ತದೆ. ಮುಂದೆ ವಧುವರರ ಸರಸಸಂಭಾಷಣೆ ಬರುತ್ತದೆ. ವಧುವರರು ವೈಭವದಿಂದ ಕೂಡಿ ಅತ್ತೆಮನೆಯನ್ನು ಹೊಗುವ ಸಂಭ್ರಮ. ಮುಂದೆ ಹೆಣ್ಣಿನ ಕಡೆಯವರು ವರನನ್ನು ಜರಿಯುತ್ತಾರೆ. ವಧುವರರು ಮೆರವಣಿಗೆ ಹೊರಡುತ್ತಾರೆ, ಅಂದು ಮಧ್ಯಾಹ್ನ ಹೂವಿನ ಮಳೆ ಕರೆಯುತ್ತದೆ. ಊಟೋಪಚಾರಗಳೆಲ್ಲ ಮುಗಿದು ವಧುವನ್ನು ಕರೆದುಕೊಂಡು ಹೋಗುವಾಗ ತಾಯಿನವರ ದುಃಖದ ವರ್ಣನೆ. ಮಡಿಲುದುಂಬಿ ಸೇಸೆಯಿಕ್ಕಿ ಬೀಳ್ಕೊಡುತ್ತಾರೆ. ಅಲ್ಲಿಂದ ಮುಂದೆ ಹೆರಗನಹಳ್ಳಿಯ ಅವಳಿಗಾಗಿ ತಾನು ಎಲ್ಲೆಲ್ಲಿ ಸುತ್ತಿದೆನೆಂದು ನಲ್ಲ ನಲ್ಲೆಗೆ ನುಡಿಯುತ್ತಿರುವಲ್ಲಿ ದಾರಿಸಾಗುತ್ತದೆ.

ಮರೆಯಾದ ಮಲಕವ್ವ :—

ಈರವ್ವ ಮಲಕವ್ವ ಅತ್ತಿಗೆನಾದಿನಿಯರು. ನೀರಿಗೆ ಹೊರಡಬೇಕು. ಈರವ್ವ ಹೊರಟರೂ ಮಲಕವ್ವ ಹೊರಡಲಿಲ್ಲ. ಈರವ್ವ ತನ್ನಪತಿಗೆ ಹೇಳಿ ಕಳಿಸಿ ಮಲಕವ್ವನ ಮೇಲೆ ಅಪವಾದ ಹೊರಿಸುತ್ತಾಳೆ—ತುರುಕರಸಂಗ ಮಾಡಿದಳೆಂದು. ಅಣ್ಣ ದೇವಣ್ಣ ಮನೆಗೆ ಬಂದು ತಂಗಿ ಮಲಕವ್ವನನ್ನು ಕರೆದುಕೊಂಡು ಊರಾಚೆ ಬಹುದೂರ ಕಾಡಿನಲ್ಲಿ ಪ್ರಯಾಣಮಾಡಿ ಬುತ್ತಿಯನ್ನುಣ್ಣುವಾಗ ತಂಗಿಯನ್ನು ಕಡಿದುಬಿಡುತ್ತಾನೆ. ಅವಳ ಮುಂಡ ಬಿದ್ದ ನೆಲೆಯಲ್ಲಿ ಒಂದು ದೊಡ್ಡ ಮಲ್ಲಿಗೆ ವನವಾಗಿರುತ್ತದೆ. ಕೆಲವುದಿನಗಳ ಮೇಲೆ ಆ ದಾರಿಯಲ್ಲಿಬಂದ ದೇವಣ್ಣ ಹೂವನ್ನು ಕಂಡು ಮುಡಿಯಲು ಆಸೆಯಾಗಿ ಕೈ ಹಾಕುತ್ತಾನೆ. ಯಾರೋ ಹೇಳಿದಹಾಗಾಗುತ್ತದೆ— "ಹೂವ ಕುಯ್ಯಬೇಡ ಸುಮ್ಮನೆ ತಲೆಹರಿದ ದುಷ್ಟ."

ದೇವಣ್ಣ ಪಶ್ಚಾತ್ತಾಪಪಟ್ಟು ಹಿಂದಿರುಗುತ್ತಾನೆ. ಅವನೆದೆಯಲ್ಲಿ ದುಃಖಎಂದೆಂದಿಗೂ ಒಂದು ಕಪ್ಪುಕಲೆಯಾಗಿ ನಿಂತುಬಿಡುತ್ತದೆ.

ಇರೋಬಿ :—

ಬಾಣತಿ ಇರೋಬಿ ಬಟ್ಟಲಲ್ಲಿ ಉಣ್ಣುವುದನ್ನು ಕಂಡು ಅವಳ ಪತಿ ಹರಿವಾಣವನ್ನು ತರಲು ಘಟ್ಟದ ಕೆಳಗಿನ ಹಳ್ಳಿಗೆ ಹೋಗುತ್ತಿರುತ್ತಾನೆ. ದಾರಿಯಲ್ಲಿ ಹುಲಿಯೊಂದು ಅಡ್ಡವಾಗುತ್ತದೆ. ಅದರೊಡನೆ ಹೋರಾಡಿ ಮಡಿಯುತ್ತಾನೆ. ಬೆಟ್ಟದೊತ್ತಿನಲ್ಲಿ ಎಮ್ಮೆ ಹಿಂಡನ್ನು ಬಿಟ್ಟುಕೊಂಡಿದ್ದ ಇರೋಬಿಗೆ ಸುದ್ದಿ ಬಂದಿತು. ರಕ್ತಮಯವಾದ ಬಟ್ಟೆಗಳೂ ಬಂದವು. ಪತಿಯಳಿದ ಮೇಲೆ ತಾನು ಉಳಿಯುವುದು ತರವಲ್ಲವೆಂದು ಬಗೆದ ಇರೋಬಿ ಕೊಂಡವನ್ನೇರಿ ಮರಣವನ್ನಪ್ಪಲು ನಿರ್ಧರಿಸುತ್ತಾಳೆ. ಕೊಂಡ ಸಿದ್ಧವಾಗುತ್ತದೆ. ಅವಳ ತಂದೆ ನೋಗಯ್ಯ, ತಾಯಿ ಓಬವ್ವ, ಅಕ್ಕ ನಾಗವ್ವ, ಅಣ್ಣ ನಾಗಪ್ಪ ಮುಂತಾದವರೆಲ್ಲಾ ಸುದ್ದಿಯನ್ನು ತಿಳಿದು ಬರುತ್ತಾರೆ. ಉಪ್ಪರಿಗೆಯ ಮೇಲೆ ದುಃಖಿಸುತ್ತಾ ಮಲಗಿದ್ದ ಇರೋಬಿ ಅವರಾರಿಗೂ ಮುಖ ತೋರಲಾರದೆ ಒದ್ದಾಡುತ್ತಾಳೆ. ತನ್ನ ಪತಿ ಕಣ್ಮರೆಯಾದನೆಲೆ ಯಾರು ಬಂದರೇನು ಎಂದು ದುಃಖಿಸುತ್ತಾಳೆ. ಅಲ್ಲೊಂದು ಗುಡಿಯೇಳುತ್ತದೆ. ತಿಪ್ಪೂರಿನಲ್ಲಿ ವರ್ಷವರ್ಷವೂ ಇರೋಬಿಯ ಉತ್ಸವ ವಿಜೃಂಭಣೆಯಿಂದ ಸಾಗುತ್ತದೆ.

ಗಿರಿಜಾಮಲ್ಲಯ್ಯ:—

ನೀಲಮ್ಮ ಮಿಂಯುವಾಗ ನೀರಿನಲ್ಲಿ ಮಲ್ಲಯ್ಯನ ಕಳಸವನ್ನು ಕಾಣುತ್ತಾಳೆ. ಸ್ನಾನ ಮಾಡಿ ಮಲಗಿದ ಮೇಲೆ ಒಂದು ಸುಸ್ವಪ್ನವಾಗುತ್ತದೆ. ಮಲ್ಲಯ್ಯ ಕನಸಿನಲ್ಲಿ ಕಾಣಿಸಿಕೊಂಡು ಕನ್ನೆಯರು ಹುಟ್ಟಿದರೆ ಕೊಡುವಂತೆ ಕೇಳುತ್ತಾನೆ. ಕನಸೊಡೆದು ಎದ್ದ ಆಕೆ ಹೆಣ್ಣು ಹುಟ್ಟಿದರೆ ಲಿಂಗಕ್ಕೆ ಸಂತೋಷದಿಂದ ಧಾರೆ ಎರೆದೇನೆಂದು ಹಿಗ್ಗುತ್ತಾಳೆ. ಅದರಂತೆ ಅವಳಲ್ಲಿ ಗಿರಿಜೆ ಹುಟ್ಟುತ್ತಾಳೆ. ಅದನ್ನು ತಿಳಿದ ಗಿರಿಯಮಲ್ಲಯ್ಯ ಬೆಟ್ಟದಷ್ಟು ಹೊನ್ನನ್ನು ಹೊರಿಸಿಕೊಂಡು ಅವಳನ್ನು ಕೇಳಲು ಬರುತ್ತಾನೆ. ಮಲ್ಲಯ್ಯನ ಮುಂದೆ ಬಣ್ಣದ ಹಚ್ಚಡದ ಬಸವಯ್ಯ ಬಂದು ನಮ್ಮ ಮಠಕ್ಕೆ ಹೆಣ್ಣನ್ನು

ಕೊಡಿ ಎಂದು ಕೇಳುತ್ತಾನೆ. ಆದರೆ ವಧುವಿನ ಮಾತಾಪಿತೃಗಳು ಅತ್ತೆ ಮಾವಂದಿರಿಲ್ಲದ ಮನೆಗೆ ತಮ್ಮ ಮಗಳನ್ನು ಕೊಡುವುದು ಹೇಗೆ ಎಂದು ಶಂಕಿಸುತ್ತಾರೆ– ಕೊಡುವ ಅಭಿಲಾಷೆ ಅಂತರಾಳದಲ್ಲಿದ್ದರೂ. ಗಿರಿಜೆಗೆ ಎಲ್ಲವೂ ಅವನೇ ಎಂದು ಮಲ್ಲಯ್ಯ ಭರವಸೆ ಕೊಡುತ್ತಾನೆ. ತುಸುಹೊತ್ತು ಬೇಗೆಯೇ ಸಂಭಾಷಣೆ ನಡೆಯುತ್ತದೆ. ಮಲ್ಲಯ್ಯನ ಬೈರಾಗಿಬಾವನ್ನು ಜರಿಯುವಂತೆ ಆಡಿದರೂ ಅವನು ಮುಂದೆ ಗಿರಿಜೆಯನ್ನು ನಿರ್ಲಕ್ಷ್ಯದಿಂದ ನೋಡಿಕೊಳ್ಳದಂತಿರಲಿ ಎಂಬುದಕ್ಕೆ ಸೀತಿಕೆಯಾಗಿ ಹಾಗೆ ನುಡಿಯುತ್ತಾರೆ. ಇಂದು ನಿರಾಶರಾಗಿ ಮಲ್ಲಯ್ಯ ಗಿರಿಗೆ ಮರಳುತ್ತಾನೆ. ಇದು ಗಿರಿಜೆಗೆ ಅಸಮಾಧಾನವನ್ನು ತರಲು, ಗೆಳತಿಯಲ್ಲಿ ದುಃಖವನ್ನು ತೋಡಿಕೊಳ್ಳುತ್ತಾಳೆ. ಗಿರಿಯನುಲ್ಲಯ್ಯನಿಗೆ ತನ್ನನ್ನೂ ಕೊಡಬೇಕೆಂದು ಒತ್ತಾಯ ಪಡಿಸುತ್ತಾಳೆ. ಮಲ್ಲಯ್ಯನ ಕಷ್ಟತರ ಜೀವನವನ್ನು ತಾಯಿ ವಿವರಿಸುತ್ತಾಳೆ. ಗಿರಿಜೆ ಎಲ್ಲ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಕೋಪಗೊಂಡ ತಾಯಿ–ತಂದೆಯರು ಅವಳನ್ನೂ ಹೊರಗೆ ತಳ್ಳಿಬಿಡುವುದಾಗಿ ಹೆದರಿಸುತ್ತಾರೆ. ಅತ್ತ ಮಲ್ಲಯ್ಯ ಗಿರಿಜೆಯ ಯೋಚನೆಯಲ್ಲಿಯೇ ಮಲಗಿದ್ದವನು ಅವಳನ್ನು ಅರಸುತ್ತ ಮತ್ತ ಹೊರಡುತ್ತಾನೆ–ಗೆದ್ದುಬರಲು. ಜಂಗಮನ ವೇಷದಲ್ಲಿ ಬಂದ ಅವನು ಕೆರೆಯಲ್ಲಿ ನೀರುನೊಗೆಯುತ್ತಿದ್ದ ಗಿರಿಜೆಯನ್ನು ಕಾಣುತ್ತಾನೆ. ಆ ಜೆಲುವೆಯನ್ನು ಕಂಡು ತನ್ನ ಜಪವನ್ನೇ ಮರೆತುಬಿಡುತ್ತಾನೆ. ಅವರಿಬ್ಬರಲ್ಲಿ ಸರಸ ಸಂಭಾಷಣೆ ನಡೆದು ಪ್ರೇಮಾಂಕುರವಾಗುತ್ತದೆ. ಅವಳನ್ನು ಕೊಡಲು ತಾಯಿ–ತಂದೆಯರೂ ಒಪ್ಪಿದಂತಾಗುತ್ತದೆ. ಅವರಿಬ್ಬರ ಮದುವೆ ವಿಜೃಂಭಣೆಯಿಂದ ನಡೆಯುತ್ತದೆ.

ಹಬ್ಬೋಗೊ ಕುಡಿಯ ಹರಕೊಂಡ:—

ಹಾಲೂರಿನಲ್ಲಿ ಹಗಲೂಟವನ್ನು ಮಾಡಿ, ಇರುಳೂಟಕ್ಕೆ ಇಂಗ್ಲಾದಿಯನ್ನು ಸೇರಿ ಮತ್ತೆ ಪ್ರಯಾಣಮಾಡಿ ನಾಳೆ ಮಧ್ಯಾಹ್ನದ ಊಟಕ್ಕೆ ಸೇರಬಹುದಾದಷ್ಟು ದೂರದಲ್ಲಿ ಮಧುಗಿರಿಯ ಮಂಚದ ಮೇಲೆ ನಿದ್ರೆಮಾಡುವ

ನಿಡುಪಟ್ಟವಿದೆ. ಅಲ್ಲಿ ಒಮ್ಮೆ ರಂಗಪ್ಪ ನವಣೆಯ ಹೊಲದಲ್ಲಿ ಅಡ್ಡಾಡು ವಾಗ ಕಾಳಿಂಗ ಸರ್ಪ ಕಡಿದು ಮರಣ ಹೊಂದುತ್ತಾನೆ. ಅವನ ಮಡದಿಯ ದುಃಖದ ದಾರುಣ ಚಿತ್ರ ಮುಂದಿನ ಪದ್ಯಗಳಲ್ಲಿ ಹೃದಯಂಗಮವಾಗಿ ಬಂದಿದೆ.

ಅಂಬಿಗರ ಗಂಗ—

ಉಂಡುಟ್ಟು ಮಂಚದ ಮೇಲೆ ಮಲಗಿದ ಗಿರಿಮಾಜಿಗೆ ಕನಸಿನಲ್ಲಿ ಶಿವ ಕಾಣಿಸಿ ಗರ್ಭಿಣಿಯಾದ ಅವಳೊಡಲಲ್ಲಿ ಹೆಣ್ಣುಮಕ್ಕಳು ಹುಟ್ಟಿ ದರೆ ತನಗೆ ಕೊಡುವಂತೆ ಕೇಳುತ್ತಾನೆ. ಗಿರಿಮಾಜಿಗೆ ನವಮಾಸಗಳು ತುಂಬಿ ದಿನ ಹತ್ತಿರವಾಗಲು ಪತಿ ಗಿರಿರಾಯ ಸೂಲಗಿತ್ತಿ ಸಂಗಮ್ಮನನ್ನು ಹುಡುಕಿ ಕರತರುತ್ತಾನೆ. ಎರಡು ಹೆಣ್ಣುಮಕ್ಕಳು ಗಿರಿಮಾಜಿಗೆ ಜನಿಸುತ್ತವೆ. ಆದರೆ ಹಿರಿಯ ಹೆಣ್ಣು ಹುಟ್ಟಿದ ಗಳಿಗೆಯಲ್ಲಿ ಶಕುನ ಸರಿಕೋರದೆ ಅವಳು ಹುಟ್ಟಿದ ಮನೆಗೆ ಕಂಟಕಪ್ರಾಯಳಾಗುವಳೆಂದು ಸಂಗವ್ವನೂ ಪುರೋಹಿತರೂ ಹೇಳಿದ ಮೇಲೆ ತೊಟ್ಟಿಲ ಸಮೇತ ಹೊಳೆಗೆ ಬಿಟ್ಟು ಬರುತ್ತಾನೆ ಗಿರಿರಾಯ. ಆ ಮಗು ಅಂಬಿಗರ ಗಂಗನಿಗೆ ಸಿಗುತ್ತದೆ – ಅವನು ಮಾನು ಹಿಡಿಯುವಾಗ. ಅಂಬಿಗರ ಮನೆಯಲ್ಲಿ ಗಂಗೆ ಬೆಳೆದು ದೊಡ್ಡವಳಾಗುತ್ತಾಳೆ. ಒಮ್ಮೆ ಶಿವ–ಶಿವೆಯರು ಮಂಚದಲ್ಲಿ ಮಲಗಿರಲು ಪಾರ್ವತಿಗೆ ಶಿವನ ಮಂಚಕ್ಕೆ ರತ್ನ ಬಿಗಿದಂತೆ ಕನಸಾಗುತ್ತದೆ. ತನ್ನ ಪುರುಷನನ್ನು ಕೇಳಲು ಅವನು ಅವಳಿಗೆ ಸವತಿ ಬರುವಳೆಂದು ನಗುತ್ತಾ ಹೇಳುತ್ತಾನೆ. ಪಾರ್ವತಿಯೂ ಅದನ್ನು ಲಘುವಾಗಿ ತೆಗೆದುಕೊಂಡು 'ಬಂದರೂ ಬರಲಿ' ಎಂದು ವಿನೋದವಾಗಿ ಉತ್ತರಿಸುತ್ತಾಳೆ. ಆದರೆ ಮರುದಿನ ಶಿವನು ಏಕೊ ಹೊರಗೆ ಹೊರಟಂತೆ ವೇಷವನ್ನು ಧರಿಸಿ. ಕೈಲಾಸದಿಂದ ಹೊರಟವನು ಭೂಮಿಯ ಬಡ ಅಂಬಿಗರ ಬೀದಿಯಲ್ಲಿ ಬರುತ್ತಾನೆ. ಅಲ್ಲೊಬ್ಬಳು ಚೆಲುವೆ ಅವನ ಕಣ್ಣಿಗೆ ಬೀಳುತ್ತಾಳೆ. ಹಾರುವರ ಮಗಳಂತೆ ಕೋರುವ ಈಕೆ ಅಂಬಿಗರ ಕೇರಿಗೇಕೆ ಬಂದಳು ಎಂದು ಅವನು ಶಂಕಿಸುತ್ತಾನೆ. ಅವಳನ್ನೇ ಕೇಳುತ್ತಾನೆ. ತನ್ನ ತುರುಬಿಗೆ ಬಂದು

ಇರುವಂತೆ ಕೇಳುತ್ತಾನೆ. ತನ್ನ ಕುಲಗೋತ್ರಗಳನ್ನು ಮುಂದಿಟ್ಟು ಆಕೆ ಬರಲು ಹಿಂಜರಿಯುತ್ತಾಳೆ. ಶಿವ ಅವಾಪುವನ್ನು ಪರಿಗಣನೆಗೆ ತೆಗೆದು ಕೊಳ್ಳದೆ ಅವಳನ್ನು ಪರಿಗ್ರಹಿಸಲು ಸಿದ್ಧವಾಗುತ್ತಾನೆ. ತನ್ನ ತುರುಬಿಗೆ ಕೂರಿಸಿಕೊಂಡು ಕೈಲಾಸದ ಹಾದಿ ಹಿಡಿಯುತ್ತಾನೆ. ಇದನ್ನು ಕಂಡುಕೊಂಡ ಎರಡು ಗಿಣಿಗಳು ಓಡಿಬಂದು ಪಾರ್ವತಿಗೆ ತಿಳಿಸಿಬಿಡುತ್ತವೆ. ತಳಮಳ ಗೊಂಡ ಪಾರ್ವತಿ ತನ್ನ ತೌರಿಗೆ ಓಡುತ್ತಾಳೆ. ತಾಯಿ ತಂದೆಯನ್ನು ಕೂರಿಸಿ ಕೊಂಡು ನೆನ್ನೆ ತಾನು ಕಂಡ ಕನಸನ್ನು ವಿವರಿಸಿ ಹೇಳುವಂತೆ ಕೇಳುತ್ತಾಳೆ. ಶಿವರಾಯ ಗಂಗೆಯನ್ನು ಜಡೆಯಲ್ಲಿ ತರುವ ವಿಷಯವನ್ನು ಅವರೂ ಹೇಳು ತ್ತಾರೆ. ಗೊಣಗಿಕೊಳ್ಳುತ್ತ ಅಲ್ಲಿಂದ ಮುತ್ತೈದೆ ಕೈಲಾಸಕ್ಕೆ ಬಂದು ಮನೆಯ ಬಾಗಿಲನ್ನು ಹಾಕಿ ಕುಳಿತುಕೊಳ್ಳುವಲ್ಲಿ ಹೊರಗೆ ಶಿವ ಬಾಗಿಲು ತೆಕೆಯುವಂತೆ ಕೂಗುತ್ತಾನೆ. ಮೊದಮೊದಲು ಬಾಗಿಲನ್ನು ತೆಕೆಯಲು ನಿರಾಕರಿಸಿದರೂ ಕೊನೆಗೆ ಬಾಗಿಲನ್ನು ತೆರೆದು ಎರಡು ಮಣೆಗಳನ್ನು ತಂದು ಹಾಕುತ್ತಾಳೆ. ಅದಕ್ಕೆ ಶಿವ ಸಿಟ್ಟಾಗುತ್ತಾನೆ. ಪಾರ್ವತಿ ಯಾರು ಯಾರಿಗೆ ಎಂದು ವಿಚಾರಿ ಸುತ್ತಾಳೆ. ಗುಟ್ಟು ಹೇಗೋ ತಿಳಿದುಹೋಗಿದೆ ಎಂದು ಶಿವರಾಯ ಸುಮ್ಮ ನಾಗುತ್ತಾನೆ. ಗಂಗೆ–ಗೌರಿಯರಿಗೆ ಪುಟ್ಟ ಜಗಳಗಳು ಆಗುತ್ತಲೇ ಇರುತ್ತವೆ. ಸಿಂಹಾಸನದ ಮೇಲೆ ಶಿವರಾಯ ಕುಳಿತುಕೊಂಡು ಅವನ್ನು ಆನಂದದಿಂದ ನೋಡಿ ನಗುತ್ತಾನೆ.

ಬಂಜೆ ಹೊನ್ನಮ್ಮ :—

ಬಹಳ ವರ್ಷಗಳವರೆಗೆ ಹೊನ್ನಮ್ಮನಿಗೆ ಮಕ್ಕಳಾಗಿಲ್ಲ. ಬಂಜೆ ಎಂಬ ಹೆಸರೂ ಹಬ್ಬಿ ಹೋಗುತ್ತದೆ. ಎಲ್ಲರೂ ಅವಳನ್ನು ನಿರ್ಲಕ್ಷ್ಯದಿಂದಲೇ ಕಾಣುತ್ತಾರೆ. ಅವಳ ಮನೆಯ ಮುಂದೊಂದು ಕಲ್ಲುಚಪ್ಪರ. ನೀರುಕುಡಿ ಯಲು ಬಂದ ಗಿಣಿಗಳು ಅಲ್ಲಿ ಕುಡಿದರೆ ತಾಪ ಬಂಜೆಯಾಗಬೇವೆಂದು ಹೊರಟು ಹೋದ ಸುದ್ದಿಯನ್ನು ತಿಳಿದು ಅವಳು ಮರುಗುತ್ತಾಳೆ. ಅವಳು ಹಾಕಿದ್ದ ಬಾಳೆಯಲ್ಲಿ ಬಿಟ್ಟ ಗೊನೆಗಳಿಗೆ ಬಂದ ಗಿಣಿಗಳೂ ಹಾಗೆಯೇ

ಹೊರಟು ಹೋಗುತ್ತೇವೆ. ಹೊನ್ನಮ್ಮ ಶಿವನನ್ನು ನೆನೆದು ಪರಿಪರಿಯಲ್ಲಿ ಬೇಡುತ್ತಾಳೆ. ತನ್ನ ಬಂಜೆತನವನ್ನು ಹೋಗಾಡಿಸುವಂತೆ ಕೇಳಿಕೊಳ್ಳುತ್ತಾಳೆ. ಅವಳ ಕರೆ ಶಿವನನ್ನು ಮುಟ್ಟುತ್ತದೆ. ಪಾರ್ವತಿಯೂ ಶಿವನ ಕರವನ್ನು ಹಿಡಿದು ಹೊನ್ನಮ್ಮನಿಗೆ ಒಳ್ಳೆಯದನ್ನು ಮಾಡುವಂತೆ ಕೇಳಿಕೊಳ್ಳುತ್ತಾಳೆ. ರಥವೇರಿ ಇಬ್ಬರೂ ಹೊನ್ನಮ್ಮನಲ್ಲಿಗೆ ಹೊರಡುತ್ತಾರೆ. ಹೊನ್ನಮ್ಮ ಇಬ್ಬರಿಗೂ ನಮಸ್ಕರಿಸಿ ಗೋಳಾಡುತ್ತಾಳೆ. ಶಿವ ಪಾರ್ವತಿಯ ಮುಖ ನೋಡುತ್ತಾನೆ. ಪಾರ್ವತಿ ಈ ಹೆಣ್ಣು ಜನ್ಮ ಭೂಮಿಯ ಮೇಲೆ ಹುಟ್ಟಬಾರದು ಎನ್ನುತ್ತಾಳೆ. ಹೊನ್ನಮ್ಮನ ಆರುಮಂದಿ ಅಕ್ಕಂದಿರಿಗೂ ಸಂತಾನವಿದ್ದು ಇವಳೊಬ್ಬಳಿಗೆ ಇರುವುದಿಲ್ಲ. ಶಿವ ಇವಳಿಗೂ ನೂರುಮಂದಿ ಮಕ್ಕಳನ್ನು ಕೊಡುತ್ತಾನೆ. ಬಂಜೆಗೆ ನೂರುಮಂದಿ ಮಕ್ಕಳಾಗುತ್ತಾರೆ. ಹಾದಿಬೀದಿಯಲ್ಲೆಲ್ಲಾ ಬಿಲ್ಲು ಬಾಣಹಿಡಿದು ಮಲ್ಲಯುದ್ಧ ಮಾಡುತ್ತ ಅವಳ ಮಕ್ಕಳೇ ಕಾಣಿಸುತ್ತಿರುತ್ತಾರೆ. ಎಲ್ಲರಿಗೂ ಅಸೂಯೆ–ಆಶ್ಚರ್ಯ–ಏನಾದರೂ ಮೋಸಮಾಡಲು, ಕಾತುರಪಡುತ್ತಿರುತ್ತಾರೆ. ಮರುದಿನ ವಿಷದ ಕಜ್ಜಾಯವನ್ನುಣಿಸಿ ಅವರನ್ನು ಕೊಂದುಬಿಡುತ್ತಾರೆ. ತನ್ನ ಮಕ್ಕಳನ್ನು ಅರಸುತ್ತ ಹೊನ್ನಮ್ಮ ಪರಿತಪಿಸುತ್ತಾಳೆ. ಎಲ್ಲಿಯೂ ಕಾಣದೆಮತ್ತೆ ಶಿವನನ್ನೇ ನೆನೆಯುತ್ತಾಳೆ. ಅವಳ ಭಕ್ತಿಗೆ ಮೆಚ್ಚಿದ ಶಿವ ಮತ್ತೆ ಕಾಣಿಸಿಕೊಳ್ಳುತ್ತಾನೆ. ಸತ್ತಮಕ್ಕಳನ್ನೆಲ್ಲ ಬದುಕಿಸಿ ಅವಳನ್ನು ಸಂತೋಷಗೊಳಿಸುತ್ತಾನೆ. ಅವಳ ಸತ್ಯಮಾರ್ಗವನ್ನು ಕೊಂಡಾಡುತ್ತಾನೆ. ಅವಳದು ಕೆಟ್ಟಜನ್ಮವಲ್ಲವೆಂದೂ, ಅವಳೂ ಇತರರಂತೆ ಬದುಕಬಹುದೆಂದೂ ಗೌರವವನ್ನು ಗಳಿಸಬಹುದೆಂದು ಹೇಳುತ್ತಾನೆ.

ತಬ್ಬಲಿರಾಯ :—

ಸುರಗಿರಿವನದಲ್ಲಿ ಭೀಮಣ್ಣ ಮತ್ತು ಕುಸುಮಬಾಲೆಯರ ಹನ್ನೆರಡು ಜನ ಗಂಡುಮಕ್ಕಳಲ್ಲಿ ಹನ್ನೊಂದು ಜನಕ್ಕೆ ಮದುವೆಯಾಯಿತು. ಇವರ ನಂತರ ಹುಟ್ಟಿದವನೇ ತಬ್ಬಲಿರಾಯ. ಅವನು ಒಪ್ಪಿದಂಥ ಹೆಣ್ಣು ಸಿಗು

ವುದು ಕಷ್ಟವಾಯಿತು. ತಂದೆ, ತಾಯಿ, ಹನ್ನೊಂದು ಜನ ಅಣ್ಣಂದಿರು, ಅತ್ತಿಗೆಯರು ಎಲ್ಲರೂ ಹೆಣ್ಣನ್ನು ಹುಡುಕಿ ಸೋತರು. ಅವನಿಗೆ ಒಪ್ಪುವ ಹೆಣ್ಣು ಸಿಗಲಿಲ್ಲ. ಕೊನೆಗೆ ತಬ್ಬಲಿರಾಯನೇ ಹೆಣ್ಣನ್ನು ನೋಡಲು ಸಕಲ ಸಿದ್ಧತೆಯನ್ನೂ ಮಾಡಿಕೊಂಡು ಹೊರಡುತ್ತಾನೆ. ತಾಯಿ ತಂದೆಯರಿಗೂ, ಹನ್ನೊಂದು ಮಂದಿ ಅಣ್ಣಂದಿರು ಅತ್ತಿಗೆಯರಿಗೂ ವಂದಿಸಿ, ಅವರ ಹರಕೆಯನ್ನು ಬೇಡಿ ಸಕಲವಸ್ತು ಪರಿಕರಗಳೊಡನೆ, ಚೆನ್ನಾಗಿ ಸಿಂಗರಿಸಿಕೊಂಡು ಆನೆಯನ್ನೇರಿ ಹೊರಡುತ್ತಾನೆ. ಭಯಂಕರವಾದೊಂದು ಅಡವಿ. ಅಲ್ಲಿ ಒಂದು ಹಾಲಿನ ಕೊಳ - ಮತ್ತೊಂದು ನೀರಿನ ಕೊಳ. ಅಲ್ಲಿ ಒಂದು ಆಲದ ಮರ. ಆಲಕ್ಕೆ ಆನೆಯನ್ನು ಕಟ್ಟಿ ನೀರಿನ ಕೊಳದಲ್ಲಿ ಸ್ನಾನಮಾಡಿ ಆಲದ ಮರದಡಿ ಸೋತು ಮಲಗುತ್ತಾನೆ. ಅಲ್ಲಿಗೆ ಬೇಡರ ಕನ್ನಯ್ಯನ ಮಕ್ಕಳು ಬಂದು ಅವನ ವಿಷಯವಾಗಿ ಪ್ರಶ್ನಿಸುತ್ತಾರೆ. ತಬ್ಬಲಿರಾಯ ತನ್ನ ಕುಲ ಗೋತ್ರ ತಾನು ಬಂದ ಉದ್ದೇಶಗಳನ್ನು ವಿವರಿಸುತ್ತಾನೆ. ಕನ್ನಯ್ಯನ ಮಕ್ಕಳು ಅವನನ್ನು ತಮ್ಮ ಪಟ್ಟಣಕ್ಕೆ ಕರೆದು ಹೋಗಿ ತಮ್ಮ ತಂಗಿಯಾದ ಗುರುತಾಯಮ್ಮನನ್ನು ಕೊಟ್ಟು ಲಗ್ನ ಮಾಡುತ್ತಾರೆ. ಗುರುತಾಯಮ್ಮ ಗರ್ಭಿಣಿಯಾಗುತ್ತಾಳೆ. ಇದರಿಂದ ಅತ್ತಿಗೆಯರಿಗೆ ಅಸೂಯೆ ಬಂದು ತಮ್ಮ ಗಂಡಂದಿರು ಮರಳಿದಾಗ ತಬ್ಬಲಿಕುಲವಾದ ಕಂಡೆಗರ ಕುಲ ಹೆಚ್ಚಿದರೆ ಬೇಟೆಗಾರರ ಕುಲಕ್ಕೆ ಮೃತ್ಯು ಎಂದು ಹೇಳಿ, ತಬ್ಬಲಿರಾಯನನ್ನು ಬೇಟೆಗೆ ಕರೆದೊಯ್ದು ಕೊಲ್ಲುವಂತೆ ಪ್ರೇರೇಪಿಸುತ್ತಾರೆ. ತಬ್ಬಲಿರಾಯ ಅಂದು ಬೇಟೆಗೆ ಹೊರಟುದುದನ್ನು ಕಂಡು ಗುರುತಾಯಿ ಅಪಶಕುನಗಳನ್ನು ತಿಳಿಸಿ ತಡೆಯುತ್ತಾಳೆ. ಆದರೂ ತಬ್ಬಲಿರಾಯ ಹೋಗುತ್ತಾನೆ. ಮುಂದಲ ಗಿರಿಯ ತಪ್ಪಲಲ್ಲಿ ಅವನ ವಧೆಯಾಗುತ್ತದೆ. ಆ ಆರುಮಂದಿಯೂ ಮನೆಗೆ ಮರಳಿದಾಗ ಗುರುತಾಯಿ ಆರತಿಯನ್ನು ತೆಗೆದುಕೊಂಡು ಬಾಗಿಲಿಗೆ ಬಂದು ತನ್ನ ಪತಿಯೆಲ್ಲಿ—ಎಂದು ಪ್ರಶ್ನಿಸುತ್ತಾಳೆ. ಬರಲಿಲ್ಲವೆಂದು ತಿಳಿದು ದುಃಖದಿಂದ ತಟ್ಟೆಯನ್ನು ಕೆಳಗೆ ಒಗೆದು ನನ್ನಂತೆಯೇ ನಿಮ್ಮ ಮಡದಿಯರೂ ಮುಂಡೆಯರಾಗಲಿ' ಎಂದು ಶಾಪ ಹಾಕಿ ದುಃಖಿಸುತ್ತಾಳೆ. ಒಂಬತ್ತು

ತಿಂಗಳು ತುಂಬುತ್ತದೆ ಅವಳಿಗೆ. ಅತ್ತಿಗೆಯರು ಅವಳಿಗೆ ವಿಧವಿಧವಾದ ಹಿಂಸೆಕೊಡಲು ಆರಂಭಿಸುತ್ತಾರೆ. ಹನ್ನೆರಡಾಳುದ್ದ ಬಾವಿಗೆ ಏಣಿಯನ್ನು ಹಾಕಿ ಅವಳನ್ನು ಇಳಿಸುವುದು ಹತ್ತಿಸುವುದು ಹೀಗೆ ಮಾಡತೊಡಗುತ್ತಾರೆ. ಬಾವಿಯಲ್ಲಿಯೇ ಗುರುತಾಯಮ್ಮನಿಗೆ ಸೂರ್ಯನಾರಾಯಣನಂಥ ಮಗ ಹುಟ್ಟಬಿಡುತ್ತಾನೆ. ಅವನು ಬಾವಿಯಲ್ಲಿಯೇ ಬೆಳೆಯುತ್ತಾನೆ. ಆರುಜನ ಅತ್ತಿಗೆಯರೂ ನೀರಿಗೆ ಹೋದಾಗ ಬಾವಿಯಲ್ಲಿ ಬೆಳೆಯುತ್ತಿದ್ದ ಸೂರ್ಯನಾರಾಯಣ ಹಗ್ಗವನ್ನು ಹಿಡಿದು ಜಗ್ಗಿಸುತ್ತಾನೆ. ಅವರು ಮನೆಗೆ ಮರಳಿ ಬಾವಿಯನ್ನು ಮುಚ್ಚಿಬಿಡುವಂತೆ ಹೇಳುತ್ತಾರೆ. ಆರುಮಂದಿಯೂ ತಿಪ್ಪೆಗೆ ಕಸವನ್ನು ಹೊತ್ತು ಹೋಗುತ್ತಾರೆ. ಅಲ್ಲಿ ತಿಪ್ಪೆಯಮೇಲೆ ಆಡುತ್ತಿರುವ ಸೂರ್ಯನಾರಾಯಣನನ್ನು ಕಾಣುತ್ತಾರೆ. ಹೀಗೆ ಸೂರ್ಯನಾರಾಯಣ ಆಡಾಡಿ ಬೆಳೆಯುತ್ತಾನೆ. ಬೀದಿಯಲ್ಲಿ ಆಡುವಾಗ ಲಗ್ಗೆ ಚಂಡು, ಗೋಲಿ, ಗಜ್ಜುಗಗಳಲ್ಲಿ ಎಲ್ಲರನ್ನೂ ಸೋಲಿಸುತ್ತಾ ಬರುತ್ತಾನೆ. ಹುಡುಗರು ಅಸೂಯೆಯಿಂದ ಅವನನ್ನು ಅಣಕಿಸುತ್ತ ತಾಯಿ ತಂದೆಯರ ಸ್ಥಿತಿಯನ್ನು ಹೇಳುತ್ತಾರೆ. ಸೂರ್ಯನಾರಾಯಣ ಆ ಹುಡುಗರನ್ನು ಒತ್ತಾಯಮಾಡಿ ತನ್ನ ತಾಯಿಯಿರುವ ಸ್ಥಳವನ್ನು ತಿಳಿಯುತ್ತಾನೆ. ಆ ಆರುಮಂದಿ ಅತ್ತಿಗೆಯರೂ ಗುರುತಾಯಮ್ಮನನ್ನು ಕಡೆಯ ಕೊಟ್ಟಿಗೆಯಲ್ಲಿಹಾಕಿ, ಮುಗ್ಗಲು ಹುರುಳಿ, ಮುಗ್ಗಲು ರಾಗಿಯ ಊಟವನ್ನು ಹಾಕುತಿರುತ್ತಾರೆ. ಸೂರ್ಯ ತಾಯನ್ನು ಕಂಡನು, ಹನ್ನೆರಡು ತೆರೆಹಿಡಿದು ಹಾಲನ್ನೂ ಕುಡಿದು ತನ್ನ ತಾಯಿಯೆಂದು ಪರಿಕಿಸುತ್ತಾನೆ. ತಾಯಿಯಿಂದ ತಂದೆಯ ವಿಷಯವನ್ನು ತಿಳಿದು ಕೂಡಲೆ ಹಂಚಿಕಡ್ಡಿಯ ರಥವ ಮಾಡಿ ಕಾಡಿಗೆ ತಾಯಿಯೊಡನೆ ಹೊರಟು, ತಾನು ಒಬ್ಬ ತಂದೆಗೆ ಹುಟ್ಟಿದ್ದರೆ ತನ್ನ ತಂದೆ ಬದುಕಿ ಬರಲಿ ಎಂದು ಶಿವ–ಪಾರ್ವತಿಯರನ್ನು ಬೇಡುತ್ತಾನೆ. ತಬ್ಬಲಿರಾಯ ಎಚ್ಚರಗೊಳ್ಳುತ್ತಾನೆ. ಗುರುತಾಯಿಯ ಅಣ್ಣಂದಿರೂ, ಅತ್ತಿಗೆಯರೂ ತನ್ನ ಪತಿ ಮತ್ತು ಮಗನಿಂದ ಹತರಾಗಿ ಏಳು ಬಾಗಿಲಿಗೆ ತೋರಣವಾಗುತ್ತಾರೆ. ತಬ್ಬಲಿರಾಯ ತನ್ನ ಸತಿ ಮತ್ತು ಪುತ್ರರೊಡನೆ ಸುಖವಾಗಿ ಬದುಕುತ್ತಾನೆ.

ಕಲಿಯುಗ ಬಾಲೆ :—

ಕಲಿಯುಗದಲ್ಲಿ ಕರ್ಮ ಹೆಚ್ಚಿಹೋಗಿದೆ ಎಂಬುದಕ್ಕೆ, ಸ್ತ್ರೀಯರಲ್ಲಿ ಪಾತಿವ್ರತ್ಯ ಹಾಳಾಗಿ ಹೋಗಿದೆ ಎಂಬುದಕ್ಕೆ ನಿದರ್ಶನವಾಗಿ ಒಂದು ಕಥೆ ಯುಂಟು.

ಆರುಮಂದಿ ಅಕ್ಕತಂಗಿಯರಿರುತ್ತಾರೆ. ಅವರಲ್ಲಿ ಕಿರಿಯವಳಿಗೆ ಮಕ್ಕಳಿರುವುದಿಲ್ಲ. ಮಲ್ಲಿಕಾರ್ಜುನನ ವರದಿಂದ ಇಬ್ಬರು ಮಕ್ಕಳು ಜನಿಸುತ್ತಾರೆ. ಅವರನ್ನು ಸಂತೋಷದಿಂದ ತೊಟ್ಟಿಲಲ್ಲಿ ಹಾಕಿ ತೂಗು ತ್ತಿರಬೇಕಾದರೆ ಆವಳ ಗಂಡ ಸಿಪಾಯಿ, ದಂಡಿಗೆ ಹೋಗಬೇಕೆಂದು ಕರೆ ಬರುತ್ತದೆ. ಮಕ್ಕಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ಹೇಳಿ ಅವನು ಹೊರಟು ಹೋಗುತ್ತಾನೆ. ಅತ್ತ ಸಿಪಾಯಿ ಮರಳಿದ ಮೇಲೆ ಇವಳು ಬೇರೊಬ್ಬನೊಡನೆ ದುರ್ವ್ಯಾಪಾರದಲ್ಲಿ ತೊಡಗುತ್ತಾಳೆ. ತಮ್ಮ ವಿಲಾಸಕ್ಕೆ ಮಕ್ಕಳು ಅಡ್ಡಿಬಂದಾರೆಂದು ಅವನ್ನು ಕೊಂದು ಕೊಟ್ಟಗೆ ಯಲ್ಲಿ ಬಚ್ಚಿಡುತ್ತಾಳೆ. ಆದರೆ ಸೈನ್ಯದಲ್ಲಿ ಸಿಪಾಯಿಗೆ ಸ್ವಪ್ನಬಿದ್ದು, ಮಕ್ಕಳನ್ನು ನೆನೆದುಕೊಂಡು, ಅವರಿಗೆ ಬಟ್ಟೆ ಬರೆಗಳನ್ನು ತೆಗೆದುಕೊಂಡು ಅವನು ಊರಿಗೆ ಮರಳುತ್ತಾನೆ. ಬಂದವನೆ ಮಕ್ಕಳೆಲ್ಲಿ ಎಂದು ಕೇಳಲು ಅಲ್ಲಿ ಇಲ್ಲಿ ಎಂದು ನೆಪಹೇಳಿ ಅಂಗಡಿಗೆ ಹೋಗಿ ಅಡಿಗೆ ಸದಾರ್ಥವನ್ನು ತರುವ ನೆಪದಲ್ಲಿ ಒಂದು ಬಗೆಯ ವಿಷವನ್ನು ತಂದು ಅಡಿಗೆಯಲ್ಲಿ ಬೆರಸಿ ಬಡಿಸುತ್ತಾಳೆ. ಕೂಡಲೇ ಅವನಿಗೆ ಚಳಿಜ್ವರ ಆರಂಭವಾಗುತ್ತದೆ. ಮಕ್ಕಳನ್ನು ಕಾಣದೆ ಹಂಬಲಿಸುತ್ತಾನೆ. ಕೊಟ್ಟಗೆಯಲ್ಲಿ ಅವನಿಗೆ ಹಾಸಿಗೆ ಯನ್ನು ಸಿದ್ಧಗೊಳಿಸಿ ಅಲ್ಲಿಗೆ ಹೋಗುವಂತೆ ಹೇಳುತ್ತಾಳೆ. ಅಷ್ಟರಲ್ಲಿ ಅವನ ಕಣ್ಣೆ ಹೋಗಿಬಿಡುತ್ತವೆ. ಗಂಡನನ್ನು ಆಕೆ ಕೊಟ್ಟಗೆಗೆ ತಳ್ಳಿಬಿಡು ತ್ತಾಳೆ. ಅಲ್ಲಿ ತಡವರಿಸುವಾಗ ಮಕ್ಕರಿಯಲ್ಲಿ ಮುಚ್ಚಿಟ್ಟಿದ್ದ ಮಕ್ಕಳ ಶಿರ ಕೈಗೆಸಿಕ್ಕು ಸಿಪಾಯಿ ಬಗೆಬಗೆಯಲ್ಲಿ ರೋಧಿಸುತ್ತಾನೆ. ಮಡದಿಯ ಮೇಲೆ ರೇಗುತ್ತಾನೆ. ಕೂಡಲೆ ತನಗೆ ಅಪಾಯ ಸಂಭವಿಸಿತೆಂದು ತಿಳಿದು ಅವಳು ಕೊಟ್ಟಗೆಗೆ ಬೀಗ ಹಾಕಿ, ಬೆಂಕಿಹಚ್ಚಿ ಏನೂ ಅರಿಯದವಳಂತೆ

ಕೂಗಿಕೊಳ್ಳುತ್ತಾಳೆ. ಭೂಲೋಕದ ಈ ಅನ್ಯಾಯವನ್ನು ಕೈಲಾಸದಲ್ಲಿ ಶಿವನೋಡಿ ತಕ್ಷಣ ಹೂಮಳೆಯನ್ನು ಕರೆದು ಬೆಂಕೆಯನ್ನು ಆರಿಸುತ್ತಾನೆ. ಸಿಪಾಯಿಯನ್ನು ಮಕ್ಕಳನ್ನು ಬದುಕಿಸುತ್ತಾರೆ. ಆ ಪಾಪಿ ಹೆಂಗಸನ್ನು ಸುಣ್ಣದ ಗುಂಡಿಗೆಹಾಕಿ ಜೀವ ಸಮೇತ ಬೇಯಿಸಿಬಿಡುತ್ತಾನೆ. ಸಿಪಾಯಿಗೂ ಮಕ್ಕಳಿಗೂ ಕಾಯಸಮೇತ ಕೈಲಾಸ ಪ್ರಾಪ್ತಿಯಾಗುತ್ತದೆ.

ನುಚ್ಚಾಯ್ತು ನೀರ ಹೊಳೆಯಾಗೆ —

ನೀರಿಗೆ ಹೋಗುವ ಚೆಲುವೆಯನ್ನುಕಂಡು ಹಳ್ಳಿಯ ಯುವಕ ಮೋಹಗೊಳ್ಳುತ್ತಾನೆ. ಅವಳನ್ನು ಕೂಡಲು ಬಯಸುತ್ತಾನೆ. ದಾರಿಕಾಯುವಂತೆ ಹೇಳಿ ಅವಳು ಹೋಗುತ್ತಾಳೆ. ಭಾಷೆಕೊಟ್ಟಂತೆ ಅವಳು ಅವನಲ್ಲಿಗೆ ಬರುತ್ತಾಳೆ. ಅವನು ಅವಳ ರೂಪಯೌವನಗಳನ್ನು ಬಣ್ಣಿಸುತ್ತಾನೆ. ಅವಳು ಬಯಸಿದುದನ್ನೆಲ್ಲಾ ತಂದು ಕೊಡುವುದಾಗಿ ಹೇಳುತ್ತಾನೆ. ತನ್ನೂರಿಗೆ ಬಂದು ಇದ್ದುಬಿಡುವಂತೆಯೂ, ಅಲ್ಲಿಗೆ ಬಂದರೆ ಅವಳನ್ನು ಮಿಗಿಲಾದ ಪ್ರೀತಿಯಿಂದ ನೋಡಿಕೊಳ್ಳುವುದಾಗಿಯೂ ಹೇಳಿ–ತನ್ನ ಐಶ್ವರ್ಯವನ್ನು ವರ್ಣಿಸುತ್ತಾನೆ. ದೂರು ಬಂದೀತೆಂದು ಆಕೆ ಹೆದರುತ್ತಾಳೆ. ಹಾಗೆಯೇ ಬಂದು ಹೋಗುತ್ತಿರುವಂತೆ ಅವನಿಗೆ ಹೇಳುತ್ತಾಳೆ. ಅವನು ಹೊರಟು ಹೋಗುತ್ತಾನೆ. ಕೆಲವು ದಿನಗಳ ತರುವಾಯ ಆ ದಾರಿಯಲ್ಲಿ ಬಂದ ಯುವಕ ಏರಿಯ ಬಳಿಯ ತೋಟದಲ್ಲಿ ತನ್ನ ಪ್ರೇಮದ ಗಿಣಿಯನ್ನು ಕಾಣುತ್ತಾನೆ. ಆಕೆಯನ್ನು ಕರೆಯುತ್ತಾನೆ. ಹೊಲದ ಕಡೆಬರುವಂತೆ ಆಕೆ ಸೂಚಿಸುತ್ತಾಳೆ. ಆದರೂ ಅವನಿಗೆ ಸಂಶಯ. ಆಕೆಯ ಪ್ರೇಮ ಶಾಶ್ವತವಾಗಿರಲೆಂದು ಎಲ್ಲ ದೇವರಲ್ಲೂ ಹರಕೆ ಹೊರುತ್ತಾನೆ. ಒಂದು ತಿಂಗಳಾದರೂ ಆಕೆ ಅವನತ್ತ ಸುಳಿಯದೆ ವಿರಹ ವೇದನೆ ಅತಿಯಾಗುತ್ತದೆ. ಮೈಸೂರಿಗೆ ಹೋಗಿ ಸಂಬಳಕ್ಕೆ ಸೇರಿದ್ದವನು ಅದನ್ನು ತ್ಯಾಗಮಾಡಿಯಾದರೂ ಬರುವುದಾಗಿ ತವಕ ಪಡುತ್ತಾನೆ. ಹಾಗೆಯೇ ಬಂದು ಬಿಡುತ್ತಾನೆ. ಆಕೆಯ ಎಡಭುಜ ಅದುರುತ್ತದೆ. ಮರುದಿನ

ಹಿತ್ತಿಲ ಅವರೆಯನ್ನು ಕುಯ್ಯುವಾಗ ಗೆಳೆಯ ಕಾಣಿಸಿಕೊಳ್ಳುತ್ತಾನೆ– ಬೀದಿಯಲ್ಲಿ. ಬರುವಂತೆ ಸನ್ನೆಮಾಡುತ್ತಾನೆ. ತಾನು ಪಂಜರದ ಗಿಣಿ ಬರಲಾರೆ ಎಂದು ಆಕೆ ತಿಳಿಸುತ್ತಾಳೆ. ಹೊಸಲಿಗೆ ಗಿಣಿಯಾಗಿಯೋ ತುರುಬಿಗೆ ಹೂವಾಗಿಯೋ ಬರುವಂತೆ ಅವನಿಗೆ ತಿಳಿಸುತ್ತಾಳೆ....ಆದರೂ ರಾತ್ರಿಯಲ್ಲಿ ಅವನು ಬಂದು ಬಿಡುತ್ತಾನೆ. ನಟ್ಟಿರುಳಲ್ಲಿ ಬಂದ ಅವನನ್ನು ಕನಿಕರದಿಂದ ನುಡಿಸುತ್ತಾಳೆ. ಮಡದಿ ಇದ್ದರೂ ಹೀಗೇಕೆ ಬಂದೆಯೆಂದು ಕೇಳುತ್ತಾಳೆ. ಅವಳ ಮೇಲಿನ ಪ್ರೇಮವೆ ಹೆಚ್ಚೆಂದು ಅವನು ಹೇಳುತ್ತಾನೆ. ಅಂದು ರಾತ್ರಿ ಅವಳೊಡನಿದ್ದು ಮರುದಿನ ಮರಳುತ್ತಾನೆ. ಕೆಲದಿನ ಕಳೆಯುತ್ತದೆ. ಒಮ್ಮೆ ಊರ ಹೊಳೆಯಲ್ಲಿ ಬಟ್ಟೆಗಳನ್ನು ಮಡಿಮಾಡುತ್ತಿದ್ದ ಮಡಿವಾಳಿಯನ್ನು ನೀರಿಗೆ ಬಂದ ಆಕೆ ಏನಾದರು ಹೊಸ ಸುದ್ದಿಯಿದೆಯೋ ಎಂದು ಪ್ರಶ್ನಿಸುತ್ತಾಳೆ. ಮಾಯೂರ ಮಲ್ಲ ಕೆರೆಯಏರಿಯ ಮೇಲೆ ಜೋರಾಡಿ ಮಡಿದ ಸುದ್ದಿಯನ್ನು ಅವನು ತಿಳಿಸುತ್ತಾನೆ. ಕೂಡಲೇ ಅವಳು ಎತ್ತಿದ್ದ ಕೊಡವನ್ನು ಕೆಳಗೆ ಹಾಕಿ ದುಃಖದಿಂದ ಅಳತೊಡಗುತ್ತಾಳೆ. ಚಿನ್ನದ ಕೊಳವಲ್ಲ ರನ್ನದ ಕೊಳವಲ್ಲ ಹೀಗೇಕೆ ಅಳಬೇಕು ಎಂದು ಮಡಿವಾಳಿಕೇಳ್ಕುತ್ತಾನೆ. ಅದು ಸಾಮಾನ್ಯ ಕೊಡವಲ್ಲ–ಸೀಮೆಯ ಕೊಡ ತಾನು ಹತ್ತುವರ್ಷದಿಂದ ಬಳಸಿದ್ದೆ; ಅತ್ತೆ ಕಾಣದಂತೆ ಮಾವ ಕಾಣದಂತೆ ಒಪ್ಪವಾಗಿ ಬಳಸಿದ್ದೆ ಅದು ನುಚ್ಚುನೂರಾಯಿತು ಎಂದು ಅರ್ಥಗರ್ಭಿತವಾಗಿ ಹೇಳುತ್ತಾಳೆ.

ಹಣೆಗಂಟು ನಲುಗಿ ಉರಿದ್ಹೋದೊ:—

ಕಟ್ಟೆಯ ಹಿಂದೆ ಹುರಿಗೆಜ್ಜೆಯ ಸದ್ದಾಗಿ ನಾಗವ್ವನನ್ನು ಕೇಳಬಂದ ದಿಳ್ಳಯದೊರೆಗಳ ಆಗಮನದ ಸೂಚನೆಯಾಗಿತ್ತು. ಉಪ್ಪರಿಗೆಯ ಮುಂದೆ ಹರಳು ಕೇರುವಂಥಾ ಹೆಣ್ಣಾದ ನಾಗವ್ವನನ್ನು ಸಿರಿವಂತರ ಮನೆಗೆ ಕೊಡಿರಿ ಎಂದು ಕೇಳಲು ಬಂದಿದ್ದರು. ಹೆಣ್ಣಿನ ಕಡೆಯವರು ಮೊದಮೊಲು ಕೊಡಲು ನಿರಾಕರಿಸಿದರೂ ಅನಂತರ ಒಪ್ಪಿಕೊಂಡರು. ಲಗ್ನಕ್ಕೆ ಸಿದ್ಧತೆ

ಸಾಗತೊಡಗಿತು. ಥಾರೆಗೆ ಹಿಂದಿನ ದಿನ ಶಾಸ್ತ್ರದ ಬಳಿಗಳನ್ನು ತೊಡುವಾಗ ಸಾಗವ್ವನ ಬಲಗಡೆ ಯಾರೋ ಸೀತುತದರಿಂದ ಅರೆಬಳೆಗೆಲಗ್ನ ಒದಗಿ ಅಪಶಕುನವಾಯಿತು. ಆದರೂ ಮದುನೆಗಣಿಯಾಗಿ ಹೋಯಿತು. ಮದುವಣಿಗ ಚಿಂಪಯ್ಯ ಹರಿಷಣವನ್ನು ಹೆಚ್ಚಿಕೊಂಡು ಎಣ್ಣೆಯಸ್ನಾನಕ್ಕೆ ಸಿಂತಾಗ ತಂಗಿ ಚಿಲ್ಲುವನ್ನು ಬಂದು ಭೇಡರು ಅವರ ಆಡುಗಳನ್ನು ಹೊಡೆದು ಕೊಂಡು ಹೋಪ ಸುದ್ದಿಯನ್ನು ತಿಳಿಸುವಳು. ಕಟ್ಟದ್ದ ಕಂಕಣದಲ್ಲಯೇ, ಇಕ್ಕಿಷ ಸೆರಗಿನಲ್ಲಿಯೇ ಅಪಥಂಜಬಿಲ್ಲನ್ನು ಬಲಗೈಯ್ಯಲ್ಲಿ ಹಿಡಿದುಕೊಂಡು ಚಿಂದಯ್ಯ ಕಾಡಿಗೆ ಹೋಗಿ ಬೇಡರ ದಂಡನ್ನೆಲ್ಲ ಕೊಂದು ಆಡುಗಳ ನ್ನೆಲ್ಲಾ ಕಶಿತರುತ್ತಾಜೆ. ಊರಿನ ಬಳಿ ಬಂದಾಗ ಎಲ್ಲವನ್ನೂ ಎಣಿಸಲು ಕುಂಟಾಡಿಸ ಮರಿಯೊಂದು ಮರೆಯಾಗಿರುತ್ತದೆ. ಅದನ್ನು ಅರಸುತ್ತ ರಾತ್ರಿಯಲ್ಲಾ ಕಾಡಿನಲ್ಲಿ ಕಳೆಯಬೇಕಾಗಿ ಬಂದು, ಸೀಗೆಯ ಬೇಲಿಯೊಂದ ರಲ್ಲಿ ಒರಗಿರಲು ಹ್ಹಾಳುಬೇಡರು ಅಪಸನ್ನು ಮೋಸದಿಂದ ಕಡಿದು ಬಿಡುತ್ತಾರೆ. ಸುದ್ದಿ ಎಲ್ಲೆಲ್ಲಿಯೂ ಹರಡಿ ಹೋಗುತ್ತವೆ. ತನಗಿನ್ನೂ ಲಗ್ನವಾಗದಿದ್ದರೂ ಚಿಂವಯ್ಯನನ್ನೇ ತನ್ನ ಪತಿಯೆಂದು ತಿಳಿದಿದ್ದ ಚಿಂದವ್ವ ಅವನ ಕೊಂಡಕ್ಕೆ ಥಾರೆ ಎರಸಿಕೊಳ್ಳಲು ಸಿದ್ಧವಾಗುತ್ತಾಳೆ. ಅಂತೆಯೇ ಅವಳನ್ನೂ ಕೊಂಡಕ್ಕೆ ಥಾತೆಯೆರುತ್ತಾಕೆ. ಅನಂತರ ಅವಳು ಅದೇ ಕೊಂಡಕ್ಕೆ ಹಾರಿ ತನ್ನ ಪತಿ ಯನ್ನು ಸೇರಿಕೊಳ್ಳುತ್ತಾಳೆ. ಈಗ ಸ್ಥಳದೇವತೆಯಾಗಿ ಅವಳ ಪೂಜೆ ನಿತ್ಯವೂ ಸಾಗುತ್ತದೆ.

ನಾನಿದ್ದು ಬಂದೇನು ಸಡೀರಣ್ಣ :—

ಇನ್ನೂ ಬಾಳಿ ಬದುಕಬೇಕಾದ ಸದ್ಗೃಹಸ್ತೆಯೊಬ್ಬಳನ್ನು ಕರೆ ದೊಯ್ಯಲು ಜವರಾಯ ಬಂದು ಬಿಡುತ್ತಾನೆ. ತನ್ನಮಗು, ಮನೆ, ಬಂಧು ಬಳಗಗಳನ್ನೂ ತೊರೆದು ಹೋಗಲಾರದೆ ಅವಳು ದುಃಖಮಾಡು ತ್ತಾಳೆ. ತನ್ನ ಕಂದಮ್ಮಗೆ ಹಾಲು ಕುಡಿಸಿ ಬರುತ್ತೇನೆನ್ನುತ್ತಾಳೆ. ಹಾವಿಗೆ ಯಲ್ಲಿ ಮೂಟೆಯಲ್ಲಿ ತುಂಬಿರುವ ದಿನಸಿಯನ್ನು ಉಂಡುಬರುತ್ತೇನೆನ್ನು

ತ್ತಾಳೆ, ಹನ್ನೆರಡು ತಿಂಗಳಿಗೆ ಪಡೆದ ಕಂದಯ್ಯನನ್ನು ಬಿಟ್ಟು ಬರಲಾರೆನೆನ್ನುತ್ತಾಳೆ. ಏನನ್ನೂ ಜವರಾಯ ಕೇಳುವುದಿಲ್ಲ. ಹೀಗೆಯೇ ಒಂದೊಂದಾಗಿ ಹೇಳಿಕೊಳ್ಳುತ್ತಾಳೆ. ತಾನು ಮಾಡಿದ ದಾನಧರ್ಮಾದಿಗಳನ್ನು ಹೇಳಿಕೊಳ್ಳುತ್ತಾಳೆ. ಜವರಾಯನಿಗೆ ಕೋಪಬಂದು ಕೂಡಲೆ ಹೊರಡುವಂತೆ ಭಿರುಸಿನಿಂದ ಹೇಳುತ್ತಾನೆ. ಅವಳು ದಾನಧರ್ಮ ಮಾಡಿದವಳಲ್ಲ– ಆದಂದರಿಂದಲೇ ಏಳುಬೀದಿಯಲಿ ಜವರಾಯ ಅವಳನ್ನು ಎಳೆಸಿದನು, ಮುಳ್ಳಿನಮೇಲೆ ಎಳೆಸಿದನು, ಹದ್ದು ಕಾಗೆಗಳನ್ನು ಬಿಟ್ಟು ಕಚ್ಚಿಸಿದನು. ಲೋಕದ ಮೇಲೆ ನ್ಯಾಯವಾಗಿ, ಧರ್ಮವಾಗಿ ಬಾಳಿ ದುರಾಸೆಯಿಂದ ಕೂಡಿ ದಾನಧರ್ಮಗಳನ್ನು ಮಾಡದುದರಿಂದ ಅಕಾಲಮರಣ ಬಂದು ನರಕಯಾತನೆಯನ್ನು ಅನುಭವಿಸಬೇಕಾಯಿತು.

ನಾಗರಗನ್ನೆ :—

ಕಲ್ಯಾಣಪಟ್ಟಣದ ಏಳುಮಂದಿ ರಾಯರು ನಂದಿದುರ್ಗಕ್ಕೆ ಬೇಟೆಗೆ ಹೋಗಿರಲು, ಭೂತಾಳೆಪಟ್ಟಣದ ಜೋಗಿ ವೇಷ ಮರೆಸಿಕೊಂಡು ಭಿಕ್ಷೆಯನೆಪದಲ್ಲಿ ಹಿರಿಯರಾಯನ ಮಡದಿ ನಾಗರಗನ್ನೆಯನ್ನು ಜೂಲುನಾಯಿ ಮಾಡಿ ಅಪಹರಿಸಿಕೊಂಡು ಹೋಗುತ್ತಾನೆ. ಒಂದು ಗಂಡು ಮಗುವನ್ನು ಮನೆಯಲ್ಲಿ ತೊರೆದು ಹೋಗಿರುತ್ತಾಳೆ. ಬೇಟೆಗೆ ಹೋಗಿದ್ದ ರಾಯರಲ್ಲಿ ಹಿರಿಯನಿಗೆ ಜೋಗಿಯ ಹಿಂದೆ ನಾಗರಗನ್ನೆ ಹೋಗುವಂತೆ ಕನಸಾಗಿ ಬೇಗ ಊರಿಗೆ ಮರಳುತ್ತಾರೆ. ತಾಯಿಯಿಂದ ವಿಷಯವನ್ನು ತಿಳಿದು ಜೋಗಿಯನ್ನು ಅರಸುತ್ತಾ ಹೋಗುತ್ತಾರೆ. ಭೂತಾಳೆ ಪಟ್ಟಣವನ್ನು ಸೇರಿ, ಜೋಗಿಯ ಅರಮನೆಯನ್ನು ಗುರುತಿಸಿ ಅವನು ಮನೆಯಲ್ಲಿಲ್ಲದಿರಲು ನಾಗರಗನ್ನೆಯನ್ನು ಕರೆದುಕೊಂಡು ಹೊರಟು, ನಡುದಾರಿಯಲ್ಲಿ ನಾಗರಗನ್ನೆಯ ಕೈಯಲ್ಲಿ ಅಡಿಗೆಮಾಡಿಸಲು ಅಣಿಯಾಗುತ್ತಾರೆ. ಆವೇಳೆಗೆ ವಿಷಯವನ್ನು ತಿಳಿದು ವೇಷವನ್ನು ಮರೆಸಿಕೊಂಡು ಜೋಗಿ ಬಂದು ಆ ಏಳುಮಂದಿಯನ್ನೂ ಕಲ್ಲುಮಾಡಿ ನಾಗರಗನ್ನೆಯನ್ನು ಮತ್ತೆ ಅಪಹರಿಸಿಕೊಂಡು ಹೋಗುತ್ತಾನೆ. ನಾಗರಗನ್ನೆ

ಎರಡು ವರ್ಷ ವ್ರತನಿಲ್ಲುವುದಾಗಿಯೂ ಅನಂತರ ಜೋಗಿಯ ಕೈವಶ ವಾಗುವುದಾಗಿಯೂ ಹೇಳಿ ತನ್ನ ಸೇವೆಗೆ ಆಳುಗಳನ್ನು ನೇಮಿಸಿಕೊಳ್ಳು ತ್ತಾಳೆ. ಇತ್ತ ಅವಳ ಮಗ ಪುಟ್ಟರಾಮಣ್ಣ ಬೆಳೆಯುತ್ತಿರುತ್ತಾನೆ. ತನ್ನ ಅಜ್ಜಿಯಿಂದ ತಾಯಿಯ ವಿಷಯವನ್ನು ತಿಳಿದು ಭೂತಾಳೆಪಟ್ಟಣಕ್ಕೆ ಹೋಗಿ ಜೋಗಿಯನ್ನು ಕೊಂದು ತನ್ನ ತಾಯನ್ನೂ, ತಂದೆಯನ್ನೂ ಕರೆ ತರುವ ಸಾಹಸದ ಕಥೆ.

ಉತ್ತರದೇವಿ :—

ಉತ್ತರದೇವಿ ಅಂಗಳದ ಬಾವಿಯಲ್ಲಿ ನೀರನ್ನು ಮೊಗೆಯುತ್ತಿರುವಾಗ ಹಾದಿಹೋಕನೊಬ್ಬ ಬಂದು ನೀರನ್ನು ಕೇಳುತ್ತಾನೆ. ಅವನಿಗೆ ನೀರನ್ನು ಕೊಡಲು ತಾನು ಪದಕವನ್ನು ತೊಟ್ಟಿಲ್ಲವೆಂದು ಆಕೆ ಉತ್ತರಿಸುವ ಭರದಲ್ಲಿ ಬಾವಿಯ ಅಂಚಿಗೆ ಗಡಿಗೆ ತಗುಲಿ ಪುಡಿಯಾಗುತ್ತದೆ. ಮನೆಯಲ್ಲಿ ಅತ್ತೆ ರೇಗಾಡುತ್ತಾಳೆ. ಎದುರುತ್ತರಕೊಡಲು ಅತ್ತೆ ಮತ್ತೂ ಕೋಪಗೊಳ್ಳು ತ್ತಾಳೆ. ಅದನ್ನು ಅತ್ತೆಯಿಂದಲೇ ಕಲಿತುದಾಗಿ ಉತ್ತರದೇವಿ ಹೇಳು ತ್ತಾಳೆ. ಮನೆಗೆ ಮಗನು ಬರಲು ಅವನಿಗೆ ಹಾಲು ಅನ್ನವನ್ನು ಬಡಿಸಿ ಉತ್ತರದೇವಿಯನ್ನು ಬಿಟ್ಟುಬಿಡುವಂತೆ ಒತ್ತಾಯಪಡಿಸುತ್ತಾಳೆ ಅತ್ತೆ. ಆದರೆ ಆತ ನಿರಾಕರಿಸುತ್ತಾನೆ. ಆದರೂ ಅತ್ತೆಯ ಬಲವಂತಕ್ಕೆ ಉತ್ತರ ದೇವಿ ಗಂಡನ ಮನೆಯನ್ನು ತೊರೆಯಬೇಕಾಗುತ್ತದೆ. ಮಾವ, ಮೈದುನ, ನಾದಿನಿ, ಅತ್ತಿಗೆ ಮುಂತಾದವರೆಲ್ಲಾ ಅವಳೆನ್ನು ಕಳಿಸಿಬಿಡಲು ಸಮ್ಮತಿಸು ತ್ತಾರೆ. ಅವಳ ಗಂಡ ಮಡದಿಯನ್ನು ಬಿಡಲು ದುಃಖಿಸುತ್ತಾನೆ. ತಾನು ಸಾಕಿದ್ದ ಹಿತ್ತಲ ಗಿಡ, ಬಳ್ಳಿಗಳಿಗೆಲ್ಲಾ ಹೇಳಿ ಅವಳು ಹೊರಡುತ್ತಾಳೆ. ಕಂದನನ್ನು ಕರೆದುಕೊಂಡು ಬೆಳುದಿಂಗಳಲ್ಲಿ ತೌರ ದಾರಿಯಲ್ಲಿ ನಡೆದು ಅಪ್ಪನ ಮನೆಗೆ ಬರುತ್ತಾಳೆ. ಆದರೆ ಅವರ ತಂದೆ ಬೇರೊಬ್ಬಳನ್ನು ಮದುವೆ ಯಾಗಿ ಅವಳ ತೋಳಸೆರೆಯಲ್ಲಿದ್ದು ಬಾಗಿಲನ್ನು ತೆರೆಯಲು ನಿರಾಕರಿಸು ತ್ತಾನೆ. ತಾಯಿಲ್ಲದ ಅವಳು ದೊಡ್ಡಪ್ಪ, ಚಿಕ್ಕಪ್ಪ, ಅಣ್ಣ, ತಮ್ಮ, ಅಕ್ಕ, ತಂಗಿ ಎಲ್ಲರ ಮನೆಗೂ ಹೋಗಿ ಅದೇ ಉತ್ತರವನ್ನು ಪಡೆದು ಹಿಂದಿರುಗು

ತ್ತಾಳೆ. ಅಲ್ಲಿಂದ ಅವಳು ಅಜ್ಜಿಯ ಮನೆಗೆ ಬರಲು ಅವಳು ಸ್ವಾಗತಿಸಿ ಮೊಮ್ಮಗಳ ಸ್ಥಿತಿಯನ್ನು ಕೇಳಿ ಮರುಗುತ್ತಾಳೆ. 'ಅಮ್ಮ'ನನ್ನು ಕರೆದು ಕೊಂಡು ಹೋಗಿ ಗಂಗೆಯಲ್ಲಿ ತಾನರೆ ಎಲೆಯನೇಲೆ ಕುಳಿತು ಶಿವನನ್ನು ಕುರಿತು ತಪಸ್ಸುಮಾಡಿ ಮೋಕ್ಷವನ್ನು ಪಡೆದು ನಾಡಿನಮೇಲೆ ಅವಳ ಆದರ್ಶದ ಕಥೆ ಚಿರಕಾಲ ನಿಲ್ಲುವಂತೆ ಉತ್ತರೆ ಮಳೆಯಾಗಿ ಸುರಿಯುತ್ತಾಳೆ.

ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ :—

ಭೂಲೋಕದಲ್ಲಿ ಗೌರಿಯ ಅವತಾರವಾದಮೇಲೆ ಸುಂದರ ಯುವತಿಯಾಗಿ, ಬೆಳೆದುನಿಂತ ಅವಳನ್ನು ಯಾರಿಗೆ ಕೊಡಬೇಕೆಂಬುದು ತಾಯಿ ತಂದೆಗಳಿಗೆ ದೊಡ್ಡ ಸಮಸ್ಯೆಯಾಗಿಹೋಯಿತು. ಯಾವ ವರನನ್ನೂ ಅವಳು ಒಪ್ಪದೆ ನಿರಾಶೆಯನ್ನುಂಟುಮಾಡಿದಳು. ತಂದೆ ಮಗಳನ್ನೆ ಕೂರಿಸಿ ಕೊಂಡು ಯಾರಿಗೆ ನಿನ್ನನ್ನು ಕೊಡಲಿ ಎಂದು ಪ್ರಶ್ನಿಸುತ್ತಾನೆ. ಬ್ರಾಹ್ಮಣನಿಗೆ ಕೊಡಲೆ ಎಂದರೆ ಅವರ ಕಟ್ಟುನಿಟ್ಟಾದ ಜೀವನ ತನಗೆ ಒಗ್ಗದೆಂದು ಹೇಳಿ ನಿರಾಕರಿಸಿಬಿಡುತ್ತಾಳೆ. ಹೀಗೆಯೇ ಶಿವಭಕ್ತರು (ವೀರಶೈವರು), ಕೋಮಟಿಗರು (ವೈಶ್ಯರು), ಒಕ್ಕಲಿಗರು, ತುರುಕರು, ಕುಂಬಾರರು, ಕುರುಬರು, ನಾಯ್ಕರು, ಗೊಲ್ಲರು, ಮುಂತಾದ ವಿವಿಧ ಜಾತಿಯ ವಿವಿಧ ಕಸುಬಿನವರನ್ನು ಸೂಚಿಸಿದರೂ ಹಲವು ಕಾರಣಗಳನ್ನು ಹೇಳಿ ಆಕೆ ನಿರಾಕರಿಸಿಬಿಡುತ್ತಾಳೆ. ಕೊನೆಗೆ ಶಿವಗಂಗೆಯ ಸನ್ಯಾಸಿ ಮಠದಲ್ಲಿರುವ ಜಂಗಮರಿಗೆ ಕೊಟ್ಟು ಲಗ್ನಮಾಡುವಂತೆ ತಿಳಿಸಲು ಅದನ್ನು ಕೇಳಿದ ತಾಯಿ ತಂದೆಯರು ವಿಸ್ಮಯಗೊಳ್ಳುತ್ತಾರೆ. ಜಂಗಮ ಜೀವನದ ದುಸ್ಸಹ್ಯವಾದ ಸ್ಥಿತಿಯನ್ನು ವಿವರಿಸುತ್ತಾರೆ. ಆದರೂ ಅವಳು ಕೇಳದಿರಲು ಕುಪಿತರಾಗಿ, ತಮ್ಮ ಘನತೆಯನ್ನು ಹಾಳುಮಾಡುವ ಹೆಣ್ಣೆಂದು ಕಣ್ಣು ಕಟ್ಟಕಾಡಿಗೆ ಬಿಟ್ಟುಬಿಡುತ್ತಾರೆ. ಅಲ್ಲಿ ಗೌರಮ್ಮ ಹನ್ನೆರಡು ಬೆಟ್ಟದ ನಡುವೆ ಕುಳಿತು ಶಿವನನ್ನು ಕುರಿತು ತಪಸ್ಸುಮಾಡುತ್ತಾಳೆ. ಶಿವ ಮುದಿಜಂಗಮನ ವೇಷವನ್ನು ಧರಿಸಿ, ಜೋಳಿಗೆ ಹಿಡಿದು ಭಿಕ್ಷೆಗೆ ಬರುತ್ತಾನೆ–ತಪಸ್ಸುಮಾಡುತ್ತಿದ್ದ ಗೌರಿಯ ಬಳಿಗೆ. ಕಾಡಿನಲ್ಲಿ ಅವಳೇನನ್ನು ಕೊಟ್ಟಾಳು ? ಕೊನೆಗೆ

ಶಿವ ತನ್ನ ನಿಜರೂಪನ್ನು ತೋರಿ ಅವಳನ್ನು ತನ್ನ ಜೊತೆಯಲ್ಲಿ ಮಠಕ್ಕೆ ಕರೆದುಕೊಂಡುಹೋಗಿ ಅವಳ ತಂದೆತಾಯಿಗಳನ್ನು ಕರೆಸಿ ವಿಜೃಂಭಣೆಯಿಂದ ಮದುವೆಮಾಡಿಕೊಳ್ಳುತ್ತಾನೆ.

ಮಳೆರಾಯ-ಮಾರ್ಹೆಣ್ಣ:—

ಆರು ಜನ ಅಕ್ಕತಂಗಿಯರು-ಆರು ಜನ ಅಣ್ಣಂದಿರು-ಕಿರಿಯವಳೇ ಮಾರ್ಹೆಣ್ಣ. ಅವಳ ಅಣ್ಣಂದಿರು ತಂಗಿಯಮೇಲಿನ ಪ್ರೇಮದಿಂದ ಒಂದು ಉಯ್ಯಾಲೆಯನ್ನು ಹಾಕಿಕೊಟ್ಟಿರುತ್ತಾರೆ-ಅವಳು ಉಯ್ಯಾಲೆಯನ್ನು ಆಡುವಾಗ ಮೂಡಲಿಂದ ಮಳೆ ಬರುತ್ತದೆ-ಮಾರ್ಹೆಣ್ಣ ಸಂಜೆ ಬರುವಂತೆ ತಿಳಿಸುತ್ತಾಳೆ-ಸಂಜೆ ಎಲ್ಲರೂ ಮಲಗಿದ ಮೇಲೆ ಮಳೆರಾಯ ಬಂದು ಬಾಗಿಲು ತಟ್ಟುತ್ತಾನೆ-ಮಾರ್ಹೆಣ್ಣ ಬಾಗಿಲನ್ನು ತೆಗೆದು ಸ್ರೇಮಸಲ್ಲಾಪ ನಡೆಸುತ್ತಾಳೆ-ಹೊರಡುವಾಗ ಮಳೆರಾಯ ತಾನು ಮತ್ತೆ ಬರಲಾಗುವುದಿಲ್ಲ ವೆಂದೂ ಗರುಡನ ಕೈಯಲ್ಲಿ ಪದಕವನ್ನು ಕಳಿಸುವುದಾಗಿಯೂ ಹೇಳಿ ಹೋಗುತ್ತಾನೆ-ಅದರಂತೆ ಗರುಡನ ಕೊರಳಿಗೆ ಪದಕವನ್ನು ಸುತ್ತಿ ಕಳಿಸುವಲ್ಲಿ ದಾರಿಯಲ್ಲಿ ಮಳೆರಾಯನ ಹಳೆಯ ಸೂಳೆ ಸಿಕ್ಕು ಗರುಡನನ್ನು ಅಲ್ಲಿ ಉಳಿಸಿಕೊಂಡು ಸತ್ಕರಿಸಿ ಪದಕವನ್ನು ಗೂಟದಲ್ಲಿಹಾಕಿ ಊಟಮಾಡುವಾಗ ಅದನ್ನು ಹಾರಿಸಿ ಹಳೆಯ ಪದಕವನ್ನು ಇಟ್ಟುಬಿಡುತ್ತಾಳೆ-ಗರುಡ ಅಂದು ತಂಗಿದ್ದು ಮುಂದುವರಿಯುತ್ತಾನೆ—ಮಾರ್ಹೆಣ್ಣಿನ ಮನೆಗೆ ಬಂದಮೇಲೆ ಅವಳೂ ಅವನನ್ನು ಸತ್ಕರಿಸುತ್ತಾಳೆ. ತನ್ನ ಪ್ರೇಮಿಯ ಕಡೆಯವನೆಂದು ತಿಳಿದು-ಮಳೆರಾಯ ಕಳಿಸಿದ ಚಾರನೆಂದು ತಿಳಿದು ವಿಧವಿಧವಾಗಿ ಸತ್ಕರಿಸುತ್ತಾಳೆ. ಗರುಡ ಪದಕವನ್ನು ಕೊಡುತ್ತಾನೆ. ತಿರುತಿರುಗಿಸಿ ಅದನ್ನು ನೋಡಿ ಮಾರ್ಹೆಣ್ಣ ಬೆರಗಾಗುತ್ತಾಳೆ. ಹೊಸ ಪದಕವನ್ನು ಕಳಿಸುವುದಾಗಿ ಹೇಳಿಹೋಗಿ ಯಾವುದೋ ಹಳೆಯ ಪದಕವನ್ನು ಕೊಟ್ಟದ್ದಕ್ಕಾಗಿ ಮುನಿಯುತ್ತಾಳೆ. ಗರುಡ ಹಿಂದಿರುಗಿದಮೇಲೆ ಬಾಗಿಲನ್ನು ಭದ್ರಪಡಿಸಿ ಮಾರ್ಹೆಣ್ಣ ಸಿಟ್ಟಿನಿಂದಲೇ ಕುಳಿತಿರುವಲ್ಲಿ ಸಂಜೆಯಾಗುತ್ತದೆ. ಮಳೆರಾಯ ಬಾಗಿಲ ಬಳಿ ಬಂದು ಮೆಲ್ಲಗೆ ಕೂಗುತ್ತಾನೆ. ಮಾರ್ಹೆಣ್ಣ

ಮಾತಾಡುವುದಿಲ್ಲ. ಮಳೆರಾಯ ಬಾಗಿಲನ್ನು ತೆರೆದು ಮಾತಾಡದಿದ್ದರೆ ಅವಳ ಅಣ್ಣಂದಿರಿಗೆ ಬಡತನ ಕೊಡುವುದಾಗಿ ಅಂಜಿಸುತ್ತಾನೆ. ವನವಾಸ ಹೋಗುವಂತೆ ಮಾಡಿ ಹಾದಿಯಲ್ಲಿ ಹಳ್ಳವಾಗಿ ಹರಿದು, ಆ ನೀರನ್ನು ಮಾರ್ಥಿಣ್ಣೂ ಅವಳ ಅಣ್ಣಂದಿರೂ ಕುಡಿಯಬೇಕಾಗುವುದೆಂದು ಆಗ ತನ್ನೊಡನೆ ಮಾತಾಡಿದಂತೆಯೇ ಆಗುವುದೆಂದು ಹೇಳುತ್ತಾನೆ. ಹಾಗೆಯೇ ದಾರಿಯಲ್ಲಿ ಜೋಳವ ಬಡಿಸಿ ತೆನೆಯನ್ನು ತಿನ್ನಿಸುವುದಾಗಿಯೂ, ಅಡಿಗೆಮಾಡಿ ಊಟ ಮಾಡಿಸುವುದಾಗಿಯೂ ಇದರಿಂದ ಮಾರ್ಥಿಣ್ಣು ಮಾತಾಡಿದಂತೆಯೇ ಆಯಿತೆಂದೂ ಹೇಳುತ್ತಾನೆ. ಮುಂದೆ ಒಂದು ಪಟ್ಟಣವನ್ನು ಸೇರಿ, ಅಲ್ಲಿ ಅಣ್ಣಂದಿರು ಹಸಿ ರಾಗಿಯನ್ನು ತಂದು ಮಾರ್ಥಿಣ್ಣಿನ ಕೈಯಲ್ಲಿ ಕೊಟ್ಟಾಗ ಅವಳು ಅಂಗಳದಲ್ಲಿ ಒಣಗಲು ಹಾಕಿದಾಗ ಕೋಳಿಹುಂಜನಾಗಿ ಬಂದು ಕೆರೆದುಬಿಡುವುದಾಗಿಯೂ ಆಗ ಓಡಿಸಲು ಬಂದ ಅವಳು 'ಜೊ ಜೊ' ಎಂದು ಮಾತಾಡಿಸಿದಂತಾಯಿತೆಂದೂ ಹೇಳುತ್ತಾನೆ. ಹಾಗೆಯೇ ಬಳೆಗಾರನ ವೇಷದಲ್ಲಿ ಬಂದು ಬಳೆ ತೊಡಿಸುವ ನೆಪದಲ್ಲಿ ಕೈ ಹಿಡಿಯುವುದಾಗಿಯೂ ತಿಳಿಸುತ್ತಾನೆ. ಅಲ್ಲಿಗೂ ಕದವನ್ನು ತೆಗೆಯದಿರಲು ಮಳೆರಾಯ ಹೊರಟುಹೋಗುತ್ತಾನೆ. ಅಣ್ಣಂದಿರಿಗೆ ಬಡತನ ಬಂದು ವನವಾಸವನ್ನು ಹೊರಟು ದಾರಿಯಲ್ಲಿ ಹಳ್ಳದ ನೀರನ್ನೂ, ಜೋಳದ ತೆನೆಯನ್ನೂ, ಸಿದ್ಧವಾಗಿದ್ದ ಊಟವನ್ನೂ, ಆಶ್ರಯಿಸಿ ದಣಿವಾರಿಸಿಕೊಂಡವರು ಅವರು ಮಾತ್ರ. ಮಾರ್ಥಿಣ್ಣು ಏನನ್ನೂ ಮುಟ್ಟಲಿಲ್ಲ. ಪಟ್ಟಣದಲ್ಲಿ ಮಳೆರಾಯ ಹುಂಜನಾಗಿ ಬಂದರೂ ಅವಳೂ ಮಾತಾಡಲಿಲ್ಲ. ಕೊನೆಗೆ ಬಳೆಗಾರನಾಗಿ ಬಂದಾಗ ಅವನ ಮುಂದೆ ಆ ಹಳೆಯ ಪದಕವನ್ನು ಎಸೆಯುತ್ತಾಳೆ. ಮಳೆರಾಯನಿಗೆ ಆಗ ಅರ್ಥವಾಯಿತು. ಅವಳಿಗೆ ಮತ್ತೊಂದು ಹೊಸಪದಕವನ್ನು ಕೊಟ್ಟು ತನ್ನ ಭಾವಮೈದುನರು ಸುಖವಾಗಿ ಬದುಕಲೆಂದು ರಾಜೈಶ್ವರ್ಯವನ್ನು ಹಂಚಿಕೊಟ್ಟು ಸಮಾಧಾನಗೊಳಿಸಿದನು.

ಶ್ರೀಕೃಷ್ಣ ಪಾರಿಜಾತ :—

ದ್ವಾರಕೆಯಲ್ಲಿ ಶ್ರೀಕೃಷ್ಣ ಹದಿನಾರು ಸಾವಿರದ ನೂರೆಂಟುಮಂದಿ ಮಡದಿಯರನ್ನು ಆಳಿಕೊಂಡಿರಲು ಒಂದು ಸಲ ನಾರದನು ದೇವಲೋಕದಿಂದ ಒಂದು ಪಾರಿಜಾತ ಪುಷ್ಪವನ್ನು ತಂದುಕೊಡುತ್ತಾನೆ. ಶ್ರೀಕೃಷ್ಣ ಅದು ರುಕ್ಮಿಣಿಗೆ ಒಪ್ಪುವುದೆಂದು ಅದನ್ನು ಅವಳಿಗೆ ಕೊಟ್ಟುಬಿಡುತ್ತಾನೆ. ಅವಳು ಮುಡಿಯಲು ಅದರ ಸುಗಂಧ ಎಲ್ಲೆಲ್ಲಿಯೂ ಹರಡಿ, ಕೊನೆಗೆ ನಾರದ ಅದರ ವಿಷಯವನ್ನು ಸತ್ಯಭಾಮೆಗೆ ತಿಳಿಸಿಬಿಡುತ್ತಾನೆ. ಕೋಪಗೊಂಡ ಅವಳು ಆಭರಣಗಳನ್ನೆಲ್ಲಾ ಕಿತ್ತೊಗೆದು ತಳಮಳಗೊಳ್ಳುತ್ತಿರಲು ಶ್ರೀಕೃಷ್ಣನು ಏನು ಸಮಾಧಾನ ಮಾಡಿದರೂ ಕೇಳದಾಗುತ್ತಾಳೆ. ದೇವಲೋಕದ ಪಾರಿಜಾತ ಪುಷ್ಪವನ್ನೇ ತರುವುದಾಗಿ ಹೇಳುತ್ತಾನೆ. ನಾರದ ಮತ್ತೆ ಅಲ್ಲಿ ಕಾಣಿಸಿಕೊಳ್ಳಲು ಜಾಡಿಹೇಳಿದ ನಾರದನಮೇಲೆ ಶ್ರೀಕೃಷ್ಣ ರೇಗಾಡುತ್ತಾನೆ. ಅಷ್ಟರಲ್ಲಿ ನಾರದ ದೇವಲೋಕದಿಂದ ತಂದಿದ್ದ ಮತ್ತೊಂದು ಹೂವನ್ನು ಕೊಟ್ಟು ಸಮಾಧಾನಪಡಿಸುತ್ತಾನೆ.

ಚೆನ್ನಿಗರಾಯ :—

ಜಾಣೆಯಾದ ಚೆಲುವೆಯಾದ ಹೆಣ್ಣೊಬ್ಬಳಿರುತ್ತಾಳೆ. ಅವಳ ಗಂಡ ದಂಡಿಗೆ ಹೋಗಿರುತ್ತಾನೆ–ಚೆನ್ನಿಗರಾಯ ಬಳೆಗಾರ ಊರಿಗೆ ಬಂದು ಬಳೆಯನ್ನು ತೊಡಿಸಲು ಆಕೆಯನ್ನು ಕರೆಯುತ್ತಾನೆ–ಮನೆಯಲ್ಲಿ ಯಾರೂ ಇಲ್ಲದೆ ತೊಡಿಸಿಕೊಳ್ಳಲು ನಿರಾಕರಿಸುತ್ತಾಳೆ–ಆದರೂ ಅವನು ಒತ್ತಾಯ ಪಡಿಸುತ್ತಾನೆ–ಆಕೆ ಬಳೆ ತೊಡಿಸಿಕೊಳ್ಳುವಲ್ಲಿ ಊಟಾದಿಗಳನ್ನು ಸ್ವೀಕರಿಸಲು ಅವಳ ಗಂಡನ ವಸ್ತುಗಳನ್ನು ಅವನು ಮಲಗುತ್ತಿದ್ದ ಮಂಚವನ್ನೂ ಬಯಸುತ್ತಾನೆ—ಆದರೆ ಆಕೆ ನಿರಾಕರಿಸುತ್ತಾಳೆ. ತುಸುಹೊತ್ತಿನಲ್ಲಿ ಬಳೆಗಾರ ಊಟವನ್ನು ತೊರೆದು ಅತ್ತ ಹೋದಮೇಲೆ ಚೆನ್ನಿಗರಾಯ ಬರುತ್ತಾನೆ–ಹೆಂಡತಿಯ ಕೈಯಲ್ಲಿನ ಬಳೆಗಳನ್ನು ನೋಡಿ ಸಿಡಿಮಿಡಿಗೊಳ್ಳುತ್ತಾನೆ. ಆಕೆ ನಿಜವನ್ನೇ ಹೇಳುತ್ತಾಳೆ–ಪತಿ ಮಡದಿಯನ್ನು ಮೆಚ್ಚಿಕೊಳ್ಳು

ತ್ತಾನೆ–ಚಿಕ್ಕ ಪ್ರಾಯದಲ್ಲಿ ಅವಳನ್ನು ಲಗ್ನವಾಗಿ ಬಿಟ್ಟು ದಂಡಿಗೆ ಹೋದ ವನು ಬಳಿಗಾರನ ವೇಷದಲ್ಲಿ ಹೀಗೆ ಬಂದು ಅವಳನ್ನು ಪರೀಕ್ಷಿಸಿ ಅವಳ ಅಕ ಳಂಕ ಪ್ರೇಮವನ್ನು ಮೆಚ್ಚಿ ಆನಂದಿಸುತ್ತಾನೆ.

ದೇವಗನ್ನೇರು ತಾನಾಕೆ ನಡೆದಾರು :—

ಕೈ ಕೈಹಿಡಿದುಕೊಂಡು ಹದಿನಾಲ್ಕು ಮಂದಿ ದೇವಗನ್ನೆಯರು ಸ್ನಾನಕ್ಕೆ ಬರುತ್ತಾರೆ–ಮಲ್ಲಿಗೆ ವನದ ನಡುವಿನ ಕೊಳಕ್ಕೆ. ತೊಟ್ಟ ಒಡವೆ ವಸ್ತ್ರಗಳನ್ನು ಕಟ್ಟೆಯಮೇಲಿರಿಸಿ 'ಮೈಕೈ' ಮರೆತಂತೆ ಸ್ನಾನಮಾಡುವ ಸಮಯವನ್ನು ಸಾಧಿಸಿ ಶ್ರೀ ಕೃಷ್ಣ ಅವರ ವಸ್ತ್ರಾದಿಗಳನ್ನು ಅಪಹರಿಸಿ ಹೊನ್ನೆಯ ಮರದಮೇಲೆ ಅಡಗಿ ಕೊಳ್ಳುತ್ತಾನೆ. ಸ್ನಾನಮುಗಿಸಿದ ದೇವ ಗನ್ನೆಯರು ಹೆಜ್ಜೆಗಳನ್ನು ಗುರುತಿಸಿ ಅದು ಶ್ರೀಕೃಷ್ಣನ ಮೋಸವೆಂದೇ ಅರಿಯುತ್ತಾರೆ. ಮುಂದೆ ಅವರು ತನ್ನ ವಸ್ತ್ರಗಳನ್ನು ಕೊಡುವಂತೆ ಬೇಡು ವಾಗಿನ ಸಾರಸ್ಯ ಪ್ರಸಂಗದ ನಿರೂಪಣೆ ಬರುತ್ತದೆ.

ಗಂಗೆ ಗೌರಿ ಜಗಳ :—

ಒಮ್ಮೆ ಗೌರಿ ತಾನು ಮುಡಿದು ಮಿಕ್ಕ ಮಲ್ಲಿಗೆ ಜಾಜಿ ಮುಂತಾದ ಹೂಗಳನ್ನು ಮಗ ವೀರಣ್ಣನ ಕೈಯಲ್ಲಿ ಗಂಗೆಯ ಸೌಧಕ್ಕೆ ಕಳಿಸಿಕೊಡು ತ್ತಾಳೆ. ಆದರೆ ಗಂಗೆ ಬಾಡಿದ ಹೂವುಗಳನೆಂದು ತಿರಸ್ಕಾರದಿಂದ ಬೇಲಿಗೆ ಚೆಲ್ಲಲು ಹಿಂದೆಯೇ ಬಂದ ಗೌರಮ್ಮ ಜಗಳಕ್ಕೆ ನಿಲ್ಲುತ್ತಾಳೆ. ಗಂಗೆಯ ಕುಲಗೋತ್ರಗಳನ್ನು ಎತ್ತಿ ಆಡುತ್ತಾಳೆ. ಪರಿಸ್ಥಿತಿ ಉತ್ಕಟತೆಗೆ ಬರುತ್ತದೆ. ಜಡೆ ಜಡೆ ಹಿಡಿದು ಜಗಳ ಆಡುತ್ತಾರೆ. ಹೀಗಿರುವಲ್ಲಿ ಗೌರಿ ಸೂತಕವಾಗಿಬಿಡುತ್ತಾಳೆ–ಗಂಗೆ ಇದೇ ಸಮಯವನ್ನು ಸಾಧಿಸಿ ಭೂಮಿ ಯಲ್ಲೆಲ್ಲೂ ನೀರು ಸಿಗದಂತೆಮಾಡಿ ಗೌರಿಯ ಜಗಳಕ್ಕೆ ಅಡ್ಡಿಮಾಡುತ್ತಾಳೆ. ಗೌರಿ, ಮಗ ವೀರಣ್ಣನನ್ನು ಕರೆದು ಎಲ್ಲಾದರೂ ನೀರನ್ನು ಹುಡುಕಿ ತರು ವಂತೆ ಹೇಳಿ ಕಳಿಸುತ್ತಾಳೆ. ಕಾಶಿಗೆ ಕಳಿಸುತ್ತಾಳೆ. ಕಾಶಿಯ ವಿಶ್ವನಾಥನ

ಸನ್ನಿಧಿಯಲ್ಲಿ ನೀರು ಸಿಗಲಿಲ್ಲ. ನಿರಾಶನಾದ ವೀರಣ್ಣ ಬುತ್ತಿಯ ನುಣ್ಣಲೂ ನೀರಿಲ್ಲದಿರಲು ಅಲ್ಲೊಂದು ಹಳ್ಳದಲ್ಲಿ ಕರುಣೆಯಿಂದ ಗಂಗೆ ಕಾಣಿಸಿಕೊಳ್ಳಲು ಬುತ್ತಿಯನ್ನುಂಡು ತಾಯಿಗೂ ನೀರು ತೆಗೆದುಕೊಂಡು ಹೋಗೋಣವೆಂದು ಮುಂದೆ ಬಂದರೆ ನೀರು ಮಾಯವಾಗುತ್ತದೆ. ಹತಾಶನಾಗಿ ಮನೆಯದಾರಿ ಹಿಡಿಯುತ್ತಾನೆ. ಗೌರಿ ಗಾಬರಿಯಾಗುತ್ತಾಳೆ. ಹನ್ನೆರಡು ದಿನದಿಂದ ಅನ್ನ ನೀರು ಇಲ್ಲದೆ ಬಳಲಿ ಹೋಗಿದ್ದಾಳೆ. ಕೈಲಾಸಗಿರಿಯಲ್ಲಿದ್ದ ಶಿವನ ಬಳಿಗೆ ಕಳಿಸುತ್ತಾಳೆ; ಅಲ್ಲಿಯೂ ನೀರು ಸಿಗದೆ ಶಿವನೆ ಗೌರಿಯ ಬಳಿ ಬಂದು ಗಂಗೆಯ ಕ್ಷಮಾಪಣೆ ಕೇಳುವಂತೆ ಹೇಳುತ್ತಾನೆ. ಗೌರಿ ಒಪ್ಪದಿರಲು ತನ್ನ ಪಾಡಿಗೆ ತಾನು ಹೊರಟುಹೋಗುತ್ತಾನೆ. ಕೊನೆಗೆ ವೀರಣ್ಣನನ್ನು ಗಂಗೆಯ ಬಳಿಗೆ ಕಳಿಸುತ್ತಾಳೆ. ಆಗಲೂ ನೀರು ದೊರೆಯದಿರಲು ಛಲವನ್ನು ಬಿಟ್ಟು ತಾನೇ ಗಂಗೆಯ ಬಳಿಗೆ ಹೋಗುತ್ತಾಳೆ—ಗಂಗೆ ಗೌರಿಯ ಆಗಮನಕ್ಕೆ ಅಡ್ಡಿಯಾಗುವಂತೆ ಹಾದಿಯಲ್ಲಿ ಸೀಗಡಿ ಮೀನುಗಳನ್ನು ಚೆಲ್ಲಿ ಹದಿನಾರು ಬಾಗಿಲುಗಳನ್ನು ಮುಚ್ಚಿಬಿಡುತ್ತಾಳೆ. ಗೌರಿ ಅಂಗಲಾಚಿದಮೇಲೆ ಹಲವು ವಿಧದಲ್ಲಿ ಹಂಗಿಸಿ ಕದವನ್ನು ತೆಗೆಯುತ್ತಾಳೆ. ಗೌರಿ ತನ್ನ ಐವರು ಮಕ್ಕಳನ್ನು ಕೊಡುವುದಾಗಿ ಹೇಳುತ್ತಾಳೆ—ಗಂಗೆ ಅವು ತನ್ನ ಮಕ್ಕಳೆ ಎನ್ನುತ್ತಾಳೆ. ಕೊನೆಗೆ ತನ್ನ ಗಂಡನನ್ನು ಒಂದಿರುಳು ಕೊಡುವುದಾಗಿ ಒಪ್ಪಿದಮೇಲೆ ಗಂಗೆ ಪ್ರಸನ್ನಳಾಗಿ ಮಳೆಯನ್ನು ಕರುಣಿಸುತ್ತಾಳೆ. ಅಕ್ಕತಂಗಿಯರಿಬ್ಬರೂ ಸಂತೋಷವಾಗಿ ಸ್ನಾನಮಾಡಿ ಮನೆಗೆ ವೀರಣ್ಣನ ಕೊಳದಲ್ಲಿ ನೀರು ತುಂಬಿಕೊಳ್ಳುವಾಗ ಗಂಗೆ ತನ್ನ ಬೇಡಿಕೆಯನ್ನು ಮುಂದಿಡಲು ಗೌರಿ ಗಡಿಗೆಗಳನ್ನು ಕೆಳಗೆ ಕುಕ್ಕಿ ನಿರಾಕರಿಸಿಬಿಡುತ್ತಾಳೆ. ಮತ್ತೆ ಸಮರ ಆರಂಭವಾಗುತ್ತದೆ. ಗಂಗೆ ಅತಿವೃಷ್ಟಿಯನ್ನು ಕರೆಯುತ್ತಾಳೆ. ಪ್ರವಾಹಬಂದು ಕೊಚ್ಚಿಹೋಗುತ್ತಿದ್ದ ಗೌರಿಯನ್ನು, ಬೇಟೆಗೆ ಹೋಗಿದ್ದ ಪರಶಿವ ಬದುಕಿಸಿ ತಂದು ಗಂಗೆಯ ಪಾಲಿಗೆ ಪೂರಿಹಬ್ಬವನ್ನೂ ಗೌರಿಯ ಪಾಲಿಗೆ ಗೌರಿಹಬ್ಬವನ್ನೂ ತನಗೆ ಶಿವರಾತ್ರಿಯನ್ನೂ ಹಂಚಿಕೊಂಡು ಜಗಳವನ್ನು ಶಾಂತರೀತಿಗೆ ತಂದು ಸಮಾಧಾನಗೊಳಿಸುತ್ತಾನೆ.

ಕೃಷ್ಣ–ಕೊರವಂಜಿ :—

ಕೊರವಂಜಿಯ ವೇಷವನ್ನು ಧರಿಸಿದ ಶ್ರೀಕೃಷ್ಣ ಬೀದಿಬೀದಿಯಲ್ಲಿ ಹಾಡುತ್ತ ರುಕ್ಮಿಣಿಯ ಅರಮನೆಯ ಮುಂದೆ ಬರುತ್ತಾನೆ. ತನ್ನ ದಾದಿಯ ರನ್ನು ಕಳಿಸಿ ರುಕ್ಮಿಣಿ ಅವಳನ್ನು ಒಳಗೆ ಕರೆಸಿಕೊಂಡು ಕಣಿಯನ್ನು ಕೇಳು ತ್ತಾಳೆ. ಆ ಕೊರವಂಜಿ ತಾನು ಎಲ್ಲಿಯವಳು, ಎಂಥ ನಿಯನುನಿಷ್ಠೆಯುಳ್ಳ ವಳು ಎಂಬುದನ್ನೆಲ್ಲ ಹೇಳಿ ಉತ್ತಮ ಉಡುಗೊರೆಗಳನ್ನು ರುಕ್ಮಿಣಿಯಿಂದ ಪಡೆಯಲು ಒಪ್ಪಿ ಕಣಿಯನ್ನು ಆರಂಭಿಸುತ್ತಾಳೆ. ಮಟ್ಟಮಂಗಳವಾರ ಸ್ನಾನಮಾಡಿ ಅವರ ಕುಲದೈವಗಳನ್ನು ನೆನೆಯುತ್ತಾಳೆ–ಕೊರವಂಜಿಯ ಇಚ್ಛೆಯಂತೆ. ಅನಂತರ ಅಂಜುತ್ತುಂಜುತ್ತಲೇ ರುಕ್ಮಿಣಿ ಕಣಿಯನ್ನು ಕೇಳಲು ಕೊರವಂಜಿಗೆ ಕೈಯನ್ನು ಮುಂದೆ ನೀಡುತ್ತಾಳೆ. ಕೊರವಂಜಿ ಅವರ ಬಂಧುಬಳಗದ ವಿಷಯವನ್ನೆಲ್ಲಾ ಹೇಳಿ ಕೃಷ್ಣನಲ್ಲಿ ಅವಳಿಗಿದ್ದ ಪ್ರೇಮದ ವಿಷಯವನ್ನೂ, ಅವನು ಅವಳನ್ನು ಕರೆದುಕೊಂಡು ಹೋಗಲು ಬರುವ ವಿಷಯವನ್ನೂ ತಿಳಿಸುತ್ತಾ ತನ್ನ ನಿಜರೂಪವನ್ನು ತೋರಿಬಿಡು ತ್ತಾನೆ–ಕೊರವಂಜಿಯ ವೇಷದ ಶ್ರೀಕೃಷ್ಣ. ಕೊರವಂಜಿಯ ಮಾಂಯೆಯಿ ದೆಂದು ತಿಳಿದ ರುಕ್ಮಿಣಿ ನಾಚಿ ಒಳಗೆ ಹೊರಟುಹೋಗುತ್ತಾಳೆ. ಹೆಣ್ಣಿನ ನಾಚಿಕೆಯನ್ನು ಕೆಡಿಸಬಾರದೆಂದು ಶ್ರೀಕೃಷ್ಣ ಅಲ್ಲಿಂದ ಮಾಯವಾಗಿ ತನ್ನ ವಿಶಿಷ್ಟ ವೈಭವದಿಂದ ಬರುತ್ತಾನೆ—ರುಕ್ಮಿಣಿ ಕೃಷ್ಣನ ಪಾದವನ್ನು ಮುಟ್ಟಿ ನಮಸ್ಕರಿಸುತ್ತಾಳೆ–ಕೃಷ್ಣ ಕೊರವಂಜಿಯರ ವಿವಾಹ ವೈಭವದಿಂದಲೇ ನಡೆಯುತ್ತದೆ.

ಹೊಂಗೇಲಿ ಈರಣ್ಣ ಮಡಿದಾನೆ :—

ಈರಣ್ಣನ ಕುರಿಗಳೆಂದರೆ ಆ ಸುತ್ತಿನಲ್ಲಿ ಬಹು ಹೆಸರಾದುದು. ಅವನು ಬೆಳ್ಳೂರ ಬಳಿಯ ಅತ್ಯಂತ ಹಿರಿಯ ಕೆರೆಯಾದ ದಾಸನ ಕೆರೆಯ ಏರಿಯ ಮೇಲೆ ತನ್ನ ಕೊಬ್ಬಿದ ಕುರಿಗಳನ್ನು ಬಿಟ್ಟುಕೊಂಡು ಕಾಯುತ್ತ ಇರುವ ಬಗೆಯೇ ಚೆಂದ. ತನ್ನ ಕುರಿಗಳ ಮುಂದೆಯಲ್ಲಿ ದಾಸರಳ್ಳಿಯ ಟಗರು

ಅತ್ಯಂತ ಪ್ರೀತಿಪಾತ್ರವಾದುದು. ಅನೇಕ ತಿಂಡಿ ತಿನಸುಗಳನ್ನು ತಿಂದು ಅದು ಕೊಬ್ಬಿದ್ದಿತು. ಅವನ ಕುರಿಯ ಮಂದೆ ಎಲ್ಲಿಂದ ಎಲ್ಲಿಗೂ ಪ್ರಸಿದ್ಧವಾಗಿಹೋಯಿತು. ಎಲ್ಲಂದರಲ್ಲಿ ಅವರ ವ್ಯಾಪಾರ ಸಾಗತೊಡಗಿತು; ಏತದ ಬಾವಿಯ ಬಳಿ, ತೋಟದ ಮೂಲೆಯಲ್ಲಿ, ಗಂಧ ಸುರಹೊನ್ನೆ ಬಯಲು ಗಳಲ್ಲಿ ಅವನು ಕುರಿಯನ್ನು ಕಾಯುವ ಬಗೆಯೇ ಚೆನ್ನು. ಮಡುವಿನಲ್ಲಿ ಕುರಿಗಳನ್ನು ತೊಳೆಯುವ ಅವನ ಬಗೆಯನ್ನಂತೂ ಹೇಗೆ ವರ್ಣಿಸಲಾದೀತು? ಚಿಕ್ಕ ಬೆಳ್ಳೂರನ್ನು ಸುತ್ತಿ ಕುರಿಕಾಯುವ ಸುತ್ತಿನುಂಗುರದ ಚೆಲುವ ಈರಣ್ಣ. ಅವನ ಕುರಿ ನಡೆದ ದಾರಿ ಧೂಳಿನಿಂದ ಕೂಡುತ್ತದೆ. ಭೂಮಿ ನಡುಗುತ್ತದೆ. ದಾರಿಯಲ್ಲಿ ಅಗಸರ ಹುಡುಗಿ ಬಟ್ಟೆ ಒಗೆಯುತ್ತಿದ್ದರೆ ನೀರು ಕುಡಿಯಲು ಬಂದ ಕುರಿಗಳಿಗೆ ದಾರಿಮಾಡಿಕೊಟ್ಟು ದೂರ ಸರಿಯಬೇಕು. ಕುರಿಯ ಕಾಯುವವನು ತುರುಬಿನ ಹೆಣ್ಣಿಗೆ ಮಾರು ಹೋಗುವುದು ತರವೆ ? ಈರಣ್ಣ ಮನೆಗೆ ಮರಳಲಿಲ್ಲ. ಹಿಂದುರಿಗಿದ ಕುರಿಗಳನ್ನು ನೋಡಿಕೊಳ್ಳಲು ಯಾರಾರೂ ಇಲ್ಲವಂತಾಯಿತು. ಕೊಟ್ಟಗೆಯಲ್ಲಿ ಮುರಿಗಳನ್ನೂ ಬಿಡಲು ಯಾರೂ ಇಲ್ಲದಂತಾಯಿತು. ದಿಕ್ಕುಗೆಟ್ಟ ಕುರಿಗಳು ದೊಡ್ಡವರನ್ನು ದಾಟಕೊಂಡು ಬಂದುಬಿಟ್ಟವು. ಅವರು ಸುಮ್ಮನಿದ್ದಾರೆ ? ಪ್ರೇಮದಲ್ಲಿ ವೈಮುರೆತಿದ್ದ ಈರಣ್ಣನನ್ನು ಹಿಡಿಸಿ ಕೊಲ್ಲಿಸಿದರು. ತಾಯಿ ಚಿಕ್ಕಮ್ಮ ದುಃಖಿತಳಾಗಿ—ಸುದ್ದಿಯನ್ನು ಕೇಳಿ ಪರಿಸರಿಯಲ್ಲಿ ಮಗನ ಶೌರ್ಯವನ್ನು ನೆನೆದು ಗೋಳಿಡುತ್ತಾಳೆ. ಅವಳ ಮಗ ಈರಣ್ಣ ಮಡಿದ ನೆಲೆಯಲ್ಲಿ ಹಣ್ಣಿನ ಗಿಡಗಳು ಹುಟ್ಟಿ ಬೆಳೆದವು. ಅಲ್ಲಿ ತುಪ್ಪದ ಮಡುವಾದುವು. ಹೋಗಿ ನೋಡಿ ಬರುವಂತೆ ಸೊಸೆಯರಿಗೆ ತಿಳಿಸುತ್ತಾಳೆ. ಈರಣ್ಣ ಮಡಿದ ಜಾಗದಲ್ಲಿ ಚಿನ್ನದ ಹಲಗೆಯನ್ನು ಕಡಸಿ ನೆಡುತ್ತಾರೆ. ಅವನನ್ನು ಹೊತ್ತು ತರುವಾಗ ಗಿಡಮರಗಳೂ ಕಣ್ಣೀರಿಡುತ್ತವೆ. ಅವನ ಶವದ ಬಳಿಗೆ ಕೆಂದ ಹಸುವಿನ ಹಾಲನ್ನೂ, ಕೆಂಬಕ್ಕಿ ಅನ್ನವನ್ನೂ ತರುವಂತೆ ಚಿಕ್ಕಮ್ಮನಿಗೆ ಹೇಳಿ ಕಳಿಸುತ್ತಾರೆ. ಅರೆಹಳ್ಳಿಯ ಬೋರೆಯನ್ನು ಹತ್ತಿ ಹೊಂಗೆಯಲ್ಲಿ ಮಡಿದ ಈರಣ್ಣನನ್ನು ನೋಡಿ ಅವಳು ಮೂರ್ಛೆ ಹೋಗುತ್ತಾಳೆ.

ಫಲಬಿಡುವ ಮರಗಳ ಕಡಿಸ್ಯಾನೆ :—

ಯಮ ನಿಷ್ಕರುಣಿ. ಜಗತ್ತಿನಲ್ಲಿ ಸತ್ಯವಂತರಾಗಿ, ದಾನಶೀಲರಾಗಿ, ಕೀರ್ತಿವಂತರಾಗಿ ಬದುಕುವವರನ್ನೇ ಅವನು ಹುಡುಕಿಕೊಂಡು ಬರುತ್ತಾನೆ —ಅನೇಕ ವೇಳೆ. ಅಜ್ಜನ ಮೃತ್ಯುವೂ ಅಂತಹುದೆ ? ಕಾಡಿಗೆ ಹೋದ ಆ ಚೆಲುವ ಮರಳಲಿಲ್ಲ. ಅಲ್ಲಿ ಮೃತ್ಯುವಿಗೀಡಾದ ಅವನ ಮಡದಿ ಪತಿಯನ್ನು ನೆನೆದು ವಿಧವಿಧವಾಗಿ ಗೊಳಿಡುತ್ತಾ ತಾನೂ ಅಗ್ನಿ ಪ್ರವೇಶ ಮಾಡಲು ಹವಣಿಸುತ್ತಾಳೆ. ತನ್ನ ಪತಿಯ ಗುಣಕಥನಮಾಡುತ್ತಾಳೆ. ಅಗ್ನಿ ಪ್ರವೇಶಮಾಡುವ ಅವಳನ್ನು ಕಂಡು ಜನ ಮರಗುತ್ತಾರೆ. ಗಂಡನ ಸೆರಗನ್ನು ಹಿಡಿದು ಅಳುವ ಅವಳನ್ನು ಸಮಾಧಾನಪಡಿಸಲು ಯತ್ನಿಸಿ ವಿಫಲರಾಗುತ್ತಾರೆ. ಆಚೆ ಈಚೆಯ ಅಜ್ಜಿಗುಜ್ಜಿಯರಿಗೆ ಮರಣಬಾರದೆ ? ಇಂಥ ಸತ್ಯವಂತರೇ ಸಾಯಬೇಕೆ ಎಂದು ಅವರು ಮರುಗುತ್ತಾರೆ. ಅಜ್ಜನಿಗೆ ಮನೆಯಲ್ಲಿ ಊಟ ಸಿದ್ಧವಾಗಿತ್ತು. ಮಕ್ಕಳು ಅವನೊಡನೆ ಕುಳಿತು ಊಟಮಾಡಲು ಸಿದ್ಧವಾಗಿದ್ದರು. ಅಷ್ಟರಲ್ಲಿ ಅವನೇ ಕಣ್ಮರೆಯಾದ. ಅವನ ಶವಸಂಸ್ಕಾರಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಜೊತೆಯಲ್ಲೆ ಸಾಯಲಿರುವ ಅವನ ಮಡದಿಯೂ ಅತ್ತೆಮಾವಂದಿರನ್ನು ನಿರ್ದೇಶಿಸಿ ಕಣ್ಣೀರು ಹರಿಸುತ್ತ ಪರಿತಾಪಪಡುವ ಚಿತ್ರ ಹೃದಯವನ್ನು ಹಿಂಡುತ್ತದೆ.

ಭಾಷೆಯೇಕೋ ನಿನ್ನ ಬಲಗೈಯಿ :—

ವೀರನಾದ ಕೆಂಗಪ್ಪ ತಾಯಿ ಚಿಕ್ಕಮ್ಮನಿಗೆ ದಂಡಿಗೆ ಹೋಗುವುದಾಗಿ ತಿಳಿಸಿ, ನಂದಿಯನ್ನೇರಿ, ಬೇಡಬೆಟ್ಟವನ್ನಿಳಿದು ನಡೆಯುತ್ತಾನೆ. ಕಾಳಗಕ್ಕೆ ಹೊರಟ ಅವನನ್ನು ತಾಯಿ ವಿಧವಿಧವಾಗಿ ತಡೆಯುತ್ತಾಳೆ. ಕೇಳದೆ ಮುನ್ನುಗ್ಗಿದವನು ರಣರಂಗದ ನಡುವೆ ಶತ್ರುವಿನೊಡನೆ ಹೊರಾಡಿ ನೆಲಕ್ಕುರುಳುತ್ತಾನೆ. ತಾಯಿ ಚಿಕ್ಕಮ್ಮ ಮಗನನ್ನು ನೆನೆನೆನೆದು ಗೋಳಾಡುತ್ತಾಳೆ. ಕೆಂಗಪ್ಪನ ಕಥೆ ನಡೆದುದು ಹೀಗೆ : ನುಲಿಯನೂರ ಹಾಸು ಹಿಪ್ಪೆಯ ನೆರಳಲ್ಲಿ ಅವನು ಮಲಗಿರುವಾಗ ನೀರಿಗೆ ಹೊರಟಿದ್ದ ಏಳು ಮಂದಿ

ಸೂಳೆಯರು ಕಂಡು ಮೋಹಗೊಂಡು ತಮ್ಮ ಮನೆಗೆ ಕರೆಯುತ್ತಾರೆ. ಕೃಷ್ಣ ಗೋಕುಲದ ವಂಶಕ್ಕೆ ಸೇರಿದ ಅವನು ಬೇಡತಿಯರ ಮನೆಗೆ ಹೋಗಲು ಹಿಂಜರಿಯುತ್ತಾನೆ. ಹಿರಿಯರಿಗೆ ಅಳುಕುತ್ತಾನೆ—ಮಾತು ಬಂದಾವೆಂದು, ಆದರೂ ಅವರು ಬಿಡದೆ ಕರೆದೊಯ್ಯುತ್ತಾರೆ. ಅವನು ಮಂಚಕ್ಕೆ ಹೋಗುವಾಗ ಹಾದಿ ತಪ್ಪದಿರೆಂದು ಅಲ್ಲಿದ್ದ ಗಿಣಿಗಳು ಎಚ್ಚರಿಸುತ್ತವೆ. ಕೆಂಗಪ್ಪ ಪ್ರೇಮಪಾಶದಲ್ಲಿ ಅತ್ತ ಕಿವಿಗೊಡುವುದಿಲ್ಲ. ಬೇಡರ ಹುಡುಗಿಯೊಡನೆ ಸ್ನೇಹವನ್ನು ಬೆಳಸಿಕೊಂಡ ಅವನು ಅರಮನೆಯನ್ನು ಕಟ್ಟಿಸಿಕೊಡುತ್ತಾನೆ. ಅವನ ಈ ಪ್ರೇಮವ್ಯವಹಾರ ಎಲ್ಲರಿಗೂ ತಿಳಿದು ಹೋಗುತ್ತದೆ. ಬೇಡತಿಯ ತಂಟೆ ಬೇಡವೆಂದು ಯಾರು ಏನೂ ಹೇಳಿದರೂ ಅವನು ಕೇಳದಾಗುತ್ತಾನೆ. ತನ್ನ ಸೂಳೆಯೊಡನೆ ಆನಂದದಿಂದ ಕಾಲಕಳೆಯುತ್ತಾನೆ. ಹೀಗೆ ಅವನು ಮೈಮರೆತಿರುವುದರಲ್ಲಿ ಒಳಮನೆಯಲ್ಲಿ ಕತ್ತಿಮಸೆಯುತ್ತಿದ್ದ ವಿಷಯ ಅವನಿಗೆ ತಿಳಿಯದಾಯಿತು. ಜನ ಆ ಬೇಡತಿಯರನ್ನು ನಿಂದಿಸುತ್ತಾರೆ. ಕೆಂಗಪ್ಪನನ್ನು ಬಿಟ್ಟುಬಿಡುವಂತೆ ಹೇಳುತ್ತಾರೆ. ಒಂದು ದಿನ ಸೂಳೆಯರ ಅಣ್ಣಂದಿರ ಸುಣ್ಣಕಾಯನ್ನು ಕದ್ದು ಕೆಂಗಪ್ಪ ಕಲ್ಲುಬಾವಿಯನ್ನು ಇಳಿದು ನೀರು ಕುಡಿಯಲು ಹೋದಾಗ ಮೇಲುಗಡೆ ಬೇಡರನ್ನು ಕಂಡು ಬೆದರುತ್ತಾನೆ. ಮೇಲಿನಿಂದ ಬಂದ ಅವರ ಅಂಬಿಗೆ ಅವನ ಕರಳು ಕಿತ್ತುಬರುತ್ತದೆ. ಆ ಕರಳನ್ನು ಹೊಟ್ಟೆಗೆ ತುರುಕಿಕೊಂಡು ಮೇಲೆ ಬಂದು ಹುತ್ತದ ಬಳಿ ಸತ್ತ ಹಾವಿನಂತೆ ಬಿದ್ದು ಹೋಗುತ್ತಾನೆ. ಸಾಯುವ ಮುನ್ನ, ಮಡಿದ ಏಳು ದಿನಕ್ಕೆ ಮತ್ತೆ ಬಂದು ಬೇಡರ ಕುಲವನ್ನು ನಾಶಮಾಡುವುದಾಗಿ ಶಪಥಮಾಡಿ ಕಣ್ಣನ್ನು ಮುಚ್ಚಿಕೊಳ್ಳುತ್ತಾನೆ. ಆ ಮೊದಲೆ ಅನೇಕ ಬಗೆಯಲ್ಲಿ ಜನ ಅವನನ್ನು ಎಚ್ಚರಿಸಿದ್ದರು, ತಾಯಿ ಎಚ್ಚರಿಸಿದ್ದಳು. ನಲವತ್ತುನಾಲ್ಕು ಹಳ್ಳಿಯ ಕಸಬೆ ಹೋಬೇನಹಳ್ಳಿಯನ್ನು ತೂಗಿ ಆಳುವವರ ಮಗನೆಂದು ಕೆಲವರು ಸುಮ್ಮನಾಗಿದ್ದರು. ಅವನ ಶೌರ್ಯಕ್ಕೂ ಕೆಲವರು ತಲೆದೂಗಿದ್ದರು. ಧೀರನೆಂದು ಕೊಂಡಾಡಿದ್ದರು. ಅವನ ಮರಣಾನಂತರ ತಮ್ಮೆಲ್ಲರ ಆಶಾಕಿರಣವಾಗಿದ್ದ ಅವನನ್ನು ನೆನೆನೆನೆದು ಮರುಗುತ್ತಾರೆ. ಮುಂದಿ–ಅವನನ್ನು ದೇವರಂತೆ

ಪೂಜಿಸುತ್ತಾರೆ–ಗುಡಿಕಟ್ಟ.

ಹೂವು ಮಾರುವ ದೊರೆ ಚೆಲುವ :—

ಮೇಲುಕೋಟೆ ಚೆಲುವರಾಯನಿಗೆ ದಿಳ್ಳಿಯ ನವಾಬನ ಮಗಳಾದ ವರನಂದಿಯನ್ನು ವರಿಸುವ ಆಸೆಯಾಗಿ ನೇಷಾಂತರದಿಂದ ಅಲ್ಲಿಗೆ ಹೋಗುತ್ತಾನೆ. ತನ್ನ ಸುಂದರ ರೂಪಿಗೆ ಮರುಳಾದ ವರನಂದಿಯನ್ನು ಅವರ ತಾಯಿತಂದೆಯರ ಒಪ್ಪಿಗೆಯನ್ನು ಗಳಿಸಿಕೊಂಡು ಕರೆತರುವಾಗ ಅನೇಕ ಅಡ್ಡಿಆತಂಕಗಳು ಒದಗುತ್ತವೆ. ಹೇಗೋ ಮೇಲುಕೋಟೆಯನ್ನು ಮುಟ್ಟುವಲ್ಲಿ ಹಿರಿಯರಾಣಿಗೆ ತಿಳಿದು ಅವಳು ದುಃಖಪಡುತ್ತಾಳೆ. ವರನಂದಿಯೊಡನೆ ಮದುವೆಗೆ ಸಿದ್ಧತೆಗಳು ನಡೆದು ತನ್ನ ಬಂಧುಬಳಗವನ್ನು ಕರೆತರಲು ಚೆಲುವರಾಯ ಶ್ರೀರಂಗಪಟ್ಟಣ, ತಿರುಪತಿ, ನಂಜನಗೂಡು, ಚುಂಚನಗಿರಿ ಮುಂತಾದ ಕಡೆಗಳಿಗೆ ಹೋಗುತ್ತಾನೆ. ತುರುಕರ ಹೆಣ್ಣನ್ನು ತಂದು ಕುಲಗೆಟ್ಟ ಅವನ ಮದುವೆಗೆ ತಾವು ಬರುವುದಿಲ್ಲವೆಂದು ಅವರು ನಿರಾಕರಿಸಲು ಅವರ ಹಾದಿ ತಪ್ಪಿ ಇತರ ಜಾತಿಯ ಹೆಣ್ಣುಗಳು ಮೋಹ ಪಾಶದಲ್ಲಿ ಬಿದ್ದುದನ್ನು ಎತ್ತಿ ಹಾಡಿ ಮೇಲುಕೋಟೆಗೆ ಒಂದು ವರನಂದಿಯನ್ನು ಮದುವೆಯಾಗುತ್ತಾನೆ. ಆಗಾಗ ಸವತಿಯರಲ್ಲಿ ಜಗಳವಾಗಲೂ ಇದು ಕಾರಣವಾಗುತ್ತದೆ.

ಪಿರಿಯಾಪಟ್ಟಣದ ಕಾಳಗ :—

ಪಟ್ಟದ ಮಲ್ಲಮ್ಮ, ಚೆನ್ನಮಲ್ಲಮ್ಮ, ಕೆಂಪಗೌರಮ್ಮ ಮತ್ತು ಮಗ ವೀರಣ್ಣ ಇವರೊಡನೆ ಪಿರಿಯಾಪಟ್ಟಣದ ದೊರೆ ವೀರರಾಜನು ಸುಖವಾಗಿ ರಾಜ್ಯವಾಳಿಕೊಂಡಿದ್ದವನು ಯಾವುದೋ ವಿಷಗಳಿಗೆಯಲ್ಲಿ, ಏನೋ ವಿರಸಕ್ಕಾಗಿ ಶ್ರೀರಂಗಪಟ್ಟಣದ ದಳವಾಯಿಗಳಿಗೆ ಪತ್ರಬರೆದು—ಗಂಡಾದರೆ ದಂಡೆತ್ತಿ ಬಾ–ಎಂದು ಆಹ್ವಾನಿಸುತ್ತಾನೆ. ಶೂರರಾದ ಮೂರುಸಾವಿರ ಸೈನಿಕರನ್ನು ಕಟ್ಟಿಕೊಂಡು ದಳವಾಯಿಗಳು ಒಂದಿರುಳು ಪಿರಿಯಾಪಟ್ಟಣಕ್ಕೆ ಮುತ್ತಿಗೆ ಹಾಕಿ, ವೀರರಾಜ ಮಾವನಿಗೆ ಪತ್ರ ಕಳಿಸುತ್ತಾರೆ. ವೀರರಾಜ

ಅಪ್ರತಿಭನಾದ. ಅಪಶಕುನಗಳಾದುವು. ತನ್ನ ಸೋಲು ಖಂಡಿತವೆಂದು ನಿರ್ಧರಿಸಿದ. ತನ್ನ ಸೈನ್ಯ ಹಿಮ್ಮೆಟ್ಟಿದ ವಿಷಯವೂ ತಿಳಿಯಿತು. ಇನ್ನು ತಾನು ಮಡಿದರೆ ತನ್ನ ಮಡದಿಯರು ಮೈಸೂರು ಯುವಕರ ಪಾಲೆಂದು ಬೆದರಿದ. ಹೊರಗೆ ಹೊರಡದೆ ಹೇಡಿಯಂತೆ ಒಳಗೆ ಉಳಿದು ಮುಂದಿನ ದನ್ನು ಪರ್ಯಾಲೋಚಿಸದ ಪತಿಯನ್ನು ಕಂಡು ರಾಣಿಯರು ರೇಗಾಡಿದರು—ನಿಂದಿಸಿದರು. ಅವರೆಲ್ಲ ತೌರಿಗೆ ಹೊರಟುಹೋಗುವಂತೆ ಹೇಳಿದ. ಯಾರೂ ಕೇಳದಾದರು. ತಾನು ರಣರಂಗಕ್ಕೆ ಹೋಗದಿದ್ದರೆ ಅವನನ್ನು ಕೊಂದು ತಾವೂ ಸಾಯುವುದಾಗಿ ರಾಣಿಯರು ಹೇಳಿದರು. ಯಾವುದನ್ನೂ ಲೆಕ್ಕಿಸದಿದ್ದ ದೊರೆಯನ್ನು ಕಂಡು ಪಟ್ಟದ ಮಲ್ಲಮ್ಮ ಕಠಾರಿಯೊಂದನ್ನು ಎತ್ತಿಕೊಂಡು ಮುಂದೆ ನುಗ್ಗಲು ದೊರೆ ಆಗ ಕತ್ತಿಯನ್ನು ಹಿರಿದು ತಡೆಯಲಾರದ ದುಃಖದಿಂದ ಮೂವರು ಮಡದಿಯರನ್ನು ಕೊಂದು ತಾನೂ ಕೊಂದುಕೊಳ್ಳುತ್ತಾನೆ. ಕಂದವೀರಣ್ಣ ಮಾತ್ರ ಮನೆಯದೇವರ ದೇಗುಲದ ಕಲ್ಲು ಬಾಗಿಲನ್ನು ಮುಚ್ಚಿ ಬದುಕಿಕೊಳ್ಳುತ್ತಾನೆ. ಪಿರಿಯಾಪಟ್ಟಣ ಮೈಸೂರಿನವರ ವಶವಾಗುತ್ತದೆ.

ಕೋಳೂರು ಕೊಡಗೂಸು :—

ಕೋಳೂರು ಕೊಡಗೂಸಿನ ಕಥೆಯನ್ನು ಆಸಕ್ತಿಯಿಂದ ಕೇಳುವವರಿಗೆ ಸದ್ಗತಿಯುಂಟಾಗುತ್ತದೆ. ಕೊಡಗೂಸಿನ ತಾಯಿಯನ್ನು ಅವರ ತಮ್ಮನ ಮದುವೆಗೆ ಕರೆಯಲು ಅಣ್ಣ ಬಂದಿರುತ್ತಾನೆ. ಮನೆಯಲ್ಲಿ ನೂರೆಂಟು ತೊಂದರೆಗಳು ಆಲ್ಲದೆ ನಿತ್ಯನಿಯಮದಂತೆ ಮಲ್ಲಯ್ಯನಿಗೆ ಪೂಜೆ ಸಲ್ಲಿಸಬೇಕು ಎಂದು ಆಕೆ ಹೊರಡಲು ಅನುಮಾನಿಸಿದರೂ ಅಣ್ಣನ ಬಲವಂತಕ್ಕೆ ಹೊರಡುತ್ತಾಳೆ. ಮಲ್ಲಯ್ಯನ ಪೂಜೆಗೆ ಪುಟ್ಟಹುಡುಗಿ ಚೆನ್ನಮ್ಮನನ್ನು ನೇಮಿಸಿ ಅವಳಿಗೆ ಉಡುಗೊರೆಗಳನ್ನು ತರುವುದಾಗಿ ಹೇಳಿ ಹೋಗುತ್ತಾಳೆ. ಮರುದಿನ ಚೆನ್ನಮ್ಮ ತಣ್ಣೀರಿನಲ್ಲಿ ಮಿಂದು ಶುಚಿಯಾದ ಹಾಲನ್ನು ತೆಗೆದುಕೊಂಡು ಮಲ್ಲಯ್ಯನ ಗುಡಿಗೆ ಪೂಜೆಗಾಗಿ ಬರುತ್ತಾಳೆ. ಮಲ್ಲಯ್ಯನ

ಮುಂದೆ ಹಾಲಿನ ಬಟ್ಟಲನ್ನು ಇಟ್ಟು ಅದನ್ನು ಸ್ವೀಕರಿಸುವಂತೆ ಬಗೆಬಗೆಯಲ್ಲಿ ಬೇಡುತ್ತಾಳೆ. ಕಂಬದ ಮರೆಯಲ್ಲಿ ನಿಂತು 'ಕೊ' ಎನ್ನುತ್ತಾಳೆ. ಕೊನೆಗೆ ಶಿವ ಹಾಲನ್ನು ಸ್ವೀಕರಿಸುತ್ತಾನೆ. ಆದರೆ ಅವಳ ತಂದೆ ಈ ಮಾತನ್ನು ನಂಬದೆ ಮಗಳ ಮೇಲೆ ರೇಗಾಡುತ್ತಾನೆ. ಕಲ್ಲು ಎಲ್ಲಿಯಾದರೂ ಹಾಲು ಕುಡಿದೀತೆ ಎಂದು ಸಿಟ್ಟಾಗುತ್ತಾನೆ. ಕೊನೆಗೆ ಪುಲ್ಲಯ್ಯನ ಮುಂದೆ ಪರೀಕ್ಷೆಯಾಗುವ ಸಮಯ ಬರಲು ಹಣ್ಣನ್ನು ಮುಂದಿಟ್ಟು ಇದನ್ನು 'ಕೊ' ಎನ್ನಲು ಮಲ್ಲಯ್ಯ ಹೆಣ್ಣನ್ನೆ ಸ್ವೀಕರಿಸಿ ತನ್ನಲ್ಲಿ ಐಕ್ಯ ಮಾಡಿಕೊಳ್ಳುತ್ತಾನೆ. ಅವರ ತಂದೆಗೆ ಸಿಕ್ಕಿದುದು ಅವಳ ಹೂವಿನ ಚಂಡಿಕೆ ಮಾತ್ರ. ಕೋಳೂರು ಕೊಡಗೂಸು ನೀತಿವಂತರ ಮಗಳು.

ಮುನಿಯಾಗಿ ಬಂದ :—

ಪಾರ್ವತಿಯ ಮನದ ದೃಢತೆಯನ್ನು ಪರೀಕ್ಷಿಸಬೇಕೆಂದು ಈಶ್ವರ ವೇಷಾಂತರದಿಂದ ಭಿಕ್ಷಾಟನೆಗೆ ಬಂದು ಬಾಗಿಲಲ್ಲಿ ನಿಲ್ಲುತ್ತಾನೆ. ಭಿಕ್ಷೆ ನೀಡಲು ಬಂದ ಪಾರ್ವತಿಯನ್ನು ನೆಟ್ಟದೃಷ್ಟಿಯಲ್ಲಿ ನೋಡುತ್ತ ತಾನು ಬಂದುದು ಭಿಕ್ಷೆಗಲ್ಲ–ಅವಳ ಅಂದ ಚೆಂದವನ್ನು ನೋಡಲು ಎಂದು ಬಿಡಲು, ಪಾರ್ವತಿ ಚಕಿತಳಾಗುತ್ತಾಳೆ. ಪಾರ್ವತಿ ತಾನು ಗೃಹಸ್ಥೆಯೆಂದೂ, ತನ್ನ ಗಂಡ ಮಹಾ ಕೋಪವಂತನೆಂದೂ, ತಾನು ಏನು ಒಡವೆವಸ್ತ್ರಗಳನ್ನಾದರೂ ಕೊಡುವುದಾಗಿಯೂ–ಭಿಕ್ಷೆಯನ್ನು ಕೊಂಡು ಹೋಗಿ ಬಿಡಬೇಕಾಗಿಯೂ ಒತ್ತಾಯಪಡಿಸುತ್ತಾಳೆ. ಜಂಗಮ ಒಪ್ಪುವುದಿಲ್ಲ. ಅವಳ ಗಂಡನ ಗಂಗಳದಲ್ಲಿ ಊಟವನ್ನೂ, ಅವಳ ಗಂಡನ ಮಂಚದಲ್ಲಿ ಅವಳ ಸೆರೆಯಲ್ಲಿ ನಿದ್ದೆಯನ್ನೂ ಬಯಸುತ್ತಾನೆ–ಪಾರ್ವತಿ ಯಾವುದಕ್ಕೂ ಜಗ್ಗದಿರಲು ಅನಿವಾರ್ಯವಾಗಿ ನಿಜರೂಪನ್ನು ತೋರುತ್ತಾನೆ.

ನಾ ನಂಜುಂಡಲಿಂಗ ಬಿಡೆ ಸೆರಗ :—

ಒಂದು ದಿನ ಲಿಂಗಪೂಜೆಗೆ ಹೂವನ್ನು ತರುವುದಾಗಿ ಮಡದಿ ದೇವೀರಿಗೆ ತಿಳಿಸಿ ನಂಜನಗೂಡಿನ ನಂಜಯ್ಯ ಮೈಸೂರಿನ ಕಾರಂಜಿಕೆರೆಯ

ಹತ್ತಿರ ಬರುತ್ತಾನೆ. ಬೆಳಗಿನ ಜಾವವಾದುದರಿಂದ ಬೆಟ್ಟದಿಂದ ಚಾಮುಂಡಿ ಇಳಿದು ಬಂದು ಕಾರಂಜಿಕೆರೆಯಲ್ಲಿ ಸ್ನಾನಮಾಡುತ್ತಿರುತ್ತಾಳೆ. ಅವಳ ವಸ್ತ್ರಗಳನ್ನು ನಂಜಯ್ಯ ಪೊದೆಯಲ್ಲಿ ಬಚ್ಚಿಡಲು, ಗಾಬರಿಗೊಂಡ ಅವಳು ಗಿರಿಗೆ ಓಡಿ ಬಾಗಿಲ ಭಟರಿಗೆ ಯಾರನ್ನೂ ಒಳಗೆ ಬಿಡದಂತೆ ತಿಳಿಸಿ ಒಳಗೆ ಹೋಗಿಬಿಡುತ್ತಾಳೆ. ಬೇರೆಯ ಮಾರ್ಗವನ್ನರಿಯದ ನಂಜಯ್ಯ ಅವಳ ಕನಸಿನಲ್ಲಿ ಕಾಣಿಸಿಕೊಂಡು ತನ್ನ ಹೃದಯವನ್ನು ತೋಡಿಕೊಳ್ಳುತ್ತಾನೆ. ಅತ್ತ ನಂಜನಗೂಡಿನಲ್ಲಿ ದೇವೀರಿ ಎದ್ದು ಪತಿಯನ್ನು ಕಾಣದೆ ಬಾಗಿಲ ಬಸವನನ್ನು ಕೇಳಲು ಹೂ ತರಲು ಹೋದಂತೆ ತಿಳಿಸುತ್ತಾನೆ. ದೇವೀರಿಗೆ ಸಂಶಯವಾಗಿ ಕುದುರೆಯನ್ನೇರಿ ಎಲ್ಲೆಲ್ಲಿಯೋ ಸುತ್ತಾಡಿ ಬಂದರೂ ನಂಜಯ್ಯ ಸಿಗುವುದಿಲ್ಲ. ಸಂಜೆ ಮತ್ತೆ ನಂಜಯ್ಯ ನಟ್ಟಿರುಳಲ್ಲಿ ಚಾಮುಂಡಿಯ ಅರಮನೆಗೆ ಬಂದು ಅವಳೊಡನಿದ್ದು ಮರುದಿನ ನಂಜನಗೂಡಿಗೆ ಮರಳುತ್ತಾನೆ. ಬಾಗಿಲನ್ನು ಭದ್ರಪಡಿಸಿ ಒಳಗಿದ್ದ ದೇವೀರಿ ಮಡಿಯಾಗಿ ಬರುವಂತೆ ಹೇಳಿ ಹೊಳೆಯತೀರಕ್ಕೆ ಕಳಿಸುತ್ತಾಳೆ. ನಂಜಯ್ಯ ಹೊಳೆಯಲ್ಲಿ ಮಿಂದು, ಅರೆಯಮೇಲೆ ಅಡಿಗೆಮಾಡಿ ಹಿಂತಿರುಗಿದಮೇಲೆ ದೇವೀರಿ ಬಾಗಿಲು ತೆರೆದು ಕೈಯೆತ್ತಿ ಮುಗಿಯುತ್ತಾಳೆ. ಬಾಗಿಲ ಬಸವ, ಗೌಡಿಯರು, ದೇವೀರಿ—ಈ ಎಲ್ಲರೂ ಒಂದು ರೀತಿಯಲ್ಲಿ ನಂಜಯ್ಯನನ್ನು ಕುಚೋದ್ಯಮಾಡಿ ಅವನ ತಪ್ಪನ್ನು ತಿದ್ದುತ್ತಾರೆ.

ಬಿಟ್ಟಿಕಾಣೆ ಇವಳ ಜಲುಮಾಕೆ :—

ಆದರ್ಶಸತಿ ಸಿರಿಲಕ್ಕುವಿನ ಕಥೆ. ಹಟ್ಟಿಲಕ್ಕಮ್ಮ ತುಮಕೂರು ಜಿಲ್ಲೆಯ ಯಡಯೂರಿನ ಬಳಿ ತುಂಬ ಪ್ರಸಿದ್ಧವಾದ ಸ್ಥಳದೇವತೆ. ಅವಳ ಖ್ಯಾತಿ ಕನ್ನಡನಾಡಿನ ನಾನಾ ಕಡೆಗಳಲ್ಲಿ ಹಬ್ಬಿ ಲಕ್ಷಾಂತರ ಜನ ಭಕ್ತರು ಬಂದು ಅವಳ ಕೃಪೆಗೆ ಪಾತ್ರರಾಗುತ್ತಿರ್ದ್ದರೆ. ಆಕೆಯ ಮಹಿಮೆ ಅಂಥದು. ಅವಳ ಆದರ್ಶ ಸತೀತ್ವವನ್ನು ಸಾರುವ ಒಂದು ಸುಂದರ ಸನ್ನಿವೇಶವನ್ನು ಕಾಡುಗೊಲ್ಲರು ರಮ್ಯವಾಗಿ ಹಾಡುತ್ತಾರೆ. ಲಕ್ಕಮ್ಮನ ಪತಿ ರಂಗಯ್ಯ

ಹಾರುವರ ಯುವತಿಯೊಬ್ಬಳನ್ನು ಮೋಹಿಸಿ ಅವಳನ್ನು ಜೊತೆಯಲ್ಲಿ ಕರೆ ತರುತ್ತಿದ್ದ ವಿಷಯ ತಿಳಿದು ಲಕ್ಕಮ್ಮ ಸಿಡಿಮಿಡಿಗೊಳ್ಳುತ್ತಾಳೆ. ಬಂದ ಪತಿಗೆ ಬಾಗಿಲನ್ನು ತೆರೆಯದೆ ಹಟ ಹಿಡಿಯುತ್ತಾಳೆ. ತನ್ನ ಪರಿಚಾರಿಕೆ ಯಾಗಿ ಆ ಹುಡುಗಿ ಇರುತ್ತಾಳೆಂದೂ, ದಿನವೆಲ್ಲ ಅವಳ ಸೇವೆಯನ್ನು ಮಾಡಿ ಇರುಳಲ್ಲಿ ಮಾತ್ರ ತನ್ನ ಮಂಚಕ್ಕೆ ಬರುತ್ತಾಳೆಂದು ರಂಗಯ್ಯ ಹೇಳುತ್ತಾನೆ. ಲಕ್ಕಮ್ಮ ಒಪ್ಪದಾಗುತ್ತಾಳೆ. ತನ್ನ ಪತಿ ತನ್ನೊಬ್ಬಳನ್ನಲ್ಲದೆ ಮತ್ತಾರನ್ನೂ ಪ್ರೇಮಿಸಲೂ ಅವಳು ಅನುಮತಿಕೊಡುವುದಿಲ್ಲ. ರಂಗ ಯ್ಯನೇ ಸೋಲಬೇಕಾಗುತ್ತದೆ. ತೊಳಸಿಯೊಡನೆ ತನ್ನ ಪ್ರೇಮವ್ಯವ ಹಾರವನ್ನು ಗುಪ್ತವಾಗಿಯೇ ಇಟ್ಟುಕೊಂಡು ಅವಳನ್ನು ಬಿಟ್ಟುಬಿಟ್ಟಂತೆ ಸಾರಿ ಮನೆಯನ್ನು ಪ್ರವೇಶಮಾಡಲು ಅನುಮತಿ ಪಡೆಯಬೇಕಾಗುತ್ತದೆ.

ಚೆನ್ನಿಗ ಜೋಗಯ್ಯ :—

ಕಾರಣಾಂತರದಿಂದ ಪುಣ್ಯಕ್ಷೇತ್ರಗಳ ತೀರ್ಥಯಾತ್ರೆಗೆ ಹೋಗ ಬೇಕಾಗಿ ಬಂದ ಅರ್ಜುನ ಹನ್ನೆರಡು ವರ್ಷ ಯಾತ್ರೆಯನ್ನು ಮುಗಿಸಿ ಕೊಂಡು ಜೋಗಿಯ ವೇಷದಲ್ಲಿ ಹಸ್ತಿನಾವತಿಗೆ ಹಿಂದಿರುಗುತ್ತಾನೆ. ವರ್ಚಸ್ವಿಯಾದ ಆ ಜೋಗಿಯನ್ನು ನೋಡಿ ಆ ನಗರದ ಅನೇಕ ಯುವತಿ ಯರು ಮೋಹಗೊಳ್ಳುತ್ತಾರೆ. ಭಿಕ್ಷೆಗೆ ಬಂದ ಅವನನ್ನು ತಮ್ಮ ಕೈಹಿಡಿಯು ವಂತೆ ಕಾಡಿಸುತ್ತಾರೆ. ಆ ಮೋಹದ ಬಲೆಯಿಂದ ಪಾರಾದ ಜೋಗಿ ನೇರವಾಗಿ ಕುಂತಿಯ ಅರಮನೆಯ ಮುಂದೆ ಬಂದು ಕನ್ನರಿಯನ್ನು ನುಡಿಸಿ ಹಾಡುತ್ತಾನೆ. ಹೊರಗೆ ಬಂದ ಕುಂತಿ ಆ ತೇಜಸ್ವಿಯಾದ ತರುಣ ಜೋಗಿ ಯನ್ನು ಕಂಡು ತನ್ನ ಮಗ ಅರ್ಜುನನ ಹೋಲಿಕೆಯೇ ಇದ್ದುದರಿಂದ ಅತೀವವಾದ ಆನಂದದಲ್ಲಿ ಮುಳುಗಿ ಅವನನ್ನು ನಾನಾ ಬಗೆಯಲ್ಲಿ ಪ್ರಶ್ನಿಸುತ್ತಾಳೆ. ಜೋಗಿ ತನ್ನ ಬಗೆಗೆ ಕಲ್ಪಿತ ಕಥೆಗಳನ್ನು ಹೇಳಿ ಕುಂತಿ ಯನ್ನು ಪರೀಕ್ಷಿಸತೊಡಗುತ್ತಾನೆ. ಅವಳಲ್ಲಿ ತಾಯಿ ಹೃದಯದ ಮಿಡಿತ ವನ್ನು ಕಾಣುತ್ತಾನೆ. ಅರ್ಜುನನು ತನಗೆ ತಿಳಿದಿದ್ದಿತೆಂದೂ, ಮಧ್ಯೆ ಅವನು

ತೀರಿಹೋದನೆಂದೂ ಹೇಳುತ್ತಾನೆ. ಆ ಮಹಾಶೂರನಾದ ತನ್ನ ಮಗ ಮಡಿಯಲಾರನೆಂಬ ಭರವಸೆಯಿದ್ದ ಕುಂತಿ ಅದನ್ನು ನಂಬದೆ ಅರ್ಜುನನ ಗುಣಗಾನಮಾಡುತ್ತಾಳೆ. ತನ್ನ ಮನೆಯಲ್ಲಿ ಊಟಹಾಕಬೇಕೆಂದು ಕುಂತಿಯನ್ನು ಕೇಳುತ್ತಾನೆ. ಬೆಂದ ಕೂಳನ್ನು ಜೋಗಿಗೆ ಹಾಕಲು ಇಚ್ಛೆಪಡದ ಅವಳನ್ನು ದ್ರೌಪದಿಯನ್ನಾದರೂ ಕೊಟ್ಟು ಸುದುನೆಮಾಡೆನ್ನುತ್ತಾನೆ.ಅವಳಲ್ಲಿಗೆ ತಾನು ಹೋಗಿ ಬಂದುದಾಗಿಯೂ ಹೇಳಿ ಕುಂತಿಯ ಸಹನೆಯನ್ನು ಪರೀಕ್ಷಿಸುತ್ತಾನೆ. ಕೊನೆಗೆ ಕುಂತಿ ವಿಧಿಯಿಲ್ಲದೆ ತನ್ನ ನಾಲ್ಕುಮಕ್ಕಳ ಜೊತೆಯಲ್ಲಿ ಈ ಜೋಗಿಯನ್ನೂ ಕೂರಿಸಿ ಊಟಕ್ಕೆ ಬಡಿಸುವಾಗ ದ್ರೌಪದಿಯ ಜೊತೆಯಲ್ಲಿ ಪಗಡೆಯಾಡುತ್ತಿದ್ದ ಅರ್ಜುನನನ್ನು ಕರೆತರುವಂತೆ ಹೇಳಿ ಕಳಿಸುತ್ತಾನೆ ಧರ್ಮರಾಜ. ಅವರಿಗೆ ವಿಷಯ ಹೇಗೆ ತಿಳಿಯಿತೊ? ದ್ರೌಪದಿ, ಅರ್ಜುನ ಪಗಡೆಯಲ್ಲಿ ಸೋತು ಜೋಗಿಯ ವೇಷದಲ್ಲಿ ಹನ್ನೆರಡು ವರ್ಷ ವನವಾಸ ಹೋದನೆಂದು ಹೇಳಿ ಕಳಿಸುತ್ತಾಳೆ. ಆಷ್ಟರಲ್ಲಿ ಶ್ರೀಕೃಷ್ಣ ಅಲ್ಲಿಗೆ ಬಂದು ಗುಪ್ತವೇಷದ ಮಾಯದ ಜೋಗಿ ಯಾರೆಂಬುದನ್ನು ತೋರಿಸಿಕೊಡುವ ಸ್ವಾರಸ್ಯ ಪ್ರಸಂಗದಲ್ಲಿ ಕಥೆ ಕೊನೆಗೊಳ್ಳುತ್ತದೆ.



ಅರ್ಥಸೂಚಿ

ಅಕ್ಕಸ್ತಿ—ಅಕ್ಷತೆ
ಅಗಣಿಯ—ಅಗಳಿಯ, ಬಾಗಿಲನ್ನು ಭದ್ರಪಡಿಸಲು ಬಳಸುವ ಸಾಧನ
ಅಗೇವು—ಧಾನ್ಯವನ್ನು ಕೂಡಿಡಲು ಭೂಮಿಯಲ್ಲಿ ಮಾಡಿಕೊಳ್ಳುವ ಕಣಜಗಳು
ಅಂಟಾದೆ ಮುಂಟಾದೆ—ವೈಲಿಗೆಯಾಗದೆ
ಅಟ್ಟುಣ್ಣು—ಅಡಿಗೆಮಾಡಿ ಊಟಮಾಡು
ಅಡಬಿದ್ದು—ದೀರ್ಘದಂಡ ನಮಸ್ಕಾರಮಾಡಿ
ಅಂದಲದಟ್ಟಿ—ಚಪ್ಪರದ ಹಟ್ಟಿ
ಅನುರಾಜ—ಒಂದು ಬಗೆಯ ಹೂವು
ಅಂಬಿಗೆ—ಹೊಟ್ಟಿಗೆ, ಬಾಣಕ್ಕೆ
ಅರವಂಟಿಗೆ—ಅರವಟ್ಟಿಗೆ, ದಾರಿ ಮಧ್ಯದಲ್ಲಿ ಪ್ರಯಾಣಿಕರಿಗೆ ಅಂಬಲಿ ಪಾನಕ ಮುಂತಾದವುಗಳನ್ನು ಕೊಟ್ಟು ಆಯಾಸವನ್ನು ಪರಿಹಾರಮಾಡುವ ನೆಲೆಗಳು
ಅರಿಬೆ—ಬಟ್ಟಿ
ಅರಿತಂಗೆ—ಮರೆತಹಾಗೆ, ತಿಳಿಯದ ಹಾಗೆ
ಅರೆವುದ್ದ—ಎದೆಯುದ್ದ, ಅರೆಯುಷ್ಟು ಎತ್ತರ
ಅಲವಂಗ—ಸುಂದರವಾದ
ಅವಿಸಿ—ಬಚ್ಚಿಟ್ಟು
ಅಸಮಾನ—ಕಟುವಾದ, ಅಪಾಯಕರವಾದ
ಅಳಿದಿಟ್ಟು—ಬಿಚ್ಚಿಟ್ಟು
ಆಗ್ರದ—ಒಂದು ಗ್ರಾಮದ ಹೆಸರು

ಆಯೆ—ನಡವಳಿಕೆ, ರೀತಿ
ಆಲೆ—ಕಬ್ಬನ್ನು ಅರೆಯಲು ಗಾಣವನ್ನು ಆಡಿಸುವ ಮನೆಗಳು
ಇಟ್ಟು—ಧೂಳು, ಹಿಟ್ಟು
ಇನವಂದ—ಪಗಡೆಯಾಟ
ಇಂಬಾಗು—ಸರಿಹೋಗು, ಅಡಕವಾಗು
ಇಂಬಿಯಹಣ್ಣು—ನಿಂಬೆಯಹಣ್ಣು
ಇಬ್ಬಂದಿಗಾರ—ಮೋಸಗಾರ
ಇಮಿರಾಯ—ಜವರಾಯ, ಯಮರಾಯ
ಇರುಕು—ತುಂಬಿಕೊಂಡು, ತಬ್ಬಿಕೊಂಡು
ಇರುಳಿ, ಚೆನ್ನಿರುಳಿ—.....?
ಇರುಬ—ಇರವೆ
ಇಳ್ಳೃತ—ಚೀಪುತ್ತ, ಕುಡಿಯುತ್ತ
ಈಚಲಸೆಬ್ಬೆ—ಈಚಲಕೋಲು
ಈತೈತೆ—.....?
ಉಕ್ಕುಲಿ—.....?
ಉಪ್ಪರಿಕೆ—ಉಪ್ಪರಿಗೆ, ಮಹಡಿ
ಉರುಬಿದರೆ—ಬಾಯಿಂದ ಊದಿದರೆ
ಉಪಾದ್ರಿ—ಉಪಾಯಗಾರ, ಹಾರವಯ್ಯ
ಎಬ್ಬಿಸಿ—ಏಳಿಸಿ, ಎಚ್ಚರಿಸಿ
ಎಂಟು ದಿಸಲ—ಎಂಟು ದಿವಸದ
ಎಡೆದು—ಸುಲಿದು
ಐಗಳ—ಐವತ್ತು ಸೇರು
ಒಕ್ಕಳ—ಐವತ್ತು ಸೇರು
ಒಡಬೆ—ಆಭರಣ
ಒಡಗಿಚ್ಚು—ಒಡಲಕಿಚ್ಚು
ಒಡೆಹುಲ್ಲು—ಚಿಗುರಿದ ಹುಲ್ಲು

ಒಂದಿಗೆ—ಜೊತೆಯಲ್ಲಿ
ಕಗ್ಗಣಕು—ಬಗ್ಗಡ, ಕೊಳಕಾದ
ಕಂಗಾಯಿ—ಕಸುಗಾಯಿ
ಕಟ್ಟಾಣಿ—ಕಡುಚೆಲುವೆ, ಲಾವಣ್ಯವತಿ
ಕಂಟಸೈರಣೆ—.....?
ಕಡಕು—ಓಲೆ, ಕಿವಿಯ ಆಭರಣ
ಕವಳಿಗೆ—ಇಪ್ಪತ್ತೈದು ಎಲೆಗಳು
ಕಸಬೆ—ಆಸುತ್ತಿನ
ಕಳಿ—ಹೊಲಗದ್ದೆಗಳಲ್ಲಿ ಬೆಳೆಯುವ ನಿಶ್ಪ್ರಯೋಜಕಸಸ್ಯಗಳು
ಕಾಕಬುದ್ಧಿ—ಕೆಟ್ಟಬುದ್ಧಿ, ಕುಚೇಷ್ಟೆ
ಕಾಯಿತೊರ—ಕಾಯಿಯಷ್ಟು ಗಾತ್ರದ
ಕಾವಟಗೆ—.....?
ಕಾಸೆ—ಬಟ್ಟೆ?
ಕ್ವಾರೆ—ತೆಗೆದುಕೊ
ಕ್ವಾರಣ್ಯ—ಭಿಕ್ಷೆ
ಕುಟ್ಟುಣ್ಣು—ಜೊತೆಯಲ್ಲಿ ಊಟಮಾಡು
ಕುಂಡಿರಿಕೆ–ಕುಳಿತುಕೊಳ್ಳಲು ಹಾಕುವ ಮಣೆ ಮುಂತಾದವು
ಕುಂಡೋದ—ತೆಗೆದುಕೊಂಡು ಹೋದ
ಕೂಳೆ—ಸೈರನ್ನು ಕುಯ್ದು ಉಳಿದಬೇರು
ಕೆಣಕಿನ .....?
ಕೇಸಕ್ಕಿ—ಕೆಂಪಾದ ಅಕ್ಕಿ, ಅಕ್ಷತೆ
ಕೆರದಡಿಗೆ—ಕೆರೆಯ ತೀರಕ್ಕೆ
ಕೆಪ್ಪಗೆ—ಕೆನ್ನೆಗೆ
ಕೊಂಡ—ಅಗ್ನಿಕುಂಡ
ಕೊಂಡು—ಕೊರಡು
ಕೊರಮಿ—ಮೇದರವಳು

ಕೋವಿ—ಬಟ್ಟೆ
ಕೌಲಿ—ಹಸು
ಗಂಗಳ—ಊಟನೂಡುವ ಕಂಚಿನ ತಟ್ಟೆ
ಗಲಕು—ಶಬ್ದಮಾಡು
ಗಾಳಿ—ಪಿಶಾಚಿ
ಗ್ಯಾನಿಸಿ—ನೆನೆದುಕೊಂಡು, ಜ್ಞಾಪಿಸಿಕೊಂಡು
ಗಾಡ—ಹೆಚ್ಚಾದ
ಗಿಂಡಿ—ಪಾತ್ರೆ
ಗುಕ್ಕು—ಒಂದು ಗುಟುಕು
ಗೂಡೆ—ದೊಡ್ಡ ಕುಕ್ಕೆ
ಗೆಂಡೆ—ಗೆಡ್ಡೆ
ಗೊಂಡೇವ—ಗೊಂಡೆ ಹೂವು, ಬಣ್ಣಬಣ್ಣದ ನೂಲಿನಲ್ಲಿ ಮಾಡಿದ ಹೂವು
ಗೋಕುರ್ತೆ—ಸಂಸಾರದ ಹೊಣೆ
ಗೌಳಿ—ಹಲ್ಲಿ
ಚಟ್ಟೆ—ಮಡಕೆ
ಚಂಬು—ತಂಬಿಗೆ
ಚರಿಗೆ—ಬಿಂದಿಗೆ
ಚಿಕ್ಕಮುಲ್ಲೆ—ಚಿಕ್ಕಮನೆಯಲ್ಲಿ, ಕೊಠಡಿಯಲ್ಲಿ
ಚಿಬ್ಬಲು—ಮುಚ್ಚಲು ಬಳಸುವ ಬಿದರಿನ ಸಾಧನ
ಚಜ್ಜೆ—ಸಜ್ಜೆ
ಚೆಂಜಿ—ಚೋಜಿ, ಕುದುರೆ
ಜಗಜೋಡಿ—ಒಂದು ಜೊತೆ, ಬಲವಾದ ಜೊತೆ
ಜನಿವಾದ—ಜನಿಸಿದ, ಹುಟ್ಟಿದ
ಜಲಧಿ—ನದಿ ಎಂದು ಭಾವಿಸಬೇಕು
ಜಳಕ—ಸ್ನಾನ

ಜವದೋರು—ಯಮದೂತರು
ಜಂಬಾರ—ಕಾರ್ಯ, ಹಬ್ಬ
ಜಂತ—ತೊಲೆ
ಜಾಡ—ಜೇಡ
ಜಾಪುರಿ—ಒಂದು ಆಭರಣ
ಜೀನ—ಜಿಪುಣ
ಜೋಕಾಡಿ—ತೂಗಾಡಿ?
ಜೋತುರ—ವಸ್ತ್ರ
ಜೋಮಾಲೆ—ಕಂಠಿಹಾರ
ಟಗರು—ಗಂಡುಕುರಿ
ತಗಳವ್ವ—ತೆಗೆದುಕೊಳ್ಳವ್ವ
ತಣಿಗೆ—ತಳಿಗೆ, ಗಂಗಳ, ತಟ್ಟಿ
ತರಳೆಕಂಭ—ಹಸೆಯ ಕಂಬ, ಮದುವೆಗೆ ಮೊದಲನೆಯ ದಿನ ಕಡಿದು ಚಪ್ಪರದ ನಡುವೆ ನೆಡುವ ಶಸ್ತ್ರದ ಕೊಂಬೆ
ತಲೆಕೊಳ್ಳಿ—ಶವದ ಮುಂದೆ ಹಿಡಿದುಕೊಂಡು ಹೋಗುವ ಕೊಳ್ಳಿ
ತಳುಗೋರು—ತಂಗುವವರು
ತಳುಕದ—ತುಂಬಿದ
ತಳ್ಳಿ—ಟೊಳ್ಳು, ಒಣಗಿದ ಕಾಯಿ
ತಾನ—ಸ್ನಾನ
ತಾಮರ—ತಾಮ್ರ
ತಾವ—ಜಾಗ, ಸ್ಥಳ
ತುಂಬು—ಆಲಿಸು
ತುರುಗಳ್ಳಿ—ಮುಳ್ಳಿನ ಕಳ್ಳಿ
ತುರುಮಂದಿಗಾರ—ಗೊಲ್ಲ ?

ತೆರನ—ಸಂಗತಿ, ವಿಚಾರ ವಿಮರ್ಶೆ
ದಂಡೆಗೆ—ಪಕ್ಕಕ್ಕೆ
ದುಸುಮಾನ—ಅಪಾಯಕಾರಿ
ದೇಪಂತ—ಸ್ಪರ್ಧೆಯಿಂದ ?
ದೊಡ್ಡಮನುಷೆ—ಋತುಮತಿಯಾದ ಕನ್ಯೆ
ದೋಸರಯ್ಯ—ಪುರೋಹಿತ
ನಮ್ಮಾಡು—ನಮ್ಮ ಮುಗಿಲು
ನನ್ನಾಡು—ನನ್ನ ಆಸೆ
ನರಿಕ್ಹಾಕ—ಪುಡಿಮಾಡಿ
ನಂದಿಗಡುಕ—ಒಂದು ಆಭರಣ
ನತ್ತಲು—ರಕ್ತ
ನಳ್ಳಿ—ಏಡಿ
ನಾಗಳ—ನಲವತ್ತು ಸೇರು
ನಾದನಿಸಿ—ಸ್ನಾನಮಾಡಿಸಿ
ನೀಪಿ—ವ್ರತ, ನೋಂಪಿ
ನಿಲುಗಾರ—ಒಡಯ ? ಯಜಮಾನ ?
ನಿಸ್ರೀರ—ಹೆಂಗಸರ
ನುರಿಯಲಿ—ನುಚ್ಚಾಗಲಿ
ನುಸಿಯದಂಗೆ—ನುಗ್ಗದಂತೆ
ನೆಪ್ಪು—ನೆನಪು
ನೇಸೆ—ತೊಟ್ಟಲಹಗ್ಗ
ನೇಪಿನ ಸೊಳೆ—ಬೆಡಗಿನಸೂಳೆ ?
ಪಕಳಾರ.....?
ಪನಿನೀರು—ಪನ್ನೀರು
ಪಾಗಿನ—ಜರಿಯರುಮಾಲು
ಪಾವಡ—ಬಟ್ಟೆ

ಪಿಲ್ಲಿ—ಕಾಲುಬೆರಳಿಗೆ ತೊಡುವ ಒಂದು ಬೆಳ್ಳಿಯ ಆಭರಣ
ಪಲ್ಗೀಸೀದೊ—ಜಿಗುರಿದೊ
ಬಗೆಸ್ಯಾಳು—ಬಯಸಿಯಾಳು
ಬಟುವ—ಹುಬ್ಬು
ಬಟ್ಟು—ತಿಲಕ
ಬಟ್ಟುಳ—ಬಟ್ಟಲು
ಬಣ್ಣ—ಸೀರೆ
ಬಂದಿ—ತೋಳಿನ ಆಭರಣ
ಬರೇವು—ಹಸಿವು
ಬದುಕು—ಕೆಲಸ, ಬಾಳುವುದು, ಆಸ್ತಿ
ಬರ—ಕ್ಷಾಮ
ಬಾಡು—ಮಾಂಸ
ಬಾನ—ಬೋನ, ಅನ್ನ
ಬಾರೆ—ಬೋರೆ, ಎತ್ತರವಾದ ಬಯಲು ಪ್ರದೇಶ.
ಬಾಸಿಂಗ—ಮದುವೆಯಲ್ಲಿ ಹಣೆಗೆ ಕಟ್ಟುವ ಸಾಧನ
ಬಿಗುಮಾನ—ಬಿಗಿಯಾಗಿರುವುದು, ಸಿಟ್ಟಿನ ಮೌನ
ಬಿತ್ತಾರಿ—ಬೆಡಗಿ
ಬಿಮ್ಮನಸೆ—ಗರ್ಭಿಣಿ
ಬೊಬ್ಬೆ—ಕೂಗಿಕೊಳ್ಳುವುದು, ಅರ್ಭಟಿಸುವುದು
ಮಕ್ಕಾಡ—ಮುಖವಾಡ
ಮಜಾಕು—ಮೋಜು
ಮದಲಿಂಗ—ಮದುವಣಿಗ
ಮಂಕರಿ—ಮಕ್ಕರಿ
ಮಿತ—ಮೃತ್ಯು
ಮಿಂಚಿಣ್ಣೆ—ಮದುವೆಯ ಶಾಸ್ತ್ರದಲ್ಲಿ ಸ್ನಾನಕ್ಕೆ ಬಳಸುವ ಎಣ್ಣೆ

ಮೀದೊ—ಸ್ನಾನಮಾಡಿದೊ
ಮಚ್ಚಣಕೋಲು.....?
ಮುತ್ತಿನೈರಣೆ—ಮುತ್ತಿನ ಕಳಸ
ಮುರ—ತಿಂಡಿ
ಮೂಡು—ಪೂರ್ವದಿಕ್ಕಿನ ಮುಗಿಲು
ಮೆಟರೆ—ಕುತ್ತಿಗೆ
ಮ್ಯಾಳ—ಕತ್ತಿನ ನಾಳ
ಯಮಗೊಂಡ—ಭಯಂಕರ ಅಗ್ನಿಕೊಂಡ
ರಟ್ಟಿ—ತೋಳು
ರಾವಾನೆ—ಆಹುತಿಯನ್ನು
ರಾಜಣ—ಧಾನ್ಯ
ರಯಿತ—ರಕ್ತ
ವಷ್ಣುಮರು—ವೈಷ್ಣವರು
ವಾಂಚಾಲ—ಹಟ
ವಾಲೆಕಾರ—ಅಂಚೆಯವನು, ಬೇಟೆಗಾರ ಶುಭವನ್ನು ತರುವವನು ?
ಶಾಸ್ತ್ರಕ್ಕೆ—ಲಗ್ನ ಸಂಬಂಧವಾದ ವಿಷಯಕ್ಕೆ
ಶಿರಸ—ತಲೆ
ಸತಿ—ಪತಿ ಎನ್ನುವ ಅರ್ಥದಲ್ಲಿಯೂ ಪ್ರಯೋಗಿಸಿದಂತಿದೆ
ಸಂದೋದ—ಸತ್ತುಹೋದ
ಸದರ—ಸಡಿಲ, ದಾಕ್ಷಿಣ್ಯ
ಸರಿಹೊತ್ತು—ನಟ್ಟಿರುಳು, ಅರ್ಧರಾತ್ರಿ
ಸಾಸುವೆ—ಸೇಸೆ
ಸಾಲಿ—ಬಟ್ಟಿ, ಹೊದೆಯುವ ಶಲ್ಯ
ಸ್ಯಾರೆ—ಒಂದು ಭೊಗಸೆ
ಸ್ಯಾಲೆ—ಸೀರೆ

ಸೀಕು—ಅನ್ನದ ಪಾತ್ರೆಯ ತಳದಲ್ಲಿ ಸೀದು ಉಳಿಯುವ ಕರಕು
ಸಿವಡ್ಹೂಡಿ—ಸಿಂಬಿಯನ್ನು ಮಾಡಿಕೊಂಡು
ಸೆತ್ತೆ—ಕೊಳಕು, ನಾರಿ ಮುಂತಾದುದು
ಸೇದು—ಬಿಗಿಯುವುದು, ಎಳೆತ
ಸೈವಾಗಿ—ಸಮೇತ
ಸೋಕಾದೆ—ಸೋಂಕದೆ
ಸೋಗುಲುದುಂಬಿ—ಮಡಿಲುದುಂಬಿ
ಹಣ—ಒಂದು ಪಾವಲಿ, ನಾಲ್ಕಾಣೆ
ಹಗೆಯೇನು—ತಪ್ಪೇನು, ವಿರೋಧವೇನು
ಹಲಗು.....?
ಹಾಸುಂಬ.....?
ಹುಗ್ಗೆ....ಗೃಹಪ್ರವೇಶದ ವಿಶೇಷ ಭೋಜನ
ಹೊಂಬು—ಅಂಬು, ಉದ್ದವಾದ ಬಳ್ಳಿ

ವಿ. ಸೂ. :—

ಕೆಲವು ಕಡೆ ಉಚ್ಚಾರಣೆಯ ದೋಷದಿಂದ ಅಲ್ಪಪ್ರಾಣಕ್ಕೆ ಮಹಾಪ್ರಾಣವೂ, ಮಹಾಪ್ರಾಣಕ್ಕೆ ಅಲ್ಪಪ್ರಾಣವೂ, ದೀರ್ಘಹ್ರಸ್ವವೂ, ಹ್ರಸ್ವಕ್ಕೆ ದೀರ್ಘವೂ ಬರುವುದುಂಟು. ಅದನ್ನು ಸಂದರ್ಭಕ್ಕೆ ತಕ್ಕಂತೆ ಹೊಂದಿಸಿಕೊಂಡು ವಾಚಕರು ತಿದ್ದಿಕೊಳ್ಳಬೇಕಾಗಿ ವಿನಂತಿ. ಅವನೆಲ್ಲಾ ಪಟ್ಟನಾಡುತ್ತ ಹೋದರೆ ದೀರ್ಘವಾಗಿ ಬೆಳದೀತೆಂಬ ದೃಷ್ಟಿಯಿಂದ ಅನೇಕ ಕಡೆ ಹಾಗೆಯೆ ಉಳಿಸಲಾಗಿದೆ. ಅನೇಕವು ದೃಷ್ಟಿಯಿಂದ ಜಾರಿ ದೋಷವಾಗಿ ಉಳಿದಿರಲೂಬಹುದು. ಯಾವ ಯಾವ ಪದಗಳು ಹಳ್ಳಿಗರ ಬಾಯಲ್ಲಿ ಹೇಗೆ ಉಚ್ಚಾರಣೆಯ ಸೌಲಭ್ಯ ದೃಷ್ಟಿಯಿಂದ, ಮೂಲದಿಂದ ಮೂರು ಮಾರು ಮುಂದೆ ಹೋಗಿರುತ್ತವೆಂಬುದನ್ನು ಇಲ್ಲಿಯೂ ಅರಿಯಬಹುದು. ಆ ದೋಷಗಳು ಕಥಾವಿನ್ಯಾಸಕ್ಕೆ ಅಡ್ಡಿತಂದಿರಲಾರವೆಂದು

ಭಾವಿಸುತ್ತೇವೆ. ಅಲ್ಲದೆ ಅಪಪ್ರಯೋಗಗಳು ಕಂಡುಬಂದರೂ ಅವುಗಳ ಸ್ಥಳದಲ್ಲಿ ಏನಿರಬೇಕೆಂಬುದು ಸಾಮಾನ್ಯ ವಾಚಕರಿಗೂ ಗೊತ್ತಾಗುವಂತಿದೆ. ಅಚ್ಚಿನ ದೋಷಗಳು ಅಲ್ಲಲ್ಲಿ ನುಸುಳಿಕೊಂಡಿವೆ. ದಯಮಾಡಿ ಅವನ್ನು ತಿದ್ದಿಕೊಳ್ಳಬೇಕಾಗಿ ಪ್ರಾರ್ಥನೆ. ಎಲ್ಲಾ ಶಬ್ದಗಳಿಗೂ ಇಲ್ಲಿ ಅರ್ಥಕೊಡಲು ನಾವು ಅಸಮರ್ಥರಾಗಿದ್ದೇವೆ. ಅಲ್ಲದೆ ನಾವು ಕೊಟ್ಟಿರುವ ಅರ್ಥದಲ್ಲಿಯೂ ತುಸು ಬದಲಾವಣೆಗಳಿರಬಹುದು–ಈ ಬಗ್ಗೆ ತಮ್ಮ ಎಲ್ಲ ಸಲಹೆಗಳನ್ನೂ ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

—ಸಂ



ಸಾಹಸದ ಕಥೆ

ಈ ಹಾಡುಗತೆಗಳನ್ನು ಸಂಗ್ರಹಿಸಿದುದು ಒಂದು ಸಾಹಸದ ಕಥೆಯೇ ಆಗಿದೆ. ನಾಡಿನ ಹಲವು ಮೂಲೆಗಳಲ್ಲಿ ಸಂಚರಿಸಿ ಹಾಡುಗಾರರನ್ನು ಕುಡುಕಿ ಅವರಿಂದ ಸಾಹಿತ್ಯ ಸಂಗ್ರಹಣೆ ಮಾಡುವಲ್ಲಿ ಅನೇಕ ಅಡಚಣೆಗಳನು ಕಷ್ಟನಷ್ಟಗಳನು ಅನುಭವಿಸಲು ಸಿದ್ಧವಾಗಿರಬೇಕಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ನಾನು ಪಟ್ಟಪಾಡು ಈಗ ನೆನೆದುಕೊಂಡರೆ ರೋಮಾಂಚನವನ್ನು ತರುತ್ತದೆ. ಜನಪದ ಸಾಹಿತ್ಯಸಂಗ್ರಹಣೆಯ ಸುಸ್ಸಾಧ್ಯತೆ ಆ ರಂಗದಲ್ಲಿ ಕೆಲಸ ಮಾಡಿದವರಿಗೆ ಮಾತ್ರ ಅನುಭವವಾಗ ತಕ್ಕದ್ದು. ಆದರೆ ಅದು ಕ್ರಮೇಣ ಸಾಹಸಕ್ಕೆ ತಿರುಗಿ ಶ್ರದ್ಧೆಯಿದ್ದರೆ ಸಹನೆಯಿದ್ದರೆ ಆ ಗೊಂಡಾರಣ್ಯಗಳನ್ನು ಭೇದಿಸಿ ಜನಪದ ಸಾಹಿತ್ಯದ ಜೇನನ್ನು ಸಂಗ್ರಹಿಸುವ ಶಕ್ತಿ ತಾನಾಗಿ ಮೂಡುತ್ತದೆ. ಒಟ್ಟಿನಲ್ಲಿ ಆಸಕ್ತಿ ಬೇಕು, ಅಭಿರುಚಿ ಬೇಕು, ಆ ಸಾಹಿತ್ಯದ ಅಭಿಮಾನಬೇಕು.

ನಾನು ಜನಪದ ಸಾಹಿತ್ಯವನ್ನು ಸಂಗ್ರಹಿಸ ಹೊರಟಿದ್ದು ಅದರ ಮೋಹಕತೆಗೆ ಬೆರಗಾಗಿ; ಅದರ ಬಗ್ಗೆ ನನ್ನಲ್ಲುಂಟಾದ ಅಭಿಮಾನ ನನ್ನನ್ನು ಆ ಕಾರ್ಯಕ್ಕೆ ಪ್ರೇರೇಪಿಸಿ ಸಂಗ್ರಹಣೆಯ ಹೊರೆಯನ್ನು ಈ ಕಿರಿಯನ ಮೇಲೆ ಹೇರಿತು. ಅದೊಂದು ಪವಿತ್ರ ಕೆಲಸವೆಂದು ಅರಿತ ನಾನು ಅನೇಕ ಎಡರುತೊಡರುಗಳನ್ನು ಕುಚೋದ್ಯ ಕುಹಕಗಳನ್ನು ತಾತ್ಸಾರ ನಿರ್ಲಕ್ಷ್ಯ ಗಳನ್ನು ಲೆಕ್ಕಿಸದೆ ಕೆಲಸ ಮಾಡಿಕೊಂಡು ಬಂದುದರ ಫಲವಾಗಿ ಜನಪದ ಸಾಹಿತ್ಯಮಾಲೆಗೆ ನನ್ನ ಅಲ್ಪ ಕಾಣಿಕೆಯು ಕಾಡುಮಲ್ಲಿಗೆಗಳನ್ನು ಸೇರಿಸಲು ಸಹಾಯಕವಾಗಿದೆ.

ಈ ಸಂಗ್ರಹಣೆಯ ಬಗೆಗೆ ಬರೆಯುತ್ತ ಹೋದರೆ ಅದೇ ಒಂದು ದೊಡ್ಡ ಕಥೆಯಾಗುತ್ತದೆ. ಆದರೂ ನನ್ನ ಹಲವು ಮಿತ್ರರು ಮತ್ತು ಕೆಲವು ಹಿರಿಯರು ನನ್ನ ಸಂಗ್ರಹ ಯಾತ್ರೆಯನ್ನು ಕುರಿತು ಕೊಲಂಕಷವಾಗಿ ಬರೆಯುವಂತೆ ಒತ್ತಾಯಪಡಿಸಿದುದರ ಫಲವಾಗಿ ಈ ಕೆಲಸಕ್ಕೆ ಕೈ

ಹಚ್ಚಬೇಕಾಯಿತು. ಎಲ್ಲಿ ಆತ್ಮ ಕಥನವಾದೀತೋ ಆತ್ಮ ಪ್ರಸಂಶೆ ಆದೀತೊ ಎಂಬ ಭಯ ನನ್ನ ಮನಸ್ಸನ್ನು ಕಾಡದೆ ಇಲ್ಲ. ಆದರೂ ಆ ರಸಯಾತ್ರೆಯ ಅನುಭವಗಳನ್ನು ಬರೆದಿಡುವುದೇ ಒಂದು ಸ್ವಾರಸ್ಯ ಸಾಹಿತ್ಯವಾಗುತ್ತದೆ. ಆದರೆ ನಾನಿಲ್ಲಿ ಆ ದೀರ್ಘ ಪ್ರಬಂಧವನ್ನು ಬರೆದು ಓದುಗರನ್ನು ಬೇಸರಿಸಲು ಹೋಗುವುದಿಲ್ಲ. ಪ್ರಕೃತ ಸಂಕಲನದ ಕಥನಗೀತೆಗಳು ನನಗೆ ದೊರೆತ ಬಗೆಯನ್ನು ಮಾತ್ರ ಇಲ್ಲಿ ಸ್ಮರಿಸಿಕೊಳ್ಳುವುದು ಔಚಿತ್ಯಪೂರ್ಣವಾಗಿ ತೋರುತ್ತದೆ. ಆ ಮಧುರಸ್ಮೃತಿಯಿಂದ ನನ್ನ ಮನಸ್ಸಿಗೂ ನೆಮ್ಮದಿಯಾದಂತಾಗುತ್ತದೆ. ಓದುಗರಿಗೂ ಒಂದು ಬಗೆಯ ಆಸಕ್ತಿದಾಯಕವಾಗಿರುತ್ತದೆ.

ನನಗೆ ಜನಪದ ಸಾಹಿತ್ಯದಲ್ಲಿ ಅಪಾರ ಆಸಕ್ತಿ ಹುಟ್ಟಲು ಮೂಲ ಕಾರಣರಾದ ನನ್ನ ಪೂಜ್ಯ ಮಾತೆಯವರು ಅನೇಕ ಹಾಡುಗಳನ್ನು ಹೇಳಿ ಬರೆಸಿದಂತೆ ಇಲ್ಲಿನ ಉತ್ತರದೇವಿಯ ಕೆಲವು ಭಾಗಗಳು, ಇರೋಬಿ, ಅಂಬಿಗರ ಗಂಗ, ಸಂಗಾತಿ, ಮುಂತಾದ ಕಥನ ಗೀತೆಗಳನ್ನು ಅವರೇ ಹೇಳಿದರು. ನೀಲಗಿರಿಯ ಶ್ರೀಮಂತ ಕುಲದಲ್ಲಿ ಹುಟ್ಟಿದವರಾದರೂ ತಮಿಳನ್ನೆ ಹಾಡಿ ಕಲಿತವರಾದರೂ ನಮ್ಮ ಕಡೆಯ ಹಳ್ಳಿಗೆ ಲಗ್ನವಾದ ಮೇಲೆ ಅಲ್ಲಿಯ ವಾತಾವರಣಕ್ಕೆ ತಕ್ಕಂತೆ ಕನ್ನಡವನ್ನೂ, ಕನ್ನಡದ ಜನಪದ ಸಾಹಿತ್ಯವನ್ನೂ ಅಭ್ಯಾಸಮಾಡಿದ ಅವರ ಶ್ರದ್ಧೆ ನಿಜಕ್ಕೂ ಅಭಿಮಾನಪಡಬೇಕಾದಬ್ದೆ ಸರಿ. ತಮ್ಮ ಮಕ್ಕಳಿಗೂ ಇತರರಿಗೂ ಈ ಸಾಹಿತ್ಯದ ಉಣಿಸನ್ನು ನೀಡಿ ಅವರ ಬದುಕಿನ ಮೇಲೆ ಪ್ರಭಾವ ಬೀರಬೇಕಾದುದು ಹಳ್ಳಿಯ ಸದ್ಗೃಹಿಣಿಯ ಆದ್ಯ ಕರ್ತವ್ಯವೆಂದು ಅವರು ಬಗೆದರೇನೊ ! ಅವರು ಅಷ್ಟು ಬಗೆಯಲ್ಲಿ ಹೇಳುವ ಹಾಡುಗಳನ್ನು ಕೇಳಿದರೆ ಕನ್ನಡದ ಹಳ್ಳಿಗಳಲ್ಲೆ ಹುಟ್ಟಿ ಅಲ್ಲಿಯೆ ಬೆಳೆದು ಆ ಸುತ್ತಿಗೆ ಲಗ್ನವಾಗುವ ಕನ್ನಡ ಹೆಣ್ಣು ಮಕ್ಕಳಲ್ಲಿ ಇಂತಹ ಸಾಹಿತ್ಯ ಅದೆಷ್ಟು ಅಡಗಿದೆಯೊ ! ಜನಪದ ಸಾಹಿತ್ಯದ ಪರಂಪರಾಗತವಾದ ಒಂದು ಬೆಳವಣಿಗೆಗೆ ತಾಯಂದಿರ ಪಾತ್ರ ಹಿರಿದಾದುದೆಂದು ನಾನು ಇದರಿಂದ ಅರಿತು ಮುಗ್ಧನಾದೆ.

ಒಂಬತ್ತು ವರ್ಷಗಳ ಹಿಂದಿನ ನೆನಪು. ನಮ್ಮೂರ ಸಂತೆಯಲ್ಲಿ

ಮೂರು ಜನ ದೊಂಬಿದಾಸರನ್ನು ಕಂಡೆ. ಕಚ್ಚೆಯನ್ನು ಹಾಕಿ ತಲೆಯಲ್ಲಿ ಪೇಟವನ್ನು ಸುತ್ತಿ ಭುಜಕ್ಕೆ ಜೋಳಿಗೆಗಳನ್ನು ಕಟ್ಟಿಕ್ಕೊಂಡು ಏಕನಾದ ಗಳನ್ನುಹಿಡಿದು ಹಾಡುತ್ತಿದ್ದ ಅವರನ್ನು ಕಂಡು ಬೆರಗಾದೆ. ಆಗ ಸುಗ್ಗಿ. ನಮ್ಮ ಕಣಕ್ಕೆ ಬರುವಂತೆ ಅವರಿಗೆ ತಿಳಿಸಿದೆ. ಅಂದು ಸಂಜೆ ಕಣದಲ್ಲಿಯೆ ನಮ್ಮ ಮನೆಯ ಜವರಣ್ಣನೊಡನೆ ಮಲಗುವಂತೆ ಮನೆಯಲ್ಲಿ ತಿಳಿಸಿ ಹೊರಬಿದ್ದೆವು. ನನ್ನ ಜನಪದ ಸಾಹಿತ್ಯ ಸಂಗ್ರಹಣೆಗೆ ಜವರಣ್ಣನ ನೆರವು ಅಪಾರವಾದುದು. ಅವನ ಪ್ರೋತ್ಸಾಹವನ್ನು ಇಂದಿಗೂ ಮರೆಯುವಂತಿಲ್ಲ. ಇಲ್ಲಿನ "ಶ್ರೀಕೃಷ್ಣ ಪಾರಿಜಾತ" ಹಾಡನ್ನು ತೋಟದಲ್ಲಿ ಒಮ್ಮೆ ಅವನೇ ಹೇಳಿದ್ದನು. ಅಂದು ರಾತ್ರಿ ನಮ್ಮೂರ ನೆರೆಯ ದೊಂಬಿದಾಸರ ಕೊಪ್ಪಲಿಂದ ಆ ಮೂವರು ದೊಂಬಿದಾಸರು ನಮ್ಮ ಕಣದ ಬಳಿಗೆ ಬಂದರು. ಮೊದಲೆ ತರಿಸಿಟ್ಟುಕೊಂಡಿದ್ದ ತೆಂಗಿನಕಾಯಿ, ದವಸಧಾನಿಗಳನ್ನು ಅವರಿಗೆ ಕೊಟ್ಟಮೇಲೆ ಉತ್ಸಾಹದಿಂದ "ಕಲಿಯುಗದ ಬಾಲೆ" ಒಂದನು ಮುಗಿಸಿ ಹೊರಟುಹೋದರು ಅಲ್ಲಿಂದ ಒಂದು ವರ್ಷದವರೆಗೆ ಅವರು ಕೈಗೆ ಸಿಗಲಿಲ್ಲ. ಜನಪದ ಸಾಹಿತ್ಯ ಸಂಗ್ರಹಣೆಯ ಬಗ್ಗೆ ನಮ್ಮ ಕಡೆಯವರು ಕೆಲವರು ಹಣ ಸಂಪಾದನೆಗೆ, ಸರಕಾರದಿಂದ ಚಿನ್ನದ ಪದಕವನ್ನು ಪಡೆಯುವುದಕ್ಕೆ ಇವೆಲ್ಲ ಎಂದು ಅಪಪ್ರಚಾರಕ್ಕೆತೊಡಗಿದುದರಿಂದ ಯಾರನ್ನೂ ಆ ವಿಷಯದಲ್ಲಿ ಕೇಳುವುದು ಕಷ್ಟವಾಯಿತು ಆದರೂ ಒಂದು ವರ್ಷದ ನಂತರ ಭಿಕ್ಷೆಗೆ ಬಂದ ದೊಂಬಿದಾಸರನ್ನು ಪುಸಲಾಯಿಸಿ ನಮ್ಮ ತೋಟಕ್ಕೆ ಕರೆದೊಯ್ದು ಅಲ್ಲಿನ ಒಡ್ಡರ ಗುಡಿಸಿಲಿನಲ್ಲಿ ಕೂರಿಸಿ ಒತ್ತಾಯದಿಂದ ಕೆಲವನ್ನು ಹಾಡಿಸಿದುದಾಯಿತು. "ಗಂಗೆ ಗೌರಿ ಜಗಳ" "ಕೃಷ್ಣ ಕೊರವಂಜಿ" ಮುಂತಾದ ಕಥನ ಕವನಗಳು ದೊರೆತುದುದು ಹೀಗೆ. "ಹುಟ್ಟಿದಾಳೆ ಗೌರಮ್ಮ ಭೂಲೋಕದಲ್ಲಿ" "ನಾನಿಮ್ಮ ಬಂದೇನು ನಡೀರಣ್ಣ" ಎಂಬ ಹಾಡು ಆ ದೊಂಬಿದಾಸರ ಹೆಂಗಸರಾದ ತಿರುಮಲಾಪುರದ ನರಸಮ್ಮನವರಿಂದ ಸಂಗ್ರಹಿಸಿದುದು.

ನಮ್ಮೂರಿನ ಪೂರ್ವಕ್ಕೆ ಮೂರು ಮೈಲಿಗಳ ದೂರದಲ್ಲಿ ಕಿಕ್ಕಿರಿದ ತೆಂಗಿನ ತೋಟಗಳ ನಡುವೆ ಹೆರಗನಹಳ್ಳಿ ಇದೆ. ಅಲ್ಲಿ ಒಮ್ಮೆ ನಮ್ಮ

ಬಂಧುಗಳನ್ನು ಕಾಣಲು ಹೋಗಿದ್ದಾಗ ಆ ಊರಿನಲ್ಲಿ ಚೆನ್ನಾಗಿ ಹಾಡುವವರ ಬಗ್ಗೆ ವಿಚಾರಿಸುತ್ತಿರುವಲ್ಲಿ ನಮ್ಮ ಚಿಕ್ಕಪ್ಪನವರು ಸೋಬಾನೆಯ ಚಿಕ್ಕಮ್ಮನೆಂಬ ಸುಮಾರು ಎಪ್ಪತ್ತು ವರುಷದ ವೃದ್ಧೆಯನ್ನು ಕರೆತಂದರು. ದಬ್ಬೆಘಟ್ಟದಿಂದ ಕೆಲವು ಅಪರಿಚಿತ ಬಂಧುಗಳು ಬಂದಿದ್ದರು. ಅಂದು ರಾತ್ರಿ ಲ್ಯಾಂಪಿನ ಬೆಳಕಿನಲ್ಲಿ ಬರವಣಿಗೆ ಸಾಗಿತು. ಎಲ್ಲರೂ ಮಲಗಿದರು. ಊರು ನೀರವವಾಯಿತು. ಚಿಕ್ಕಮ್ಮ ಹಾಡಿಯೇ ಹಾಡಿದರು. ಆ ವೃದ್ಧೆಯ ಮನಸ್ಸಿನಲ್ಲಿ ಅದೆಷ್ಟು ಹಾಡುಗಳು ಹುದಗಿದ್ದವೊ ಒಂದೊಂದಾಗಿ ಹೇಳುತ್ತ ಹೋದಂತೆ ನನ್ನ ಕೈಗಳೆ ಸೋತುಹೋದವು. ಬೆಳಗಿನಜಾವದ ಮುಂಗೋಳಿ ಕೂಗಿತು. ಕೊನೆಯದಾಗಿ ಈ ಸಂಕಲನದ "ಮದುವಣ್ಣ" ಮುಗಿಯಿತು. ಚಿಕ್ಕಮ್ಮ ಸೋಲಲಿಲ್ಲ. ನಾನೇ ಸೋಲಬೇಕಾಯಿತು. ಅಲ್ಲಿಗೆ ನಿಲ್ಲಿಸಿ ಮರುದಿನ ದಬ್ಬೆಘಟ್ಟದ ಕೆಲವು ಬಂಧುಗಳಿಂದಲೂ ಅಷ್ಟಿಷ್ಟು ಹಾಡುಗಳನ್ನು ಸಂಗ್ರಹಿಸಿಕೊಂಡೆ. ಚಿಕ್ಕಮ್ಮ ಇನ್ನೂ ಬದುಕಿದ್ದಾರೆ. ಅವರಿಂದ ಊರಿನ ಹೆಣ್ಣುಮಕ್ಕಳು ನೂರಾರು ಹಾಡುಗಳನ್ನು ಕಲಿಯುತ್ತಿದ್ದಾರೆ. ಆ ಪೂಜ್ಯೆಯನ್ನು ನಾನು ಗೌರವದಿಂದ ನೆನೆಯುತ್ತೇನೆ.

ಐದು ವರ್ಷಗಳ ಹಿಂದೆ ಬೇಸಿಗೆ ರಜದಲ್ಲಿ ಮೈಸೂರಿನಿಂದ ಊರಿಗೆ ಹೋದೆ. ಮಧುಗಿರಿ ಕಡೆಯಿಂದ ನಮ್ಮ ತೋಟದಲ್ಲಿ ಕೆಲಸಕ್ಕಾಗಿ ಕೆಲವು ಒಡ್ಡರು ಬಂದು ಅಲ್ಲಿಯೇ ಗುಡಿಸಿಲನ್ನು ಹಾಕಿಕೊಂಡು ಇದ್ದುದನ್ನು ಕಂಡೆ ಅವರಿಗೆ ನನ್ನ ಪರಿಚಯವಿರಲಿಲ್ಲ. ನಾನು ತೋಟದ ಕಡೆ ಹೋದಾಗ ಹೆಂಗಸೊಬ್ಬಳು ರಾಗೀಬೀಸಿಕೊಂಡು ಹಾಡುತ್ತಿದ್ದುದನ್ನು ಕೇಳಿ ಅತ್ತ ಹೋದೆ. ಹಾಡು ನಿಂತುಹೋಯಿತು. ಅಲ್ಲಿ ಗುಡಿಸಲ ಹೊರಗೆ ಕುಳಿತಿದ್ದ ಒಡ್ಡರವನನ್ನು ಹೇಳಿಸುವಂತೆ ಒತ್ತಾಯ ಪಡಿಸಿದೆ. ಅವನು ಮೊದಮೊದಲು ಒಪ್ಪದಿದ್ದರೂ ಈಚಲಮರದಪ್ಪನ ಕಾಣಿಕೆಯಾಗಿ ಅಷ್ಟು ಕೈಗೆ ಹಚ್ಚಿದಮೇಲೆ ಅಲ್ಲೆ ಕುಳಿತಿದ್ದ ಮುದುಕಿ ದೊಡ್ಡಮ್ಮ ಮತ್ತು ವೆಂಕಟಮ್ಮ ಇಬ್ಬರೂ ಹಾಡುವಂತೆ ಹೇಳಿದ. "ಮುಳೆರಾಯ ಮಾರ್ಹೆಣ್ಣು" "ನಾ ನಂಜುಂಡಲಿಂಗ ಬಿಡೆ ಸೆರಗ"ಇವು ಅವರ ಕಾಣಿಕೆಗಳು. ನಾನು ಅಪರಿಚಿತನಂತೆ ಹೋಗದಿದ್ದರೆ ಆ ಹಾಡುಗಳು ಲಭ್ಯವಾಗುತ್ತಿರಲಿಲ್ಲ. ನನ್ನ

ವಿಷಯವನ್ನು ಅನಂತರ ತಿಳಿದು ಅವರು ಪೇಚಾಡಿಕೊಂಡರು. ಅನಂತರ ಒಂದು ಸೊಲ್ಲೂ ಅವರಿಂದ ಹೊರಡಲಿಲ್ಲ.

"ಬಂಜೆ ಹೊನ್ನಮ್ಮ" ಹತ್ತಿರದ ಚಿಗರನಹಳ್ಳಿಯಲ್ಲಿ ಸಂಗ್ರಹಿಸಿದ್ದು. ಸಂಜೆ ಆರು ಘಂಟೆಗೆ ಕೆಲವು ಗೆಳೆಯರನ್ನು ಕೂಡಿಕೊಂಡು ನಮ್ಮ ತೋಟವನ್ನು ದಾಟಿ ಹತ್ತಿರದ ಬೋರೆಯನ್ನಿಳಿದರೆ ಚಿಗರನಹಳ್ಳಿ ಸಿಗುತ್ತದೆ. ಅಲ್ಲಿನ ಗಾಣಿಗರು ಮತ್ತು ಒಕ್ಕಲು ಮಕ್ಕಳಿಂದ ಹಾಡುಗಳನ್ನು ಹೇಳಿಸಿ ಮರುದಿನ ಮುಂಜಾನೆ ಹೊತ್ತಿಗೆ ಹಿಂದಿರುಗುವುದು ಆಗಾಗ ಒಂದು ಹವ್ಯಾಸವಾಗಿಹೋಗಿತ್ತು.

ಈ ಸಂಗ್ರಹ ಬೇರೆ ಬೇರೆಯವರಿಗೆ ಬೇರೆ ಬೇರೆ ಅರ್ಥಕ್ಕೆ ಎಡೆ ಕೊಟ್ಟು ಆ ಸುತ್ತಿನಲ್ಲಿ ಈ ಕಾರ್ಯವನ್ನು ಕೂಡಲೆ ನಿಲ್ಲಿಸುವಂತೆ ಮನೆಯವರ ಕಟ್ಟಾಜ್ಞೆಯಾಯಿತು. ಕೆಲವರು ಇದರಿಂದ ಓದಿಗೆ ಅಡ್ಡಿ ಬರುತ್ತದೆಂದು ಈ ರೀತಿಯ ಸಂಗ್ರಹ ನಿಷ್ಪ್ರಯೋಜಕವಾದುದೆಂದು ಮನೆಯವರಿಗೆ ದೂರು ಹೇಳಿದರೆ, ಮತ್ತೆ ಕೆಲವರು ಕುಹಕದ ಮಾತುಗಳ ಮಾಲೆಯನ್ನು ಹಾಕಿ ಗೌರವಿಸಿದರು. ಅನೇಕ ವಿದ್ಯಾವಂತರೂ ಇದರ ಬಗೆಗೆ ನಿರಾಧಾರವನ್ನು ತೋರುತ್ತಿದ್ದುದಂತೂ ತುಂಬ ವ್ಯಥೆಯನ್ನುಂಟುಮಾಡುತ್ತಿತ್ತು. ಅಷ್ಟರಲ್ಲಿ ಮೊದಲನೆಯ ಮಹಾಚುನಾವಣೆ ತಲೆಹಾಕಿ ಜನರ ಆಸಕ್ತಿಯೆಲ್ಲಾ ಅತ್ತ ಹೊರಳಿ ನನ್ನ ಕೆಲಸವು ಅಷ್ಟಕ್ಕೆ ಮಟುಕಾಯಿತು.

ಒಡ್ಡರಬೋಯಿ ಹಾಗೂ ನಾಗರಗನ್ನೆ ನನಗೆ ಸಿಕ್ಕಿದುದು ಈಗ್ಗೆ ಐದು ವರ್ಷಗಳ ಹಿಂದೆ. ನಮ್ಮ ಊರಿಗೆ ಹದಿನೈದು ಮೈಲಿಗಳ ದೂರದಲ್ಲಿ ಬಿಂಡಿಗನವಿಲೆಯ ಸಮೀಪದಲ್ಲಿರುವ ಹೊನ್ನಾವರ, ಕ್ಯಾತನಹಳ್ಳಿ, ಮಾದಹಳ್ಳಿ ಮುಂತಾದ ಹಳ್ಳಿಗಳಪ್ರವಾಸಕಾಲದಲ್ಲಿ-ಅಂದು ಬಿಂಡಿಗನವಿಲೆವರೆಗೆ ಬಸ್ಸಿನಲ್ಲಿ ಹೊರಟವರು ಅಲ್ಲಿಂದಾಚೆಗೆ ಆರುಮೈಲಿಗಳು ಕಾಲುನಡಿಗೆಯಲ್ಲೆ ಸಾಗಬೇಕಾಯಿತು. ಸುತ್ತಲು ವಿಸ್ತಾರವಾದ ಬೆಟ್ಟಗಾಡು ವಿಕಾರವಾಗಿ ದಾರಿಯುದ್ದಕ್ಕೂ ಕವಿದ ಮುತ್ತುಗದ ತೋಪು—ಅಗಲೆ ಮಬ್ಬು ಕವಿಯುತ್ತಿದುದರಿಂದ, ಆದಷ್ಟುಬೇಗ ಊರು ಸೇರಲು ಕಾಲುಗಳು ವೇಗವಾಗಿ ಸಾಗುತ್ತಿದ್ದವು. ಕತ್ತಲಲ್ಲಿಯೆ ಕಾಡುಹಾದಿಯನ್ನು ಹಾದು ಕ್ಯಾತನ

ಹಳ್ಳಿಯನ್ನು ಸೇರಿದೆವು. ಅಂದು ಅಲ್ಲಿ ಮಾರಿಯ ಹಬ್ಬ. ಸಂಭ್ರಮದಿಂದ ಹಬ್ಬವನ್ನು ಆಚರಿಸಿ ಊರಮುಂದಿ ಹಾಲುಚೆಲ್ಲಿದ ಬೆಳದಿಂಗಳಲ್ಲಿ ಕುಳಿತು ಆನಂದ ಪರವಶರಾಗಿದ್ದರು. ಹಾಗೆಯೆ ಜೊತೆಯವರನ್ನು ಕೂಡಿಕೊಂಡು ಊರಹೊರಗೆ ಬಂದಾಗ ಅಲ್ಲಿದ್ದ ಮೇದರ ನಂಜಪ್ಪ ನಮಸ್ಕರಿಸಲು ಒಂದೆರಡು ನಿಮಿಷ ಅಲ್ಲಿ ನಿಂತು ಮಾತಾಡುವಲ್ಲಿ ಅಲ್ಲಗೆ ಸಮೀಪದ ಹರಿಜನ ಕೇರಿಯಿಂದ ಮಧುರವಾದ ಗಾನ ಕೇಳಿ ಬರತೊಡಗಿತು. ನಂಜಪ್ಪನನ್ನು ಕೂಡಿಕೊಂಡು ಆ ಕೇರಿಯನ್ನು ಪ್ರವೇಶಿಸಿದೆವು. ಮೊದ ಮೊದಲು ಹರಿಜನ ವನಿತೆಯರು ಹಾಡುಗಳನ್ನು ಹೇಳಲು ಹಿಂಜರಿದರೂ ನನ್ನ ಜೊತೆಯಲ್ಲಿ ಬಂದಿದ್ದವರ ಬಲವಂತದಿಂದ ಮೂವರು ಹಾಡಲು ಆರಂಭಿಸಿದರು. "ನಾಗರಗನ್ನೆ" ಆರಂಭವಾದುದು ಹೀಗೆ. ಒಂದು ಲ್ಯಾಟೀನನ್ನು ತರಿಸಿ ಕೈಯಲ್ಲಿದ್ದ ಪುಸ್ತಕದಲ್ಲಿ "ನಾಗರಗನ್ನೆ" ಬಿಡಿಸತೊಡಗಿದೆ. ಸ್ಪರ್ಧೆಯಿಂದ ಆ ಮೂವರು ವನಿತೆಯರೂ ಹಾಡುವಾಗ ಬರೆದುಕೊಳ್ಳುತ್ತಿದ್ದ ನನ್ನ ಕೈಯೆ ಅನೇಕಬಾರಿ ಸೋಲುತ್ತಿತ್ತು. ಬರವಣಿಗೆಯಲ್ಲಿದ್ದ ನನ್ನನ್ನು ಸೋಲಿಸುವುದಾಗಿ ಹಾಡುತ್ತಾ ಹೊರಟ ಅವರ ಉತ್ಸಾಹವನ್ನು ದೀರ್ಘ ಕಥನಗಳನ್ನು ನೆನಪಿನಲ್ಲಿಟ್ಟುಕೊಂಡು ಲೀಲಾಜಾಲವಾಗಿ ಹೇಳುತ್ತಿದ್ದ ಅವರ ಸ್ಮರಣೆ ಶಕ್ತಿಯನ್ನು ಕಂಡು ಬೆರಗಾದೆ. ಅನೇಕ ಹಾಡುಗಳು ಮುಗಿದೆವು. "ನಾಗರಗನ್ನೆ" ಆ ರಾತ್ರಿ ಮುಗಿಯಲಿಲ್ಲ. ಕೇರಿಯವರೆಲ್ಲ ನಿದ್ರೆ ಹೋದರು. ಬೆಳದಿಂಗಳು ಉಲ್ಲಾಸವನ್ನು ತರುತ್ತಿತ್ತು. ಹರಿಜನರ ಕೇರಿಯ ನಡುವೆ ನಮ್ಮ ಕಾರ್ಯೋತ್ಸಾಹ ಸಾಗಿಯೇ ಇತ್ತು. ಬೆಳಗಿನ ಬೆಳ್ಳಿ ಮೂಡುವ ಹೊತ್ತಿಗೆ ನಾನೆ ಲೇಖನಿಯನ್ನು ನಿಲ್ಲಿಸಿ ಮನೆಯದಾರಿ ಹಿಡಿಯ ಬೇಕಾಯಿತು.

ಮರುದಿನ ಹರಿಜನರೆಲ್ಲ ಕೆಲಸಕ್ಕೆ ಹೋದಮೇಲೆ ಏನು ಮಾಡಲು ತೋಚದ ನನಗೆ ಅಲ್ಲಿಯ ಯುವಕ ರೈತನೊಬ್ಬನ ಪರಿಚಯವಾಯಿತು. ಆತ ಉತ್ಸಾಹದಿಂದ ತನ್ನ ಹೊಸ ಮಡದಿ ಚನ್ನಮ್ಮನನ್ನು ಕರೆತಂದು ಹಾಡುವಂತೆ ಹೇಳಿದ. ಚನ್ನಮ್ಮ ಆಗತಾನೆ ಆ ಊರಿಗೆ ಕಾಲಿಟ್ಟಿದ್ದವಳು ಮೊದಮೊದಲು ನಾಚುತ್ತ ಹೇಳಲಾರಂಬಿಸಿದವಳು. ಕಣ್ಣಲ್ಲಿ ನೀರು ತಂದು

ಕೊಂಡಳು. ಅಣ್ಣಯ್ಯನ ಮೇಲೆ ಹಾಡುವಾಗಲಂತೂ ಅವಳ ಕಂಠ ಬಿಗಿದು ಬಂತು ನನ್ನ ಕುತೂಹಲದ ಪ್ರಶ್ನೆಗೆ ಆಕೆ ಕೊಟ್ಟ ಉತ್ತರ ನನ್ನ ಕರುಳನ್ನು ಹಿಂಡಿತು. ಆಕೆಯ ಅಣ್ಣ ಹಾವು ಕಡಿದು ಮೃತನಾದನಂತೆ. ಒಬ್ಬಳೆ ತಂಗಿಯನ್ನು ತುಂಬ ಪ್ರೀತಿಸುತ್ತಿದ್ದ–ತಂದೆಗೆ ಒಬ್ಬನೆ ಮಗನಾದ ತನ್ನ ಅಣ್ಣಯ್ಯ ಕಣ್ಮರೆಯಾದಮೇಲೆ ಆ ದುಃಖದಲ್ಲಿಯೆ ಆಕೆ ಅನೇಕ ಹಾಡುಗಳನ್ನು ಮರೆತುಬಿಟ್ಟಳಂತೆ. "ಒಡ್ಡರಬೋಯಿ" ಆ ನಾರೀಮಣಿ ಕರುಣಿಸಿದ ಒಂದು ಜನಪದ ಸಾಹಿತ್ಯ ಕುಸುಮ.

ಎಂದಿನಂತೆ ಸಂಜೆ ಹರಿಜನಕೇರಿಗೆ ತೆರಳಿದೆ. ಮತ್ತೆ ಆ ಮೂವರೆ ಬಂದು ಮುಂದುವರಿಸಿದರು. ರಾತ್ರಿ ಬಹಳ ಹೊತ್ತಿನವರೆಗೂ ಬರವಣಿಗೆ ಸಾಗಿದರೂ "ನಾಗರಗನ್ನೆ" ಮುಗಿಯಲಿಲ್ಲ. ನೆನ್ನೆರುಳು ಯಾರಿಗೂ ಸರಿಯಾಗಿ ನಿದ್ದೆ ಇಲ್ಲ. ಹಗಲೆಲ್ಲ ಕೆಲಸಮಾಡಿ ಹರಿಜನರು ಸೋತಿದ್ದಾರೆ. ಕೇರಿಯವರೆಲ್ಲ ಸುಖನಿದ್ರೆಯಲ್ಲಿದ್ದಾಗ ಈ ಮೂವರೆ ಕುಳಿತು ಹಾಡುವುದನ್ನು ಕೇಳಲು ಆಪ್ಯಾಯ ಮಾನವಾಗಿದ್ದರೂ ನಟ್ಟಿರುಳು ಜಾರಿ ಮುಂಜಾವ ಸಮೀಪಗೊಂಡಂತೆಲ್ಲ, ಒಂದು ಬಗೆಯ ಆಯಾಸ ತೋರತೊಡಗಿ ರಾತ್ರಿ ಮೂರು ಘಂಟೆ ವೇಳೆಗೆ ಬರವಣಿಗೆ ನಿಲ್ಲಬೇಕಾಯಿತು. "ನಾಗರಗನ್ನೆ" ಮುಗಿಯಲೆ ಇಲ್ಲ.

ಮಾರನೆ ರಾತ್ರಿಯೂ "ನಾಗರಗನ್ನೆ" ಮುಂದುವರಿದಳು. ರಾತ್ರಿ ಕದನ ಮಾಡಿಗಿತು. ಒಮ್ಮೆ ಇದ್ದಕ್ಕಿದ್ದಂತೆಯೆ ಮೂರು ದಿನಗಳಿಂದ ಬೇಸತ್ತಿದ್ದ ನಾಟೇನು ನಾಲ್ಕಾರು ಸಾರಿ ತೊಂದರೆ ಕೊಟ್ಟಿತು. ಬೆಳದಿಂಗಳ ಸಹಾಯದಿಂದ ಬರವಣಿಗೆ ಸಾಗಿತು. ನನಗೆ ತಲೆಶೂಲೆ ಬಂದಂತಾಗುತ್ತಿತ್ತು. ತೆಳ್ಳಗೆ ಜ್ವರವೂ ಕಾಣಿಸಿಕೊಂಡಂತಾಗಿ ಏನು ಮಾಡಲು ತೋಚದೆ, ಯಾಂತ್ರಿಕವಾಗಿ ಬರೆದುಕೊಳ್ಳುತ್ತಲೆ ಇದ್ದೆ. ನನ್ನ ಬಂಧುಗಳು ಅಷ್ಟರಾತ್ರಿಯಲ್ಲಿಯೂ ಕಾಫಿಯನ್ನು ಒದಗಿಸಿಕೊಟ್ಟದ್ದರಿಂದ ಹೇಗೂ ಬರವಣಿಗೆ ಸಾಗುತ್ತಿತ್ತು. ಆ ಮೂವರು ಮಾತ್ರ ಹಾಡಿನಲ್ಲಿ ಹಿಂದು ಬೀಳಲಿಲ್ಲ. ಆದರೆ ಬೆಳಗಿನ ಜಾವ ಐದು ಘಂಟೆಯ ವೇಳೆಗೆ ಲೇಖನಿಯಲ್ಲಿ ಶಾಯಿ ಮುಗಿದು ನನಗೆ ಎದೆ ಹೊಡೆದುಹೋದಂತಾಯಿತು. ಆ ಹಳ್ಳಿಯಲ್ಲಿ

ಶಾಯಿಯಾದರೂ ಎಲ್ಲಿ ಸಿಗಬೇಕು ? ಮತ್ತೊಮ್ಮೆ ಇಲ್ಲಿಗೆ ಬಂದು ಇವರನ್ನು ಹಿಡಿದು ಹಾಡಿಸಲು ಸಾಧ್ಯವಾಗಲಾರದ ಸ್ಥಿತಿ. ಕಂಗೆಟ್ಟು ಮನೆಗೆ ಮರಳಬೇಕಾಯಿತು. ಅಲ್ಲಿಗೆ ಮೂರು ಮೈಲಿಗಳದೂರದ ಹೊನ್ನಾವರಕ್ಕೆ ಮರುದಿನ ಯಾರನ್ನೋ ಕಳುಹಿಸಿ ಶಾಯಿಯನ್ನು ತರಿಸಬೇಕಾಯಿತು. ಆ ದಿನವೆ ಊರಿಗೆ ಮರಳಬೇಕೆಂದು ಮನೆಯವರು ಒತ್ತಾಯ ಪಡಿಸಿ ಹೇಳಿ ಕಳುಹಿಸಿದ್ದರು. ಏನೋ ಕುಂಟು ನೆಪ ಹೇಳಿ ಉಳಿದುಕೊಂಡೆ. ಮತ್ತೆ ಆ ಮೂರು ಹರಿಜನ ವನಿತೆಯರನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಆ ಮೂವರಲ್ಲಿ ಒಬ್ಬಾಕೆಯಾದ ಕೆಂಪಮ್ಮನೆಂಬ ಯುವತಿಯ ಸಹಾಕಾರವನ್ನು ಮಾತ್ರ ನಾನು ಎಂದಿಗೂ ಮರೆಯಲಾರೆ. ಆಕೆ ಅವಿವಾಹಿತ ಯುವತಿ. ಅವಳನ್ನು ಯಾರೊ ಕೇಳಲು ಬರುತ್ತಾರೆಂಬ ಸುದ್ದಿ ಇದ್ದುದರಿಂದ ಕೆಲಸಕ್ಕೆ ಹೋಗದೆ ಕೇರಿಯಲ್ಲೆಯೆ ಉಳಿದುಕೊಂಡಿದ್ದಳು. ಹೇಳಿ ಕಳುಹಿಸಿದೊಡನೆಯೆ ಮನೆಯ ಬಳಿಗೆ ಬಂದು ಆಕೆ "ನಾಗರಗನ್ನೆ" ಯನ್ನು ಮುಂದುವರಿಸದಿದ್ದರೆ ಆ ಕಥೆ ಇಂದಿಗೂ ಮುಗಿಯುತ್ತಿರಲಿಲ್ಲವೇನೋ! "ನಾಗರಗನ್ನೆ" ಮುಗಿಯುವುದಕ್ಕೂ ಆಕೆಯನ್ನು ಕೇಳುವವರು ಬಂದಿದ್ದಾರೆ ಬರಬೇಕೆಂದು ಸುದ್ದಿ ಬರುವುದಕ್ಕೂ ಸರಿಯಾಯಿತು. ನಾನು ಆ ಸೋದರಿಯನ್ನು ಮನಸ್ಸಿನಲ್ಲಿಯೇ ವಂದಿಸಿದೆ. ಆಕೆಯ ಸಹಾಕಾರಕ್ಕೆ ನಾನೆಷ್ಟು ಋಣಿಯಾದರೂ ಸಾಲದು. ಆ ಊರಿನ ಚನ್ನಮ್ಮ ಮತ್ತು ಕೆಂಪಮ್ಮ ಈ ಇಬ್ಬರನ್ನು ಎಂದೆಂದಿಗೆ ತಾನೆ ಮರೆಯಲು ಸಾಧ್ಯವಾದೀತು. ಅವರ ನಯವಿನಯ ವಿನಮ್ರ ನಡೆನುಡಿಗಳು ನನ್ನನ್ನು ಮುಗ್ದಗೊಳಿಸಿದವು. ಆ ಕೊಳಚೆಯ ನಡುವೆ ಎಂತಹ ಸುಸಂಸ್ಕೃತ ಮನಸ್ಸಿನ ಸ್ತ್ರೀರತ್ನಗಳು ಅಡಗಿವೆ. ಆ ಮನಸ್ಸು ಅಷ್ಟು ಸುಸಂಸ್ಕೃತವಾದುದರಿಂದಲೆ ಅವರಲ್ಲಿ ಅಂತಹ ಸಾಹಿತ್ಯ ಮನೆ ಮಾಡಿಕೊಂಡಿರುವುದು.

ನಾಲ್ಕುವರ್ಷಗಳ ಹಿಂದಿನ ಮಾತು ಹಿರಿಸಾವೆಯಿಂದ ಬಸ್ಸು ತಡವಾಗಿ ಬಂದಿತು. ತೋಟದ ಬಳಿಯೆ ಬಸ್ಸನ್ನಿಳಿದು ಓಣಿಯ ಮುಕಾಂತರ ಮನೆಯ ದಾರಿ ಹಿಡಿದಾಗ–ಹತ್ತಿರದ ಹರಿಜನರ ಕೇರಿಯ ಕಡೆ ಯಾರೋ ಮಧುರವಾಗಿ ಹಾಡುತ್ತಿದ್ದದು ಕೇಳಿ ಬಂದಿತು. ನನ್ನ ಕಾಲುಗಳು ಅತ್ತ

ನಡೆದವು. ನನ್ನ ಆಗಮನದಿಂದ ಅಲ್ಲಿ ತುಸು ಗಜಿಬಿಜಿಯಾಯಿತು ಇಲ್ಲೇಕೆ ಬಂದಿರಪ್ಪ ? ಎಂಬ ಮಾತುಗಳು ಕೇಳಿ ಬಂದವು. ಹಾಡುತ್ತಿದ್ದವರು ಯಾರೆಂಬುದನ್ನು ಗೊತ್ತು ಹಚ್ಚುವುದೇ ಕಷ್ಟವಾಯಿತು. ಕೊನೆಗೆ ಕಿರಿ ಸೀವೆ ನಂಜಯ್ಯ ಸಿಕ್ಕಿಬಿದ್ದ. ಆಗಲೆ ವಯಸ್ಸಾದವ. ವಿಧುರ. ನಮ್ಮೂರಿನ ಹಬ್ಬ ಹುಣಿಮೆಗಳಲ್ಲಿ ಕೋಲಾಟ ತಪಟೆಗಳಲ್ಲಿ ಹಾಡುವ ಮುಂದಾಳು. ಒಂದು ದಿನ ಅವನನ್ನು ಹಿಡಿದುಹಾಕಬೇಕೆಂಬ ನನ್ನ ಪ್ರಯತ್ನ ಇಂದು ನೆರವೇರುವಂತೆ ಕಂಡಿತು.

ಮನೆಯವರಿಗಂಜಿಕೊಂಡು ಅತ್ತ ಹೋಗದಿದ್ದ ನಾನು ಇಂದು ಯಾರು ಅರಿಯದಂತೆ ಭದ್ರವಾಗಿ ಅಲ್ಲಿ ಕುಳಿತೆ. ನಂಜಯ್ಯ ದೊಡ್ಡ ಮನಸ್ಸುಮಾಡಿದ ಅವನ ಕಂಠ ನನ್ನನ್ನು ಮರುಳುಮಾಡಿತು. ಇಂತಹ ಮಧುರವಾದ ಹಾಡನ್ನು ಮೃತ ಲೇಖಿನಿ ಕೊಲೆಮಾಡುತ್ತಿದೆಯೆ ಎನಿಸಿತು ನನಗೆ. ಕುಳಿತು ಸುಮ್ಮನೆ ಕೇಳಿಬಿಡಲೆ ಎನಿಸುತಿತ್ತು. "ಹೂವು ಮಾರುವ ದೊರೆ ಚೆಲುವ" "ಮರೆಯಾದ ಮಲಕಪ್ಪ" ಇವು ನಂಜಯ್ಯನ ಕಾಣಿಕೆಗಳು. ಮತ್ತೊಮ್ಮೆ ಅವನು ದನ ಮೇಯಿಸುತ್ತ ತೋಟದ ಬಳಿ ಸಿಕ್ಕಾಗ ನನ್ನ ವತ್ತಾಯಕ್ಕೆ ಕೆಲವು ನೀಳ್ಗವನಗಳ ಸ್ವಲ್ಪ ಭಾಗಗಳನ್ನು ಹಾಡಿದ. "ಮಡಿವಾಳ ಮಾಚಯ್ಯ" "ಮಾದರ ಚೆನ್ನಯ್ಯ" "ಹೊಲೇರ ಪೊನ್ನಯ್ಯ" ಈ ಮುಂತಾದ ಹಾಡುಗಳು ತ್ರಿಪದಿಯಲ್ಲಿ ಬರುತ್ತವೆ. ಅವನಿಂದ ಅವನ್ನು ಪೂರ್ಣ ಸಂಗ್ರಹಿಸುವ ಸಾಹಸದಲ್ಲಿ ನಾನಿನ್ನೂ ಯಶಸ್ವಿಯಾಗಿಲ್ಲ.

"ನುಚ್ಚಾಯ್ತು ನೀರ ಹೊಳೆ ನಾಗೆ" "ಗಿರಿಜಾ ಮಲ್ಲಯ್ಯ" ಕೆಲವು ಭಾಗಗಳನ್ನು ನಮ್ಮೂರಿನ ಕುರಿಯ ಹುಡುಗರಿಂದ ಕಸಿದುಕೊಂಡವು. ಇವೆರಡನ್ನು ಹೇಳಿದ ಹುಡುಗನ ಹೆಸರು ಮರೆತುಹೋಗಿದೆ. ಆದರೆ ಅವನ್ನು ಬರೆದುಕೊಂಡ ನೆನಪೂ ಮಾತ್ರ ಅಚ್ಚಳಿಯದೆ ಉಳಿದಿದೆ. ಅಂದು ಬೇಸಿಗೆಯ ಒಂದು ದಿನ. ತೋಟಕ್ಕೆ ಕುರಿಯ ಗುಂಪೆಯನ್ನು ತಡೆದಿದ್ದರು. ರಾತ್ರಿ ಅಲ್ಲಿಯೆ ಔತಣವನ್ನು ಮಾಡಿಕೊಂಡು ಹತ್ತಾರು ಹುಡುಗರು ಕೇಕೆ ಹಾಕುತ್ತ ಬಗೆಬಗೆಯ ಹಾಡುಗಳನ್ನು ಹೇಳುತ್ತ ಇರುಳನ್ನು ಕಳೆಯುವ ರೀತಿ ಆಮೋದಕಾರಿಯಾಗಿರುತ್ತದೆ. ಆ ಇರುಳು ಅವರ ಗುಂಪನ್ನು

ಹೇಗೊ ನಾನು ಸೇರಿಕೊಂಡೆ. ಹಗಲಿನಲ್ಲಿ ಅವರು ಅವರಿವರ ತೋಟ ದಿಂದ–ಹಾರಿಸಿದ ಹಲಸು, ಬಾಳೆ, ಸೀಬೆ....ಮುಂತಾದ ಹಣ್ಣುಗಳಲ್ಲಿಯೂ ನಾನು ಭಾಗಿಯಾದೆ. ಯಾರಿಗೂ ಕಾಣದಂತೆ ಮರಳಿನಲ್ಲಿ ಹೂತಿಟ್ಟು– ರಾತ್ರಿ ತೆಗೆದು ಅವುಗಳನ್ನು ಆನಂದದಿಂದ ಮೆಲ್ಲುತ್ತ ಮಂದೆಯನ್ನು ಕಾಯುವ ಆ ಮಂದಿ ಎಂತಹ ಪುಣ್ಯವಂತರು. ಅವರು ಹಾಡುವ ಪ್ರೇಮ ಗೀತೆಗಳು ವಿನೋದಪೂರ್ಣ ನುಡಿಗಳು ಅವನ್ನು ಕೇಳಿಯೆಆನಂದಿಸಬೇಕು. ಒಂದು ಇರುಳನ್ನು ಅವರೊಡನೆ ಕಳೆದೆ ನಲಿಯಬೇಕು.

ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೋಕಿನ ಕಬ್ಬಾಳಿನಲ್ಲಿ ಅಲ್ಲಿನ ಐತಿಹಾಸಿಕ ಘಟನೆಗಳನ್ನು ಕುರಿತು ಜನ ಹಾಡುವರೆಂಬ ಸುದ್ದಿಯನ್ನು ತಿಳಿದು ನನ್ನ ಮಿತ್ರರೊಬ್ಬರಿಂದ ಆ ಗ್ರಾಮದ ವಿದ್ಯಾವಂತರೊಬ್ಬರಿಗೆ ಪರಿಚಯ ಪತ್ರವನ್ನು ಪಡೆದು ನಾಲ್ಕು ವರ್ಷಗಳ ಹಿಂದೆ ಆ ಊರಿಗೆ ಹೊರಟೆ. ಕನಕಪುರವನ್ನು ಬಿಟ್ಟಾಗಲೆ ಸಂಜೆಯಾಗುತ್ತಿದ್ದು, ಅಲ್ಲಿಂದ ಏಳು ಎಂಟು ಮೈಲಿಗಳ ದೂರದ ಸಾತನೂರನ್ನು ತಲುಪುವುದರಲ್ಲಿ ಸಂಪೂರ್ಣ ಕತ್ತಲಾಗಿಹೋಯಿತು. ಅಲ್ಲಿಂದ ಹತ್ತಿರದ ಕಬ್ಬಾಳಿಗೆ ಬಸ್ಸಿನ ಅನುಕೂಲವಿರಬಹುದೆಂದು ಹೋಗಿದ್ದ ನಾನು ನಿರಾಶನಾಗಬೇಕಾಯಿತು. ಅಪರಿಚಿತ ಸ್ಥಳ. ಎಲ್ಲಿ ತಂಗುವುದು; ಯಾರನ್ನು ಕಾಣುವುದು; ದಿಕ್ಕೆ ತೋಚದಂತಾಯಿತು. ನಾನು ಕೊಂಡುಹೋಗಿದ್ದ ಪತ್ರದ ಆಧಾರದ ಮೇಲೆ ಯಾರೊ ಪುಣ್ಯಾತ್ಮರು ಒಂದು ಬಾಡಿಗೆ ಬೈಸಿಕಲನ್ನು ಕರುಣಿಸಿ ದರು. ಆಗಲೆ ಸಂಜೆ ನಾಲ್ಕರ ಸಮಯ. ಸುತ್ತಲೂ 'ಬಿಕೊ' ಎನ್ನುವ ಬಯ ಲುಪ್ರದೇಶ ಕವಿದ ಕಗ್ಗತ್ತಲು.ಕಬ್ಬಾಳದುರ್ಗ ಬಸ್ಸಿನಲ್ಲಿ ಬರುವಾಗ ರಸ್ತೆಯ ಬದಿಯಲ್ಲೆ ಇರುವಂತೆ ತೋರುತ್ತಿದ್ದುದು ಆ ದಿಕ್ಕಿನಲ್ಲಿ ಹೊರಟಾಗ ದೂರ ವಾಗತೊಡಗಿತು. ರಸ್ತೆಯ ಎರಡು ಬದಿಯಲ್ಲೂ ಕಿಕ್ಕಿರಿದ ಹೆಮ್ಮರಗಳು ಆ ನೀರವ ನಿರ್ಜನ ಮಾರ್ಗದಲ್ಲಿ ಹೊರಟ ನನ್ನ ಎದೆ ಕೊಂಚ ಅಳುಕಿತು. ಆದರೆ ದೂರದಲ್ಲೆಲ್ಲೊ ಮತ್ತೊಂದು ಬೈಸಿಕಲ್ಲಿನ ಬೆಳಕು ಕಂಡು ಧೈರ್ಯ ದಿಂದ ಮುಂದುವರಿಯುವಲ್ಲಿ, ಸಾತನೂರಿಗೆ ಬರುತ್ತಿದ್ದ ಉಪಾಧ್ಯಾಯ ರೊಬ್ಬರು ನನ್ನನ್ನು ಕಬ್ಬಾಳಿನವರವಿಗೂ ಬಿಟ್ಟುಹೋದರು. ಕಬ್ಬಾಳ

ನ್ನೇನೊ ಸೇರಿದೆ, ಆದರೆ ಅವಿದ್ಯಾವಂತ ಮಿತ್ರರು ನನ್ನೊಡನೆ ಸಹಕರಿಸದಿದ್ದುದರಿಂದ ನಿರಾಸನಾಗಬೇಕಾಯಿತು. ಅಲ್ಲಿ ಯಾವ ಹಾಡು ನನ್ನ ಪಾಲಿಗೆ ದೊರೆಯಲಿಲ್ಲ. ಆ ಮಿತ್ರರೆ ಸಂಗ್ರಹಿಸುವುದಾಗಿ ಹೇಳಿದ್ದರು. ಆದರೆ ಇಲ್ಲಿಯವರೆಗೆ ಅವರು ಆ ಕಾರ್ಯವನ್ನು ಎಷ್ಟರಮಟ್ಟಿಗೆ ಮಾಡಿರುವರೊ ನಾನರಿಯೆ. ಮಾಡಿದ್ದರೆ ನಿಜಕ್ಕೂ ಅವರನ್ನು ವಂದಿಸುತ್ತೇನೆ ಯಾರಿಂದಲೊ ಅಂತೂ ಜನಪದ ಸಾಹಿತ್ಯ ಬರವಣಿಗೆಯಲ್ಲಿ ಉಳಿದು ಬಂದರೆ ಸಾಕು.

ಮರುದಿನ ಕನಕಪುರಕ್ಕೆ ಮರಳಿದಾಗ ಆಲ್ಲಿ ಓರ್ವ ಸರ್ ಎಂ. ವಿಶ್ವೇಶ್ವರಯ್ಯ ಯೋಜನೆಯ ಗ್ರಾಮಾಂತರ ಇಸ್ಪೆಕ್ಟರೊಬ್ಬರು ನಾನು ಆ ವೇಳೆಗೆ ಸಂಗ್ರಹಿಸಿ ಪ್ರಕಟಿಸಿದ್ದ ಜನಪದ ಸಾಹಿತ್ಯ ಸಂಕಲನಗಳನ್ನು ಕೊಂಡು ಅವರಿದ್ದ ಮರಳವಾಡಿಯ ಕಡೆಗೆ ಬರುವಂತೆ ಆಹ್ವಾನಿಸಿದರು. ನಾನು ಮೈಸೂರಿಗೆ ಮರಳಿದ ಕೆಲವು ದಿನಗಳಮೇಲೆ ಎರಡು ಮೂರು ಪತ್ರಗಳನ್ನು ಬರೆದು ಆಕಡೆ ಬರುವಂತೆ ಒತ್ತಾಯಪಡಿಸಿದ ಮೇಲೆ ಮತ್ತೆ ಕನಕಪುರಕ್ಕೆ ಹೋಗಿ ಅಲ್ಲಿಂದ ಹಾರೋಹಳ್ಳಿಯ ಮಾರ್ಗವಾಗಿ ಮರಳವಾಡಿಗೆ ಪ್ರಯಾಣ ಬೆಳಸಿದೆ. ಬಿಳಿಕಲ್ಲು ಬೆಟ್ಟದ ಸಾನುವಿನಲ್ಲಿರುವ ಆ ಊರನ್ನು ತಲುಪುವಲ್ಲಿ ಕತ್ತಲಾಗಿತ್ತು. ಅಲ್ಲಲ್ಲಿ ಹಾಡುಗಳನ್ನು ಹೇಳಿಕೊಂಡು ರಾಗೀ ಬೀಸುತ್ತಿದ್ದ ಹಳ್ಳಿಯ ಗೃಹಣಿಯರ ಕಂಠವನ್ನು ಕೇಳಿ ನನಗೆ ರೋಮಾಂಚನವಾಯಿತು. ನಾಡಿನ ಯಾವ ಮೂಲೆಗೆ ಹೋದರೂ ಹೀಗೆ ಜನಪದ ಸಾಹಿತ್ಯ ಕುಸುಮಗಳಿರುವ ಜನಜೀವನದಲ್ಲಿ ಬೆರತು ಅವರ ಬದುಕಿನಲ್ಲಿ ಸುಗಂಧವನ್ನು ತುಂಬಿರುವುದು ಸೋಜಿಗದ ವಿಷಯ.

ಆ ಊರಿನ ಪ್ರಮುಖರೆ ಆದ ನನಗೆ ಪರಿಚಿತ ವ್ಯಕ್ತಿಯೊಬ್ಬರ ಭೇಟಿಯಾಯಿತು. ನಾನು ಬಂದ ಉದ್ದೇಷವನ್ನು ಅವರಿಗೆ ತಿಳಿಸಿದಾಗ— ಅವರು ಆಗ ಜಾರಿಕೊಂಡವರು ಮತ್ತೆ ನನಗೆ ಸಿಗಲೇ ಇಲ್ಲ. ನನ್ನ ಪುಣ್ಯಕ್ಕೆ ಇಸ್ಪೆಕ್ಟರು ದೊರೆತರು. ಅವರ ಕೊಠಡಿಯಲ್ಲೆ ಊಟವಾಯಿತು. ಅನಂತರ ಹಾಡುವವರನ್ನು ಹರಸುತ್ತಾ ಊರಿನಲ್ಲಿ ಹೊರಟಾಗ ಹತ್ತಿರದ ಮನೆಯೊಂದರಲ್ಲಿ ಗಂಡಸರು ಹಾಡುತ್ತಿರುವ ಧ್ವನಿಕೇಳಿ ಅಲ್ಲಿಗೆ ಹೋದೆವು

ಅದು ಈಡಿಗರಮನೆ. ಸುರಬಾಂಡೇಶ್ವರಿಯ ಹಬ್ಬವಾಡಿ ಹಾಡುವುದಕ್ಕಾಗಿಯೇ ನೆರಹಳ್ಳಿಯಿಂದ ಆ ಇಬ್ಬರು ಗಂಡಸರನ್ನು ಕರೆಸಿದ್ದರಂತೆ. ಇರುಳೆಲ್ಲಾ ಆ ಇಬ್ಬರು "ಮೂಗುಡಿ ಕೆಂಪೇಗೌಡ"ನನ್ನು ಕುರಿತ ಹಾಡನ್ನು ಹಾಡಿ ತಣಿದರು. ಮರುದಿನ ಬರೆದುಕೊಳ್ಳುವಂತೆ ಸಹಕರಿಸುವುದಾಗಿ ಬರವಸೆ ಕೊಟ್ಟರು. ಅವರು ಬೆಳಗಾಗುತ್ತಿದ್ದಂತೆಯೆ ಕಣ್ಣಿಗೆ ಕಾಣದಂತೆ ಮಾಯವಾದರು. ಪಾಪ! ಅವರು ಯಾವ ಕಾರ್ಯಾರ್ಥವಾಗಿ ಹೊರಟು ಹೋದರೊ–ಹಗಲಿನಲ್ಲಿ ಹಳ್ಳಿಗರನ್ನು ಕಿಡಿದು ಹಾಡಿಸುವುದು ತುಂಬ ಅಸಾಧ್ಯದ ಮಾತೇ ಸರಿ.

ಅಂತು ಆ ದಿನ ನನ್ನ ಅದೃಷ್ಟವೊ ಎನ್ನುವಂತೆ ಇಸ್ಪೆಕ್ಟರನ್ನು ಹುಡುಕಿಕೊಂಡು ಚೆನ್ನಬಸವನೆಂಬ ಹರಿಜನರಾತ ಅಲ್ಲಿಗೆ ಬಂದನು. ಅವನು ಚೆನ್ನಾಗಿ ಹಾಡಬಲ್ಲನೆಂಬುದು ಇಸ್ಪೆಕ್ಟರಿಗೆ ತಿಳಿದಿತ್ತು. ನೆರೆಯ ವೀರಶೈವರ ಮನೆಯೊಂದರ ಅಂಗಳದಲ್ಲಿ ಕುಳಿತು ಚೆನ್ನಬಸವ ಬಹುಸೊಗಸಾಗಿ ಅನೇಕ ಹಾಡುಗಳನ್ನು ಹಾಡಿದನು. ಇಷ್ಟು ದೂರ ಬಂದು ಸಾರ್ಥಕವಾಯಿತೆಂದುಕೊಂಡೆ ನಾನು. "ಗಿರಿಜ ಮಲ್ಲಯ್ಯ"ಅವರು ಹೇಳಿದ ಹಾಡುಗಳಲ್ಲಿ ಒಂದು. ಅಂದು ಸಂಜೆ ಚೆನ್ನಬಸವ ನನ್ನನ್ನು ಅವರ ಹಟ್ಟಿಗೆ ಕರೆದುಕೊಂಡು ಹೋದನು. ಇಸ್ಪೆಕ್ಟರ ಲ್ಯಾಂಪನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದೆವು. ಅಲ್ಲಿ ಕೆಲವು ಹೆಂಗಸರನ್ನು ಒತ್ತಾಯಪಡಿಸಿ ಕರೆತಂದ. ಕಾರ್ಯಕ್ರಮದ ನಾಂಧಿಯಾಗಿ "ತಬ್ಬಲಿರಾಯ" ನನ್ನು ಅವನೆ ಹಾಡಿದ. ಹೆಂಗಸರೂ ಸ್ಫೂರ್ತಿಗೊಂಡು ಅನೇಕ ಬಿಡಿ ಹಾಡುಗಳನ್ನು ಹೇಳಿದರು. ಅವುಗಳಲ್ಲಿ "ಚೆನ್ನಿಗರಾಯ" ಒಂದು. ಈ ಎರಡು ಅಪೂರ್ವ ಕಥಾರತ್ನಗಳು ನನಗೆ ದೊರೆಯಬೇಕಾದರೆ ಚೆನ್ನಬಸವನ ಸಹಾಕಾರ ಅಪಾರವಾದದ್ದು. ನನ್ನನ್ನು ಅಲ್ಲಿಗೆ ಬರಮಾಡಿಕೊಂಡ ಇಸ್ಪೆಕ್ಟರಿಗೂ ನಾನು ಅತ್ಯಂತ ಋಣಿಯಾಗಿರಬೇಕು. ಸರಕಾರದಿಂದ ಗ್ರಾಮಾಂತರ ಪ್ರದೇಶಗಳಿಗೆ ನಿಯಮಿತರಾಗುವ ಕಾರ್ಯಕರ್ತೃಗಳಲ್ಲಿ ಇಂತಹ ಉತ್ಸಾಹ ಶೀಲರಿದ್ದರೆ "ನಮ್ಮ ಜನಪದ ಸಾಹಿತ್ಯ" ಸಂಗ್ರಹ ಎಷ್ಟು ಹುಲುಸಾದೀತು.

ಅಲ್ಲಿ ಮೂರು ದಿನ ತಂಗಿದ್ದು ಆ ಸುತ್ತಿನ ಕೆಲವು ಹಾಡುಗಳನ್ನು

ಸಂಗ್ರಹಿಸಿಕೊಂಡೇ ಹಿಂದಿರುಗಿದೆ.

ಕಳೆದವರ್ಷ ಎರಡನೆಯ ಬಾರಿಗೆ ಮಲೆನಾಡು ಯಾತ್ರೆಯನ್ನು ಕೈಗೊಂಡೆ. ಈ ಹಿಂದೆ 1954 ರಲ್ಲಿ ಮಲೆನಾಡಿನ ಕೆಲವು ಹಳ್ಳಿಗಳಲ್ಲಿ ಸಂಚರಿಸಿ ಅನೇಕ ಬಿಡಿಹಾಡುಗಳನ್ನು ಸಂಗ್ರಹಿಸಿಕೊಂಡು ಬಂದಿದ್ದೆ. ಈ ಬಾರಿ ತೀರ್ಥಹಳ್ಳಿ ಸಮೀಪದ ಕೆರೆಕೊಪ್ಪದ ನನ್ನ ಗೆಳೆಯರ ಮನೆಯಲ್ಲಿ ಇಳಿದುಕೊಂಡಿದ್ದಾಗ—ರಾತ್ರಿ ಊಟವನ್ನು ಮುಗಿಸಿ ಹೊರಗೆ ಬಂದಾಗ ಬೆಳದಿಂಗಳು ಸುತ್ತಲು ಕವಿದ ನಿಬಿಡಾರಣ್ಯದ ಮೇಲೆ ಪ್ರಶಾಂತವಾಗಿ ಹರಡಿತ್ತು. ಮನೆಯ ನೆರೆಯಲ್ಲಿಯೇ ಮರಗಳ ಗುಂಪಿನ ಬದಿಯಲ್ಲಿ ಸುಮಧುರಗಾನ ಕೇಳಿಬರತೊಡಗಿ—ನನಗೆ ಆಶ್ಚರ್ಯವಾಯಿತು. ವಿಚಾರಿಸುವಲ್ಲಿ—ಅಲ್ಲಿ ಆಲೆಯಮನೆಯೊಂದು ಆರಂಭವಾಗಿ ಯಾರೊ ಗಾಣ ಹೊಡೆಯುತ್ತಿರುವರೆಂದು ತಿಳಿದುಬಂತು. ಸ್ನೇಹಿತರನ್ನು ಕೂಡಿಕೊಂಡು ಅಲ್ಲಿಗೆ ಹೋದಾಗ ಅಣ್ಣೇಗೌಡನೆಂಬ ರೈತ ಗಾಣದಮೇಲೆ ಎತ್ತುಗಳನ್ನು ಹೊಡೆಯುತ್ತಾ ಆನಂದವಾಗಿ ಕಬ್ಬನ್ನು ಅರೆಯುತ್ತಿದ್ದನು. ನನ್ನ ಬಲವಂತಕ್ಕೆ ಮಲೆನಾಡಿನ ದೀವಳಿಗೆ ಹಾಡುಗಳನ್ನು ಮೊದಲು ಹೇಳಿ ಅನಂತರ ಇಲ್ಲಿನ "ಉತ್ತರದೇವಿ" ಪೂರ್ವಾರ್ಧವನ್ನು ಹೇಳಿದನು. ಉತ್ತರಾರ್ಧವನ್ನು ಮರುದಿನ ಬರೆದುಕೊಳ್ಳಲು ಏನೋ ಅಡ್ಡಿಯಾಗಿ ಹಿಂದಿರುಗಬೇಕಾಯಿತು. ಸಂಕಲನದ ಉತ್ತರದೇವಿಯಲ್ಲಿ ಉತ್ತರಾರ್ಧ ಬಯಲುನಾಡಿನದು. ನಮ್ಮೂರಿನ ತಿಮ್ಮಮ್ಮನೆಂಬಾಕೆ ಹೇಳಿದುದು. ಈ ಹಾಡನ್ನು ಅನೇಕಮಂದಿ ಹಾಡುತ್ತಾರೆ. ನಮ್ಮ ಬಯಲುನಾಡಿನಿಂದ ಮಲೆನಾಡಿನವರೆಗೆ ಇದರ ಪ್ರಭಾವ ಹರಡಿದೆ. "ಹಬ್ಬೋಗೊ ಕುಡಿಯ ಹರಿಕೊಂಡ" ಎನ್ನುವುದು ಮಲೆನಾಡಿನ ಹಾಡೇ ತೀರ್ಥಹಳ್ಳಿಯಸಮೀಪದ ಇಂಗ್ಲಾದಿಯಲ್ಲಿ ಯಾರಿಂದಲೊ ಸಂಗ್ರಹಿಸಿದ್ದು.

ಕಳೆದವರ್ಷ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೋಕಿನ ಕೆಲವು ಹಳ್ಳಿಗಳಲ್ಲಿ ಸಂಚರಿಸುವ ಸುಯೋಗ ಕೂಡಿಬಂದಿತು. ಶ್ರೀ ಆದಿಚುಂಚನಗಿರಿಯನ್ನು ಬಳಸಿಕೊಂಡು ಅಮೃತೂರು ಕಡೆಗೆ ಹೋಗುವ ರಸ್ತೆಯಲ್ಲಿ ಮುಗಿಲೆತ್ತರಕ್ಕೆ ಬೆಳೆದ ಹದ್ದಿನಕಲ್ಲು ಹನುಮಂತರಾಯನ ಬೆಟ್ಟವಿದೆ. ಅದರ ತಪ್ಪಲಲ್ಲಿ ಒಂದು ಗೊಲ್ಲರಹಟ್ಟಿ ಬೆಟ್ಟಗುಡ್ಡಗಳ ನಡುವೆ

ಶುದ್ಧ ಅನಾಗರಿಕರಂತೆ ಕಾಣುವ ಜನ ಅವರು. ಆದರೆ ಒಳಹೊಕ್ಕು ನೋಡಿದಾಗ ಅವರಲ್ಲಿರುವ ಅಚ್ಚ ಸಂಸ್ಕೃತಿ ನಾಗರಿಕರನ್ನು ನಾಚಿಸುತ್ತಿದ್ದ, ಅವರ ಶುಚಿಯಾದ ಜೀವನ ಚೊಕ್ಕವಾದ ಮಾತುಗಳಂತೆಯೆ ಸೊಗಸಾದ ಸಾಹಿತ್ಯವು ಅವರಲ್ಲಿದೆ. ಸುತ್ತಲು ಹತ್ತಿಪ್ಪತ್ತು ಹುಲ್ಲುಗುಡಿಸಲುಗಳ ನಡುವೆ ಒಂದು ಜೋಪಡಿಯಲ್ಲಿ ಕುಲದೇವರು. ಸಾಮಾನ್ಯವಾಗಿ ರೈತರು ವಾಸಿಸುವ ಹಳ್ಳಿಗಳಿಂದ ಒಂದೆರಡು ಮೈಲಿಗಳ ದೂರದಲ್ಲಿಯೆ ಇವರ ನೆಲೆ. ಬಿಳಿಗುಂದದಲ್ಲಿ ಬಸ್ಸಿಳಿದು ತರಮಕೋಟೆಗೆ ಹೋಗಿ ಅಲ್ಲಿನ ಪಟೇಲರೊಡನೆ ಗೊಲ್ಲರಹಟ್ಟಿಗೆ ಬಂದೆವು. ಬೆಳಗಿನ ಹೊತ್ತು. ಹತ್ತು ಘಂಟೆಯ ಸಮಯ. ಹಳ್ಳಿಯವರೆಲ್ಲ ಕೆಲಸಕ್ಕೆ ಹೊರಟುಹೋಗಿದ್ದಾರೆ. ಅಲ್ಲಿದ್ದ ಕಾಟಮ್ಮನೆಂಬ ವೃದ್ಧಹೆಂಗಸು ನಮ್ಮ ಗುಡಸಲಿಗೆ ಕರೆದುಕೊಂಡುಹೋಗಿ ಕೂರಲು ಚಾಪೆಯನ್ನು ಕೊಟ್ಟು–ತುಂಬ ಗೌರವದಿಂದ ಕಂಡಳು. ನಾವು ತಂದಿದ್ದ ಎಲೆ ಅಡಕೆಯನ್ನು ಅಜ್ಜಿಯ ಮುಂದಿಟ್ಟು ನಮ್ಮ ಉದ್ದೇಶವನ್ನು ತಿಳಿಸಿದಾಗ–ಆಕೆ ಸಂತೋಷದಿಂದಲೆ ಕೆಲವು ಹಾಡುಗಳನ್ನು ಹಾಡಿದಳು. "ಭಾಷೆಯೇಕೊ ನಿನ್ನ ಬಲಗೈಯಿ" "ಹೊಂಗೇಲಿ ಈರಣ್ಣ ಮಡಿದಾನೆ" ಈ ಕಥನ ಕವನಗಳು ಆಕೆ ಹಾಡಿದವು.

ತರಮಕೋಟೆಯಿಂದ ಅಂದೆ ಮರಳಬೇಕಾಯಿತು. ಮರುದಿನ ಬೆಳ್ಳೂರಿನ ಬಳಿಯ ಶ್ರೀ ಆದಿ ಚುಂಚನಗಿರಿಯ ತಪ್ಪಲಿನಲ್ಲಿರುವ ಗೊಲ್ಲರ ಹಟ್ಟಿಗೆಹೋಗುವುದೆಂದು ನಿರ್ಧರವಾಯಿತು. ಜೀರಹಳ್ಳಿಯ ನನ್ನ ಮಿತ್ರರು ಬೆಳ್ಳೂರ ಹೈಸ್ಕೂಲಿನ ಅಧ್ಯಾಪಕ ಮಿತ್ರರಿಬ್ಬರು ಆ ರಾತ್ರಿ ಗೊಲ್ಲರಹಟ್ಟಿಯ ಯಾತ್ರೆಯಲ್ಲಿ ನನ್ನೊಡನೆ ಭಾಗಿಗಳಾದರು. ಬೆಟ್ಟಗುಡ್ಡಗಳನ್ನು ದಾಟಿ ಕೊಂಡು ಕಲ್ಲು ಮುಳ್ಳುಗಳನ್ನು ತುಳಿದುಕೊಂಡು ಹಳ್ಳಿಕೊರಕಲುಗಳಲ್ಲಿ ಮುಗ್ಗುರಿಸಿ ಬಿದ್ದು ಹಟ್ಟಿಯನ್ನು ತಲುಪಿದೆವು. ಹತ್ತು ಗುಡಿಸಲುಗಳ ಪುಟ್ಟ ಹಟ್ಟಿ. ವೃತ್ತಾಕಾರದಲ್ಲಿ ನಿಂತ ಗುಡಿಸಲುಗಳು. ಊಟವನ್ನು ಮುಗಿಸಿಕೊಂಡು ಸಂತೋಷವಾಗಿ ಗೊಲ್ಲರು ಗುಂಪು ಕೂಡಿ ಕುಳಿತು ಸರಸ ಸಂಭಾಷಣೆಯಲ್ಲಿದ್ದರು. ನಮ್ಮ ಮಿತ್ರರ ಬಲವಂತದ ಮೇಲೆ ಕೆಲವು ಹಾಡುಗಳನ್ನು ಹೇಳಲು ಒಪ್ಪಿ ಪಕ್ಕದ ಗುಡಿಸಲಿಗೆ ಕರೆದೊಯ್ದು ಐದಾರು

ಜನಹೆಂಗಸರು ಸೇರಿಕೊಂಡರು. ಅನೇಕ ಹಾಡುಗಳನ್ನು ಹಿಮ್ಮೇಳ ಮುಮ್ಮೇಳಗಳೊಡನೆ ಬಹು ಮಧುರವಾಗಿ ಹಾಡಿದರು. "ಫಲಬಿಡುವ ಮರಗಳ ಕಡಿಸನೆ" ಎಂಬ ಹಾಡನ್ನು ಹಾಡುತ್ತ ಹಾಡುತ್ತ ಅವರು ದುಃಖದಿಂದ ಬಿಕ್ಕಳಿಸುವುದು ಕಂಡುಬಂದಿತು. ಜವರಾಯ ನಿರ್ಧಯೆ ಬಡವರು ಮರಣವಾದರೆ ಜನ ಬಂದು ಸಹಕರಿಸದಿರುವುದು ಮುಂತಾದ ಭಾವಗಳು ಬರುವ ಪದ್ಯಗಳು ಅವರ ಕೊರಳ ಸೆರೆಯನ್ನು ಕಟ್ಟಿದವು. ಆ ಹಾಡನ್ನು ಮುಂದೆ ಹಾಡಲು ಅವರಿಗೆ ಆಗಲೆ ಇಲ್ಲ.

ಸಾಹಿತ್ಯ ಅವರ ಬದುಕನ್ನು ಹೇಗೆ ಬಂಧಿಸಿದೆ ಎಂಬುದನ್ನು ಆಗ ಅರಿತುಕೊಂಡೆ. ಅನಂತರ ತುಸು ಹೊತ್ತು ಸುಮ್ಮನಿದ್ದು "ಚಿಕ್ಕಜಾಜಿ ಮರಕೆ ತಲೆಕೊಟ್ಟ" ಎಂಬುದನ್ನು ಆರಂಭಿಸಿದರು. ಆವೇಳೆಗಾಗಲೇ ನನ್ನ ಮಿತ್ರರೂ ನಿದ್ರೆಲೋಕಕ್ಕೆ ಸಂದಿದ್ದರು. ಹಾಸಿದ್ದ ಚಾಪೆಯ ಮೇಲೆ ಹಾಗೆ ಹಾಗೆ ಉರುಳಿಕೊಂಡಿದ್ದರು. ನನ್ನ ಬರವಣಿಗೆ ಸಾಗಿತು ಮುಂದವಾದ ಕೈ ಹಣತೆ ಬೆಳಕಿನಲ್ಲಿ. ಬರೆದು ಬರೆದು ಬೆರಳು ನೋಯಿತ್ತಿದ್ದವು. ಕುಳಿತ ಬೆನ್ನು ಬೆಂಡಾಯಿತು. ಬೆಳಗಾಗುವ ವೇಳೆ ಸಮೀಪಿಸಿದರೂ ಆ ಹಾಡು ಮುಗಿಯುವಂತೆ ಕಾಣಲಿಲ್ಲ, ಮರುದಿನ ಬಂದರಾಯಿತೆಂದು ಗೆಳೆಯರನ್ನು ಏಳಿಸಿಕೊಂಡು ಕೊರೆಯುವ ಚಳಿಯಲ್ಲಿ ಜೀರಹಳ್ಳಿಯ ದಾರಿ ಇಡಿದೆವು.

ಮುರುದಿನ ಸಂಜೆ ಮತ್ತೊಬ್ಬ ಆಪ್ತರನ್ನು ಕೂಡಿಕೊಂಡು ಲಾಟೀನ ಬೆಳಕಿನಲ್ಲಿ ಹಟ್ಟಿಯನ್ನು ಮುಟ್ಟಿದೆವು. ನಾವು ಬರುವ ಸೂಚನೆ ಅವರಿಗೆ ಹೇಗೆ ತಿಳಿಯಿತು ? ಎಲ್ಲ ಒಳಗೆ ಸೇರಿ ತದ್ದಲುಗಳನ್ನು ಮುಚ್ಚಿಕೊಂಡಿದ್ದರು. ಒಳಗೆ ಮಾತನಾಡುತ್ತಿದ್ದರೂ ಯಾರು ಹೊರಗೆ ಬರಲಿಲ್ಲ. ಸುಮಾರು ಒಂದು ಘೆಂಟೆಯವರವಿಗೂ ಯಾರು ಹೊರಗೆಬರದೆ ಸತಾಯಿಸಿಬಿಟ್ಟರು. ಆ ಹಿಂದೆ ಈ ಹಟ್ಟಿಯಲ್ಲಿ ಮಿತ್ರರಾದ ಶ್ರೀ ಜೀಶಂಪರು ಅನೇಕ ಹಾಡುಗಳನ್ನು ಸಂಗ್ರಹಿಸಿ ಕೊಂಡುಹೋಗಿದ್ದರು. ಅವರು ಆ ಹಾಡುಗಳನ್ನ ತೆಗೆದುಕೊಂಡು ಹೋಗಿ 'ಕರೆಂಟಿಗೆ' ಕೊಟ್ಟುಬಿಟ್ಟರಂತೆ ! ಅದರ ಪರಿಣಾಮವಾಗಿ ಹಟ್ಟಿಯ ಗೊಲ್ಲವೆಣ್ಣುಗಳ ಕಂಠವೆ ಕೆಟ್ಟುಹೋಯಿತೆಂದು ಅವರು ಗೊಣಗಿದರು. ನೆನ್ನೆ ಬಲವಂತಕ್ಕೆ ಒಳಗಾಗಿ ಹೇಳಿದ

ವರು "ಈ ದಿನ ಸರಿ ರಾತ್ರಿಯಲ್ಲಿ ನೀವು ಬರಬೇಕಾದರೆ ಏನೊ ಘನವಾದ ಸಂಪಾದನೆ ಇರಬೇಕು" ಎಂದು ಪಕ್ಕದ ಗಂಡಸರಿಂದ ಕೆಮ್ಮುತ್ತ ಮಲಗಿದ್ದ ಮುದುಕನೊಬ್ಬ ಮಾತಿನ ಬಾಣವನ್ನೆಸೆದ. ಈ ಕೊರೇಲಿ ಹೊರಗೆ ಬರಾಕಾಗಕಿಲ್ಲ ಎಂದು ಕೆಲವರು ನಿರಾಕರಿಸಿಬಿಟ್ಟರು. ನೆನ್ನೆ ಅರ್ಧಮಾಡಿದ್ದ ಹಾಡನ್ನು ಪೂರ್ತಿ ಮಾಡಿದರೆ ಸಾಕೆಂದು ನಾನು ಕೇಳಿಕೊಂಡೆ, ಆದರೂ ಅವರಿಗೆ ದಯೆಬರಲಿಲ್ಲ. ನೆನ್ನೆ ಅಷ್ಟು ವಿನಯದಿಂದಿದ್ದರು ಈಗ ಹೀಗೇಕಾದರೆಂದು ಆಶ್ಚರ್ಯವಾಯಿತು. ಬಹುಶಃ ಈಗತಾನೆ ಯಾರಾದರೂ ಬಂದು ನಮ್ಮ ವಿಷಯದಲ್ಲಿ ಅಪಸ್ರಚಾರ ಮಾಡಿದ್ದರೇನೊ ! ಕೆಲವು ಕಡೆ ಈ ರೀತಿಯ ಅನುಭವಗಳು ಕಾದಿರುತ್ತವೆ. ನನಗೆ ಆ ಹಾಡು ಅರ್ಧವಾಗಿ ಉಳಿಯಿತೆಂದು ತುಂಬ ವ್ಯಥೆಯಾಯಿತು. ನನ್ನ ಸಂಕಟವನ್ನು ನೋಡಲಾರದೆ ಬೇರೆ ಸ್ಥಳದಿಂದ ಬಂದಿದ್ದ ಮುದುಕಿಯೊಬ್ಬಳು ಎದ್ದು ಬಂದು ಆ ಹಾಡು ಪೂರ್ಣಮಾಡಿದರು. ಆ ಮಹಾತಾಯಿಗೆ ವಂದಿಸಿ ಆ ಜನರ ಹಟ ಮಾರಿತನಕ್ಕೆ ಗೊಣಗಿಕೊಳ್ಳುತ್ತ ಹಿಂದಿರುಗಿದೆವು. ಯಾವ ಹಾಡುಗಾರರಿಗೂ ಮೊದಲನೆ ದಿನ ಇರುವ ಉತ್ಸಾಹ ಅನಂತರ ಇರುವುದಿಲ್ಲ. ಈ ಸಂಗ್ರಹಣೆಯ ವಿಚಾರದಲ್ಲಿ ಹಲವು ಬಗೆಯಲ್ಲಿ ಕಲ್ಪನೆಗಳನ್ನು ಮಾಡಿಕೊಂಡು ಮತ್ತೊಮ್ಮೆ ಕೇಳಿಕೊಂಡಾಗ ಹೇಳಲು ನಿರಾಕರಿಸಿಬಿಡುವುದು ಉಂಟು. ಏನಿದ್ದರೂ ಮೊದಲ ಏಟನಲ್ಲಿಯೆ ಹಕ್ಕಿ ಬೀಳಬೇಕು. ಈ ಗೊಲ್ಲರು ನನಗೆ ಚೆನ್ನಾಗಿ ಬುದ್ಧಿಕಲಿಸಿದರು. ಕತ್ತಲಲ್ಲಿ ಮುಳ್ಳುಪೊದರುಗಳನ್ನು ಹಾದು ಕೆರುಬನ ಕಲ್ಲಿನ ಕಣಿವೆಯ ಮೂಲಕ ನಡೆದು ಜೀರಹಳ್ಳಿಗೆ ಮರಳುವಲ್ಲಿ ನಡುರಾತ್ರಿ ಸಂದಿತ್ತು.

ಈಗ್ಗೆ ಎರಡು ವರುಷಗಳಿಂದೆ ನಾನು ಇಳಿದುಕೊಂಡಿದ್ದ ಸರಸ್ವತಿಪುರದ ಕೊನೆಯ ಮನೆಯ ಬಳಿ ಏಕನಾದವನ್ನು ಹಿಡಿದು ಒಬ್ಬಾತ ಭಿಕ್ಷೆಗೆ ಬಂದು ಮಧುರವಾಗಿ ಹಾಡತೊಡಗಿದ. ನನಗೆ ಆನಂದವಾಗಿ ಅವನನ್ನು ಒಳಗೆ ಕರೆದು ಊಟವನ್ನು ಹಾಕಿ ಒಂದೆರಡು ಬಟ್ಟಿಗಳನ್ನು ಕೊಟ್ಟು ಮತ್ತೆ ಕೆಲವು ಹಾಡುಗಳನ್ನು ಹಾಡಿಸಿದೆ. "ಪಿರಿಯಾಪಟ್ಟಣದ ಕಾಳಗ" ಮತ್ತು "ಮುನಿಯಾಗಿ ಬಂದ" ಮುಂತಾದ ಕಥನಕವನಗಳನ್ನು ರಾಜ

ಪರಿವಾರದ ಮೈಸೂರ ಬಳಿಯ ಕಡಕೊಳದ ಸಿಂಧುಹಳ್ಳಿ ಕರಿನಾಯಕ ಹೇಳಿದವು. ಹಾಗೆಯೆ ಅಶೋಕಪುರದ ಹರಿಜನರ ಬಸವರಾಜು "ಚೆನ್ನಿಗ ಜೋಗಯ್ಯ" ಎಂಬ ಹಾಡನ್ನು ಕಳೆದ ವರ್ಷ ಹೇಳಿದ.

"ಹೆಣೆಗಂಟು ನಲುಗಿ ಉರಿದ್ಹೋದೊ", "ಬಿಟ್ಟಿ ಕಾಣೆ ಇವಳ ಜಲುಮಾಕೆ" "ಹೆಸರಿಗೆ ದೊಡ್ಡೋನು ಶಿವತಂದ"....ಮುಂತಾದ ಕೆಲವು ಹಾಡುಗಳನ್ನು ವೈವಿಧ್ಯಕ್ಕಾಗಿ ಶ್ರೀ ಜೀಶಂಪರಿಂದ ಪಡೆದುಕೊಂಡಿದ್ದೇನೆ. "ಕೋಳೂರ ಕೊಡಗೂಸು" ಒದಗಿಸಿದವರು—ನನ್ನ ಮತ್ತೊಬ್ಬ ಮಿತ್ರರಾದ ಚೆನ್ನಪಟ್ಟಣದ ಶ್ರೀ ಎನ್. ಆರ್. ರಂಗಯ್ಯನವರು ಒದಗಿಸಿದ್ದು. ಜನಪದ ಸಾಹಿತ್ಯದಲ್ಲಿ ಸಾಕಷ್ಟು ಕೆಲಸಮಾಡಿರುವ ಈ ಇಬ್ಬರು ಮಿತ್ರರಿಗೂ ಅವರ ಉಪಕಾರಕ್ಕಾಗಿ ನಾನು ಚಿರಋಣಿ. ಅಲ್ಲದೆ ನನ್ನ ಉತ್ಸಾಹಕ್ಕೆ ಭಂಗ ತರದೆ ನಾನು ಹೋದಾಗಲೆಲ್ಲ ಸಹನೆಯಿಂದ ತಮ್ಮ ಹೃದಯದ ಕಾಣಿಕೆಯಾದ ಈ ಅಮೂಲ್ಯ ಹಾಡುಗಳನ್ನು ಹಾಡಿದ ಹಳ್ಳಿಗಾಡಿನ ತಾಯಂದಿರಿಗೂ ಅಣ್ಣತಮ್ಮಂದಿರಿಗೂ ನಾನು ಅನಂತ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಅವರಲ್ಲಿರುವ ಸಾಹಿತ್ಯವು ನೂರರಲ್ಲಿ ಹತ್ತು ಭಾಗವನ್ನು ನಾನಿಲ್ಲಿ ಕೊಡಲು ಸಾಧ್ಯವಾಗಿಲ್ಲ. ಅನೇಕ ಅಡಚಣೆಗಳ ಕಾರಣದಿಂದ—ಈ ಸಾಹಿತ್ಯ ಸಂಗ್ರಹಣೆ ಹಿಂದೆ ಬೀಳುತ್ತಿದೆ.

ಈ ಸಂಗ್ರಹಣೆಯ ಕಾರ್ಯ ಗುರುತರವಾದುದೇನೊ ನಿಜ! ಆದರೆ ಅದಕ್ಕೆ ತಕ್ಕ ಶ್ರದ್ಧೆ ಆಸಕ್ತಿ ಸಹನೆ ಸಂಯಮಗಳು ಅವಶ್ಯಕತೆ ಎಷ್ಟೊಂಬುದು ಇನ್ನು ಅನುಭವದಿಂದ ವ್ಯಕ್ತವಾಯಿತು. ಸಂಗ್ರಹದ ವೇಳೆಯಲ್ಲಿ ಸ್ವಲ್ಪ ದುಡುಕಿದರೂ ಅಲ್ಪ ನಿರುತ್ಸಾಹವನ್ನು ತೋರಿದರೂ ಆ ಹಾಡಿನ ರುಚಿ ಹಿಂದೆ ಸರಿದುಬಿಡುತ್ತದೆ. ಸಂಗ್ರಹಣೆಯ ವೇಳೆಯಲ್ಲಿ ಕಷ್ಟ ನಷ್ಟಗಳನ್ನು ಅಡ್ಡಿ ಆಡಚಣೆಗಳನ್ನು ಅನಿವಾರ್ಯವಾಗಿ ಅನುಭವಿಸಬೇಕಾಗುತ್ತದೆ. ಇವೆಲ್ಲದರಿಂದಲೂ ನಾನು ದುಃಖಕ್ಕಿಂತ ಸುಖವನ್ನೇ ಹೆಚ್ಚಾಗಿ ಅನುಭವಿಸಿದ್ದೇನೆ. ಆನಂದಪಟ್ಟಿದ್ದೇನೆ. ಆ ಹಾಡುಗಳನ್ನು ಕಿವಿಯಾರ ಕೇಳುವ ಪುಣ್ಯ ನನ್ನದಾಯಿತಲ್ಲಾ ಎಂದು ಹಿರಿ ಹಿರಿ ಹಿಗ್ಗಿದ್ದೇನೆ. ಇಲ್ಲಿನ ಕಥೆಗಳು ಮಧುರಕಂಠದ ಸೂತ್ರದಿಂದ ಬೇರ್ಪಡಿಸಲ್ಪಟ್ಟರುವುದರಿಂದ ಕಿವಿ

ಯಾರೆ ಕೇಳಿದಷ್ಟು ಆನಂದವನ್ನು ಓದಿನ ಮೂಲಕ ಎಂದಿಗೂ ಒದಗಿಸಲಾ ಲಾರೆವು. ಆದರೂ ಅಲ್ಲಿನ ಸುಂದರ ಸಾಹಿತ್ಯ ನನ್ನನ್ನು ಬಂಧಿಸುವ ಶಕ್ತಿ ಯನ್ನು ಪಡೆದಿದೆ ಎಂಬುದಷ್ಟನ್ನೆ ಹೇಳಿ ಈಗಾಗಲೆ ವಿಸ್ತಾರವಾದ ಈ ದೀರ್ಘ ಲೇಖನರೂಪದಲ್ಲಿ ಬೆಳೆದ ಸವಿನೆನಪನ್ನು ಇಲ್ಲಿಗೆ ಮುಕ್ತಾಯ ಗೊಳಿಸುತ್ತೇನೆ. ಒಂದೊಂದು ಹಾಡಿನ ಹಿನ್ನೆಲೆಯಲ್ಲೂ ಅದರ ಸಂಗ್ರಹ ಣೆಯ ವಿಷಯದಲ್ಲಿ ಎಂತೆಂತಹ ಸ್ವಾರಸ್ಯಗಳು ನಡೆಯಬಲ್ಲವೆಂಬ ಕುತೂ ಹಲ ದೃಷ್ಟಿಯಿಂದ ಇದನ್ನು ಬರೆಯಬೇಕಾಯಿತು. ಅನುಚಿತವಾಗಲಾರ ದೆಂದು ನಂಬಿ ಇಲ್ಲಿಗೆ ವಿರಮಿಸುತ್ತೇನೆ. ಈ ವಿಷಯದಲ್ಲಿ ಒಂದು ದೀರ್ಘ ಗ್ರಂಥವನ್ನೆ ಬರೆಯುವಷ್ಟು ಸಾಮಗ್ರಿ ನನ್ನಲ್ಲಿದೆ. ಆ ಕಾಲವನ್ನು ಕಾದು ನೋಡೋಣ.

ಇತೀ ನಿಮ್ಮ ಸಾಹಸದ ಶಿಶು
ಸಂಪಾದಕ



ಅನುಬಂಧ

ಗರಿ—೧ ಅಂಬಿಗರ ಗಂಗ ಮತ್ತು ಇತರ ಹಾಡುಗಳು

ಶ್ರೀ ಕೆ. ವಿ. ಪುಟ್ಟಪ್ಪ.....ಸಾಹಿತ್ಯ ಪ್ರಚಾರದಿಂದ.....
ಶ್ರೀ ದ. ರಾ. ಬೇಂದ್ರೆ.....ಗರತಿಯ ಹಾಡು ಸಂಕಲನ....೧೯೩೧
ಡಾ|| ಮಾಸ್ತಿ ವೆಂಕಟೇಶ ಐಯ್ಯಂಗಾರ್....ಕರ್ನಾಟಕದ ಜನಪದ
ಸಾಹಿತ್ಯ....ಎಂಬ ಪುಸ್ತಕದಿಂದ ಪ್ರ. ಮುದ್ರಣ
ಶ್ರೀ ಎಲ್. ಗುಂಡಪ್ಪ.....ನಾಡಪದಗಳು ಪುಸ್ತಕದಲ್ಲಿ.....೧೯೪೭
ದಿವಂಗತ ಬಿ.ಎಂ. ಶ್ರೀಕಂಠಯ್ಯ....ನಾಡ ಪದಗಳು....೧೯೪೭
ಶ್ರೀ ಗೊರೂರು ರಾಮಸ್ವಾಮಿ ಐಯ್ಯಂಗಾರ್....ಹಳ್ಳಿಯಬಾಳು
ವಿದ್ಯಾರತ್ನ ಆರ್. ಎಸ್. ಪಂಚಮುಖಿ....ಕರ್ನಾಟಕದ ಜಾನಪದ
ಗೀತಗಳು ....ಪ್ರ ಮುದ್ರಣ ೧೯೫೩
ಶ್ರೀ ಬೆಟಗೇರಿ ಕೃಷ್ಣಶರ್ಮ ....ಒಂದು ಪತ್ರದಿಂದ ೧೯೫೮
ಪ್ರೊ|| ವಿ.ಜಿ. ಕುಲಕರ್ಣಿ....ನಾಲ್ಕು ನಾಡಪದಗಳು ೧೯೫೭

ಗರಿ—೨ ಉತ್ತರದೇವಿ ಮತ್ತು ಇತರ ಹಾಡುಗಳು

ಶ್ರೀ ಬಿ.ಎಸ್. ರಂಗಸ್ವಾಮಿ....ಹಳ್ಳಿಯ ಪದಗಳು ....ಪ್ರ ಮುದ್ರಣ
ಶ್ರೀಮತಿ ನರಸಮ್ಮ....ಅಭಿವಂದನೆ ೧೯೫೭
ಬೆಳಗಾವಿ ರಾಮಚಂದ್ರರಾವ್....ಗರತಿಯ ಹಾಡು.... ೧೯೩೧
ಶ್ರೀ ಎಸ್.ಎಂ. ದೇಸಾಯಿ....ಮೈಸೂರು ರಾಜ್ಯ.... ೧೯೫೬
ಶ್ರೀ ಉತ್ತಂಗಿ ಚನ್ನಪ್ಪ....ಶರಣ ಸಾಹಿತ್ಯ—ಸಂಪುಟ ೮ ಸಂಚಿಕೆ ೧
ಶ್ರೀ ಎಸ್. ಕೆ. ಕರೀಂಖಾನ್....ಪ್ರಜಾಮತ....ದೀಪಾವಳಿ....೧೯೫೪
ಡಾ|| ಬಿ. ಎಸ್. ಗದ್ದಗಿಮಠ....ಜನತಾ ಗೀತೆಗಳು....೧೯೫೬
ಶ್ರೀ ಸಿಂಪಿ ಲಿಂಗಣ್ಣ....ಕನ್ನಡ ಸಾಹಿತ್ಯ ಪರಿಷತ್ತ್ಪತ್ರಿಕೆ

ಗರಿ—೩ ಪಿರಿಯಾಪಟ್ಟಣದ ಕಾಳಗ ಮತ್ತು ಇತರ ಹಾಡುಗಳು
ಶ್ರೀ ಜಿ. ಹನುಮಂತರಾವ್.....ಪುಸ್ತಕ ಪ್ರಪಂಚ....೧೯೪೭

Sri Chandrika Guttal Mysore Information Bulletion

Vo—xxi No. 7—1957

ಶ್ರೀ ಮತಿಘಟ್ಟ ಕೃಷ್ಣಮೂರ್ತಿ....ನಮ್ಮ ಹಳ್ಳಿಯ ಹಾಡುಗಳು....೧೯೫೨

ಶ್ರೀ ಎಚ್. ಎಂ. ಶಂಕರನಾರಾಯಣರಾವ್....ಜನಪದ ಮುಕ್ತಕಗಳು....
ಪ್ರ. ಮುದ್ರಣ....೧೯೫೩

ಶ್ರೀ ತ. ರಾ. ಸುಬ್ಬರಾವ್....ಜಾನಪದ ಪ್ರೇಮಗೀತೆಗಳು....೧೯೫೭

ಶ್ರೀ ಶ್ರೀ ಚಂದ್ರಶೇಖರನಾಥಸ್ವಾಮಿಜಿ ...ಶ್ರೀಆದಿಚುಂಚನಗಿರಿ....೧೯೫೯

ಶ್ರೀ ಗಣಪತಿರಾವ್ ಪಾಂಡೇಶ್ವರ್....ಆಲ್ ಇಂಡಿಯಾ ರೇಡಿಯೊ-೧೯೪೪

ಶ್ರೀ ಎಸ್. ಡಿ. ಇಂಚಲ....ಕನ್ನಡಿಕ ಸಂಪುಟ ೬-ಸ-೨೬

ಶ್ರೀ ಜಿ. ಶಂ. ಪರಮಶಿವಯ್ಯ....ಪ್ರಜಾವಾಣಿ ಮತ್ತು ಪುಸ್ತಕ ಪ್ರಪಂಚ

ಶ್ರೀಮತಿ ಬೆಳಗಾವಿ ಶ್ಯಾಮಲಾದೇವಿ....ಜಯಕರ್ಣಾಟಕ-ಸಂ-೧೭-ಸಂ೯

ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿ....ಪುಸ್ತಕಪ್ರಪಂಚ-ಸಂ-೨-ಸಂ-೧೧

Sri S. V. Ranganna....KARNATAKA DARSHANA.....1958

ಗರಿ—೪ ಚೆನ್ನಿಗಜೋಗಯ್ಯ ಮತ್ತು ಇತರ ಹಾಡುಗಳು

ಡಾ || ಪ್ರಭುಶಂಕರ್....ಸಿಎಚ್.ಡಿ. ಪ್ರಬಂಧಗಳಿಂದ....೧೯೫೮

ಪ್ರೊ || ಎಚ್. ಎಸ್. ಕೃಷ್ಣಸ್ವಾಮಯ್ಯಂಗಾರ್....ಒಂದು ಪತ್ರ-೧೯೫೯

ಶ್ರೀ ಎಸ್.ನರಸಿಂಹಸ್ವಾಮಿ....ಗ್ರಾಮಾಭ್ಯುದಯ ಸಹಾಕಾರ....೧೯೫೮

ಶ್ರೀ ಕೆ. ಆರ್. ಲಿಂಗಪ್ಪ....ಜೋಗದ ಝೋಕ್....೧೯೫೭

ಶ್ರೀ ಗೊ. ರು. ಚನ್ನಬಸಪ್ಪ....ಮೈದುನ ರಾಮಣ್ಣ....೧೯೫೫

ಶ್ರೀ ಎಸ್. ವಿ. ಪರಮೇಶ್ವರಭಟ್ಟ....ಬರೆದ ಒಂದು ಪತ್ರದಿಂದ ೧೯೫೯